ನಾಡೋಜ
ದೇಶಹಳ್ಳಿ ಜಿ. ನಾರಾಯಣ



ಅಭಿನಂದನ ಸಂಪುಟ

ಸಂಪಾದಕರು

ಪ್ರೊ॥ ಎಂ.ಎಚ್. ಕೃಷ್ಣಯ್ಯ, ಡಾ॥ ಚಕ್ಕೆರೆ ಶಿವಶಂಕರ್

ನಾಡೋಜ
ದೇಶಹಳ್ಳಿ ಜಿ. ನಾರಾಯಣ
— ಅಭಿನಂದನ ಸಂಪುಟ —

ಸಂಪಾದಕರು

ಪ್ರೊ॥ ಎಂ.ಎಚ್. ಕೃಷ್ಣಯ್ಯ

ಡಾ॥ ಚಕ್ಕೆರೆ ಶಿವಶಂಕರ್

ನಾಡೋಜ ಜಿ. ನಾರಾಯಣ ಅವರ ಅಭಿನಂದನಾ ಸಮಿತಿ

ಬೆಂಗಳೂರು

'NADOJA DESHAHALLI G. NARAYANA ABHINANDANA SAMPUTA' - a felicitation volume presented to Sri G. Narayana; Edited by Prof. M.H. Krishnaiah and Dr. Chakkere Shivashankar. Published by Nadoja G. Narayana Avara Abhinandana Samithi, Bharat Vidya Samste, 16th Main Road, 4th Block, Jayanagar, Bangalore - 11.

First Impression : 2006

Price : Rs. 150/-

Pages : xii + 28 + 350

ಪ್ರಥಮ ಮುದ್ರಣ : ೨೦೦೬

ಬೆಲೆ : ರೂ. ೧೫೦/-

ಮುದ್ರಣ
ಇಳಾ ಮುದ್ರಣ, ಬೆಂಗಳೂರು
✆ : ೨೬೭೫೭೧೫೯ / ೩೦೬೧೫೭೭೩



ಜಿ. ನಾರಾಯಣ ಅವರ ತಂದೆ
ಶ್ರೀ ಗಿರಿಗೌಡ



ಜಿ. ನಾರಾಯಣ ಅವರ ತಾಯಿ
ಶ್ರೀಮತಿ ಸಣ್ಣಮ್ಮ



ಜಿ. ನಾರಾಯಣ ದಂಪತಿಗಳು

ನಾಡೋಜ ಜಿ. ನಾರಾಯಣ ಅವರ ಅಭಿನಂದನಾ ಸಮಿತಿ

ಭಾರತ್ ವಿದ್ಯಾ ಸಂಸ್ಥೆ, 16ನೇ ಮುಖ್ಯರಸ್ತೆ, 4ನೇ ವಿಭಾಗ, ಜಯನಗರ, ಬೆಂಗಳೂರು – 11
ದೂರವಾಣಿ : 26347067

ಪದಾಧಿಕಾರಿಗಳು

ಶ್ರೀ ಬಿ.ಎಲ್. ಲಕ್ಕೇಗೌಡ
ಗೌರವಾಧ್ಯಕ್ಷರು

ಟಿ. ಶಿವಣ್ಣ
ಅಧ್ಯಕ್ಷರು

ಪ್ರೊ. ಬಿ. ಜಯಪ್ರಕಾಶಗೌಡ
ಉಪಾಧ್ಯಕ್ಷರು

ಡಾ. ಎಂ.ಕೆ. ಪುರುಷೋತ್ತಮ
ಕೋಶಾಧಿಕಾರಿಗಳು

ಬಿ.ಎಂ. ನಾರಾಯಣ ಸ್ವಾಮಿ
ಕಾರ್ಯದರ್ಶಿಗಳು

ಸಂಪಾದಕ ಮಂಡಳಿ

ಪ್ರೊ. ಟಿ. ಶಿವಣ್ಣ
ಪ್ರೊ. ಬಿ. ಜಯಪ್ರಕಾಶಗೌಡ
ಶ್ರೀ ರವೀಂದ್ರಕಾಂತ
ಪ್ರೊ. ಎಸ್. ಪ್ರಭಾವತಿ
ಪ್ರೊ. ಎಂ.ಜಿ. ಚಂದ್ರಶೇಖರಯ್ಯ
ಶ್ರೀ ಎನ್. ಅರ್ಜುನದೇವ

ಸಂಪಾದಕರು

ಪ್ರೊ. ಎಂ.ಎಚ್. ಕೃಷ್ಣಯ್ಯ
ಡಾ. ಚಕ್ಕೆರೆ ಶಿವಶಂಕರ್

ಅಧ್ಯಕ್ಷರ ನುಡಿ

•

•

ದೇಶಹಳ್ಳಿ ಬೆಂಗಳೂರಿಗೆ ಬಹುದೂರದ ಊರೇನಲ್ಲ. ಆದರೂ ದೇಶಹಳ್ಳಿ ಗಿರಿಗೌಡ ನಾರಾಯಣರಿಗೆ ಹೀಗೆನಿಸಿರಲಿಲ್ಲ. ಗ್ರಾಮೀಣ ಪ್ರದೇಶದ ಸಾಮಾನ್ಯ ರೈತ ಕುಟುಂಬದ ಪೀಚಲು ಶರೀರದ ಪೋರನೊಬ್ಬ ಏಳು ದಶಕಗಳ ಹಿಂದೆ ತನ್ನ ಭವಿಷ್ಯದ ಜಾಡು ಹಿಡಿದು ಬೆಂಗಳೂರಿಗೆ ಬಂದಿಳಿದಿದ್ದೇ ಒಂದು ರೋಚಕ ಸಂಗತಿ. ಕಷ್ಟಕಾರ್ಪಣ್ಯಗಳ ತೊಳಲಾಟದ ನಡುವೆಯೂ ಸತತ ಪರಿಶ್ರಮ, ಶಿಸ್ತು, ಪ್ರಾಮಾಣಿಕತೆ ಹಾಗೂ ಸತ್ಯಸಂಧತೆಯಿಂದ ಯಶಸ್ಸಿನ ಮೆಟ್ಟಿಲುಗಳನ್ನು ಸ್ವಶಕ್ತಿಯಿಂದ ಹಂತಹಂತವಾಗಿ ಏರಿನಿಂತಿರುವ ಈ ನಮ್ಮ ನಾರಾಯಣರು ಇಂದು ಒಬ್ಬ ಮೇರುಸದೃಶ ವ್ಯಕ್ತಿ.

ಮಹಾತ್ಮ ಗಾಂಧೀಜಿಯವರ ಮೋಡಿಗೆ ಯುವಾವಸ್ಥೆಯಲ್ಲಿಯೇ ಒಳಗಾಗಿ ಇಂದಿಗೂ ಅವರ ಆಶಯದಂತೆ ನಡೆದು, ನುಡಿದು, ಸರಳ ನಿರಾಡಂಬರ ಜೀವನವನ್ನು ಒಪ್ಪಿ ಅಪ್ಪಿಕೊಂಡ ಅಪ್ಪಟ ಗಾಂಧೀವಾದಿ. ಹೀಗಾಗಿ ಜಿಡದ ಅನಾರೋಗ್ಯದ ನಡುವೆಯೂ ತಮ್ಮ ಪಾಲಿಗೆ ಬಂದದ್ದನ್ನ ಸಮರ್ಪಣಾ ಭಾವದಿಂದ, ಒಪ್ಪ ಓರಣವಾಗಿ ಮಾಡುತ್ತಿರುವ ನಾರಾಯಣರಿಗೆ ಕಾಯಕವೇ ಕೈಲಾಸ.

ಬೆಂಗಳೂರಿಗೆ ಬಂದಿಳಿದು ಸಣ್ಣಪುಟ್ಟ ಕೆಲಸಗಳನ್ನು ಮಾಡಿಕೊಂಡು ಜೀವನ ನಿರ್ವಹಣೆ ಮಾಡುತ್ತಿದ್ದ ನಾರಾಯಣರು ಕೀರ್ತಿಶೇಷ ಎಚ್.ಕೆ. ವೀರಣ್ಣಗೌಡರ ತೆಕ್ಕೆಗೆ ಸಿಕ್ಕಿದ್ದು ಅವರ ಜೀವನದ ಮಹತ್ತರ ಮೈಲಿಗಲ್ಲು. ಆನಂತರ ಅವರು ಹಿಂದಿರುಗಿ ನೋಡಿದ್ದೇ ಇಲ್ಲ. ಗೌಡರ 'ವಾರ್ತಾ' ಮತ್ತು 'ಚಿತ್ರಗುಪ್ತ' ಪತ್ರಿಕೆಗಳ ಜೊತೆಗೆ ಮುದ್ರಣಾಲಯದ ಹೊಣೆ ಹೊತ್ತು ಪತ್ರಿಕಾ ಪ್ರಪಂಚದ ಒಳ ಹೊರಗುಗಳ ಪೂರ್ಣ ಪರಿಚಯವನ್ನು ಮಾಡಿಕೊಂಡ ನಾರಾಯಣರಿಗೆ ಮುಂದೆ ತಮ್ಮದೇ ಆದ ನಗೆ ಚಿಮ್ಮಿಸುವ ವಿನೂತನ ಛಾಪಿನ ಮಾಸಿಕ 'ವಿನೋದ'ವನ್ನು ಹುಟ್ಟುಹಾಕಿ ಯಶಸ್ವಿಯಾಗಿ ನಡೆಸಲು ನಾಂದಿಯಾಯಿತು. ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ತುರಂಗವಾಸವನ್ನನುಭವಿಸಿ, ಜನಪರ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಸೇವಾಕಾರ್ಯದಲ್ಲಿ ತನ್ಮಯತೆಯಿಂದ ಪಾಲ್ಗೊಂಡು, ಅನೇಕ ಸಂಘ ಸಂಸ್ಥೆಗಳ ಸ್ಥಾಪನೆಗೆ ಪ್ರೋತ್ಸಾಹ ನೀಡಿ, ಕೆಲವನ್ನು ತಾವೇ ಸ್ಥಾಪಿಸಿ ಇಂದಿಗೂ ಅವು ಸಕ್ರಿಯವಾಗಿರುವಂತೆ ನೋಡಿಕೊಳ್ಳುತ್ತಿರುವುದು ಅವರು ನುಡಿದಂತೆ ನಡೆವ ಪ್ರವೃತ್ತಿಗೆ ಜೀವಂತ ಸಾಕ್ಷಿ.

ಒಬ್ಬ ಪರಿಪೂರ್ಣ ವ್ಯಕ್ತಿಯಲ್ಲಿ ನಾವು ಕಾಣಲಿಚ್ಛಿಸುವ ಸಜ್ಜನಿಕೆ, ಸರಳತೆ, ಪ್ರಾಮಾಣಿಕತೆ. ಸ್ವಂತಿಕೆ, ನಿಷ್ಠೆ, ಯಾರನ್ನೂ ನೋಯಿಸದ ಮನೋಭಾವ, ಬಡ ಹಾಗೂ ಗ್ರಾಮೀಣ ಜನತೆಯ ಬಗ್ಗೆ ಕಾಳಜಿಗಳಂತಹ ಹಲವು ಅನೇಕ ಗುಣಗಳೆಲ್ಲವನ್ನು ನಾರಾಯಣರು ಮೈಗೂಡಿಸಿ ಕೊಂಡಿರುವುದನ್ನು ಕಾಣುತ್ತೇವೆ. ಸದ್ದುಗದ್ದಲಗಳಿಂದ ದೂರವೇ ಉಳಿದು ಕನ್ನಡಪರ ಕೆಲಸಗಳಲ್ಲಿ, ಜನಸೇವೆಯಲ್ಲಿ ಸುಖ ಸಂತೋಷಗಳನ್ನು ಕಂಡುಕೊಂಡಿರುವ ಇವರು, ಕ್ಷಿಪ್ರವಾಗಿ ಮರೆಯಾಗುತ್ತಿರುವ ಅಪರೂಪದ ಪೀಳಿಗೆಗೆ ಸೇರಿದವರಾಗಿ ಸರ್ವರೀತಿಯಲ್ಲೂ ಅಭಿನಂದನಾರ್ಹರು.

ಸ್ಥಾನಮಾನಗಳನ್ನು ಎಂದೂ ಅರಸದ ಇವರ ಪಾಲಿಗೆ ಅನೇಕ ಮಹತ್ವದ ಸ್ಥಾನಗಳು ತಾವಾಗಿಯೇ ಬಂದಿರುವುದು ಇವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ. ಬೆಂಗಳೂರಿನ ನಗರ ಸಭೆಯ ಸದಸ್ಯರಾಗಿ, ಪ್ರಥಮ ಪ್ರಜೆಯಾಗಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಸಾಹಿತ್ಯ ಪರಿಷತ್ತು, ಕರ್ನಾಟಕ ಮಾಧ್ಯಮ ಅಕಾಡೆಮಿ ಹಾಗೂ ಸದ್ಯದಲ್ಲಿ ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರಾಗಿ ಇವರ ಸೇವೆ ಅವಿಸ್ಮರಣೀಯ, ಹೀಗಾಗಿ ಅನುಕರಣೀಯ.

ವನಸುಮದಂತೆ ಬಾಳುತ್ತಿರುವ ಎಂಬತ್ತೆರಡು ಸಾರ್ಥಕ ವಸಂತಗಳನ್ನು ಕಂಡಿರುವ ಈ ಗಂಭೀರ ಚಿಂತಕರಿಗೆ, ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಮಹಾತ್ಮಗಾಂಧಿ, ಕುವೆಂಪು ಮೊದಲಾದವರ ಬರಹ ಹಾಗೂ ಚಿಂತನೆಗಳೇ ಸ್ಫೂರ್ತಿ, ಅವರೇ ಆದರ್ಶ. ಈ ಮಹಾನ್ ಮಹಿಮರ ಜಾಡನ್ನೇ ಅನುಸರಿಸುತ್ತಿರುವ ನಾರಾಯಣರದು ಒಂದು ರೀತಿಯ ಸಾತ್ವಿಕ ಜೀವನ.

ಇಂತಹ ಸರ್ವಾಂಗೀಣ ವ್ಯಕ್ತಿತ್ವದ, ಬಹುಜನಪ್ರಿಯ, ಅಜಾತಶತ್ರುವಿನ ಸೇವೆಯನ್ನು ಮೆಚ್ಚಿರುವ, ಅವರ ಅಪಾರ ಸಂಖ್ಯೆಯ ಹಿರಿಕಿರಿಯ ಅಭಿಮಾನಿಗಳು ತಮ್ಮ ಗೌರವಾದರಗಳನ್ನು ಒಂದೆಡೆ ಕೂಡಿ ಸಲ್ಲಿಸಬೇಕೆನ್ನುವ ಬಹುದಿನಗಳ ಉತ್ಕಟ ಆಕಾಂಕ್ಷೆಯನ್ನು, ನಾರಾಯಣರ ವಿರೋಧದ ನಡುವೆಯೂ ಸಾಕಾರಗೊಳಿಸಲು ದೃಢ ಹೆಜ್ಜೆ ಇರಿಸಿದ್ದೇವೆ. ಇದರ ಪರಿಣಾಮವೇ ನಿಮ್ಮ ಕೈಯಲ್ಲಿರುವ ನಮ್ಮ ಪ್ರೀತಿದ್ಯೋತಕವಾದ ನಾಡೋಜ ಜಿ. ನಾರಾಯಣ ಅವರ ಈ ಅಭಿನಂದನಾ ಗ್ರಂಥ.

ಈ ಗ್ರಂಥದಲ್ಲಿ ಅನೇಕ ಕೀರ್ತಿಶೇಷ ಕನ್ನಡದ ಕಟ್ಟಾಳುಗಳ ಅದರೊಟ್ಟಿಗೆ ಪ್ರಸ್ತುತದ ಸಾಹಿತ್ಯ ಕೃಷಿಕರನೇಕರ ಲೇಖನಗಳೂ ಇವೆ. ಈ ಕಷ್ಟದ ಕೆಲಸವನ್ನು ಆಗುಮಾಡುವ ಮಹತ್ತರ ಕಾರ್ಯದಲ್ಲಿ ಸಂಪಾದಕ ಮಂಡಳಿ, ಅದರಲ್ಲೂ ನನ್ನ ಮಿತ್ರ ಪ್ರೊ. ಎಂ.ಎಚ್. ಕೃಷ್ಣಯ್ಯ ಹಾಗೂ ಡಾ. ಚಕ್ಕೆರೆ ಶಿವಶಂಕರ್ ಅವರ ಶ್ರಮ ಶ್ಲಾಘನೀಯ, ಅಭಿನಂದನಾರ್ಹ. ಈ ಎಲ್ಲರಿಗೂ ನನ್ನ ನಮನಗಳು.

ನಮ್ಮ ಅಭಿನಂದನಾ ಸಮಾರಂಭ, ಅಭಿನಂದನಾ ಗ್ರಂಥ ಪ್ರಕಟಣೆ ಹಾಗೂ ನಾರಾಯಣರ ಮಮತೆಯ ಕೂಸು ವಿನೋದಕ್ಕೆ ಪ್ರೋತ್ಸಾಹ ನೀಡಲು ಉದ್ಯುಕ್ತರಾಗಿರುವ ಅಪಾರ ಅಭಿಮಾನಿ

ಇವರೆಲ್ಲರನ್ನು ಒಂದೆಡೆ ಕಲೆಹಾಕುವ ಮುಖ್ಯಕಾರ್ಯದಲ್ಲಿ ಮಿತ್ರರಾದ ಜಿ.ಎಲ್. ಲಕ್ಕೇಗೌಡ, ಪ್ರೊ. ಬಿ. ಜಯಪ್ರಕಾಶ ಗೌಡ, ಹೆಚ್.ಎಂ. ನಾರಾಯಣಸ್ವಾಮಿ, ಡಾ. ಎಂ.ಕೆ. ಪುರುಷೋತ್ತಮ್, ಹೆಚ್.ಎಂ. ಬೋರಯ್ಯ ಅವರಲ್ಲದೆ ಅನೇಕ ಸಂಘ ಸಂಸ್ಥೆಗಳು ನೆರವಾದ ಬಗೆ, ಮೀಸಲಿಟ್ಟ ಸಮಯ ಹಾಗೂ ನೀಡಿದ ಸಹಕಾರಕ್ಕೆ ನಾನು ಆಭಾರಿ.

ಮುದ್ರಣ ಕಾರ್ಯವನ್ನು ಎಂದಿನಂತೆ ಒತ್ತಡದ ನಡುವೆಯೂ ನಗುನಗುತ್ತಲೇ ಒಪ್ಪ ಓರಣವಾಗಿ ನಿರ್ವಹಿಸಿರುವ ಗೆಳೆಯರಾದ ಗುರು ಮತ್ತು ಸಿಬ್ಬಂದಿವರ್ಗದವರನ್ನು ವಂದಿಸುತ್ತೇನೆ. ಮನವರಿತ ಬಾಳಸಂಗಾತಿ, ಪ್ರೀತಿವಾತ್ಸಲ್ಯದ ಮಕ್ಕಳು, ಮೊಮ್ಮಕ್ಕಳು ಹಾಗೂ ಅಪಾರ ಅಭಿಮಾನಿಗಳ ನಡುವೆ ದೇಶಹಳ್ಳಿ ಗಿರೀಗೌಡ ನಾರಾಯಣರು ನೂರ್ಕಾಲ ಬಾಳಲೆನ್ನುವುದು ನಮ್ಮೆಲ್ಲರ ಸದಾಶಯ. ಅವರ ಆರೋಗ್ಯ ಸುಧಾರಿಸಿ, ಅವರ ಸೇವೆ ನಾಡುನುಡಿಗೆ ಅನಿರ್ಬಾಧಿತವಾಗಲಿ ಎಂದು ಮನಃಪೂರ್ವಕವಾಗಿ ಇಡೀ ತಂಡದ ಪರವಾಗಿ ಹಾರೈಸಿ ವಂದಿಸುವ

ಪ್ರೊ. ಟಿ. ಶಿವಣ್ಣ
ಅಧ್ಯಕ್ಷ
ಅಭಿನಂದನಾ ಸಮಿತಿ

ಅಭಿನಂದನ ಸಂಪುಟ ಕುರಿತು

•

•

ಇತ್ತೀಚೆಗೆ ಶ್ರೀ ಜಿ. ನಾರಾಯಣ ಅವರು ದಿ. ಎಚ್.ಎಲ್. ನಾಗೇಗೌಡರು ಸ್ಥಾಪಿಸಿದ ಕರ್ನಾಟಕ ಜಾನಪದ ಪರಿಷತ್ತಿನ ('ಜಾನಪದ ಲೋಕ'ದ ಮಾತೃಸಂಸ್ಥೆ) ಅಧ್ಯಕ್ಷರಾಗಿದ್ದಾರೆ. ಅವರಿಗೀಗ ೮೨ ವರ್ಷಗಳು ತುಂಬಿವೆ. ಅವರು ತಮ್ಮ ಬದುಕಿನುದ್ದಕ್ಕೂ ವೈವಿಧ್ಯಪೂರ್ಣ ನೆಲೆಗಳಲ್ಲಿ ಇಟ್ಟ ಹೆಜ್ಜೆ, ಬಿಟ್ಟ ಸಾಧನೆಯ ಗುರುತುಗಳು ಅಪೂರ್ವವಾದುವು. ಪ್ರತಿಯೊಂದು ನೆಲೆಯೂ ಸ್ಥಾನವೂ ಅವರಿಗೆ ಸ್ವಾರ್ಥರಹಿತ ನಿಸ್ಪೃಹ ಸೇವೆಗೆ ಸದವಕಾಶ ಒದಗಿಸುವ ಕಾರ್ಯಕ್ಷೇತ್ರ, ಕರ್ಮಭೂಮಿ. ಇದುವರೆಗಿನ ಶ್ರೀ ಜಿ. ನಾರಾಯಣ ಅವರ ಕಾರ್ಯ, ಸಾಧನೆ, ಕೊಡುಗೆಗಳನ್ನು ಕೃತಜ್ಞತೆಯಿಂದ ಸ್ಮರಿಸಲು, ಅಭಿನಂದಿಸಲು ಇದೊಂದು ಸುಸಂದರ್ಭ. ಸುಯೋಗದಿಂದ ಇದು 'ಸುವರ್ಣ ಕರ್ನಾಟಕ'ದ ವರ್ಷವೂ ಆಗಿದೆ. ಕನ್ನಡ ಅವರ ಚೈತನ್ಯದ ಜೀವಧಾತು ಅಲ್ಲವೆ. ಶ್ರೀ ಜಿ.ಎಲ್. ಲಕ್ಕೇಗೌಡರು ಮತ್ತು ಅವರ ಅಭಿಮಾನಿಗಳು ಸೇರಿ, ಪ್ರೊ. ಟಿ. ಶಿವಣ್ಣ ಅವರ ಅಧ್ಯಕ್ಷತೆಯಲ್ಲಿ ಅಭಿನಂದನಾ ಸಮಿತಿ ರಚಿಸಿ, ಅರ್ಥಪೂರ್ಣ ಕಾರ್ಯಕ್ರಮ ಹಾಕಿಕೊಂಡು, ಆ ಸಂದರ್ಭಕ್ಕೆ ಔಚಿತ್ಯಪೂರ್ಣವಾಗಿ ಈ ಅಭಿನಂದನ ಸಂಪುಟ ಅರ್ಪಿಸುವ ಸ್ತುತ್ಯ ಕಾರ್ಯ ಕೈಗೊಂಡಿದ್ದಾರೆ.

'ನಾಡೋಜ ದೇಶಹಳ್ಳಿ ಜಿ. ನಾರಾಯಣ ಅಭಿನಂದನ ಸಂಪುಟ'ದಲ್ಲಿ ಎರಡು ಭಾಗಗಳಿವೆ. ಒಂದು, ಅಭಿನಂದನ ಲೇಖನಗಳ ಭಾಗ. ಎರಡು ಶ್ರೀ ಜಿ. ನಾರಾಯಣ ಅವರಿಗೆ ಪ್ರಿಯವಾದ ಸಂಸ್ಕೃತಿ ಮತ್ತು ಪರಂಪರೆ ಕುರಿತ ಎಲ್ಲ ಕಾಲಕ್ಕೂ ಪರಾಮರ್ಶನಯೋಗ್ಯವಾದ ಲೇಖನಗಳ ಭಾಗ. ಎಲ್ಲವೂ ವಿವಿಧ ಮೂಲಗಳಿಂದ ಆರಿಸಿದುವು. ಮೊದಲನೆಯ ಭಾಗದಲ್ಲಿ, ಹೊಸ ಲೇಖನಗಳ ಜೊತೆಗೆ, ಹಿಂದೆ ಶ್ರೀ ಜಿ. ನಾರಾಯಣ ಅವರಿಗೆ ಅಭಿನಂದನೆ ಸಲ್ಲಿಸಿದ ಸಂದರ್ಭಗಳಲ್ಲಿ ಹೊರತಂದ ಸಂಸ್ಮರಣ ಸಂಚಿಕೆಗಳಲ್ಲಿನ ಆರಿಸಿದ ಲೇಖನಗಳನ್ನು ಸೇರಿಸಿದೆ. ಹಲವು ದೃಷ್ಟಿಯಿಂದ ಇದು ಉಚಿತವಾದುದು ಎಂದು ನಮ್ಮ ಅನಿಸಿಕೆ.

ಶ್ರೀ ಜಿ. ನಾರಾಯಣ ಅವರ ಕಾರ್ಯವಿಧಾನವನ್ನು ಬಹುಹತ್ತಿರದಿಂದ ಕಂಡವರು, ಕಾರ್ಯಯೋಜನೆಗಳಲ್ಲಿ ಪಾಲ್ಗೊಂಡವರು, ಸಮವಯಸ್ಕ ಒಡನಾಡಿಗಳು, ಸ್ನೇಹಿತರು, ಕವಿ ಸಾಹಿತಿಗಳು ಇವರಲ್ಲಿ ಹಲವರು ಇಂದು ನಮ್ಮೊಡನಿಲ್ಲ. ನಮ್ಮ ಪುಣ್ಯಕ್ಕೆ ಕೆಲವು ಹಿರಿಯರು ಇದ್ದು ಸಾಕ್ಷಿಪ್ರಜ್ಞೆಯಾಗಿ ನಮ್ಮ ಕಾರ್ಯಕ್ಕೆ ಶುಭ ಕೋರುತ್ತಿದ್ದಾರೆ. ಅವರೆಲ್ಲರ ಅನಿಸಿಕೆಗಳು ಹಾಗೂ ಅಭಿನಂದನೆ ಸದಾ ಸ್ಮರಣಾರ್ಹವಾದುವು. ಎರಡನೆಯದಾಗಿ, ಅವರು ಬರೆದ ಲೇಖನಗಳು ದೀರ್ಘವಾದವಲ್ಲ, ಆದರೆ ಅಂಗೈಯಲ್ಲಿನ ಸ್ಮಾರಕಗಳಂತೆ

ಶ್ರೀ ಜಿ. ನಾರಾಯಣ ಅವರ ವ್ಯಕ್ತಿತ್ವ ಮತ್ತು ಸಾಧನೆಯನ್ನು ಮೂರ್ತರೂಪದಲ್ಲಿ ಕಡೆದು ನಿಲ್ಲಿಸುತ್ತವೆ. ಅವುಗಳಲ್ಲಿ ಹಿರಿಯ ಚೇತನಗಳು ತೋರಿರುವ ಪ್ರೀತಿ ಗೌರವಗಳ ತುಂಬು ಹೃದಯಸ್ಪಂದನೆಯಿದೆ, ಭಾವಸ್ಪಂದನೆಯಿದೆ. ಆ ಭಾವಸ್ಪರ್ಶ ಕಿರಿಯ ತಲೆಮಾರಿನವರಿಗೆ ಸ್ಫೂರ್ತಿದಾಯಕ. ಮೂರನೆಯದಾಗಿ, ಹಿರಿಯರು ಬರೆದ ಲೇಖನಗಳಲ್ಲಿ ಶ್ರೀ ಜಿ. ನಾರಾಯಣ ಅವರ ವ್ಯಕ್ತಿತ್ವದ ಯಾವ ಗುಣವಿಶೇಷಗಳನ್ನು, ಮೌಲ್ಯಗಳನ್ನು ಮೆಚ್ಚಿ ಹೇಳಿದ್ದಾರೋ ಅವು, ದಶಕಗಳ ಕಾಲಾಂತರದಲ್ಲಿ ವ್ಯತ್ಯಸ್ತ ಜೀವನ ವಿಧಾನದಲ್ಲಿ, ಇಂದೂ ಶ್ರೀ ಜಿ. ನಾರಾಯಣ ಅವರಲ್ಲಿ ಕಿಂಚಿತ್ತೂ ಬದಲಾಗಿಲ್ಲ. ಯಾರಿಗಾದರೂ ಈ ಕಾಲ ವೈಪರೀತ್ಯದ ನಡುವೆ ಏನೆಲ್ಲ ಮೌಲ್ಯಪಲ್ಲಟಗಳ ನಡುವೆ, ಹಿನ್ನೆಲೆ ಗಮನಿಸಿದಾಗ, ಶ್ರೀ ಜಿ. ನಾರಾಯಣ ಅವರದು ಅಪರೂಪದ ಪವಾಡಸದೃಶ ವ್ಯಕ್ತಿತ್ವ ಎನಿಸಿದರೆ ಆಶ್ಚರ್ಯವಲ್ಲ. ನಾಲ್ಕನೆಯ ಅಂಶ: ಒಡನಾಡಿಗಳು, ಹಿರಿಯರು, ಕಾರ್ಯಕರ್ತರ ವಲಯ ಅವರಿಗೆ ಆಯುರಾರೋಗ್ಯ ಶುಭಕಾಮನೆಗಳನ್ನು ಕೋರುತ್ತ ವ್ಯಕ್ತಪಡಿಸಿರುವ ನಿರೀಕ್ಷೆಗಳನ್ನು ಈ ಇಪ್ಪತ್ತೈದು ಮೂವತ್ತು ವರ್ಷಗಳಲ್ಲಿ, ಶ್ರೀ ಜಿ. ನಾರಾಯಣ ಅವರು ಹುಸಿಯಾಗಿಸಲಿಲ್ಲ ಎಂಬುದು ಗಮನಾರ್ಹ. ಅನಂತರ ಅವರು ಹೊಸ ಕ್ಷೇತ್ರಗಳಲ್ಲಿ ಕಾಲಿಟ್ಟು ಮಾಡಿರುವ ಕಾರ್ಯ ಹಾಗೂ ಸಾಧನೆಗಳನ್ನು ಕಿರಿಯ ತಲೆಮಾರಿನವರು ಹೊಸದಾಗಿ ಬರೆದಿರುವ ಲೇಖನಗಳಲ್ಲಿ ಗುರುತಿಸಬಹುದು. ಹೊಸ ಲೇಖನಗಳು ಸಮಗ್ರ ನೋಟದ ದೃಷ್ಟಿಯಿಂದಲೂ ಗಮನಾರ್ಹವಾಗುತ್ತವೆ. ಈ ಎಲ್ಲ ಲೇಖಕರು ಕಟ್ಟಿಕೊಡುವ ಒಂದು ನಿಸ್ವಾರ್ಥ ಸೇವಾಪ್ರಪಂಚ ಮುಂದಿನ ಪೀಳಿಗೆಯವರಿಗೆ ಅನುಸರಣೀಯ ಆದರ್ಶವಾಗಬಲ್ಲದು. ಹಾಗೆ ಆಗಲಿ ಎಂಬುದು ನಮ್ಮ ಆಶಯ.

ಪಕ್ವವಯಸ್ಸಿನ ಪರಿಪಕ್ವಮನಸ್ಸಿನ ಶ್ರೀ ಜಿ. ನಾರಾಯಣ ಅವರ ಒಂದು ಸಂದರ್ಶನ ನಡೆಸಿ ಈ ಸಂಪುಟದಲ್ಲಿ ಸೇರಿಸುವ ಉದ್ದೇಶವಿತ್ತು. ಆದರೆ ಅವರ ಆರೋಗ್ಯಕಾರಣ ತೊಂದರೆ ಕೊಡಲು ಮನಸ್ಸಾಗಲಿಲ್ಲ. ಅವರೇ ಹೇಳುವುದನ್ನೆಲ್ಲ ಹೇಳಿದ್ದೇನೆ, ಅದನ್ನೆ ಬಳಸಿಕೊಳ್ಳಿ ಎಂದರು. ಕಾಲಾವಕಾಶ ಸೀಮಿತವಾಗಿದ್ದರಿಂದ ಹಿಂದೆ ದಿ. ಆರ್.ಎಸ್. ರಾಮರಾಯರು ನಡೆಸಿದ್ದ ಸಂದರ್ಶನದ ಆಯ್ದ ಭಾಗಗಳನ್ನು 'ಸಂತೃಪ್ತಿಯ ಹಿನ್ನೋಟ'ವಾಗಿ ಸಂಪಾದಿಸಿ ಈ ಸಂಪುಟದಲ್ಲಿ ಸೇರಿಸಿದೆ. ಹೀಗಾಗಿ ಈ ಸಂಪುಟ ಒಂದು ವಿಶಿಷ್ಟರೂಪವನ್ನೆ ಪಡೆದಿದೆ. ಆ ಎಲ್ಲ ಹಿರಿಯ ಕಿರಿಯರ ಕೊಡುಗೆಯನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಹಳೆಯ ಛಾಯಾಚಿತ್ರಗಳನ್ನು ಒದಗಿಸಿದ ಎಲ್ಲ ಮಿತ್ರರಿಗೂ ನಮ್ಮ ಕೃತಜ್ಞತೆಗಳು.

ಈ ಅಭಿನಂದನ ಸಂಪುಟ ಸಿದ್ಧಪಡಿಸಲು ಕಾರಣಕರ್ತರಾದವರು ಅಭಿನಂದನ ಸಮಿತಿಯ ಅಧ್ಯಕ್ಷರಾದ ಪ್ರೊ. ಟಿ. ಶಿವಣ್ಣ ಅವರು, ಶ್ರೀ ಬಿ.ಎಲ್. ಲಕ್ಕೇಗೌಡರು, ಅವರ ಅದಮ್ಯ ಉತ್ಸಾಹದ ಗೆಳೆಯರು. ಅವರಿಗೆ ನಮ್ಮ ವಂದನೆಗಳು. ಶ್ರೀ ಜಿ. ನಾರಾಯಣರ ಅಭಿಮಾನಿಗಳಿಗೂ, ಎಂದಿನಂತೆ ಸ್ನೇಹದಿಂದ ನಗುನಗುತ್ತಾ ನಮ್ಮೆಲ್ಲ ಕೆಲಸಗಳನ್ನು ಅಚ್ಚುಕಟ್ಟಾಗಿ ಸುಂದರವಾಗಿ ಮಾಡಿಕೊಡುವ ಇಳಾ ಮುದ್ರಣದ ಶ್ರೀ ಬಿ. ಗುರುಮೂರ್ತಿ ಅವರಿಗೆ, ಮುದ್ರಣಾಲಯದ ಸಿಬ್ಬಂದಿ ವರ್ಗಕ್ಕೆ, ರಕ್ಷಾಪುಟಕ್ಕೆ ಸುಂದರವಾದ ಛಾಯಾಚಿತ್ರ ತೆಗೆದುಕೊಟ್ಟ ಶ್ರೀ ಯು.ಟಿ. ಸುರೇಶ್ ಅವರಿಗೆ ನಮ್ಮ ವಂದನೆಗಳು.

ಎಂ.ಎಚ್. ಕೃಷ್ಣಯ್ಯ
ಚಕ್ಕೆರೆ ಶಿವಶಂಕರ್
ಸಂಪಾದಕರು

ಪರಿವಿಡಿ


•

•

ಭಾಗ–೧ : ಅಭಿನಂದನೆ

ಭಾಗ–೨ : ಸಂತೃಪ್ತಿಯ ಹಿನ್ನೋಟ

ಭಾಗ-೩ : ಸಂಸ್ಕೃತಿ ಚಿಂತನೆ



ಬಿಹಾರ್ ರಾಜ್ಯದ ಅಂದಿನ ರಾಜ್ಯಪಾಲರಾಗಿದ್ದ ಶ್ರೀ ಕೆ.ಸಿ. ರೆಡ್ಡಿ ಅವರು ಕನ್ನಡ ಸಾಹಿತ್ಯ ಪರಿಷತ್ತಿಗೆ ಭೇಟಿ ನೀಡಿದಾಗ ಜಿ. ನಾರಾಯಣ ಅವರಿಂದ ಸ್ವಾಗತ. ಶ್ರೀ ಕಡಿದಾಳ ಮಂಜಪ್ಪನವರನ್ನೂ ಕಾಣಬಹುದು.




ಲೋಕನಾಯಕ ಜಯಪ್ರಕಾಶ ನಾರಾಯಣ ಅವರು ಬೆಂಗಳೂರಿಗೆ ಭೇಟಿ ನೀಡಿದಾಗ – ಶ್ರೀ ಕೆಂಗಲ್ ಹನುಮಂತಯ್ಯನವರನ್ನೂ ಚಿತ್ರದಲ್ಲಿ ಕಾಣಬಹುದು



ಧಾರವಾಡದಲ್ಲಿ ನಡೆದ ಅಂತರರಾಷ್ಟ್ರೀಯ ಪುಸ್ತಕ ಪ್ರದರ್ಶನ ಉದ್ಘಾಟನೆ –
ದ.ರಾ. ಬೇಂದ್ರೆ ಅವರಿಂದ



'ವಿನೋದ' ೪೦ನೆಯ ವಾರ್ಷಿಕೋತ್ಸವ



ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಸ್. ನಿಜಲಿಂಗಪ್ಪ ಅವರು ನಗರದ ಮೇಯರ್ ಆಗಿ ಆಯ್ಕೆಯಾಗಿದ್ದ ಜಿ. ನಾರಾಯಣ ಅವರಿಗೆ ಅಭಿನಂದನೆ



ಶ್ರೀ ಹಾರ್‍ನಹಳ್ಳಿ ರಾಮಸ್ವಾಮಿ ಅವರಿಂದ ಡಿ.ವಿ.ಜಿ. ಪ್ರಶಸ್ತಿ ಪ್ರದಾನ
ಶ್ರೀ ವೀರಪ್ಪ ಮೊಯಿಲಿ ಅವರೊಂದಿಗೆ



ಅಂದಿನ ಮದ್ರಾಸ್ ರಾಜ್ಯಪಾಲರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರು ಕೆಂಪೇಗೌಡ ಪ್ರತಿಮೆ ಅನಾವರಣ ಸಮಾರಂಭಕ್ಕೆ ಆಗಮಿಸಿದಾಗ – ಮೇಯರ್ ಜಿ. ನಾರಾಯಣ, ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪ, ಅಂದಿನ ಕರ್ನಾಟಕ ರಾಜ್ಯಪಾಲ ಶ್ರೀ ನಾಗೇಶ್ ಅವರೊಂದಿಗೆ



ಕೆಂಪೇಗೌಡ ಪ್ರತಿಮೆಯ ಅನಾವರಣ ಸಂದರ್ಭದಲ್ಲಿ ಮೇಯರ್ ಜಿ. ನಾರಾಯಣ ಜಯಚಾಮರಾಜೇಂದ್ರ ಒಡೆಯರೊಂದಿಗೆ



ಅಂದಿನ ಕರ್ನಾಟಕ ರಾಜ್ಯಪಾಲರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರೊಂದಿಗೆ ಭೇಟಿ



ಮಹಾನಗರ ಪಾಲಿಕೆ ಕಾರ್ಯಾಲಯದ ಮುಂದಿರುವ ಕೆಂಪೇಗೌಡ ಪ್ರತಿಮೆಯ ಮಾದರಿ ಪರಿಶೀಲನೆ



೨೮-೫-೧೯೬೪ - ಬೆಂಗಳೂರು ನಗರಕ್ಕೆ ಕಾವೇರಿ ನೀರಿನ ಪಾದಾರ್ಪಣೆ ಉದ್ಘಾಟನಾ ಸಮಾರಂಭ - ಅಂದಿನ ಕೇಂದ್ರ ಸಚಿವರಾದ ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರಿ, ಅಂದಿನ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲ್ ಅವರೊಂದಿಗೆ



ದ.ರಾ. ಬೇಂದ್ರೆ ಅವರಿಗೆ ಅಭಿನಂದನೆ



ಕ.ಸಾ.ಪ. ಅಧ್ಯಕ್ಷರಾಗಿ ಆಯ್ಕೆಯಾದಾಗ ವುಡ್‌ಲ್ಯಾಂಡ್ಸ್ ಹೋಟೆಲ್‌ನಲ್ಲಿ
ಸಾಹಿತಿಗಳಿಂದ ಅಭಿನಂದನೆ – ಮಾಸ್ತಿ ಅವರಿಂದ



ಅಖಿಲ ಕರ್ನಾಟಕ ಗಮಕ ಕಲಾ ಸಮ್ಮೇಳನ – ಡಿ.ವಿ.ಜಿ. ಅವರಿಂದ ಉದ್ಘಾಟನೆ,
ಜೋಳದರಾಶಿ ದೊಡ್ಡನಗೌಡ ಅವರ ಅಧ್ಯಕ್ಷತೆಯಲ್ಲಿ



೪೭ನೇ ಕನ್ನಡ ಸಾಹಿತ್ಯ ಸಮ್ಮೇಳನ ೧೯೭೦ರಲ್ಲಿ ಎಸ್. ನಿಜಲಿಂಗಪ್ಪ, ಜಿ. ನಾರಾಯಣ, ಸಮ್ಮೇಳನಾಧ್ಯಕ್ಷ ದೇಜಗೌ ಮತ್ತು ಕುವೆಂಪು ಮಾತನಾಡುತ್ತಿರುವುದು



೧೯೭೦ರಲ್ಲಿ ಪರಿಷತ್ತಿನ ಸುವರ್ಣ ಮಹೋತ್ಸವದಲ್ಲಿ ಡಿ.ವಿ.ಜಿ., ರಾಜ್ಯಪಾಲ ಧರ್ಮವೀರ, ಮುಖ್ಯಮಂತ್ರಿ ವೀರೇಂದ್ರ ಪಾಟೀಲ, ರಾಮಕೃಷ್ಣ ಹೆಗ್ಗಡೆ, ದೇಜಗೌ ಅವರೊಂದಿಗೆ




ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವ ಕಟ್ಟಡ ಉದ್ಘಾಟನೆ
ರಾಷ್ಟ್ರಪತಿ ವಿ.ವಿ. ಗಿರಿ ಅವರಿಂದ



ಕೊರವಂಜಿ – 'ರಾಶಿ' ಅವರಿಗೆ ಅಭಿನಂದನೆ



ಅಂತರರಾಷ್ಟ್ರೀಯ ಮಹಿಳಾ ವರ್ಷಾಚರಣೆ ಉದ್ಘಾಟನೆ



ಅಂತರ ಭಾರತಿ ಪುಸ್ತಕ ಪ್ರದರ್ಶನ



ಅಂದಿನ ಕೇಂದ್ರ ಸಚಿವರಾಗಿದ್ದ ಶ್ರೀ ಎಸ್.ಎಂ. ಕೃಷ್ಣ ಅವರಿಂದ
ಕ.ಸಾ.ಪ. ಬೆರಳಚ್ಚು ತರಗತಿಗಳ ಉದ್ಘಾಟನೆ.



ಸರ್ವಜ್ಞ ದಿನಾಚರಣೆ – ಶ್ರೀ ಬಿ.ಡಿ. ಜತ್ತಿ, ಶ್ರೀ ಎಸ್.ಎಂ. ಕೃಷ್ಣ ಅವರೊಂದಿಗೆ



೨-೧೦-೧೯೭೪ -
ರಾಷ್ಟ್ರೀಯ ನೈರ್ಮಲ್ಯೀಕರಣ ಸಪ್ತಾಹ - ಗಾಂಧಿ ಜಯಂತಿ ದಿನಾಚರಣೆ -
ಅಂದಿನ ಸಚಿವರಾದ ಶ್ರೀ ಕೆ. ಪುಟ್ಟಸ್ವಾಮಿ ಮತ್ತು ಉಪ ಮೇಯರ್ ಶ್ರೀ ಎಸ್. ಸುಂದರರಾಜ್ ಅವರೊಂದಿಗೆ




ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಮಟ್ಟದ ಜನಪದ ಕಲಾ ಮಹೋತ್ಸವವನ್ನು ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸು ಅವರು ಉದ್ಘಾಟಿಸುತ್ತಿರುವುದು. ಹಿಂದೆ ಪರಿಷತ್ತಿನ ಕಾರ್ಯದರ್ಶಿ ಶ್ರೀ ಜಿ.ಕೆ. ಗಂಡೂರಾವ್, ಅಧ್ಯಕ್ಷ ಶ್ರೀ ಜಿ. ನಾರಾಯಣ ಮತ್ತು ಸಂಚಾಲಕ ಶ್ರೀ ಆರ್.ಎಚ್. ರಾಜು ಅವರಿದ್ದಾರೆ.



ಮುಂಬಯಿ ಕನ್ನಡಿಗರ ಸಾಹಿತ್ಯ ಸಮ್ಮೇಳನದಲ್ಲಿ ಪರಿಷದಧ್ಯಕ್ಷ ಶ್ರೀ ಜಿ. ನಾರಾಯಣರು ಮಾತನಾಡುತ್ತಿರುವುದು.
ಎಡದಿಂದ ಬಲಕ್ಕೆ : ಸ್ವಾಗತಾಧ್ಯಕ್ಷ ಸುಬ್ಬರಾಯನ್, ಮುಂಬಯಿ ಸಮಿತಿಯ ಅಧ್ಯಕ್ಷ ಶ್ರೀ ಜೆ.ಎನ್. ಅಯ್ಯರ್ ಮತ್ತು
ಕಾರ್ಯದರ್ಶಿಗಳಾದ ಡಾ. ಶ್ರೀನಿವಾಸ ಹಾವನೂರ ಹಾಗೂ ಅ.ಸು. ಕೃಷ್ಣರಾವ್



ಅಭಿನಂದನಾ ಸಮಾರಂಭವೊಂದರಲ್ಲಿ ಕೆಂಗಲ್ ಹನುಮಂತಯ್ಯ,
ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರೊಂದಿಗೆ ಜಿ. ನಾರಾಯಣ ದಂಪತಿಗಳು



೧೯೭೮ರಲ್ಲಿ ದೆಹಲಿಯಲ್ಲಿ ನಡೆದ ಅಖಿಲ ಭಾರತ ೫೦ನೇ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭ. ಎಡದಿಂದ ಬಲಕ್ಕೆ ಶ್ರೀ ಎಚ್. ಬಿ. ದಾತಾರ್, ಶ್ರೀ ಜಿ.ಪಿ. ರಾಜರತ್ನಂ, ಪ್ರಧಾನಮಂತ್ರಿ ಶ್ರೀ ಮೊರಾರ್ಜಿ ದೇಸಾಯಿ. ಕರ್ನಾಟಕದ ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸ್ ಮತ್ತು ಪರಿಷತ್ತಿನ ಅಧ್ಯಕ್ಷ ಶ್ರೀ ಜಿ. ನಾರಾಯಣ



೧೯೭೮ರಲ್ಲಿ ದೆಹಲಿ ಕನ್ನಡ ಸಾಹಿತ್ಯ ಸಮ್ಮೇಳನ (೫೦ನೇ) ಅಧ್ಯಕ್ಷ ಜಿ.ಪಿ. ರಾಜರತ್ನಂ, ಪ್ರಧಾನಿ ಮೊರಾರ್ಜಿ ದೇಸಾಯಿ, ಮುಖ್ಯಮಂತ್ರಿ ಅರಸು ಅವರೊಂದಿಗೆ



ದೆಹಲಿ ಕನ್ನಡ ಸಾಹಿತ್ಯ
ಸಮ್ಮೇಳನ –
ಅಂದಿನ ಪ್ರಧಾನಮಂತ್ರಿ
ಶ್ರೀ ಮೊರಾರ್ಜಿ ದೇಸಾಯಿ
ಅವರೊಂದಿಗೆ




ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವ



ದೆಹಲಿ ಕನ್ನಡ ಸಾಹಿತ್ಯ
ಸಮ್ಮೇಳನದಲ್ಲಿ
ಸಾಹಿತಿಗಳ ಚಿತ್ರ
ಪ್ರದರ್ಶನ



ಪುಸ್ತಕ ಪ್ರದರ್ಶನದ ಸಾಗುವಣೆ ಮತ್ತು ಪ್ರಚಾರಕ್ಕೆ ಪರಿಷತ್ತು ಕೊಂಡು
ಉಪಯೋಗಿಸುತ್ತಿರುವ ಪ್ರದರ್ಶನದ ವ್ಯಾನ್




ಶಿವಮೊಗ್ಗದಲ್ಲಿ ನಡೆದ ಅಖಿಲ ಭಾರತ ೪೯ನೇ
ಕನ್ನಡ ಸಾಹಿತ್ಯ ಸಮ್ಮೇಳನದ ಪ್ರವೇಶದ್ವಾರದಲ್ಲಿ ಗಣ್ಯರು



ಮಂಡ್ಯದಲ್ಲಿ ನಡೆದ ೪೮ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಸಮ್ಮೇಳನಾಧ್ಯಕ್ಷೆ ಶ್ರೀಮತಿ ಜಯದೇವಿ ತಾಯಿ ಲಿಗಾಡೆ ಅವರ ಮೆರವಣಿಗೆ ದೃಶ್ಯ. ಮೆರವಣಿಗೆಯಲ್ಲಿ ಪರಿಷತ್ತಿನ ಅಧ್ಯಕ್ಷ ಶ್ರೀ ಜಿ. ನಾರಾಯಣ ಮತ್ತು ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ ಎಂ. ಲಿಂಗಯ್ಯ ಅವರಿದ್ದಾರೆ.



ಗೋಖಲೆ ಸಾರ್ವಜನಿಕ ಸಂಸ್ಥೆಯವರು ಏರ್ಪಡಿಸಿದ್ದ
ಡಿ.ವಿ.ಜಿ. ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ



ಕೆಂಗಲ್ ಹನುಮಂತಯ್ಯನವರಿಗೆ ಸಾರ್ವಜನಿಕ ಅಭಿನಂದನೆ



೧೪೫ನೆ ಪತ್ರಿಕಾ ವರ್ಷಾಚರಣೆ – ರಾಷ್ಟ್ರೀಯ ವಿಚಾರಗೋಷ್ಠಿ – ಸನ್ಮಾನ ಸಮಾರಂಭ



ಕರ್ನಾಟಕ ಪತ್ರಿಕಾ ಅಕಾಡೆಮಿ ಕಾರ್ಯಕ್ರಮವೊಂದರಲ್ಲಿ
ಉಪರಾಷ್ಟ್ರಪತಿ ಶ್ರೀ ಬಿ.ಡಿ. ಜತ್ತಿ ಮತ್ತು ನ್ಯಾಯಮೂರ್ತಿ ಸರ್ಕಾರಿಯ



ನ್ಯಾಯಮೂರ್ತಿ ಸರ್ಕಾರಿಯ ಅವರಿಂದ
'ಪಿನೋದ' ಸಹ ಸಂಪಾದಕ ಶ್ರೀ ರಾಘವೇಂದ್ರ ಅವರಿಗೆ ಅಭಿನಂದನೆ



ಉತ್ತರಕನ್ನಡ ಜಿಲ್ಲಾ ಪತ್ರಿಕಾ ಮಂಡಳಿ, ಶಿರಸಿ ಇವರು ಏರ್ಪಡಿಸಿದ್ದ
ಗ್ರಾಮೀಣ ಪತ್ರಕರ್ತರ ತರಬೇತಿ ಶಿಬಿರದಲ್ಲಿ




ಜಿ. ನಾರಾಯಣ '೬೦'ರ ಅಭಿನಂದನೆ



ರಂಗನಟಿ ಶ್ರೀಮತಿ ಲಕ್ಷ್ಮೀಬಾಯಿ ಅವರನ್ನು ಶ್ರೀ ಜಿ. ನಾರಾಯಣ ಅವರು ಸನ್ಮಾನಿಸುತ್ತಿರುವುದು



ವೃತ್ತಿ ಕಲಾವಿದರಾದ ಹಾರ್ಮೋನಿಯಂ ಕೃಷ್ಣರಾಯರಿಗೆ ಸನ್ಮಾನ ಪತ್ರ ಸಮರ್ಪಣೆ



ವೀ.ಸೀ.
ಅವರೊಡನೆ



ರಷ್ಯಾ
ಪ್ರವಾಸದ
ಬೀಳ್ಕೊಡುಗೆ
ಸಂದರ್ಭದಲ್ಲಿ
ಬೀಚಿ
ಅವರೊಂದಿಗೆ



ಛಾಯಾ ಕಲಾವಿದರಿಗೆ ಶಶಿ
ಕಲಾವಿದರಿಂದ ಗೌರವಾರ್ಪಣೆ
ಚಿತ್ರದಲ್ಲಿರುವವರು :
ಬಿ.ಎಸ್. ವೆಂಕಟರಾವ್
ಜಿ.ಕೆ. ಗುಂಡುರಾವ್
ತಿರುಮಲೆ ತಾತಾಚಾರ್ಯ ಶರ್ಮ
ಜಿ. ನಾರಾಯಣ
ಹೆಚ್.ಕೆ. ರಂಗನಾಥ್
ಪರ್ವತವಾಣಿ



ಮೈಸೂರಿನ ಸಮಾರಂಭವೊಂದರಲ್ಲಿ ಡಾ॥ ವೆಂಕಟಾಚಲಶಾಸ್ತ್ರಿ ಸು.ಜ.ನಾ. ಹಾಗೂ ಎಂ. ರಾಘವೇಂದ್ರರಾವ್ ಅವರೊಂದಿಗೆ



ಕರ್ನಾಟಕ ಗಮಕ ಕಲಾಪರಿಷತ್ತು ಏರ್ಪಡಿಸಿದ್ದ ಸಮಾರಂಭವೊಂದರಲ್ಲಿ ಜೀವರಾಜ ಆಳ್ವ ಅವರೊಂದಿಗೆ ಜಿ. ನಾರಾಯಣ, ಗಮಕಿ ರಾಘವೇಂದ್ರರಾವ್



೧೯೮೪ರಲ್ಲಿ ಕರ್ನಾಟಕ ಗಮಕ ಪರಿಷತ್ತು, ಜಿಲ್ಲಾ ಸಮಿತಿ, ತುಮಕೂರು ಅವರು ಏರ್ಪಡಿಸಿದ್ದ 'ಅಖಿಲ ಕರ್ನಾಟಕ ಗಮಕ ಶಿಕ್ಷಣ ಶಿಬಿರ'ದಲ್ಲಿ

ಭಾಗ – ೧

ಅಭಿನಂದನೆ

ನಿಸ್ವಾರ್ಥ ಕಾರ್ಯಕರ್ತ

■ ಎಚ್.ನರಸಿಂಹಯ್ಯ

೧೯೬೪ರ ಇಸವಿ ಜೂನ್ ತಿಂಗಳಿನಲ್ಲಿ ಒಂದು ದಿನ ಶ್ರೀ ಜಿ. ನಾರಾಯಣ ಅವರು ನ್ಯಾಷನಲ್ ಕಾಲೇಜಿಗೆ ಬಂದರು. ಆಗ ಅವರು ಬೆಂಗಳೂರು ನಗರದ ಪ್ರಥಮ ಪ್ರಜೆ – ಮೇಯರ್. ನಾನು ನ್ಯಾಷನಲ್ ಕಾಲೇಜ್ ಪ್ರಿನ್ಸಿಪಾಲ್ ಆಗಿದ್ದೆ. ಜೂನ್ ಶಾಲಾಕಾಲೇಜುಗಳಿಗೆ ಮುಖ್ಯವಾದ ತಿಂಗಳು. ಕಾಲೇಜುಗಳ ಪರೀಕ್ಷಾ ಫಲಿತಾಂಶ ಪ್ರಕಟಣೆ. ವಿವಿಧ ತರಗತಿಗಳಿಗೆ ಪ್ರವೇಶದ ಗಡಿಬಿಡಿ – ಇವೆಲ್ಲಾ ನಡೆಯುವುದು ಜೂನ್ ತಿಂಗಳಲ್ಲಿಯೇ. ನ್ಯಾಷನಲ್ ಕಾಲೇಜಿಗಂತೂ ಪ್ರವೇಶಕ್ಕೆ ಮಾಮೂಲಿನಂತೆ ವಿಶೇಷ ಒತ್ತಡ. ಆ ತಿಂಗಳಲ್ಲಿ ಯಾರು ಪ್ರಿನ್ಸಿಪಾಲರನ್ನು ನೋಡುವುದಕ್ಕೆ ಬಂದರೂ ಸೀಟಿಗಾಗಿಯೇ ಎಂದು ಊಹಿಸುವುದು ಸಹಜ. ಮೇಯರ್ ಶ್ರೀ ನಾರಾಯಣ ಅವರನ್ನು ಸ್ವಾಗತಿಸಿದೆ. ಬಂದ ಉದ್ದೇಶ ನ್ಯಾಷನಲ್ ಕಾಲೇಜನ್ನು ಆ ವರ್ಷದ ಅತ್ಯುತ್ತಮ ಫಲಿತಾಂಶ ಗಳಿಸಿದ್ದಕ್ಕಾಗಿ ಹಾರ್ದಿಕವಾಗಿ ಅಭಿನಂದಿಸಲು ಎಂದು ಶ್ರೀ ಜಿ. ನಾರಾಯಣ ಅವರು ಹೇಳಿದಾಗ ನನಗೆ ಅಭೂತಪೂರ್ವ ಆಶ್ಚರ್ಯ ಉಂಟಾಯಿತು, ಸಂತೋಷವೂ ಆಯಿತು. ನಗರದ ಪ್ರಥಮ ಪ್ರಜೆ ಒಂದು ಕಾಲೇಜಿನ ಶೈಕ್ಷಣಿಕ ಪ್ರಗತಿಯನ್ನು ಮೆಚ್ಚಿ ಖುದ್ದಾಗಿ ಬಂದು ಅಭಿನಂದಿಸುವುದು ತುಂಬಾ ಅಪರೂಪದ ಗುಣ. ಆಗ ಅವರ ಪರಿಚಯವೂ ನನಗೆ ಅಷ್ಟಾಗಿ ಇರಲಿಲ್ಲ. ನಾನು ೧೨ ವರ್ಷ ನ್ಯಾಷನಲ್ ಕಾಲೇಜಿಗೆ ಪ್ರಿನ್ಸಿಪಾಲ್ ಆಗಿದ್ದೆ. ಪ್ರತಿವರ್ಷವೂ ಸ್ವಲ್ಪ ಹೆಚ್ಚೂ ಕಡಿಮೆ ಉತ್ತಮ ಮಟ್ಟದ ಫಲಿತಾಂಶವೇ ಬರುತ್ತಿತ್ತು. ಯಾವ ಮೇಯರ್ ಆಗಲಿ,

ಗಣ್ಯ ವ್ಯಕ್ತಿಗಳಾಗಲಿ ಅಭಿನಂದಿಸಲಿಲ್ಲ. ಈ ಘಟನೆ ಶ್ರೀ ನಾರಾಯಣ ಅವರ ದೊಡ್ಡತನಕ್ಕೆ ನಿದರ್ಶನ. ಒಳ್ಳೆಯದನ್ನು ಗುರುತಿಸಿ ಪ್ರೋತ್ಸಾಹಿಸುವುದು ಅವರ ಮನೋಧರ್ಮ.

ಶ್ರೀ ನಾರಾಯಣ ಅವರ ಸೇವಾಕ್ಷೇತ್ರ ತುಂಬಾ ದೊಡ್ಡದು. ಸಾರ್ವಜನಿಕ ಕ್ಷೇತ್ರ, ಸಾಹಿತ್ಯ ಕ್ಷೇತ್ರಗಳಲ್ಲಿ ಹಲವು ವರ್ಷಗಳು ದುಡಿದಿದ್ದಾರೆ. ನನ್ನ ಕ್ಷೇತ್ರ ಕೇವಲ ಒಂದೆರಡು ವಿದ್ಯಾ ಸಂಸ್ಥೆಗಳಿಗೆ ಮಾತ್ರ ಸೀಮಿತವಾಗಿದ್ದಿತು. ಆದುದರಿಂದ ಒಬ್ಬರನ್ನೊಬ್ಬರು ಅರಿತು ಕೊಳ್ಳುವುದಕ್ಕೆ ಅವಕಾಶವಿರಲಿಲ್ಲ. ದೂರದ ಪರಿಚಯ. ಆದರೆ ನಾನು ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಯಾಗಿದ್ದಾಗ ಶ್ರೀ ನಾರಾಯಣ ಅವರು ಸೆನೆಟ್ ಸದಸ್ಯರಾಗಿದ್ದರು. ಆಗ ಅವರನ್ನು ಹತ್ತಿರದಿಂದ ನೋಡುವ ಅವಕಾಶ ಸಿಕ್ಕಿತು. ಸೆನೆಟ್ ಕಾರ್ಯಕಲಾಪಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಅವರು ವಿಶ್ವವಿದ್ಯಾಲಯವನ್ನು ವಾಚಾಮ-ಗೋಚರವಾಗಿ ಬಯ್ಯುತ್ತಲೂ ಇರಲಿಲ್ಲ, ಔಚಿತ್ಯ ಮೀರಿ ಹೊಗಳುತ್ತಲೂ ಇರಲಿಲ್ಲ. ಲೋಕಾಭಿರಾಮದ ಮಾತು ಎಂದೂ ಆಡಿದವರಲ್ಲ. ಅವರ ಮಾತು ಯಾವಾಗಲೂ ತೂಕ, ಸಮತೋಲನ. ಅವರು ಮಾತನಾಡಲು ಎದ್ದಾಗ ಸಭೆಯ ಗಮನವೆಲ್ಲಾ ಅವರ ಕಡೆ. ಯಾವಾಗಲೂ ಕ್ರಿಯಾತ್ಮಕ ಸಲಹೆಗಳು. ಕೇವಲ ತಪ್ಪುಗಳ ಕಡೆಗೆ ಯಾವಾಗಲೂ ಬೆಟ್ಟು ನೋಡಿಸಿ ಉತ್ಪ್ರೇಕ್ಷೆ ಮಾಡುವವರಲ್ಲ. ಒಳ್ಳೆಯ ಕೆಲಸವನ್ನು ಮೆಚ್ಚುವುದು, ತಪ್ಪುಗಳ ಪುನರಾವರ್ತನೆಗೆ ಅವಕಾಶ ಕೊಡದ ಹಾಗೆ ತಮ್ಮದೇ ಆದ ಧಾಟಿಯಲ್ಲಿ ಮೃದುವಾಗಿ ಎಚ್ಚರಿಕೆ ಕೊಡುವುದು ಅವರ ಸ್ವಭಾವ. ಈ ಮನೋಧರ್ಮ ಸಂಸ್ಥೆಗಳನ್ನು ಕಟ್ಟಿದವರಿಗೆ, ಕಷ್ಟಸುಖಗಳನ್ನು ತಿಳಿದವರಿಗೆ ಮಾತ್ರ ಗೊತ್ತು. ನಮ್ಮ ದೇಶ ಹಲವು ವಿಧಗಳಲ್ಲಿ ಎಡವಟ್ಟು. ಸಂಸ್ಥೆಗಳನ್ನು ಕಟ್ಟುವುದು ಮಹಾ ಕಷ್ಟ. ವಿಶೇಷ ದಕ್ಷತೆಯಿಂದ ಕೆಲಸ ಮಾಡುವುದೂ ಅಪಾಯವೇ. ದಕ್ಷತೆಯೇ ಶತ್ರುವಾಗುವ ಸಂಭವವಿರುತ್ತದೆ. ಅಸೂಯೆ ಮುಂತಾದ ಸಮಾಜ ಘಾತುಕ ಪ್ರವೃತ್ತಿಗಳಿಗೆ ನಮ್ಮದು ಬಹು ಫಲವತ್ತಾದ ದೇಶ.

ಶ್ರೀ ನಾರಾಯಣ ಅವರು ವಿಶ್ವವಿದ್ಯಾಲಯದ ಪದವೀಧರರಲ್ಲ. ಸಾಂಪ್ರದಾಯಿಕ ಅರ್ಥದಲ್ಲಿ ಸಹ ಪಂಡಿತರಲ್ಲ, ಸಾಹಿತಿಗಳಲ್ಲ. ಆದರೆ ಅವರಿಗಿರುವ ವ್ಯವಹಾರಜ್ಞಾನ ತುಂಬಾ ಉತ್ತಮ ಮಟ್ಟದ್ದು. ಡಿಗ್ರಿ ಪಡೆದಿರಬಹುದು, ಪ್ರಪಂಚವನ್ನು ಹಲವಾರು ಸಲ ಸುತ್ತಿ ಬಂದಿರಬಹುದು, ಆದರೆ ಅವರಿಗೆಲ್ಲಾ common sense ಇದೆ ಎಂದು ಹೇಳುವು ದಕ್ಕಾಗುವುದಿಲ್ಲ. ನಮ್ಮ ದೇಶದಲ್ಲಿ ಪದೇ ಪದೇ ಬುದ್ಧಿಜೀವಿಗಳು ಎನ್ನುವ ಪದವನ್ನು ಬಳಸುತ್ತಿರುತ್ತಾರೆ. ಯಾರು ಬುದ್ಧಿಜೀವಿಗಳು ಅನ್ನುವುದನ್ನು ನಾನು ಬಹಳ ವರ್ಷಗಳಿಂದ ಯೋಚನೆ ಮಾಡಿ ಸರಿಯಾದ ವ್ಯಾಖ್ಯಾನ ಸಿಗದೆ 'ತುಂಬಾ ಬುದ್ಧಿವಂತಿಕೆಯಿಂದ ಜೀವನ ನಡೆಸುವವರು ಬುದ್ಧಿಜೀವಿಗಳಿರಬಹುದೇನೋ' ಎನ್ನುವ ತಾತ್ಕಾಲಿಕ ತೀರ್ಮಾನಕ್ಕೆ ಬಂದಿದ್ದೇನೆ. ಎಲ್ಲಾ ಬುದ್ಧಿಜೀವಿಗಳೂ ಅಂತಹವರೇ ಎಂದರೆ ತಪ್ಪಾಗುತ್ತದೆ. ಸ್ವಾರ್ಥ ಮತ್ತು ಕುಬುದ್ಧಿಯ ಸಂಗಮದ 'ಪುಣ್ಯಕ್ಷೇತ್ರ'ದಲ್ಲಿ ಹುಟ್ಟುವ 'ಕಲ್ಯಾಣಗುಣ'ಗಳೇ ನಮ್ಮ ದೇಶದ ಎಲ್ಲ ಸಾಮಾಜಿಕ ರೋಗರುಜಿನಗಳಿಗೂ ಮೂಲವಾಗಿದೆ.

ನಾನು ಸಾಹಿತಿ ಅಲ್ಲ. ಸಾಮಾನ್ಯ ಮನುಷ್ಯ. ಸಾಮಾನ್ಯ ಮನುಷ್ಯನ ದೃಷ್ಟಿಯಿಂದ ಸಾಹಿತ್ಯದ ವಿಷಯದಲ್ಲಿ ನನ್ನ ಒಂದೆರಡು ಅನಿಸಿಕೆಗಳನ್ನು ತಿಳಿಸಿದರೆ ಅಪ್ರಕೃತವಾಗುವುದಿಲ್ಲವೆಂದು ಭಾವಿಸುತ್ತೇನೆ. ಸಮಾಜವನ್ನು ಸರಿಯಾದ ಮಾರ್ಗದಲ್ಲಿ ಬದಲಾವಣೆ ಮಾಡುವುದು ಸಾಹಿತ್ಯದ ಕರ್ತವ್ಯವೆಂದು ನನ್ನ ಅಭಿಪ್ರಾಯ. ಅಸಂಬದ್ಧ ಸಾಹಿತ್ಯಕ್ಕೇ ಹೆಚ್ಚು ಪ್ರಚಾರ ಇದ್ದ ಹಾಗೆ ಕಾಣುತ್ತದೆ. ಸಮಾಜದ ಸಮಸ್ಯೆಗಳೇ ಸಾಹಿತ್ಯಕ್ಕೆ ವಸ್ತುವಾಗಬೇಕು. ನಮ್ಮ ದೇಶವಂತೂ ಸಾಮಾಜಿಕ ಅನ್ಯಾಯಗಳಿಗೆ, ಮೂಢನಂಬಿಕೆಗಳಿಗೆ ತೌರುಮನೆ. ಇವುಗಳಿಂದ ಮನುಷ್ಯನ ಸ್ವಾಭಿಮಾನಕ್ಕೆ, ಸಮಾಜದ ಪ್ರಗತಿಗೆ ಆಗಿರುವ ಧಕ್ಕೆ ಅಗಾಧವಾದುದು. ಆದರೂ ಈ ವಿಷಯಗಳ ಪ್ರಸ್ತಾಪ ಸಾಹಿತ್ಯದಲ್ಲಿ ಹೆಚ್ಚಾಗಿ ಆಗಿಲ್ಲ. ಸಾಹಿತ್ಯ ಜೀವನೋಪಾಯಕ್ಕೆ ಕೇವಲ ಸಾಧನವಾಗಬಾರದು. ಆಗ ಅದೂ ಒಂದು ವಾಣಿಜ್ಯೋದ್ಯಮವಾಗುತ್ತದೆ. ಅಂತಹ ಸಾಹಿತ್ಯ ಜೊಳ್ಳಾಗುತ್ತದೆ. ಕಾಕಮ್ಮ ಗುಬ್ಬಕ್ಕನ ಕಥೆಗಳು ಮತ್ತು ಆ ಮಾದರಿಯ ಸಾಹಿತ್ಯ ಬಹುತೇಕ ಅಪ್ರಯೋಜಕ. ಯಾವ ಪಟ್ಟಭದ್ರ ಹಿತಗಳೂ ಇಲ್ಲದೆ, ಮುಕ್ತಮನಸ್ಸಿನಿಂದ, ನಿರ್ಭಯವಾಗಿ, ಪೂರ್ವಗ್ರಹ ಪೀಡಿತರಾಗದೆ ವೈಚಾರಿಕತೆ ಪ್ರಾಧಾನ್ಯವಾದ ಸಾಹಿತ್ಯದಿಂದ ಮಾತ್ರ ನಮ್ಮ ಸಮಾಜದ ಸಮಸ್ಯೆಗಳನ್ನು ಅರ್ಥಪೂರ್ಣವಾಗಿ ತಿಳಿದುಕೊಳ್ಳುವುದಕ್ಕೆ ಮತ್ತು ವೈಜ್ಞಾನಿಕವಾಗಿ ಬಿಡಿಸುವುದಕ್ಕೆ ಸಾಧ್ಯ.

ಶ್ರೀ ಜಿ. ನಾರಾಯಣರಂತಹ ನಿಸ್ಪೃಹ ವ್ಯಕ್ತಿಗಳು ಸಿಗುವುದು ಕಷ್ಟ. ಅವರು ಒಳ್ಳೆಯ ಸಂಘಟನಾ ಚತುರರು, ಸೂಕ್ಷ್ಮಮತಿಗಳು, ತೀಕ್ಷ್ಣಮತಿಗಳು. ಅಪಾರ ಅನುಭವದಿಂದ ಬೇಗ ಜನರ ಗುಣಾವಗುಣಗಳನ್ನು ಗ್ರಹಿಸಬಲ್ಲರು. ಅವರದು ಶಾಂತ ಮತ್ತು ಸಾತ್ವಿಕ ಸ್ವಭಾವ. ಕನ್ನಡ ಸಾಹಿತ್ಯ ಪರಿಷತ್ತಿನ ಕೂಗು ಚಾಮರಾಜಪೇಟೆಗೂ ಕೇಳಿಸದಷ್ಟು ಬಲಹೀನವಾಗಿದ್ದಾಗ ಅದನ್ನು ದಿಲ್ಲಿಯತನಕ ಮುಟ್ಟಿಸಿ ಸಾಹಿತ್ಯ ಪರಿಷತ್ತನ್ನು ಸತ್ವಶಾಲಿಯಾದ ಶಕ್ತಿಯುತವಾದ ಸಂಸ್ಥೆಯನ್ನಾಗಿ ಮಾಡಿದರು. ಒಂಬತ್ತು ವರ್ಷಗಳ ಅವಧಿಯಲ್ಲಿ ಅವರು ಮಾಡಿರುವ ಕೆಲಸ ಬೆಟ್ಟದಷ್ಟು. ಈಗ ದೃಷ್ಟಿ ಮಬ್ಬುಮಬ್ಬಾಗಿರುವವರಿಗೂ ಇನ್ನು ಕೆಲವು ವರ್ಷಗಳಾದ ಮೇಲೆ ಕಣ್ಣಿನ ಪೊರೆ ಮಾಯವಾಗಿ ಶ್ರೀ ನಾರಾಯಣ ಅವರ ಸಾಧನೆ ಇನ್ನೂ ಚೆನ್ನಾಗಿ ಮಂದಟ್ಟಾಗಿ ಕಣ್ಣಿಗೆ ಕಟ್ಟುವಂತಾಗುತ್ತದೆ.

ಇಡೀ ಕರ್ನಾಟಕ ಜನತೆ ಶ್ರೀ ಜಿ. ನಾರಾಯಣ ಅವರಿಗೆ ಅವರು ಮಾಡಿರುವ ಅಪೂರ್ವ ಸೇವೆಗೆ ಚಿರಋಣಿಯಾಗಿರಬೇಕು.

(೧೯೭೪)

ಪರಿಷತ್ತಿನ ಚೇತನದಾಯಕ ನಾಯಕ

■ ವಿ.ಕೆ. ಗೋಕಾಕ್

ಶ್ರೀಮಾನ್ ಜಿ. ನಾರಾಯಣರವರು ಸಾರ್ವಜನಿಕ ಕಾರ್ಯಗಳನ್ನು ಕೈಕೊಂಡು ಅವುಗಳನ್ನು ನಿರ್ವಹಿಸುವ ಶೈಲಿ ವಿಶಿಷ್ಟವಾದುದು. ಅದರಲ್ಲಿ ಆದರ್ಶಪ್ರಿಯತೆ ಇರುತ್ತದೆ; ಸಂಪೂರ್ಣ ಸಮರ್ಪಣ ಭಾವವಿರುತ್ತದೆ; ಸಹಜ ಸಾಮರಸ್ಯದ ಸೂತ್ರಬದ್ಧತೆಯಿರುತ್ತದೆ; ಮೈತುಂಬ ಎಚ್ಚರವಿರುತ್ತದೆ. ಒಂದು ಮಾನ್ಯ ಸಾರ್ವಜನಿಕ ಸ್ಥಾನ ಒಳ ಅಭಿಮಾನ ಬೆಳೆಸುವುದಕ್ಕಲ್ಲ, ಸೇವೆಗೆಂಬ ಮಾತು ಅಲ್ಲಿ ಬರಿ ಮಾತಾಗಿರುವುದಿಲ್ಲ, ಕೃತಿಯಾಗಿರುತ್ತದೆ. ಮೇಯರ್ ಇದ್ದಾಗಲೂ ಅವರು *may, might* ನ ದಾರಿ ಹಿಡಿಯಲಿಲ್ಲ. ಪರಿಷತ್ತಿನಲ್ಲಿಯೂ ಹಾಗೆಯೇ.

ಪರಿಷತ್ತಿನ ಸಂಸ್ಥಾಪಕರ ವೃಂದ ಈ ಸಂಸ್ಥೆಯನ್ನು ಕನ್ನಡ ಸಾಹಿತ್ಯ ಸಂಸ್ಕೃತಿಗಳ ಕನ್ನಡತನದ ಏಕಸೂತ್ರತೆಯ ತಳಹದಿಯ ಮೇಲೆ ಕಟ್ಟಿದರು. ಆಗ ಉಸಿರುಗಟ್ಟಿದ ಕನ್ನಡ ತಾಯಿಗೆ ಉಸಿರಾಡಿಸಲು ಸಾಧ್ಯವಾಯಿತು. ಬಿ.ಎಮ್.ಶ್ರೀ., ಡಿ.ವಿ.ಜಿ., ಮಾಸ್ತಿಯವರ ಕಾಲದಲ್ಲಿ ಪರಿಷತ್ತಿನ ಗಾತ್ರದಲ್ಲಿ ಹೆಚ್ಚುಕಡಿಮೆ ಅಲ್ಪ-ಸ್ವಲ್ಪವಾದರೂ, ಆಗ ನಡೆದ ಮಹತ್ವದ ಕಾರ್ಯವೆಂದರೆ ಕನ್ನಡ ನಾಡಿನ ಏಕತೆಯನ್ನೂ ನವೋದಯದ ಸಾಹಿತ್ಯದ ಸ್ವಾರಸ್ಯವನ್ನೂ ನಾಡಿನಲ್ಲಿಯ ತಾಲೂಕು-ಜಿಲ್ಲೆಗಳಿಗೆಲ್ಲ ಮುಟ್ಟಿಸುವುದು. ಶ್ರೀ ಶಿವಮೂರ್ತಿಶಾಸ್ತ್ರಿ ಮೊದಲಾದ ಮುಂದಿನ ಅಧ್ಯಕ್ಷರುಗಳ ಕಾಲದಲ್ಲಿ ಈ ಕಾರ್ಯವೇ ಆಗೀಗ ಇನ್ನಿಷ್ಟು ವಿಸ್ತಾರವನ್ನು ಪಡೆಯಿತು. ಜಿ. ನಾರಾಯಣರ ಕಾಲಾವಧಿಯಲ್ಲಿ ಮೊತ್ತಮೊದಲು ಪರಿಷತ್ತಿನ ಗಾತ್ರ ಬೆಳೆಯಿತು. ಹೊಸ

ಕನ್ನಡಗಳು ತಲೆಯೆತ್ತಿದವಲ್ಲದೆ ಪರಿಷತ್ತಿನ ವಾರ್ಷಿಕ ಬಜೆಟ್ಟು ಹಲವಾರು ಸಾವಿರದ ಅಂಕಿಯಿಂದ ಕೆಲವು ಲಕ್ಷಗಳವರೆಗೆ ಹಜ್ಜೆ ಹಾಕಿತು. ಇದೊಂದು ಅಪೂರ್ವ ಯೋಗವೇ ಸರಿ. ಕನ್ನಡದ ಕಾರ್ಯ ಮುಂದುವರಿಯಬೇಕೆಂಬ ಲವಲವಿಕೆಯುಳ್ಳ ಸರಕಾರ ಬಂದಾಗ ಅದಕ್ಕೊರ್ವ ಸಾಮಾಜಿಕ ಪ್ರಜ್ಞೆಯುಳ್ಳ, ಪ್ರಾಮಾಣಿಕತೆಯಲ್ಲಿ ದಾಖಲೆ ಸ್ಥಾಪಿಸಿದ, ಲೋಕಸಂಗ್ರಹ ಪ್ರತಿಭೆಯಿದ್ದ ಸಮಾಜ ಸೇವಕ ಕಾಣಿಸಿಕೊಂಡ. ಸುವರ್ಣ ಮಹೋತ್ಸವ, ವಜ್ರಮಹೋತ್ಸವ–ಇವೆಲ್ಲ ಪರ್ವಗಳು ಜಿ. ನಾರಾಯಣರಿಗೆ ಸಂಸ್ಥೆಯನ್ನು ಅದ್ಭುತವಾಗಿ ಬೆಳೆಸುವ ಸುವರ್ಣ ಸಂಧಿಗಳಾದವು.

ಎರಡನೆಯದಾಗಿ. ಪರಿಷತ್ತಿನ ಕಾರ್ಯ ಬೆಳೆದಂತೆ ಅದರ ಸಿಬ್ಬಂದಿಯು ಸಂಖ್ಯೆಯಲ್ಲಿ ಬೆಳೆಯಿತು. ನಿವೃತ್ತರು, ಪ್ರವೃತ್ತರು–ಎಲ್ಲರೂ ಇದರಲ್ಲಿ ಸಮಾವಿಷ್ಟರಾದರು. ವ್ಯಕ್ತಿಗಳ ಆಯ್ಕೆ ಅವರ ಉಪಯುಕ್ತತೆಯನ್ನು ಅವಲಂಬಿಸಿತೇ ಹೊರತು ಮತ ಇಲ್ಲವೆ ಬಣಗಳನ್ನಲ್ಲ.

ಮೂರನೆಯದಾಗಿ, ಬರಿ ಒಂದು ಶಬ್ದಕೋಶದ ಕಾರ್ಯವನ್ನು ವಹಿಸಿದ ಪರಿಷತ್ತು ಈಗ ಭಾಷಾಂತರ, ಸಾಹಿತಿಗಳ ಧ್ವನಿಗಳ ಟೇಪಣಿ, ಜಾನಪದ ಸಾಹಿತ್ಯದ ಹಾಗೂ ಅನೇಕ ಕೈಬರಹದ ಕೃತಿಪ್ರತಿಗಳ ಸಂಗ್ರಹ, ಹಲವಾರು ತರಹದ ಶಬ್ದಕೋಶಗಳು, ಹಳಗನ್ನಡ, ನಡುಗನ್ನಡ ಗ್ರಂಥಗಳ ಸುಲಭೀಕರಣ – ಹೀಗೆ ಅನೇಕ ಮುಖ ಸೇವೆ ಸಲ್ಲಿಸಲು ಪ್ರಾರಂಭಿಸಿತು. ಮೊದಲೇ ಪ್ರಾರಂಭವಾಗಿದ್ದ ಗಮಕಿತ್ವ ಮೊದಲಾದ ಪರೀಕ್ಷೆಗಳು ಇನ್ನಷ್ಟು ಹುಮ್ಮಸ್ಸಿನಿಂದ ನಡೆದವು. ಒಂದು ವಿಶಿಷ್ಟ ವ್ಯವಸ್ಥೆಯ ಮೇಲೆ ಪರಿಷನ್ಮಂದಿರವು ಅನೇಕಾನೇಕ ಸಾಹಿತ್ಯ ಸಭೆಗಳಿಗೆ ಸಭಾಮಂದಿರವಾಯಿತು. ಹಾರ್ಡಿಂಜ್ ರೋಡು ಪಂಪಮಹಾಕವಿಯ ರಸ್ತೆಯಾಗಿ ಬದಲಾಯಿಸಿತೇನೋ ನಿಜ. ಆದರೆ ಪರಿಷತ್ತೂ ಅದಕ್ಕನುಗುಣವಾಗಿ ಮಾರ್ಪಟ್ಟು ಒಂದು ಮಹಾ ಸಂಸ್ಥೆಯಾಯಿತು.

ಯೋಜಕರಿಲ್ಲದೆ ದಿಕ್ಕುದಿಕ್ಕಿನಲ್ಲಿ ಚಲ್ಲವರಿದು ತಮ್ಮ ದಾರಿಯನ್ನು ತಾವು ತುಳಿಯುತ್ತ ಉಳಿದ ಸಾಹಿತಿಗಳನ್ನು ಭೆಟ್ಟಿಯಾಗಲು ಅವಕಾಶವಿಲ್ಲದ ಸಾಹಿತಿಗಳು ಈಗ ಸೆಮಿನಾರಿಗೆಂದು, ಸಮಿತಿಗಳ ಸಭೆಗಳಿಗೆಂದು, ಒಪ್ಪಿಸಿದ ಯಾವುದೋ ಒಂದು ಕಾರ್ಯವನ್ನು ಮಾಡಲೆಂದು ಪರಿಷತ್ತಿಗೆ ಬರಲು ಪ್ರಾರಂಭಿಸಿದರು. ಅಲ್ಲಿ ಪರಸ್ಪರ ವಿಚಾರವಿನಿಮಯ, ಸೌಹಾರ್ದ, ತಿಳುವಳಿಕೆ ಸಾಧ್ಯವಾಯಿತು. ಎಲ್ಲ ಗುಂಪುಗಳಿಗೂ ಎಲ್ಲ ಧೋರಣಗಳಿಗೂ ಇಲ್ಲಿ ದಾರಿ ಯಾಯಿತು. ಅನೇಕ ಏಕಾಂತಗಳ ಸಂಗಮ ಇಲ್ಲಿ ಸಾಧ್ಯವಾಯಿತು. ಕಾದಂಬರಿ, ನಾಟಕ, ಕಾವ್ಯ, ವಿಜ್ಞಾನ, ಮಾನವಿಕಶಾಸ್ತ್ರ – ಎಲ್ಲ ಜ್ಞಾನ – ಸೃಜನಶಾಖೆಗಳು ಇಲ್ಲಿ ಒಂದನ್ನೊಂದು ಕೈಕುಲಕಿದವು. ಕನ್ನಡದ ಸರ್ವಾಂಗೀಣ ಪ್ರಗತಿಯನ್ನು ಕುರಿತು ಜಿ. ನಾರಾಯಣರು ಏರ್ಪಡಿಸಿದ್ದ ಚರ್ಚಾಕೂಟಗಳು ಅಪೂರ್ವವೆಂದೇ ಹೇಳಬೇಕು. ಆ ರೀತಿಯಲ್ಲಿ ಇನ್ಯಾವ ಭಾಷೆಯ ಪರಿಷತ್ತು ದೇಶದಲ್ಲಿ ತನ್ನ ಜನದ ಭವಿತವ್ಯ ರೂಪಿಸಿದೆಯೋ ನಾನು ಕಾಣೆ. ಸಮಗ್ರ ವಿಷಯಗಳ ವಿಂಗಡಿತೆ, ಒಂದೊಂದು ವಿಷಯದ ಮೇಲೆ ಒರ್ವ ಪರಿಣತರಿಂದ ಪ್ರಬಂಧದ ಸಿದ್ಧತೆ, ವಿವಿಧ ವಿದ್ವಾಂಸರ ಚರ್ಚಾಕೂಟದಲ್ಲಿ ಅದರ ವಾಚನ

ಹಾಗೂ ಚರ್ಚೆ. ಚರ್ಚೆಯ ಫಲಿತಾಂಶದ ಪ್ರಕಾರ ಲೇಖನದ ಪುನರ್ ಲೇಖನ – ಹೀಗೆ ಕನ್ನಡದ ಭವಿತವ್ಯವನ್ನು ಕುರಿತು ಒಂದು ಅದ್ಭುತ ರೇಖಾಚಿತ್ರ ವಜ್ರಮಹೋತ್ಸವಕ್ಕಾಗಿ ಸಿದ್ಧವಾಯಿತು. ವಿವಿಧ ಕ್ಷೇತ್ರಗಳಲ್ಲಿ ಆಚರಣೆಗೆ ಅವಶ್ಯಕವಿದ್ದ ಮಾರ್ಪಾಟುಗಳೊಡನೆ ಬರುವಂತೆ ಸರಕಾರವು ಇದನ್ನು ಪರಿಗಣಿಸಬೇಕಾಗಿದೆ.

ಜಾನಪದ ಕಲೆಗಳ ಮಹೋತ್ಸವವನ್ನು ಬೆಂಗಳೂರಿನಲ್ಲಿ ನಡೆಯಿಸಿ ನಿಕೃಷ್ಟಾವಸ್ಥೆಯಲ್ಲಿರುವ ಈ ಕಲೆಗಳಿಗೆ ಜಿ. ನಾರಾಯಣರು ಕಾಯಕಲ್ಪ ಮಾಡಿದರು. ಕನ್ನಡೇತರರನ್ನೂ ಒಳಗೊಂಡ ಇಡೀ ನಗರದ ಮನಸ್ಸಿನಲ್ಲಿಯೇ ಒಂದು ಆಂದೋಳನವಾಯಿತು. ಕುಣಿತ, ಹಾಡು, ಯಕ್ಷಗಾನ ಮೊದಲಾದ ಜಾನಪದ ಕಲೆಗಳು ಒಂದು ದೃಷ್ಟಿಯಿಂದ ಸಾಹಿತ್ಯವಾಗಿರಲಿಕ್ಕಿಲ್ಲ. ಆದರೆ ಇನ್ನೊಂದು ದೃಷ್ಟಿಯಿಂದ ಅವು ಸಾಹಿತ್ಯದ ಪ್ರೇರಕಪೂರಕ ಶಕ್ತಿಗಳೆಂಬುದು ನಿರ್ವಿವಾದವಾಗಿದೆ. ಅಲ್ಲದೆ ನಮ್ಮ ಸಂಸ್ಕೃತಿಯ ಪುನರುಜ್ಜೀವನವಿಲ್ಲದೆ ನಮ್ಮ ಸಾಹಿತ್ಯ ಹೇಗೆ ಬದುಕೀತು? ಆಗೀಗ ನಮ್ಮ ಸಾಹಿತ್ಯ ಕ್ಷೇತ್ರದ ಇಂತಹ ವಿಸ್ತರಣವೂ ಅವಶ್ಯವಾಗುತ್ತದೆ. ಹಳ್ಳಿಗಾಡಿನ ಜೀವನವನ್ನು ಕರ್ನಾಟಕದ ದಿಕ್ಕಿಗೆ ತಂದದ್ದಲ್ಲದೆ ನಗರಗಳಲ್ಲಿ ಬೆಳೆದ ಸಾಹಿತ್ಯ ಹಳ್ಳಿ–ಹಳ್ಳಿಗಳನ್ನು ಮುಟ್ಟುವಂತೆ ಮಾಡಿದರು. ಅವರು ಸ್ಥಾಪಿಸಿದ ಜಿಲ್ಲಾ ಪರಿಷತ್ತು – ಸಮ್ಮೇಳನಗಳು ತಾಲ್ಲೂಕು ಸ್ಥಳಗಳಿಗಲ್ಲದೆ ಹಳ್ಳಿಗಳಲ್ಲಿಯೂ ಕನ್ನಡದ ಸಂದೇಶವನ್ನು ಬೀರುತ್ತಿವೆ.

ಸುವರ್ಣ ಮಹೋತ್ಸವ ಹಾಗೂ ವಜ್ರಮಹೋತ್ಸವದ ಸಮಯದಲ್ಲಿ ಕನ್ನಡದ ಹಿರಿಮೆ ಹಾಗೂ ಜೀವಂತಿಕೆಯ ಅರಿವು ಉಳಿದೆಲ್ಲ ರಾಜ್ಯಗಳಲ್ಲಿ ಕೇಳಿಬರುವಂತೆ ಜಿ. ನಾರಾಯಣರು ಮಾಡಿದರು. ದಿಲ್ಲಿಯು ಗಡಿಬಡಿಸಿಕೊಂಡು ಏಳುವಷ್ಟು ಅವರ ಕಾರ್ಯಗೌರವವು ಬೆಳೆಯಿತು. ಕನ್ನಡ ಸಾಹಿತ್ಯ ಪರಿಷತ್ತು ಅಂತರ್ ಪ್ರಾಂತೀಯ ಕೀರ್ತಿಯನ್ನು ಸಂಪಾದಿಸಿತು.

ಇದೆಲ್ಲದರಲ್ಲಿ ಜಿ. ನಾರಾಯಣರ ವಿನಯ–ಸೌಜನ್ಯಗಳು ಆಕರ್ಷಕವಾಗಿದ್ದವು. ಅವರ ವ್ಯಕ್ತಿತ್ವದಲ್ಲಿಯೇ ಇಂತಹ ಆಕರ್ಷಕತೆಯೊಂದು ಮನೆಮಾಡಿಕೊಂಡಿದೆ. ತಾವು ಹಿರಿಯ ಸಾಹಿತಿಯೆಂದು ಅವರೆಂದೂ ಅಲೆದಾಡಲಿಲ್ಲ. ಯಾರು ಯಾವ ಕಾರ್ಯವನ್ನು ಸಮರ್ಥವಾಗಿ ಪೂರೈಸುವರೆಂಬುದನ್ನು ಕಂಡುಹಿಡಿದು ಅವರಿಗೆ ಆ ಕಾರ್ಯವನ್ನೊಪ್ಪಿಸುವುದೇ ಅಧ್ಯಕ್ಷರ ದೃಷ್ಟಿಯಿಂದ ಅವರ ಹೆಗ್ಗುರಿಯಾಗಿತ್ತು.

ಇಂತಹ ಅಮೋಘ ಸೇವೆ ಸಲ್ಲಿಸಿದ ಜಿ. ನಾರಾಯಣರು ಈಗ ಕೆಲವು ಕಾಲ ತೆರೆಯ ಹಿಂದೆ ಸರಿದು ತಮ್ಮ ಆರೋಗ್ಯವನ್ನು ಸರಿಪಡಿಸಿಕೊಳ್ಳುತ್ತಿದ್ದಾರೆ. ಇಲ್ಲಿಯವರೆಗೆ ಲೆಕ್ಕಿಸದೆ ಇದ್ದ ತಮ್ಮ ಪರಿಸ್ಥಿತಿಯನ್ನು ಹತೋಟಿಗೆ ತರುತ್ತಿದ್ದಾರೆ. ಸಮೃದ್ಧ ಆಯುರಾರೋಗ್ಯ ಹಾಗೂ ಸುಖ–ಸೌಕರ್ಯಗಳು ಅವರದಾಗಲಿ. ಪರಿಷತ್ತಿಗಿಂತ ವಿಶಾಲತರ ಕ್ಷೇತ್ರಗಳಲ್ಲಿ ನಾಡಿಗೆ ಅವರ ಸೇವೆ ಸಲ್ಲಲಿ.

ಯಾರ ಕಾರ್ಯದಲ್ಲಿ ಕೊರತೆಗಳು ಕಂಡುಬರುವುದಿಲ್ಲ? ಅವುಗಳ ಹಿನ್ನೆಲೆಯಲ್ಲಿ ನಮ್ಮಲ್ಲಿಯ ಗುಣಾಂಶಗಳಿಗೆ ಹೆಚ್ಚಿನ ಬೆಲೆ ಬರುತ್ತದೆ. ಇವುಗಳನ್ನು ಜನತೆ ಮರೆತರೆ ಮಾತ್ರ ವ್ಯಕ್ತಿಗೆ

ದ್ರೋಹವಾದಂತಾಗೀತು. ವಿಶಿಷ್ಟ ಕಾರ್ಯಗಳಿಗಾಗಿ ವ್ಯಕ್ತಿಗಳ ಆಯ್ಕೆ ಯಾವಾಗಲು ಉಚಿತವಾಗಿರಲಿಕ್ಕಿಲ್ಲ. ಆದ ಕಾರ್ಯವನ್ನು ಇನ್ನೂ ಚೆನ್ನಾಗಿ ಮಾಡಬಹುದಿತ್ತೆಂದು ಕೇಳುವುದು ಸಾಧ್ಯ. ಆದರೆ ಜರುಗಿದ ಕಾರ್ಯದ ಕಂಪನ್ನು ನಾವು ಮರೆಯಲಾರದೀತೆ. ಅದು ನಾಡಿನ ತುಂಬೆಲ್ಲ ಗಮಗಮಿಸುತ್ತಿದೆ. ಜಿ. ನಾರಾಯಣರು ಎಸಗಿದ ಕಾರ್ಯಗೌರವ, ಅದರ ಸಪ್ತವರ್ಣದ ಇಂದ್ರಧನುಸ್ಸು ಕನ್ನಡದ ಆಕಾಶಕ್ಕೆ ಹೊಸತೊಂದು ಶೋಭೆಯನ್ನು ತಂದಿದೆ.

ಶ್ರೀ ಹಂಪ. ನಾಗರಾಜಯ್ಯನವರು ಈಗ ಅಧ್ಯಕ್ಷರಾಗಿ ಒಮ್ಮತದಿಂದ ಆಯ್ಕೆ ಹೊಂದಿದ್ದಾರೆ. ಅವರು ಸಾಹಿತಿಗಳು. ಸಾಹಿತ್ಯ ಪ್ರಾಧ್ಯಾಪಕರು, ಕನ್ನಡದ ಮೇಲೆ ನಿಃಸೀಮ ಪ್ರೇಮವಿದ್ದವರು, ಪರಿಷತ್ತಿನಲ್ಲಿ ಈ ಮೊದಲು ದುಡಿದವರು, ಅವರ ಕಾಲಾವಧಿಯಲ್ಲಿ ಕನ್ನಡದ ಪತಾಕೆ ಇನ್ನೂ ಜೋರಾಗಿ ಹಾರಲಿ.

(೧೯೭೮)

ಕನ್ನಡಕ್ಕೊಂದು ಶಕ್ತಿ

■ ಪ್ರೊ॥ ಎಲ್.ಎಸ್. ಶೇಷಗಿರಿರಾವ್

ಸುಸಂಸ್ಕೃತನಾದ ವ್ಯಕ್ತಿಯ ನಡೆ ನುಡಿ ಹೇಗಿರುತ್ತವೆ ಎಂದು ಯಾರಾದರೂ ಕೇಳಿದರೆ 'ಶ್ರೀ ನಾರಾಯಣ ಅವರನ್ನು ನೋಡಿ, ತಿಳಿಯುತ್ತದೆ' ಎಂದು ಹೇಳಿಬಿಡಬಹುದು.

ನಾನು ಶ್ರೀ ನಾರಾಯಣ ಅವರನ್ನು ಮೊದಲ ಬಾರಿಗೆ ಕಂಡಾಗ ಯಾರ ರೀತಿ ನೀತಿಗಳನ್ನೆ ಆಗಲಿ ಒಂದಿಷ್ಟು ಟೀಕಿಸುವಂತೆಯೆ ಕಾಣುವಷ್ಟು ವಯಸ್ಸು ನನಗಾಗಿತ್ತು. ಅಲ್ಲದೆ ಒಂದಿಷ್ಟು ಅಸಮಾಧಾನದಿಂದಲೆ ಅವರನ್ನು ಮೊದಲ ಬಾರಿ ಭೇಟಿ ಮಾಡಿದೆ. ಅವರು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗುವವರೆಗೆ ಅವರನ್ನು ನೋಡಿಯೇ ಇಲ್ಲ ನಾನು; ಅವರು ಅಧ್ಯಕ್ಷರಾಗಿ ಆಯ್ಕೆಯಾದರು ಎಂದು ತಿಳಿದಾಗಲು ಸಾಹಿತಿಯಲ್ಲದವರು ಬಂದರು ಎಂಬ ಅಸಮಾಧಾನ ಇದ್ದೇ ಇತ್ತು. ಅವರನ್ನು ಭೇಟಿ ಮಾಡಲೂ ಹೋಗಲಿಲ್ಲ. ಅವರು ಆಯ್ಕೆಯಾದ ಒಂದು ತಿಂಗಳ ನಂತರ ಹಿಂದೆ ನನ್ನ ವಿದ್ಯಾರ್ಥಿಗಳಾದ ಸ್ನೇಹಿತರೊಬ್ಬರು, 'ಶ್ರೀ ನಾರಾಯಣ ಅವರು ನಿಮ್ಮನ್ನು ಕಾಣಲು ಅಪೇಕ್ಷಿಸುತ್ತಾರೆ' ಎಂದು ಹೇಳಿದರು. ಬಾಯುಪಚಾರಕ್ಕೆ 'ಆಯಿತು, ಹೋಗಿ ನೋಡುತ್ತೇನೆ' ಎಂದೆ. ಹೋಗಲಿಲ್ಲ. ಮತ್ತೆ ಒಂದು ತಿಂಗಳ ನಂತರ ಅದೇ ಸ್ನೇಹಿತರು, 'ನೀವು ಹೋಗಲಿಲ್ಲವಂತೆ; ನಿಮ್ಮನ್ನು ನೋಡಲು ನಿಮಗೆ ಯಾವಾಗ ಬಿಡುವು ಎಂದು ವಿಚಾರಿಸಿ ಎಂದರು' ಎಂದು ಹೇಳಿದರು. ನನಗೇ ಸ್ವಲ್ಪ ನಾಚಿಕೆಯಾಗಿ ಮರುದಿನ ಪರಿಷತ್ತಿನ ಕಚೇರಿಗೆ ಹೋದೆ. ಅಂದೇ ನಾರಾಯಣ ಯಾರು ಎಂದು ಕಂಡದ್ದು.

ಈ ಹತ್ತು ವರ್ಷಗಳಲ್ಲಿ ಅವರೊಡನೆ ಕೆಲಸ ಮಾಡಿದ್ದೇನೆ. ಅವರೊಡನೆ ಪ್ರವಾಸ ಹೋಗಿ ಬಂದಿದ್ದೇನೆ. ಅವರು ಪ್ರಾರಂಭಿಸಿದ ಕೆಲಸ ಹೂವಿನ ಸರ ಎತ್ತಿದಂತೆ ಮುಂದುವರಿದಾಗ ಅವರೊಡನಿದ್ದೇನೆ. ಅಡ್ಡಿಗಳು ಬಂದಾಗ ಅವರೊಡನಿದ್ದೇನೆ. ಜನ ಅವರನ್ನು ಪ್ರಶಂಸಿದಾಗ ಹತ್ತಿರದಿಂದ ಕಂಡಿದ್ದೇನೆ, ಅಸಹ್ಯ ಎನ್ನಬಹುದಾದ ಟೀಕೆಗಳು ಬಂದಾಗ ಹತ್ತಿರದಿಂದ ಕಂಡಿದ್ದೇನೆ. ಎಂದೂ ಅವರು ಸಣ್ಣ ರೀತಿಯಲ್ಲಿ ನಡೆದದ್ದನ್ನು ಕಂಡಿಲ್ಲ, ಎಷ್ಟು ನೋವಿನಲ್ಲೂ ಸಣ್ಣ ಮಾತು ಆಡಿದುದನ್ನು ಕೇಳಿಲ್ಲ. ಅನಿರೀಕ್ಷಿತವಾಗಿ ತುಂಬಾ ಗಂಭೀರವಾದ ಅಡ್ಡಿಗಳು ಬಂದಾಗಲೂ ಅವರು ಎಷ್ಟು ಶಾಂತರಾಗಿರುತ್ತಾರೆ ಎಂದು ಕಂಡು ಅಚ್ಚರಿ ಪಟ್ಟಿದ್ದೇನೆ.

ಶ್ರೀ ನಾರಾಯಣ ಅವರ ಜೊತೆಗೆ ಕೆಲಸ ಮಾಡುವಾಗ ಅವರಲ್ಲಿರುವ ಒಂದು ವೈಶಿಷ್ಟ್ಯ ಪರಿಚಯವಾಗುತ್ತದೆ – ಬೆಟ್ಟದ ಪ್ರಮಾಣದ ಯೋಜನೆಗಳೊಂದಿಗೆ ಅತ್ಯಂತ ಸಣ್ಣ ವಿವರವನ್ನು ಹೇಗೆ ಕಲ್ಪಿಸಿಕೊಳ್ಳಬಲ್ಲರು ಎಂಬುದು. ಜೇನುಗೂಡಿನ ತುಂಬ ಜೇನುಗಳು ಓಡಾಡುತ್ತಿರುವಂತೆ ಅವರ ಮನಸ್ಸಿನ ತುಂಬ ವಿಚಾರಗಳು ಓಡಾಡುತ್ತಿರುತ್ತವೆ. ಎಷ್ಟೊಂದು ಹೊಸ ಹೊಸ ಯೋಜನೆಗಳು ಅವರಿಗೆ ಹೊಳೆಯುತ್ತವೆ ಎಂಬುದೇ ಆಶ್ಚರ್ಯ. ಮಾಸ್ತಿಯವರೊಮ್ಮೆ ಹೇಳಿದರು, ನಾರಾಯಣ ಅವರು ಅಧ್ಯಕ್ಷರಾಗುವವರೆಗೆ ಸಾಹಿತ್ಯ ಪರಿಷತ್ತು ಇಷ್ಟೊಂದು ರೀತಿಗಳಲ್ಲಿ ಕೆಲಸ ಮಾಡಬಹುದು ಎಂದೇ ನಮಗೆ ಹೊಳೆದಿರಲಿಲ್ಲ ಎಂದು. ನಿಜವಾದ ಮಾತು. ಅವರ ಯೋಜನೆಗಳೆಲ್ಲ ಭೀಮಾಕಾರದವು ಎಂಬುದೂ ಸರಿಯಲ್ಲ; ಹಲವಾರು ಸಣ್ಣ ಯೋಜನೆಗಳನ್ನು ಸದ್ದಿಲ್ಲದೆ ಕಾರ್ಯಗತ ಮಾಡಿರುತ್ತಾರೆ, ಜನರಿಗೆ ಗಮನಕ್ಕೆ ಬಂದಿರುವುದಿಲ್ಲ. ದೊಡ್ಡ ಯೋಜನೆಯೊಂದನ್ನು ವಿಚಾರಮಾಡುವಾಗ ಆ ಕ್ಷೇತ್ರದಲ್ಲಿ ಸ್ವಲ್ಪ ಅನುಭವ ಇರುವವರಿಗೆ ಪತ್ರ ಬರೆಯುತ್ತಾರೆ. ಸಭೆ ಕರೆಯುತ್ತಾರೆ. ಸಭೆಯಲ್ಲಿ ಅವರು ಯೋಜನೆಯ ಉದ್ದೇಶವನ್ನೂ ಸ್ವರೂಪವನ್ನು ಸ್ಥೂಲವಾಗಿ ವಿವರಿಸಿದಾಗ ಕೆಲವೊಮ್ಮೆ 'ಇದು ಆಗದ ಹೋಗದ ಮಾತು' ಎನಿಸುತ್ತದೆ. ಎಲ್ಲರನ್ನೂ ಸಲಹೆ ಕೇಳುತ್ತಾರೆ. ಎಲ್ಲರೂ ಮಾತನಾಡಿದ ಮೇಲೆ, "ನನಗೆ ಹೊಳೆದ ಕೆಲವು ವಿಷಯಗಳನ್ನು ಗುರುತು ಹಾಕಿದ್ದೇನೆ, ನಿಮ್ಮ ಅಭಿಪ್ರಾಯ ಹೇಳಿ' ಎಂದು ವಿವರಿಸುತ್ತ ಹೋಗುತ್ತಾರೆ. ಅವರು ಹೀಗೆ ವಿವರಣೆ ನೀಡಿದಾಗ ಎಷ್ಟೋಬಾರಿ ನಾನು, 'ಇವೆಲ್ಲ ನನಗೇಕೆ ಹೊಳೆಯಲಿಲ್ಲ?' ಎಂದುಕೊಂಡಿದ್ದೇನೆ. ವಜ್ರಮಹೋತ್ಸವದ ಸಂದರ್ಭದಲ್ಲಿ ಅವರು ತೀರ ಹಾಸಿಗೆ ಹಿಡಿದು ಮಲಗಿದರು. ಕೆಲವರು ಸ್ನೇಹಿತರಿಗೆ ಹೇಳಿಕಳುಹಿಸಿ, ಒಂದಿಷ್ಟು ಕೆಲಸಗಳನ್ನು ಅವರಿಗೆ ವಹಿಸಿಕೊಟ್ಟರು. ಅಂದಿನ ಸನ್ನಿವೇಶ ನನಗೆ ಇನ್ನೂ ಕಣ್ಣಿಗೆ ಕಟ್ಟಿದಂತಿದೆ. 'ಹೆಚ್ಚು ಮಾತನಾಡಬೇಡಿ' ಎಂದು ವೈದ್ಯರು ಅವರಿಗೆ ಸಲಹೆ ಮಾಡಿದರು. ಮಲಗಿದ್ದಂತೆಯೇ, ಕೈಯಲ್ಲಿ ಒಂದು ಚೂರು ಕಾಗದವೂ ಇಲ್ಲದೆ, ಎಷ್ಟೊಂದು ವಿಷಯಗಳನ್ನೂ ವಿವರಗಳನ್ನೂ ಹೇಳುತ್ತ ಹೋದರು ಅವರು–ನಾನು ಬೆರಗಾದೆ. ಉತ್ಸವಕ್ಕೆ ಸಂಬಂಧಿಸಿದ ಬಹು ದೊಡ್ಡ ಸಂಗತಿಗಳನ್ನು ವಿವರಿಸಿದ್ದು ಸಹಜ; ಆದರೆ, 'ಬಂದವರು ನೀರು ಕುಡಿಯಬೇಕಾದರೆ ನಲ್ಲಿಗಳು ಬೇಕು. ಇಂತಹ ಕಡೆ ಇಷ್ಟು ನಲ್ಲಿಗಳನ್ನು ಹಾಕಲು ಹೇಳಿದೆ. ರಾತ್ರಿ ಯಾರೂ ನೋಡಿಕೊಳ್ಳದಿದ್ದರೆ ನಲ್ಲಿಗಳನ್ನು ಕದ್ದು ಬಿಡುತ್ತಾರೆ. ಅದಕ್ಕೆ ಇಂತಹ ವ್ಯವಸ್ಥೆ ಮಾಡಬೇಕು' – ಹೀಗೆ ನೂರಾರು ವಿವರಗಳು.

ಯೋಜನೆಯನ್ನು ಕಾರ್ಯಗತ ಮಾಡುವಾಗ ಗಮನ ನೀಡಬೇಕಾದ ಪ್ರತಿ ವಿವರವನ್ನೂ ಮೊದಲೇ ಕಲ್ಪಿಸಿಕೊಂಡು ಪ್ರತಿ ಕೆಲಸಕ್ಕೂ ಅದನ್ನು ಸರಿಯಾಗಿ ನಿರ್ವಹಿಸಬಲ್ಲ ವ್ಯಕ್ತಿಗಳನ್ನು ಆರಿಸಿಕೊಂಡು ಅವರೆಲ್ಲ ಸಂತೋಷದಿಂದ ಕೆಲಸ ಮಾಡುವಂತೆ ಅವರ ವಿಶ್ವಾಸವನ್ನು ಗಳಿಸಿಕೊಳ್ಳಬಲ್ಲ ಶ್ರೀ ನಾರಾಯಣ ಅವರು ಅಪೂರ್ವ ನಾಯಕರು.

ಶ್ರೀ ನಾರಾಯಣ ಅವರು ಇತರ ಜನರೊಡನೆ ತಮ್ಮ ಸಂಬಂಧವನ್ನು ಎಷ್ಟು ಮಾನವೀಯವಾಗಿ, ನಯವಾಗಿ ಉಳಿಸಿಕೊಳ್ಳುತ್ತಾರೆ ಎಂಬುದು ನನ್ನಂತಹವರಿಗೆ ಮಾದರಿಯಾಗಬಲ್ಲದು. ಎಷ್ಟೋ ಬಾರಿ ಅವರೊಡನೆ ಪ್ರವಾಸ ಹೋಗಿದ್ದೇನೆ. ಹೆಜ್ಜೆ ಹೆಜ್ಜೆಗೂ ತಮ್ಮ ಜೊತೆಗಿರುವವರ ಅನುಕೂಲಕ್ಕೆ ಗಮನ ಕೊಡುತ್ತಾರೆ. ಅವರ ಊಟ ತಿಂಡಿ ಕಾಫಿ ನಿದ್ರೆಗಳಿಗೆ ಗಮನ ಕೊಡುತ್ತಾರೆ. ರಾತ್ರಿ ಹತ್ತು ಗಂಟೆ ಆದರೂ ಅವರ ಭೇಟಿಗಾಗಿ ಜನ ಬರುತ್ತಲೇ ಇರುತ್ತಾರೆ. ಅವರಲ್ಲಿ ಬಹುಮಂದಿ, ಬೇರಾವ ಪ್ರಭಾವವೂ ಇಲ್ಲದ. ಕಷ್ಟದಲ್ಲಿ ಸಿಕ್ಕಿದ ಬಡಬಗ್ಗರು. ಸಣ್ಣ ಪುಟ್ಟ ಉದ್ಯೋಗಗಳಲ್ಲಿರುವವರು. ಒಮ್ಮೆ ನಾವಿಬ್ಬರೂ ಒಂದು ಕಾರ್ಯಕ್ರಮಕ್ಕೆ ಹೋದಾಗ, ಅವರ ಪಾತ್ರ ಮುಗಿಸಿ ಮಧ್ಯಾಹ್ನ ಹಿಂದಿರುಗಬೇಕಾಗಿತ್ತು. ಬೆಂಗಳೂರಿನಲ್ಲಿ ಅವರಿಗೆ ಅಂದು ಕೆಲಸವೂ ಇತ್ತು. ಸಂಜೆಯ ಕಾರ್ಯಕ್ರಮಕ್ಕೂ ನಾನು ನಿಲ್ಲಬೇಕೆಂದು ವ್ಯವಸ್ಥಾಪಕರು ಬಯಸಿದರು. ಅಂದೇ ರಾತ್ರಿ ನಾನು ಬೆಂಗಳೂರಿಗೆ ಹಿಂದಿರುಗಬೇಕಾಗಿತ್ತು. ಶ್ರೀ ನಾರಾಯಣ ಅವರು. 'ಇದ್ದುಬಿಡಿ. ನಿಮ್ಮನ್ನು ಬೆಂಗಳೂರಿಗೆ ಮುಟ್ಟಿಸುವುದು ನನ್ನ ಕೆಲಸ' ಎಂದರು, ತಮ್ಮ ಕೆಲಸ ಬಿಟ್ಟು ನನಗಾಗಿ ನಿಂತರು. ಒಮ್ಮೆ ನನ್ನೊಡನೆ ಕೆಲಸ ಮಾಡಲು ಕೆಲವರು ಸಹಕೆಲಸಗಾರರನ್ನು ಆರಿಸಿಕೊಳ್ಳಬೇಕಾಯಿತು. ಹೆಸರುಗಳನ್ನು ಹೇಳುತ್ತ ಒಬ್ಬರ ಹೆಸರು ಹೇಳಿದೆ. ನನಗೆ ಅವರ ವೈಯಕ್ತಿಕ ಪರಿಚಯ ಇದ್ದದ್ದು ಕಡಿಮೆ. ಸಾಹಿತ್ಯವೇ ಅವರ ಕೆಲಸವೆಂದು ತಿಳಿದಿತ್ತು ಅಷ್ಟೆ. ನಾರಾಯಣ ಅವರು. 'ನಿಮ್ಮ ಜೊತೆಗೆ ಯಾರು ಹೊಂದಿಕೊಂಡು ಕೆಲಸ ಮಾಡುತ್ತಾರೆ ಎಂದು ನಿಮಗನ್ನಿಸುತ್ತದೊ ಅವರನ್ನು ಆರಿಸಿಕೊಳ್ಳಿ, ಆಯ್ಕೆ ಸಂಪೂರ್ಣವಾಗಿ ನಿಮಗೆ ಸೇರಿದ್ದು' ಎಂದರು. ಯಾವುದೋ ಕಾರಣದಿಂದ ನಾನೇ ಆ ಮಹನೀಯರನ್ನು ಕೇಳದೆ ಬಿಡಬೇಕಾಯಿತು. ಒಂದೆರಡು ತಿಂಗಳ ನಂತರ ಈ ವಿಷಯ ಏನೂ ತಿಳಿಯದೆ ಪ್ರಾಸಂಗಿಕವಾಗಿ ಯಾರೋ ನನಗೆ ಹೇಳಿದರು. ನಾನು ಹೆಸರಿಸಿದ್ದ ವ್ಯಕ್ತಿ ಶ್ರೀ ನಾರಾಯಣ ಅವರ ವಿಷಯದಲ್ಲಿ ಎಷ್ಟು ಅನುಚಿತವಾಗಿ, ಅನ್ಯಾಯವಾಗಿ ನಡೆದುಕೊಂಡಿದ್ದರು ಎಂದು. ಆದರೆ ನಾರಾಯಣ ಅವರು ಒಂದೇ ಮಾತಿನಿಂದಲೂ ಆ ವ್ಯಕ್ತಿಯ ವಿಷಯ ನನಗಿದ್ದ ಒಳ್ಳೆಯ ಅಭಿಪ್ರಾಯವನ್ನು ಮಾರ್ಪಡಿಸಲು ಪ್ರಯತ್ನಿಸಲಿಲ್ಲ. ಶ್ರೀ ನಾರಾಯಣ ಅವರನ್ನು ಕುರಿತು ಅನ್ಯಾಯವಾಗಿ ಉಗ್ರ ಟೀಕೆ ಕೆಲವರು ಮಾಡಿದಾಗ ಅವರ ಸ್ನೇಹಿತರು ಬೇಸರ ಪಟ್ಟಷ್ಟು ಅವರು ಪಡುವುದನ್ನು ನಾನು ಕಾಣಲಿಲ್ಲ. ವಿಷಯಗಳನ್ನು ತಿಳಿಯದೆ ಯಾರೋ ತುಂಬ ಕಟುವಾಗಿ–ಅಸಭ್ಯವಾಗಿ ಕೂಡ–ಟೀಕಿಸಿದಾಗ ವಿಷಯ ನಾನು ಸ್ವಲ್ಪ ಬೇಸರದಿಂದಲೇ ಪ್ರಸ್ತಾಪಿಸಿದೆ; ನಾರಾಯಣ ಅವರು ಹೇಳಿದರು: 'ಸ್ವಾಮಿ ಯೋಚನೆ ಮಾಡಿ. ಅವರು ಏನು ನಡೆಯಿತು ಎಂದುಕೊಂಡಿದ್ದರೊ ಆ ಆಧಾರದ ಮೇಲೆ ಅವರು ಸಿಟ್ಟುಮಾಡಿಕೊಳ್ಳದೆ ಬೇರೇನು ಮಾಡಬೇಕಾಗಿತ್ತು?' ಉದಯೋನ್ಮುಖ ಲೇಖಕರ ರಾಜ್ಯ

ಮಟ್ಟದ ಎರಡು ಶಿಬಿರಗಳನ್ನು ನಡೆಸುವ ಹೊಣೆಯನ್ನು ಅವರು ನನಗೆ ವಹಿಸಿದರು. ಅವರು ಶಿಬಿರಕ್ಕೆ ಬಾರದ ದಿನವಿಲ್ಲ. ಎಷ್ಟೋ ಬಾರಿ ರಾತ್ರಿ ಒಂಬತ್ತೂವರೆ, ಹತ್ತಕ್ಕೆ ಬಂದು, ನಡೆಯುತ್ತಿದ್ದ ಚರ್ಚಾಗೋಷ್ಠಿಗಳನ್ನು ವೀಕ್ಷಿಸಿ ಹೋಗಿದ್ದಾರೆ. ಆದರೆ ನಾನಾಗಿ ಅವರು ಬಂದದ್ದನ್ನು ತಿಳಿದು ಹೋಗದಿದ್ದರೆ ಅವರಾಗಿ ಹೇಳಿಕಳುಹಿಸಿದುದಿಲ್ಲ. ಹೂವಿನಿಂದ ಪರಿಮಳ ಬರುವಷ್ಟು ಸಹಜವಾಗಿ ನಯವಾದ, ಸುಸಂಸ್ಕೃತವಾದ ನಡೆನುಡಿಗಳು ಅವರಿಂದ ಬರುತ್ತವೆ.

ಶ್ರೀ ನಾರಾಯಣ ಅವರು ಬೃಹದ್ ಯೋಜನೆಗಳನ್ನು ಬಹು ಯಶಸ್ವಿಯಾಗಿ ನಿರ್ವಹಿಸಿದರು. ಹಲವಾರು ಬಾರಿ ಕಾರ್ಯಕ್ರಮದ ಪ್ರಮಾಣ, ವೈಖರಿ ಜನರ ಕಣ್ಣು ಸೆಳೆಯುವಂತಹವೇ. ಸಾಹಿತ್ಯ ಪರಿಷತ್ತು ಸರ್ಕಾರದ ಮತ್ತು ಜನರ ಕಣ್ಣು ಸೆಳೆಯುವಂತಾಗಬೇಕು. ಇದು ಜೀವಂತ ಸಂಸ್ಥೆ ಎಂದು ಅರಿವಾಗಬೇಕು ಎನ್ನುವರು. ಜೊತೆಗೆ, ಯಾವ ಅದ್ದೂರಿಯ ಕಾರ್ಯಕ್ರಮದಲ್ಲಿ ಆಗಲಿ, ಕನ್ನಡದ ಕೆಲಸ ಹೇಗೆ ನಡೆಯಬೇಕು, ಯಾವ ಯೋಜನೆಗಳನ್ನು ಹಾಕಿಕೊಳ್ಳಬೇಕು, ಅವನ್ನು ಕಾರ್ಯಗತ ಮಾಡುವುದು ಹೇಗೆ ಎಂಬ ಗಂಭೀರವಾದ ವಿಚಾರದ ಭಾಗ ಸೇರಿಯೇ ಸೇರಿರುವುದು. ಯಾವ ಯೋಜನೆಯ ವಿಷಯ ಯಾರೇ ಮಾತನಾಡಲಿ, ಮತ್ತೆ ಮತ್ತೆ ಸಮಿತಿಗಳಲ್ಲಿ ಅವರು ಎರಡು ಪ್ರಶ್ನೆಗಳನ್ನು ಕೇಳುವರು: "ಸ್ವಾಮಿ, ಕನ್ನಡಕ್ಕೆ ಇದಾಗಬೇಕು ಅದಾಗಬೇಕು ಎಂದು ಹೇಳುತ್ತೀರಿ ಸಂತೋಷ. ಆದರೆ ನೀವು ಹೇಳಿದ ಕೆಲಸ ಮಾಡುವ ರೀತಿ ಹೇಗೆ, ಅದಕ್ಕೆ ಎಷ್ಟು ಕಾಲ ಎಷ್ಟು ಹಣ ಬೇಕು, ಹೇಳಿ." ಮತ್ತೆ, "ಸ್ವಾಮಿ, ಇದರಿಂದ ಜನಸಾಮಾನ್ಯಕ್ಕೆ ಏನು ಪ್ರಯೋಜನ, ಹಳ್ಳಿಗಳಲ್ಲಿ ಇದಾರೆ ನೋಡಿ ಲಕ್ಷಾಂತರ ಜನ, ಅವರಿಗೂ ಇದರಿಂದ ಪ್ರಯೋಜನ ಉಂಟೆ?" "ಇದರಿಂದ ಸಾಹಿತ್ಯದ ಅಧ್ಯಯನ ಮಾಡುವವರಿಗೆ, ಸಾಹಿತ್ಯ ಸೃಷ್ಟಿ ಮಾಡಬಯಸುವವರಿಗೆ ಪ್ರಯೋಜನ" ಎಂದು ಮನವರಿಕೆ ಮಾಡಿಕೊಟ್ಟರೆ ಆ ಕೆಲಸವನ್ನೂ ಮಾಡುವರು. ಸಾಹಿತ್ಯ, ಅಕ್ಷರವಿದ್ಯೆ ಇವುಗಳ ಲಾಭವನ್ನು ಹಳ್ಳಿಗಳಿಗೆ ಕೊಂಡೊಯ್ಯುವ ಕೆಲಸವನ್ನೂ ಮಾಡುವರು. ಅವರ ಜೊತೆಗೆ ಕೆಲಸ ಮಾಡುವವರು ತಪ್ಪನ್ನು ಮಾಡಿದರೂ 'ಮನುಷ್ಯರಾದ ಮೇಲೆ ಎಲ್ಲ ತಪ್ಪು ಮಾಡುತ್ತೇವೆ, ಅದಷ್ಟು ಸರಿಪಡಿಸೋಣ ಬಿಡಿ' ಎನ್ನುವರು, ಸ್ವಲ್ಪ ಒಳ್ಳೆಯ ಕೆಲಸ ಮಾಡಿದರೂ ಅಕೃತ್ರಿಮವಾಗಿ ಹೊಗಳುವರು.

ಶ್ರೀ ನಾರಾಯಣ ಅವರಂತಹ ವ್ಯಕ್ತಿಗಳು ವಿರಳ. ಕೆಲಸದ ಭಾರದಿಂದಾಗಿ ಅವರ ಆರೋಗ್ಯವು ಕೆಟ್ಟಿತು. ಅವರ ಆರೋಗ್ಯ ಬೇಗನೆ ಸಂಪೂರ್ಣವಾಗಿ ಸುಧಾರಿಸಿ, ಅವರ ಕಾರ್ಯಕ್ಷೇತ್ರ ಇನ್ನೂ ವಿಸ್ತಾರವಾದರೆ ಕನ್ನಡ ಜನತೆಯ ಅದೃಷ್ಟ. ಕನ್ನಡಕ್ಕಾಗಿ, ಕನ್ನಡ ಜನತೆಗಾಗಿ ಆಕಾಶ ಸೌಧಗಳನ್ನು ಅವರಂತೆ ಕಲ್ಪಿಸಿಕೊಳ್ಳುವವರು ವಿರಳ. ಅಂತಹ ಸೌಧಗಳಿಗೆ ನೆಲದಲ್ಲಿ ಗಟ್ಟಿಯಾದ ಅಡಿಪಾಯ ಹಾಕಿ ಅವನ್ನು ಕಟ್ಟಿಬಿಡುವ ಸಾಹಸಿಗಳು ಇನ್ನೂ ವಿರಳ.

(೧೯೭೫)

ನಮ್ಮ ನಾರಾಯಣ

■ ಡಾ. ಹಾ.ಮಾ.ನಾಯಕ

ಪ್ರಿಯಮಿತ್ರರಾದ ನಮ್ಮ ಜಿ. ನಾರಾಯಣರಂಥವರನ್ನು ಕುರಿತು ಬರೆಯುವುದು ಒಂದು ಉಭಯ ಸಂಕಟದ ಕೆಲಸ. ನಮಗೆ ತಿಳಿದಿರುವುದನ್ನು ಬರೆದರೆ ಅತಿ ಪ್ರಶಂಸೆ ಎನ್ನಿಸಬಹುದು; ಬರೆಯದೆ ಹೋದರೆ ಅವರಿಗೆ ನ್ಯಾಯ ದೊರಕಿಸಿದಂತೆ ಆಗುವುದಿಲ್ಲ!

ನಾರಾಯಣ ಅವರನ್ನು ನಾನು ಮೊದಲು ಕಂಡದ್ದು ಅರುವತ್ತರ ದಶಕದ ಕೊನೆಯ ಹೊತ್ತಿನಲ್ಲಿ-ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷತೆಗೆ ಸ್ಪರ್ಧಿಸಿದ್ದಾಗ. ಒಂದು ಮುಂಜಾನೆ ನಾನು ನನ್ನ ಕಛೇರಿ ಕೆಲಸದಲ್ಲಿ ತೊಡಗಿದ್ದಾಗ ಅವರು ಬಂದರು; ಬಂದವರು ಒಬ್ಬರೇ. "ನಾನು ಜಿ. ನಾರಾಯಣ" ಎಂದು ತಮ್ಮ ಪರಿಚಯ ಮಾಡಿಕೊಂಡರು. ಚುನಾವಣೆಗೆ ನನ್ನ ಬೆಂಬಲ ಕೋರಿದರು. ಅದಕ್ಕಿಂತ ಮೊದಲು ನಾನು ಅವರನ್ನು ಕಂಡಿರಲಿಲ್ಲ. ಅವರು ಬೆಂಗಳೂರು ನಗರಪಾಲಿಕೆಯ ಮಹಾ ಪೌರರಾಗಿ ಒಳ್ಳೆಯ ಕೆಲಸ ಮಾಡಿದ್ದರೆಂದು ಕೇಳಿದ್ದೆ; ಅದರ ಸ್ವರೂಪ ನನಗೆ ತಿಳಿದಿರಲಿಲ್ಲ. ಆದರೆ ಅವರನ್ನು ಕುರಿತು ಒಂದು ಸುದ್ದಿಯನ್ನು ಪತ್ರಿಕೆಗಳಲ್ಲಿ ಓದಿದ್ದು ನೆನಪಿನಲ್ಲಿತ್ತು. "ಮಹಾಪೌರರಾಗಿ ಅಧಿಕಾರ ಬಿಟ್ಟುಕೊಡುವಾಗ ನಗರ ಪಾಲಿಕೆಯ ಕಛೇರಿಗೆ ಕಛೇರಿಯ ವಾಹನದಲ್ಲಿ ಬಂದರು; ಹೋಗುವಾಗ ಒಂದು ಆಟೋರಿಕ್ಷಾ ಹತ್ತಿ ಹೊರಟರು; ಅಧಿಕಾರಿಗಳು ಕಾರಿನಲ್ಲಿ ಹೋಗಬೇಕೆಂದು ಎಷ್ಟು ಪ್ರಾರ್ಥಿಸಿದರೂ ಅವರು ಕೇಳಲಿಲ್ಲ"- ಎಂಬುದೇ ಆ ಸುದ್ದಿ. ಇಂಥ ಪ್ರಸಂಗವನ್ನು ನಾನು ದಿವಾನ್ ವಿಶ್ವೇಶ್ವರಯ್ಯನವರ ವಿಷಯದಲ್ಲಿ ಮಾತ್ರ ಕೇಳಿದ್ದೆ. ಕೆಲವರಿಗಾದರೂ ಇದೆಲ್ಲ ಅತಿ ಎನ್ನಿಸಬಹುದು; ಆದರೆ ಇದರಲ್ಲಿ

ಪರಿಶುದ್ಧತೆಯ ಪತಮಾರಿತನ ಇರುತ್ತದೆಂಬುದನ್ನು ನಾವು ಮರೆಯಬಾರದು. ಇಂಥವರು ಹೆಚ್ಚು ಜನ ಇಲ್ಲದಾಗ ಈ ಬಗೆಯ ನಡವಳಿಕೆ ಅತಿ ಎನ್ನಿಸುವುದು ಸಹಜ; ಆದರೆ ಅದೇ ನಿಜವಲ್ಲ.

ನಾರಾಯಣ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಹತ್ತಿರ ಹತ್ತಿರ ಒಂದು ದಶಕದ ಕಾಲ ಕೆಲಸಮಾಡಿದರು. ಪರಿಷತ್ತಿನ ಚಿನ್ನದ ಹಬ್ಬ, ವಜ್ರದ ಹಬ್ಬಗಳೆರಡನ್ನೂ ನಡೆಸಿದರು. ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಿದರು. "ಕನ್ನಡಿಗರು ಮಾತ್ರ ಇಂಥ ಕೆಲಸ ಮಾಡಬಹುದೆ"ಂದು ಮೊರಾರ್ಜಿ ದೇಸಾಯಿಯವರ ಪ್ರಶಂಸೆ ಪಡೆದರು. ಕನ್ನಡ ಸಾಹಿತ್ಯ ಪರಿಷತ್ತನ್ನು, ರಾಷ್ಟ್ರದ ಸಾಹಿತ್ಯ ಪರಿಷತ್ತುಗಳಲ್ಲಿಯೇ ಅತ್ಯಂತ ಬಲಿಷ್ಠವಾದ, ವಿಪುಲ ವ್ಯಾಪ್ತಿಯ, ಕೀರ್ತಿವಂತ ಸಂಸ್ಥೆಯನ್ನಾಗಿ ಬೆಳೆಸಿದರು. ಇದು ಎಲ್ಲರಿಗೂ ತಿಳಿದಿರುವ ವಿಚಾರವೆ.

ಅವರು ಅಧ್ಯಕ್ಷರಾದಾಗ "ಅಸಾಹಿತಿ" ಎಂದು ಸಾಹಿತಿಗಳೆನಿಸಿಕೊಂಡ ಕೆಲವರು ಗೊಣಗಿದ್ದುಂಟು. ಆಗ ನಾನೊಂದು ಲೇಖನ ಬರೆದು "ಪರಿಷತ್ತಿಗೆ ಈಗ ಬೇಕಾಗಿರುವುದು ಸಾಹಿತಿಯಲ್ಲ, ಕೆಲಸಗಾರ" ಎಂದಿದ್ದೆ. ನನ್ನ ಮಾತು ಹುಸಿಯಾಗಲಿಲ್ಲ. ಯಾವ ಸಾಹಿತಿಯೂ ಮಾಡದಿದ್ದ ಕೆಲಸವನ್ನು ಈ 'ಅಸಾಹಿತಿ' ಮಾಡಿ ತೋರಿಸಿದರು. ವಾಸ್ತವವಾಗಿ ನಾರಾಯಣರಿಗೆ ಸಾಹಿತ್ಯ ಪರಿಷತ್ತಿನಲ್ಲಿ ಇರಲು ತಮ್ಮದೇ ಆದ ಹಕ್ಕುಂಟು. ಪಿ ಇ ಎನ್ ಎಂಬ ಅಂತರರಾಷ್ಟ್ರೀಯ ಸಾಹಿತಿಗಳ ಮಹಾ ಸಂಸ್ಥೆಯೊಂದಿದೆ. ಅದರಲ್ಲಿ ಪಿ ಎನ್ನುವುದು ಕವಿಗಳನ್ನು, ನಾಟಕಕಾರರನ್ನು (ಪೊಯಟ್ಸ್, ಪ್ಲೇರೈಟ್ಸ್) ಇ ಎನ್ನುವುದು ಪ್ರಬಂಧಕಾರರನ್ನು, ಸಂಪಾದಕರನ್ನು (ಎಸ್ಸೇಯಿಸ್ಟ್ಸ್, ಎಡಿಟರ್ಸ್), ಎನ್ ಎನ್ನುವುದು ಕಾದಂಬರಿಕಾರರನ್ನು (ನಾವೆಲಿಸ್ಟ್ಸ್) ಪ್ರತಿನಿಧಿಸುತ್ತದೆ. ನಾರಾಯಣ ಸಂಪಾದಕರಾಗಿ ಕಾಲುಶತಮಾನದಿಂದ 'ವಿನೋದ' ಎಂಬ ಮಾಸಪತ್ರಿಕೆಯನ್ನು ಸಮರ್ಥವಾಗಿ ನಡೆಸುತ್ತಿದ್ದಾರೆ. ಇದನ್ನು ಗಮನಿಸುವ ಗೋಜಿಗೆ ಯಾರೂ ಹೋಗಲಿಲ್ಲ! ಏಕೆಂದರೆ ಗೋವಿಂದಪೈಗಳ ಗಾದೆಯೇ ಇದೆಯಲ್ಲ; "ತನ್ನವರು ಬಂದರೆ ಒಳಗಾಡು ಸಟ್ಟುಗವೇ, ಹೆರವಲು ಬಂದರೆ ಮೇಲಾಡು ಸಟ್ಟುಗವೇ!"

ನಾರಾಯಣ ಗುಣಗಳ ಗಣಿ. ಈ ಗುಣಗಳೇ ಅವರ ದೌರ್ಬಲ್ಯವೂ ಆಗುವುದುಂಟು, ಆ ಮಾತು ಬೇರೆ. ಆಡಳಿತ ಪಕ್ಷದವರು, ವಿರೋಧ ಪಕ್ಷದವರು ಇಬ್ಬರೂ ಚುನಾವಣೆಗಳಲ್ಲಿ "ನಮ್ಮ ಅಭ್ಯರ್ಥಿಯಾಗಿ" "ನಮ್ಮ ಅಭ್ಯರ್ಥಿಯಾಗಿ" ಎಂದು ಗೋಗರೆದು ಕೇಳಿಕೊಳ್ಳುತ್ತಿದ್ದುದು ನಮಗೆ ತಿಳಿದಮಟ್ಟಿಗೆ ಕರ್ನಾಟಕದಲ್ಲಿ ನಾರಾಯಣ ಒಬ್ಬರನ್ನೇ. ಭಾರತದಲ್ಲಿಯೂ ಇಂಥವರ ಸಂಖ್ಯೆ ಹಲವು ಇರಲಾರದೆಂದೇ ನನ್ನ ನಂಬಿಕೆ. ಇಂಥ ಅವಕಾಶಕ್ಕಾಗಿ "ದೊಡ್ಡ"ವರೆನ್ನಿಸಿದವರು "ಸಣ್ಣ"ವರಾದುದನ್ನು ನಾನೇ ಕಂಡಿದ್ದೇನೆ. ಆದರೆ ನಾರಾಯಣ ಕಾಲಬಳಿ ಬಂದದ್ದನ್ನು ತಿರಸ್ಕರಿಸಿ ಇನ್ನೂ ದೊಡ್ಡವರಾದರು. "ಯಾಕೆ ಹೀಗೆ?" ಎಂದು ನಾನು ಒಮ್ಮೆ ಅವರನ್ನು ಕೇಳಿದ್ದುಂಟು. ಅದಕ್ಕೆ ಅವರು ಹೇಳಿದ್ದರು:

"ನಮ್ಮಂಥವರಿಗೆ ರಾಜಕೀಯದಲ್ಲಿ ಬೆರೆಯಲು ಇದು ಕಾಲವಲ್ಲ". ನನಗೂ ಆ ಮಾತು ನಿಜವೆನಿಸಿದೆ. ನಾರಾಯಣರಂಥವರ ದನಿ ಈಗ ಅರಣ್ಯರೋದನ; ಇಂದಿನ ರಾಜಕೀಯದಲ್ಲಿ ಪರಿಶುದ್ಧರಾಗಿರಲು ಸಾಧ್ಯವಿಲ್ಲ; ಸಾಧ್ಯವಾದರೂ ಪರಿಣಾಮಕಾರಿ

ಎನ್ನಿಸಲಾಗುವುದಿಲ್ಲ. ಇದು ನಮ್ಮ ಸಾರ್ವಜನಿಕರ ದುರವಸ್ಥೆ. ನಾರಾಯಣರಂಥವರ ಸಂಖ್ಯೆ ಬೆಳೆದರೆ ಮಾತ್ರ ಈ ಪರಿಸ್ಥಿತಿ ಕೊನೆಯಾಗಬಹುದು. ಇಲ್ಲದಿದ್ದರೆ ಭವಿಷ್ಯವಿಲ್ಲ.

ನಾರಾಯಣ ಅವರ ಮನೋಧರ್ಮಕ್ಕೆ ಕನ್ನಡಿ ಹಿಡಿಯುವ ಇನ್ನೊಂದು ಪ್ರಸಂಗವನ್ನು ನಾನು ಇಲ್ಲಿ ಹೇಳಬೇಕು. ದೇವರಾಜ ಅರಸು ಮುಖ್ಯಮಂತ್ರಿಯಾಗಿದ್ದಾಗ ನಾರಾಯಣರನ್ನು ವಯಸ್ಕರ ಶಿಕ್ಷಣ ಸಂಸ್ಥೆಯ ಅಧ್ಯಕ್ಷರನ್ನಾಗಿ ಮಾಡಬೇಕೆಂದು ನಾವು ಕೆಲವರು ಸ್ನೇಹಿತರು ಅಪೇಕ್ಷಿಸಿದ್ದೆವು. ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಡಿ.ವಿ. ಅರಸು ಮುಖ್ಯಮಂತ್ರಿಗಳನ್ನು ಒಪ್ಪಿಸಿಯೂ ಇದ್ದರು. ಆಗ ನಾರಾಯಣ ಹೇಳಿದ್ದು : "ಇದು ನನಗೆ ಪ್ರಿಯವಾದ ಕೆಲಸವೇ ಹೌದು. ಆದರೆ ಸಂಸ್ಥೆಯ ಕಛೇರಿ ಮೈಸೂರಿನಲ್ಲಿದೆ ; ನಾನು ಬೆಂಗಳೂರಿನಲ್ಲಿದ್ದೇನೆ. ಇದರಿಂದ ಕೆಲಸ ನಡೆಯುವುದಿಲ್ಲ. ನಾನು ಬೆಂಗಳೂರು ಬಿಡುವುದು ಸಾಧ್ಯವಿಲ್ಲ ; ಸಂಸ್ಥೆಯ ಕಛೇರಿ ಬೆಂಗಳೂರಿಗೆ ಬರಲಿ ಎನ್ನುವುದು ಸಾಧುವಲ್ಲ. ದಯವಿಟ್ಟು ನನ್ನನ್ನು ಬಿಟ್ಟುಬಿಡಿ." ಎಷ್ಟು ಸರಿಯಾದ ಧೋರಣೆ ಇದು !

ನಾನು ನಾರಾಯಣರಲ್ಲಿ ಅನೇಕ ಗುಣಗಳನ್ನು ಮೆಚ್ಚಿದ್ದೇನೆ ; ಅದಕ್ಕಾಗಿಯೆ ಅವರನ್ನು ಗೌರವಿಸುತ್ತೇನೆ. ಅವರು ಯಾರೊಬ್ಬರ ಮನಸ್ಸನ್ನೂ ನೋಯಿಸದೆ, ತಮ್ಮ ಅಭಿಪ್ರಾಯಗಳನ್ನೇ ಗೆಲ್ಲಿಸಿಕೊಳ್ಳುವ ವಿಶೇಷ ಸಾಮರ್ಥ್ಯ ಪಡೆದಿದ್ದಾರೆ. ಹಾಗೆಂದರೆ ಇತರರ ಅಭಿಪ್ರಾಯಗಳಿಗೆ ಕಿವುಡರಾಗಿರುತ್ತಾರೆಂದಲ್ಲ. ಒಳ್ಳೆಯದೆನಿಸಿದ್ದನ್ನು ಅವರು ಯಾರಿಂದಲೂ ಸ್ವೀಕರಿಸುತ್ತಾರೆ. ಅಭಿಪ್ರಾಯ ಭೇದಗಳನ್ನು ಅವರು ದ್ವೇಷವನ್ನಾಗಿ ಮಾರ್ಪಡಿಸುವುದಿಲ್ಲ. ನನಗೂ ಅವರಿಗೂ ಅನೇಕ ವಿಷಯಗಳಲ್ಲಿ, ಅನೇಕರ ವಿಷಯದಲ್ಲಿ ಭಿನ್ನ ಅಭಿಪ್ರಾಯಗಳಿವೆ. ನಾನು ಕೆಲವು ಸಲ ಅವರೊಂದಿಗೆ ದನಿಯೇರಿಸಿ ಮಾತಾಡಿದ್ದೇನೆ; ಮೂದಲಿಕೆ ದನಿಯಲ್ಲಿ ಚರ್ಚಿಸಿದ್ದೇನೆ. ಆದರೆ ನಮ್ಮ ಸ್ನೇಹ ವಿಶ್ವಾಸಗಳಿಗೆ, ಪರಸ್ಪರ ಗೌರವ ಆದರಗಳಿಗೆ ಸ್ವಲ್ಪವೂ ಭಂಗ ಬಂದಿಲ್ಲ. ನಾರಾಯಣರಿಗೆ ಅವರಿಗೆ ಸರಿಯೆನಿಸಿದ್ದನ್ನು ಆಡುವ ಮಾಡುವ ಸ್ವಾತಂತ್ರ್ಯವುಂಟು ; ಅದೇ ಸ್ವಾತಂತ್ರ್ಯ ನನಗೂ ಉಂಟು. ಇದನ್ನು ಇಬ್ಬರೂ ಮಾನ್ಯಮಾಡಿದಾಗ ಅಸಮಾಧಾನಕ್ಕೆ ಎಡೆ ಎಲ್ಲಿ?

ನಾರಾಯಣರಂಥ ಸಜ್ಜನ ಅನುಭವಿ ನಿಷ್ಠಾವಂತ ಕನ್ನಡದ ಕೆಲಸಗಾರರಿಗೆ ನಮ್ಮ ಸಾರ್ವಜನಿಕದಲ್ಲಾಗಲಿ, ಸರ್ಕಾರದ ವ್ಯವಸ್ಥೆಯಲ್ಲಾಗಲಿ ಸಮರ್ಪಕವಾದ ಅಧಿಕಾರಸ್ಥಾನ ಸಿಕ್ಕದೇ ಹೋಗಿರುವುದು ನನಗೆ ವ್ಯಥೆಯನ್ನುಂಟುಮಾಡಿದೆ. ಇಂಥ ದೂರದೃಷ್ಟಿಯ ದುಡಿಮೆಗಾರರು ನಮಗೆ ಸುಲಭವಾಗಿ ಸಿಕ್ಕುವುದಿಲ್ಲ. ಇದು ಅಧಿಕಾರಸ್ಥರಿಗೆ ಯಾಕೆ ತಿಳಿಯುವುದಿಲ್ಲವೋ? ಕನ್ನಡದ ಸ್ಥಿತಿಗತಿಗಳು ದೂಳಾಗುತ್ತಿರುವ ಇಂದಿನ ದಿನಗಳಲ್ಲಿ ಕನ್ನಡಕ್ಕೆ ಬಾಯೆತ್ತದವರು, ಕನ್ನಡ ಸಮಸ್ಯೆಗಳ ತಲೆಬುಡ ತಿಳಿಯದವರು, ಎರಡೇ ವರ್ಷಗಳ ಹಿಂದೆ ಎಲ್ಲೂ ಇಲ್ಲದವರು ಈಗ ನಾಯಕರೆನಿಸಿದ್ದಾರೆ; ಅಧಿಕಾರಸ್ಥರಾಗಿದ್ದಾರೆ; ಸಮಿತಿಗಳನ್ನು ಅಲಂಕರಿಸಿದ್ದಾರೆ. ಇದು ನಮ್ಮ ವ್ಯವಸ್ಥೆಯ ವಿಪರ್ಯಾಸ, ನಮ್ಮ ನಷ್ಟ.

ನಮ್ಮ ನಾರಾಯಣರಿಗೂ ಈಗ ಅರುವತ್ತಾಯಿತಂತೆ; ಕಾಲ ಯಾರನ್ನು ಬಿಡುತ್ತದೆ? ಅವರ ಆರೋಗ್ಯ ಉತ್ಸಾಹಗಳು ಬತ್ತದಿರಲಿ ಎಂಬುದೇ ಅವರ ಹಿತೈಷಿಗಳೆಲ್ಲರ ಈ ಹೊತ್ತಿನ ಹಾರೈಕೆ.

(೧೯೮೪)

ವಿದ್ವಜ್ಜನಪ್ರಿಯ ಜಿ. ನಾರಾಯಣ

■ ಪ್ರೊ. ಎಂ.ವಿ. ಸೀತಾರಾಮಯ್ಯ

ಶ್ರೀಮಾನ್ ಜಿ. ನಾರಾಯಣ ಅವರನ್ನು ಅವರು ಬೆಂಗಳೂರು ಕಾರ್ಪೊರೇಷನ್ನಿನ ಮೇಯರ್ ಆದಂದಿನಿಂದಲೂ ಕಂಡಿದ್ದೇನೆ. ಅವರ ವಿಚಾರವಾಗಿ ಕೇಳಿ ತಿಳಿದು ಅವರ ಅಭಿಮಾನಿಯಾಗಿದ್ದೇನೆ.

ಅವರು ಮೇಯರ್ ಆದ ವರ್ಷ; ನಾನು ಬೆಂಗಳೂರು ಇಂಟರ್‌ಮೀಡಿಯಟ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕ. ಅಂದಿನ ದಿನಗಳಲ್ಲಿ ಕಾಲೇಜು ಅಸೋಸಿಯೇಷನ್‌ಗಳು ಇನ್ನೂ ರಾಜಕೀಯದಿಂದ ಕಲುಷಿತವಾಗಿರದಿದ್ದರೂ ವ್ಯವಹಾರಗಳೆಲ್ಲವನ್ನೂ ಇಂಗ್ಲಿಷಿನಲ್ಲೇ ನಡೆಸುತ್ತಿದ್ದವು. ಆರಂಭ ಭಾಷಣ ಮುಕ್ತಾಯ ಭಾಷಣಗಳಿಗೆ ಮುಖ್ಯ ಅತಿಥಿಗಳಾಗಿ ಆಹ್ವಾನಿತರಾದವರು ಇಂಗ್ಲೀಷಿನಲ್ಲೇ ತಮ್ಮ ಭಾಷಣಗಳನ್ನು ಬಿಗಿಯುತ್ತಿದ್ದರು. ಈಗ ನಾನು ಪ್ರಸ್ತಾಪಿಸುತ್ತಿರುವ ವರ್ಷದಲ್ಲಿ, ಎಂದರೆ ೧೯೬೪ರಲ್ಲಿ, ಶ್ರೀ ಜಿ. ನಾರಾಯಣ ಅವರು ಕಾಲೇಜು ಸಂಘದ ವರ್ಷಾಂತ್ಯ ಭಾಷಣ ಮಾಡಲು ಮುಖ್ಯ ಅತಿಥಿಯಾಗಿ ದಯಮಾಡಿಸಿದ್ದರು. ಅವರ ಭಾಷಣದ ವಿಷಯ ಏನು ಇದ್ದಿತು ಎನ್ನುವುದು ನನಗೆ ನೆನಪಿನಲ್ಲಿ ಉಳಿದಿಲ್ಲ. ಆದರೆ ಅವರ ಸೌಮ್ಯಮೂರ್ತಿ ಸ್ವರೂಪ, ಖಾದಿ ಉಡುಪು ತೊಡುಪು, ಇವು ಇಂದಿನ ಕನ್ನಡಿಗರಿಗೆ ಪರಿಚಿತವಾಗಿರುವ ರೀತಿಯಲ್ಲಿಯೇ ಇದ್ದವು. ಇಂದು ಮಾಡುವ ಹಾಗೆ ಅಂದೂ ಅವರು ತಮ್ಮ ಭಾಷಣವನ್ನು ಬರೆದು ತಂದಿದ್ದರು; ತಿಳಿಯಾದ ಅಚ್ಚಗನ್ನಡದಲ್ಲಿ ಬರೆದಿದ್ದ ಭಾಷಣವನ್ನು ಉದ್ವೇಗವಿಲ್ಲದೆ ಓದಿದರು.

ನಾರಾಯಣ ಅವರಿಗೆ ಇಂಗ್ಲೀಷ್ ಬರುವುದಿಲ್ಲ, ಆದ್ದರಿಂದ ಕನ್ನಡದಲ್ಲಿ ಭಾಷಣ ಮಾಡಿದರು ಎಂದು

ಒಪ್ಪಿಬ್ಬರು ಅಧ್ಯಾಪಕರೇ ಆಡಿಕೊಂಡರು. ಒಬ್ಬ ಕನ್ನಡ ಸೇನಾನಿ ಕಾರ್ಯರಂಗಕ್ಕೆ ಇಳಿದಿದ್ದಾನೆ ಎನ್ನುವುದನ್ನು ಅವರು ಅರಿಯದೆ ಹೋದರು. ಆದರೆ ವಿದ್ಯಾರ್ಥಿ ಸಮುದಾಯ ಅವರ ಭಾಷಣವನ್ನು ಮೆಚ್ಚಿಕೊಂಡಿತ್ತು. ಅದೇ ದಿನ ಸಂಜೆ ನಾನು ಕಾರ್ಪೊರೇಷನ್ ಮಾರ್ಗವಾಗಿ ಮನೆಗೆ ಹಿಂದಿರುಗುವಾಗ ಕಾರ್ಪೊರೇಷನ್ನಿನ ಕಟ್ಟಡದ ಮುಖಮಂಟಪದ ಮೇಲ್ಭಾಗದಲ್ಲಿ ನಿಯಾನ್ ಬೆಳಕಿನ ನಾಮಫಲಕ ಕನ್ನಡದಲ್ಲಿ ಇದ್ದುದನ್ನು–ಎಷ್ಟೋ ಸಲ ಗಮನಿಸಿದ್ದುದನ್ನು–ಮೊದಲ ಬಾರಿಗೆ ಮೆಚ್ಚಿಗೆಯಿಂದ ದೃಷ್ಟಿಸಿ ನೋಡಿದೆ. ನಾರಾಯಣರ ಕನ್ನಡ ಅಭಿಮಾನವೇ ಬೆಳ್ಳಿಬೆಳಕಿನಲ್ಲಿ ಮೂಡಿದೆ ಎನ್ನುವುದು ಆಗ ಮನವರಿಕೆಯಾಯಿತು.

ನಾರಾಯಣ ಅವರು ಗಾಂಧಿ ಭಕ್ತರು, ಕಾಂಗ್ರೆಸ್ ಅನುಯಾಯಿಗಳು, ಪರಿಶುದ್ಧ ರಾಜಕೀಯದಲ್ಲಿ ಆಸಕ್ತರು ಎಂದೇ ಕೇಳಿ ತಿಳಿದಿದ್ದೆ. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿಯೇ ಆಗಲಿ ಮೈಸೂರಿನ ಜವಾಬ್ದಾರಿ ಸರ್ಕಾರದ ಹೋರಾಟದಲ್ಲಿಯೇ ಆಗಲಿ ಅವರು ಯಾವುದೇ ಪಾತ್ರವನ್ನು ವಹಿಸಿರಲಿ ಬಿಟ್ಟಿರಲಿ, ಅದು ಅಷ್ಟು ಮುಖ್ಯವಲ್ಲ. ವಾಸ್ತವವಾಗಿ ಆ ಸಂಗತಿಯನ್ನು ಕೇಳಿ ತಿಳಿದುಕೊಳ್ಳಲು ನಾನು ಪ್ರಯತ್ನಪಟ್ಟಿಲ್ಲ. ಸ್ವತಂತ್ರ ಭಾರತದ ಒಂದು ಪ್ರಮುಖ ಭಾಗವಾದ ಕರ್ನಾಟಕ ಏಳಿಗೆ ಹೊಂದಬೇಕಾದರೆ ಕನ್ನಡ ಸಾಹಿತ್ಯ ಸಾಮಾನ್ಯ ಜನತೆಗೆ ತಲುಪಬೇಕು ; ಕನ್ನಡಿಗರು ಪ್ರಜ್ಞಾವಂತರಾಗಬೇಕು, ಸ್ವಾಭಿಮಾನಶೀಲರಾಗಬೇಕು, ಸುಸಂಸ್ಕೃತರಾಗಬೇಕು, ಪ್ರಾಚೀನ ಸಂಸ್ಕೃತಿಯ ಪಾಠವನ್ನು ಹೀರಿ ಕಾಲಕ್ಕೆ ತಕ್ಕಂತೆ ಪ್ರಗತಿಪಥದಲ್ಲಿ ಮುನ್ನಡೆಯಬೇಕು ; ಕನ್ನಡಿಗರ ಸರ್ವಾಂಗೀಣ ಪ್ರಗತಿಗೆ ಕನ್ನಡದ ಮೂಲಕವೇ ಎಲ್ಲ ವಿದ್ಯೆಯೂ ಅವರಿಗೆ ದೊರಕಬೇಕು ಎಂಬ ಧ್ಯೇಯ ಸಾಧನೆಯನ್ನು ತಮ್ಮ ಬದುಕಿನ ಪವಿತ್ರ ವ್ರತವನ್ನಾಗಿ ಸ್ವೀಕರಿಸಿರುವ ಮಹನೀಯರು, ಕಟ್ಟಾದೇಶಾಭಿಮಾನಿಗಳು, ನಮ್ಮ ದೇಶಹಳ್ಳಿಯ ನಾರಾಯಣರು ಎಂದು ನಾನು ತಿಳಿದುಕೊಂಡಿದ್ದೇನೆ.

ಈ ನಿಟ್ಟಿನಲ್ಲಿ ಅವರು ಕೈಕೊಂಡ ಒಂದು ಪ್ರಮುಖ ಕಾರ್ಯ ಎಂದರೆ, ಕರ್ನಾಟಕ ರಾಜ್ಯೋತ್ಸವ ಸಂದರ್ಭದಲ್ಲಿ ಮನೆಮನೆಗೆ ಸರಸ್ವತಿಯನ್ನು ಕೊಂಡೊಯ್ಯುವ ಪವಿತ್ರ ಕಾರ್ಯ. ಅನೇಕಾನೇಕ ಕಾರ್ಯಕರ್ತರು, ಸಾಹಿತಿಗಳು, ಲೇಖಕಿಯರು, ಶ್ರೀ ನಾರಾಯಣರನ್ನು ಮುಂದಿಟ್ಟುಕೊಂಡು ಬೀದಿ ಬೀದಿಗಳಲ್ಲಿ ಪಾದಯಾತ್ರೆ ಮಾಡಿ, ಲೇಖಕರಿಂದ ಸಂಗ್ರಹಿಸಿದ ಪುಸ್ತಕಗಳನ್ನು ಮನೆ ಮನೆಗೂ ಹೋಗಿ ಮಾರಾಟ ಮಾಡಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಮೇಲೆ ಅವರು ಯೋಜನಾಬದ್ಧವಾಗಿ ಮಾಡಿದ ಕಾರ್ಯವನ್ನು ಕನ್ನಡಿಗರೆಲ್ಲರೂ ಬಲ್ಲರು. ಪರಿಷತ್ ಪತ್ರಿಕೆಯ ಸಂಪುಟಗಳನ್ನೂ ಹಿಂದಿನ ವಾರ್ಷಿಕ ವರದಿಗಳನ್ನೂ ಸಮ್ಮೇಳನಾಧ್ಯಕ್ಷರುಗಳ ಭಾಷಣಗಳನ್ನೂ ಓದಿ, ಪರಿಷತ್ತಿನ ಧ್ಯೇಯಗಳನ್ನು ಸಾಧಿಸಲು ತ್ರೈಮಾಸಿಕ, ಪಂಚವಾರ್ಷಿಕ ಯೋಜನೆಗಳನ್ನು ಹಾಕಿಕೊಂಡು, ಎಲ್ಲ ಕನ್ನಡ ಅಭಿಮಾನಿಗಳನ್ನೂ ಸಾಹಿತಿಗಳನ್ನೂ ವಿದ್ವಾಂಸರನ್ನೂ ಬರಮಾಡಿಕೊಂಡು, ಸಭೆ ಸೇರಿಸಿ, ತಾವು ಆಳವಾಗಿ ಆಲೋಚಿಸಿ ರೂಪಿಸಿದ ಯೋಜನೆಗಳನ್ನು ಅವರ ಮುಂದಿಟ್ಟು, ಅವರ ಸಲಹೆ ಸೂಚನೆಗಳನ್ನು ಪಡೆದುಕೊಂಡು, ಅವರ ನೆರವಿನಿಂದಲೇ ಯೋಜನೆಗಳ ಬಹ್ವಂಶಗಳನ್ನು ಯಶಸ್ವಿಯಾಗಿ ಕಾರ್ಯರೂಪಕ್ಕೆ ತಂದರು.

ಒಂದು ನಿರ್ದಿಷ್ಟ ಕಾರ್ಯವನ್ನು ನಿರ್ವಹಿಸಲು ಇವರೇ ಸಮರ್ಥರು ಎಂದು ಅಂಥವರನ್ನು ಗುರುತಿಸಿ, ಆ ಕಾರ್ಯದ ನಿರ್ವಹಣೆಗೆ ಅವರನ್ನು ಒಪ್ಪಿಸಿ, ಅವರನ್ನು ಆ ಕಾರ್ಯಕ್ಕೆ ಹೂಡುತ್ತಿದ್ದರು.

ಅವರಿಗೆ ಬೇಕಾದ ಎಲ್ಲ ಸೌಕರ್ಯಗಳನ್ನು, ಹಣವನ್ನೂ, ಹಿಂದು ಮುಂದು ನೋಡದೆ ಒದಗಿಸಿ ಕೊಡುತ್ತಿದ್ದರು. ಅದಕ್ಕಿಂತ ಮುಖ್ಯವಾಗಿ ಅವರಿಗೆ ಸಂಪೂರ್ಣ ಕಾರ್ಯಸ್ವಾತಂತ್ರ್ಯವನ್ನು ಕೊಟ್ಟುಬಿಡುತ್ತಿದ್ದರು. ನಾರಾಯಣರ ಅವಿರತ ಯಶಸ್ಸಿನ ಗುಟ್ಟು ಇದು. ಸಾಹಿತಿಯಾಗಲಿ, ವಿದ್ವಾಂಸರಾಗಲಿ ಅಲ್ಲದ ನಾರಾಯಣ ಅವರು ತಮ್ಮ ಸಾಮರ್ಥ್ಯದ ಇತಿಮಿತಿಗಳನ್ನು ಬಲ್ಲವರು. ಆದರೆ, ಸಾಹಿತ್ಯಪ್ರೇಮಿಯಾದ್ದರಿಂದ, ಸಾಹಿತ್ಯಾಭಿಮಾನಿ ಆದ್ದರಿಂದ, ನಿಃಸ್ವಾರ್ಥಸೇವಾಮನಸ್ಕರಾದ್ದರಿಂದ, ಪ್ರಾಮಾಣಿಕರಾದ್ದರಿಂದ, ಬಿ.ಎಂ.ಶ್ರೀ. ಅವರು ಕನಸು ಕಂಡು ಹಾಕಿದ ಅಸ್ತಿವಾರದ ಮೇಲೆ ಕನ್ನಡ ಸಾಹಿತ್ಯ ಪರಿಷತ್ತನ್ನು ವಾಸ್ತವವಾಗಿ ಅಖಿಲ ಕರ್ನಾಟಕ ವ್ಯಾಪ್ತಿಯ ಸಂಸ್ಥೆಯನ್ನಾಗಿ ಕಟ್ಟಿದರು. ಕನ್ನಡ ಸಾಹಿತ್ಯ ಪರಿಷತ್ತು ಎಂಬ ವಟವೃಕ್ಷ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿಯೂ ಬಿಳಲುಬಿಟ್ಟಿದ್ದು ನಾರಾಯಣ ಅವರ ಕಾಲದಲ್ಲೇ.

ಪರಿಷತ್ತಿನ ಸುವರ್ಣಮಹೋತ್ಸವ, ವಜ್ರಮಹೋತ್ಸವ ನಾರಾಯಣ ಅವರು ಅಧ್ಯಕ್ಷರಾಗಿದ್ದ ಕಾಲದಲ್ಲಿ ಒದಗಿ ಬಂದದ್ದು ಒಂದು ಸುಯೋಗ. ಇವುಗಳ ಸ್ಮಾರಕಗಳಾಗಿ ನೂರಾರು ಬೆಲೆ ಬಾಳುವ ಕನ್ನಡಗ್ರಂಥಗಳು ಹೊರಬಂದಿವೆ; ಎರಡು ಭವ್ಯ ಭವನಗಳು ನಿರ್ಮಾಣಗೊಂಡಿವೆ. ದಿಳ್ಳಿ ನಮಗೆ ದೂರ, ನಮ್ಮ ಹಳ್ಳಿ ನಮಗೆ ಸಾಕು ಎಂದು ಬಿ.ಎಂ.ಶ್ರೀ. ತೃಪ್ತಿಪಟ್ಟಿದ್ದರು. ನಾರಾಯಣರು ದಿಳ್ಳಿಗೂ ಧಾವಿಸಿ ಕನ್ನಡದ ಪತಾಕೆಯನ್ನು ಅಲ್ಲಿ ಹಾರಿಸಿದರು.

ಪರಿಷತ್ತಿನ ಅಧ್ಯಕ್ಷರಾಗಿದ್ದ ಕಾಲದಲ್ಲಿ ಗಮಕ ಕಲೆಗೂ, ಜನಪದ ಕಲೆಗಳಿಗೂ ಅವರು ಕೊಟ್ಟ ಅಭೂತಪೂರ್ವ ಉತ್ತೇಜನದ ಫಲವಾಗಿಯೇ ಗಮಕ ಕಲಾಪರಿಷತ್ತೂ, ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯೂ ಜನ್ಮ ತಳೆದವು ಎಂದರೆ ಅತ್ಯುಕ್ತಿ ಆಗಲಾರದು.

ಇದೀಗ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಆಚರಿಸುತ್ತಿರುವ ಬಿ.ಎಂ.ಶ್ರೀ. ಜನ್ಮಶತಮಾನೋತ್ಸವ ಸಮಿತಿಯ ಕಾರ್ಯಾಧ್ಯಕ್ಷರಾಗಿ ಅದನ್ನು ಅಖಿಲ ಕರ್ನಾಟಕ ವ್ಯಾಪ್ತಿಯ ಮಟ್ಟದಲ್ಲಿ ಮಾತ್ರವಲ್ಲದೆ ಭಾರತದ ಪ್ರಮುಖ ನಗರಗಳಲ್ಲೂ ನಡೆಸಿ, 'ಶ್ರೀ'ಯವರು ಕಂಡು ನನಸಾಗದೆ ಉಳಿದಿರುವ ಕನಸುಗಳನ್ನು ನನಸಾಗಿಸುವ ಕಾರ್ಯದಲ್ಲಿ ಉದ್ಯುಕ್ತರಾಗಿದ್ದಾರೆ. ಈ ವರ್ಷಾದಿಯಲ್ಲಿ (೩–೧–೧೯೮೪) ಬಿ.ಎಂ.ಶ್ರೀ. ಅವರ ಸ್ಥಳವಾದ ಬೆಳ್ಳೂರಿನಲ್ಲಿ ನಡೆದ ಪ್ರಪ್ರಥಮ ಉತ್ಸವಾಚರಣೆಯ ಯಶಸ್ಸಿನ ಬಹುಪಾಲು ನಾರಾಯಣರ ಕಾರ್ಯಕ್ಷಮತೆಯ, ಸಂಘಟನಾ ಸಾಮರ್ಥ್ಯದ ಸುಫಲ.

ಒಂದು ಮಾತಿನಲ್ಲಿ, ಅಖಿಲ ಕರ್ನಾಟಕ ವ್ಯಾಪ್ತಿಯ ಯಾವುದೇ ಕನ್ನಡ ಕೆಲಸ ಆಗಲಿ, ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ನಾರಾಯಣ ಅವರ ನಿಕಟ ಸಂಬಂಧ ಇದ್ದೇ ಇರುತ್ತದೆ. ಗೋಕಾಕ್ ವರದಿ ಸಂಬಂಧವಾಗಿ ನಡೆದ ಚಳವಳಿಯಲ್ಲಿ ಇವರು ಪ್ರತ್ಯಕ್ಷವಾಗಿ ಭಾಗವಹಿಸದಿರಬಹುದು ; ಆದರೆ ಕನ್ನಡ ಜಾಗೃತಿ ಪರಿಷತ್ತಿನ ಮೂಲಕ ಸಮ್ಮೇಳನ ನಡೆಸಿ, ಚಳವಳಿಗೆ ಬೀಜಾಂಕುರ ಹುಟ್ಟುಹಾಕಿದವರು ನಾರಾಯಣ. 'ಶ್ರೀ' ಶತಮಾನೋತ್ಸವವ್ಯಾಜದಲ್ಲಿ ನಾಡಿನ ಮೂಲೆಮೂಲೆಯಲ್ಲೂ ಕನ್ನಡದ ಬಗ್ಗೆ ಜನಜಾಗೃತಿ ಉಂಟುಮಾಡಬೇಕೆಂಬುದು ಅವರ ಸಂಕಲ್ಪ. ಅವರ ಸಂಕಲ್ಪ ಈಡೇರಿ, ಕುಗ್ಗುತ್ತಿರುವ ಕನ್ನಡಿಗರ ಸ್ವಾಭಿಮಾನ ಎಚ್ಚರಗೊಂಡು, ಕನ್ನಡ ನಾಡಿನ ಎಲ್ಲ ಕಾರ್ಯ ಕ್ಷೇತ್ರಗಳಲ್ಲಿಯೂ ಕನ್ನಡಕ್ಕೆ ಅಗ್ರಸ್ಥಾನ ದೊರೆಯಲಿ, ಶ್ರೀಯವರ ಹೊಂಗನಸು ನಲ್ನನಸಾಗಲಿ ಎಂದು ಹಾರೈಸಬೇಕಾದದ್ದು ಎಲ್ಲ ಕನ್ನಡಿಗರ ಕರ್ತವ್ಯ.

(೧೯೮೪)

ಪರಿಷತ್ತಿನ ಅಧ್ಯಕ್ಷತೆ

■ ಪ್ರೊ. ಜಿ. ವೆಂಕಟಸುಬ್ಬಯ್ಯ

ಮಾನ್ಯ ಜಿ. ನಾರಾಯಣ ಅವರು ಪರಿಷತ್ತಿನ ಅಧ್ಯಕ್ಷರಾಗಿ ಚುನಾಯಿತರಾಗುವ ಮುಂಚೆ ನಾನು ಅದರ ಅಧ್ಯಕ್ಷನಾಗಿದ್ದೆ. ನನ್ನ ಅಧಿಕಾರಾವಧಿಯ ಕಾಲ ಬಡತನದ ಬವಣೆಯ ಕಾಲ. ದಿ॥ ಎಸ್.ಆರ್. ಕಂಠಿಯವರ ಬೆಂಬಲ, ಮಾನ್ಯ ರಾಮಕೃಷ್ಣ ಹೆಗ್ಗಡೆ ಅವರಿತ್ತ ಸರಕಾರಿ ದ್ರವ್ಯಸಹಾಯ ನನಗೆ ದೊರಕದೆ ಇದ್ದರೆ ಪರಿಷತ್ತು ಇಂದು ಚರಿತ್ರೆಯಲ್ಲಿ 'ಸತ್ತ ಸಂಸ್ಥೆಗಳ' ಸಾಲಿನಲ್ಲಿ ನಮೂದಾಗುತ್ತಿತ್ತು. ಜಂತೆ ಮುರಿದು ಜೀಳುತ್ತಿದ್ದ ಕಟ್ಟಡವನ್ನು ಭುಜಕೊಟ್ಟು ನಿಲ್ಲಿಸಿದ ಕಷ್ಟದ ಕಾರ್ಯ ನನ್ನದಾಯಿತು. ತಿಂಗಳ ಸಂಬಳವನ್ನು ಸಿಬ್ಬಂದಿಗೆ ಕೊಡಲು ಆಯ್ಕೆಯಾದ ಮೊದಲ ತಿಂಗಳಲ್ಲಿಯೇ ನನಗೆ ಕಷ್ಟವಾಯಿತು. ನಾನು ಇಂಥ ಸಂದರ್ಭದಲ್ಲಿ ಸಾಲ ಮಾಡಿ ಪರಿಷತ್ತಿನ ಹೆಸರನ್ನು ಉಳಿಸ ಬೇಕಾಯಿತು. ನಾನು ನಾರಾಯಣ ಅವರಿಗೆ ಅಧಿಕಾರ ವನ್ನು ವಹಿಸಿಕೊಟ್ಟಾಗ ೬೫ ಸಾವಿರ ರೂಪಾಯಿಗಳಷ್ಟು ಬ್ಯಾಂಕ್ ಡಿಪಾಸಿಟ್ ಇತ್ತು. ಇಂಥ ಸಮಯದಲ್ಲಿ ನನ್ನ ಮಿತ್ರರಾದ ಶಂಕರಗೌಡರು ವಿದ್ಯಾಮಂತ್ರಿಗಳಾಗಿ ಅಧಿಕಾರ ವಹಿಸಿಕೊಂಡರು. ನಾರಾಯಣರು ಪರಿಷತ್ತಿನ ಅಧಿಕಾರ ವನ್ನು ವಹಿಸಿಕೊಂಡರು. ಮಂತ್ರಿಗಳಿಗೆ ಕನ್ನಡದ ಬಗ್ಗೆ ಆಸಕ್ತಿ. ನಾರಾಯಣರಿಗೆ ಕೆಲಸ ಮಾಡುವ ಹುಮ್ಮಸ್ಸು. ಅಲ್ಲಿಂದ ಮುಂದೆ ಪರಿಷತ್ತು ಬೆಳೆದು ಅಭಿವೃದ್ಧಿ ಹೊಂದಿದ ಕಥೆ ಎಲ್ಲರಿಗೂ ತಿಳಿದಿದೆ. ಈ ಕಾರ್ಯದಲ್ಲಿ ನಾರಾಯಣರ ಸೇವೆ ತುಂಬ ಸ್ತುತ್ಯವಾದುದು. ಹೊಸ ಸಂವಿಧಾನವನ್ನಿತ್ತು ಪರಿಷತ್ತನ್ನು ಉಳಿಸಿದ ಕಾರ್ಯ ನನ್ನದು ; ಅದನ್ನು ಬೆಳೆಸಿದ ಕಾರ್ಯ ನಾರಾಯಣರದು. ನಾನು ಉದ್ದೇಶಿಸಿದ್ದ ಅನೇಕ

ಕಾರ್ಯಕ್ರಮಗಳು ಅವರಿಂದ ಪೂರೈಸಿಕೊಳ್ಳುವ ಅವಕಾಶ ಹೊಂದಿದುವು. ಜಿಲ್ಲಾ ಸಾಹಿತ್ಯ ಸಮ್ಮೇಳನ ನನ್ನ ಮೊದಲ ಕನಸಾಗಿತ್ತು. ಅದನ್ನು ನಾರಾಯಣರು ನನಸು ಮಾಡಿದರು. ಹೀಗೆಯೇ ಸ್ಥಿರವಾದ ಪುಸ್ತಕ ಪ್ರದರ್ಶನ ಇತ್ಯಾದಿಗಳು.

ಒಟ್ಟಿನಲ್ಲಿ ಪರಿಷತ್ತಿನ ಹೆಸರು ನಾಡಿನಲ್ಲಿ ಅಧಿಕವಾಗಿ ಪ್ರಚಾರಗೊಂಡುದು ಶ್ರೀ ನಾರಾಯಣರ ಕಾಲದಲ್ಲಿ. ಸರಕಾರ ಹೆಚ್ಚಿಗೆ ಧನಸಹಾಯ ಮಾಡಿದುದು ಅವರ ಕಾಲದಲ್ಲಿ. ಅನೇಕ ವ್ಯಾಪಕ ಕಾರ್ಯಕ್ರಮಗಳು ನಡೆದುದು ಅವರ ಮುಂದಾಳುತನದಲ್ಲಿ. ಈ ಎಲ್ಲ ಕಾರ್ಯಗಳಲ್ಲಿ ಅವರಿಗೆ ಬೆಂಬಲ ನೀಡುವ ಅವಕಾಶ ನನಗೆ ದೊರಕಿತ್ತು. ಅವರ ಕಾರ್ಯವನ್ನು ಹತ್ತಿರದಿಂದ ನೋಡಿರುವ ನನಗೆ ಅವರ ಬಗ್ಗೆ ಅಪಾರವಾದ ಮೆಚ್ಚಿಕೆಯಿದೆ. ಅವರ ವಿವೇಕ ನನಗೆ ಆಶ್ಚರ್ಯವನ್ನು ತಂದಿದೆ. ಯಾರನ್ನೂ ಎದುರು ಹಾಕಿಕೊಳ್ಳದೆ, ಯಾರನ್ನೂ ತುಂಬ ಹಚ್ಚಿಕೊಳ್ಳದೆ, ಎಲ್ಲರ ಸಹಾಯ ಸಲಹೆ ಸಹಕಾರಗಳನ್ನೂ ಪಡೆಯುವ ಅವರ ಜಾಣತನ ಮೆಚ್ಚಿಕೆಗೆ ಅರ್ಹವಾದುದು. ಎಂಥ ಸಂದರ್ಭದಲ್ಲಿಯೂ ಅಧೀರರಾಗದ ಒಂದು ಸ್ತಿಮಿತಚಿತ್ತತೆ

ವೈಶಿಷ್ಟ್ಯ

ಶ್ರೀ ಕೆಂಗಲ್ ಹನುಮಂತಯ್ಯನವರ ಮುಖ್ಯಮಂತ್ರಿತ್ವದ ಕೊನೆಯ ದಿನಗಳು. ಕರ್ನಾಟಕ ಕಾಂಗ್ರೆಸ್‌ನಲ್ಲಿ ಹನುಮಂತಯ್ಯನವರ ಪದಚ್ಯುತಿಗೆ ಸತತ ಪ್ರಯತ್ನ. ಅವರಿಗೆ ದಿನೇ ದಿನೇ ಬೆಂಬಲ ಕಡಿಮೆಯಾಗುತ್ತಿದ್ದ ಕುರುಹು. ಅಂದು ಕಾಂಗ್ರೆಸ್ ಕಛೇರಿಯಲ್ಲಿ (ಇಂದಿನ ಜನತಾ ಕಛೇರಿ) ಈ ವಿಷಯದಲ್ಲಿ ತೀರ್ಮಾನಕ್ಕೆ ಕಾಂಗ್ರೆಸ್ಸಿಗರ ಸಭೆ, ಎಲ್ಲರ ಒಲವು ನೂತನ ಮುಂದಾಳುವಿನತ್ತ-ಹನುಮಂತಯ್ಯನವರು ಅಧಿಕಾರ ಕಳೆದುಕೊಳ್ಳುವುದು ಎಲ್ಲರಿಗೂ ವೇದ್ಯವಾಗಿತ್ತು. ಆದರೆ ಕಾಂಗ್ರೆಸ್ಸಿಗೆ ಅದಕ್ಕಿಂತ ಹೆಚ್ಚಾಗಿ ಕರ್ನಾಟಕಕ್ಕೆ ಅವರು ಸಲ್ಲಿಸಿದ ಸೇವೆ ಚಿರಸ್ಮರಣೀಯ. ಅಂದು ಕಾಂಗ್ರೆಸ್ ಕಛೇರಿಯಲ್ಲಿ ಅವರ ಸೇವೆಯ ವಿವರ ನೀಡುವ, ಅವರನ್ನು ಮುಖ್ಯಮಂತ್ರಿ ಪದವಿಯಿಂದ ಕೆಳಗಿಳಿಸುವುದು ಅನ್ಯಾಯವೆಂದು ಸಾರುವ ಕರಪತ್ರ ಮುದ್ರಿಸಿ ಹಂಚಿಸಿದ ಒಂದು ಗುಂಪು ಅಲ್ಲಿತ್ತು. ಯಾರ ಗಣನೆಗೂಬಾರದ ಎಲ್ಲರ ಪರಿಹಾಸ್ಯಕ್ಕೂ ಒಳಗಾದ ಗುಂಪು ಅದು-ಸ್ವತಃ ಹನುಮಂತಯ್ಯನವರೇ ಸಭೆಗೆ ಬಂದಾಗ ಈ ಕರಪತ್ರ ಓದಿ, ಕೊನೆಗೂ ನನ್ನ ಸೇವೆ ಗುರುತಿಸಿದ ನೀವು ಇದ್ದೀರಲ್ಲ ಆದರೆ ಈ ಪ್ರಯತ್ನ ನಿಷ್ಫಲ ಎಂದು ಹೇಳಿ ಹೋದರಂತೆ. ಅವರ ಕಣ್ಣಿನಲ್ಲಿ ಅಂದು ಕಂಡುಬಂದ ಎರಡು ಹನಿ ಕಣ್ಣೀರು ಬಹುಶಃ ಬಹು ಮಂದಿ ನೋಡಿರಲಿಕ್ಕಿಲ್ಲ, ಈ ಕಾರ್ಯ ಮಾಡಿದವರು ಶ್ರೀ ಜಿ. ನಾರಾಯಣ ಅವರು ಅವರ ನಾಲ್ಕಾರು ಕಾಂಗ್ರೆಸ್ ಗೆಳೆಯರು. ಆಗ ಶ್ರೀ ಹನುಮಂತಯ್ಯನವರಿಗೆ ನಾರಾಯಣರ ವ್ಯಕ್ತಿಶಃ ಪರಿಚಯ ಕೂಡ ಇಲ್ಲದಿದ್ದ ಕಾಲ. ಆದರೂ ಸರಿ ಕಂಡದ್ದನ್ನು ಹೇಳುವ, ಅನ್ಯಾಯವನ್ನು ಪ್ರತಿಭಟಿಸುವ ದಿಟ್ಟತನ ನಾರಾಯಣರದು-ಇದೇ ಅವರ ವೈಶಿಷ್ಟ್ಯ.

ಅವರಿದೆ. ಯಾವ ಕಾರ್ಯಕ್ಕೂ ಖಚಿತ ಯೋಜನೆಯನ್ನು ಹಾಕುವ, ಎಲ್ಲವನ್ನೂ ತಾವೇ ಖುದ್ದು ವಿಚಾರಿಸುವ, ತಪಾಸು ಮಾಡುವ ರೀತಿ ಅತ್ಯಾಶ್ಚರ್ಯಕರವಾದುದು. ಅನೇಕರಿಗೆ ಇದು ಸಾಧ್ಯವಾಗುವುದಿಲ್ಲ. ಅವರಿಗೆ ಇದು ರಕ್ತಗತ.

ಪರಿಷತ್ತಿಗೆ ಇಂಥ ಒಬ್ಬ ಯೋಜಕರ ಅಗತ್ಯವಿತ್ತು. ಸಮಯಕ್ಕೆ ಸರಿಯಾಗಿ ಅವರು ದೊರೆತರು. ಸಂಸ್ಥೆಗೆ ಬೆಳಕು ಬರುವುದು ಸಾಧ್ಯವಾಯಿತು. ಇಂದು ಬೃಹತ್ತಾಗಿ ಕಾಣುವ ಈ ಕಟ್ಟಡಗಳು, ಪುಸ್ತಕ ಭಂಡಾರ, ಪ್ರಕಟಣ ಶಾಖೆ, ನಿಘಂಟುಕಾರ್ಯ, ಪ್ರಚಾರ ಕಾರ್ಯಕ್ರಮಗಳು ಇವುಗಳೆಲ್ಲಕ್ಕೂ ಅವರ ಹಿನ್ನೆಲೆ ಶಕ್ತಿ ತುಂಬಿದೆ. ಆದುದರಿಂದ ಜನತೆ ಶ್ರೀ ನಾರಾಯಣ ಅವರಿಗೆ ಕೃತಜ್ಞರಾಗಿರಬೇಕು. ಅವರನ್ನು ಸನ್ಮಾನಿಸುವ ಸಂದರ್ಭದಲ್ಲಿ ನಾನು ಅವರ ಸೇವೆ ಸಾಹಿತ್ಯ ಕ್ಷೇತ್ರದಲ್ಲಿ ಸದಾ ಬೆಳಗುತ್ತಿರಲಿ ಎಂದು ಹಾರೈಸುತ್ತೇನೆ. ಅವರಿಗೆ ಆಯುರಾರೋಗ್ಯಗಳೂ ಐಶ್ವರ್ಯವೂ ಒದಗಿ, ಅವರ ಕುಟುಂಬವು ಸುಖವಾಗಿದ್ದು ಅವರಿಂದ ಅಪಾರವಾದ ಕನ್ನಡದ ಕೆಲಸ ನಡೆದು, ಅವರು ಇನ್ನೂ ಅಧಿಕವಾದ ಶ್ರೇಯಸ್ಸನ್ನು ಪಡೆಯಲಿ ಎಂದು ಹಾರೈಸುತ್ತೇನೆ.

(೧೯೮೪)

ಕಾರ್ಯಕುಶಲ ಕನ್ನಡ ಸೇನಾನಿ

■ ಡಾ. ರಂ.ಶ್ರೀ. ಮುಗಳಿ

ನಾನು ಸಾಂಗಲಿಯ ವಿಲಿಂಗ್ಡನ್ ಕಾಲೇಜಿನಲ್ಲಿ ಪ್ರಾಚಾರ್ಯನಾಗಿ ಬಿಡುವಿಲ್ಲದ ಕೆಲಸಕಾರ್ಯಗಳಲ್ಲಿ ತೊಡಗಿರುವಾಗ ಒಂದು ದಿನ ಬೆಂಗಳೂರಿನಿಂದ ಒಂದು ತಂತಿಯ ಸಂದೇಶ ಬಂತು. ಯಾವುದೋ ಒಂದು ಕಾರ್ರ್ಯಕ್ರಮಕ್ಕೆ ನಾನು ಒಪ್ಪಬೇಕೆಂದು ಅದರ ಅಭಿಪ್ರಾಯ ವಾಗಿತ್ತು. ಅದನ್ನು ಕಳಿಸಿದವರು ಮೇಯರ್ ಎಂದು ಕಾಣಿಸಲಾಗಿತ್ತು. ನನಗೆ ಆಗ ಅದರ ತಳಬುಡವೇ ತಿಳಿಯ ಲಿಲ್ಲ. ಏನೋ ಔಪಚಾರಿಕ ಆಮಂತ್ರಣವಿರಬಹುದೆಂದು ನಾನು ಉತ್ತರ ಬರೆಯದೆ ಸುಮ್ಮನಿದ್ದೆ. ಆದರೆ ಮರುದಿನ ಕೈಸೇರಿದ ಪತ್ರದಿಂದ ವಿಷಯ ತಿಳಿಯಿತು. ಬೆಂಗಳೂರು ಮಹಾನಗರಪಾಲಿಕೆಯ ಪರವಾಗಿ ಸಾಹಿತಿಯೆಂದು ನನ್ನ ಸನ್ಮಾನ ಮಾಡುವುದು ಆ ಕಾರ್ಯಕ್ರಮದ ಉದ್ದೇಶವಾಗಿತ್ತು. ಕನ್ನಡ-ಕನ್ನಡ-ನಿಘಂಟು ಸಮಿತಿಯ ಸಭೆಯೊಂದಕ್ಕೆ ನಾನು ಬೆಂಗಳೂರಿಗೆ ಬರುವುದನ್ನು ತಿಳಿದುಕೊಂಡು ಅದಕ್ಕೆ ಹೊಂದಿಕೊಂಡು ಈ ಕಾರ್ಯಕ್ರಮವನ್ನು ಹೂಡಲಾಗಿತ್ತು. ಆ ತಂತಿಯನ್ನು ಕಳಿಸಿದವರು ಮತ್ತು ಪತ್ರವನ್ನು ಬರೆದವರು ಆ ಮಹಾನಗರ ಪಾಲಿಕೆಯ ಮೇಯರ್ ಅಂದರೆ ಮಹಾಪೌರರಾಗಿದ್ದ ಶ್ರೀ ಜಿ. ನಾರಾಯಣ ಅವರು. 'ಇದೆಲ್ಲ ಬೇಡ' ಎನ್ನುವುದಕ್ಕೆ ಅವಕಾಶ ಕೊಡದಂತೆ ಎಲ್ಲ ಏರ್ಪಾಡುಗಳನ್ನು ಮಾಡಿ ಅವರು ಎಷ್ಟು ಅಚ್ಚುಕಟ್ಟಾಗಿ ಈ ಕಾರ್ಯಕ್ರಮವನ್ನು ನಡೆಸಿದರು ಎಂಬುದು ಇಂದಿಗೂ ನನ್ನ ಕಣ್ಣ ಮುಂದೆ ಕಟ್ಟಿದಂತಿದೆ. ಅಂದಿನಿಂದ ಇಂದಿನ ವರೆಗೆ ಅವರ ಕಾರ್ಯಕುಶಲತೆಯನ್ನು ಮತ್ತು ಇತರ

ಸದ್ಗುಣಗಳನ್ನು ಅನೇಕ ಸಂದರ್ಭಗಳಲ್ಲಿ ಹತ್ತಿರದಿಂದ ನೋಡಿ ತುಂಬ ಮೆಚ್ಚಿಕೊಂಡವರಲ್ಲಿ ನಾನೊಬ್ಬನು ಎಂದು ಹೆಮ್ಮೆಯಿಂದ ಹೇಳಬಯಸುತ್ತೇನೆ.

ನಾನು ಹಲವಾರು ವರ್ಷ ಆಗಾಗ ಸಭೆ ಸಮಾರಂಭಗಳ ಕಾರಣದಿಂದ ಬೆಂಗಳೂರಿಗೆ ಬಂದು ಹೋಗುತ್ತಿದ್ದೆ. ಆದರೆ ಇಂದಿಗೆ ಹದಿನೆಂಟು ವರ್ಷಗಳ ಹಿಂದೆ ನಾನು ಇಲ್ಲಿಯೇ ಬಂದು ನೆಲೆಸುವೆನೆಂದು ಯಾರೂ ಸುಲಭವಾಗಿ ಊಹಿಸುವಂತಿರಲಿಲ್ಲ. ಯಾವ ಅದೃಷ್ಟವು ನನ್ನನ್ನು ಬೆಂಗಳೂರಿಗೆ ಎಳೆದುಕೊಂಡು ಬಂದು ಕಾಲೂರುವಂತೆ ಮಾಡಿತೋ ಅದೇ ನನಗೆ ಮಾಡಿದ ದೊಡ್ಡ ಉಪಕಾರವೆಂದರೆ ಶ್ರೀ ನಾರಾಯಣ ಅವರ ಸ್ನೇಹ–ಸೌಹಾರ್ದಗಳು ನನಗೆ ನಿರಂತರವಾಗಿ ದೊರೆಯುವಂತೆ ಮಾಡಿದ್ದು. ನನ್ನ ಮಟ್ಟಿಗೆ ನನಗೆ ಬೇರೆ ಏನಾದರೂ ಜೀವನದಲ್ಲಿ ಸಿಗಲಿ ಬಿಡಲಿ, ಶ್ರೀ ನಾರಾಯಣ ಅವರಂಥ ವ್ಯಕ್ತಿಗಳ ಸ್ನೇಹ ಮತ್ತು ಆತ್ಮೀಯತೆಗಳು ಸಿಕ್ಕರೆ ಸಾಕು, ನಾನು ಸಮಾಧಾನದಿಂದ ಬದುಕಬಲ್ಲೆ ಮಾತ್ರವಲ್ಲ, 'ಸಿಡಿಲನೂ ಸವಿಯ ಮಾಡುವೆ' ಎಂದು ಹೇಳುವವನು, ಹಿಂಜರಿಯದೆ ಮುಂದೆ ಮುಂದೆ ಹೋಗುವವನು.

ಕನ್ನಡನಾಡಿನ ಸಮಸ್ಯೆಗಳು ಒಂದರೊಳಗೊಂದು ತೊಡಕಿಕೊಂಡವುಗಳಾಗಿವೆ. ಕರ್ನಾಟಕದ ರಾಜಧಾನಿಯಾದ ಬೆಂಗಳೂರಿನಲ್ಲಿ ಅವು ಹೆಚ್ಚು ಜಟಿಲವಾಗಿಬಿಟ್ಟಿವೆ. ಇಂಥ ಸನ್ನಿವೇಶದಲ್ಲಿ ಕನ್ನಡತನವನ್ನು ಹೆಚ್ಚಿಸಬೇಕೆಂದು ಕೆಲವರು ತಂತಮ್ಮ ರೀತಿಯಲ್ಲಿ ಕೆಲಸಮಾಡುತ್ತ ಬಂದಿದ್ದಾರೆ. ಅದರಿಂದ ಒಂದಿಲ್ಲೊಂದು ಬಗೆಯ ಒಳ್ಳೆಯದಾಗಿದೆ. ಶ್ರೀ ನಾರಾಯಣ ಅವರದು ಮಾತ್ರ ಅವರಿಗೇ ವಿಶಿಷ್ಟವಾದ ರಚನಾತ್ಮಕ ಕಾರ್ಯಪದ್ಧತಿ. ಕನ್ನಡ ಪುಸ್ತಕ ಪ್ರಸಾರವಿರಲಿ, ಸಭೆಸಮಾರಂಭಗಳಿರಲಿ ಪ್ರತಿಯೊಂದು ವಿವರದಲ್ಲಿ ಅದರ ಸಮಗ್ರ ಯೋಜನೆಯನ್ನು ಮಾಡಿ ಆಯಾ ಕೆಲಸಕ್ಕೆ ತಕ್ಕವರಿಗೆ ಅದನ್ನು ಹಂಚಿಕೊಟ್ಟು ತಾವೂ ತಮ್ಮ ಪಾಲಿನ ಕೆಲಸ ಮತ್ತು ಹೊಣೆಯನ್ನು ನಿರ್ವಹಿಸಿ ಎಲ್ಲವೂ ಯೋಜಿತವಾದಂತೆ ನಡೆಯುವ ಹಾಗೆ ನೋಡಿಕೊಳ್ಳುವ ಕಾರ್ಯಕುಶಲತೆ ಮತ್ತು ಯೋಗ್ಯನಾಯಕತ್ವ ಅವರ ವೈಶಿಷ್ಟ್ಯ. ತಾವು ಕೈಗೊಂಡ ಕಾರ್ಯ ಮತ್ತು ಹೊಣೆಗಾರಿಕೆ ಎಷ್ಟೇ ದೊಡ್ಡದಾಗಿದ್ದರೂ ಅವರು ತಮ್ಮ ಮನಸ್ಸಿನ ಸಮತೋಲನವನ್ನು ಕಳೆದುಕೊಳ್ಳುವುದಿಲ್ಲ. ಯಾವ ವಿವರವೂ ತಪ್ಪದಂತೆ ಕಾರ್ಯವು ಯಥೋಚಿತವಾಗಿ ನಡೆಯುವಂತೆ ನೋಡಿಕೊಳ್ಳುತ್ತಾರೆ. ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಹಲವಾರು ಯೋಜನೆಗಳನ್ನು ರೂಪಿಸಿದರು. ಕರ್ನಾಟಕದುದ್ದಕ್ಕೂ ವಿವಿಧ ಸ್ವರೂಪದ ಸಭೆ ಸಮ್ಮೇಳನಗಳನ್ನು ನಡೆಸಿದರು. ಎಲ್ಲದರಲ್ಲಿಯೂ ಕನ್ನಡಭಾಷೆ ಸಾಹಿತ್ಯ ಸಂಸ್ಕೃತಿಗಳ ಅಭಿಮಾನ ಮತ್ತು ಅರಿವು ಕನ್ನಡಿಗರಲ್ಲಿ ಹೆಚ್ಚಬೇಕು, ಇದಕ್ಕಾಗಿ ಸಾಕ್ಷರತೆಯ ಪ್ರಸಾರವು ಹೆಚ್ಚಿನ ಪ್ರಮಾಣದಲ್ಲಿ ಆಗಬೇಕು, ಆಡಳಿತ ಮತ್ತು ವ್ಯವಹಾರಗಳಲ್ಲಿ ಕನ್ನಡಕ್ಕೆ ಅಗ್ರಪಟ್ಟ ದೊರಕಬೇಕು ಇದು ಅವರ ಮೂಲ ಉದ್ದೇಶ.

ಪರಿಷತ್ತಿನ ಸುವರ್ಣಮಹೋತ್ಸವ ಮತ್ತು ವಜ್ರಮಹೋತ್ಸವಗಳನ್ನು ತಮ್ಮ ಅಧ್ಯಕ್ಷತೆಯ ಅವಧಿಯಲ್ಲಿ ಅವರು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಿದರು. ಈ ಎರಡೂ ಉತ್ಸವಗಳು ತೀರ ಹತ್ತಿರ ಬಂದಂತೆ ಅವರು ದೇಹಾಯಾಸದಿಂದ ಬಳಲಿದರು. ಆದರೆ ಎದೆಕುಗ್ಗಲಿಲ್ಲ.

ವಜ್ರಮಹೋತ್ಸವದ ಕಾಲಕ್ಕಂತೂ ಒಂದುವಾರ ಮುಂಚೆ ಅವರು ಹಾಸಿಗೆ ಹಿಡಿದರು. ಆದರೆ ಜ್ವರವಿದ್ದಾಗಲೇ ತಮ್ಮ ಸ್ನೇಹಿತರನ್ನೂ ಕಾರ್ಯಕರ್ತರನ್ನೂ ಮನೆಗೆ ಕರೆಸಿಕೊಂಡು ಮಲಗಿದಲ್ಲಿಯೇ ಉಳಿದ ಕಾರ್ಯವಿವರಗಳನ್ನು ತಿಳಿಹೇಳಿ ಎಲ್ಲವೂ ಸಾಂಗವಾಗಿ ನಡೆಯುವಂತೆ ನೆರವಾಗಲು ಕೋರಿದರು. ಈ ಸಂದರ್ಭದಲ್ಲಿ ಅವರ ಕಾರ್ಯಕುಶಲತೆ ಮನೋಧೈರ್ಯ ಮತ್ತು ವಿವರಗಳ ಪರಿಜ್ಞಾನ ಎದ್ದು ಕಂಡವು.

ಸುವರ್ಣ ಮಹೋತ್ಸವದ ಸಮಾರಂಭದಲ್ಲಿ ಆ ವರ್ಷದ ಸಾಹಿತ್ಯ ಸಮ್ಮೇಳನವೂ ಜರುಗಿದಾಗ ಕನ್ನಡಿಗರಿಗೆ ಉದ್ಯೋಗಾವಕಾಶವು ಹೆಚ್ಚಿನ ಪ್ರಮಾಣದಲ್ಲಿ ದೊರಕಬೇಕೆಂಬ ಗೊತ್ತುವಳಿಯ ಚರ್ಚೆ ನಡೆಯಿತು. ಆಗ ಕನ್ನಡಿಗರೆಂದರೆ ಯಾರು ಎಂಬ ಪ್ರಶ್ನೆ ಬಂದು ಮಹಾ ಸಾಗರದಂತಿದ್ದ ಸಭೆ ಭಾವನೋದ್ರೇಕದಿಂದ ಕೆರಳಿದಾಗ ಶ್ರೀ ನಾರಾಯಣ ಅವರು ಅತ್ಯಂತ ಶಾಂತ ಮನಃಸ್ಥಿತಿಯಿಂದ ಅಂದಿನ ಪರಿಸ್ಥಿತಿಯನ್ನು ಇದಿರಿಸಿದ ರೀತಿ ಅವರಲ್ಲಿದ್ದ ಉತ್ತಮನಾಯಕತ್ವದ ಗುಣವನ್ನು ಎತ್ತಿ ತೋರಿಸಿತು.

ಅರುವತ್ತು ವರ್ಷ ತುಂಬಿರುವ ಈ ಸಂದರ್ಭದಲ್ಲಿ ಕನ್ನಡ ನಾಡುನುಡಿಗಳ ಸರ್ವತೋಮುಖವಾದ ಏಳಿಗೆಗೆ ಕಳಕಳಿಯಿಂದ ದುಡಿಯುತ್ತಿರುವ ಶ್ರೀ ನಾರಾಯಣ ಅವರಿಗೆ ಸುದೀರ್ಘ ಆಯುಷ್ಯವನ್ನು ಉತ್ತಮ ಆರೋಗ್ಯವನ್ನು ದೇವರು ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇನೆ. ನಾಡಿನ ಜನತೆ ಈ ಕಾರ್ಯಕುಶಲ ಕನ್ನಡ ಸೇನಾನಿಯನ್ನು ಇನ್ನೂ ಹೆಚ್ಚಿನ ಹೊಣೆಗಾರಿಕೆಯ ಸ್ಥಾನಗಳಲ್ಲಿ ನಿಲ್ಲಿಸಿ ನಾಯಕತ್ವದ ಲಾಭ ಪಡೆದು ಕನ್ನಡವು ಒಂದು ಸಾರ್ವತ್ರಿಕವಾದ ಚೈತನ್ಯದಾಯಕವಾದ ಶಕ್ತಿಯಾಗುವಂತೆ ಪ್ರಯತ್ನಿಸಲಿ ಎಂದು ಮನಃಪೂರ್ವಕವಾಗಿ ಹಾರೈಸುತ್ತೇನೆ.

(೧೯೮೪)

ಕನ್ನಡವೇ ಕಾಯಕವಾದ ಜಿ. ನಾರಾಯಣರು

■ ಡಾ.ಸಿದ್ಧಯ್ಯ ಪುರಾಣಿಕ

ಏಕನಿಷ್ಠೆಗೆ ಇನ್ನೊಂದು ಹೆಸರು ಶ್ರೀ ಜಿ. ನಾರಾಯಣ. ರಾಜಕೀಯ ರಂಗದಲ್ಲಿ ಅವರಿದ್ದಾರೆ ಇಲ್ಲದಂತೆ; ಸಾರ್ವಜನಿಕ ರಂಗದಲ್ಲಿಯೂ ಇದ್ದಾರೆ ಇಲ್ಲದಂತೆ; ಆದರೆ ಕನ್ನಡ ಕಾಯಕದಲ್ಲಿ ಅವರು ಇದ್ದೂ ಇಲ್ಲದಂತಿರುವುದು ಸಾಧ್ಯವಿಲ್ಲ. ಕನ್ನಡ ಅವರ ಉಸಿರು ; ಕನ್ನಡ ಕಾಯಕ ಅವರ ಪಂಚಪ್ರಾಣ.

ಅವರ ಕನ್ನಡ ಕಾಯಕ ಸ್ವೀಕರಣ ಎಷ್ಟು ಬಲವಾದುದೋ ಅಷ್ಟೇ ಬಲವಾದುದು ಅವರ ಇತರ ಪ್ರಲೋಭನೆಗಳ ನಿರಾಕರಣ. ಒಮ್ಮೆ ಚಾಮರಾಜಪೇಟೆ ಮತಕ್ಷೇತ್ರದಿಂದ ಇವರನ್ನೇ ತಮ್ಮ ಅಭ್ಯರ್ಥಿಯಾಗಿ ನಿಲ್ಲಿಸಲು ಪ್ರಯತ್ನಿಸಿದುವು ಎಲ್ಲ ಪ್ರಬಲ ರಾಜಕೀಯ ಪಕ್ಷಗಳು. ಇವರು ಒಪ್ಪಿದ್ದರೆ ಜಯ ಕಟ್ಟಿಟ್ಟ ಗಂಟಾಗಿದ್ದಿತು ಆಗ. ಆದರೂ ಇವರು ಆ ಪ್ರಲೋಭನೆಗೆ ತಾವೂ ಬಲಿಯಾಗಲಿಲ್ಲ. ಕನ್ನಡವನ್ನೂ ಬಲಿಕೊಡಲಿಲ್ಲ! ಕನ್ನಡಕ್ಕೆ ಏನೇನನ್ನೋ ನಿರೀಕ್ಷಿಸಿರುವ ಇವರು ಕನ್ನಡದಿಂದ ತಮಗೆ ಏನನ್ನೂ ನಿರೀಕ್ಷಿಸಿಲ್ಲ.

ಕನ್ನಡಕ್ಕಾಗಿ ದುಡಿಯುವವರು, ಕನ್ನಡ ನುಡಿಯನ್ನು ಬೆಳೆಸುವವರು, ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸುವವರು, ಕನ್ನಡ ಸಂಸ್ಕೃತಿಯನ್ನು ಸಂವರ್ಧಿಸುವವರು ಯಾರೇ ಇರಲಿ, ಎಲ್ಲಿಯೇ ಇರಲಿ ಅವರಿಗಾಗಿ ಇವರ ಸಹಾಯಹಸ್ತ ಸದಾ ಸಿದ್ಧ. ಇವರೆಲ್ಲರಿಗೂ ಇವರ ಮನೆ ಹಾಗೂ 'ವಿನೋದ ಕಾರ್ಯಾಲಯ' ಮುಕ್ತದ್ವಾರ. 'ವಿನೋದ ಕಾರ್ಯಾಲಯ' ಅದೆಷ್ಟು ಸಂಘ ಸಂಸ್ಥೆಗಳ

ಅಧಿಕೃತ ಕಾರ್ಯಾಲಯವೆಂಬುದನ್ನು ನೆನೆದಾಗ ಇವರ ಜಿಡುವಿಲ್ಲದ ದಣಿಪಿಲ್ಲದ, ಬೇಸರವಿಲ್ಲದ ನಿರಂತರ ಕನ್ನಡ ಸೇವೆಯ ಕಲ್ಪನೆ ಮೂಡಿತು.

ಇವರಿಗೆ ಕನ್ನಡ ಸೇವಾ ದೀಕ್ಷೆಯನ್ನು ಕೊಟ್ಟವರಾರೋ ನನಗೆ ಗೊತ್ತಿಲ್ಲ. ಯಾರಾದರೂ ಇದ್ದರೆ ಅವರಿಗೆ ಇವರ ಕನ್ನಡ ಸೇವೆಯ ಅನೇಕ ಮುಖಗಳನ್ನು ನೋಡಿ ಅಭಿಮಾನ ಉಕ್ಕೇರಿರಲು ಸಾಕು. ಇವರ ಕನ್ನಡ ಸೇವಾಕ್ಷೇತ್ರದಿಂದ ಹೊರಗುಳಿದವರು ಯಾರು? ಪಂಡಿತರೆ? ಪಾಮರರೆ? ಲೇಖಕರೆ? ವಾಚಕರೆ? ಗಮಕಿಗಳೆ? ಕೀರ್ತನಕಾರರೆ? ಲೇಖಕಿಯರೆ? ಜಾನಪದ ಕಲಾವಿದರೆ? ಒಳನಾಡ ಕನ್ನಡಿಗರೆ? ಹೊರನಾಡ ಕನ್ನಡಿಗರೆ? ವಿದೇಶಗಳ ಕನ್ನಡಿಗರೆ? ಪ್ರಕಾಶಕರೆ? ಪ್ರಚಾರಕರೆ? ಯಾರೂ ಇಲ್ಲವೆಂದರೆ ಇದಕ್ಕೆ ಇದಿರು ಮಾತಿಲ್ಲ.

ಎಲ್ಲರೂ ಅವರನ್ನೇ ಅರಸಿಕೊಂಡೇಕೆ ಹೋಗುತ್ತಾರೆ? ತಮ್ಮ ಕೆಲಸವನ್ನು ಅವರು ಅಂಗೀಕರಿಸಿಬಿಟ್ಟರೆ ಸಾಕು–ಅದಕ್ಕೆ ಯಶಸ್ಸು ಖಂಡಿತ, ಎಂಬ ವಿಶ್ವಾಸ ಎಲ್ಲರಿಗೆ. ಒಮ್ಮೆ ಅವರು ಒಂದು ಕನ್ನಡ ಕಾರ್ಯವನ್ನು ಒಪ್ಪಿದರೆಂದರೆ ಅದನ್ನು ಒಪ್ಪಿಸಿದವರೇ ಕೈ ಬಿಟ್ಟರೂ, ಕೈ ಕೊಟ್ಟರೂ ಅವರದನ್ನು ಬಿಡುವವರಲ್ಲ. ಆ ಕೆಲಸದ ಸಾಧಕ ಬಾಧಕಗಳನ್ನೆಲ್ಲ ಆಮೂಲಾಗ್ರವಾಗಿ ವಿಶ್ಲೇಷಿಸುತ್ತಾರೆ; ಅದರ ಯಶಸ್ಸಿಗಾಗಿ ಎಲ್ಲ ವಿವರಗಳನ್ನೊಳಗೊಂಡ ಕಾರ್ಯಯೋಜನೆಯೊಂದನ್ನು ರೂಪಿಸುತ್ತಾರೆ; ಅವರ ಯಾವ ಯಾವ ಅಂಗವನ್ನು ಯಾರಿಗೆ ಕೊಟ್ಟರೆ ಪೂರ್ಣವಾದೀತೆಂಬುದನ್ನು ವಿಚಕ್ಷಣತೆಯೊಡನೆ ನಿರ್ಧರಿಸಿ ಅವರು ಆ ಅಂಗವನ್ನು ವಹಿಸಿಕೊಳ್ಳುವಂತೆ ಅವರ ಮನ ಒಲಿಸುತ್ತಾರೆ ; ಅವರಿಗೆ ಎಡರು ತೊಡರುಗಳು ಎದುರಾದಾಗ ಅವರ ನೆರವಿಗಾಗಿ ಧಾವಿಸುತ್ತಾರೆ; ತಮ್ಮ ಒಟ್ಟು ಹೊಣೆಗಾರಿಕೆಯನ್ನು ದಿಟ್ಟತನದಿಂದ ನಿರ್ವಹಿಸುತ್ತಾರೆ. ಅಂತೂ ಜಯ ಗಳಿಸಿಯೇ ಅವಭೃತಸ್ನಾನ ಮಾಡುತ್ತಾರೆ. ಉದ್ದಕ್ಕೂ ಸದ್ದಿಲ್ಲದ ಸಾಧನೆ; ಗದ್ದಲವಿಲ್ಲದ ಕಾರ್ಯಾಚರಣೆ ; ಪ್ರಚಾರದ ರಭಸ, ಅಬ್ಬರಗಳಿಲ್ಲದ ಸೇವೆ; ಅನುದ್ವೇಗಕರವಾದ ನುಡಿ, ಕಲಂಕ ರಹಿತವಾದ ನಡೆ !

ಕನ್ನಡಕ್ಕಾಗಿ ನಿಷ್ಠೆಯಿಂದ ದುಡಿಯಲು ಕಂಕಣಬದ್ಧರಾದ ಕನ್ನಡ ಕಾರ್ಯಕರ್ತರ ಒಂದು ಸೇನೆಯನ್ನೇ ಸಿದ್ಧಗೊಳಿಸಿದ ಶ್ರೇಯಸ್ಸು ಶ್ರೀ ಜಿ. ನಾರಾಯಣರದು. ಈ ಕಾರ್ಯಕರ್ತರ ಕಾಯಕನಿಷ್ಠೆ ಅಸದೃಶವಾದುದು. ಶ್ರೀ ನಾರಾಯಣರು ಪರಿಷತ್ತಿನ, ಮಹಾನಗರ ಸಭೆಯ ಅಧಿಕಾರದಲ್ಲಿರಲಿ, ಇಲ್ಲದಿರಲಿ ಅವರು ಹೇಳಿದ ಕೆಲಸ ಮಾಡಲು ಸದಾ ಸಿದ್ಧರಿವರು, ಸನ್ನದ್ಧರಿವರು. ಶ್ರೀ ಜಿ. ನಾರಾಯಣರು ಸದು ವಿನಯದ ತುಂಬಿದ ಕೊಡ. ಅವರೇನಾದರೂ ಕನ್ನಡ ಕೆಲಸ ಮಾಡ ಹೇಳಿದರೆ ಅವರ ನಿಷ್ಠ ಕಾರ್ಯಕರ್ತರೇಕೆ, ಯಾರೂ ನಿರಾಕರಿಸಲಾರರು. ಅವರ ಸದುದ್ದೇಶದಲ್ಲಿ, ನಿಃಸ್ಪೃಹತೆಯಲ್ಲಿ, ಕನ್ನಡದ ಬಗ್ಗೆ ಕಾಳಜಿ–ಕಳಕಳಿಗಳಲ್ಲಿ, ಸೇವಾಬುದ್ಧಿಯಲ್ಲಿ ಸಂದೇಹವಿದ್ದರೆ ತಾನೆ ನಿರಾಕರಿಸುವ ಪ್ರಶ್ನೆ? ಕನ್ನಡಕ್ಕೆ ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡಿರುವ ಅವರು ಏನಾದರೂ ಹೇಳಿದರೆ ಸಾಕು, ಅದನ್ನು ಮಾಡಿ ಅವರಿಗೆ ಸಂತಸವನ್ನುಂಟುಮಾಡಬೇಕೆನ್ನುವವರು ಕನ್ನಡನಾಡಿನ ಒಳಗೂ ಹೊರಗೂ ಇದ್ದಾರೆ ಎಂತಲೇ ಅವರು ಒಂದು ಏಕ–ವ್ಯಕ್ತಿ–ಸಂಸ್ಥೆಯಾಗಿದ್ದಾರೆ; ಕನ್ನಡದ ಅಮೂಲ್ಯ ತವನಿಧಿಯಾಗಿದ್ದಾರೆ.

ಅವರ ಬಗ್ಗೆ ಬರೆಯಲು ಮೊದಲು ಮಾಡಿದರೆ ಬರೆಯುತ್ತಲೇ ಹೋಗಬೇಕೆನ್ನಿಸುತ್ತದೆ; ಬರೆದಷ್ಟೂ ಬರೆಯುವ ಬಯಕೆ ತೀವ್ರವಾಗುತ್ತದೆ. ಆದರೂ ಸಂಪಾದಕರು ನಿಗದಿ ಮಾಡಿರುವ ಗಡುವಿನಲ್ಲಿಯೇ ಬರೆಯಬೇಕಾಗಿದೆಯಾಗಿ ಇಲ್ಲಿಗೆ ನಿಲ್ಲಿಸಬೇಕು ನಾನು. ಅರುವತ್ತು ದಾಟಿರುವ ಅವರನ್ನು ಸಾರ್ವಜನಿಕವಾಗಿ ಅಭಿನಂದಿಸಲಿರುವುದು ಅತ್ಯಂತ ಶ್ಲಾಘನೀಯವಾದುದು. ಇದನ್ನು ಮಾಡಲು ಮುಂದೆ ಬಂದಿರುವವರೆಲ್ಲ ಅಭಿನಂದನೀಯರು. ಈ ಚರಿತ್ರಾರ್ಹ ಸಂದರ್ಭದಲ್ಲಿ ಕನ್ನಡ ತಾಯಿ ಅವರಿಗೆ ಉದ್ದಂಡ ಆಯುಷ್ಯವನ್ನೂ, ಅಖಂಡ ಆರೋಗ್ಯವನ್ನೂ, ಅವರ ಕನ್ನಡ ಕಾಯಕದಲ್ಲಿ ಅಪೂರ್ವ ಯಶಸ್ಸನ್ನೂ, ಅವರಿಗೂ ಅವರ ಪರಿವಾರಕ್ಕೂ ಉತ್ತರೋತ್ಕರ್ಷವನ್ನೂ ಅನುಗ್ರಹಿಸಲೆಂದು ಅವರ ಅಸಂಖ್ಯ ಅಭಿಮಾನಿಗಳೊಡನೆ ನಾನೂ ಪ್ರಾರ್ಥಿಸುತ್ತೇನೆ. 'ನಿಮ್ಮೊಡನೆ ನಾವಿದ್ದೇವೆ' ಎಂಬುದನ್ನು ಸ್ಥಿರೀಕರಿಸಲೆಂದೇ ಹಮ್ಮಿಕೊಂಡಿರುವ ಈ ಅಭಿನಂದನ ಸಮಾರಂಭ ಅಭೂತಪೂರ್ವವಾಗಿ ಜರುಗಲೆಂದೂ, ಅವರ ಕನ್ನಡ ಕಾಯಕಕ್ಕೆ ಕನ್ನಡಿಗರೆಲ್ಲರ ಸಹಕಾರವನ್ನೂ ದೊರಕಿಸಿಕೊಡಲೆಂದೂ ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

(೧೯೮೪)

ಸ್ವಾತಂತ್ರ್ಯ ಹೋರಾಟದಲ್ಲಿ

■ ಡಾ. ಸೂರ್ಯನಾಥ ಕಾಮತ್

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲುಗೊಂಡ ಅನೇಕರು ಮುಂದೆ ಸಾರ್ವಜನಿಕ ಜೀವನದಲ್ಲಿ ಗಣ್ಯಪಾತ್ರ ವಹಿಸುವಂಥವರಾದರು. ತಮ್ಮ ಸೇವಾನಿಷ್ಠೆ, ಸತತೋದ್ಯಮ, ಶಿಸ್ತು, ಅಚ್ಚುಕಟ್ಟಿನ ಕಾರ್ಯ ನಿರ್ವಹಣೆ ಮತ್ತು ಎಲ್ಲಕ್ಕೂ ಮೀರಿದ ಪ್ರಾಮಾಣಿಕತೆಯಿಂದ ಸಮಾಜ ಸೇವೆಗೈದರು; ಮತ್ತು ಜನರ ಉಪಕಾರ ಸ್ಮರಣೆಗೆ ಪಾತ್ರರಾದರು. ಅಂಥ ಕರ್ನಾಟಕದ ಗಣ್ಯರಲ್ಲಿ ಶ್ರೀ ಜಿ. ನಾರಾಯಣ ಒಬ್ಬರು.

ಶ್ರೀ ಜಿ. ನಾರಾಯಣ ಅವರ ಊರು ಮದ್ದೂರು ಬಳಿಯ ದೇಶಹಳ್ಳಿ. ಮದ್ದೂರಿಗೆ ಅಳಿಯನಾಗಿ, ಮುಂದೆ ಅಲ್ಲೇ ನೆಲೆಸಿದ್ದು ದಿ॥ ಶ್ರೀ ಎಚ್. ಕೆ. ವೀರಣ್ಣಗೌಡರ ಪ್ರಭಾವ ಹದಿವಯದಲ್ಲೇ ಶ್ರೀ ಜಿ. ನಾರಾಯಣ ಅವರ ಮೇಲೆ ಆಯಿತು. ಮಂಡ್ಯ ಜಿಲ್ಲೆಯ ರೈತರು ಇರ್ವಿನ್ ನಾಲಾ ಚಳವಳಿ ಹೂಡಿದಾಗ, ಅದರ ನೇತೃತ್ವ ವಹಿಸಿ ಮದ್ದೂರಿನಿಂದ ಸಾವಿರಾರು ರೈತರ ಕಾಲ್ನಡೆ ಜಾಥಾ ನಡೆಸಿ, ಚಳವಳಿಯು ಯಶ ಕಾಣುವಂತೆ ಮಾಡಿದ ಧೀರರು ದಿ॥ ಎಚ್. ಕೆ. ವೀರಣ್ಣಗೌಡರು. ಅವರಂಥ ವರ್ಣರಂಜಿತ ವ್ಯಕ್ತಿಯ ಪ್ರಭಾವಕ್ಕೆ ಶ್ರೀ ನಾರಾಯಣ ಅವರು ಒಳಪಟ್ಟುದರಲ್ಲಿ ಯಾವ ಅಚ್ಚರಿಯೂ ಇಲ್ಲ. ೧೯೩೭-೩೮ರಲ್ಲಿ ಆಗಿನ್ನೂ ೧೪-೧೫ರ ಬಾಲಕರಾಗಿದ್ದ ಶ್ರೀ ನಾರಾಯಣ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಪರ ಪ್ರಚಾರಕ್ಕೆ ಹಳ್ಳಿಹಳ್ಳಿಗಳಿಗೆ ಓಡಾಡಿದರು. ಶಿವಪುರದಲ್ಲಿ ಸಮಾವೇಶಗೊಂಡ 'ರಾಷ್ಟ್ರಕೂಟ'ವೆಂದು ಉಲ್ಲೇಖಿತವಾದ ಮೈಸೂರು ಸಂಸ್ಥಾನದ ಪ್ರಥಮ ಕಾಂಗ್ರೆಸ್ ಅಧಿವೇಶನದಲ್ಲಿ

ಸ್ವಯಂ ಸೇವಕರಾಗಿ ದುಡಿದರು. ಧ್ವಜ ಏರಿಸಿದರೆ ಗುಂಡು ಹಾರಿಸುವುದಾಗಿ ಬೆದರಿಸಿದ ಪೊಲೀಸರ ಬೆದರಿಕೆಗೆ ಸೊಪ್ಪು ಹಾಕದೆ ಅಲ್ಲಿ ನೆರೆದ ಹೆಂಗಳೆಯರೇ ಧ್ವಜ ಹಾರಿಸಲು ಮುಂದಾದರು. ಇನ್ನು ಗಂಡುಗಳು ಹಿಂದೆಗೆಯಲುಂಟೆ? ಗುಂಡಿನ ಭಯಕ್ಕೆ ಬೆದರದೆ ಸಹಸ್ರ ಸಹಸ್ರ ಜನ ಎದ್ದು ನಿಂತು ಆರೋಹಿತ ಧ್ವಜಕ್ಕೆ ಗೌರವ ಸಲ್ಲಿಸಿ ತಮ್ಮ ಗಂಡೆದೆಯ ಕೆಚ್ಚನ್ನು ಪ್ರದರ್ಶಿಸಿದರು ಶಿವಪುರದಲ್ಲಿ. ಹೇಡಿಯೂ ಧೀರನಾಗುವಂತಹ ಅಂದಿನ ಅಧಿವೇಶನದ ಪ್ರಭಾವ ಬಾಲಕ ಶ್ರೀ ನಾರಾಯಣ ಅವರ ಮೇಲೆ ಆಗದೇ ಉಂಟೆ?

ಚನ್ನಪಟ್ಟಣದಲ್ಲಿ ಹೈಸ್ಕೂಲಿಗೆ ಹೋಗುತ್ತಿದ್ದಾಗ ಕಾಂಗ್ರೆಸ್ಸು, ಸೇವಾದಳಗಳ ಗೀಳು ಬಿಡಲಿಲ್ಲ. ತನ್ನ ಸಹಪಾಠಿಗಳನ್ನೆಲ್ಲ ಕರೆದು ತಮ್ಮ ಊರಾದ ದೇಶಹಳ್ಳಿಯಲ್ಲಿ ಸಭೆಯೊಂದನ್ನು ನಡೆಸಿದರು. ಸ್ವಾತಂತ್ರ್ಯ, ಜವಾಬ್ದಾರಿ ಸರಕಾರ, ರೈತರ ಉದ್ಧಾರದ ಬಗ್ಗೆ ಭಾಷಣ ಮಾಡಿದರು. ತಕ್ಷಣ ಪೊಲೀಸರ ದಿನಚರಿಯಲ್ಲಿ ಈ ಬಾಲಕ ದಾಖಲಾದ. ಶಿಸ್ತಿನ ಕ್ರಮ ತೆಗೆದುಕೊಳ್ಳುವಂತೆ ಶಾಲಾ ಮುಖ್ಯೋಪಾಧ್ಯಾಯರಿಗೆ ಪೊಲೀಸು ಇಲಾಖೆಯಿಂದ ಪತ್ರವೂ ಹೋಯಿತು. ಮುಖ್ಯೋಪಾಧ್ಯಾಯರು ಸುಮ್ಮನಾದರು. ಆದರೆ ಉಳಿದ ಜನ ಸುಮ್ಮನಿರುತ್ತಾರೆಯೆ? ಹುಡುಗ ರಾಜಕೀಯಕ್ಕಿಳಿದರೆ ತಂದೆ ಸರ್ಕಾರದ ಕಿರುಕುಳ ಎದುರಿಸುವ ಪ್ರಸಂಗ ಬಂದೀತೆಂದು ಊರ 'ಹಿತೈಷಿ'ಗಳಿಂದ ತಂದೆಗೆ ಬೆದರಿಕೆ. ಪರಿಣಾಮವಾಗಿ ಎಸ್.ಎಸ್.ಎಲ್.ಸಿ.ಗೇ ಇವರ ಶಿಕ್ಷಣದ ಮುಕ್ತಾಯ.

ಗಾಂಧೀಜಿಯವರ ಮೋಡಿಗೆ ಒಳಗಾದ ಅನೇಕ ಶ್ರದ್ಧಾವಂತ ಜನಕ್ಕೆ ವಿಧಾಯಕ ಕಾರ್ಯದ ಗೀಳು. ತರುಣ ನಾರಾಯಣ, ಖಾದೀ ಗ್ರಾಮೋದ್ಯೋಗದ ಚಟುವಟಿಕೆಯ ಮೂಲಕ ಗ್ರಾಮೋದ್ಧಾರದ ಕನಸು ಕಂಡರು. ಬೆಳಗಾವಿ ಜಿಲ್ಲೆಯ ಹುದಲಿಯಲ್ಲಿ ಕರ್ನಾಟಕದ ಸಿಂಹ ಶ್ರೀ ಗಂಗಾಧರರಾವ್ ದೇಶಪಾಂಡೆ ಸ್ಥಾಪಿಸಿದ್ದ ಜಮುನಾಲಾಲ್ ಬಜಾಜ್ ಖಾದಿ ವಿದ್ಯಾಲಯದಲ್ಲಿ ಸೇರಿಕೊಂಡರು. ಅಲ್ಲಿ ಕೆಲವು ತಿಂಗಳ ವಾಸ ; ತರಬೇತಿ. ಆಶ್ರಮ ಜೀವನದಲ್ಲಿ ಶಿಸ್ತಿನ ಬಗ್ಗೆ ಪ್ರೇಮ. "ಗಾಂಧೀಜಿಯವರ ಧ್ಯೇಯೋದ್ದೇಶಗಳು ನನಗೆ ಹಿಡಿಸಿತು. ಅದನ್ನು ನನ್ನ ಬದುಕಿನ ಆದರ್ಶವಾಗಿಟ್ಟುಕೊಂಡು ನಡೆಯಬೇಕು ಎಂದು ನನ್ನ ಮನಸ್ಸಿಗೆ ತೋರಿತು. ಅಂದಿನಿಂದ ಇಂದಿನವರೆಗೆ ಆ ದಿಕ್ಕಿನಲ್ಲಿ ನಡೆಯಲು ಕೈಲಾದ ಪ್ರಯತ್ನ ಮಾಡಿದ್ದೇನೆ" ಎಂದು ಅಂದಿನ ಜೀವನದಿಂದ ತಮ್ಮ ಮೇಲಾದ ಪರಿಣಾಮವನ್ನು ಸ್ವತಃ ಶ್ರೀ ನಾರಾಯಣ ಹೇಳಿದ್ದಾರೆ.

ಕ್ವಿಟ್ ಇಂಡಿಯಾ ಚಳವಳಿ ಆರಂಭ (೧೯೪೨). ಇಡೀ ಕರ್ನಾಟಕದಲ್ಲಿಯೇ ಬೆಳಗಾವಿಯಲ್ಲಿ ಆಗ ಚಳವಳಿ ಅತ್ಯಂತ ಉಗ್ರ, ತೀವ್ರ. ಆಶ್ರಮದ ಮುಖ್ಯರಾದ ಶ್ರೀ ರಾಮಚಂದ್ರ ವಡವಿ ಆ ಭಾಗದಲ್ಲಿ ಭೂಗತ ಚಳವಳಿಯ ಅಧ್ವರ್ಯು. ಆಶ್ರಮದಲ್ಲಿದ್ದೇ ಚಳವಳಿಯಲ್ಲಿ ಶ್ರೀ ನಾರಾಯಣ ಶ್ರೀ ವಡವಿ ಅವರ ಜೊತೆ ಸಹಕರಿಸಿದರು. ಮುಂದೆ ಆಶ್ರಮಕ್ಕೆ ಬೀಗ. ಅಕ್ಟೋಬರ್ ಎರಡು ಗಾಂಧೀ ಜಯಂತಿಯ ದಿನ ಬೆಳಗ್ಗೆ ೭ಕ್ಕೆ ಇತರ ಮೂವರ ಜೊತೆ ಶ್ರೀ ನಾರಾಯಣ ಹುದಲಿ ಊರಲ್ಲಿ ಪ್ರಭಾತ ಫೇರಿ ನಡೆಸಿದರು. ಊರ ಜನರೂ ಮೆರವಣಿಗೆ

ಯಲ್ಲಿ ಸೇರಿಕೊಂಡರು. ಅದೇ ದಿನ ಬಂಧನ. ಬೆಳಗಾವಿಯಲ್ಲಿ ವಿಚಾರಣೆ, ಮೂರು ತಿಂಗಳ ಶಿಕ್ಷೆ, ದಂಡ. ೧೯೪೩ರ ಜನವರಿ ೨೦ರಂದು ಹಿಂಡಲಗಿ ಜೈಲಿನಿಂದ ಬಿಡುಗಡೆ. ಬಿಡುಗಡೆಯ ನಂತರ ಊರಿಗೆ ಬಂದರು. ಮುಂದೆ ೧೯೪೪ರಲ್ಲಿ ಮಹಾತ್ಮರ ಬಿಡುಗಡೆ ಆದಾಗ ಅವರನ್ನು ಕಾಣಲು ಮೈಸೂರಿನಿಂದ ಹೋಗಿದ್ದ ನಿಯೋಗದಲ್ಲಿ ಸೇರಿಕೊಂಡು ಮುಂಬೈಯಾತ್ರೆ. ಮಹಾತ್ಮರ ದರ್ಶನ.

ಆಮೇಲೆ ಊರಲ್ಲಿದ್ದಾಗ ಸಾಕ್ಷರತಾ ಪ್ರಸಾರದ ಬಗ್ಗೆ ಬೇರೆ ಬೇರೆ ಸಭೆಗಳು ನಡೆದಲ್ಲೆಲ್ಲ ತಾವೇ ಬರೆದ ಹಾಡುಗಳನ್ನು ಹಾಡಿ ಪ್ರಚಾರಕಾರ್ಯ ನಡೆಸಿದರು. ಈ ರಚನಾತ್ಮಕ ಕಾರ್ಯ ಕೆಲಕಾಲ ನಡೆಯಿತು. ಮುಂದೆ ಶ್ರೀ ಎಚ್.ಕೆ. ವೀರಣ್ಣಗೌಡರ ಕರೆಯಂತೆ ಬೆಂಗಳೂರಿಗೆ ಬಂದು ಅರಳೇಪೇಟೆಯಲ್ಲಿನ ಮೈಸೂರು ಕಾಂಗ್ರೆಸ್ ಕಛೇರಿಯಲ್ಲಿ ಸ್ವಯಂ ಸೇವಕನಾಗಿ ದುಡಿತ. "ಸ್ವಾತಂತ್ರ್ಯಪೂರ್ವದ ಕಾಂಗ್ರೆಸ್‌ನಲ್ಲಿ ಯಾರಿಗೂ ಸಂಬಳ ಸಾರಿಗೆಯಿಲ್ಲ. ಒಬ್ಬ ಕಾರ್ಯಕರ್ತ ಎಲ್ಲ ಕೆಲಸಗಳನ್ನೂ ಮಾಡಬೇಕು–ಕಛೇರಿಯ ಕಸಗುಡಿಸುವುದರಿಂದ ಹಿಡಿದು, ಅಡಿಗೆ, ಟೈಪಿಂಗ್, ಲೆಕ್ಕಪತ್ರ ಬರೆಯುವುದು, ಇತ್ಯಾದಿ. ಆಗ ಬೆಂಗಳೂರು ರೈಲ್ವೆಸ್ಟೇಶನಿನಲ್ಲಿ ಎರಡಾಣೆಗೆ ಒಂದರಂತೆ ಅನ್ನದ ಪೊಟ್ಟಣ ಮಾರುತ್ತಿದ್ದರು. ಒಂದೊಂದು ದಿನ ಆ ಪೊಟ್ಟಣವೇ ನಮಗೆ ಗತಿ. ಎರಡು ಪೊಟ್ಟಣ ತಂದು ಮೂರು ಜನ ಉಂಡದ್ದೂ ಉಂಟು. ಇಷ್ಟೆಲ್ಲ ಅನಾನುಕೂಲಗಳು ಇದ್ದರೂ ಕಾಂಗ್ರೆಸ್ ಕೆಲಸ ಮಾಡುವುದರಲ್ಲಿ ನಮಗೆ ಸ್ವಲ್ಪವೂ ಬೇಸರವಾಗುತ್ತಿರಲಿಲ್ಲ." ಎಂದಿದ್ದಾರೆ.

ಶ್ರೀ ಕೆ.ಸಿ. ರೆಡ್ಡಿಯವರು ಕಾಂಗ್ರೆಸ್ ಅಧ್ಯಕ್ಷರಾದಾಗ, ಜವಾಬ್ದಾರಿ ಸರಕಾರದ ಪರ ಹೋರಾಟ ತೀವ್ರಗೊಳಿಸಲು ಕಾಂಗ್ರೆಸ್ ಕಾರ್ಯಕರ್ತರು ಆರಂಭಿಸಿದ 'ವಾರ್ತಾ' ಎಂಬ ಪತ್ರಿಕೆಯ ವ್ಯವಸ್ಥಾಪಕರಾಗಿ ಶ್ರೀ ವೀರಣ್ಣಗೌಡರ ಕೇಳಿಕೆಯಂತೆ ಶ್ರೀ ನಾರಾಯಣ ದುಡಿದರು. ಜವಾಬ್ದಾರಿ ಸರಕಾರವು ೧೯೪೭ರ ಅಕ್ಟೋಬರ್‌ನಲ್ಲಿ ಸ್ಥಾಪಿತವಾದಾಗ ಆ ಹುದ್ದೆ ತ್ಯಜಿಸಿದರು.

(೧೯೮೪)

ಅದ್ಭುತ ಕಾರ್ಯಶಕ್ತಿಯ ಅಪರೂಪದ ವ್ಯಕ್ತಿ

■ ಚೆನ್ನವೀರ ಕಣವಿ

ಪಂಡಿತರತ್ನಂ ಜಿ. ಶಿವಮೂರ್ತಿಶಾಸ್ತ್ರಿಗಳು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ಆಜೀವ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಲು ಸಾಕಷ್ಟು ಪ್ರಯತ್ನಪಟ್ಟರು. ಆ ಸಂದರ್ಭದಲ್ಲಿ ಅಂದರೆ, ೧೯೫೭ರಲ್ಲಿ ನಾನು ಪರಿಷತ್ತಿನ ಆಜೀವ ಸದಸ್ಯನಾದೆ. ಧಾರವಾಡದಲ್ಲಿ, ೩೯ನೇ ಕನ್ನಡ ಸಾಹಿತ್ಯ ಸಮ್ಮೇಳನ ೧೯೫೭ರಲ್ಲಿ ಶ್ರೀ ಕುವೆಂಪು ಅವರ ಅಧ್ಯಕ್ಷತೆಯಲ್ಲಿ ನೆರವೇರಿದಾಗ ಆ ಸಮ್ಮೇಳನದ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡುವ ಅವಕಾಶ ನನಗೆ ಒದಗಿದ್ದಿತು. ಅಂದಿ ನಿಂದ ಸಾಹಿತ್ಯ ಪರಿಷತ್ತಿನ ಕಾರ್ಯಕಲಾಪಗಳ ಜೊತೆಗೆ ನನ್ನ ಸಂಬಂಧ ಬೆಳೆದು ಬಂದಿತು. ಅದಕ್ಕೂ ಮೊದಲು ಮೈಸೂರಿನಲ್ಲಿ ಶ್ರೀ ಕಾರಂತರ ಅಧ್ಯಕ್ಷತೆಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಸಾಹಿತ್ಯಗೋಷ್ಠಿ ಹಾಗು ಕವಿ ಸಮ್ಮೇಳನದಲ್ಲಿ ನಾನು ಭಾಗವಹಿಸಿದ್ದೆ.

ಶ್ರೀ ಜಿ. ನಾರಾಯಣರ ಪರಿಚಯ ನನಗಾದದ್ದು ೧೯೬೯ರಲ್ಲಿ, ಅವರು ಪರಿಷತ್ತಿನ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಲು ಪ್ರಾರಂಭಿಸಿದ ಮೇಲೆ. ಅವರನ್ನು ಮೊದಲ ಸಲ ಕಂಡು ಮಾತನಾಡಿದಾಗ, ಅವರ ಸಾದಾ ಖಾದಿ ವೇಷಭೂಷಣದಲ್ಲಿ, ಸೌಮ್ಯನಗೆಯ, ಒಲಿದು ಒಲಿಸಿಕೊಳ್ಳುವ ರೀತಿಯಲ್ಲಿ ಗಾಂಧಿಮಾರ್ಗದ ನಿಷ್ಠಾವಂತ ಕಾರ್ಯಕರ್ತನೊಬ್ಬನ ನಿರಾಡಂಬರ ವ್ಯಕ್ತಿತ್ವ ಗೋಚರಿಸಿತು. ನೋಡಲು ವಾಮನಮೂರ್ತಿಯಂತಿದ್ದ ಅವರು ಬೆಂಗಳೂರು ನಗರದ ಮಾಜಿ ಮೇಯರರೆಂಬುದನ್ನು ನಂಬಲಿಕ್ಕೂ ಅಸಾಧ್ಯವೆನಿಸಿತು. ಪರಿಷತ್ತಿನ ಹಿಂದಿನ ಅಧ್ಯಕ್ಷರು ಹಾಗೂ ಅವರಲ್ಲಿ ಕೆಲವರಿಗಿದ್ದ ವಿಶಿಷ್ಟವಾದ

ಸಾಹಿತ್ಯದ ವ್ಯಕ್ತಿತ್ವವನ್ನು ಕೆಲಮಟ್ಟಿಗೆ ಅರಿತಿದ್ದ ನನಗೆ ಜಿ. ನಾರಾಯಣರ ಬಗ್ಗೆ ಕುತೂಹಲವುಂಟಾಗದೆ ಇರಲಿಲ್ಲ. ಮುಂದೆ ಅಲ್ಪಾವಧಿಯಲ್ಲಿಯೇ ಹಲವಾರು ಹೊಸ ಹೊಸ ಯೋಜನೆಗಳನ್ನು ಹುಟ್ಟುಹಾಕಿ, ಅವನ್ನು ಫಲಪ್ರದವಾಗಿ ಕಾರ್ಯಗತಗೊಳಿಸುತ್ತ, ಪರಿಷತ್ತಿನ ಕಾರ್ಯವ್ಯಾಪ್ತಿಯನ್ನು ಯಶಸ್ವಿಯಾಗಿ ವಿಸ್ತಾರಗೊಳಿಸುತ್ತ ಸಾಗಿದ ಅವರ ಅದ್ಭುತ ಕಾರ್ಯಶಕ್ತಿಯನ್ನು ಕಂಡು ಅವರ ಬಗ್ಗೆ ನನ್ನಲ್ಲಿ ಸಹಜವಾಗಿ ಅಚ್ಚರಿ, ಆದರ, ಅಭಿಮಾನ ಉಂಟಾದವು.

ಜಿ. ನಾರಾಯಣ ಅವರು ಅಧ್ಯಕ್ಷರಾಗಿದ್ದ ಒಂದು ದಶಕದ ಅವಧಿಯಲ್ಲಿ ಪರಿಷತ್ತಿನ ಪ್ರಯೋಜನವನ್ನು ಸಮಗ್ರ ಕರ್ನಾಟಕಕ್ಕೆ ಒದಗುವಂತೆ ಮಾಡುವಲ್ಲಿ ಅವರು ತಮ್ಮ ಎಲ್ಲ ಕಾಲವನ್ನು, ಶಕ್ತಿಯನ್ನು ಅದಕ್ಕೆ ಧಾರೆಯೆರೆದದ್ದು ಪರಿಷತ್ತಿನ ಇತಿಹಾಸದಲ್ಲಿಯೇ ಒಂದು ಅಪೂರ್ವ ಸಾಧನೆಯೆಂದರೆ ತಪ್ಪಾಗದು. ತ್ರೈವಾರ್ಷಿಕ ಯೋಜನೆಯ ಮೂಲಕ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಪರಿಷತ್ತಿನ ಕೇಂದ್ರಗಳ ಸ್ಥಾಪನೆ, ಜಿಲ್ಲಾ ಸಾಹಿತ್ಯ ಸಮ್ಮೇಳನಗಳ ವ್ಯವಸ್ಥೆ, ಆಡಳಿತ ಭಾಷೆಯಾಗಿ ಕನ್ನಡದ ಬಲಪಡಿಸುವಿಕೆ, ಕನ್ನಡೇತರರಿಗೆ ಕನ್ನಡದ ಶಿಕ್ಷಣ, ಹೊರನಾಡಿನಲ್ಲಿ ಕನ್ನಡದ ಪ್ರಚಾರ–ಇದೆಲ್ಲವೂ ಅವರ ಕರ್ತೃತ್ವಶಕ್ತಿಯ ದ್ಯೋತಕವಾಗಿವೆ. ಹಾಗೆಯೇ ಮುಂದೆ ೧೯೭೩ರಿಂದ ಅವರ ಪಂಚವಾರ್ಷಿಕ ಯೋಜನೆಯ ಯಶಸ್ಸಿಗೂ ಇದೇ ದಾರಿ ಮಾಡಿಕೊಟ್ಟಿತು. ಕನ್ನಡ ನಾಡಿನ ಒಳಗೂ ಹೊರಗೂ ಎಡೆಬಿಡದೆ ಸಂಚರಿಸಿ ಜನತೆಯನ್ನು, ಬೇರೆ ಬೇರೆ ಸಂಘ ಸಂಸ್ಥೆಗಳನ್ನು ಪರಿಷತ್ತಿನ ಕಾರ್ಯಕ್ಕೆ ಅವರು ಅಣಿಗೊಳಿಸಿದರು.

ಪರಿಷತ್ತಿನ ಸುವರ್ಣ ಮಹೋತ್ಸವ ಹಾಗೂ ವಜ್ರ ಮಹೋತ್ಸವದ ರಾಷ್ಟ್ರೀಯ ಸ್ವರೂಪದ ಕಾರ್ಯಕ್ರಮಗಳು, ಸುವರ್ಣ ಮಹೋತ್ಸವ ಕಟ್ಟಡ, ಜನಸಾಮಾನ್ಯರಿಗೂ ಎಟುಕಬಲ್ಲ ಬೃಹತ್ ಪ್ರಮಾಣದ ಹಾಗೂ ವೈವಿಧ್ಯಪೂರ್ಣವಾದ ಪುಸ್ತಕ ಪ್ರಕಟನೆ, ಜನಪದ ಸಾಹಿತ್ಯ ಮತ್ತು ಕಲೆಗಳ ರಕ್ಷಣೆಗೆ ಅತ್ಯವಾದ ಉಪಾಯ ಮತ್ತು ಯೋಜನೆಗಳು–ಹೀಗೆ ಹಲವು ಬಗೆಯ ಕನ್ನಡದ ಕೆಲಸಗಳು ಜಿ. ನಾರಾಯಣರ ಕೈಯಲ್ಲಿ ಸಾರ್ಥಕತೆ ಪಡೆದವು. 'ಚಿನ್ನದ ಬೆಳಸು' 'ಕೌಸ್ತುಭ'ದಂಥ ಅಮೂಲ್ಯವಾದ ಸಂಸ್ಮರಣ ಸಂಪುಟಗಳು ಪ್ರಕಟಗೊಂಡವು. ಭಾರತ ಸ್ವಾತಂತ್ರ್ಯದ ಬೆಳ್ಳಿಹಬ್ಬವನ್ನು ಸಾಹಿತ್ಯಪ್ರಸಾರ ಯೋಜನೆಯಾಗಿ ಆಚರಿಸಿ, ಅದನ್ನು 'ಪುಸ್ತಕ ವರ್ಷ'ಕ್ಕೆ ಸಂಯೋಜಿಸಿ, 'ಪುಸ್ತಕ ಭಾಗ್ಯ'ವನ್ನು ಉಪಯುಕ್ತವಾದ ರೀತಿಯಲ್ಲಿ ಪ್ರಕಟಿಸಿ, ಜಿಲ್ಲೆ ಜಿಲ್ಲೆಗಳಲ್ಲಿ ಪುಸ್ತಕ ಪ್ರದರ್ಶನ ಹಾಗೂ ಮಾರಾಟವನ್ನು ಏರ್ಪಡಿಸಿ–ಒಂದೊಂದನ್ನೂ ಪರಿಷತ್ತಿನ ದಾರಿಯಲ್ಲಿ ಮೈಲುಗಲ್ಲಾಗಿ ನಿಲ್ಲಿಸಿದರು. 'ಪರಿಷತ್ತಿಗೆ ಸಾಕ್ಷಾತ್ ನಾರಾಯಣ ಸ್ವರೂಪದಲ್ಲಿದ್ದಾರೆ ಜಿ. ನಾರಾಯಣ' ಎಂಬ ಶ್ರೀ ಕುವೆಂಪು ಅವರ ಮೆಚ್ಚು ನುಡಿಯಲ್ಲಿ ಆ ತಲೆಮಾರಿನ ಹಿರಿಯರೆಲ್ಲರ ಅನಿಸಿಕೆ ಅಡಗಿದೆ. ತಾವು ಸಾಹಿತಿಗಳೆಂದೂ, ವಿದ್ವಾಂಸರೆಂದೂ ಎಲ್ಲೂ ಹೇಳಿಕೊಳ್ಳದೆ ಇಪ್ಪತ್ತೈದು ವರ್ಷಕ್ಕೂ ಮೇಲ್ಪಟ್ಟು 'ವಿನೋದ' ಪತ್ರಿಕೆಯನ್ನು ತಪ್ಪದೆ ನಡೆಸಿಕೊಂಡು ಬಂದಿರುವ ನಾರಾಯಣರು 'ಸಾಹಿತ್ಯದ ಕಾಳಜಿಯಿಲ್ಲದೆಯೇ ಪರಿಷತ್ತನ್ನು ಬೃಹದಾಕಾರವಾಗಿ ಬೆಳೆಸಿದರೆ'ಂಬ ಟೀಕೆಯನ್ನು ಹೇಗೆ ನಂಬುವದು?

ಇವರ ದಕ್ಷತೆ, ಛಲಗಾರಿಕೆ, ಸತತ ಪರಿಶ್ರಮ, ಸಾತ್ವಿಕತೆ–ಮೊದಲಾದ ಗುಣಗಳನ್ನು ಮೆಚ್ಚಿಕೊಂಡವರಲ್ಲಿಯೂ ಕೆಲವರಿಗೆ ಇವರ ಈ ಎಲ್ಲ ಕೆಲಸಗಳು, ಸಾಹಿತ್ಯಮೇಳ, ಜಾತ್ರೆ, ರಥೋತ್ಸವವಾಗಿ ಕಂಡವು. ಬದಲಾದ ಪರಿಸರ, ಭಿನ್ನವಾದ ವಾತಾವರಣದಲ್ಲಿ ಪರಿಷತ್ತಿನ ಧ್ಯೇಯ ಧೋರಣೆಗಳಲ್ಲಿ ಬದಲಾವಣೆಯನ್ನು ಬಯಸಿದ ಕೆಲ ಸೃಜನಶೀಲ ಲೇಖಕರ

ಆಕ್ರೋಶಕ್ಕೂ ಇವರು ತುತ್ತಾಗಬೇಕಾಯಿತು. ಆದರೆ 'ಇದು ಕೇವಲ ಸಾಹಿತಿಗಳ ಪರಿಷತ್ತಲ್ಲ. ಸಾಹಿತ್ಯದಲ್ಲಿ ಆಸಕ್ತಿ ಇರುವವರೆಲ್ಲರೂ ಇದರಲ್ಲಿ ಪಾಲ್ಗೊಳ್ಳಬೇಕು, ಪರಿಷತ್ತು ಜನತಾ ವಿಶ್ವವಿದ್ಯಾಲಯವಾಗಬೇಕು' ಎಂಬ ಬಿ.ಎಂ.ಶ್ರೀ.ಯವರ ಕನಸನ್ನು ನನಸನ್ನಾಗಿ ಮಾಡುವಲ್ಲಿ ನಾರಾಯಣರು ಪ್ರಾಮಾಣಿಕವಾಗಿ ದುಡಿದದ್ದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಸಾಕಷ್ಟು ಆಡಳಿತದ ಅನುಭವವನ್ನು ಪಡೆದಿದ್ದ ಅವರು ಯಾವುದೇ ಯೋಜನೆಯನ್ನು ಕೈಗೆತ್ತಿಕೊಳ್ಳುವ ಪೂರ್ವದಲ್ಲಿ ಸಾಹಿತ್ಯಜ್ಞರ ಸಲಹೆಯನ್ನು ಪಡೆದುಕೊಂಡೇ ಮುಂದುವರಿಯುತ್ತಿದ್ದರಲ್ಲದೆ ಸರ್ವಾಧಿಕಾರಿಯಂತೆ ಅವರು ಎಂದೂ ನಡೆದುಕೊಳ್ಳಲಿಲ್ಲವೆಂದು ಕೇಳಿದ್ದೇನೆ. ಸರಕಾರದಿಂದ ಹಣ ಪಡೆದ ಮಾತ್ರಕ್ಕೆ ಪರಿಷತ್ತು ಸರಕಾರದ ಅಧೀನ ಕಚೇರಿಯಾಗಬೇಕಿಲ್ಲ ಎಂಬ ಪ್ರಜ್ಞೆಯೂ ಅವರಿಗಿದ್ದಿತು. ಇಂದು ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ರಾಜಕೀಯ ಪ್ರವೇಶ ಮಾಡಿರುವಾಗ, ಪರಿಷತ್ತಿನ ಕೆಲಸಗಳನ್ನು ಪಟ್ಟು ಹಿಡಿದು ಮುಗಿಸಲು ಅವರು ರಾಜಕಾರಣಿಗಳನ್ನು ಅನುಸರಿಸಬೇಕಾಗಿ ಬಂದದ್ದು ಅನಿವಾರ್ಯವಿರಬಹುದು.

ಕನ್ನಡ ಸಾಹಿತ್ಯ ಪರಿಷತ್ತಿನ ಪುರೋಭಿವೃದ್ಧಿಯ ಮೂಲಕ ಜಿ. ನಾರಾಯಣರ ವ್ಯಕ್ತಿತ್ವದ ಹಲವು ಮುಖಗಳು ಇನ್ನಿಷ್ಟು ಪ್ರಕಾಶಗೊಂಡವು. ಅವರು ಆಡದೆ ಮಾಡುತ್ತಾರೆ; ಆಡಿಕೊಳ್ಳುವವರೂ ಅಚ್ಚರಿಗೊಳ್ಳುವಂತೆ ಮಾಡುತ್ತಾರೆ. ಪರಿಷತ್ತು ಹುಟ್ಟಿದ ಕಾಲದಿಂದಲೂ ಕನ್ನಡ ನುಡಿ, ಸಾಹಿತ್ಯಗಳಿಗಾಗಿ ದುಡಿಯಲು ಯತ್ನಿಸಿದ ದಿ॥ ವಿ.ಸೀ. ಯವರು ಅಭಿಪ್ರಾಯಪಟ್ಟಂತೆ ನಾರಾಯಣರ ಅಧಿಕಾರಾವಧಿಯಲ್ಲಿ ಸಾಧಿಸಿರುವ ಕಾರ್ಯ ಮಹತ್ತರವಾದದ್ದು. ಪರಿಷತ್ತು ಒಟ್ಟು ನಾಡಿನ ಸಾಹಿತ್ಯಕ್ಕಲ್ಲದೆ ಸಂಸ್ಕೃತಿಯ ಸಾಧನೆ, ಪ್ರಚಾರಗಳಿಗೆ ನೆಲೆಯಾಯಿತು. ಒಂದು ದೌರ್ಭಾಗ್ಯದ ಕಾಲವನ್ನು ನಿವಾರಿಸಿ ಜನಸಾಮಾನ್ಯರ ಹೃದಯವನ್ನು ಗೆದ್ದುಕೊಂಡು ಪರಿಷತ್ತಿನ ಸೌಭಾಗ್ಯವನ್ನು ಒಂದು ಅರ್ಥದಲ್ಲಿ ಹೆಚ್ಚಿಸಿದವರು ಜಿ. ನಾರಾಯಣರು. ವಿಧಾಯಕವಾದ ರೀತಿಯಲ್ಲಿ, ವಿಚಾರಪೂರ್ಣವಾಗಿ ಸಾರ್ವಜನಿಕ ಸೇವೆಗೆ ತಮ್ಮನ್ನು ಸಮರ್ಪಿಸಿಕೊಂಡು, ಒಂದಲ್ಲ ಒಂದು ಕನ್ನಡದ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡೇ ಇರುವ ಜಿ. ನಾರಾಯಣರಂಥ ಸ್ನೇಹಪೂರ್ಣ ನಿರಾಡಂಬರ ವ್ಯಕ್ತಿಗಳು ತೀರ ವಿರಳ. ದಿ. ಟಿ.ಟಿ. ಶರ್ಮಾ ಹಾಗೂ ಡಾ॥ ರಂ. ಶ್ರೀ. ಮುಗಳಿಯವರೊಂದಿಗೆ ಶ್ರೀ ಜಿ. ನಾರಾಯಣರು ಪರಿಷತ್ತಿನ ಯಾವುದೋ ಒಂದು ಕೆಲಸಕ್ಕಾಗಿ ಧಾರವಾಡಕ್ಕೆ ಬಂದಾಗ ವಿಶ್ವವಿದ್ಯಾಲಯದ ಪ್ರಸಾರಾಂಗದ ಕೆಲವು ಪ್ರಕಟಣೆಗಳ ಬಿಡುಗಡೆಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿದ್ದಿತು. ಕರ್ನಾಟಕ ವಿಶ್ವವಿದ್ಯಾಲಯದ ತುಂಬು ಆವರಣವನ್ನು ಅದೇ ಮೊದಲು ಕಣ್ತುಂಬ ಕಂಡ ಜಿ. ನಾರಾಯಣರು ತಮ್ಮ ಭಾಷಣದಲ್ಲಿ 'ದಿ॥ ಪಾವಟೆಯವರ ವ್ಯಕ್ತಿತ್ವದ ಹಿರಿಮೆಯನ್ನು ನಾನು ಈಗ ಪೂರ್ಣ ಅರಿಯುವಂತಾಯಿತು' ಎಂದರು. ಒಬ್ಬ ವ್ಯಕ್ತಿಯ ಯೋಗ್ಯತೆಯನ್ನು ಅರಿಯಬೇಕಾದರೂ ಆ ಯೋಗ್ಯತೆಯ ಕೆಲ ಅಂಶಗಳಾದರೂ ನಮ್ಮಲ್ಲಿದ್ದರೆ ಸಾಧ್ಯ ಎಂದು ಹೇಳಲಾಗುತ್ತದೆ. ಅರುವತ್ತು ದಾಟಿರುವ, ದಣಿವರಿಯದ ಈ ನಿಷ್ಕಳಂಕ ವ್ಯಕ್ತಿಯ ಅಭಿನಂದನದಲ್ಲಿ ಪಾಲುಗೊಳ್ಳುವ ಈ ಸಂದರ್ಭದಲ್ಲಿ ಮೇಲಿನ ಮಾತನ್ನು ನಾನು ಮತ್ತೆ ಮೆಲುಕು ಹಾಕುವಂತಾಯಿತು.

(೧೯೮೪)

ಎಲ್ಲರಂಥವರಲ್ಲ ನಮ್ಮ ನಾರಾಯಣ

■ ಎಚ್.ಎಲ್. ನಾಗೇಗೌಡ

ಸುಮಾರು ೨೦ ವರ್ಷಗಳ ಕಾಲ ರಾಜ್ಯದ ನಾನಾ ಕಡೆ ಸರ್ಕಾರಿ ಹುದ್ದೆಯಲ್ಲಿದ್ದು ೧೯೭೯ರಲ್ಲಿ ನಾನು ಬೆಂಗಳೂರಿಗೆ ಲೇಬರ್ ಕಮೀಷನರಾಗಿ ಬಂದೆ. ಅಲ್ಲಿಯವರೆಗೆ ನನಗೂ ನಾರಾಯಣ ಅವರಿಗೂ ಪರಿಚಯವಿರಲಿಲ್ಲ. ಅವರ ಹೆಸರು ಕೇಳಿದ್ದೆನೋ ಏನೋ. ನಾನು ಬೆಂಗಳೂರಿಗೆ ಬಂದಾಗ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಅದಕ್ಕೆ ಮುನ್ನ ನಗರ ಕಾರ್ಪೊರೇಷನ್ನಿನ ಮೇಯರ್ ಆಗಿ ಸೇವೆ ಸಲ್ಲಿಸಿ ಹೆಸರು ಗಳಿಸಿದ್ದರು. ಬೆಂಗಳೂರಿಗೆ ಬಂದವರ ಮೇಲೆ ಸದಾ ಕಣ್ಣಿಟ್ಟುಕೊಂಡಿರುತ್ತಿದ್ದ ಅವರು ಒಮ್ಮೆ ನನ್ನನ್ನು ಸಾಹಿತ್ಯ ಪರಿಷತ್ತಿನ ಒಂದು ಸಭೆಗೆ ಆಹ್ವಾನಿಸಿದರು. ಅಂದಿನಿಂದ ಅವರ ನನ್ನ ಸ್ನೇಹ ಆರಂಭವಾಗಿ ಇಂದಿನವರೆಗೂ ನಡೆದುಕೊಂಡು ಬಂದಿದೆ. ಒಮ್ಮೆ ಒಬ್ಬರ ಸಂಪರ್ಕ ಪಡೆದರೆ ಅವರನ್ನು ಸುಲಭವಾಗಿ ಬಿಟ್ಟುಕೊಡುವ ವ್ಯಕ್ತಿ ಅಲ್ಲ ಅವರು.

ಇಷ್ಟರಲ್ಲಿ ನನ್ನ "ಸೋಬಾನೆ ಚಿಕ್ಕಮ್ಮನ ಪದಗಳು" ಎಂಬ ಗ್ರಂಥದ ಮುದ್ರಣ ಆರಂಭವಾಗಿತ್ತು. ಅದನ್ನು ಸಾಹಿತ್ಯ ಪರಿಷತ್ತಿನ ಮೂಲಕ ಏಕೆ ಪ್ರಕಟಿಸಬಾರದೆಂದು ಕೇಳಿದರು. ನಾನು ಆಗಲಿ ಎಂದೆ. ಆ ಪುಸ್ತಕದ ಪ್ರಕಟಣೆ ಮತ್ತು ಬಿಡುಗಡೆ ಆದುವು. ಆ ಸಂದರ್ಭದಲ್ಲಿ ಸೋಬಾನೆ ಚಿಕ್ಕಮ್ಮನನ್ನು ಬೆಂಗಳೂರಿಗೆ ಕರೆಸಿ ಆಕೆಯನ್ನು ಪರಿಷತ್ತಿನ ವತಿಯಿಂದ ಸನ್ಮಾನಿಸಿದರು. ಚಿಕ್ಕಮ್ಮ ಒಬ್ಬ ಹಳ್ಳಿಯ ಹೆಂಗಸು. ಅಂಥವಳನ್ನು ಸನ್ಮಾನಿಸುವಾಗ ನಾರಾಯಣ ಅವರು ಮಾಡಿದ ವ್ಯವಸ್ಥೆ ಆಕೆಯನ್ನು ನೋಡಿಕೊಂಡ

ರೀತಿ ಕಂಡು ನಾನು ಆಶ್ಚರ್ಯಪಟ್ಟೆ. ಆ ಹಳ್ಳಿಯ ಗಮಾರಳನ್ನು ಒಬ್ಬ ಮಹಾಮಹಿಳೆಯೋ ಎಂಬಂತೆ ಕಂಡುದು ನಾರಾಯಣ ಅವರ ಹಿರಿಮೆಯನ್ನು ಎತ್ತಿ ತೋರಿಸಿತು. ಜನರಲ್ ಕಾರಿಯಪ್ಪ ಅವರನ್ನು ಸತ್ಕರಿಸಲಿ ಹಳ್ಳಿಯ ಹೆಂಗಸೊಬ್ಬಳನ್ನು ಸತ್ಕರಿಸಲಿ ಅವರು ವಹಿಸುತ್ತಿದ್ದ ಶ್ರದ್ಧೆ ಆಸಕ್ತಿ ಪ್ರೀತಿ ವಿಶ್ವಾಸಗಳು ಒಂದೇ ಬಗೆ.

ಸೋಬಾನೆ ಚಿಕ್ಕಮ್ಮನಿಂದ ಸಾಹಿತ್ಯ ಪರಿಷತ್ತಿಗೆ ಜಾನಪದದ ಮತ್ತು ಜನಪದ ಕಲಾವಿದರ ಪ್ರವೇಶ ಆಯಿತೆನ್ನಬಹುದು. ಅಲ್ಲಿಯವರೆಗೆ ಸಾಹಿತ್ಯ ಸಮ್ಮೇಳನಗಳಲ್ಲಿ ಅಲ್ಲಷ್ಟು ಇಲ್ಲಷ್ಟು ಮಾತಿಗೆ ಮಾತ್ರ ವಸ್ತುವಾಗಿದ್ದ ಜಾನಪದ ನಾರಾಯಣರ ಕಾಲದಲ್ಲಿ ಪ್ರವಾಹದಂತೆ ಸಾಹಿತ್ಯ ಪರಿಷತ್ತನ್ನು ಹೊಕ್ಕಿತು. ನಾನೊಂದು ಯೋಜನೆ ತಯಾರಿಸಿಕೊಟ್ಟೆ. ಜಾನಪದದ ಬಗೆಗೆ ಏನೇನು ಕೆಲಸಗಳನ್ನು ಪರಿಷತ್ತು ಮಾಡಬಹುದೆಂದು ಹೇಳಿದೆ. ಈ ಯೋಜನೆಗಳನ್ನು ಕೈಗೆತ್ತಿಕೊಂಡು ಜಿಲ್ಲಾಮಟ್ಟದ ಮತ್ತು ರಾಜ್ಯಮಟ್ಟದ ಜನಪದ ಕಲಾಮೇಳ, ಗೋಷ್ಠಿ, ಚಿತ್ರೀಕರಣ, ಜನಪದ ಕಲೆಗಳನ್ನು ಕುರಿತು ಗ್ರಂಥ ಪ್ರಕಟಣೆ ಆದುವು. ಇವೆಲ್ಲಾ ನಾರಾಯಣರಿಗೆ ಕೀರ್ತಿ ತಂದಂತಹ ಕಾರ್ಯಗಳು.

ಯಾವ ಜಾನಪದ ಕಾರ್ಯಕ್ರಮವಿದ್ದರೂ ನಾರಾಯಣ ಅವರು ನನ್ನನ್ನು ತಪ್ಪದೇ ಕರೆದುಕೊಂಡು ಹೋಗುತ್ತಿದ್ದರು. ಆ ಸಂದರ್ಭದಲ್ಲಿ ಮತ್ತು ಶ್ರೀ ಕೆ. ನಾರಾಯಣಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ರಚಿಸಲ್ಪಟ್ಟ ಕನ್ನಡ ಭಾಷಾ ಸಮಿತಿಯ ಸದಸ್ಯರಾಗಿ ನಾನೂ ಅವರೂ ಇಡೀ ಕರ್ನಾಟಕದಲ್ಲಿ ಅಡ್ಡಾಡಿದ್ದೇವೆ. ಆಗೆಲ್ಲಾ ಅವರ ಒಳ ಹೊರಗನ್ನು ಚೆನ್ನಾಗಿ ಅರಿತುಕೊಂಡೆ. ಅನೇಕ ಗಣ್ಯವ್ಯಕ್ತಿಗಳಲ್ಲಿ ನಾವು ಕಾಣುವುದು ದ್ವಿಮುಖ ವರ್ತನೆ. ಒಳಗೊಂದು, ಹೊರಗೊಂದು ; ಆಡುವುದೊಂದು, ಮಾಡುವುದೊಂದು. ಇವು ನಾರಾಯಣ ಅವರಿಂದ ದೂರ. ಅವರ ಕೈ ಬಾಯಿ ಶುದ್ಧ. ಯಾರಿಗೂ ಸಂದೇಹ ಬರದ ರೀತಿಯಲ್ಲಿ ಅವರ ವರ್ತನೆ. ಒಮ್ಮೆ ನಾನೂ ಅವರೂ ಒಂದೇ ಕೋಣೆಯಲ್ಲಿದ್ದಾಗ–ಯಾವಾಗಲು ನಾವಿಬ್ಬರೂ ಒಟ್ಟಿಗೆ ಇರುತ್ತಿದ್ದುದು. ನೀರು ತುಂಬಿದ್ದ ಒಂದು ವಿಸ್ಕಿಬಾಟ್‌ಲನ್ನು ನೋಡಿದರು. ಆ ಬಾಟ್‌ಲಿನ ಮೇಲೆ ಇದ್ದ ಲೇಬಲ್ ಹಾಗೇ ಇತ್ತು. ನಾರಾಯಣ ಅವರು ಆ ಬಾಟ್‌ಲನ್ನು ನೀರಿನ ಮನೆಗೆ ತೆಗೆದುಹಾಕಿ ಹೊರಗಡೆ ತಂದಿಟ್ಟರು. ಇದು ಸಣ್ಣ ವಿಷಯ, ನಿಜ. ಆದರೆ ಲೇಬಲ್ ಇದ್ದ ಬಾಟ್‌ಲ್ ನೋಡಿದವರಿಗೆ ಸಂದೇಹ ಬರಿಸುವಂತಹ ವಿಷಯ. ಶುದ್ಧ ಬಾಳಿನ ಅವರಲ್ಲಿ ವೈಯಕ್ತಿಕ ಜೀವನಕ್ಕೂ ಸಾರ್ವಜನಿಕ ಜೀವನಕ್ಕೂ ವ್ಯತ್ಯಾಸವಿಲ್ಲ. ಅದೇ ಅವರ ಬಾಳಿನ ಗುಟ್ಟು.

ಇನ್ನೊಂದು ಅವರಲ್ಲಿ ಕಂಡ ಮಹಾಗುಣ ಎಂದರೆ, ಎಂಥದೇ ಪ್ರಸಂಗ ಬಂದರೂ ಅದನ್ನು ಅಲ್ಲಿಗೆ ಮರೆತು ಅದು ನಡೆದಿಲ್ಲವೋ ಎನ್ನುವಂತೆ ವರ್ತಿಸುವುದು. ೧೯೭೭ರಲ್ಲಿ ಶಿವಮೊಗ್ಗೆಯ ಸಾಹಿತ್ಯ ಸಮ್ಮೇಳನ. ಅಷ್ಟು ಹೊತ್ತಿಗಾಗಲೇ ನಾನು ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ (ಆಗ ನಾನು ರಾಜ್ಯದ ಲೋಕಸೇವಾ ಆಯೋಗದಲ್ಲಿದ್ದೆ) ಜಾನಪದದ ಪುನರುಜ್ಜೀವನಕ್ಕೆ ಒಂದು ನೀಲ ನಕಾಸೆಯನ್ನು (Blue

Print) ತಯಾರಿಸಿ ಅದನ್ನು ಸಾರ್ವಜನಿಕರ ಮುಂದೆ ಇಟ್ಟಿದ್ದೆ. ಬೇರೆಲ್ಲಾ ಅಕಾಡೆಮಿಗಳಿದ್ದರೂ, ಇಡೀ ಗ್ರಾಮೀಣರ ಜೀವಸತ್ವವಾದ ಜಾನಪದದ ಸಂರಕ್ಷಣೆಗೆ ಮತ್ತು ಜನಪದ ಕಲಾವಿದರ ಯೋಗಕ್ಷೇಮಕ್ಕೆ ಒಂದು ಅಕಾಡೆಮಿ ಇಲ್ಲವಲ್ಲ ಎಂದು ಅದರ ರಚನೆಯಾಗಬೇಕೆಂದು ಬಹು ಜೋರಾಗಿ ವಾದಿಸಿದ್ದೆ. ಶಿವಮೊಗ್ಗ ಸಾಹಿತ್ಯ ಸಮ್ಮೇಳನದಲ್ಲಿ ಆ ಬಗ್ಗೆ ಒಂದು ನಿರ್ಣಯ ಆಗಬೇಕೆಂದು ಆಗ ನಡೆದ ಜಾನಪದ ಗೋಷ್ಠಿಯ ಅಧ್ಯಕ್ಷನಾಗಿ ಪ್ರತಿಪಾದಿಸಿದೆ. ಆದರೆ ಬಹಿರಂಗ ಸಭೆಯಲ್ಲಿ ಆ ಬಗ್ಗೆ ನಿರ್ಣಯ ಬರಲೇ ಇಲ್ಲ. ಆಗ ಗೊತ್ತಾಯಿತು ವಿಷಯ ನಿಯಾಮಕ ಸಮಿತಿಯಲ್ಲಿ ಆ ನಿರ್ಣಯದ ಕತ್ತುಮುರಿದು ಹಾಕಿದರು ಎಂದು. ಇದನ್ನು ಕೇಳಿ ನನಗಾದ ಆಕ್ರೋಶ ಅಷ್ಟಿಷ್ಟಲ್ಲ.

ಮಾರನೇ ದಿನ ನನ್ನನ್ನು ಕರೆದುಕೊಂಡು ಬೆಂಗಳೂರಿಗೆ ಹೊರಡಲು ನಾನಿದ್ದ ಕಡೆಗೆ ಬಂದ ನಾರಾಯಣ ಅವರ ಮೇಲೆ ನಾನು ರೇಗಾಡಿದೆ. "ನಿಮ್ಮಂತಹ ಜಾನಪದ ದ್ರೋಹಿಗಳು ಬೇಕಿಲ್ಲ. ನೀವೂ.....ಅವರೆಲ್ಲ ಸೇರಿ ಭಾರಿ ಮೋಸ ಮಾಡಿದಿರಿ. ಜನಪದರಿಗೆ ಸಂಬಂಧಪಟ್ಟ ಚಟುವಟಿಕೆಗಳು ಸಾಹಿತ್ಯ ಪರಿಷತ್ತಿನಿಂದ ಬೇರೆಯಾದರೆ ನಿಮ್ಮ ಪ್ರತಿಷ್ಠೆಗೆ ಕುಂದು ಬರುವುದೆಂದು ನೀವೆಲ್ಲಾ ಭಾವಿಸಿ ನಿರ್ಣಯವೇ ಬಹಿರಂಗ ಸಭೆಯಲ್ಲಿ ಬರದಂತೆ ಮಾಡಿದಿರಿ...."–ಹೀಗೆಲ್ಲಾ ನಾನು ಸಿಟ್ಟನ್ನು ಹೇಳಿಕೊಂಡೆ. ನಾರಾಯಣ ಹುಸಿನಗುತ್ತಲೇ ಎಲ್ಲವನ್ನೂ ಕೇಳಿದರು. ಒಂದಿಷ್ಟೂ ಬೇಜಾರು ಮಾಡಿಕೊಳ್ಳದೆ 'ಬನ್ನಿ ಹೇಳ್ತೇನೆ ದಾರಿಯಲ್ಲಿ' ಎಂದು ಉಪಾಯ ಮಾಡಿ ನನ್ನನ್ನು ಕರೆದುಕೊಂಡು ಹೊರಟರು. ದಾರಿಯಲ್ಲಿ ಅವರು ಏನು ಹೇಳಿದರೂ ನನ್ನ ರೋಷವನ್ನು ಇಳಿಸಲು ಸಾಧ್ಯವಾಗಲಿಲ್ಲ. ಆದರೂ ಅವರು ನನ್ನಿಂದ ದೂರ ಆಗಲಿಲ್ಲ. ಇಂಥವಕ್ಕೆಲ್ಲಾ ಒಬ್ಬರಿಂದ ದೂರ ಆಗುವ ವ್ಯಕ್ತಿ ಅಲ್ಲ ನಾರಾಯಣ.

ಈಚೆಗೊಮ್ಮೆ ನಾರಾಯಣ ಅವರನ್ನು ಕೇಳಿದೆ, ಎಂತೆಂತಹ ಜನರನ್ನು ಕಟ್ಟಿಕೊಂಡು ನೀವು ಒದ್ದಾಡುತ್ತಿದ್ದೀರಲ್ಲ ; ನಾನಾಗಿದ್ದರೆ ಅವರನ್ನು ಹತ್ತಿರ ಸೇರಿಸುತ್ತಿರಲಿಲ್ಲ ಎಂದು. ಅದಕ್ಕೆ ನಾರಾಯಣ ಕೊಟ್ಟ ಉತ್ತರ 'ನೋಡಿ, ಹಣ್ಣಿದೆ ಎಂದು ಇಟ್ಟುಕೊಳ್ಳಿ. ಆ ಹಣ್ಣಿನ ಒಂದು ಭಾಗ ತೆಗೆದುಹಾಕಿ ಚೆನ್ನಾಗಿರುವುದನ್ನು ತಿನ್ನುತ್ತೇವೆ. ಹಾಗೆಯೇ ಎಲ್ಲರಲ್ಲೂ ಒಳ್ಳೆಯದು ಕೆಟ್ಟದು ಎರಡೂ ಇರುತ್ತವೆ. ನಾವು ಅವರ ಒಳ್ಳೆಯದನ್ನು ಮಾತ್ರ ಗಮನಿಸಿ ಅವರನ್ನು ಅವರವರಿಗೆ ತಕ್ಕ ಕೆಲಸದಲ್ಲಿ ತೊಡಗಿಸಿ ನಮ್ಮ ಕೆಲಸ ಮಾಡಿಕೊಂಡು ಹೋಗಬೇಕೇ ಹೊರತು ಇಡೀ ಮನುಷ್ಯನನ್ನೇ ದೂರ ಇಡುವುದು ಸರಿಯಲ್ಲ' ಎಂದರು. ಸಾಹಿತ್ಯಕ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಕೆಲಸ ಮಾಡುವವರಿಗೆ ಅವರು ಹೇಳಿದ್ದು ಮುತ್ತಿನಂಥ ಮಾತು. ಈಸಬೇಕು, ಇದ್ದು ಜಯಿಸಬೇಕು–ಇದು ನಾರಾಯಣರ ಒಂದು ಮಹಾಗುಣ. ಈ ಕಾರಣದಿಂದಲೇ ಅವರು ತಮ್ಮ ಸುತ್ತಮುತ್ತ ಅನೇಕ ಕಾರ್ಯಕರ್ತರ ಒಂದು ದೊಡ್ಡ ಬಳಗವನ್ನೇ ಕಟ್ಟಿಕೊಂಡಿದ್ದಾರೆ. ಅವರನ್ನೆಲ್ಲಾ ಒಂದೊಂದು ಕೆಲಸಕ್ಕೆ ಹಚ್ಚಿ ಮಾಡಬೇಕಾದ ಕೆಲಸವನ್ನು ಸೈ ಎನ್ನುವಂತೆ ಮಾಡಿ ಮುಗಿಸುತ್ತಾರೆ. ದ್ವೇಷ ಸಾಧಿಸುವುದು, ಗುಂಪುಗಾರಿಕೆ, ಜಾತೀಯತೆ–ಇವುಗಳಿಂದ ನಾರಾಯಣ ಬಹು ದೂರ.

ಬೆಂಗಳೂರಿನಲ್ಲಿ ಯಾರಿಗೆ ಸನ್ಮಾನ ನಡೆದರೂ ಅವಕ್ಕೆಲ್ಲಾ ನಾರಾಯಣರ ಹಿರಿತನ ಇಲ್ಲದೆ ಆಗುವುದಿಲ್ಲ. ನನಗೆ ನಡೆದ ಸನ್ಮಾನ ಸಮಾರಂಭ, ಡಾ॥ ಸಿದ್ಧಯ್ಯ ಪುರಾಣಿಕರಿಗೆ ನಡೆದ ಸನ್ಮಾನ ಸಮಾರಂಭ, ಇನ್ನೂ ಹತ್ತಾರು ಸನ್ಮಾನ ಸಮಾರಂಭಗಳಿಗೆಲ್ಲಾ ಅವರೇ ಯಜಮಾನರು. ಅವನ್ನು ನಡೆಸುವ ರೀತಿಯೂ ಅವರದೇ ಆದ ವಿಶಿಷ್ಟತೆಯಿಂದ ಕೂಡಿರುತ್ತದೆ. ಏನೋ ಕಾಟಾಚಾರಕ್ಕೆ ಮಾಡುವ ರೀತಿಯಲ್ಲ ಅವರದು. ತಮ್ಮ ಮನೆಯ ಲಗ್ನಕ್ಕಿಂತ ಹೆಚ್ಚಿನ ಮುತುವರ್ಜಿ, ಶ್ರದ್ಧೆ. ಹೀಗಾಗಿ ಅವರಿಲ್ಲದೆ ಅಚ್ಚುಕಟ್ಟಾಗಿ ಯಾವ ಸಮಾರಂಭವು ನಡೆಯಲಾರದೋ ಎನ್ನಬಹುದು.

ನಾರಾಯಣ ನೋಡುವುದಕ್ಕೆ ಮೆತ್ತನೆ ವ್ಯಕ್ತಿಯೆಂದು ಕಂಡುಬಂದರೂ ಸಮಯ ಬಂದಾಗ ಸಿಡಿದೇಳಬಲ್ಲರು. ಪರಿಷತ್ತಿನ ವಜ್ರಮಹೋತ್ಸವದ ಸಂದರ್ಭ ಎಂದು ಕಾಣುತ್ತೆ. ಆಗ ಅವರ ಮೇಲೆ ಒಂದು ಗುಂಪಿನವರಿಂದ ಸಣ್ಣ ಚಳವಳಿ. ಹಗಲೂ ರಾತ್ರಿ ದುಡಿದು ದುಡಿದು ಆರೋಗ್ಯ ಕೆಡಿಸಿಕೊಂಡಿದ್ದ ನಾರಾಯಣ ಅವರು ಕುಳಿತುಕೊಂಡೇ ಆ ಚಳವಳಿಕಾರರಿಗೆ ಕೊಟ್ಟ ಉತ್ತರ ಇನ್ನೂ ನನ್ನ ಕಿವಿಯಲ್ಲಿದೆ : 'ನಾನು ರಾಜಕೀಯ ಗರಡಿಯಲ್ಲಿ ಪಳಗಿದವನು. ನನಗೂ ಅದರ ಅನೇಕ ಪಟ್ಟುಗಳು ಗೊತ್ತಿವೆ. ಗೊತ್ತಿಲ್ಲ ಎಂದು ಕುಸ್ತಿಗೆ ಬರಬೇಡಿ. ಎಚ್ಚರ ಇರಲಿ' ಎಂದು ಗುಡುಗಿದರು. ಸ್ವಚ್ಛ ಬಾಳು ಬಾಳಿದ ವ್ಯಕ್ತಿಯ ಬಾಯಿಂದಲ್ಲದೆ ಬೇರೆಯವರ ಬಾಯಿಂದ ಈ ಮಾತುಗಳು ಬರಲಾರವು.

ಬೆಂಗಳೂರು ನಗರದಲ್ಲಷ್ಟೇ ಅಲ್ಲದೆ ಹೊರಗಡೆಯೂ ನಾರಾಯಣರ ಬಗ್ಗೆ ಗೌರವ ಇದೆ. ಎಲ್ಲಾ ರಾಜಕೀಯ ಪಕ್ಷಗಳೂ ಸರ್ಕಾರವೂ ಅವರನ್ನು ಬಹು ವಿಶ್ವಾಸದಿಂದ ಕಾಣುತ್ತಿವೆ. ಆದರೆ ಆ ವಿಶ್ವಾಸವನ್ನು ನಾರಾಯಣ ಅವರು ಇಲ್ಲಿಯವರೆಗೆ ದುರುಪಯೋಗ ಪಡಿಸಿಕೊಂಡಿಲ್ಲ. ರಾಜಕೀಯದ ಆಶೆ ಆಮಿಷಗಳಿಗೆ ಅವರೆಂದೂ ಬಲಿಯಾದವರಲ್ಲ. ರಾಜಕೀಯಕ್ಕಿಂತ ಬೇರೆ ಕ್ಷೇತ್ರಗಳಲ್ಲಿ ಮಾಡಬಹುದಾದ ಕೆಲಸ ದೊಡ್ಡದೆಂದು ಅವರ ಭಾವನೆ. ಇಂತಹ ಭಾವನೆ ಎಷ್ಟು ಜನಕ್ಕುಂಟು? ಅದಕ್ಕೇ ಹೇಳುವುದು 'ಎಲ್ಲರಂಥವರಲ್ಲ ನಮ್ಮ ನಾರ್‍ಾಯಣ' ಎಂದು.

(೧೯೮೪)

ಶತಾಯುಗಳಾಗಲಿ

■ ಡಾ॥ ಗೊರೂರು ರಾಮಸ್ವಾಮಿ ಅಯ್ಯಂಗಾರ್

ಶ್ರೀಮಾನ್ ಜಿ ನಾರಾಯಣರು, ನಾಡು ನುಡಿ ಜನಜೀವನದಲ್ಲಿ ಕಳೆದ ಮುವತ್ತೈದು ವರುಷಗಳಿಗಿಂತಲೂ ಹೆಚ್ಚುಕಾಲ ಅವಿಶ್ರಾಂತವಾಗಿ ಆತ್ಮಶುದ್ಧಿಯಿಂದ ದುಡಿದವರು. ಅವರು ತಮ್ಮ ಜೀವನವನ್ನೇ ನಾಡಸೇವೆಗೆ ಮುಡುಪಾಗಿ ಇಟ್ಟಿದ್ದಾರೆ. ಅವರು ಸದಾ ಚಿಂತಿಸುತ್ತಿರುವುದು ಕರ್ನಾಟಕ ಕನ್ನಡನುಡಿ ಭಾರತದ ಭವಿಷ್ಯದ ಕನಸುಗಳು ಮತ್ತು ಕಾರ್ಯ. ಅವರ ಮನಸ್ಸು ಬುದ್ಧಿ ಒಂದು ಕ್ಷಣವೂ ದೇಶಕಾರ್ಯದಿಂದ ವಿಮುಖವಾಗುವುದಿಲ್ಲ ಮತ್ತು ಅವರು ಹಿಡಿದ ಕಾರ್ಯವನ್ನು ಸಾಧಿಸುವ ಛಲವುಳ್ಳವರೂ ಆಗಿದ್ದಾರೆ. ನಮ್ಮ ದೇಶ, ಜನತೆಯ ಚಟುವಟಿಕೆಗಳು, ದೇಶಹಿತ ಕಾರ್ಯಗಳು ಯಾವ ಮಾರ್ಗದಲ್ಲಿ ಹೋಗಬೇಕೆಂಬುದನ್ನೂ ಅವರು ದೀರ್ಘಾಲೋಚನೆ ಮತ್ತು ಪರಿಶ್ರಮದಿಂದ ನಿರ್ಣಯಿಸಿಕೊಂಡಿದ್ದಾರೆ.

ನಾರಾಯಣರು ಗ್ರಾಮಾಂತರ ಪ್ರದೇಶದವರು. ನಮ್ಮ ದೇಶದ ಗ್ರಾಮಜೀವನದ ಸೊಗಸು ಪ್ರಕೃತಿರಮ್ಯತೆ ಈ ನೆಲ, ನೀರು, ಗಾಳಿ, ಕಾಡುಗಳು, ಜನರಲ್ಲಿ ಅಡಗಿರುವ ಸ್ವಾಭಾವಿಕ ಸಂಸ್ಕೃತಿ ಒಳ್ಳೆಯತನ ಇವುಗಳನ್ನೆಲ್ಲ ಅವರು ಬಲ್ಲವರು, ಅನುಭವಿಸಿದವರು. ಬೆಂಗಳೂರಿನಲ್ಲಿದ್ದರೂ ಅವರು ಗ್ರಾಮೀಣರಂತೆಯೇ ಇದ್ದಾರೆ. ಆಧುನಿಕ ಯಾಂತ್ರೀಕೃತ ಜೀವನ ಹೇಗೆಯೇ ಇದ್ದರೂ ನಮ್ಮ ಜನತೆ ಪ್ರಾಚೀನ ಭಾರತ ಸಂಸ್ಕೃತಿಯ ಉತ್ತಮ ಅಂಶಗಳನ್ನು ಮರೆಯದಿರಬೇಕೆಂಬುದು ಅವರ ಇಚ್ಛೆ. ನಾರಾಯಣರೂ ನನ್ನಂತೆ, ಹೆಚ್ಚು ಆಧುನಿಕ ವಿದ್ಯಾಭ್ಯಾಸವನ್ನು ಹೊಂದಿದವರಲ್ಲ. ಆದರೆ ಜನಜೀವನದ ಅನುಭವ ವ್ಯಾಸಂಗ,

ಜವಾಬ್ದಾರಿ ಕಾರ್ಯಗಳ ಹೊಣೆಗಾರಿಕೆ, ಉತ್ತಮ ಧ್ಯೇಯ, ಸತತ ಕಾರ್ಯತತ್ಪರತೆ ಇವುಗಳಿಂದ ಅವರು, ದೇಶದ ಯಾವುದೇ ಉನ್ನತ ಸ್ಥಾನವನ್ನೂ ಹೊಂದಿ ನಿರ್ವಹಿಸುವ ಸಾಮರ್ಥ್ಯವನ್ನು ಸಂಪಾದಿಸಿಕೊಂಡಿದ್ದಾರೆ.

ನಾರಾಯಣರಿಗೆ ತಮ್ಮ ಯೌವ್ವನ ಕಾಲದಲ್ಲಿಯೇ, ಹಿರಿಯರಾದ ಡಿ.ವಿ.ಜಿ.ಯವರ ಮಾರ್ಗದರ್ಶನವೂ ಸಂಪರ್ಕವೂ ದೊರಕಿತು. ನಾರಾಯಣರು ಸ್ವಾತಂತ್ರ್ಯ ಹೋರಾಟ ದಲ್ಲಿಯೂ ಭಾಗವಹಿಸಿದರು. ಅದು ನಿಜವಾಗಿ ಬಹುಕಷ್ಟದ ಕಾಲವಾಗಿತ್ತು. ಇವರೂ ವೀರಣ್ಣ ಗೌಡರೂ ರೈಲು ಸ್ಟೇಶನ್ ಹೋಟಲಿನಿಂದ ಎರಡಾಣೆ ಅನ್ನದ ಪೊಟ್ಟಣಗಳನ್ನು ತಂದು ಜೀವಿಸು ತ್ತಿದ್ದರು. ನಾರಾಯಣರಿಗೆ ಬಾಲ್ಯದಿಂದಲೇ ಸಾಹಿತ್ಯ ಪತ್ರಿಕೋದ್ಯಮ ಇವುಗಳಲ್ಲಿಯೂ ಆಸಕ್ತಿ. ಕನ್ನಡಿಗರಿಗೆ ನಗು ಮರತೇ ಹೋಗಿದೆ. ಅವರು ಏನು ಮಾಡಿದರೂ ನಗುವುದಿಲ್ಲ. ಈ ದುಗುಡದ ಗೊಂಬೆಗಳನ್ನು ನಗಿಸಲು ನಾರಾಯಣರು 'ವಿನೋದ' ಎಂಬ ಮಾಸಪತ್ರಿಕೆಯನ್ನು ಹೊರಡಿಸಿದರು. ಒಂದು ತಿಂಗಳಿಗೆ ಎರಡು ಆಣೆ ಚಂದಾ ಇಟ್ಟಿದ್ದರು. ಪತ್ರಿಕೆಗಳನ್ನು ನಡೆಸುವುದು ನಿಜವಾಗಿ ಕಷ್ಟ. 'ಕೊರವಂಜಿ' ಇಪ್ಪತ್ತೈದು ವರುಷಗಳಿಗೆ ನಿಂತುಹೋಯಿತು. ಆದರೆ ನಾರಾಯಣರು ದೃಢವ್ರತರು. ಹಿಡಿದ ಕೆಲಸವನ್ನು ಬಿಡುವವರಲ್ಲ. ವಿನೋದಕ್ಕೆ ೨೫ ವರ್ಷಗಳಾದಾಗ ಅವರು "ಪತ್ರಿಕೆ ನಿಲ್ಲಿಸಿಬಿಡುತ್ತೇನೆ" ಎಂದರು. ಆಗ ಡಿ.ವಿ.ಜಿ.ಯವರು "ಇನ್ನೂ ನಡೆಸಿ" ಎಂದರು. ಲಾಭವೋ ನಷ್ಟವೋ ನಾರಾಯಣರು ಪತ್ರಿಕೆ ನಡೆಸುತ್ತಿದ್ದಾರೆ. ಈಗ ಅದು ೩೩–೩೪ನೇ ವರುಷದಲ್ಲಿ ಇರಬಹುದು. ಅದರ ಮೂಲಕ ಅವರು ಅನೇಕ ಹಾಸ್ಯ ಲೇಖಕರನ್ನು ಬೆಳಕಿಗೆ ತಂದಿದ್ದಾರೆ. ತಿಂಗಳಿಗೆ ಒಂದು ಗಂಟೆಯಾದರೂ ಶುಭ್ರವಾದ ತಿಳಿನಗೆಗೆ ಅವಕಾಶ ಮಾಡಿಕೊಡುತ್ತಾರೆ.

ನಾರಾಯಣರು ಸಮಾಜದಲ್ಲಿ ರಾಜಕೀಯದಲ್ಲಿ ಪರಿಶುದ್ಧ ಜೀವನಕ್ಕೆ ಪ್ರಾಮಾಣಿಕ ನಡತೆಗೆ ಬೆಲೆ ಕೊಡುವವರು. ಬೆಂಗಳೂರು ಪೌರಜೀವನದಲ್ಲಿ ಅವರು ಅನೇಕ ಅವಧಿಗಳು ಪೌರಸಭಾ ಸದಸ್ಯರಾಗಿ ಸೇವೆ ಸಲ್ಲಿಸಿದರು. ಅವರು ಒಂದು ಸಲವೂ ಪರಾಭವವನ್ನು ಅನುಭವಿಸಲಿಲ್ಲ. ಅವರ ಕಾಲದಲ್ಲಿ ಪೌರಸಭಾ ಕಾರ್ಯಗಳು ಪೌರರಿಗೆ ಅನುಕೂಲಗಳು ರಸ್ತೆ ಬೆಳಕು ನೀರು ಮನೆ ಎಲ್ಲವೂ ಸಮೃದ್ಧವಾಗಿತ್ತು. ಅವರು ಬೆಂಗಳೂರು ನಗರದ ಮೇಯರ್‌ರೂ ಆಗಿದ್ದರು. ಆ ಕಾಲದ ಸೌಖ್ಯ ಜೀವನವನ್ನು ಬೆಂಗಳೂರಿನ ಹಿರಿಯ ನಾಗರಿಕರು ಇಂದೂ ಆಸೆ ಮತ್ತು ಕೃತಜ್ಞತೆಯಿಂದ ನೆನೆಯುತ್ತಾರೆ. ಈಗ ಕೆಲವು ವರುಷಗಳ ಕೆಳಗೆ ವಿಧಾನಸೌಧದ ಸಭಾಭವನದಲ್ಲಿ ಬೆಂಗಳೂರಿನ ನಾಗರಿಕರೂ ಶಾಸಕರೂ ಶ್ರೀಮಾನ್ ವೀರಣ್ಣಗೌಡರಿಗೂ ನಾರಾಯಣರಿಗೂ ಒಂದು ಸನ್ಮಾನ ಸಮಾರಂಭವನ್ನು ಏರ್ಪಡಿಸಿ ತಮ್ಮ ಆದರವನ್ನೂ ಪ್ರೀತಿಯನ್ನೂ ವ್ಯಕ್ತಪಡಿಸಿದರು.

ನಾರಾಯಣರು ಸದಾ ಸೇವಾತತ್ಪರರು. ಜನಸೇವೆಯಲ್ಲಿ ಅವರು ಬಿಡುವನ್ನೇ ಬಯಸಿದವ ರಲ್ಲ. ಅವರು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದುದು ಅನಿರೀಕ್ಷಿತವೂ ಅಲ್ಲ. ಅವರು ಸಾಹಿತಿಗಳು ಮತ್ತು ಸಾಹಿತ್ಯಾಭಿಮಾನಿಗಳು. ಸಾಹಿತ್ಯ ಜನಸೇವೆಗೆ ನೇರವಾದ ಮತ್ತು ನಿಕಟವಾದ

ಮಾರ್ಗವೊಂದನ್ನು ಅವರು ಅರಿತರು. ಅವರ ಪ್ರವೇಶದಿಂದ ಸಾಹಿತ್ಯ ಪರಿಷತ್ತಿಗೆ ಹೊಸ ಜೀವನ ಚೇತನ ಮೂಡಿತು. ಸಾಹಿತ್ಯ ಜನಜೀವನದ ನಿಕಟವರ್ತಿಯಾಯಿತು. ಅದರ ತಳಹದಿ ವಿಶಾಲವಾಯಿತು. ಪರಿಷತ್ತು ಎಲ್ಲರ ಮನೆ ಬಾಗಿಲಿಗೆ ಹೋಯಿತು. ಜಿಲ್ಲಾ ಪರಿಷತ್ತು ತಾಲ್ಲೂಕು ಪರಿಷತ್ತು ಹೀಗೆ ಪರಿಷತ್ತಿನ ಸಾರ್ವತ್ರೀಕರಣವಾಯಿತು. ಅದು ಒಂದು ಪ್ರಜಾಸಂಸ್ಥೆಯಾಯಿತು. ಅದರ ಬುಡ ಬೆಂಗಳೂರಿನಲ್ಲಿದ್ದರೂ ಅದರ ಕೊಂಬೆ ರೆಂಬೆ ಹೂವು ಹೀಚು ಹಣ್ಣು ಕಾಯಿ ದೇಶದ ಎಲ್ಲೆಡೆ ಹರಡಿದವು.

ನಾರಾಯಣರು ಪರಿಷತ್ತನ್ನು ಒಂಬತ್ತು ವರುಷ ನಡೆಸಿದರು. ಅದರ ಭವಿಷ್ಯಕ್ಕಾಗಿ ಅನೇಕ ಯೋಜನೆಗಳನ್ನು ಹಾಕಿದರು. ಪ್ರಕಟನಾಕಾರ್ಯ ಹೊಸ ಉತ್ಸಾಹದಿಂದ ಮುಂದುವರಿಯಿತು. ಮಹಿಳೆಯರು ಮಕ್ಕಳಿಗಾಗಿಯೇ ವಿಶಿಷ್ಟವಾದ ಅನೇಕ ಕಾರ್ಯಕ್ರಮಗಳ ನಿರ್ಮಾಣವಾಯಿತು. ಮಹಿಳೆಯರ ಸಾಹಿತ್ಯ ರಚನೆಗೆ ವಿಶೇಷವಾದ ಕಾರ್ಯಕ್ರಮವೇ ಏರ್ಪಾಡಾಯಿತು. ಮನೆ ಮನೆಗೆ ಪುಸ್ತಕಗಳನ್ನು ಕೊಂಡು ಒಯ್ದು ಮಾರುವ ವ್ಯವಸ್ಥೆಯೂ ಆಯಿತು. ಜಾನಪದ ಕಲೆಗಳಿಗೆ ವಿಶೇಷವಾದ ಪ್ರೋತ್ಸಾಹ ಅವುಗಳ ಚಿತ್ರೀಕರಣ, ವಸಂತೋತ್ಸವ, ಸಮ್ಮೇಳನಗಳ ಚಿತ್ರೀಕರಣ ಎಲ್ಲವುಗಳಿಗೂ ನಾರಾಯಣರೇ ಅಡಿಪಾಯವನ್ನು ಹಾಕಿದರು. ಆ ಕಾರ್ಯಗಳನ್ನೂ ಇನ್ನೂ ಅನೇಕ ಕಾರ್ಯಗಳನ್ನೂ ಈಚಿನ ಅಧ್ಯಕ್ಷರು ಉತ್ಸಾಹದಿಂದಲೂ ದಕ್ಷತೆಯಿಂದಲೂ ಮುಂದುವರಿಸುತ್ತಿದ್ದಾರೆ. ಪರಿಷತ್ತಿನ ಹುದ್ದೆಯಿಂದ ನಿವೃತ್ತರಾದರೂ ನಾರಾಯಣರು ಸಾಹಿತ್ಯ ಮತ್ತು ಸಮಾಜಸೇವೆಯ ಕಾರ್ಯಗಳನ್ನು ಮುಂದುವರಿಸುತ್ತಲೇ ಇದ್ದಾರೆ. ಅವರಿಗೆ ನಿವೃತ್ತಿಯೂ ಇಲ್ಲ. ಜನಸೇವೆಯಲ್ಲಿ ಆಯಾಸವೂ ಇಲ್ಲ. ಯಾವುದೇ ಉತ್ತಮವಾದ ಕಾರ್ಯಕ್ಕೂ ಅವರ ಪ್ರೋತ್ಸಾಹ ಬೆಂಬಲ ಇದ್ದೇ ಇದೆ. ಅವರು ಎಷ್ಟು ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದಾರೆಯೋ ಅವರಿಗೆ ತಿಳಿಯದು. ಗಮಕ ಕಲಾ ಪರಿಷತ್ತಿಗೆ ಹೊಸ ಚೈತನ್ಯವನ್ನು ತುಂಬಿ ಅದಕ್ಕೆ ಒಂದು ಆಕಾರವನ್ನು ಕೊಟ್ಟವರೇ ನಾರಾಯಣರು.

ನಾರಾಯಣರು ನಮ್ಮ ನಾಡಿನ ಜನಜೀವನದಲ್ಲಿ ಎಲ್ಲ ಕ್ಷೇತ್ರಗಳಲ್ಲಿಯೂ ಎಲ್ಲ ಮಟ್ಟಗಳಲ್ಲಿಯೂ ಉನ್ನತ ಮೌಲ್ಯವನ್ನು ಬಯಸುವವರು. ಸರ್ಕಾರ, ಪ್ರಜೆಗಳು, ವಿದ್ಯಾರ್ಥಿಗಳು, ವ್ಯಾಪಾರಿಗಳು, ನೌಕರರು, ರಾಜಕೀಯ ವ್ಯಕ್ತಿಗಳು ಎಲ್ಲರಲ್ಲಿಯೂ ಪ್ರಾಮಾಣಿಕತೆ ದಕ್ಷತೆ ನಾಡಿಗಾಗಿ ಉತ್ತಮ ಸೇವೆಗಳನ್ನು ನಿರೀಕ್ಷಿಸುವವರು. ಆ ವಿಷಯದಲ್ಲಿ ಅವರದು ತುಂಬ ಖಡಾಖಂಡಿತ. ಎಷ್ಟೇ ಕಷ್ಟವಾದರೂ ಋಜುಮಾರ್ಗವನ್ನು ಬಿಡಕೂಡದು. ಎಲ್ಲವೂ ಭ್ರಷ್ಟಗೊಂಡಿರುವ ಈಚಿನ ದಿನಗಳಲ್ಲಿ ಅವರಿಗೆ ಸಾತ್ವಿಕ ಅತೃಪ್ತಿ ಬಹಳವಾಗಿದೆ. ಜನತೆ ಎಚ್ಚರಗೊಳ್ಳಬೇಕು. ದೇಶಪ್ರೇಮ ಪ್ರಾಮಾಣಿಕತೆ ದುಡಿತ ಭಾಷಾಪ್ರೇಮ ಬಡವರಲ್ಲಿ ಅನುಕಂಪ ಇವೆಲ್ಲ ನಮ್ಮಲ್ಲಿ ಬರಬೇಕು. ನಮ್ಮ ಗಡಿಗಳಿಗೆ ಅಪಾಯ ಒದಗದಂತೆ ನಾವು ಕಾಯಬೇಕು. ಈ ಸತ್‌ಪ್ರೇರಣೆ ಸತ್‌ಜಾಗೃತಿ ಜನರಲ್ಲಿ ಸದಾ ಎಚ್ಚರವಾಗಿರುವಂತೆ ಪ್ರೇರಿಸಲು ಉದ್ಬೋಧಿಸಲು ಅವರು ಜಾಗೃತಿ ಪರಿಷತ್ ಎಂಬ ಒಂದು ಸಂಸ್ಥೆಯನ್ನೇ ಸ್ಥಾಪಿಸಿ ನಡೆಸಿಕೊಂಡು ಬರುತ್ತಿದ್ದಾರೆ.

ನಾರಾಯಣರು ಇಷ್ಟೊಂದು ಸಾರ್ವಜನಿಕ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದರೂ ತಮ್ಮ ಉಲ್ಲಾಸವನ್ನೂ ಉತ್ಸಾಹವನ್ನೂ ಕಳೆದುಕೊಂಡಿಲ್ಲ. ಯವ್ವನ ಅವರನ್ನು ಕೈಬಿಡಲು ಹಿಂದೆಗೆಯುತ್ತಿದೆ. ದೃಢನಿಶ್ಚಯದಿಂದ ಅವರು ಹಿಡಿದ ಕಾರ್ಯದಲ್ಲಿ ಮುಂದುವರಿಯುತ್ತಾರೆ. ಅವರಲ್ಲಿ ಯಾವುದೇ ವ್ಯಸನವೂ (ಚಟ ಅಭ್ಯಾಸ) ಇಲ್ಲ.

ಈಗ ಕಳೆದಿರುವಷ್ಟೇ ಕಾಲ, ಇನ್ನೂ ಅವರ ಮುಂದೆ ಇದೆ. ಅವರ ಮಾರ್ಗದರ್ಶನ– ಈ ಕಷ್ಟಕರವಾದ ದಿನಗಳಲ್ಲಿ ನಮಗೆ ಸದಾ ದೊರೆಯುತ್ತಿರುವುದು ನಮ್ಮ ಸೌಭಾಗ್ಯ. ಅವರು ಇನ್ನೂ ಅನೇಕ ಕಾಲ ನಮ್ಮೊಡನೆ ಇದ್ದು ನಮ್ಮನ್ನು ನಡೆಸಲಿ ಎಂದು ಪ್ರಾರ್ಥಿಸುತ್ತೇನೆ.

(೧೯೮೪)

ಸಾಹಿತ್ಯ ಪರಿಷತ್ತಿನ ನಾರಾಯಣ

■ ಎ.ಹೆಚ್. ಗೌಡ

ಶ್ರೀಮಾನ್ ಜಿ. ನಾರಾಯಣ ಅವರು ಮಾಜಿ ಮೇಯರ್ ಎನ್ನಿಸಿಕೊಂಡ ಹಾಗೆ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರು ಎನ್ನಿಸಿಕೊಳ್ಳಲಿಲ್ಲ. ಕನ್ನಡ ಸಾಹಿತ್ಯ ಪರಿಷತ್ತಿಗೂ ಅವರಿಗೂ ಉಂಟಾದ ಸಂಬಂಧ ಅವರನ್ನು 'ಮಾಜಿ' ಎಂದು ಗುರುತಿಸಲು ಯಾರಿಗೂ ಆಗುತ್ತಿಲ್ಲ.

೧೯೬೯ ರ ಮೇ ತಿಂಗಳಲ್ಲಿ ಜಿ. ನಾರಾಯಣ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷತೆಯ ಜವಾಬ್ದಾರಿಯನ್ನು ವಹಿಸಿಕೊಂಡರು. ಅನೇಕ ಕನ್ನಡ ಸಾಹಿತಿಗಳು ಇದನ್ನು 'ಯಾವನೋ ಒಬ್ಬ ಅಸಾಹಿತಿ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಆಗಿಬಿಟ್ಟನಲ್ಲ' ಎಂದು ಮೂದಲಿಸಿದರು. ಈ ಮುಂಚೆ ಸಾಹಿತಿಗಳು ಎನ್ನಿಸಿಕೊಂಡವರೇ ಪರಿಷತ್ತಿನ ಅಧ್ಯಕ್ಷರಾಗುತ್ತಿದ್ದರು. ಜಿ. ನಾರಾಯಣ 'ಸಾಹಿತಿ' ಎನಿಸಿಕೊಂಡಿರಲಿಲ್ಲ. ಸಾಹಿತಿ ಅಧ್ಯಕ್ಷರುಗಳು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯ ಚಟುವಟಿಕೆಗಳನ್ನು ಕೇವಲ ಸಾಹಿತಿಗಳು ಎನ್ನಿಸಿಕೊಂಡವರಿಗೆ ಮೀಸಲಾಗಿರಿಸಿಕೊಂಡು ಬೆಂಗಳೂರಿನ ಚಾಮರಾಜಪೇಟೆಯಿಂದ ಹೊರಗೆ ತೆಗೆದುಕೊಂಡು ಹೋಗದ ಹಾಗೆ ನೋಡಿಕೊಂಡಿದ್ದರು. ಮುಂಬರುವ ಅಧ್ಯಕ್ಷರು ಇಷ್ಟನ್ನೇ ಮಾಡುತ್ತಾರೆ ; ಇಷ್ಟನ್ನೇ ಮಾಡಬೇಕು ಎನ್ನಿಸಿರಬೇಕು ಸಾಹಿತಿಗಳಿಗೆ. ಅಸಾಹಿತಿ ಅಧ್ಯಕ್ಷರಾದ ಜಿ. ನಾರಾಯಣ ಅವರು ಪರಿಷತ್ತು ಮಾಡಬೇಕಾದ ಕನ್ನಡ ಕೆಲಸದ ಒಂದು ವಿರಾಟ್ ರೂಪವನ್ನು ಕಲ್ಪಿಸಿ ಕೊಂಡಿದ್ದವರು. ತಮ್ಮ ಈ ಹಿಮಾಲಯ ಸದೃಶ ಕಲ್ಪನೆ ಕಾರ್ಯಗತವಾಗಲು ಹಗಲಿರುಳೂ ಶ್ರಮಿಸಲೆಂದೇ ಪರಿಷತ್ತಿಗೆ ಕಾಲಿಟ್ಟರೇ ಏನಾ,

ಪರಿಷತ್ತಿನ ಅಧ್ಯಕ್ಷಗಿರಿ ಸುಖದ ಸುಪ್ಪತ್ತಿಗೆ ಎಂದು ಯಾವತ್ತೂ ನಾರಾಯಣ ಭಾವಿಸಿದವರಲ್ಲ; ಅದು ಜವಾಬ್ದಾರಿಯ ಮುಳ್ಳಿನ ಮಂಚ ಎಂದೇ ಅದಕ್ಕೆ ಮೈಯೊಡ್ಡಲು ಸಿದ್ಧರಾದವರು. ಮುಳ್ಳಿನ ಮಂಚಕ್ಕೆ ಮೈಯೊಡ್ಡಲು ಸಿದ್ಧರಾಗಿದ್ದ ಅವರನ್ನು ಸಾಹಿತಿಗಳ ಮೂದಲಿಕೆ ಕಿಂಚಿತ್ತೂ ವಿಚಲಿತಗೊಳಿಸಲಿಲ್ಲ.

ಕನ್ನಡ ಸಾಹಿತ್ಯ ಪರಿಷತ್ತನ್ನು 'ಕನ್ನಡ' ಪರಿಷತ್ತನ್ನಾಗಿಸಲು ಹಗಲಿರುಳು ಶ್ರಮಿಸಿದರು. ಇಡೀ ಕನ್ನಡ ಜನತೆಯ ಸಾಂಸ್ಕೃತಿಕ ಆಶೋತ್ತರಗಳನ್ನು ಪ್ರತಿನಿಧಿಸುವ ಒಂದು ಸಂಸ್ಥೆಯನ್ನಾಗಿ ಕಟ್ಟುವ ಅವರ ಕನಸನ್ನು ನನಸಾಗಿಸಿದ ಜಿ. ನಾರಾಯಣರನ್ನು ಪರಿಷತ್ತಿನ ಮಾಜಿ ಅಧ್ಯಕ್ಷರೆಂದು ಕನ್ನಡ ಜನತೆ ಹೇಗಾದರೂ ಕರೆದೀತು? ಸಾಹಿತಿ ಅಧ್ಯಕ್ಷರುಗಳು ನಡೆಸಿಕೊಂಡು ಬರುತ್ತಿದ್ದ ಯಾವ ಕಾರ್ಯವನ್ನೂ ಅವರು ನಿಲ್ಲಿಸಲಿಲ್ಲ. ಹೊಸದಾಗಿ ತಾವು ರೂಪಿಸಿದ ಕಾರ್ಯಗಳನ್ನೆಲ್ಲಾ ಅನುಷ್ಠಾನಗೊಳಿಸಿದರು. ತ್ರೈವಾರ್ಷಿಕ ಯೋಜನೆ, ಪಂಚವಾರ್ಷಿಕ ಯೋಜನೆ ಎಂದು ಯೋಜನೆಗಳನ್ನು ಹಮ್ಮಿಕೊಂಡು ಕನ್ನಡದ ಕೊರತೆಗಳನ್ನು ನೀಗಲು ಶ್ರಮಿಸಿದರು. ಸರಕಾರದ ಮೇಲೆ ಒತ್ತಾಯ ತಂದು ಪರಿಷತ್ತಿಗೆ ಸರಕಾರದ ಉದಾರ ಹಣ ಸಹಾಯವನ್ನು ಗಳಿಸಿದರು. ಪರಿಷತ್ತಿನ ಕಾರ್ಯಕ್ರಮಗಳು ಜಿಲ್ಲೆ ತಾಲ್ಲೂಕು ಮಟ್ಟಗಳಲ್ಲಿ ಜರುಗಿದವು. ಪುಸ್ತಕ ಪ್ರಚಾರದ ಕಾರ್ಯಕ್ರಮ ನಾಡಿನಾದ್ಯಂತ ಯಶಸ್ವಿಯಾಗಿ ನಡೆಯಿತು. ನಾರಾಯಣರ 'ಮನೆಗೊಂದು ಪುಸ್ತಕ ಭಂಡಾರ'ದ ಕಲ್ಪನೆಯಂತೂ ಸಾಹಿತಿಗಳ ಹುಬ್ಬೇರಿಸಿತು. ಪರಿಷತ್ತನ್ನು ಕೇವಲ ಸಾಹಿತಿಗಳಲ್ಲ, ಸಾಮಾನ್ಯ ಕನ್ನಡಿಗನೂ ತನ್ನ ಸಂಸ್ಥೆಯೆಂದು ಹೆಮ್ಮೆಪಟ್ಟುಕೊಳ್ಳುವಂತಹ ಒಂದು ವಿಸ್ತಾರಕ್ಕೆ ಒಯ್ದುದ್ದು ನಾರಾಯಣರು ಎಂದೂ ಪರಿಷತ್ತಿನ ಮಾಜಿ ಅಧ್ಯಕ್ಷರಲ್ಲ ಎಂಬುದನ್ನು ಕನ್ನಡಿಗರ ಹೃದಯದಲ್ಲಿ ನೆಲೆಯಾಗಿಸಿತು.

೧೯೭೩ ಅಥವಾ ೧೯೭೪ ಇರಬಹುದು. ಸಾಹಿತ್ಯ ಪರಿಷತ್ತಿನ ಕಾರ್ಯಸಮಿತಿ ಸಭೆಗೆ ಹೋಗುವ ಮುನ್ನ ಡಾ॥ ಎಚ್.ಎಲ್. ತಿಮ್ಮೇಗೌಡರನ್ನು ಭೇಟಿಯಾಗಿದ್ದೆ. ಚಾಮರಾಜಪೇಟೆಯ ಉಪ ಚುನಾವಣೆಯಲ್ಲಿ ಸಂಸ್ಥಾ ಕಾಂಗ್ರೆಸ್ಸಿನ ಅಭ್ಯರ್ಥಿಯಾಗಲು ನಾರಾಯಣರನ್ನು ಒಪ್ಪಿಸಬೇಕೆಂದು ನನಗೆ ಡಾಕ್ಟರು ಹೇಳಿದ್ದರು. ಆಗಬಹುದು ಎಂದು ಪರಿಷತ್ತಿಗೆ ಹೋದೆ. ನನ್ನನ್ನು ನೋಡಿದ ಕೂಡಲೆ ನಾರಾಯಣರು "ನನಗೆ ನೀವು ಒಂದು ಉಪಕಾರ ಮಾಡಬೇಕು" ಎಂದರು. ನಾನು "ನಿಮಗೆ ಮಾಡಿಕೊಡಬಹುದಾದ ಉಪಕಾರ ಏನು ಹೇಳಿ. ಆಗುವುದಾದರೆ ನೋಡೋಣ" ಎಂದೆ. "ವೀರೇಂದ್ರ ಪಾಟೀಲರು, ರಾಮಕೃಷ್ಣ ಹೆಗ್ಗಡೆಯವರ ಬಗ್ಗೆ ನನಗೆ ತುಂಬಾ ಗೌರವ. ಅವರು ನನ್ನ ಬಳಿ ಬಂದು ಚಾಮರಾಜಪೇಟೆ ಉಪ ಚುನಾವಣೆಯಲ್ಲಿ ಸ್ಪರ್ಧಿಸಿ ಎಂದು ನನ್ನನ್ನು ಒತ್ತಾಯ ಮಾಡಬಾರದು. ನನ್ನ ಬಳಿ ಬಂದ ಅವರ ಮುಖ ಚಿಕ್ಕದುಮಾಡಿ ಕಳುಹಿಸಲು ನನಗೆ ಇಷ್ಟವಿಲ್ಲ" ಎಂದರು. ಯಾವ ವಿಷಯದ ಬಗ್ಗೆ ಅವರನ್ನು ಒಪ್ಪಿಸಬೇಕೆಂದು ಹೋದೆನೋ, ನಾನು ಬಾಯಿ ಬಿಡುವ ಮೊದಲೇ ಅವರಾಡಿದ ಈ ಮಾತು ಅದಕ್ಕೆ ಉತ್ತರವಾಗಿತ್ತು. "ಏಕೆ? ನೀವು ಚುನಾವಣೆಗೆ ನಿಲ್ಲಲು ಇಚ್ಛಿಸುವುದಿಲ್ಲ" ಎಂದೆ. ಅದಕ್ಕೆ ಅವರು "ಹಾಗೇನಿಲ್ಲ. ನಾನು ಚುನಾವಣೆಗೆ ನಿಲ್ಲಲೇಬಾರದೆಂದಲ್ಲ. ಆದರೆ ನಾನು ಪರಿಷತ್ತಿನ ಅಧ್ಯಕ್ಷ ಆಗಿರುವವರೆಗೆ ಯಾವುದೇ ರಾಜಕೀಯ ಸ್ಥಾನ ಒಪ್ಪಿಕೊಳ್ಳಲು

ಒಪ್ಪಲಿಲ್ಲ. ಸರ್ಕಾರ ಪರಿಷತ್ತಿಗೆ ಮಾಡಬೇಕಾದ ಅನೇಕ ಕಾರ್ಯಗಳ ಬಗ್ಗೆ ಸರ್ಕಾರವನ್ನು ಈಗ ಒತ್ತಾಯಿಸುತ್ತಿದ್ದೇನೆ. ಪರಿಷತ್ತಿನ ಅಧ್ಯಕ್ಷ ಎಂದು ಅವರೂ ಗೌರವಿಸುತ್ತಿದ್ದಾರೆ" ಎಂದರು. ಶ್ರೀ ನಾರಾಯಣರು ಮಾತನ್ನು ಅಷ್ಟಕ್ಕೇ ನಿಲ್ಲಿಸಲಿಲ್ಲ. "ನೋಡಿ, ಆಡಳಿತ ಕಾಂಗ್ರೆಸ್‌ನವರೂ ಬಂದಿದ್ದರು. ನಾನು ಅವರಿಗೆ ಒಂದೇ ಮಾತಿನಲ್ಲಿ ಹೇಳಿಬಿಟ್ಟೆ. ನಾನು ಕಾಂಗ್ರೆಸ್ಸಿಗ. ಸಂಸ್ಥಾ ಕಾಂಗ್ರೆಸ್ ಇರುವವರೆಗೂ ಅದೇ ನಿಜವಾದ ಕಾಂಗ್ರೆಸ್ ಎಂದು ಭಾವಿಸಿದ್ದೇನೆ. ನಾನು ಸಂಸ್ಥಾ ಕಾಂಗ್ರೆಸ್‌ನವನೇ ಹೊರತು ಬೇರೆ ಕಾಂಗ್ರೆಸ್ಸಿನವನಲ್ಲ ಎಂದು ಹೇಳಿ ಕಳುಹಿಸಿದೆ" ಎಂದರು. ಅವರ ವಿಚಾರ ನನಗೆ ಹಿಡಿಸಿತು. ಅವರನ್ನು ಒತ್ತಾಯಿಸಲು ಹೋಗಲಿಲ್ಲ. ಡಾಕ್ಟರಿಗೆ ನಾರಾಯಣರ ಆ ವಿಷಯ ತಿಳಿಸಿಬಿಟ್ಟೆ.

ಸಂಸ್ಥಾ ಕಾಂಗ್ರೆಸ್ ಪ್ರದೇಶ ಸಮಿತಿ ಚಾಮರಾಜಪೇಟೆ ಉಪಚುನಾವಣೆಗೆ ತನ್ನ ಅಭ್ಯರ್ಥಿ ಆಯ್ಕೆ ಮಾಡುವುದರ ಬಗ್ಗೆ ಚರ್ಚಿಸಲು ಸಮಾವೇಶಗೊಂಡಿತು. ನಾನು ಆ ಸಮಿತಿಯ ಸದಸ್ಯ ಆಗಿದ್ದೆ. ಚಾಮರಾಜಪೇಟೆ ಕ್ಷೇತ್ರ ಗೆಲ್ಲಲು ನಾರಾಯಣರಿಗೊಬ್ಬರಿಗೆ ಸಾಧ್ಯ ಎಂಬುದು ಇಡೀ ಸಮಿತಿಯ ಅಭಿಪ್ರಾಯ. ಆದರೆ ಅವರು ಒಪ್ಪುವುದಿಲ್ಲ ಎಂಬುದು ಸಭೆಯ ಕೊರಗು. ನಂಜಪ್ಪ ಎಂಬ ಮಾಜಿ ಕಾರ್ಪೊರೇಟರ್ ಆ ಸಭೆಯಲ್ಲಿ ಹಾಜರಿದ್ದರು. ಅವರು ಎದ್ದು ಹೇಳಿದರು : "ನಾರಾಯಣ್ ಮೇಯರ್ ಆಗಿದ್ದಾಗ ನಾನು ಕಾರ್ಪೊರೇಟರ್ ಆಗಿದ್ದೆ. ನಾನು ಅವರೊಡನೆ ತುಂಬಾ ವಿಶ್ವಾಸದಿಂದಿದ್ದೇನೆ. ನಾನು ಹೋಗಿ ಅವರ ಪಾದಗಳನ್ನು ಹಿಡಿದು ಕೇಳಿಕೊಳ್ಳುತ್ತೇನೆ. ಅವರು ಒಪ್ಪುವವರೆಗೂ ಹಿಡಿದ ಅವರ ಪಾದ ಬಿಡುವುದಿಲ್ಲ". ನನಗೆ ವಿದ್ಯುತ್ ಸ್ಪರ್ಶವಾದಂತಾಯಿತು. ಟಿಕೆಟ್‌ಗೂ ಕಾಲು ಕಟ್ಟುವವರು ಇರುವಾಗ, ನಮ್ಮಲ್ಲಿ ನಾರಾಯಣರಂತಹವರೂ ಇದ್ದಾರಲ್ಲ ಎನ್ನಿಸಿತು. ಅವರ ಮನೆ ಮುಂದೆ ಧರಣಿ ಕೂರುವುದಾಗಿ ಬೆಂಗಳೂರು ನಗರದ ಪಕ್ಷದ ಅನೇಕ ಕಾರ್ಯಕರ್ತರು ಆ ಸಭೆಗೆ ಬಂದು ಸಭೆಯ ಅನುಮತಿಗಾಗಿ ಒತ್ತಾಯಿಸಿದರು. ಸಭೆ ಯಾವ ನಿರ್ಣಯಕ್ಕೂ ಬರಲಿಲ್ಲ. ವೀರೇಂದ್ರ ಪಾಟೀಲರು, ರಾಮಕೃಷ್ಣ ಹೆಗ್ಗಡೆಯವರು, ಹೆಚ್.ಡಿ.ದೇವೇಗೌಡರು ಪ್ರಯತ್ನಿಸಿ ವಿಫಲರಾದರು.

ತಾವು ಪಡೆಯುವ ರಾಜಕೀಯ ಸ್ಥಾನಗಳು ಪರಿಷತ್ತಿನ ಕಾರ್ಯಕ್ಕೆ ಅಡ್ಡಗಾಲು ಹಾಕಬಹುದೆಂದು ಅವೆಲ್ಲವನ್ನೂ ನಾರಾಯಣರು ನಿರಾಕರಿಸಿದರು. ನನಗೆ ತಿಳಿದ ಹಾಗೆ ಇಂತಹವರು ನಾರಾಯಣ ಒಬ್ಬರೇ.

ಅರುವತ್ತರ ಹೊಸ್ತಿಲಲ್ಲಿರುವ ಶ್ರೀಮಾನ್ ಜಿ. ನಾರಾಯಣ ಅವರು ಕನ್ನಡದ ಕೆಲಸಕ್ಕೆ ಚಿರ ಯುವಕರು. ಅಧಿಕಾರದ ವ್ಯಾಮೋಹ ಇಲ್ಲದೆ ತಾವು ಕೈಗೊಳ್ಳುವ ಪ್ರತಿಯೊಂದು ಕೆಲಸವನ್ನೂ ತನ್ನ ಕರ್ತವ್ಯವೆಂದು ನಿರ್ವಹಿಸುವವರು.

(೧೯೮೪)

ಜಿ. ನಾರಾಯಣ–ನಾನು

■ ನಾಡಿಗೇರ ಕೃಷ್ಣರಾಯ

ನಾನು ಆಗ ಪ್ರಜಾಮತದಲ್ಲಿ ಕೆಲಸ ಮಾಡುತ್ತಿದ್ದೆ. ಒಂದು ಮಧ್ಯಾಹ್ನ ಶ್ರೀ ಜಿ. ನಾರಾಯಣ ಅವರು ನಮ್ಮ ಕಚೇರಿಗೆ ಬಂದರು. "ಹಾಗಾದರೆ ಯುದ್ಧಕ್ಕೆ ಬಾ" ಅಂತ ಪೌರಾಣಿಕ ಕತೆಗಳಲ್ಲಿ ಹೇಳುವಂತೆ ನಾನು "ಹಾಗಾದರೆ ಹೋಟಲಿಗೆ ಬಾ" ಎಂದು ಹೇಳಿದೆ. ಇಬ್ಬರೂ ಹೋಟಲಿಗೆ ಹೋದವು. ಕಾಫಿಯನ್ನು ಕುಡಿಯುತ್ತ ಅವರು ಹೇಳಿದರು : "ನಾನೊಂದು ಹಾಸ್ಯ ಮಾಸಪತ್ರಿಕೆ ಹೊರಡಿಸಬೇಕೆಂದಿದ್ದೇನೆ. ನಿಮ್ಮ ಸಹಕಾರ ಬೇಕು" ನಾನು ಅಡ್ಡಿ ಆತಂಕಗಳ ಬಗ್ಗೆ ಎಷ್ಟು ಹೇಳಿದರೂ ಅವರು ಕೇಳಲಿಲ್ಲ. ಒಪ್ಪಿಕೊಂಡೆ. ಅದರ ತಪ್ಪಿಗಾಗಿ ಸುಮಾರು ಇಪ್ಪತ್ತು ವರ್ಷ ವಿನೋದಕ್ಕೆ ಲೇಖನಗಳನ್ನು ಬರೆದೆ. ಅವರ ಕಚೇರಿಗೆ ಹೋದಾಗ ಅರ್ಧ ಪ್ಯಾಕ್ ಸಿಗರೇಟ್, ಒಂದು ಬೆಂಕಿಪೊಟ್ಟಣ, ಒಂದು ಕಪ್ ಕಾಫಿ ಕೊಡುತ್ತಿದ್ದರು. ಲೇಖನ ಬರೆದಾದ ಮೇಲೆ ಒಂದಿಷ್ಟು ದಕ್ಷಿಣೆ ಕೊಡುತ್ತಿದ್ದರು. ಆದರೆ ನನಗೆ ವಯಸ್ಸಾಗಿ ಬರೆಯುವುದನ್ನು ಬಿಟ್ಟೆ. ಆದರೆ 'ವಿನೋದ' ಬರುವುದು ನಿಂತಿಲ್ಲ.

ಒಂದು ಸಾರ್ವಜನಿಕ ಸಭೆಯಲ್ಲಿ ನಾನು ಹೇಳಿದೆ, "ಶ್ರೀ ನಾರಾಯಣ ಅವರು 'ವಿನೋದ' ಪತ್ರಿಕೆ ನಿಲ್ಲಿಸಿದರೆ ಲಾಭ ಬರುತ್ತದೆ" ಅಂತ. ಅದಕ್ಕೆ ಅವರು ಉತ್ತರ ಕೊಡುತ್ತ 'ಯಾವುದಾದರೂ ಕನ್ನಡದಲ್ಲಿ ಹಾಸ್ಯ ಪತ್ರಿಕೆ ಇದೆಯೇ'? ಅಂತ ಕೇಳಿದರೆ 'ಇಗೋ ಇಲ್ಲಿದೆ ಅಂತ' ತೋರಿಸುವುದಕ್ಕೆ 'ವಿನೋದ' ಹೊರಡಿಸುತ್ತಿದ್ದೇನೆ!' ಅಂತ ಹೇಳಿದರು.

ಎಂತಹ ಕನ್ನಡಾಭಿಮಾನ. ಕೈಯಿಂದ ಹಣ

ಹೋದರೂ ಚಿಂತೆಯಿಲ್ಲ. ಹೆಸರು ಉಳಿಯಬೇಕು! ನನಗೀಗ ಪಾರ್ಶ್ವವಾಯು (ಸ್ಟ್ರೋಕ್) ಹೊಡೆದಿದೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದೆ. ಶ್ರೀ ನಾರಾಯಣ ಅವರು ಎರಡು ದಿನ ನನ್ನನ್ನು ನೋಡುವುದಕ್ಕೆ ಬಂದಿದ್ದರು.

ಶ್ರೀ ನಾರಾಯಣ ಅವರ ಬಗ್ಗೆ ಮುನ್ನೂರು ಶಬ್ದಗಳಲ್ಲಿ ಅವರ ಬಗ್ಗೆ ಬರೆಯಬೇಕೆಂದು ಸೂಚನೆ ಕೊಟ್ಟಿದ್ದಾರೆ. ಅವರ ಬಗ್ಗೆ ಮುನ್ನೂರು ಪುಟಗಳಷ್ಟನ್ನು ಬರೆಯಬಹುದು. ಸೂಚನೆಯಂತೆ ನನ್ನ ಅವರ ಸಂಬಂಧದ ಬಗ್ಗೆ ಬರೆದಿದ್ದೇನೆ.

ಭಗವಂತನು ಅವರಿಗೂ ಅವರ ಕುಟುಂಬ ವರ್ಗಕ್ಕೂ ಸಕಲ ಸನ್ಮಂಗಳ ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

ಜೈ ಕರ್ನಾಟಕ !

(೧೯೮೪)

‘ವಿನೋದ’ ಜನಕ ನಾರಾಯಣ

■ ಎಸ್.ಎಸ್. ರಾಮಪ್ರಸಾದ್

ನಿರ್ಮಮತೆ, ನಿರಹಂಕಾರ ಮತ್ತು ಶಾಂತಮನಸ್ಥಿತಿ ಇವು ಮಹಾಪುರುಷರ ಲಕ್ಷಣಗಳು. ಕಾರ್ಯನಿರತ ಪತ್ರಕರ್ತರಾಗಲು ಈ ಗುಣಗಳು ಅವಶ್ಯಕ, ಅಲ್ಲ, ಅನಿವಾರ್ಯ ಎಂದು ನನ್ನ ಭಾವನೆ. ಜಿ. ನಾರಾಯಣರು ಇಂಥ ಸ್ವಾಭಾವವನ್ನುಳ್ಳವರು. ಆದ್ದರಿಂದಲೇ ಸಮರ್ಥ ಪತ್ರಕರ್ತರು.

‘ಸಮರ್ಥ’ ಪತ್ರಕರ್ತರು ಎಂದು ಹೇಳಿದ್ದೇನೆ. ‘ಯಶಸ್ವಿ’ ಪತ್ರಕರ್ತರು ಎಂದು ಹೇಳಿಲ್ಲ. ಸಮರ್ಥನೆನಿಸಿಕೊಳ್ಳಲು ವೃತ್ತಿನೈಪುಣ್ಯ ಸಾಕು. ಯಶಸ್ವಿಯಾಗಲು ವ್ಯವಹಾರ ಕುಶಲತೆ ಬೇಕು. ಸಾರ್ವಜನಿಕ ಜೀವನರಂಗದಲ್ಲಿ ಪಡೆದ ನಾನಾ ಸ್ಥಾನಬಲದಲ್ಲಿ ವ್ಯವಹಾರ ಕುಶಲತೆಯನ್ನು ನಿಚ್ಚಳವಾಗಿ ಪ್ರದರ್ಶಿಸಿರುವ ಜಿ. ನಾರಾಯಣ ಸ್ವಕೀಯದಲ್ಲಿ ಪರಮ ಅವ್ಯವಹಾರಿ. ದುರ್ವ್ಯವಹಾರಿಯಾಗಿದ್ದರೂ ತಾಳಿಕೊಳ್ಳಬಹುದಿತ್ತು. ಆದರೆ ಈ ವ್ಯಕ್ತಿ ಸುವ್ಯವಹಾರದಲ್ಲಿ ವ್ಯವಹಾರ ಕುಶಲತೆಯನ್ನು ಸೋಕಿಸಿಕೊಂಡೂ ಇಲ್ಲದವರಂತಿದ್ದಾರೆ. ಆದ್ದರಿಂದಲೇ ಚಾಮರಾಜಪೇಟೆಯ ಪಂಪಮಹಾಕವಿ ರಸ್ತೆಯಲ್ಲಿರುವ ‘ವಿನೋದ’ ಮಾಸಪತ್ರಿಕೆಯ ನಾಮಫಲಕವೂ ನಾಲ್ಕು ಜನರ ಕಣ್ಣಿಗೆ ಕಾಣುವುದಿಲ್ಲ.

೩೩ ವರ್ಷಗಳಿಂದ ಸತತವಾಗಿ (ಸಣ್ಣ ಪತ್ರಿಕೆಗಳ ವಿಚಾರದಲ್ಲಿ ಇದು ಉಲ್ಲೇಖನಾರ್ಹ ಅಂಶ. ಸತತವಾಗಿ ೩೨ ವರ್ಷಗಳಿಂದ ಪ್ರಕಟವಾಗುತ್ತಿದ್ದು ಮುಂದುವರೆದಿದೆ. ೧೯೫೩ರಲ್ಲಿ ಒಂದು ಬಾರಿ ಅದರ ಸಂಪಾದಕರು ಮೂರು ತಿಂಗಳಕಾಲ ವಿಕ್ಟೋರಿಯಾ ಆಸ್ಪತ್ರೆಯ ಅತಿಥಿಗಳಾಗಿದ್ದಾಗ

ಒಂದು ತಿಂಗಳ ಸಂಚಿಕೆ ಮಾತ್ರ ಹೊರಬರಲಿಲ್ಲ. "ಸಂಚಿಕೆ ಸಿದ್ಧವಾಗಿರಲಿಲ್ಲ ಎಂದಲ್ಲ ; ಸಿದ್ಧವಾಗಿತ್ತು ; ಅದನ್ನು ರವಾನಿಸಲು ಸಾಧ್ಯವಾಗಲಿಲ್ಲ"ವೆಂದು ಜಿ. ನಾರಾಯಣ ವಿವರಣೆ ಕೊಡುತ್ತಾರೆ.) ಸಕಾಲಕ್ಕೆ ಒಂದು ಪತ್ರಿಕೆ ಪ್ರಕಟವಾಗುತ್ತಿದೆಯೆಂದರೆ ಅದರ ನಿರ್ವಹಣೆಗೊಂದು ಭಾರಿ ವ್ಯವಸ್ಥೆ ಫುದವುಟ್ಟು ಇರಬೇಕೆನಿಸುತ್ತದೆ. ಆದರೆ ನತದೃಷ್ಟ 'ವಿನೋದ'ನಿಗೆ ಪತ್ರಿಕೆಯ ಮುದ್ರಕ, ಪ್ರಕಾಶಕ, ಸಂಪಾದಕ ಜಿ. ನಾರಾಯಣರೊಬ್ಬರ ಕರ್ತವ್ಯ ಪರಾಯಣತೆಯನ್ನು ಬಿಟ್ಟು ಬೇರೆ ಬಂಡವಾಳವಿಲ್ಲ. 'ವಿನೋದ' ನೆಚ್ಚಿರುವುದು ನಾರಾಯಣರ ಬರಿದಾದ ಕಿಸೆಯನ್ನಲ್ಲ; ಅವರ ಅದಮ್ಯ ಸಂಕಲ್ಪ ಶಕ್ತಿಯನ್ನು.

ಸ್ವಾತಂತ್ರ್ಯ ಹೋರಾಟದ ಕಹಳೆಯಾಗಿ 'ವಾರ್ತಾ' ಮಾರ್ಪಟ್ಟಾಗ ಸ್ವಾತಂತ್ರ್ಯ ಹೋರಾಟದ ಗೀಳಿನ ಜಿ.ನಾರಾಯಣ ಅದರ ಬಳಗದಲ್ಲಿ ಸೇರಿದ್ದರು. ಸಾರ್ವಜನಿಕ ಜೀವನರಂಗದಲ್ಲಿ ವಿಖ್ಯಾತರಾದ ಸಾಹುಕಾರ್ ಚನ್ನಯ್ಯನವರ ಆಡಳಿತ. ಎಚ್.ಕೆ. ವೀರಣ್ಣಗೌಡರು ಪತ್ರಿಕೆಯ ಸಂಪಾದಕರು. ಅವರಿಬ್ಬರ ಅನುಚರರಾಗಿದ್ದ ಜಿ. ನಾರಾಯಣ ಪತ್ರಿಕೆಯ ವ್ಯವಸ್ಥಾಪಕರು.

ಗದ್ದಲ, ಗೌಜುಗಳಿಗೆ ಸಲ್ಲದ ಈ ಯುವಕ ಎಲ್ಲರ ಚಲನವಲನಗಳ ಮೇಲೂ ಎಚ್ಚರಗಣ್ಣು ಇಟ್ಟಿದ್ದ. ಎಲ್ಲ ವ್ಯವಹಾರಗಳ ಮರ್ಮವನ್ನೂ ತಿಳಿಯಬಲ್ಲವನಾಗಿದ್ದ. ಸುತ್ತಲಿದ್ದವರೆಲ್ಲರನ್ನೂ ಅಳೆದು, ಅದೇ ಅಳತೆಗೋಲನ್ನು ತನಗೂ ಅನ್ವಯಿಸಿ ಅಳತೆ ನೋಡಿಕೊಳ್ಳುವ ಸ್ವಾಭಾವಿಕ ಜಾಣತನ ಪಡೆದಿದ್ದ. ಒಪ್ಪು ತಪ್ಪುಗಳನ್ನು ಪಟ್ಟಿ ಮಾಡಿಕೊಂಡಿದ್ದ. ಜತೆಗೇ ಪತ್ರಿಕಾಲಯದ ವ್ಯವಹಾರಗಳನ್ನೆಲ್ಲ ಕಲಿತ. ಜಿ. ನಾರಾಯಣರು ಪತ್ರಕರ್ತರಾಗಲು ಇದು ಹಿನ್ನೆಲೆ.

ಸ್ವಾತಂತ್ರ್ಯ ಸಾಧನೆಯಾಯಿತು. ಮುದ್ರಣಾಲಯವನ್ನು ನಡೆಸುವ ಮತ್ತು ಪತ್ರಿಕೆಯನ್ನು ನಡೆಸುವ ಸಾಮರ್ಥ್ಯದ ವಿನಿಯೋಗ ಆಗಬೇಕೆನಿಸಿತು. ಎಂಥ ಪತ್ರಿಕೆ ಆದೀತು? ಬಂಡವಾಳದ್ದೇನು ವ್ಯವಸ್ಥೆ? ಆದರೆ ಆಗಿನ್ನೂ ೨೫–೨೬ರ ಪ್ರಾಯದ ಯುವಕನಿಗೆ ಇದೊಂದು ಸಮಸ್ಯೆ ಎನಿಸಲೇ ಇಲ್ಲ. ನಿರ್ಧಾರ ಮಾಡಲು ವಿಳಂಬವೂ ಆಗಲಿಲ್ಲ. ಮೊದಲು ಮುದ್ರಣಾಲಯ ಆರಂಭವಾಯಿತು. ಅದೇ ತಿಂಗಳಲ್ಲಿ (೧೯೫೦) 'ವಿನೋದ' ಅವತರಿಸಿದ.

"ಜಿ. ನಾರಾಯಣರ ಜತೆ ಜಗಳವಾಡಿ ಬಂದೆ. ಅವರನ್ನು ಬೈದೆ. ಬೈಸಿಕೊಂಡು ಬಂದೆ" ಎಂದು ಯಾರಾದರು ಹೇಳಿದರೆ ನಾನು ಆ ವ್ಯಕ್ತಿಗೆ ನೊಬೆಲ್ ಶಾಂತಿ ಪುರಸ್ಕಾರ ಸಿಗಬೇಕೆಂದು ಶಿಫಾರ್ಸು ಮಾಡಿಯೇನು!

ಮನಸ್ಸಿನ ಸಮಾಧಾನವನ್ನು ಎಂದೂ ಕಳೆದುಕೊಳ್ಳದ, ಏನೇ ಕೋಪ–ತಾಪವಿದ್ದರೂ ಅವೆಲ್ಲವನ್ನೂ ಅಡಗಿಸಿಟ್ಟುಕೊಳ್ಳಬಲ್ಲ ಮತ್ತು ಹೇಳಬೇಕಾಗಿರುವುದನ್ನು ಭೀತಿ ಇಲ್ಲದೆ ನಯವಾಗಿಯೇ ನಿರ್ಧಾರವನ್ನು ಸಾರುವ ದನಿಯಲ್ಲಿ ಹೇಳುವ ನಡವಳಿಕೆಯ ಒಂದು ಹದವನ್ನು ಅವರು ಕಂಡುಕೊಂಡಿದ್ದಾರೆ. ಮಹಾತ್ಮಗಾಂಧಿಯವರು ಈ ದೇಶದ ರಾಜಕಾರಣವನ್ನು ನಿರ್ವಹಿಸಿಯೂ ತಮ್ಮ ಮನಸ್ಸಿನ ಹದವನ್ನು ಕೆಡಿಸಿಕೊಂಡಿರಲಿಲ್ಲ. ನಾನಾ ಬಗೆ ಬಣ್ಣ, ಭಾಷೆಗಳ ಜನರ ಭಾವನೆಗಳಿಗೆ ಪ್ರತಿಸ್ಪಂದಿಸಿ ಪರಿಹಾರ ಕಲ್ಪಿಸಬೇಕಾಗಿದ್ದ ಮಹಾತ್ಮಗಾಂಧಿ ಕೋಪದಿಂದ ಯಾರೊಬ್ಬರಿಗೂ ಬಿರು ನುಡಿಯಾಡಿದ ಪ್ರಸಂಗದ ಉಲ್ಲೇಖವಿಲ್ಲ. ಇದು ಅವರಿಗೆ ಸಾಧ್ಯವಾದದ್ದು ಅವರು ಹೊಂದಿದ್ದ ಹಾಸ್ಯ ದೃಷ್ಟಿಯಿಂದ.

ತಮ್ಮ ಎದುರಾಳಿಗಳನ್ನು ನಗೆಯಿಂದ, ನಗೆಮಾತಿನಿಂದ ನಿರುತ್ತರಗೊಳಿಸುವ ಕಲೆಯಲ್ಲಿ ಗಾಂಧೀಜಿ ಪಳಗಿದ್ದರು. ರಾಜ್ಯದ ಹಿರಿಯ ರಾಜಕಾರಣಿಗಳ ಜತೆಯಲ್ಲಿದ್ದು ಅವರ ಓರೆ–ಕೋರೆಗಳನ್ನೆಲ್ಲ ಅರ್ಥಮಾಡಿಕೊಂಡ ಜಿ. ನಾರಾಯಣರೂ ಕೋಪ ತಾಪ ಪ್ರದರ್ಶನದ ನಿರರ್ಥಕತೆಯನ್ನು ಅರ್ಥಮಾಡಿಕೊಂಡರು. ಗಾಂಧಿ ಮಾರ್ಗದಲ್ಲಿ ನಂಬಿಕೆಯಿಟ್ಟ ಅವರು ಅನುಸರಿಸಿದ್ದು ಗಾಂಧಿಯವರನ್ನು, ಗಾಂಧಿಯವರ ಹಿಂ'ಬಾಲಕ'ರನ್ನಲ್ಲ. ಆದ್ದರಿಂದಲೇ ಕೆರಳಿದ ನಾರಾಯಣರನ್ನು ಕಾಣುವುದು ದುಸ್ತರ. ಈ ನೈಪುಣ್ಯದಿಂದಲೇ ಅವರು ೯ ವರ್ಷಕಾಲ ಸಾಹಿತಿಗಳ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಮುಂದಾಳುತನವನ್ನು ಸಮರ್ಥವಾಗಿ ನಿರ್ವಹಿಸಿದರು.

ಎದುರು ಬಂದವರನ್ನು ನಕ್ಕು ಸ್ವಾಗತಿಸುವ, ಸಹಜವಾಗಿ ಮಾತಿನಲ್ಲಿ ಹಾಸ್ಯ ತುಂಬುವ ನಾರಾಯಣ ಮೇಲುನೋಟಕ್ಕೆ ತೀರ ಗಂಭೀರ ವ್ಯಕ್ತಿ. ಆದರೆ ಅವರ ಪರಿಚಯ ಗಾಢವಾದಷ್ಟೂ ಅವರ ಹಾಸ್ಯದೃಷ್ಟಿಯ ಪರಿಚಯವಾಗುತ್ತದೆ. ೧೯೫೦ರಲ್ಲಿ ಪತ್ರಿಕೆಯೊಂದನ್ನು ಆರಂಭಿಸಬೇಕೆಂಬ ಬಯಕೆ ಮೂಡಿದಾಗ ಹಾಸ್ಯಕ್ಕೆ ಮೀಸಲಾದ ಮಾಸಪತ್ರಿಕೆಯೇ ಸರಿ ಎನಿಸಿದ್ದು ತೀರ ಸಹಜ. ಆಗ 'ಕೊರವಂಜಿ' ಇದ್ದಳು. 'ನಗುವನಂದ' ಇದ್ದ. ಇವರಿಬ್ಬರಿಗೂ ಕಿರಿಯವನಾಗಿ 'ವಿನೋದ'ನೂ ಸೇರಿಕೊಳ್ಳಲಿ ; ಮೂರೂ ಸೇರಿದರೂ ದೊಡ್ಡ ಸಂಖ್ಯೆಯಲ್ಲ ಎನಿಸಿತು.

ಹಾಸ್ಯಬರಹಗಳಲ್ಲಿ ವಿಶೇಷ ಅಭಿರುಚಿ, ಅವುಗಳ ಕೊರತೆಯ ಬಗ್ಗೆ ಕಾಳಜಿಗಳೇ 'ವಿನೋದ'ನಿಗೆ ಆಕಾರ ನೀಡಿದವು. ಸಾಹಿತ್ಯವೂ ಮನಸ್ಸಿನ ಹರ್ಷಕ್ಕೆ ನೆರವಾಗಬೇಕು ಎಂಬ ಬಯಕೆಯನ್ನು ಸಾಕ್ಷಾತ್ಕರಿಸಿಕೊಳ್ಳುವ ನಮ್ರ ಪ್ರಯತ್ನದಿಂದ ಭಾರಿ ಆಕಾಂಕ್ಷೆಯನ್ನು ನಾರಾಯಣರು ಆಗಲೂ ಹೊಂದಿರಲಿಲ್ಲ. ಈಗಲೂ ಹೊಂದಿಲ್ಲ. ಆದ್ದರಿಂದಲೇ 'ವಿನೋದ' ಸದ್ದಿಲ್ಲದೆ ಸಾಗಿದ್ದಾನೆ. ಆತನಿಗೀಗ ೩೩ ವರ್ಷ ತುಂಬಿದೆ.*

ಯಾವುದೇ ಪಂಥಕ್ಕೂ ನಾರಾಯಣ ನಿಷ್ಠರಲ್ಲ. ಆದ್ದರಿಂದಲೇ ಅವರಿಗೆ ಭ್ರಮೆಗಳಿಲ್ಲ. 'ಕೊರವಂಜಿ' ನಿಂತುಹೋಯಿತು. ಹಾಸ್ಯ ಸಾಹಿತ್ಯದ ಸೆಲೆ ಬತ್ತಿಹೋಗಿದೆ ಎಂಬುದನ್ನು ಅವರು ಒಪ್ಪುವುದಿಲ್ಲ. ಪ್ರತಿದಿನವೂ ಪ್ರಕಟವಾಗುವ ವಾರ್ತಾ ಪತ್ರಿಕೆಗಳಲ್ಲಿ, ವಾರ–ತಿಂಗಳಿನ ಪತ್ರಿಕೆಗಳಲ್ಲಿ ಅದೇ ಮೊಂಡು ಹಾಸ್ಯದ ಬರಹಗಳು ಪ್ರಕಟವಾಗುತ್ತಿವೆ ಎಂಬುದನ್ನು ಅವರು ಉಲ್ಲೇಖಿಸುತ್ತಾರೆ. ಆದರೆ ಉತ್ತೇಜನದ ಅಭಾವವಿದೆ ಎಂಬುದನ್ನು ಒಪ್ಪುತ್ತಾರೆ.

ಬೇರೆ ಬೇರೆ ನಿಯತಕಾಲಿಕಗಳಲ್ಲಿ ಹಾಸ್ಯದ ತುಣುಕುಗಳು, ವ್ಯಂಗ್ಯಚಿತ್ರಗಳು ಪ್ರಕಟವಾಗುತ್ತಿರುವಾಗ 'ವಿನೋದ'ನ ಅಗತ್ಯವೆಲ್ಲಿದೆ ಎಂಬ ಪ್ರಶ್ನೆಗೆ ಅವರ ಉತ್ತರ ಸರಳ; ಮರ್ಮಸ್ಪರ್ಶಿಯೂ ಹೌದು.

"ಆದರೆ ಹಾಸ್ಯಕ್ಕೇ ಮೀಸಲಾದ ಒಂದೂ ಪತ್ರಿಕೆ ಇಲ್ಲ. ಆದ್ದರಿಂದ 'ವಿನೋದ'ನನ್ನು ಭದ್ರಮಾಡಬೇಕು. ಹಾಗೆಂದರೆ 'ವಿನೋದ' ಅಮರನಾಗಬೇಕೆಂದೇನೂ ಇಲ್ಲ. 'ವಿನೋದ'ಕ್ಕೆ ಆಜೀವ ಸದಸ್ಯರನ್ನೇಕೆ ಮಾಡಿಸಬಾರದು ಎಂದು ಗೆಳೆಯರು ಕೇಳಿದ್ದಾರೆ. ನನ್ನ ಉದ್ದೇಶ ಅದು ಶಾಶ್ವತವಾಗಿ ನಡೆಯುತ್ತಿರಬೇಕೆಂದೇನೂ ಅಲ್ಲ. ಎಷ್ಟು ದಿನವಾದರೆ ಅಷ್ಟು ದಿನ

* ೨೦೦೬ ಆಗಸ್ಟ್‌ಗೆ ೫೫ ವರ್ಷ

ಪ್ರಕಟವಾಗುತ್ತಿರಲಿ. ಇದಕ್ಕಿಂತ ಉತ್ತಮವಾದದ್ದು ಪ್ರಕಟವಾದಾಗ 'ವಿನೋದ' ಕಣ್ಮರೆಯಾದರೂ ಸಂಕಟಪಡುವುದಿಲ್ಲ. ಆದ್ದರಿಂದಲೇ ಆಜೀವ ಚಂದಾದಾರರನ್ನು ಮಾಡಿಸುವ ಪ್ರಯತ್ನ ಮಾಡಿಲ್ಲ." ತಮ್ಮ ಪ್ರಯತ್ನದಲ್ಲಿ ಶ್ರದ್ಧೆಯನ್ನು ಹೊಂದಿದ್ದು ನಿರ್ಮಮತೆಯಿಂದ ಇರುವುದು ಸಾಧ್ಯವೆಂಬುದನ್ನು ಅವರು ತೋರಿಸಿಕೊಟ್ಟಿರುವ ರೀತಿಯಿದು. ಈ ನಿರ್ಮಮತೆ ಸಾಧಾರಣರಿಗೆ ಸಿದ್ಧಿಸದು. ೩೩ ವರ್ಷ ಕಾಲ ಒಂದು ಪತ್ರಿಕೆಯ ಒಡೆಯರಾಗಿದ್ದರಿಂದ ಜಿ. ನಾರಾಯಣ ಎಷ್ಟು ಶ್ರೀಮಂತರಾಗಿರಬಹುದು.

ಪತ್ರಿಕೆಯ ಹೆಸರಷ್ಟನ್ನೇ ಬಳಸಿಕೊಂಡು ಬಲ್ಲಿದರಾದವರುಂಟು. ಪತ್ರಿಕೆ ಪ್ರಕಟವಾಗದೇ ಇದ್ದರೂ ಜೀಗುವ ಪ್ರಕಾಶಕರು, ಸಂಪಾದಕರು ಲೆಕ್ಕವಿಲ್ಲದಷ್ಟು. 'ವಿನೋದ'ದಿಂದ ಏನನ್ನೂ ಪಡೆಯದ ಸಂಪಾದಕರು ಜಿ. ನಾರಾಯಣ. 'ವಿನೋದ'ದ ಸಂಪಾದಕರು ಅವರು ಎಂಬುದೂ ಬಹಳ ಜನರಿಗೆ ತಿಳಿದಿರಲಿಕ್ಕಿಲ್ಲ. ಯಾಕೆಂದರೆ ಪತ್ರಿಕಾ ಸಂಪಾದಕರಿಗೆ ಸಿಗುವ ಮನ್ನಣೆಯನ್ನು ದಕ್ಕಿಸಿಕೊಳ್ಳಲು ಅವರು ಪ್ರಯತ್ನಿಸಿಯೇ ಇಲ್ಲ. ಯಾರನ್ನೂ ಜಾಹೀರಾತು ಬೇಡಿಲ್ಲ. ತಮ್ಮ ಪತ್ರಿಕೆಯ ಬೆಳಸಿಗಾಗಿ ಯಾವುದೇ ಮಂತ್ರಿಮಾನ್ಯರನ್ನು ಓಲೈಸಿಲ್ಲ. ಅಷ್ಟೇ ಏಕೆ, ಪತ್ರಿಕೆಯನ್ನು ಬೆಳೆಸುವ ಯೋಜನೆಯನ್ನೇ ಹಾಕಿಲ್ಲ. ಸಾಹಿತ್ಯ ಪರಿಷತ್ತಾಗಲಿ, ಗಮಕ ಪರಿಷತ್ತಾಗಲಿ, ಎಲ್ಲಕ್ಕೂ ಬೆಳವಣಿಗೆಯ ಯೋಜನೆ ರೂಪಿಸುವ ನಾರಾಯಣರು ತಮ್ಮ 'ವಿನೋದ'ನ ಬೆಳವಣಿಗೆಯನ್ನು ಯೋಜಿಸಿಯೇ ಇಲ್ಲ.

ಪತ್ರಿಕೆ ಆರಂಭಿಸಿದಾಗ ಒಂದು ರೀಮ್ ಕಾಗದಕ್ಕೆ ೧೬ ರೂಪಾಯಿ ಬೆಲೆ. 'ವಿನೋದ'ನ ಒಂದು ಸಂಚಿಕೆಯ ಬೆಲೆ ಎರಡಾಣೆ. ಈಗ ಒಂದು ರೀಮ್ ಕಾಗದಕ್ಕೆ ೧೬೦ ರೂಪಾಯಿ ಗಳಿಗಿಂತ ಹೆಚ್ಚು. ಅಂದರೆ ಹತ್ತು ಪಟ್ಟಿಗಿಂತ ಅಧಿಕ. 'ವಿನೋದ'ನ ಬೆಲೆ ಆ ಅನುಪಾತದಲ್ಲಿ ೨ ಆಣೆ (೧-೫೦) ಆಗಬೇಕಿತ್ತು. ಆದರೆ ೭೫ ಪೈಸೆಯನ್ನು ಮೀರಿಲ್ಲ. ಪತ್ರಿಕೆ ಅಗ್ಗವಾಗಿದ್ದರೆ ಕೊಳ್ಳುವವರಿಗೆ ಆಸಕ್ತಿ ಇರುತ್ತದೆ ; ಬೆಲೆ ಹೆಚ್ಚಾದರೆ ಓದುವ ಹಂಬಲವೂ ಇಂಗಿ ಹೋಗುತ್ತದೆಂಬುದು ಅವರ ನಂಬಿಕೆ. "ಆದರೂ ಹಲವಾರು ಏಜೆಂಟರು ಒತ್ತಾಯ ಮಾಡುತ್ತಿದ್ದಾರೆ. ಈಗಿನ ದರಗಳಲ್ಲಿ ನಿರ್ವಹಣೆ ಕಷ್ಟವಾದರೆ ಮುಂದಿನ ವರ್ಷದಿಂದ ಒಂದು ರೂಪಾಯಿ ಮಾಡಬೇಕೆಂದಿದೆ".

ಹಾಗಾದರೆ ಪತ್ರಿಕೆ ನೀಡಿರುವ ಲಾಭ? ಅದರ ದೆಸೆಯಿಂದ ಸಾಲವಾಗಿಲ್ಲ. ಒಂದು ವರ್ಷದಲ್ಲಿ ಅದಕ್ಕೆ ಮಾಡಿದ ವೆಚ್ಚ ಮತ್ತು ಆದಾಯಗಳನ್ನು ಲೆಕ್ಕಮಾಡಿ ಸ್ವಾತಂತ್ರ್ಯ ದಿನೋತ್ಸವ ಸಮಯದಲ್ಲಿ ಪ್ರಕಟಿಸುವ ವಿಶೇಷ ಸಂಚಿಕೆಯ ಮೂಲಕ ನಷ್ಟವನ್ನು ನಿವಾರಿಸಿಕೊಳ್ಳುವ ಕಾರ್ಯತಂತ್ರ ಪ್ರಕಾಶಕ ನಾರಾಯಣರದು. ನಷ್ಟವಾಗದೆ ಇರುವುದಕ್ಕೆ ಕಾರಣ ಅವರು ಮುದ್ರಕರೂ ಆಗಿರುವುದು ಒಂದು ಮತ್ತು ಸಂಪಾದಕರಿಗೆ ಗೌರವ ವೇತನವೂ ಕೊಡಬೇಕಾಗಿಲ್ಲ ದಿರುವುದು ಇನ್ನೊಂದು. ಲಾಭದಾಯಕವಾಗಿ ಮಾಡಲು ಅವರಿಗೆ ಬಾರದೆಂದಲ್ಲ ಆದರೆ ವಿನೋದದ ಪ್ರಕಟನೆ ಒಂದು ಉದ್ಯೋಗವಲ್ಲ. ಅದೊಂದು ಹವ್ಯಾಸ. ಇತರೆ ಹಲವು ಕೆಲಸಕಾರ್ಯಗಳ ನಡುವೆ ಅದಕ್ಕಷ್ಟು ಗಮನ. ಇನ್ನೂ ಚೆನ್ನಾಗಿ ಮಾಡಬೇಕೆಂದರೆ ಹೆಚ್ಚು ಗಮನ ಕೊಡಬೇಕಾಗುತ್ತದೆ. ೭೫ ಪೈಸೆಗಳಿಗೆ ಒಂದು ಬಟ್ಟಲು ಕಾಫಿಯೂ ಸಿಗದಿರುವಾಗ ದರವನ್ನು ಹೆಚ್ಚಿಸಬೇಕಾಗುತ್ತದೆ. ಹೆಚ್ಚು ಜಾಹೀರಾತು ಸಂಗ್ರಹಣೆ ಮಾಡಬೇಕಾಗುತ್ತದೆ.

ಮುದ್ರಣ-ವಿನ್ಯಾಸಗಳನ್ನು ಉತ್ತಮ ಪಡಿಸಬೇಕಾಗುತ್ತದೆ. ಈ ಎಲ್ಲ ಅಗತ್ಯಗಳ ಅರಿವೂ ಅವರಿಗೆ ಇದೆ. ಆದರೆ ಅವರೇ ಹೇಳಿದಂತೆ 'ವಿನೋದ'ದ ಪ್ರಕಟಣೆ ನಾರಾಯಣರಿಗೆ ಒಂದು ವೃತ್ತಿಯಲ್ಲ ; ಪ್ರವೃತ್ತಿ. ಹಾಸ್ಯದಲ್ಲಿ ಅವರಿಟ್ಟಿರುವ ನಂಬಿಕೆಯ ಅಭಿವ್ಯಕ್ತಿ.

ಪತ್ರಿಕೆ ಬೆಳೆದಿಲ್ಲವೆಂದು ಜನರನ್ನು ದೂರುವುದೂ ಅವರಿಗೆ ಸಮ್ಮತವಿಲ್ಲ. "ಲೋಪವೆಲ್ಲ ನಮ್ಮದೇ. ಸಹಕಾರ ಕೇಳಿದಾಗ ಜನರಿಂದ ಅಪೇಕ್ಷಿತ ಸಹಕಾರ ದೊರಕಿಯೇ ದೊರಕುತ್ತದೆ"ಂಬ ನಂಬಿಕೆಯೂ ಇದೆ.

'ವಿನೋದ'ದ ಲೇಖಕ ಬಳಗವೂ ಅಷ್ಟೇ. ಪೂರ್ಣ ಸಹಕಾರದ ಮನೋಭಾವ ಪ್ರದರ್ಶಿಸಿದೆ. ಲೇಖನದ ಕೊರತೆಯೆಂಬುದೇ ಕಂಡುಬಂದಿಲ್ಲ. ಅಂದರೆ ಬಂದುದೆಲ್ಲ ಬೆಳಕು ಕಂಡಿಲ್ಲ. ಸಭ್ಯತೆಯ ಗೆರೆಯೊಳಗಿದ್ದು 'ಹಾಸ್ಯ' ಲೇಖನವೆಂಬ ಪ್ರಕಾರಕ್ಕೆ ಒಳಪಡುವುದಿದ್ದರೆ ಅಂಥ ಲೇಖನ ಯಾರಿಂದಲೇ ಬಂದಿದ್ದರು ಅದಕ್ಕೆ ಮನ್ನಣೆ. ಅದಕ್ಕೆ ಹಿರಿಯರು-ಕಿರಿಯ ರೆಂಬ ತಾರತಮ್ಯ ಗಣನೆಗಳಿಲ್ಲ. ಲೇಖಕರಿಗೆಲ್ಲ ವರ್ಷದಲ್ಲಿ ಮೂರು ಬಾರಿ ನಿಗದಿಯಾದಂತೆ ಹಣಸಂದಾಯವಾಗುತ್ತದೆ. ಇದುವರೆಗೂ ಒಬ್ಬರಾದರೂ ನಮಗೆ ಹಣ ಬಂದಿಲ್ಲವೆಂಬ ತಕರಾರನ್ನೇ ಎತ್ತಿಲ್ಲ. ೩೨ ವರ್ಷಗಳ ಅವಧಿಯಲ್ಲಿ ಒಬ್ಬರಾದರೂ ಲೇಖಕರೊಡನೆ ಸಂಬಂಧ ಕೆಡಿಸಿಕೊಳ್ಳದಿರುವ ಏಕೈಕ ಸಂಪಾದಕರು ಜಿ. ನಾರಾಯಣ.

'ವಿನೋದ'ಕ್ಕೆ ನಾರಾಯಣರನ್ನು ಬಿಟ್ಟರೆ ಆಯ್ಕೆ ಮಾಡುವವರು ಬೇರೆ ಯಾರೂ ಇಲ್ಲ, ಮೊಳೆಜೋಡಕರನ್ನು ಬಿಟ್ಟರೆ. ಅಂದರೆ ಕರಡು ತಿದ್ದುವ ಕಾರ್ಯವೂ ಸಂಪಾದಕರದ್ದೇ. ವಾಸ್ತವವಾಗಿ "ನಾನು ಲೇಖನವನ್ನು ಓದಿ ಆನಂದಪಡುವ ಸಮಯವೇ ಅದು" ಎನ್ನುತ್ತಾರೆ ನಾರಾಯಣ.

ಕೃತಿಚೌರ್ಯದ ಕಾಟ ಪ್ರಬಲರನ್ನು ಕಾಡಿರುವಾಗ 'ವಿನೋದ'ವನ್ನು ಕಾಡಿಲ್ಲವೆಂದರೆ ನಂಬಹುದೇ? ಎಲ್ಲ ನಿಯತಕಾಲಿಕಗಳನ್ನು ಓದುವ ಹವ್ಯಾಸವುಳ್ಳ ಸಂಪಾದಕ ನಾರಾಯಣರ ಕಣ್ಣುತಪ್ಪಿಸಿಯೂ ಚರ್ವಿತಚರ್ವಣ ಆಗುವುದುಂಟು. ಎಲ್ಲಿ ಪ್ರಕಟವಾದ್ದು, ಯಾವಾಗ ಯಾವ ಭಾಷೆಯದು ಎಂಬುದನ್ನೆಲ್ಲ ಪತ್ತೆ ಹಚ್ಚುವುದು ಕಷ್ಟ.

"ಹೊಸ ಲೇಖಕರಲ್ಲಿ ಇದು ಸ್ವಾಭಾವಿಕ. ಆದರೆ ಅನುಕರಣೆ ಮಾಡಿದರೂ ಚಿಂತೆಯಿಲ್ಲ. ಹೊಸ ಲೇಖಕರು ಬರುತ್ತಿದ್ದಾರೆಂಬ ಹರ್ಷ ನನಗಿದೆ. ನನ್ನ ಪತ್ರಿಕೆಯನ್ನು ಜನರೆಲ್ಲ ಓದಿ ಹರ್ಷಪಡುತ್ತಾರೆಂಬ ಭ್ರಮೆ ನನಗಿಲ್ಲ. ಆದರೆ ವಿನೋದ ಸಾಹಿತ್ಯ ಸೃಷ್ಟಿಗೆ ಹೊಸಬರು ಬರುತ್ತಿದ್ದಾರೆಂಬುದೇ ಒಂದು ಸಮಾಧಾನ."

'ವಿನೋದ'ವನ್ನು ೩೩ ವರ್ಷ ಕಾಲ ಬೆಳೆಸಿದ ಜಿ. ನಾರಾಯಣರು ಪತ್ರಿಕೆಯಿಂದ ಗಳಿಸದೆಯೂ ನೆಮ್ಮದಿಯಿಂದ ಇರುವುದರ ರಹಸ್ಯವಿದು. ಅವರು ಭ್ರಮಾಧೀನರಲ್ಲ. ಆದ್ದರಿಂದ ಭ್ರಮನಿರಸನಕ್ಕೆ ಆಸ್ಪದವಿಲ್ಲ. ನಿರಾಸೆಗೆ ಎಡೆಯಿಲ್ಲ. 'ವಿನೋದ' ಅವರ ಪಾಲಿಗೆ 'ವಿನೋದ' ವನ್ನೇ ನೀಡುತ್ತ ಬಂದಿದೆ.

(೧೯೮೪)

ರತ್ನತ್ರಯ ಸಾಧಕ

■ ಡಾ॥ ಸಾ.ಶಿ. ಮರುಳಯ್ಯ

ಜಲಿಯನ್‌ವಾಲಾಬಾಗ್‌ನಲ್ಲಿ ನಡೆದ ಪಾತಕಿ ಡಯರ್‌ನ ಹತ್ಯಾಕಾಂಡವಿನ್ನೂ ಜನಮನದಲ್ಲಿ ಹಸುರಾಗಿತ್ತು; ಲಾಲಾಜಿಯವರು ಪೊಲೀಸರ ಲಾಠಿ ಏಟುತಿಂದು ಮುಂಬಯಿನ ನಡುರಸ್ತೆಯಲ್ಲಿ ನೆತ್ತರು ಕಾರುತ್ತ ಬಿದ್ದಿದ್ದ ದೃಶ್ಯ ಭಾರತೀಯನ ಕಣ್ಣಿಂದ ದೂರವಾಗಿರಲಿಲ್ಲ ; ಪಂಜಾಬಿನಲ್ಲಿ ಕಿಶೋರ ಕೇಸರಿ ಭಗತ್‌ಸಿಂಗ್, ಸುಖದೇವ್ ಭಗವತೀಚರಣ ಇವರ ಅರೆ ಬೆಂದ ಹೆಣಗಳಿನ್ನೂ ಸಟ್ಲೇಜ್ ನದಿಯಲ್ಲಿ ತೇಲುತ್ತಾ ಜಲಚರಗಳಿಗೆ ಆಹಾರವಾಗುತ್ತಿದ್ದ ನೋಟ ಅಳಿಸಿರಲಿಲ್ಲ; ಪಂಜಾಬಿನ ರಾಜಬೀದಿಯಲ್ಲಿ ಪ್ರತಿ ಭಾರತೀಯನೂ ಅಂಬೆಗಾಲಿಟ್ಟುಕೊಂಡು ಹೋಗಬೇಕು; ತಲೆ ಎತ್ತಿ ನಡೆಯಲಾಗದು ಎಂಬ ಅಮಾನುಷ ಶಾಸನ ಕಣ್ಣೆದುರಿನಲ್ಲಿ ನರ್ತಿಸುತ್ತಿತ್ತು. ಬ್ರಿಟಿಷರ ಸುಳ್ಳು ಆಶ್ವಾಸನೆಗಳಿಂದ ಬೇಸತ್ತ ಬಾಪೂ ಕಿಡಿಕಿಡಿಯಾದರು; ಅವರ ಸೈರಣೆ ಸಮಾಧಿಯಾಗಿತ್ತು. ೧೯೪೨ರಲ್ಲಿ ಮುಂಬೈ ಮಹಾನಗರ ಅಧಿವೇಶನ ವೇದಿಕೆಯ ಮೇಲೆ ನಿಂತು ಗುಡುಗಿದರು :

'ಕ್ವಿಟ್ ಇಂಡಿಯಾ ; ಕ್ವಿಟ್ ಇಂಡಿಯಾ ; ಕ್ವಿಟ್ ಇಂಡಿಯಾ' ಎಂಬುದು ಬ್ರಿಟಿಷರಿಗೆ ಬಾಪೂಜಿ ಕೊಟ್ಟ ಕಟ್ಟಕಡೆಯ ದಿಟ್ಟ ಆದೇಶವಾಗಿತ್ತು. 'ಮಾಡಿರಿ ಇಲ್ಲವೆ ಮಡಿಯಿರಿ' ಭಾರತೀಯರಿಗೆ ಅವರಿತ್ತ ಮೊತ್ತ ಮೊದಲ ಕ್ರಾಂತಿಕಾರಕ ಸಂದೇಶವಾಗಿತ್ತು.

ಬಾಪೂಜಿಯವರ ಮಾತು ಕೃತಿಗಿಳಿಯತೊಡಗಿದಾಗ ಭಾರತದ ಸ್ವಾತಂತ್ರ್ಯದ ಕಿಚ್ಚು ಜ್ವಾಲಾಮುಖಿಯಂತೆ ರಾಷ್ಟ್ರಾದ್ಯಂತ ಹೊಳೆಹರಿಯತೊಡಗಿತ್ತು. ಭಯಂಕರ

ಭಾವಾತ್ಮಕ ಕಿಚ್ಚು ಅದು. ಕಾರ್ಮಿಕರು ಗಿರಣಿಗಳನ್ನು ತ್ಯಜಿಸಿದರು, ಮಕ್ಕಳು ಶಾಲಾ ಕಾಲೇಜುಗಳನ್ನು ತೊರೆದರು. ಹಾಗೆ ಶಿಕ್ಷಣಕ್ಕೆ ಶರಣು ಹೊಡೆದು ಬಾಪೂಜಿಯವರ ಕರೆಗೆ ಮಾರುಹೋಗಿ ಮುಂಬೈಗೆ ಹೋಗಿದ್ದ ಓರ್ವ ತೇಜಸ್ವೀ ತರುಣ ಅಧಿವೇಶನ ಮುಗಿದ ಮೇಲೆ ಟಿಕೆಟ್ ಪಡೆದು ಬೆಂಗಳೂರಿಗೆ ಹೊರಟಿದ್ದ. ಆದರೆ ಅವನು ರೈಲ್ವೇ ಪ್ಲಾಟ್‌ಫಾರಂ ಮುಟ್ಟುವಷ್ಟರಲ್ಲಿ ರೈಲು ದಮ್ಮುಕಟ್ಟಿ ಹೊರಟಿತ್ತು. ಉರುಳುವ ರೈಲಿನಲ್ಲಿ ಯಾವ ಡಬ್ಬಿಗೆ ಹತ್ತುವುದು? ಎಲ್ಲಾ ಡಬ್ಬಿಗಳ ಬಾಗಿಲುಗಳನ್ನೂ ಭದ್ರಮಾಡಲಾಗಿತ್ತು.

ಓಡೋಡಿ ಬಂದ ಬೆಂಗಳೂರು ಬಾಲಕನಿಗೆ ಏನೂ ತೋಚಲಿಲ್ಲ. ತಬ್ಬಿಬ್ಬಾದ ಚಣಕಾಲ. ಅಂದಿನ ರೈಲಿಗೆ ಹೋಗದಿದ್ದರೆ ಬೆಂಗಳೂರು ಮುಟ್ಟುವವರೆಗೂ ಉಪವಾಸ ಮಾಡಬೇಕಾಗುತ್ತೆ; ಹಣದ ಕೊರತೆ, ಅಪರಿಚಿತ ಸ್ಥಳ. ಬಾಲಕ ಧೈರ್ಯ ತಂದುಕೊಂಡು ಯಾವುದೋ ಒಂದು ಡಬ್ಬಿಯ ಕಂಬಿ ಹಿಡಿದು ತಾಯಿತೊಡೆ ಅಪ್ಪುವ ಮಗುವಿನಂತೆ ಅದನ್ನು ಅಪ್ಪಿಕೊಂಡು ನಿಂತ. ರೈಲು ಜೋರಾಗಿ ಓಡುತ್ತಲೇ ಇತ್ತು. ತಾನು ಏನಾಗುತ್ತೇನೆಂಬ ಕಲ್ಪನೆ ಆ ಬಾಲಕನಿಗಿಲ್ಲ. ಹಾಗೇ ಸಾಗಿತು ಸ್ವಲ್ಪ ದೂರ.

ಆಗ ಇದ್ದಕ್ಕಿದ್ದಂತೆಯೇ ಡಬ್ಬದ ಬಾಗಿಲು ತೆರೆಯಿತು. ಬಾಲಕನಿಗೆ ಒಳಗಿನಿಂದ ಹಿಂದೀ ಭಾಷೆಯಲ್ಲಿ ಕರೆಬಂತು. ಬಾಲಕ ಒಳನುಗ್ಗಿ ನಿಂತ. ನೋಡುತ್ತಾನೆ ; ಅದರ ತುಂಬಾ ಮಿಲಿಟರಿಯವರು ; ಬಾಲಕನ ಜಂಘಾಬಲವೇ ಉಡುಗಿಹೋಯಿತು. 'ಓಹೋ ತಪ್ಪು ಮಾಡಿಕೊಂಡೆ. ಇಲ್ಲವೇ ನನ್ನ ದೈವವೇ ನನಗೆ ಕೈಕೊಟ್ಟಿತು. ನನ್ನ ಕತೆ ಮುಗಿಯಿತು' ಎಂದಂದುಕೊಂಡ.

ಜಲಿಯನ್‌ವಾಲಾಬಾಗ್ ಪ್ರಕರಣ ನಡೆದ ದಿನವೇ ಅಂದೇ ರಾತ್ರಿ ಅದೇ ಡಯರ್ ತನ್ನ ಅನುಯಾಯಿಗಳ ಜೊತೆ ಹರಟೆಕೊಚ್ಚುತ್ತಾ ಪ್ರಯಾಣಿಸುತ್ತಿದ್ದ ಡಬ್ಬಿಯಲ್ಲಿ ಲಗ್ಗೇಜು ಇಡುವ ಜಾಗದಲ್ಲಿ ಮಲಗಿಕೊಂಡಿದ್ದ ಜವಹರಲಾಲ್ ನೆಹರೂರವರಿಗಾದ ಅನುಭವ ಆ ಬಾಲಕನಿಗಾಯಿತಂತೆ!

ಎಲ್ಲ ಸಮವಸ್ತ್ರಧಾರಿಗಳು ಗೇರಾಯಿಸಿಕೊಂಡರು. ಬಾಲಕನ ಮೈ ತುಂಬ ಖಾದಿ. ಅವನ ತಲೆಯ ಮೇಲೆ ಒಂದು ಗಾಂಧೀಟೋಪಿ, ಬಗಲಲ್ಲಿ ಒಂದು ಖಾದಿ ಚೀಲ ; ಕಾಲಲ್ಲಿ ಒರಟು ಚರ್ಮದ ದಪ್ಪ ಚಪ್ಪಲಿ. ತೆಳ್ಳಗೆ ಕುಳ್ಳಗಿದ್ದ ಈ ಬಾಲಕನನ್ನೇ ಪರೀಕ್ಷಕ ದೃಷ್ಟಿಯಿಂದ ವೀಕ್ಷಿಸತೊಡಗಿದರು.

ಹುಡುಗ ಗಡಗಡ ನಡುಗುತ್ತ ನಿಂತ.

ಪ್ರಶ್ನೆಗಳು ನಾಲ್ಕು ದಿಕ್ಕುಗಳಿಂದ ಬಿಟ್ಟ ಬಾಣಗಳಂತೆ ಬಂದವು.

'ಏನಯ್ಯಾ ಯಾವೂರವನು?'

'ಬೆಂಗಳೂರು'

'ಎಲ್ಲಿಗೆ ಹೋಗಿದ್ದೆ?'

'ಮುಂಬಯಿಗೆ'

'ಏಕೆ?'

'ಬಾಪೂಜಿ ಕರೆ ಕೊಟ್ಟಿದ್ದರು. ಅದಕ್ಕಾಗಿ'

'ಬಾಪೂ ಏನು ಹೇಳಿದರು? ಯಾವ ನಿರ್ಣಯ ತೆಗೆದುಕೊಂಡಿರಿ?'

'ಬ್ರಿಟಿಷರೇ ಭಾರತದಿಂದ ತೊಲಗಿರಿ ಅಂದರು. ನಮಗೆಲ್ಲಾ ಮಾಡಿ ಇಲ್ಲವೇ ಮಡಿಯಿರಿ ಅಂದರು.'

'ನೀವೆಲ್ಲಾ ಒಪ್ಪಿದಿರಿ?'

'ಒಪ್ಪದೆ ಇರಲು ಹೇಗೆ ಸಾಧ್ಯ? ನಾನಷ್ಟೇ ಏಕೆ ನಿಜವಾದ ಭಾರತೀಯನು ಯಾವನೇ ಆಗಿರಲಿ, ಅವನಿಗೆ ಬಾಪೂ ಮಾತು ಸರ್ವಮಾನ್ಯ'

'ಮುಂದೇನು ಮಾಡ್ತೀರಿ?'

"ಭಾರತ ಬಿಡುಗಡೆ ಪಡೆಯುವವರೆಗೂ ಹೋರಾಡ್ತೀವಿ"

"ನಿಮ್ಮನ್ನು ಹೋರಾಟಕ್ಕೆ ಬಿಟ್ಟರೆ?"

"ಬಿಡದೇ ಏನು ಮಾಡ್ತಾರೆ?"

"ಏಯ್ ಬಚ್ಚಾ, ನೀನೀಗ ಇರೋದೆಲ್ಲಿ ಗೊತ್ತಾ? ಸಿಂಹದ ಬೋನಿನಲ್ಲಿ"

"ಅಲ್ಲ, ಭಾರತೀಯರೇ ಆದ ನನ್ನ ಅಣ್ಣಂದಿರ ಆಶ್ರಯದಲ್ಲಿ?"

ಎಲ್ಲ ಸೈನಿಕರು ಸ್ತಬ್ಧರಾದರು.

ಬಾಲಕ ಮುಂದುವರಿದ–

"ಅಣ್ಣಂದಿರಾ, ನೀವೂ ನನ್ನಂತೆಯೇ ಭಾರತಾಂಬೆಯ ಮಕ್ಕಳು, ನನ್ನ ಮೇಲಾಗಲಿ ನನ್ನಂತಹ ಸ್ವಯಂ ಸೇವಕರನ್ನಾಗಲೀ, ಗಾಂಧೀಜಿಯವರನ್ನಾಗಲಿ ಅಥವಾ ಭಾರತಾದ್ಯಂತ ರೊಚ್ಚಿಗೆದ್ದಿರುವ ಯಾವ ಸ್ವಾತಂತ್ರ್ಯ ಪ್ರೇಮಿಯ ಬಗೆಗಾಗಲಿ ನಿಮಗೆ ದ್ವೇಷ ಮಾತ್ಸರ್ಯ ಇಲ್ಲ. ಆದರೆ ಬ್ರಿಟಿಷರ ಗುಲಾಮರಾಗಿರುವ ನಿಮಗೆ ನಿಮ್ಮ ಅರಿವು ನಿಮಗಾಗುತ್ತಿಲ್ಲ. ಕುರಿಮಂದೆಯಲ್ಲಿ ಬೆಳೆದ ಸಿಂಹ ತಾನೂ ಒಂದು ಕುರಿ ಎಂದೇ ಭಾವಿಸಿದಂತಾಗಿದೆ : ನಿಮ್ಮ ಮೈಯಲ್ಲಿ ಹರಿಯುತ್ತಿರುವುದು ನನ್ನಂತಹ ನಿಜವಾದ ಭಾರತೀಯ ರಕ್ತ. ಆದರೆ ಅದೀಗ ಬ್ರಿಟೀಷರ ಎಂಜಲು ತಿಂದು ಕಲುಷಿತವಾಗಿದೆ. ಅದನ್ನು ಶುದ್ಧೀಕರಿಸುವ ಕಾಲ ದೂರವಿಲ್ಲ'.

ಬಾಲಕನ ಮಾತುಗಳು ಆಣಿಮುತ್ತುಗಳಂತೆ ಉರುಳುತ್ತಿದ್ದವು. ಮಿಲಿಟರಿ ಮಂದಿ ಮಂತ್ರಮುಗ್ಧರಾಗಿ ಬಿಟ್ಟ ಕಣ್, ತೆರೆದ ಬಾಯ್ ಆಗಿ ಕೇಳುತ್ತಾ ಕುಳಿತರು.

ಬಾಲಕ ಅವರ ಮಿತ್ರನಾದ, ಬೋಧಕನಾದ, ಗುರುವೇ ಆದ !

ಆ ಬಾಲಕ ಬೇರಾರೂ ಅಲ್ಲ. ದೇಶಹಳ್ಳಿ ಜಿ. ನಾರಾಯಣ.

ವ್ಯಕ್ತಿಗೆ ಒಂದು ಮುಖ, ಆದರೆ ವ್ಯಕ್ತಿತ್ವಕ್ಕೆ ನಾನಾ ಮುಖಗಳು–ಬೀಸುವ ಗಾಳಿಯಂತೆ. ಹರಿಯುವ ನೀರಿನಂತೆ, ಉರಿಯುವ ಜ್ಯೋತಿಯಂತೆ–ಯಾವ ದಿಶೆಯಲ್ಲಿ ನೋಡಿದರೂ ನೋಡುವವರ ನೋಡುವವನ ದೃಷ್ಟಿಗೆ ತಕ್ಕಂತೆ ದರ್ಶನವನ್ನೀಯುವ ನಿಲುವು. ಜಿ. ನಾರಾಯಣ ರವರ ವ್ಯಕ್ತಿತ್ವದ ಆನೆಯನ್ನು ಅಳೆಯಹೋದ ಕುರುಡರಲ್ಲಿ ನಾನೂ ಒಬ್ಬ. ಸ್ವಯಂ ಸೇವಕ

ನಾರಾಯಣ, ರಾಷ್ಟ್ರಪ್ರೇಮಿ ನಾರಾಯಣ, ರಾಜಕಾರಣಿ ನಾರಾಯಣ, ಮೇಯರ್ ನಾರಾಯಣ, ಸಾಹಿತಿ ನಾರಾಯಣ, ಪತ್ರಿಕೋದ್ಯಮಿ ನಾರಾಯಣ, ಶಿಕ್ಷಣತಜ್ಞ ನಾರಾಯಣ, ಕನ್ನಡ ಸಾಹಿತ್ಯ ಪರಿಷತ್ ನಾರಾಯಣ, ಕರ್ಮಯೋಗಿ ನಾರಾಯಣ, ಧರ್ಮಪ್ರೇಮಿ ನಾರಾಯಣ–ಇಂಥವೆನಿತೋ ವ್ಯಕ್ತಿತ್ವದ ನಾರಾಯಣ ಮುಖಗಳನ್ನು ನಾನು ಕಾಣೆ. ಮೇಲೆ ಹೇಳಿದ ಘಟನೆಯೂ ನಾನು ಕೇಳಿ ತಿಳಿದದ್ದು. ಆದರೆ ನಾನು ಕಂಡದ್ದು ಸಮಯಪಾಲಕ ಹಾಗೂ ತತ್ವನಿಷ್ಠ ನಾರಾಯಣರನ್ನು. ಇದನ್ನು ಗುರುತಿಸಿದ್ದು ಅವರು ಪರಿಷತ್ತಿನ ಅಧ್ಯಕ್ಷರಾಗಿದ್ದಾಗ. ಪರಿಷತ್ತಿನಲ್ಲಿ ಯಾವುದೇ ಕಾರ್ಯಕ್ರಮಗಳು ನಡೆಯಲಿ, ಯಾರೇ ಇರಲಿ, ಇಲ್ಲದಿರಲಿ, ಬರಬೇಕಾದವರು ಯಾರೇ ಬರಲಿ, ಬಾರದಿರಲಿ–ಸಮಯಕ್ಕೆ ಸರಿಯಾಗಿ ಜಿ. ನಾರಾಯಣ ಅವರು ವೇದಿಕೆಯ ಮೇಲೆ ಹಾಜರಾಗುತ್ತಿದ್ದುದುಂಟು. ಅತಿಥಿಗಳಿಲ್ಲದಾಗ ತಾವೇ ಅತಿಥಿಯಾಗಿ, ಸಭಾಧ್ಯಕ್ಷರಿಲ್ಲದಾಗ ತಾವೇ ಅಧ್ಯಕ್ಷರಾಗಿ ಕಾರ್ಯಕ್ರಮ ಆರಂಭಿಸುತ್ತಿದ್ದರು.

ಸಮಯ ಪಾಲನಾ ನಿಷ್ಠೆಯನ್ನು ನಾನು ಕಂಡದ್ದು ಇಬ್ಬರಲ್ಲಿ: ಒಬ್ಬರು ಗಾಂಧೀಜಿ, ಮತ್ತೊಬ್ಬರು ಗಾಂಧೀಜಿಯವರ ಕಟ್ಟಾಭಕ್ತ ಜಿ. ನಾರಾಯಣ.

ಬಾಪೂಜಿಯವರಂತೆಯೇ ನಾರಾಯಣರೂ ತತ್ತ್ವಕ್ಕೆ ಅಂಟಿಕೊಳ್ಳುವ ಸ್ವಭಾವದವರು. ತಮಗೆ ಸರಿ ಎಂದು ತೋರಿದ ನಿರ್ಧಾರಕ್ಕೆ ಬಂದ ತತ್ತ್ವಕ್ಕೆ ಉಡದಂತೆ ಅಪ್ಪಿಕೊಂಡುಬಿಡುತ್ತಾರೆ. ಅದರಿಂದ ಅವರನ್ನು ಬಿಡಿಸಲು ಸಾಧ್ಯವೇ ಇಲ್ಲ. ಯಾವ ಆಕರ್ಷಣೆ ಅಡಚಣೆಗಳು ಅಡ್ಡಾಗಲಿ, ಒಡ್ಡಾಗಲಿ ನಾರಾಯಣರು ಮಾತ್ರ ಸ್ಥಿತಪ್ರಜ್ಞರಂತೆ ಕುಳಿತುಬಿಡುತ್ತಾರೆ. ಒಪ್ಪಿತ ತತ್ತ್ವಪ್ರತಿಪಾದನೆಯಲ್ಲಿ ಬಂಡೆಯಾಗುತ್ತಾರೆ ; ಬೆಟ್ಟವಾಗುತ್ತಾರೆ. ಇದನ್ನು ಶಿವಮೊಗ್ಗ ಮತ್ತು ರಾಯಚೂರುಗಳಿಗೆ ಅವರೊಡನೆ ಜಿಲ್ಲಾ ಸಮಿತಿಗಳ ರಚನೆಗಾಗಿ ಹೋಗಿದ್ದಾಗ ಕಂಡೆ.

ಅವರಲ್ಲಿರುವ ಮತ್ತೊಂದು ಮಹಾ ಮೌಲ್ಯತುಂಬಿದ ಮಣಿ ಎಂದರೆ ಮಾನವತೆ. ಡಾ॥ ಸಿದ್ಧಯ್ಯ ಪುರಾಣಿಕರು, 'ಏನಾದರೂ ಆಗು ಮೊದಲು ಮಾನವನಾಗು' ಎಂದು ಹೇಳುವಂತೆ ಆದವರು ಜಿ. ನಾರಾಯಣ. ಕಛೇರಿಯಲ್ಲಿರಲಿ, ರಸ್ತೆ ಬದಿಯಲ್ಲಿ ಸಿಗಲಿ 'ಏನ್ ಸ್ವಾಮಿ.... ಬನ್ನಿ ಸ್ವಾಮಿ' ಎಂಬ ಜೇನು ತುಂಬಿದ ಆ ಸವಿನುಡಿ, ಅದೇ ರೀತಿ, ಯಾರನ್ನೂ ದ್ವೇಷಿಸದ, ಯಾರ ಪ್ರಗತಿಗೂ ಕರುಬದ ಹಿರಿಯ ಗುಣ ಅವರದು. ಧನಿಕ ದರಿದ್ರ ಎಂಬ ಭೇದವಿಲ್ಲದೆ, ವೃದ್ಧ ಬಾಲಕ ಎಂಬ ತಾರತಮ್ಯವಿಲ್ಲದೆ ಎಲ್ಲರಲ್ಲೂ ಒಂದೇ ಬಗೆಯಲ್ಲಿ ವರ್ತಿಸುವ ಸಮತಾವಾದಿತ್ವ ಬೆಲೆಕೊಟ್ಟರೆ ಸಿಗುವ ವಸ್ತುವಲ್ಲ. ಅದನ್ನು ಸಾಧಿಸಿ, ಸಿದ್ಧಿಸಿಕೊಂಡವರು ಜಿ. ನಾರಾಯಣ ಅವರು.

ಒಟ್ಟಾರೆ ನಾನು ಹೇಳುವುದಿಷ್ಟೆ : ಸಮಯ ಪಾಲನೆ, ತತ್ತ್ವನಿಷ್ಠೆ, ಮಾನವತೆ–ಈ ರತ್ನತ್ರಯಗಳ ಸಾಧಕ ಶ್ರೀ ಜಿ. ನಾರಾಯಣ.

(೧೯೮೪)

ನಾರಾಯಣ ಅವರ ಪೌರಸೇವೆ

■ ಮ. ಫಜ್ಲುಲ್ ಹಸನ್

"ಎದ್ದು ನಿಂತ ಯಲಹಂಕ ಭೂಪ!" "ಬಿದ್ದು ಹೋದ ಬ್ರಿಟಿಷ್ ಸ್ಮಾರಕ!"

ಪ್ರಜಾವಾಣಿ, ಸಾಪ್ತಾಹಿಕ ಪುರವಣಿ, ೧೯೬೪ರ ನವೆಂಬರ್ ದಿನಾಂಕ ೧ರ ಮುಖಪುಟದಲ್ಲಿ, ಮೇಲಿನ ಎರಡು ಶೀರ್ಷಿಕೆಗಳು ಓದುಗರ ಮನಸ್ಸನ್ನು ಸೆಳೆದವು.

ಅದೇ ದಿನ, ಮುಂಜಾನೆ ಶುಭಮುಹೂರ್ತದಲ್ಲಿ ಮದ್ರಾಸಿನ ಅಂದಿನ ರಾಜ್ಯಪಾಲ ಶ್ರೀ ಜಯಚಾಮರಾಜ ಒಡೆಯರರು ನಗರಸಭಾ ಕಾರ್ಯಾಲಯದ ಮುಂದಿರುವ ಪುಟ್ಟ ಉದ್ಯಾನವನದಲ್ಲಿ ಬೆಂಗಳೂರು ನಿರ್ಮಾಪಕ ಕೆಂಪೇಗೌಡರ ಪ್ರತಿಮೆಯನ್ನು, ಮಂಗಳವಾದ್ಯಗಳ ಹಿನ್ನೆಲೆಯ ಆಕರ್ಷಕ ಸಮಾರಂಭದಲ್ಲಿ ಅನಾವರಣ ಮಾಡಿದರು. ಈ ಸಮಾರಂಭಕ್ಕೆ ಕೇವಲ ಮೂರು ದಿನಗಳ ಹಿಂದೆ ಪ್ರತಿಮೆಯ ಮುಂದಿದ್ದ ರಣಸ್ತಂಭ (ಸೆನೆಟಾಫ್) ಮಣ್ಣು ಪಾಲಾಯಿತು. ೪೦ ಅಡಿ ಉದ್ದವಿದ್ದು, ಒಂದು ಕಾಲು ಶತಮಾನದಿಂದಲೂ ನಿಂತಿದ್ದ ಈ ಸ್ಮಾರಕ ೧೭೯೧ರ ಬೆಂಗಳೂರಿನ ಕದನದಲ್ಲಿ ಮೈಸೂರು ಸೈನ್ಯಕ್ಕೆ ಉಂಟಾದ ಪರಾಭವದ ಸಂಕೇತವೂ, ಚಾರಿತ್ರಿಕ ಸಾಕ್ಷ್ಯವೂ ಆಗಿತ್ತು. ಬೀಳಿಸಲು ಕಾರಣ, ಅದು ಪ್ರತಿಮೆಯ ನೇರ ದೃಷ್ಟಿಗೆ ಅಡ್ಡಲಾಗಿತ್ತು.

ಕೆಂಪೇಗೌಡರ ಪ್ರತಿಮೆಯ ಅನಾವರಣ ಹಾಗೂ ಬ್ರಿಟಿಷ್ ಸ್ಮಾರಕದ ಅಳಿವು ಬೆಂಗಳೂರು ನಗರ ಪಾಲಿಕೆಯ ಆಳ್ವಿಕೆಯಲ್ಲಿ ಸ್ಮರಣೀಯ ಕಾರ್ಯ ಕಲಾಪಗಳು. ಇವುಗಳ ಸೂತ್ರಧಾರ ಅಂದು ಬೆಂಗಳೂರು ನಗರದ ಮೇಯರ್ ಆಗಿದ್ದ ಜಿ. ನಾರಾಯಣ !

ಜಿ. ನಾರಾಯಣ ಸಾಮಾನ್ಯ ವ್ಯಕ್ತಿ. ಅವರ ಆತ್ಮೀಯತೆ, ಸಜ್ಜನಿಕೆ, ಸಂಯಮ ಮತ್ತು ಮಾತಿನ ಗಾಂಭೀರ್ಯದಿಂದ ಮಾತ್ರ ಅವರ ವ್ಯಕ್ತಿತ್ವವನ್ನು ಅಳೆದರೆ ನಾಣ್ಯದ ಒಂದು ಮುಖವನ್ನು ನೋಡಿಕೊಂಡಂತೆ ಆದೀತು. ಏಕೆಂದರೆ, ಈ ಸಾಧಾರಣ ವ್ಯಕ್ತಿಯಲ್ಲಿ ಒಂದು ಅಪೂರ್ವ ಶಕ್ತಿಯೂ ಅಡಗಿದೆ. ದೃಢಸಂಕಲ್ಪ, ಸರಿ ಎನಿಸಿದ ಕೆಲಸವನ್ನು ಬಿಡದ ಛಲ, ಅದನ್ನು ಕಾರ್ಯರೂಪಕ್ಕೆ ತರುವ ಸಂಧಾನ ಚತುರತೆ ನಾರಾಯಣ ಅವರ ಹುಟ್ಟುಗುಣ.

ಬೆಂಗಳೂರಿನ ಎರಡು ಪುರಸಭೆಗಳು ೧೯೪೮ರಲ್ಲಿ ವಿಲೀನಗೊಂಡು “ಬೆಂಗಳೂರು ನಗರ ಪಾಲಿಕೆ” ಅಸ್ತಿತ್ವಕ್ಕೆ ಬಂದಿತು. ಆಗ ನಗರದ ವಿಸ್ತೀರ್ಣ ೨೮ ಚದರ ಮೈಲಿಗಳು. ಚುನಾಯಿತ ಪ್ರತಿನಿಧಿಗಳಿಗೆ ಇದ್ದ ಅಧಿಕಾರ ತೀರಾ ಕಡಿಮೆ. ವರಮಾನವೂ ಕಡಿಮೆ. ಆದರೆ ನಾಗರಿಕರಿಗೆ ಒದಗಿಸಬೇಕಾದ ಪೌರ ಸೌಲಭ್ಯಗಳು ಅಪಾರವಾಗಿದ್ದವು.

ದೇಶಹಳ್ಳಿ ಜಿ. ನಾರಾಯಣ ೧೯೫೮ರಲ್ಲಿ ಮೊದಲನೇ ಬಾರಿ ಚಾಮರಾಜಪೇಟೆ ಕ್ಷೇತ್ರದಿಂದ ಚುನಾಯಿತರಾದಾಗ ೩೩ ವರ್ಷಗಳ ಉತ್ಸಾಹಿ ತರುಣ. ಮುಂದೆ, ೭ ವರ್ಷಗಳ ಪರ್ಯಂತ ಅವರು ನಗರ ಪಾಲಿಕೆಗೆ ಅವಿಚ್ಛಿನ್ನ ಸೇವೆ ಸಲ್ಲಿಸಿದರು. ಈ ಅವಧಿಯಲ್ಲಿ ಅವರು ಒಂದು ವರ್ಷ ಆರೋಗ್ಯ ಸ್ಥಾಯೀ ಸಮಿತಿಯ ಸದಸ್ಯರಾಗಿಯೂ ನಾಲ್ಕು ವರ್ಷ ಕಾಮಗಾರಿಕೆ ಸ್ಥಾಯೀ ಸಂಸ್ಥೆಯ ಅಧ್ಯಕ್ಷರಾಗಿಯೂ ಒಂದು ವರ್ಷ (೧೯೬೩) ಆಡಳಿತ ಪಕ್ಷದ ನಾಯಕರಾಗಿಯೂ ಮತ್ತು ೧೯೬೪ರಲ್ಲಿ ಬೆಂಗಳೂರು ನಗರ ಪಾಲಿಕೆಯ ಮೇಯರ್ ಆಗಿಯೂ ಕೆಲಸ ಮಾಡಿದ್ದಾರೆ. ಅವರ ಪೌರಸೇವೆಯನ್ನು ಸ್ಮರಿಸಿದರೆ ಅವರ ಕಾರ್ಯತತ್ಪರತೆ ಹಾಗೂ ನಾಯಕ ಗುಣಗಳನ್ನು ತಿಳಿದುಕೊಳ್ಳದೆ ಇರಲಾಗದು.

ಈ ಶತಮಾನದ ಆರನೇ ದಶಕದಲ್ಲಿ ಬೆಂಗಳೂರಿನ ಜನಸಂಖ್ಯೆಯು ಜಾಸ್ತಿಯಾಗ ತೊಡಗಿತು. ನಗರದ ವಿಸ್ತೀರ್ಣವೂ ಅಪಾರವಾಗಿ ಬೆಳೆಯತೊಡಗಿತು. ಇದುವರೆಗೆ ಬೆಂಗಳೂರಿಗೆ ನೀರು ಸರಬರಾಜು ಮಾಡುತ್ತಿದ್ದ ಹೆಸರಘಟ್ಟ ಮತ್ತು ತಿಪ್ಪಗೊಂಡನಹಳ್ಳಿಯ ಜಲಾಶಯಗಳು ನಗರದ ನೀರಿನ ಬೇಡಿಕೆಯನ್ನು ಪೂರೈಸಲು ಸಾಲದಾದವು. ಬೇಸಿಗೆಯಲ್ಲಿ ನಾಗರೀಕರು ಕುಡಿಯುವ ನೀರಿಗಾಗಿ ಪೇಚಾಡುತ್ತಿದ್ದರು. ದಿನೇ ದಿನೇ ಬೆಂಗಳೂರಿನ ನೀರಿನ ದಾಹ ಹೆಚ್ಚುತ್ತಲಿತ್ತು. ಇದರಿಂದಾಗಿ ನಗರಕ್ಕೆ ಕಾವೇರಿಯ ನೀರು ಸರಬರಾಜು ಇಲ್ಲದ ಹೊರತು ಬೇರೆ ಮಾರ್ಗವಿಲ್ಲವೆಂದು ನಗರ ಪಿತೃಗಳು ಪ್ರತಿಪಾದಿಸತೊಡಗಿದರು. ಆದರೆ, ಸಂಬಂಧಪಟ್ಟ ಕುಬ್ಜ ಇಂಜಿನೀರುಗಳ ದೃಷ್ಟಿಯಲ್ಲಿ, ಸಮುದ್ರ ಮಟ್ಟಕ್ಕಿಂತ ೩೧೧೩ ಅಡಿ ಎತ್ತರವಿರುವ ಬೆಂಗಳೂರಿಗೆ ಕಾವೇರಿಯಿಂದ ನೀರು ಸರಬರಾಜು ಮಾಡುವುದು ಅಸಾಧ್ಯವಾಗಿತ್ತು. ಅದಕ್ಕಾಗಿ ಅವರು ಹಳ್ಳಿಮಾಲ ಮತ್ತು ಶಿಂಷಾ ನೀರು ಸರಬರಾಜು ಯೋಜನೆಗಳನ್ನು ತಯಾರು ಮಾಡಿದ್ದರು. ಈ ಯೋಜನೆಗಳನ್ನು ಕಾರ್ಯಗತ ಮಾಡಲು ಸರ್ಕಾರವೂ ನಿರ್ಧಾರಕ್ಕೆ ಬಂದಿತ್ತು. ಆದರೆ ೧೯೬೩ರಲ್ಲಿ ಪ್ರಧಾನಮಂತ್ರಿ ಪಂಡಿತ್ ಜವಾಹರಲಾಲ್ ನೆಹರು ಅವರು ಬೆಂಗಳೂರಿಗೆ ಬಂದಿದ್ದಾಗ್ಗೆ ನಗರ ಪಿತೃಗಳ ಈ ಬೇಡಿಕೆಯನ್ನು ಸಹಾನುಭೂತಿಯಿಂದ ಪರಿಶೀಲಿಸಿ ತಮ್ಮ ಕೈಲಾದ ಮಟ್ಟಿಗೆ ಸಹಾಯ ಮಾಡುವುದಾಗಿ

ಮಾತುಕೊಟ್ಟರು. ಆದರೂ ಸರ್ಕಾರ ಕಾವೇರಿ ನದಿ ಯೋಜನೆಯನ್ನು ಕೈಗೊಳ್ಳದೆ ಕಾಲ ವಿಳಂಬ ಮಾಡಿತು.

ಇದೀಗ ನಗರ ಪಿತೃಗಳ ಸಹನೆ ಇಲ್ಲದಾಯಿತು. ಟಿ. ಆರ್. ಶಾಮಣ್ಣ, ಪಿ.ಎಸ್. ಕೃಷ್ಣ ಅಯ್ಯರ್ ಮತ್ತು ಜಿ. ನಾರಾಯಣ ಅವರ ನೇತೃತ್ವದಲ್ಲಿ ಅವರು "ಬೆಂಗಳೂರಿಗೆ ಕಾವೇರಿ ನೀರು ಬೇಕೇ ಬೇಕು" ಎಂದು ಚಳವಳಿ ನಡೆಸಿದರು. ಆಗ ಸರ್ಕಾರ ಹಳ್ಳಿಮಾಲ ಮತ್ತು ಶಿಂಷಾ ಯೋಜನೆಗಳನ್ನು ಕೈಬಿಟ್ಟಿತು. ನಗರಕ್ಕೆ ಕಾವೇರಿ ನೀರು ಸರಬರಾಜಿನ ಯೋಜನೆ ರೂಪುಗೊಂಡು ಅದರ ಉದ್ಘಾಟನೆ ನಡೆದದ್ದು ಜಿ. ನಾರಾಯಣ ಮೇಯರ್ ಆಗಿದ್ದಾಗ. ೧೯೬೪ರ ಮೇ ಮಾಹೆಯ ೨೧ನೇ ದಿನ ಜಿ. ನಾರಾಯಣ ಅವರ ಪೌರಸೇವೆಗೆ ಮುಕುಟಪ್ರಾಯದ ದಿನ. ಅಂದು, ಬಸವನಗುಡಿಯ ಕೃಷ್ಣರಾವ್ ಪಾರ್ಕಿನಲ್ಲಿ, ಕೇಂದ್ರ ಸರ್ಕಾರದ ಖಾತೆರಹಿತ ಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿಯವರು ಕಾವೇರಿ ನೀರು ಮತ್ತು ಒಳಚರಂಡಿ ವ್ಯವಸ್ಥೆಯ ಯೋಜನೆಯ ಉದ್ಘಾಟನೆಯ ಸಮಾರಂಭವನ್ನು ನೆರವೇರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಅಂದಿನ ಕಾಂಗ್ರೆಸ್ ಅಧ್ಯಕ್ಷ ಕಾಮರಾಜ ನಾಡಾರ್ ಅವರು ವಹಿಸಿದ್ದರು.

ಕಾವೇರಿ ನೀರು ಸರಬರಾಜಿನ ಯಮಳ ಯೋಜನೆಯಾಗಿ ಒಳಚರಂಡಿ ವ್ಯವಸ್ಥೆಯೂ ಇತ್ತು. ಈ ಕಾರ್ಯನಿರ್ವಹಣೆಗೆ ಸೀಮಿತವಾದ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯೂ ರೂಪುಗೊಂಡದ್ದು ಜಿ. ನಾರಾಯಣ ಅವರು ಮೇಯರ್ ಆಗಿದ್ದಾಗಲೇ. ಈ ಮಂಡಲಿಯ ಉದ್ಘಾಟನೆಯನ್ನು ಅಂದಿನ ಮುಖ್ಯಮಂತ್ರಿ ನಿಜಲಿಂಗಪ್ಪನವರು ಮೇಯೋ ಹಾಲ್ ಸಭಾಂಗಣವಲ್ಲಿ ೧೯೬೪ ಅಕ್ಟೋಬರ್ ೨ರಂದು ನೆರವೇರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಪಾಮಡಿ ಸುಬ್ಬರಾಮ ಶೆಟ್ಟಿಯವರು ವಹಿಸಿದ್ದರು. ಆಗ ಮೇಯರ್ ನಾರಾಯಣ ಅವರು ಬೆಂಗಳೂರು ನಾಗರಿಕರ ಪರವಾಗಿ ಸರ್ಕಾರಕ್ಕೆ ಕೃತಜ್ಞತೆಗಳನ್ನು ಅರ್ಪಿಸಿದರು.

ಬೆಂಗಳೂರು ದಿನೇ ದಿನೇ ವಿಸ್ತಾರವಾದಂತೆ ವಾಹನ ಸಂಚಾರವೂ ಹೆಚ್ಚಾಯಿತು. ಇದರಿಂದ ನಗರ ರಸ್ತೆಗಳ ಮೇಲೆ ಒತ್ತಡ ಹೆಚ್ಚಾಗಿ ಅವು ಶಿಥಿಲವಾಗತೊಡಗಿದವು. ಕಾಮಗಾರಿಕೆ ಸ್ಥಾಯೀ ಸಮಿತಿಯ ಅಧ್ಯಕ್ಷರಾಗಿ ಕಾರ್ಯವಹಿಸಿದ ನಾಲ್ಕು ವರುಷಗಳ ಅವಧಿಯಲ್ಲಿ ಅವರು "ಬೆಂಗಳೂರಿಗೆ ಉತ್ತಮ ರಸ್ತೆಗಳು" ಎಂಬ ಯೋಜನೆಯನ್ನು ಜಾರಿಗೆ ತಂದರು. ಆಗ ನಗರದ ಒಳ ಭಾಗದಲ್ಲಿ ೩೬೦ ಮೈಲಿ ಉದ್ದದ ರಸ್ತೆಗಳಿದ್ದವು. ಅವುಗಳಲ್ಲಿ ಟಾರು ಹೊದಿಕೆಯ ರಸ್ತೆಗಳ ಉದ್ದ ೨೫೦ ಮೈಲಿಗಳು. ಅರ್ಧಕೋಟಿ ರೂಪಾಯಿ ವೆಚ್ಚದ ಈ ಯೋಜನೆ ಕಾರ್ಯಗತವಾಗಲು ಎರಡು ವರುಷಗಳ ಅವಧಿ ಮೀಸಲಾಗಿತ್ತು. ಇದಕ್ಕೆ ತಗಲುವ ಅರ್ಧಭಾಗ ಹಣ ಸರ್ಕಾರದಿಂದ ಗ್ರಾಂಟಿನ ರೂಪವಾಗಿಯೂ ಇನ್ನರ್ಧ ಭಾಗ ವಾಹನ ತೆರಿಗೆಯಿಂದ ವಸೂಲಾದ ಹಣದಿಂದ ಸಾಲದ ರೂಪವಾಗಿಯೂ ಇರಬೇಕೆಂದು ಯೋಜಿಸಲಾಗಿತ್ತು. ಟಾರಿನ ಬದಲಾಗಿ ೧೧೨ ಮೈಲಿ ರಸ್ತೆಗಳಿಗೆ ಷಲ್‌ಕ್ರೀಟ್ ಮಾಡುವುದಾಗಿ ಇತ್ತು.

ಜೊತೆಗೆ ನಗರದ ಒಳಚರಂಡಿ ಮತ್ತು ನೀರಿನ ಸರಬರಾಜು ಕೊಳವೆಗಳನ್ನು ತೆಗೆದು ಅವುಗಳ ಬದಲು ಅಗಲವಾದ ಕೊಳವೆಗಳನ್ನು ಅಳವಡಿಸುವುದೂ, ನಗರದ ಮುಖ್ಯ ರಸ್ತೆಗಳನ್ನು ಅಗಲ ಮಾಡುವುದೂ ಮತ್ತು ೧೦ ಲಕ್ಷ ರೂಪಾಯಿ ಖರ್ಚಿನಿಂದ ರಸ್ತೆಗಳ ಇಕ್ಕೆಲಗಳಲ್ಲಿ ಪುಟ್ಪಪಥಗಳನ್ನು (foot paths) ನಿರ್ಮಿಸುವುದೂ ಯೋಜನೆಯ ಗುರಿಯಾಗಿದ್ದಿತು. ಈ ಯೋಜನೆ, ಕಾಲಕ್ಕೆ ಸರಿಯಾಗಿ ಕಾರ್ಯಗತವಾದದ್ದು ನಾರಾಯಣ ಅವರ ಜಾಣ್ಮೆಗೆ ನಿದರ್ಶನ ವಾಗಿದೆ. ಜೊತೆಗೆ ಈ ಯೋಜನೆಯು ಸಮಯೋಚಿತವಾಗಿತ್ತು. ಮುಂದೆ ಒದಗಿದ ಅಪಾರ ಒತ್ತಡವನ್ನು ಬೆಂಗಳೂರಿನ ರಸ್ತೆಗಳು ಸಹಿಸಿದವು.

ಜಿ. ನಾರಾಯಣರ ಸಮಗ್ರ ಪೌರ ಸೇವೆಯ ಸಿಂಹಾವಲೋಕನದಿಂದ ಕಾಣಬರುವ ಮುಖ್ಯ ಅಂಶವೆಂದರೆ, ಅಧಿಕಾರಿಗಳ ಜೊತೆ ವಿಚಾರ ವಿನಿಮಯ, ಸಮಜಾಯಿಶಿ ಮತ್ತು ಸಂಧಾನ ಚತುರತೆ. ಇರುವ ಅಧಿಕಾರದಲ್ಲೇ ಕೆಲಸ ಮಾಡಿಸಿ ನಾಗರಿಕರಿಗೆ ಸೇವೆ ಸಲ್ಲಿಸುವ ಮನೋಭಾವ. ಅವರ ಈ ನಿಲುವಿಗೆ ಕಾರಣವಿಲ್ಲದಿರಲಿಲ್ಲ.

ನಿಜವಾಗಿ ಹೇಳಬೇಕಾದರೆ ನಗರಪಾಲಿಕೆಯ ಆಡಳಿತದಲ್ಲಿ ಚುನಾಯಿತ ಪ್ರತಿನಿಧಿಗಳಿಗೆ ಇರುವ ಅಧಿಕಾರ ತೀರಾ ಅಲ್ಪ. ಹೆಚ್ಚು ಅಧಿಕಾರ ಪಡೆಯಲು ಅನೇಕ ವರ್ಷಗಳಿಂದ ನಗರ ಪಿತೃಗಳು ಅಧಿಕಾರ ವಿಕೇಂದ್ರೀಕರಣದ ಮಾಯಾಮೃಗದ ಬೆನ್ನು ಹತ್ತಿಯೇ ಇದ್ದರು. ಸರ್ಕಾರವೂ ಅಧಿಕಾರ ವಿಕೇಂದ್ರೀಕರಣದ ಗಾಳಿಗೋಪುರವನ್ನು ಕಟ್ಟಿಯೇ ಇತ್ತು. ಹೀಗಾಗಿ, ನಗರ ಪಿತೃಗಳ ಪಾಲಿಗೆ ನಿಜವಾದ ಅಧಿಕಾರ ಬಳಸಲಾಗದ ದೂರದ ಬಿಸಿಲ್ಗುದುರೆಯಾಗಿತ್ತು. ಆದರೆ ಜಿ. ನಾರಾಯಣ ತಾವು ಸ್ಥಾಯೀ ಸಮಿತಿಯ ಅಧ್ಯಕ್ಷರಾಗಿದ್ದಾಗ ಹಾಗೂ ಬೆಂಗಳೂರಿನ ಮೇಯರ್ ಆಗಿದ್ದಾಗ ಬಹು ಜಾಣತನದಿಂದ ನಾಗರಿಕರಿಗೆ ಒದಗಬೇಕಾದ ಪೌರಸೌಲಭ್ಯಗಳನ್ನು ಒದಗಿಸಿಕೊಟ್ಟರು. ಯಾವ ಕೆಲಸ ಮಾಡಬೇಕಾಗಿದ್ದಾಗಲೂ ನಗರ ಪಾಲಿಕೆಯ ಮುಖ್ಯ ಅಧಿಕಾರಿಗಳನ್ನು ತಮ್ಮ ಕೋಣೆಗೆ ಬರಮಾಡಿಕೊಂಡು ಮಾತುಕತೆ ನಡೆಸಿ, ಅವರ ಕಾರ್ಯನಿರ್ವಹಣೆಯಲ್ಲಿ ಒದಗಬಹುದಾದ ಕಷ್ಟ ನಷ್ಟಗಳನ್ನು ಪರಿಶೀಲಿಸಿ ಅವರಿಗೆ ಉತ್ತೇಜನ ಕೊಡುವುದು ನಾರಾಯಣ ಅವರ ಕಾರ್ಯವಿಧಾನವಾಗಿತ್ತು. ಇದರಿಂದಾಗಿ, ಹೆಚ್ಚು ಅಧಿಕಾರ ವಿಲ್ಲದಿದ್ದರೂ ಚುನಾಯಿತ ಪ್ರತಿನಿಧಿಗಳು ತಮ್ಮ ಕೆಲಸ ಕಾರ್ಯಗಳ ಕ್ಷಿತಿಜವನ್ನು ವಿಸ್ತಾರ ಗೊಳಿಸಲು ಅವರು ಮಾರ್ಗದರ್ಶಕರಾದರು.

ಈಗಿರುವ ಹಾಗೆ ಪುರ ಪ್ರತಿನಿಧಿಗಳಿಗೆ ಆಗ ಯಾವ ಸಂಭಾವನೆಯೂ ಸಿಕ್ಕುತ್ತಿರಲಿಲ್ಲ. ಸಾರ್ವಜನಿಕ ಕ್ಷೇತ್ರದಲ್ಲಿ ನಿಷ್ಕಳಂಕ ಜೀವನ, ನಿಸ್ವಾರ್ಥ ಸೇವೆ ಜಿ. ನಾರಾಯಣ ಅವರ ಪೌರಸೇವೆಯ ವೈಶಿಷ್ಟ್ಯವಾಗಿತ್ತು.

ಕನ್ನಡಾಭಿಮಾನಿ ನಾರಾಯಣ ನಗರ ಕಾರ್ಪೊರೇಷನ್ನಿನಲ್ಲೂ ಕನ್ನಡ ಸೇವೆಗೆ ಅವಕಾಶ ಕಲ್ಪಿಸಿಕೊಂಡರು. ೧೯೬೩ರಲ್ಲಿ ವಿ.ಎಸ್. ಕೃಷ್ಣಯ್ಯರ್ ಅವರು ಮೇಯರ್ ಆಗಿದ್ದಾಗ, ಕನ್ನಡವು ನಗರಪಾಲಿಕೆಯ ಆಡಳಿತ ಭಾಷೆಯಾಗಲು ಕಾರಣಕರ್ತರಾದರು. ಅದಕ್ಕೂ ಮುಂಚೆ ಹಾರ್ಡಿಂಜ್ ರಸ್ತೆಯನ್ನು ಪಂಪಮಹಾಕವಿ ರಸ್ತೆಯಾಗಿಯೂ, ಸೆನೆಟಾಫ್ ರಸ್ತೆಯನ್ನು ನೃಪತುಂಗ ರಸ್ತೆಯಾಗಿಯೂ ನಾಮಕರಣ ಮಾಡಲು ಮುಂದಾಳತ್ವ ವಹಿಸಿದರು.

ನಾರಾಯಣ ಅವರ ಮೇಯರ್ ಅಧಿಕಾರಾವಧಿಯ ಕೊನೆಯದಿನ ಹೃದಯ ಸ್ಪರ್ಶಿಯಾಗಿತ್ತು. ತಾವು ನೋಡಬೇಕಾದ ಕೊನೆಯ ಫೈಲಿಗೆ ಸಹಿಮಾಡಿದ ನಂತರ ತಮ್ಮನ್ನು ಕಾಣಲುಬಂದ ಸಹೋದ್ಯೋಗಿಗಳು, ಅಧಿಕಾರಿಗಳು ಹಾಗೂ ಪೌರ ಪ್ರಮುಖರೊಡನೆ ಆತ್ಮೀಯ ಬೀಳ್ಕೊಡುಗೆ. ಮುಂದಿನ ಚುನಾವಣೆ ಸನ್ನಿಹಿತವಾಗಿದ್ದುದರಿಂದ ನಗರ ಪಾಲಿಕೆಯ ಎಲ್ಲಾ ಸದಸ್ಯರಿಗೂ ಅದೇ ಕೊನೆಯ ದಿನವಾಗಿತ್ತು. ಕಚೇರಿಯ ವೇಳೆ ಮುಗಿದ ನಂತರ ತಮ್ಮ ಕೋಣೆಯಿಂದ ಹೊರ ಬಂದರು ನಾರಾಯಣ. ಇದೀಗ ಅವರು ಮತ್ತೊಮ್ಮೆ ಬೆಂಗಳೂರಿನ ಒಬ್ಬ ಸಾಮಾನ್ಯ ಪ್ರಜೆಯಾಗಿದ್ದರು. ಮೆಟ್ಟಿಲು ಇಳಿದು ಅವರು ಪೋರ್ಟಿಕೋ ಬಳಿ ಬಂದಾಗ ಮೇಯರ್ ಅವರ ಕಾರು ಅವರಿಗಾಗಿ ನಿಂತಿತ್ತು. ಜವಾನ ಕಾರಿನ ಬಾಗಿಲು ತೆಗೆದ. ಆದರೆ, ಆ ವೇಳೆ ನಾರಾಯಣ ಅವರ ದೃಷ್ಟಿ ಬೇರೆ ಕಡೆ ಹರಿದಿತ್ತು. ಅಂಗಳದಲ್ಲಿ ಗುಂಪು ಗುಂಪಾಗಿ ನಿಂತಿದ್ದ ನಾಲ್ಕನೇ ದರ್ಜೆ ನೌಕರರನ್ನು ಕಂಡ ನಾರಾಯಣ ಅವರ ಬಳಿ ಸಾಗಿದರು. ಅದೇ ಆತ್ಮೀಯ ಬೀಳ್ಕೊಡುಗೆ. ಸ್ವಲ್ಪ ಹೊತ್ತಾದ ನಂತರ ಅವರಲ್ಲಿ ಒಬ್ಬನನ್ನು ಕರೆದು ಏನೋ ಹೇಳಿದರು. ಕೂಡಲೇ ಅವನು ಅಲ್ಲಿಂದ ಹೊರಟುಹೋದ. ತುಸುಹೊತ್ತಿನಲ್ಲಿ ಒಂದು ಆಟೋ ಅವರ ಬಳಿ ಬಂದಿತು. ನಾರಾಯಣ ಅದರಲ್ಲಿ ಕುಳಿತರು. ಆಟೋ ಚಲಿಸತೊಡಗಿತು. ಪೋರ್ಟಿಕೋ ಮೇಲಿನ ಛಾವಣಿಯಲ್ಲಿ ನಿಂತಿದ್ದ ನಾವು ಇವೆಲ್ಲವನ್ನೂ ಬೆರಗುಗಣ್ಣಿನಿಂದ ನೋಡಿದೆವು. ಆಟೋ ಜಯಚಾಮರಾಜ ರಸ್ತೆಯಿಂದ ನಗರ ಭವನದ ಬಳಿ ಕೃಷ್ಣರಾಜ ರಸ್ತೆಗೆ ತಿರುಗಿ ಕಣ್ಮರೆಯಾಗುವವರೆಗೂ ನೋಡಿದೆವು.

ನಾರಾಯಣ ಅಲ್ಲಿಂದಾಚೆ ಮೈಲಿಗಟ್ಟಲೆ ಪ್ರಯಾಣ ಮಾಡಿದರು. ಸಾರ್ವಜನಿಕ ಸೇವೆಯ ಹೆದ್ದಾರಿ ನಾರಾಯಣ ಅಂತಹವರಿಗಾಗಿ ಕಾದಿರುತ್ತದೆಯೇನೋ! ಅನಂತರ ಅವರು ಅವಿಚ್ಛಿನ್ನವಾಗಿ ೯ ವರ್ಷಗಳ ಪರ್ಯಂತ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸಾರ್ಥಕ ಸೇವೆ ಸಲ್ಲಿಸಿದರು.

(೧೯೮೪)

ಸಾತ್ವಿಕ ಶಕ್ತಿಯ ಪ್ರತೀಕ

■ ಕೆ.ಎಸ್. ನಾರಾಯಣ ಸ್ವಾಮಿ

ಕತ್ತಲೆಯನ್ನು ಶಪಿಸುವ ಬದಲು ಒಂದು ಪುಟ್ಟ ಹಣತೆಯನ್ನು ಹೊತ್ತಿಸು ಎಂಬ ಒಂದು ನಾಣ್ನುಡಿ ಇದೆ. ಜೀವನ–ಅದು ವ್ಯಕ್ತಿಯದಾಗಲಿ ರಾಷ್ಟ್ರದ್ದಾಗಲಿ ಒಂದು ಸತತ ಚಲನೆ. ಕತ್ತಲು ಬೆಳಕುಗಳ ಅವಿಚ್ಛಿನ್ನ ಸರಣಿ. ಆ ಚಲನೆಯ ಅವಿಭಾಜ್ಯ ಅಂಗ, ಈ ಶತಮಾನ ಕಂಡ ಬೆಳಕಿನ ಕಾಲ ಗಾಂಧೀಯುಗ. ಒಂದು ವಿಶಿಷ್ಟ ಸರ್ವಗ್ರಾಹ್ಯ ನೈತಿಕಶಕ್ತಿ ಅಲೆ ಅಲೆಯಾಗಿ ಸರ್ವಕ್ಷೇತ್ರಗಳನ್ನು ಆವರಿಸಿ ನಿಲುತ್ತಿದ್ದ ಆ ಕಾಲದಲ್ಲಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡು, ಸೇವೆಯ ದೀಕ್ಷೆತೊಟ್ಟು, ಸಾರ್ವಜನಿಕ ಜೀವನದಲ್ಲಿ ಮಾನವೀಯ ಸುಸಂಸ್ಕೃತ ಮೌಲ್ಯಗಳನ್ನು ಸ್ಥಿರಗೊಳಿಸಲು ಶ್ರಮಿಸಿದ ಸಾಧನ ನಿಷ್ಠರಲ್ಲಿ ನಮ್ಮ ಜಿ. ನಾರಾಯಣ ನನಗೆ ಒಬ್ಬ ಅಪೂರ್ವ ವ್ಯಕ್ತಿಯಾಗಿ ಕಾಣುತ್ತಾರೆ. ಬೆಳಕಿನ ಕಾಲದಲ್ಲಿ ಹಿರಿದು ಹಿಗ್ಗಿ ಮೇಲಕ್ಕೇರಿ ಕತ್ತಲು ಅಡರಿದೊಡನೆ ಆ ಮೌಲ್ಯಗಳನ್ನೇ ಗಾಳಿಗೆ ತೂರಿ ದಿಕ್ಕುಗೆಡುವ ತರಗೆಲೆಯ ಜಾತಿ ಅಲ್ಲ ಅವರದು. ಅನುಭವದ ಜಾಡಿನಲ್ಲಿ ಹಣತೆ, ಎಣ್ಣೆ, ಬತ್ತಿ, ಬೆಂಕಿಕಡ್ಡಿಗಳನ್ನು ಕತ್ತಲಲ್ಲೂ ಗುರುತಿಸಿಕೊಂಡು ಸಣ್ಣ ಬೆಳಕನ್ನು ಹೊತ್ತಿಸಿಡುವ ಕೆಲವೇ ಸಾಮಾಜಿಕ ಕಾರ್ಯಕರ್ತರಂತೆ ಈ ನಾಲ್ಕು ದಶಕಗಳಲ್ಲಿ ಅವರನ್ನು ನಡೆಸಿಕೊಂಡಿರುವುದು ಅವರ ಅಸಾಮಾನ್ಯ ಸಾತ್ವಿಕ ಶಕ್ತಿಯ ಪ್ರಭಾವ.

ದೇಶಹಳ್ಳಿಯ ಮಣ್ಣಿನ ಸ್ಫೂರ್ತಿಯನ್ನೂ, ರೈತ ಸಂಸ್ಕೃತಿಯ ಬಿಘವನ್ನೂ, ನಗರದ ಆಧುನಿಕತೆಯನ್ನೂ ಹಿತಮಿತವಾಗಿ ಬೆರೆಸಿಕೊಂಡಿದ್ದಾರೆ ಶ್ರೀ ನಾರಾಯಣ. ಜಳ್ಳನ್ನೂ ಕಾಳನ್ನೂ ತಮ್ಮ ಕೈ ಚಳಕದಿಂದ ಬೇರ್ಪಡಿಸುವ

ಗ್ರಾಮೀಣ ಒಕ್ಕಲುತನದ ಕುಶಲ ಗೃಹಿಣಿಯಂತೆ ಕೇರಿ ತೂರಿ ಗಟ್ಟಿಕಾಳನ್ನು ಸಂಗ್ರಹಿಸಿಕೊಳ್ಳುವ ಕಲೆ ಅನುಭವದ ಶಾಲೆಯಿಂದಲೇ ಅವರಿಗೆ ಕೈಗೂಡಿದೆ. ಅವರು ಕೈಗೊಳ್ಳುವ ಯಾವ ಕೆಲಸಕ್ಕೇ ಆಗಲಿ ಅವರು ಸಂಘಟಿಸಿಕೊಳ್ಳುವ ಮಿತ್ರವ್ಯೂಹ ಆರಂಭದಲ್ಲೇ ಅರ್ಧ ಯಶಸ್ಸನ್ನು ಗಳಿಸುವಂತಿರುತ್ತದೆ. ಸ್ವಾತಂತ್ರ್ಯ ಸಂಗ್ರಾಮ ಕಾಲದ ಭಾರತ ರಾಷ್ಟ್ರೀಯ ಕಾಂಗ್ರೆಸ್ ಗಾಂಧೀ ಪ್ರಣೀತ ಸತ್ಯಾಗ್ರಹ ಸಂದೇಶದ ಸ್ಫೂರ್ತಿ ಪಡೆದು ನಾಡಿನ ದಾಸ್ಯವಿಮೋಚನೆಗೆ ಹೋರಾಟ ಹೂಡಿದಾಗ ಸ್ವಯಂ ಸೇವಕನಾಗುವುದು ದೇಶಭಕ್ತಿಯ ಪ್ರತೀಕವೆನಿಸಿತ್ತು. ಸೇವೆ, ತ್ಯಾಗ ಮತ್ತು ಸತತ ಕಷ್ಟ ಸಹಿಷ್ಣುತೆಗಳೇ ರಾಷ್ಟ್ರೀಯ ಕಾರ್ಯದ ಬೇಡಿಕೆಗಳಾಗಿದ್ದಾಗ ಅನಾಸಕ್ತಿ ಯೋಗಕ್ಕಾಗಿ ಗಾಂಧೀಜಿಯ ಕರೆ ಅಪ್ರತಿಹತವಾದಾಗ ಸಮರ್ಪಣ ಭಾವದಿಂದ ಬಾಳಿನ ಬಟ್ಟೆಯನ್ನು ಖಚಿತಪಡಿಸಿಕೊಂಡ ನಾರಾಯಣ ಇಂದಿಗೂ ಸ್ವಚ್ಛ ಧವಳ ವ್ಯಕ್ತಿತ್ವದ ಮುದ್ರೆಯನ್ನೊತ್ತುವ ಅಪೂರ್ವ ಕಾರ್ಯಕರ್ತ. ನಿರ್ಮಲ ಪ್ರಾಮಾಣಿಕ ಪ್ರೇಮನಿಷ್ಠ ಮಾರ್ಗವೇ ಅತ್ಯಂತ ಯಶಸ್ವಿಯಾಗುವ ಮಾರ್ಗ ಎಂದು ಭರವಸೆ ತಂದುಕೊಡುವಂತಹ ಈ ಮೃದುಮಾತಿನ ಸಮಾಜ ಸೇವಕ ಬೆಂಗಳೂರಿನ ನಾಗರಿಕ ಜೀವನಕ್ಕೆ ಗಂಧದ ಕೊರಡಿನಂತೆ ತನು ತೇದು ಪರಿಮಳವನ್ನು ಹಂಚಿದ್ದಾರೆ.

ಕನ್ನಡ ಸಾಹಿತ್ಯ ಸೇವೆಯ ಕ್ಷೇತ್ರದಲ್ಲಿ ನಾರಾಯಣರ ಪ್ರವೇಶದಿಂದ ಒಂದು ಹೊಸ ಆಯಾಮ ಸೃಷ್ಟಿಯಾದುದು ಸ್ಪಷ್ಟ. ಕನ್ನಡನಾಡಿನ ಶ್ರೀಸಾಮಾನ್ಯ ಯಾವ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಕಾಸಕ್ಕಾಗಿ ಹಂಬಲಿಸಿ ಪ್ರಯತ್ನಶೀಲನಾಗಿದ್ದಾನೋ ಅವನೆಡೆಗೆ ಸಾಹಿತ್ಯ ಪರಿಷತ್ತಿನಂತಹ ಪ್ರತಿಷ್ಠಿತ ಸಂಸ್ಥೆ ಧಾವಿಸುವುದು ಹೇಗೆ ಎಂಬ ಹೊಸ ದೃಷ್ಟಿಯನ್ನು ತಂದುಕೊಟ್ಟ ಶ್ರೇಯಸ್ಸು ನಾರಾಯಣರದು. ಬರಹಗಾರರು, ಕಲಾವಿದರು ಕನ್ನಡದ ಅಂತಃಶಕ್ತಿಯನ್ನು ಹೆಚ್ಚಿಸಬಲ್ಲರು. ಆದರೆ ಅದನ್ನು ಆಸ್ವಾದಿಸಿ ಬೆಳೆಸಿ ರಕ್ಷಿಸಿಕೊಳ್ಳುವುದು ಸಾರ್ವಜನಿಕರ ಕೆಲಸ, ಸರ್ಕಾರದ ಕೆಲಸ. ಭಾಷೆಯ ಬೆಳವಣಿಗೆ ಎಂದರೆ ನಾಡಿನ ಜನಜೀವನದ ಸಮಗ್ರ ಸಮೃದ್ಧ ವಿಕಾಸ ಯೋಜನೆ. ಗಾಂಧೀಜಿ ತಮ್ಮ ಹದಿನೆಂಟು ರಚನಾತ್ಮಕ ಕಾರ್ಯಕ್ರಮದಲ್ಲಿ ದೇಶಭಾಷೆಯ ಬಳಕೆ ಮತ್ತು ಬೆಳವಣಿಗೆಯನ್ನು ಒಂದು ಮುಖ್ಯ ಭಾಗವಾಗಿ ಜೋಡಿಸಿದ್ದರು. ೧೯೩೭ರಲ್ಲಿ ಹರಿಜನ ಪತ್ರಿಕೆಯಲ್ಲಿ ಬರೆಯುತ್ತಾ,

"ಬುದ್ಧಿಜೀವಿಗಳೆನಿಸಿಕೊಳ್ಳುವ ವಿದ್ಯಾವಂತ ವರ್ಗ ತಾಯ್ನುಡಿಯ ಬಗ್ಗೆ ಯಾವುದೇ ಅಸಡ್ಡೆಯ ಚೆಲ್ಲಾಟವಾಡಿದರೆ ನಮ್ಮ ಕನಸಿನ ಸ್ವತಂತ್ರ ಶಕ್ತಿಯುತ ಭಾರತವನ್ನೆಂದೂ ಕಟ್ಟಲಾರೆವು. ನಮ್ಮ ದಾಸ್ಯಶೃಂಖಲೆಗಳನ್ನು ಕಳಚಿಕೊಂಡು ಬೆಳೆಯಲು ದೃಢವಾದ ಪ್ರಬಲ ಪ್ರಯತ್ನ ಬೇಕು. ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ದಾಸ್ಯ ವಿಮೋಚನೆಗೆ ಮಾತೃಭಾಷಾ ಪ್ರೇಮ ಆಗತ್ಯ. ಈ ಪ್ರಯತ್ನದಲ್ಲೇ ನಮ್ಮ ಹೋರಾಟದ ಮುಕ್ಕಾಲು ಭಾಗದ ಯಶಸ್ಸು ಹಿಡಿದಿರುತ್ತದೆ" ಎಂದಿದ್ದಾರೆ.

ನಾಳಿನ ಜಗತ್ತಿನಲ್ಲಿ ವರ್ಗ ವರ್ಣ ಜಾತಿ ಮತ್ತು ಪಕ್ಷಗಳ ಸಂಘರ್ಷಗಳನ್ನು ಮೆಟ್ಟಿನಿಂತು ಶೋಷಣಮುಕ್ತ ಸರ್ವಸಮಾನತೆಯ ಸಮಾಜ ನಿರ್ಮಿಸಲು ಒಂದು ನಿರ್ವೈರ, ನಿಷ್ಪಕ್ಷ,

ನಿರ್ಭಯ ಮನೋಧರ್ಮದ ವಿಚಾರಶೀಲ ಸಾತ್ವಿಕರ ಸಂಘಟನೆ ಪ್ರಭಾವಯುತವಾಗಿ ಕೆಲಸ ಮಾಡಬೇಕು ಎಂದಿದ್ದಾರೆ ಆಚಾರ್ಯ ವಿನೋಬ ಭಾವೆ. ಅದಕ್ಕವರು "ಆಚಾರ್ಯಕುಲ" ಎಂದು ಕರೆದಿದ್ದಾರೆ. ಸಾಮಾಜಿಕ ಹೊಣೆಗಾರಿಕೆಯನ್ನು ಅಂಗೀಕರಿಸಿ, ಸ್ವಾರ್ಥ ಸಾಧನೆಗೆ ಎಡೆಕೊಡದೆ, ಹಣ ಮತ್ತು ಅಧಿಕಾರಗಳ ಸ್ಪರ್ಧೆಯಲ್ಲಿ ನಿರತರಾಗದೆ ಪಕ್ಷಾತೀತವಾಗಿ ನಿಲ್ಲುವ ಚಿಂತನಶೀಲ ಸುಸಂಸ್ಕೃತ ವಿದ್ವಜ್ಜನ ಶಕ್ತಿಯನ್ನು ಈ ನಾಡು ರೂಢಿಸಿಕೊಳ್ಳಬೇಕಾದುದು ಅಗತ್ಯ. ಜನ ಜೀವನದ ಸಮಸ್ಯೆಗಳಲ್ಲಿ ನಿರ್ಭಯವಾಗಿ ಪ್ರವೇಶಿಸಿ ಪರಿಹಾರ ಮಾರ್ಗಗಳನ್ನು ಶೋಧಿಸಿ, ತಾವೇ ಜನತೆಯೊಡನೆ ಕಾರ್ಯೋನ್ಮುಖರಾಗುವ ಕ್ರಿಯಾಶೀಲ ಸಮಾಜ ಸೇವಕರಿಂದಲೇ ಇಂಥ ಸಂಘಟನೆ ರೂಪುಗೊಳ್ಳಬೇಕು. ಅಂಥವರನ್ನು ಗುರುತಿಸ ಹೊರಟಾಗ ನಮ್ಮ ಮನಸ್ಸಿಗೆ ಪ್ರಥಮವಾಗಿ ಸೂಚಿತವಾಗುವ ಕೆಲವೇ ಸಾರ್ವಜನಿಕ ನಾಯಕರಲ್ಲಿ ಶ್ರೀ ನಾರಾಯಣ ಅವರ ಹೆಸರು ಸೇರುತ್ತದೆ. ಜಗತ್ತಿನಲ್ಲೇ ಇಂದು ಒಂದು ಶಾಂತಿಯುತ ಅಹಿಂಸಾತ್ಮಕ ಸರ್ವೋದಯ ಸಮಾಜಕ್ಕಾಗಿ ಹಂಬಲ ಅಂಕುರಿಸುತ್ತಿದೆ. ಆ ದಿಸೆಯಲ್ಲಿ ಹೆಜ್ಜೆಯಿಡಲು ಲೋಕ ತವಕಿಸುತ್ತಿದೆ. ಸಜ್ಜನಶಕ್ತಿ ಮಾರ್ಗದರ್ಶನ ಮಾಡಬೇಕು. ನಾರಾಯಣರಂತಹ ಜನ ಸೇವಕರು ಒಗ್ಗೂಡಿ ಕನ್ನಡನಾಡಿನಲ್ಲಿ ಈ ಹೊಸ ಯುಗದ ಕಿರುಬೆಳಕು ಪ್ರಜ್ವಲಿಸುವಂತಾಗಲಿ ಎಂದು ಹಾರೈಸೋಣ.

(೧೯೮೪)

ಅಪೂರ್ವವಾದ ವ್ಯಕ್ತಿತ್ವ

■ ಕಯ್ಯಾರ ಕಿಞ್ಞಣ್ಣರೈ

ಸುಮಾರು ಎರಡು ದಶಕಗಳ ಹಿಂದಿನ ಮಾತು ; ಭಾರತ ಪ್ರಧಾನಾಮಾತ್ಯೆ ಶ್ರೀಮತಿ ಇಂದಿರಾಗಾಂಧಿ ಬೆಂಗಳೂರಿಗೆ ಆಗಮಿಸಿದ್ದರು; ಕನ್ನಡ ಸಾಹಿತ್ಯ ಪರಿಷದಧ್ಯಕ್ಷ ಶ್ರೀ ಜಿ. ನಾರಾಯಣ ಅವರು ಇಂದಿರಾಗಾಂಧಿಯವರಿಗೆ ಕರ್ನಾಟಕದ ಗಡಿ ಸಮಸ್ಯೆಯನ್ನು ಪರಿಹರಿಸಬೇಕೆಂದು ಮನವಿಯೊಂದನ್ನು ಸಮರ್ಪಿಸಿದರು ಎಂದು ಪತ್ರಿಕೆಗಳಲ್ಲಿ ವರದಿ ಓದಿದೆ ; ಸಹಜವಾಗಿ ಕಾಸರಗೋಡು ವಿಚಾರವೂ ಆ ಮನವಿಯಲ್ಲಿ ಇತ್ತು.

ಆ ಸುದ್ದಿ ಓದಿ ನನಗೆ ಶ್ರೀ ಜಿ. ನಾರಾಯಣ ಅವರ ಕುರಿತು ಇನ್ನಷ್ಟು ತಿಳಿದುಕೊಳ್ಳಲು ಆಸಕ್ತಿ ಮೂಡಿತು. ಸಾಹಿತ್ಯ ಕ್ಷೇತ್ರದಲ್ಲಿ ಆಗ ಅವರದು ಅಷ್ಟೊಂದು ಜನಪ್ರಿಯ ಹೆಸರು ಅಲ್ಲವಾದರೂ, ರಾಜಕೀಯ ಕ್ಷೇತ್ರದಲ್ಲಿ ಮುಖ್ಯವಾಗಿ ಬೆಂಗಳೂರು ನಗರದ ಮೇಯರಾಗಿದ್ದುದರಿಂದ ಸಾಕಷ್ಟು ಪ್ರಸಿದ್ಧರಾಗಿದ್ದರು. ರಾಜಕೀಯದವರಿಂದ ಕನ್ನಡದ ಕೆಲಸ, ಅದರಲ್ಲೂ ಸಾಹಿತ್ಯ ಪರಿಷತ್ತಿನಂತಹ ಸಂಸ್ಥೆಯ ನೇತೃತ್ವ ಸಮರ್ಪಕವಾಗಿ ನಡೆದೀತೆ ಎಂದು ಅಲ್ಲಲ್ಲಿ ಕೆಲವರು ಶಂಕಿಸಿದ್ದರು. ಭಾರತದ ಪ್ರಧಾನಾಮಾತ್ಯೆಯರಿಗೆ ಕನ್ನಡದ ಗಡಿ ವಿವಾದ ಪರಿಹರಿಸಲು ಇತ್ತ ಆ ಮನವಿಯಿಂದ, ಆಮೇಲೆ ಇಂತಹ ಹಲವಾರು ಕನ್ನಡ ಹಾಗೂ ಸಾಹಿತ್ಯ ಸಮಸ್ಯೆಗಳಿಗೆ ಸಂಬಂಧಿಸಿ ಅವರು ಹಾಕಿದ ಯೋಜನೆಗಳಿಂದ, ಆ ಯೋಜನೆಗಳನ್ನು ಕ್ರಮಬದ್ಧವಾಗಿ ಕಾರ್ಯಗತಗೊಳಿಸಿದ ಅವರ ಕಾರ್ಯಕೌಶಲ್ಯದಿಂದ ನನಗೆ ಅವರ ಯೋಗ್ಯತೆಯ ಅರಿವಾಯಿತು. ಒಂದು ಸಂಸ್ಥೆಯನ್ನು

ಭದ್ರವಾಗಿ ಕಟ್ಟಿ ಮುನ್ನಡೆಸಲು ಅವರಿಗಿದ್ದ ನಿರಂತರ ಶ್ರದ್ಧೆಯನ್ನು ಆಮೇಲೆ ತೀರಾ ಹತ್ತಿರದಿಂದ ಕಂಡ ನನಗೆ ಶ್ರೀ ಜಿ.ನಾರಾಯಣ ಅವರು ಓರ್ವ ಅಪೂರ್ವ ವ್ಯಕ್ತಿಯೆಂಬ ಅಭಿಮಾನ ಉಂಟಾಗುವಂತಾಯಿತು.

ಕಾಸರಗೋಡಿನಲ್ಲಿ ಕನ್ನಡಿಗರ ಇತಿಹಾಸ ಮೇಳವೊಂದನ್ನು ನಾವು ಸಂಘಟಿಸಿದೆವು : ಈ ಬಗೆಗೂ ಶ್ರೀ ನಾರಾಯಣ ಅವರು ಆಸಕ್ತಿ ವಹಿಸಿದರು. ಪರಿಷತ್ತಿನಿಂದ ಸಾಧ್ಯವಾದ ಧನಸಹಾಯವನ್ನು ಒದಗಿಸಿದ್ದು ಮಾತ್ರವಲ್ಲದೆ, ಅದಕ್ಕಿಂತ ಮಿಗಿಲಾಗಿ ಅನೇಕ ಪ್ರಮುಖ ಕನ್ನಡದ ಮುಂದಾಳುಗಳನ್ನು ಕರೆದುಕೊಂಡು ಬಂದರು. ಮೈಸೂರು ವಿಶ್ವವಿದ್ಯಾಲಯದ ಆಗಿನ ಉಪಕುಲಪತಿ ಶ್ರೀ ಜವರೇಗೌಡರು ಸಮ್ಮೇಳನದ ಅಧ್ಯಕ್ಷತೆಗೆ ಒಪ್ಪಿದರು. ಡಾ॥ ರಂ. ಶ್ರೀ ಮುಗಳಿ, ಡಾ॥ ಹಾ. ಮಾ. ನಾಯಕರೇ ಮೊದಲಾದ ಪ್ರಮುಖರ ಜತೆಗೂಡಿ ಕಾಸರಗೋಡಿಗೆ ಸಪರಿವಾರ ಸಕುಟುಂಬ ಬಂದಿದ್ದರು. ಬಂದವರು, ನನ್ನ ಹಳ್ಳಿಯ ಕುಟೀರಕ್ಕೂ ಭೇಟಿ ನೀಡಿ, ಅಡಿಕೆ ತೋಟದ ನೆರಳಲ್ಲಿ ಸೋಗೆಗರಿಗಳ ಮೇಲೆ ಹಾಯಾಗಿ ವಿಶ್ರಾಂತಿ ಪಡೆದರು. ಬೆಂಗಳೂರಿನಂತಹ ಪ್ರಬುದ್ಧ ನಗರದ ಮೇಯರಾಗಿ, ಅಲ್ಲಿಯೇ ಬಹುಕಾಲ ಇದ್ದವರಾಗಿದ್ದರೂ, ಸಾಹಿತ್ಯ ಪರಿಷತ್ತಿನಂತಹ ದೊಡ್ಡ ಸಾಂಸ್ಕೃತಿಕ ಸಂಸ್ಥೆಯ ಕಾರ್ಯಭಾರ ಹೊತ್ತಿದ್ದರೂ ಅವರಿಗೆ ನಮ್ಮ ಹಳ್ಳಿಯ ವಾತಾವರಣ ತುಂಬಾ ಹಿಡಿಸಿದಂತೆ ಕಂಡಿತು. ಆಡಂಬರದ ನಾಗರೀಕ ಜೀವನದಲ್ಲಿಯೆ ಕಾಲ ಕಳೆಯುತ್ತಿದ್ದರೂ, ಗ್ರಾಮ ಜೀವನದ ಸರಳತೆಗೆ ಮೆಚ್ಚುವ ಅವರ ಪ್ರವೃತ್ತಿಯನ್ನು ನಾನು ನೋಡಿ ಗುರುತಿಸಿದೆ. ಡಾ॥ ಶಿವರಾಮ ಕಾರಂತರೇ ಮೊದಲಾದ ಪ್ರಮುಖರು ಆಗಮಿಸಿದ ಆ ಸಮ್ಮೇಳನದ ಸನ್ನಿವೇಶವನ್ನು ಕಾಸರಗೋಡಿನ ಜನತೆ ಸದಾ ನೆನಪಿಟ್ಟುಕೊಳ್ಳುವಂತಾಯಿತು.

ಕೇಂದ್ರ ಸರಕಾರಕ್ಕೂ ರಾಜ್ಯ ಸರಕಾರಕ್ಕೂ ಜಿಕ್ಕಟ್ಟಿನದಾದ ಕಾಸರಗೋಡು ಗಡಿ ಸಮಸ್ಯೆಯನ್ನು ಕುರಿತು ನಿರ್ಣಯವಾಗಲು ಆ ಸಮ್ಮೇಳನದಲ್ಲಿ ಅಧ್ಯಕ್ಷತೆ ವಹಿಸಲು ಒಪ್ಪಿದ ಉಪಕುಲಪತಿ ಶ್ರೀ ದೇ.ಜವರೇಗೌಡರೊಡನೆ, ಅವರಿಗೆ ಜರೂರು ಕಾರ್ಯವೇನಾದರೂ ಇದ್ದರೆ, ಅವರ ಮೊದಲ ದಿನದ ಅಧ್ಯಕ್ಷ ಭಾಷಣದ ಕಾರ್ಯಕ್ರಮ ಪೂರೈಸಿ ಹೋಗಬಹುದೆಂದು ನಾನೇ ಹೇಳಿದ್ದೆ. ನನ್ನೀಮಾತಿನ ಸೂಚ್ಯಾರ್ಥವನ್ನು ಸರಿಯಾಗಿ ಗ್ರಹಿಸಿಕೊಂಡ ಶ್ರೀ ದೇಜಗೌ ಅವರು ಸಮ್ಮೇಳನದ ಕೊನೆಯ ತನಕ ನಿಂತು, ತಮ್ಮ ಉಪಸಂಹಾರ ಭಾಷಣದಲ್ಲಿ, ಕಿಸೆಯಲ್ಲಿ ರಾಜೀನಾಮೆ ಪತ್ರ ಇಟ್ಟುಕೊಂಡೇ ತಾನೀಸ್ಥಾನಕ್ಕೆ ಏರಿದ್ದೇನೆಂದೂ, ಕನ್ನಡದ ಕೆಲಸದಲ್ಲಿ ತೊಂದರೆಯಾದರೆ, ಸ್ಥಾನದಿಂದ ಇಳಿದು ಹೋರಾಡಲು ಸದಾ ಸಿದ್ಧನೆಂದೂ ಹೇಳಿದ ಅವರ ಭಾಷಣ, ಎಲ್ಲಾ ಪತ್ರಿಕೆಗಳಲ್ಲೂ ದೊಡ್ಡ ಅಕ್ಷರಗಳಲ್ಲಿ ಮುದ್ರಿತವಾಗಿ ಅವರಿಗೆ ತೊಂದರೆಯೂ ಆಯಿತೆಂದು ಆಮೇಲೆ ತಿಳಿಯಿತು. ಅಂತೂ ಆ ಸಮ್ಮೇಳನ ಕನ್ನಡಿಗರ ಕಣ್ತೆರೆಯಿಸಿತು. ಕಾಸರಗೋಡಿನವರಿಗೆ ಹೆಚ್ಚಿನ ಹುರುಪು ಉಂಟಾಯಿತು, ಕಾಸರಗೋಡಿನ ಕುರಿತು ಸಮ್ಮೇಳನದಲ್ಲಿ ನಿರ್ಣಯ ಮಂಡಿಸುತ್ತಾ ಕಳ್ಳಿಗೆ ಮಹಾಬಲ ಭಂಡಾರಿಗಳು ಮಂಡಿಸಿದ ವಾದಸರಣಿ ಕರ್ನಾಟಕದಿಂದ ಆಗಮಿಸಿದ ಎಲ್ಲಾ ಪ್ರಮುಖರನ್ನೂ ತಲೆದೂಗಿಸಿತ್ತು. ಇದು ಶ್ರೀ ಜಿ. ನಾರಾಯಣ ಅವರಲ್ಲಿ ವಿಶೇಷ ಪರಿಣಾಮವನ್ನು ಉಂಟುಮಾಡಿದಂತೆ ಕಂಡಿತು.

ಹಾಗಾಗಿಯೇ ಶ್ರೀ ನಾರಾಯಣ ಅವರು ಬೆಂಗಳೂರಿನಲ್ಲಿ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಕೆಲವೇ ದಿನಗಳಲ್ಲಿ ಗಡಿ ಸಮ್ಮೇಳನವೊಂದನ್ನು ಕರೆದರು. ಬೆಳಗಾವಿಯಿಂದಲೂ ಕಾಸರಗೋಡಿನಿಂದಲೂ ಪ್ರಮುಖರನ್ನೆಲ್ಲಾ ಆಹ್ವಾನಿಸಿದ್ದರು. ಮಹಾರಾಷ್ಟ್ರ, ಬೆಳಗಾವಿ ಕುರಿತು ವಾದವನ್ನು ಎಬ್ಬಿಸಿದಾಗಲೆಲ್ಲಾ, ಕರ್ನಾಟಕ, ಯಥಾಸ್ಥಿತಿವಾದವನ್ನೇ ಮುಂದೊಡ್ಡಿದರೂ, ಕಾಸರಗೋಡು ವಿವಾದದ ಬಗ್ಗೆ ಮತ್ತೊಮ್ಮೆ ಕರ್ನಾಟಕ ಮಹಾಜನ ವರದಿಗೆ ಒಪ್ಪಿಕೊಂಡರೂ, ಆಮೇಲೆಯೂ ಮಹಾಜನ ವರದಿ ಜಾರಿಯಾಗಬೇಕೆಂಬ ಹಠ ತೊಡದೆ, "ಮಹಾಜನ ವರದಿ ಇಲ್ಲವೇ 'ಯಥಾಸ್ಥಿತಿವಾದ" ಎಂಬ ನಿಲುವಿಗೇ ಬಂದಿತ್ತು. ಈ "ಯಥಾಸ್ಥಿತಿವಾದ" ಬೆಳಗಾವಿಯ ಹೊರತು ಕಾಸರಗೋಡಿನ ಪರವಾಗಿಲ್ಲವೆಂಬುದನ್ನು ಕಾಸರಗೋಡು ಸಮ್ಮೇಳನದಲ್ಲಿಯೇ ನಾವು ಸ್ಪಷ್ಟಮಾಡಿದ್ದೆವು. ಈ ನಮ್ಮ ನಿಲುವಿಗೆ ಅಖಿಲ ಕರ್ನಾಟಕ ವ್ಯಾಪ್ತಿಯ ಬೆಂಬಲ ದೊರಕುವಂತಾಗಬೇಕೆಂಬುದೇ ಬೆಂಗಳೂರಿನಲ್ಲಿ ಸಾಹಿತ್ಯ ಪರಿಷತ್ತಿನಲ್ಲಿ ನಡೆದ ಆ ಗಡಿ ಸಮ್ಮೇಳನದಲ್ಲಿ ನಮ್ಮ ಪ್ರಮುಖ ಉದ್ದೇಶವಾಗಿತ್ತು. ಮೊದಲ ದಿನವೇ ಕಾಸರಗೋಡಿನ ಕುರಿತು ಮಹಾಬಲ ಭಂಡಾರಿಗಳು ವಾದ ಮಂಡಿಸಿದರು. ಇತರ ಕಾಸರಗೋಡಿನ ಪ್ರಮುಖರೂ ಅದನ್ನು ಶಕ್ತಿವತ್ತಾಗಿ ಸಮರ್ಥಿಸಿದರು ; ಇದರ ಪರಿಣಾಮ ಮರುದಿನ ಎಷ್ಟಾಯಿತೆಂದರೆ, ಬೆಳಗಾವಿಯ ಕನ್ನಡದ ಪ್ರಮುಖರೇ 'ಯಥಾ ಸ್ಥಿತಿವಾದ ಕೈ ಬಿಡೋಣ, ಮಹಾಜನ ವರದಿ ಜಾರಿಯಾಗಲಿ' ಎಂಬ ನಿಲುವಿಗೆ ಬಂದರು. ಇಂತಹ ಒಂದು ಸ್ಪಷ್ಟವಾದ ದೃಢವಾದ ನಿರ್ಧಾರಕ್ಕೆ ಕರ್ನಾಟಕ ಬರುವಂತೆ ಶ್ರೀ ಜಿ. ನಾರಾಯಣ ಅಂದು ಅಲ್ಲಿ ಗಡಿ ಸಮ್ಮೇಳನ ಕರೆದು ಸಹಾಯಮಾಡಿದ್ದನ್ನು ನಾವು ಎಂದೂ ಮರೆಯಲಾರೆವು.

ಶ್ರೀ ಜಿ. ನಾರಾಯಣರವರು ಪರಿಷದಧ್ಯಕ್ಷರಾಗಿದ್ದ ಕಾಲ, ಪರಿಷತ್ತಿನ ಕಾರ್ಯಕಾರಿ ಸಮಿತಿ ಸದಸ್ಯನಾಗಿ ಅವರೊಡನೆ ಪೂರ್ಣ ಸಹಕರಿಸಿ ಪರಿಷತ್ತಿಗೆ ನನ್ನ ಅಳಿಲಸೇವೆ ಸಲ್ಲಿಸಿದ್ದನ್ನು ಇಲ್ಲಿ ಸ್ಮರಿಸುತ್ತೇನೆ. ಮಹಿಳಾವರ್ಷ ಮುಂತಾದ ಅಂತರ ರಾಷ್ಟ್ರೀಯ ಮಹತ್ವದ ಯೋಜನೆಗಳನ್ನು ಸಾಹಿತ್ಯ ಪರಿಷತ್ತು ತನ್ನ ಕಾರ್ಯಕ್ರಮದಲ್ಲಿ ಅಳವಡಿಸಿಕೊಂಡು ಗೈದ ರಚನಾತ್ಮಕ ಕಾರ್ಯಗಳು ಬಹುಕಾಲ ನೆನಪಿಸತಕ್ಕವುಗಳಾಗಿವೆ; ಪರಿಷತ್ತಿನ ಸುವರ್ಣ ಮಹೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಬೆಂಗಳೂರಲ್ಲಿ ನೆರವೇರಿಸಿ ಅದರ ಸವಿ ನೆನಪಿಗಾಗಿ ಬೃಹತ್ ಕಟ್ಟಡವೊಂದನ್ನು ಕಟ್ಟಿಸಿದ್ದು ಕೂಡ ಗಣನೀಯವಾದ ಕೆಲಸ. ಅದುವರೆಗೆ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನ ಎಂದು ನಡೆಯುತ್ತಿದ್ದ ಸಮ್ಮೇಳನ ಶ್ರೀ ಜಿ. ನಾರಾಯಣರ ಅಧ್ಯಕ್ಷತೆಯ ಅವಧಿಯಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವೆಂದು ವಿಶಾಲವಾದ ನಾಮಕರಣಗೊಂಡದ್ದು ಒಂದು ಮಹತ್ವದ ಸಿದ್ಧಿ. ಈ ವಿಶಾಲತೆಯ ಸಿದ್ಧಿಯ ಉತ್ಸಾಹವೇ ದಿಲ್ಲಿಯಲ್ಲೂ ಅದೇ ಪ್ರಥಮವಾಗಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಶ್ರೀ ಜಿ. ಪಿ. ರಾಜರತ್ನಂರವರ ಅಧ್ಯಕ್ಷತೆಯಲ್ಲಿ ಅತ್ಯಂತ ವಿಜೃಂಭಣೆಯಿಂದ ನೆರವೇರಿತು. ಭಾರತದ ಅಂದಿನ ಪ್ರಧಾನಿ ಶ್ರೀ ಮೊರಾರ್ಜಿದೇಸಾಯಿಯವರು ಸಮ್ಮೇಳನವನ್ನು ಉದ್ಘಾಟಿಸಿದರು. ದಾಕ್ಷಿಣಾತ್ಯರು ಮಾತ್ರವಲ್ಲ, ಉತ್ತರೀಯರೂ ಕನ್ನಡ ಸಾಹಿತ್ಯದ ಈ ದಿಗ್ವಿಜಯವನ್ನು ಕಂಡು ಮೆಚ್ಚಿಕೊಂಡರು!

ಇತ್ತೀಚೆಗೆ ಬೆಂಗಳೂರಿನ ಚಾಮರಾಜಪೇಟೆಯ ಬದಿಯಲ್ಲಿ ನಡೆದು ಹೋಗುತ್ತಿದ್ದೆ :

ಅಲ್ಲೇ ಬಳಿಯಲ್ಲಿ ಸಾಹಿತ್ಯ ಪರಿಷನ್ಮಂದಿರವೂ ಇದೆ. ಶ್ರೀ ಜಿ. ನಾರಾಯಣರ ಸಂಪಾದಕತ್ವದ 'ವಿನೋದ'ದ ಕಾರ್ಯಾಲಯವೂ ಇದೆ. ನನ್ನನ್ನು ಕಂಡವರೇ, ತುಂಬಾ ಆತ್ಮೀಯತೆಯಿಂದ ಸ್ವಲ್ಪ ಹೊತ್ತು ನಿಲ್ಲಿಸಿ ಮಾತನಾಡಿದರು; ಅಂತೂ ಕನ್ನಡದ್ದೇ ಸದಾ ಕನವರಿಕೆ. ಕರ್ನಾಟಕದ ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗ್ಡೆಯವರೇ ಮಹಾರಾಷ್ಟ್ರ ಮುಖ್ಯಮಂತ್ರಿಯವರೊಂದಿಗೆ ಗಡಿ ಸಮಸ್ಯೆ ವಿಚಾರ ಮಾತುಕತೆಗೆ ಹೋಗುತ್ತಾರೆ ; ಈ ಸಂದರ್ಭ ಕಾಸರಗೋಡಿನ ಕುರಿತೂ ಅವರ ಹಾಗೂ ಕೇಂದ್ರದ ಗಮನ ಸೆಳೆವ ಕೆಲಸ ಆಗಬೇಕು; ಬೆಂಗಳೂರಲ್ಲಿಯೂ ಆಂದೋಲನ ಪುನಃ ತೊಡಗಬೇಕು–ಇತ್ಯಾದಿ ವಿಚಾರಗಳನ್ನು ಮುಂದಿಟ್ಟರು. ನಾವು ಮಾಡುತ್ತಿರುವ ಪ್ರಯತ್ನದ ಕುರಿತೂ ಹೇಳಿದೆ ; ಅವರಿಗೆ ಸ್ವಲ್ಪ ಸಮಾಧಾನ ಆದಂತೆ ಕಂಡೆ. ಅವರೂ ಪ್ರಯತ್ನ ಮುಂದುವರಿಸುವ ನಮ್ಮ ಸಾಧನೆಗೆ ಬೆಂಬಲ ನೀಡುವ ಭರಸೆ ತಿಳಿಸಿದರು. ಸಾಹಿತ್ಯ ಪರಿಷದಧ್ಯಕ್ಷರಾಗಿ ಯಾವ ವಿಚಾರದಲ್ಲಿ ಮೊತ್ತಮೊದಲು ನನ್ನ ಗಮನ ಅವರ ಕಡೆಗೆ ಆಕರ್ಷಿತವಾಯಿತೋ ಮತ್ತೆ, ಇಂದು, ಪರಿಷದಧ್ಯಕ್ಷ ಸ್ಥಾನ ಬಿಟ್ಟಿದ್ದರೂ ಕನ್ನಡದ ಕೆಲಸವನ್ನು ಅವರು ಏನೇನು ಬಿಟ್ಟಿಲ್ಲವೆಂದು ತಿಳಿದುಕೊಂಡೆ ; ಕಷ್ಟಪಡುತ್ತಿರುವವರ ಕುರಿತು ಅವರಿಗಿರುವ ಈ ಕೆಲ ಮಾನವೀಯ ಸಹಾನುಭೂತಿ ನಿಜವಾಗಿಯೂ ಆದರ್ಶಕರ.

ಸರಳ ಜೀವನ, ಸ್ಪಷ್ಟ ಮಾತು, ಖಾದಿಯ ಸ್ವಚ್ಛಶುಭ್ರ ಉಡುಗೆ, ಇಂತಹ ಈ ಗಾಂಧೀವಾದೀ ಕನ್ನಡಿಗ ಇಂದು ಅರುವತ್ತರ ಹರೆಯಕ್ಕೆ ತಲುಪಿದ್ದಾರೆನ್ನುವುದು ಅವರ ವ್ಯಕ್ತಿತ್ವದ ಹಿರಿತನಕ್ಕೆ ಮುಕುಟಪ್ರಾಯವಾದ ಸಂಗತಿಯಾಗಿದೆ. ಇಂತಹ ಮಂಗಲ ಮುಹೂರ್ತದಲ್ಲಿ ಅವರ ಅಭಿಮಾನಿಗಳು ಮಿತ್ರರು ಕೂಡಿ ಅವರನ್ನು ಅಭಿನಂದಿಸುವ ಸ್ತುತ್ಯಕಾರ್ಯ ಮಾಡುತ್ತಾರೆಂಬು ದನ್ನು ತಿಳಿದು ಸಂತೋಷಗೊಂಡಿದ್ದೇನೆ. ಈ ಸ್ನೇಹ ಸೇತುಬಂಧನದ ಕಾರ್ಯದಲ್ಲಿ, ಕನ್ನಡ ನಾಡಿನ ಬಾಹಿರನಾದ ನನ್ನದೂ ಅಳಿಲ ಸೇವೆಯೆಂದು ಈ ಮಾತು ಬರೆದಿದ್ದೇನೆ. ಇಂತು ಬರೆಯಲು ಆದೇಶವಿತ್ತ ಮಿತ್ರರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಶ್ರೀ ಜಿ. ನಾರಾಯಣರು ವಯಸ್ಸಿನಲ್ಲಿ ನನಗಿಂತ ಕಿರಿಯರಾದರೂ, ವ್ಯಕ್ತಿತ್ವದಲ್ಲಿ ದೊಡ್ಡವರು. ಅವರು ಸಾರ್ಥಕ ಜೀವಿತ ನಡೆಸಿ, ನೂರು ವರ್ಷ ಬಾಳಲಿ ಎಂದು ಆಶಿಸುತ್ತೇನೆ.

(೧೯೮೪)

ಸಹೃದಯಿ ನಾರಾಯಣ

■ ಟಿ. ಸುನಂದಮ್ಮ

ಕಾರ್ಪೊರೇಷನ್ನಿನ ಸಮಾರಂಭವೊಂದರಲ್ಲಿ ಮೇಯರ್ ಜಿ. ನಾರಾಯಣರವರ ದೂರ ದರ್ಶನವಾಗಿತ್ತು ; ಅವರ ಪರಿಚಯ ನನಗಾದದ್ದು ಕೆಲವು ವರ್ಷಗಳ ನಂತರ.

ಆಗಸ್ಟ್ ಹದಿನೈದರ ಸಂಜೆ 'ವಿನೋದ' ಮಾಸ ಪತ್ರಿಕೆಯ ಹುಟ್ಟುಹಬ್ಬವನ್ನು ಆಚರಿಸುವ ಪದ್ಧತಿಯಿತ್ತು; ಆ ವರ್ಷದ ಕಾರ್ಯಕ್ರಮದಲ್ಲಿ ನಡೆಯಲಿದ್ದ ವಿಚಾರ ಗೋಷ್ಠಿಯಲ್ಲಿ 'ಹಾಸ್ಯದ ಹಲವು ಬಗೆಗಳು' ಎನ್ನುವ ವಿಷಯವಾಗಿ ಮಾತನಾಡಬೇಕೆಂದು ಪತ್ರಿಕೆಯ ಸಂಪಾದಕ ರಾದ ಶ್ರೀ ನಾರಾಯಣರವರಿಂದ ಪತ್ರ ಬಂತು. ವೇದಿಕೆ ಯಲ್ಲಿ ನಿಂತು ಮಾತನಾಡುವುದು ನನಗೂ ಹೊಸತು; ಉತ್ಸುಕತೆಯಿಂದ ಸಾಕಷ್ಟು ಸಿದ್ಧತೆ ನಡೆಸಿ, ಹೋದೆ. ಶ್ರೀ ನಾರಾಯಣರವರು ನನ್ನನ್ನು ಸಭೆಗೆ ಪರಿಚಯಿಸುವಾಗ 'ಇವರನ್ನು ಮೈಸೂರಿನ ಟಿ. ಸುನಂದಮ್ಮ ಎಂದುಕೊಂಡಿದ್ದೆ; ಆದರೆ ಇವರು ಬೇರೆ ಟಿ. ಸುನಂದಮ್ಮ ಎಂದು ಈಗ ತಿಳಿಯಿತು' ಎಂದು ನಗೆ ಮಾತಾಡಿ, ವಿಶ್ವಾಸದಿಂದ ಸ್ವಾಗತಿಸಿದರು.

ಕನ್ನಡದಲ್ಲಿ ಹಾಸ್ಯ ಸಾಹಿತ್ಯ ಕಡಿಮೆ. 'ವಿಕಟ ವಿನೋದಿನಿ', 'ನಗುವನಂದ' ಮೊದಲಿನ ಹಾಸ್ಯ ಸಾಹಿತ್ಯ ಪತ್ರಿಕೆಗಳು ; ಅವು ನಿಂತು ಹೋಗುವ ವೇಳೆಗೆ 'ಕೊರವಂಜಿ' ಜನ್ಮ ತಾಳಿದ್ದಳು. ಉತ್ತಮ ಮಟ್ಟದ ನಗೆ ಸಾಹಿತ್ಯ ಒದಗಿಸಿದ ಆ ಮಾಸಿಕದ್ದು ಸಹ ಇಪ್ಪತ್ತೈದು ವರ್ಷಗಳ ಅಲ್ಪಾಯಸ್ಸು. ಈಗ ಚಾಲನೆಯಲ್ಲಿರುವ ಏಕೈಕ ಹಾಸ್ಯ ಮಾಸಪತ್ರಿಕೆ 'ವಿನೋದ'ಕ್ಕೆ ಮುವ್ವತ್ತಮೂರನೇ ವಯಸ್ಸು ನಡೆಯುತ್ತಿರುವುದು ಅದರ ಧೀಮಂತ ಸಂಪಾದಕ ನಾರಾಯಣರ ದೃಢ ನಿಶ್ಚಯದ ಸಂಕೇತ. ಲಾಭವೋ

ನಷ್ಟವೋ? ಅವರೆಂದೂ ಕಷ್ಟವನ್ನು ಓದುಗರೊಂದಿಗೆ ಹಂಚಿಕೊಂಡಿಲ್ಲ : ಪತ್ರಿಕೆಯನ್ನು ಮುಂದುವರಿಸುವ ಏಕೈಕ ಗುರಿ ಅವರದು.

ನಾರಾಯಣರ ನಿಕಟ ಸಂಬಂಧ ನನಗಾದದ್ದು, ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಮೇಲೆ. ಕಾಯಕಲ್ಪ ನಡೆಸಿಕೊಂಡ ಪರಿಷತ್ತು ನನ್ನನ್ನು ಆಕರ್ಷಿಸಿತು ; ನಾನು ಸದಸ್ಯಳಾದೆ ; ಚಟುವಟಿಕೆಗಳಲ್ಲಿ ಭಾಗವಹಿಸಿದೆ. ಸುವರ್ಣ ಮಹೋತ್ಸವ ಹಾಗೂ ವಜ್ರಮಹೋತ್ಸವಗಳನ್ನು ಜಯಪ್ರದವಾಗಿ ನಡೆಸಿದ ಕೀರ್ತಿ ನಾರಾಯಣರದು.

ಮಹಿಳಾ ಸಲಹಾ ಸಮಿತಿಯ ಸದಸ್ಯಳಾಗಿದ್ದ ನನಗೆ, ಶ್ರೀ ನಾರಾಯಣರ ಕಾರ್ಯಪಟುತ್ವದ ಪೂರ್ಣ ಪರಿಚಯವಾಯಿತು. ಯಾವುದೇ ಸಮಾರಂಭವಾಗಲಿ, ಯಾವುದೇ ಹೊಸ ಯೋಜನೆಯಾಗಲೀ ನಾರಾಯಣರು ತಾವೇ ಆಲೋಚನೆ ಮಾಡಿಕೊಂಡು ವ್ಯವಸ್ಥೆಯ ಕರಡು ಪ್ರತಿ ಸಿದ್ಧಗೊಳಿಸಿರುತ್ತಿದ್ದರು. ಮೀಟಿಂಗ್‌ನಲ್ಲಿ ಪಾಲ್ಗೊಂಡ ನಮಗೆ ಕೆಲಸವೇನೂ ಉಳಿದಿರುತ್ತಿರಲಿಲ್ಲ. ಅವರ ಯೋಜನೆ ಎಷ್ಟು ಪರಿಪೂರ್ಣವಾಗಿರುತ್ತಿತ್ತೆಂದರೆ, ದೋಷ ಹುಡುಕಲು ಅವಕಾಶವೇ ಸಿಕ್ಕುತ್ತಿರಲಿಲ್ಲ. ಅವರು ಮೀಟಿಂಗನ್ನು ಎಷ್ಟು ಚಾತುರ್ಯದಿಂದ ನಡೆಸುತ್ತಿದ್ದರೆಂದರೆ, ಯೋಜನೆಯ ಇಡೀ ನಕ್ಷೆ ಅವರದು ; ಏನನ್ನೋ ಸಾಧಿಸಿದೆವೆನ್ನುವ ತೃಪ್ತಿ ನಮ್ಮದು!

ಕಾರ್ಯಕರ್ತರನ್ನು ಏಕೀಭವಿಸಿಕೊಳ್ಳುವ ಅವರ ಸಾಮರ್ಥ್ಯವೇ ಮನೆಮನೆಗೆ ಪುಸ್ತಕ ಭಂಡಾರವನ್ನು ಒಯ್ಯುವ ಪಾದಯಾತ್ರೆ ಕಾರ್ಯಕ್ರಮದಲ್ಲಿ ಬರಹಗಾರರನ್ನು ತೊಡಗಿಸಿಕೊಂಡದ್ದು. ಬಡಾವಣೆಯ ರಸ್ತೆಗಳಲ್ಲಿ ಮುಂಗಡವಾಗಿ ಧ್ವನಿವರ್ಧಕದ ಮೂಲಕ ಸಾಹಿತ್ಯ ಭಕ್ತರ ಆಗಮನದ ಘೋಷಣೆ, ಪುಸ್ತಕಗಳ ಚೀಲ ಹೊತ್ತ ಕನ್ನಡ ಕಾರ್ಯಕರ್ತರೊಂದಿಗೆ ಹಿಂದೆ ನಡೆದ ಮುಂದಾಳು ಸಾಹಿತಿ. ಭಾಗವಹಿಸಿದ ನಮ್ಮ ಲೇಖಕಿ ಬಳಗಕ್ಕಂತೂ 'ಪಾದಯಾತ್ರೆ'ಯಲ್ಲ, 'ಜೈತ್ರಯಾತ್ರೆ' ನಡೆಸಿದಂತಹ ಹೆಮ್ಮೆಯ ಅನುಭವ!

ಹೆಣ್ಣುಮಕ್ಕಳ ಬಗ್ಗೆ ಶ್ರೀ ನಾರಾಯಣರಿಗೆ ತುಂಬ ಕಳಕಳಿ. ಮಹಿಳಾ ವರ್ಷದಲ್ಲಿ ಅವರು ನಡೆಸಿದ ವೈವಿಧ್ಯಮಯ ಕಾರ್ಯಕ್ರಮಗಳಲ್ಲಿ ನೂರಾರು ಮಹಿಳೆಯರಿಗೆ ಪಾಲು; ಭಾಷಣ, ಗೋಷ್ಠಿ, ಪುಸ್ತಕ ರಚನೆ–ನಾಡಿನುದ್ದಗಲಕ್ಕೂ ಹಮ್ಮಿಕೊಂಡ ಚಟುವಟಿಕೆಗಳು. ಮಹಿಳಾ ವರ್ಷದ ಪ್ರಾಮುಖ್ಯತೆಯನ್ನು ಹಳ್ಳಿಹಳ್ಳಿಗೂ ಪರಿಷತ್ತು ಮುಟ್ಟಿಸಿದಷ್ಟು ಪ್ರಮಾಣದಲ್ಲಿ ಮತ್ತಿನ್ನಾವ ಸಂಸ್ಥೆಯೂ ಮುಟ್ಟಿಸಿರಲಾರದು !

ಬರಹಗಾರ್ತಿಯರ ಸಂಘಟನೆಯ ಅವಶ್ಯಕತೆಯನ್ನು ಕಂಡುಕೊಂಡ ಕೆಲವು ಸೋದರಿಯರು ಸಂಘವೊಂದನ್ನು ಸ್ಥಾಪಿಸುವ ಉದ್ದೇಶ ಸೂಚಿಸಿದಾಗ, ಬೆನ್ನಾಸರೆಯಾಗಿ ನಿಂತವರು ಶ್ರೀ ನಾರಾಯಣ. ಹಲವು ಮಹಿಳೆಯರನ್ನು ತಮ್ಮ ಮನೆಗೆ ಆಹ್ವಾನಿಸಿ, ಉಪಹಾರಾದಿಗಳಿಂದ ಉಪಚರಿಸಿ, ಸೂಕ್ತ ಸಲಹೆಗಳನ್ನು ಕೊಟ್ಟು, ಇಂದು ಐದು ವರ್ಷ ಬೆಳೆದು ಸುಭದ್ರತೆ ಪಡೆದಿರುವ 'ಕರ್ನಾಟಕ ಲೇಖಕಿಯರ ಸಂಘ'ದ ಅಸ್ತಿತ್ವಕ್ಕೆ ಕಾರಣರಾದರು.

ರಾಜಕೀಯದಲ್ಲಿದ್ದು, ಸಮಾಜ ಸೇವಕರಾಗಿ, ಸ್ವತಃ ಸಾಹಿತಿಯಾಗಿಲ್ಲದಿದ್ದರೂ ಸಾಹಿತ್ಯಾಸಕ್ತಿ ಹೊಂದಿದ್ದಲ್ಲದೆ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಕನ್ನಡ ಸಾಹಿತ್ಯಕ್ಕೆ ಸಕಲ ಚೇತನವನ್ನೂ ತುಂಬಿಕೊಟ್ಟ ಅಪರೂಪದ ವ್ಯಕ್ತಿ. ಪ್ರಚಾರಪ್ರಿಯರಲ್ಲ ; ಕ್ರಿಯಾವಂತ, ಕಾರ್ಯನಿರತ ; ಸಹನೆ, ತಾಳ್ಮೆಗಳ ಮೂರ್ತಿ, ಮಿತಭಾಷಿ, ಸಹೃದಯಿ ಜಿ. ನಾರಾಯಣ.

(೧೯೮೪)

ಪೆಣ್ಣಲ್ಲವೆ ನಮ್ಮನೆಲ್ಲ ಪೊರೆದ ತಾಯಿ.....

■ ಚಿ.ನ. ಮಂಗಳಾ

ಅರುವತ್ತು ತುಂಬಿರುವ ಮಾನ್ಯ ಶ್ರೀ ಜಿ. ನಾರಾಯಣ ಅವರನ್ನು ಕುರಿತು ಅಭಿಮಾನ ವಿಶ್ವಾಸ ಕೃತಜ್ಞತೆಯ ನಾಲ್ಕು ಮಾತು ಹೇಳಲು ಬರೆದ ಈ ಲೇಖನಕ್ಕೆ ಇದೇನು ತಲೆಬರಹ ಎನಿಸಬಹುದು. ನನ್ನ ಮಟ್ಟಿಗಂತೂ ಸಂಚಿಯ ಹೊನ್ನಮ್ಮನ ಸಾಂಗತ್ಯದ ಸತ್ವವನ್ನರಿತು ತಮ್ಮ ನಡೆ ನುಡಿಯಲ್ಲೂ ಕಾರ್ಯಕ್ಷೇತ್ರದಲ್ಲೂ ಹೆಣ್ಣುಮಕ್ಕಳಿಗೆ ಸ್ಫೂರ್ತಿಯ ಸೆಲೆಯಾಗಿರುವ ಕೆಲವೇ ಗಣ್ಯರಲ್ಲಿ ಶ್ರೀ ಜಿ. ನಾರಾಯಣ ಅವರು ಪ್ರಮುಖರು.

ಶ್ರೀಯುತರು ನಗರದ ಮೇಯರ್ ಆಗಿದ್ದಾಗ ಅವರನ್ನು ನಾನು ಮೊದಲು ನೋಡಿದ್ದು. ಆದರೆ ಅವರ ಸಜ್ಜನಿಕೆಯ, ಕಾರ್ಯತತ್ಪರತೆಯ, ಎಲ್ಲದಕ್ಕಿಂತ ಹೆಚ್ಚಾಗಿ ಹೆಣ್ಣುಮಕ್ಕಳ ವ್ಯಕ್ತಿತ್ವದ ವಿಕಾಸದಲ್ಲಿ ಅವರಿಗಿರುವ ಆಸ್ಥೆ, ಆಸಕ್ತಿ, ಅಭಿಮಾನಗಳ ನಿಕಟ ಪರಿಚಯವಾದುದು ಅವರು ಕನ್ನಡ ರಾಜ್ಯೋತ್ಸವ ಸಮಿತಿಯನ್ನು ರಚಿಸಿ ಅದರ ಅಂಗವಾಗಿ ಮನೆ ಮನೆಗೆ ಕನ್ನಡ ಪುಸ್ತಕಗಳ ಮಾರಾಟವನ್ನು ಏರ್ಪಡಿಸಿದಾಗ.

ನೂಕುವ ಗಾಡಿಗಳಲ್ಲಿ ಪುಸ್ತಕಗಳನ್ನು ಜೋಡಿಸಿ ಕೊಂಡು ಮನೆ ಮನೆಗೆ ಕನ್ನಡ ಸಾರಸ್ವತ ಸಂಪತ್ತಿನ ಪರಿಚಯ ಮಾಡಿಕೊಡುವ ಕಾರ್ಯಕ್ರಮದಲ್ಲಿ ನಾನು ಸಕ್ರಿಯವಾಗಿ ಭಾಗವಹಿಸಿದೆ. ನನ್ನಂತೆಯೇ ಭಾಗವಹಿಸಿ ದವರು ಅನೇಕರು. ಮಹನೀಯರಷ್ಟೇ ಉತ್ಸಾಹದಿಂದ ಈ ಕಾರ್ಯಕ್ರಮದಲ್ಲಿ ಮಹಿಳೆಯರೂ ಭಾಗಿಗಳಾಗಲು ಕಾರಣ ಶ್ರೀ ನಾರಾಯಣ. ಅವರು ಮಾಡುವ ಎಲ್ಲ

ಕಾರ್ಯದಲ್ಲೂ ಅಚ್ಚುಕಟ್ಟು. ಅದರಲ್ಲಿ ಅಪ್ಪಿ ತಪ್ಪಿಯೂ ಒಂದು ಎಳೆಯೂ ತಪ್ಪುವುದಿಲ್ಲ. ಈ ಅಚ್ಚುಕಟ್ಟಿನ ಆಯಕಟ್ಟಿನಲ್ಲಿ ಮಹಿಳೆಯರಿಗೆ ದೊರೆತ, ದೊರಕುತ್ತಿರುವ ಪ್ರೋತ್ಸಾಹ ಅಪಾರ.

ಮಹಿಳೆಯೊಬ್ಬಳನ್ನು ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷೆಯಾಗಿಸಿದ ಕೀರ್ತಿ ನಾರಾಯಣರದ್ದು. ಕನ್ನಡ ಸಾಹಿತ್ಯ ಪರಿಷತ್ತು ತಾನು ಹುಟ್ಟಿದಂದಿನಿಂದ ಐವತ್ತೇಳು ಸಮ್ಮೇಳನಗಳನ್ನು ನಡೆಸಿದ್ದರೂ ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕೆ ಮಹಿಳೆ ಆಯ್ಕೆಯಾದದ್ದು ಮೊದಲ ಬಾರಿ, ನಾರಾಯಣರು ಪರಿಷತ್ತಿನ ಅಧ್ಯಕ್ಷರಾಗಿದ್ದಾಗ. ಅಲ್ಲದೆ ಅಂತರರಾಷ್ಟ್ರೀಯ ಮಹಿಳಾ ವರ್ಷದಲ್ಲಿ, ನಾರಾಯಣರ ಅಧ್ಯಕ್ಷತೆಯಲ್ಲಿ, ಕನ್ನಡ ಸಾಹಿತ್ಯ ಪರಿಷತ್ತು ಮಹಿಳೆಯರಿಗೆ ನೀಡಿದ ವಿಶೇಷಾವಕಾಶಗಳು ಅಪಾರ. ನಾರಾಯಣರು ಪರಿಷತ್ತಿನ ಅಧ್ಯಕ್ಷರಾಗಿದ್ದರಿಂದ ಮಾತ್ರವೇ ಈ ಕಾರ್ಯ ಸಾಧ್ಯವಾಯಿತೆನ್ನಬಹುದು. ಮಹಿಳೆಯರ ಚಿಂತನಶೀಲತೆ ಹೆಚ್ಚಬೇಕೆಂದು ಒಂದು ಪುಸ್ತಕಮಾಲೆ ಯನ್ನು ಆರಂಭಿಸಿದರು. ಅದರ ಮೂಲಕ ಎಷ್ಟೋ ಲೇಖಕಿಯರು ಬೆಳಕಿಗೆ ಬಂದರು. ಮಹಿಳೆಯರ ಸಾಹಿತ್ಯಕ್ಕಾಗಿ ವಿಶೇಷ ಬಹುಮಾನ ಯೋಜನೆಯೊಂದನ್ನು ಆರಂಭಿಸಿದರು. ಲೇಖಕಿಯರ ಸಮ್ಮೇಳನವನ್ನು ನಡೆಸಿದರು. ನಾರಾಯಣ ಅವರು ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ಮಹಿಳೆಯರ ಸಂಘಟನೆ ಒಂದು ಹೊಸ ಆಯಾಮವನ್ನೇ ಪಡೆಯಿತು. ಮಹಿಳೆಯರಲ್ಲಿ ಕಾರ್ಯಕರ್ತರ ಒಂದು ಹೊಸ ಪೀಳಿಗೆಯೇ ಆರಂಭವಾಯಿತು. ಶ್ರದ್ಧೆ, ಶಿಸ್ತು ಬೆಳೆಯಿತು.

'ಕರ್ನಾಟಕ ಲೇಖಕಿಯರ ಸಂಘ' ನಾರಾಯಣರ ನೆಚ್ಚಿನ ಪುತ್ರಿ. ಲೇಖಕಿಯರ ಸಂಘಟನೆಗಾಗಿ, ಹೊಸ ಬರಹಗಾರ್ತಿಯರಿಗೆ ಪ್ರೋತ್ಸಾಹದ ಚಿಲುಮೆಯಾಗಿ ಬೆಳೆಯುತ್ತಿರುವ ಈ ಸಂಘದ ಅಂತಃಸತ್ವ ನಾರಾಯಣ ಅವರೆ. ಕಣ್ವರು ಶಕುಂತಲೆಯನ್ನು ಪೋಷಿಸಿದಂತೆ, ವಾಲ್ಮೀಕಿಗಳು ಸೀತೆಯನ್ನು ಪೊರೆದಂತೆ ಕನ್ನಡ ನಾಡಿನ ಮಹಿಳಾ ಚೇತನವನ್ನು ಪೊರೆದು ಪೋಷಿಸುತ್ತಿರುವ ಮಾನ್ಯ ಶ್ರೀ ನಾರಾಯಣ ಅವರು ನೂರಕ್ಕೂ ಹೆಚ್ಚಿನ ವಸಂತಗಳನ್ನು ಕಾಣುವಂತೆ ಶ್ರೀ ಮಾತೆ ಅನುಗ್ರಹಿಸಲಿ.

(೧೯೮೪)

ನಾ ಕಂಡ ಜಿ. ನಾರಾಯಣ

■ ಹೊ. ಶ್ರೀನಿವಾಸಯ್ಯ

ಒಂದು ದಿನ ಸಂಜೆ, ನನ್ನ ಆಪ್ತ ಮಿತ್ರರಾದ ಶ್ರೀ ವಿ. ಎಸ್. ಕೃಷ್ಣಯ್ಯರ್‌ರವರು ನಮ್ಮ ಮನೆಗೆ ಬಂದರು. ಜೊತೆಯಲ್ಲಿ ಖಾದಿ ವೇಸ್ಟ್‌ಕೋಟ್, ಗಾಂಧಿಟೋಪಿ, ದಟ್ಟಿಪಂಚೆ ಧರಿಸಿದ ವ್ಯಕ್ತಿ ಬಂದರು. ನೋಡಿದ್ದ ವ್ಯಕ್ತಿಯೇ ಆದರೂ ಪರಿಚಯವಿರಲಿಲ್ಲ. ಶ್ರೀ ಕೃಷ್ಣಯ್ಯರ್‌ರವರು "ನಾರಾಯಣರವರೇ, ನಮ್ಮ ಗಾಂಧೀ ಸಾಹಿತ್ಯ ಸಂಘದ ಶ್ರೀನಿವಾಸಯ್ಯನವರ ಮನೆಯಿದು. ನಿಮ್ಮ ಪರಿಚಯ ಇದೆಯೋ ಇಲ್ಲವೋ ಕಾಣೆ. ನಿಮ್ಮ ಜಿಲ್ಲೆಯವರೇ ಇರಬೇಕು" ಅಂತ ಹೇಳಿ ಕರೆದುಕೊಂಡು ಬಂದರು. ಆಗಲೇ ಶ್ರೀ ಜಿ. ನಾರಾಯಣರವರ ಪರಿಚಯ ಆಗಿದ್ದು.

ಅನೇಕ ಸಭೆಗಳಲ್ಲಿ ನೋಡಿದ್ದರೂ ಜೊತೆಯಲ್ಲಿ ಮಾತನಾಡಿರಲಿಲ್ಲ. ಹಸನ್ಮುಖರಾಗಿ ನಗುನಗುತ್ತಾ ಮನೆಗೆ ಬಂದು ಕುಳಿತು "ನೀವು ಯಾವ ಊರಿನವರು? ಎಲ್ಲಿದ್ದೀರಾ?" ಎಂದು ವಿಚಾರಿಸಿದರು. ಮಾತು ಎಷ್ಟು ಬೇಕೋ ಅಷ್ಟು ನಿಧಾನ. ಅವಸರದ ಕೆಲಸವಿಲ್ಲ. ಯಾವಾಗಲು ಏನೋ ಯೋಜನೆ-ಯೋಚನೆ ಮಾಡುವ ಹಾಗೆ ಕಾಣುತ್ತಿದ್ದರು. ಆ ದಿನ ಕಂಡ ನಾರಾಯಣರಿಗೂ ಇಂದು ಕಾಣುವ ನಾರಾಯಣರಿಗೂ ಏನೂ ವ್ಯತ್ಯಾಸ ಕಾಣಲಿಲ್ಲ. ಅದೇ ತಾಳ್ಮೆ, ಅದೇ ಸಹನೆ, ಅಷ್ಟೇ ಸ್ನೇಹಭಾವ. ಎಲ್ಲಿ ಯಾರೇ ಸಿಕ್ಕಲಿ, ಅವರ ಕ್ಷೇಮ ಸಮಾಚಾರ ವಿಚಾರಿಸುವುದೇ ಇವರ ಮೊದಲ ಮಾತು.

ಶ್ರೀ ನಾರಾಯಣರವರು 'ಕನ್ನಡ ಸಾಹಿತ್ಯ ಪರಿಷತ್ತಿ'ನ ಅಧ್ಯಕ್ಷರಾಗಿ ಬಂದಾಗ ಅನೇಕ ಬುದ್ಧಿಜೀವಿಗಳು ಸಾಹಿತ್ಯ

ಪರಿಷತ್ತಿನ ಸಾಹಿತ್ಯ ಸೇವೆಯ ಬಗ್ಗೆ ಶಂಕಿಸಿ ಗುಸು ಗುಸು ಮಾತಿನಲ್ಲಿ ಸೂಚಿಸುತ್ತಿದ್ದರು. ನಾನು ಸಿದ್ದವನಹಳ್ಳಿ ಕೃಷ್ಣಶರ್ಮರನ್ನ ಇದೇ ಪ್ರಶ್ನೆ ಕೇಳಿದೆ. ಶರ್ಮಾಜಿಯವರು ದೇಹ ಸ್ವಾಸ್ಥ್ಯವಿಲ್ಲದೆ ಹಾಸಿಗೆ ಹಿಡಿದಿದ್ದರು. ಅವರು ಹೇಳಿದ ಮಾತು ಈಗಲೂ ಜ್ಞಾಪಕಕ್ಕೆ ಬರುತ್ತದೆ : "ಕನ್ನಡ ಸಾಹಿತ್ಯ ಪರಿಷತ್ ಬರೀ ಸಾಹಿತಿಗಳಿಗೆ ಮಾತ್ರವಲ್ಲ; ಕನ್ನಡನಾಡಿಗೆ, ಕನ್ನಡನುಡಿಗೆ ದುಡಿಯುವ ಎಲ್ಲಾ ಕನ್ನಡಿಗರಿಗೂ ಸೇರಿದ್ದು. ಯಾರು ಬೇಕಾದರೂ ನಾಡಿಗಾಗಿ ಸೇವೆ ಮಾಡಬಹುದು. ಸಾಹಿತಿಗಳೇ ಸೇರಿದರೆ ಅವರ ಸಾಹಿತ್ಯ ಅದರ ಪ್ರಚಾರ ಅವರ ದೃಷ್ಟಿಕೋನದ ಕಡೆಗೇ ಒಲವು ಮತ್ತು ಪ್ರಭಾವವನ್ನು ಬೀರಲು ಪ್ರಯತ್ನಿಸುತ್ತಾರೆ. ಸಾಮಾನ್ಯ ಜನರ ಸಂಪರ್ಕ ಇರುವುದಿಲ್ಲ. ಪರಿಷತ್ತು ಕೇವಲ ಕೆಲವರಿಗಾಗಿ ಉಳಿಯುತ್ತದೆ. ಇದು ನನ್ನ ಅನುಭವ. ನಾನು ಪರಿಷತ್ತಿನ ಕಾರ್ಯದರ್ಶಿಯಾಗಿದ್ದಾಗ, ನಾನು ರಾಜಕಾರಣಿ ಎಂಬ ಮಾತು ಬಂದರೂ ಜನಸಂಪರ್ಕ ಇದ್ದುದರಿಂದ, ಅನೇಕ ಹಿರಿಯರನ್ನು ಜನಸಾಮಾನ್ಯರನ್ನು ಆಜೀವ ಸದಸ್ಯರನ್ನಾಗಿ ಮಾಡಿದೆ. ಎಲ್ಲರ ಅಭಿಮಾನವನ್ನು ಗಳಿಸಲು ಪ್ರಯತ್ನಪಟ್ಟೆ. ಆದ್ದರಿಂದ ಶ್ರೀ ನಾರಾಯಣರವರು ಅಧ್ಯಕ್ಷರಾಗಿರುವುದು ಕಾರ್ಯಕರ್ತರಿಗೆ, ನಾಡು-ನುಡಿಯ ಸೇವೆ ಮಾಡುವ ಜನಗಳಿಗೆ ಹೆಮ್ಮೆ ತರುವ ವಿಷಯ. ನಿಜವಾಗಿಯೂ ಅವರು ಪರಿಷತ್ತಿನ ಕಾರ್ಯವನ್ನು ಚೆನ್ನಾಗಿ ನಿರ್ವಹಿಸಿ ಹೆಸರು ಗಳಿಸುವರು" ಎಂದು ಶರ್ಮಾಜಿ ಹೇಳಿದ ಮಾತಿಗೆ ನಾರಾಯಣರು ಸುಮಾರು ಒಂಬತ್ತುವರ್ಷ ಪರಿಷತ್ತಿನಲ್ಲಿ ಸುವ್ಯವಸ್ಥಿತವಾದ ಕಾರ್ಯಸಾಧನೆ ಮಾಡಿರುವುದೇ ಸಾಕ್ಷಿ.

ಪರಿಷತ್ತಿನ ಕಾರ್ಯ ನಿರ್ವಾಹಕ ಸಮಿತಿಯಲ್ಲಿ ಅವರ ಜೊತೆಯಲ್ಲಿ ಕೆಲಸ ಮಾಡುವ ಅವಕಾಶ ನನಗೆ ಸಿಕ್ಕಿತ್ತು. ಮೂರು, ನಾಲ್ಕು ಗಂಟೆಗಳ ಕಾಲ ಸಭೆಗಳು ನಡೆದರೂ ಸಮಾಧಾನವಾಗಿ ಎಲ್ಲರಿಗೂ ಉತ್ತರ. ಯಾರು ವಿರೋಧಿಸುತ್ತಾರೆ ಎಂದು ಗೊತ್ತಾದ ತಕ್ಷಣ ಅವರನ್ನೇ ಅದರ ವಿಚಾರವಾಗಿ ಮಾತನಾಡಲು ಕೇಳಿಕೊಳ್ಳುವ ಸ್ವಭಾವ. ಅವರ ತಾಳ್ಮೆಯೇ ಕನ್ನಡ ಸಾಹಿತ್ಯ ಪರಿಷತ್ತಿನ ಸಾಧನೆಗೆ ಕಾರಣ.

ಶ್ರೀ ಜಿ. ನಾರಾಯಣರವರು ಯಾವ ಕೆಲಸವನ್ನೇ ನಿರ್ವಹಿಸಲಿ, ನಾಯಕರಾಗಿ ನಿಂತು, ಕೆಲಸಗಾರರನ್ನು ಒಟ್ಟುಗೂಡಿಸಿ, ಕೆಲಸವನ್ನು ಹಂಚಿ ಎಲ್ಲವರಲ್ಲೂ ಭಾಗವಹಿಸಿ ಹೆಮ್ಮೆಪಡುವುದು ಸ್ವಭಾವ. ದೆಹಲಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಾಗ ಬೆಂಗಳೂರಿನಿಂದ ಒಂದು ವಿಶೇಷ ರೈಲು ಹೊರಟಿತು. ಬೆಂಗಳೂರಲ್ಲಿ ರೈಲನ್ನು ಬೀಳ್ಕೊಟ್ಟು, ದೆಹಲಿಯಲ್ಲಿ ಸ್ವಾಗತಿಸಲು ಏರ್ಪಾಡು ಮಾಡಿದರು. ಟ್ರೈನು ಬರಲು ನಿಧಾನವಾಯಿತು. ಅಧ್ಯಕ್ಷರಾಗಿದ್ದ ನಾರಾಯಣ ರವರಿಗೆ ಎಲ್ಲ ಕೆಲಸಗಳಿಗಿಂತ ಬೆಂಗಳೂರಿನಿಂದ ಬರುತ್ತಿರುವ ಜನಗಳ ಚಿಂತೆ. ಪ್ರತಿ ನಿಮಿಷವೂ ಟ್ರೈನು ಎಲ್ಲಿ ಬರುತ್ತಿದೆ. ಎಂಬುದನ್ನು ವಿಚಾರಿಸುತ್ತಿದ್ದರು. ಸಮ್ಮೇಳನ ನಡೆಯುವ ಹಿಂದಿನ ರಾತ್ರಿ ಆಗ್ರಾದಲ್ಲಿ ಬರುತ್ತಿದೆ, ನಮ್ಮ ಜನ ಟ್ರೈನಿನಲ್ಲಿ ಊಟ ತಿಂಡಿಗಳಿಲ್ಲದೆ ಬರುತ್ತಿದ್ದಾರೆ ಎಂದು ಗೊತ್ತಾಗಿ, ಅವರಿಗಾಗಿ ಒಂದು ಲಾರಿಯಲ್ಲಿ ಊಟ ಕಳಿಸುವ ಏರ್ಪಾಡಿನ ಯೋಜನೆ ಹಾಕಿದರು. ಆದರೆ 'ಅಲ್ಲಿಂದ ಹೊರಟರೆ ಏನು ಮಾಡುವುದು' ಎಂದು ಕೆಲವರು ಪ್ರಶ್ನಿಸಿದಾಗ ಅದನ್ನು ಕೈಬಿಟ್ಟರು. ಟ್ರೈನು ಬೆಳಗ್ಗೆ ೬ ಗಂಟೆಗೆ ಬರುತ್ತದೆ ಎಂದು ಗೊತ್ತಾದಾಗ ೫

ಗಂಟೆಗೇ ರೈಲ್ವೆ ನಿಲ್ದಾಣದಲ್ಲಿ ಹಾಜರಿದ್ದರು. ಟ್ರೈನು ಬಂದ ತಕ್ಷಣವೇ ಕನ್ನಡಿಗರನ್ನು ಸ್ವಾಗತಿಸಿ, ಕುಶಲವನ್ನು ಪ್ರಶ್ನಿಸಿ, ಅವರಿಗೆಲ್ಲ ಬಸ್ಸಿನ ವ್ಯವಸ್ಥೆ ಮಾಡಿ "ವಸತಿಗೆ ಸೇರಿ, ಸ್ನಾನ ಮತ್ತು ತಿಂಡಿ ಮಾಡಿಕೊಂಡು ಸಮ್ಮೇಳನಕ್ಕೆ ಬನ್ನಿ, ನಿಧಾನವಾದರೂ ಚಿಂತೆಯಿಲ್ಲ, ಸಮ್ಮೇಳನದ ವೇಳೆ ಮುಂದೂಡೋಣ" ಎಂದರು. ಕೂಗಾಡುವವರೆಲ್ಲ ಕೂಗಾಡಿ, ಕಡೆಗೆ ನಾರಾಯಣರವರ ಉಪಚಾರದ ಮಾತುಗಳನ್ನು ಕೇಳಿ ಸುಮ್ಮನಾದರು. ಅಧ್ಯಕ್ಷರೇ ರೈಲ್ವೆ ನಿಲ್ದಾಣಕ್ಕೆ ಬಂದು ಕನ್ನಡ ಪ್ರತಿನಿಧಿಗಳನ್ನು ಸ್ವಾಗತಿಸಿದುದನ್ನು ಎಲ್ಲರೂ ಮೆಚ್ಚಿದರು. ಕನ್ನಡ ಜನ ದೆಹಲಿಯಲ್ಲಿ ಸಮ್ಮೇಳನ ಮಾಡುವುದೆಂದರೆ ಬರೀ ಸಮ್ಮೇಳನ ಕೂಟ ಮಾತ್ರವಲ್ಲ. ಈ ದೆಸೆಯಲ್ಲಿ ದೇಶದ ಜನರ ಪರಿಚಯ ಬಹಳ ಮುಖ್ಯ ಎಂಬುದು ಅವರ ಉದ್ದೇಶ. ದೆಹಲಿಯಿಂದ ನಾನಾ ಕಡೆಗೆ ಪ್ರವಾಸ ಏರ್ಪಡಿಸಿದರು. ಅತ್ಯಲ್ಪ ಖರ್ಚಿನಲ್ಲಿ ಕನ್ನಡ ನಾಡಿನ ಜನ ದೆಹಲಿಯ ಸುತ್ತಮುತ್ತಲ ಪರಿಚಯ ಮಾಡಿಕೊಂಡರು.

ನನ್ನ ಕೆಲವು ಮಿತ್ರರು, ಕಾರ್ಮಿಕ ಬಂಧುಗಳು ನನಗೆ ಸನ್ಮಾನ ಮಾಡಬೇಕೆಂದು ಯೋಜಿಸಿ ಶ್ರೀ ಜಿ. ನಾರಾಯಣರವರನ್ನು ಅಧ್ಯಕ್ಷರಾಗಲು ಕೇಳಿದರು. ಈಗಾಗಲೇ ಅನೇಕ ಸನ್ಮಾನ ಸಮಿತಿಗಳಿಗೆ ಅಧ್ಯಕ್ಷರಾಗಿದ್ದುದರಿಂದ ಮೊದಲು ಆಗುವುದಿಲ್ಲವೆಂದು ಹೇಳಿದರೂ ನನ್ನ ಮೇಲಿನ ಪ್ರೀತಿ ವಿಶ್ವಾಸಕ್ಕಾಗಿ ಒಪ್ಪಿಕೊಂಡರು. ಅವರು ಒಪ್ಪಿಕೊಳ್ಳುವುದೇ ಕಷ್ಟ. ಒಪ್ಪಿಕೊಂಡ ಮೇಲೆ ಎಲ್ಲ ಕೆಲಸದಲ್ಲೂ ಅಚ್ಚುಕಟ್ಟು. ಯುವಕರಿಗೆ ಮಾರ್ಗದರ್ಶನ ನೀಡಿ ಒಂದು ಕಾರ್ಯಕ್ರಮ ಹಾಕಿಕೊಟ್ಟು ಸಂಭಾವನಾಗ್ರಂಥ ಹಾಗೂ ನೆನಪಿನ ಸಂಚಿಕೆಯನ್ನು ಹೊರತಂದರು. ಕಾರ್ಯಕ್ರಮ ಏರ್ಪಡಿಸುವುದರಲ್ಲಿ ಬಹು ಮುಂದಾಲೋಚನೆ.

ಶ್ರೀಲಂಕಾಗೆ ನಾನು ಹೋಗಿ ಬಂದಮೇಲೆ, ಶ್ರೀಲಂಕಾವನ್ನು ಕನ್ನಡಿಗರಿಗೆ ಪರಿಚಯ ಮಾಡಿಕೊಡುವ ಉದ್ದೇಶದಿಂದ ಒಂದು ಪುಸ್ತಕವನ್ನು ಬರೆದು ಅದರ ಹಸ್ತಪ್ರತಿಯನ್ನು ಜಿ. ನಾರಾಯಣರವರಿಗೆ ಕೊಟ್ಟೆ. ಅಭಿಪ್ರಾಯ ಸೂಚಿಸಲು ಕೋರಿದೆ. ನಾಲ್ಕೇ ದಿನಗಳಲ್ಲಿ ನನಗೆ ದೂರವಾಣಿಯ ಮೂಲಕ ತಿಳಿಸಿದರು. "ವಿಷಯ ಚೆನ್ನಾಗಿದೆ. ಪ್ರಕಟಿಸಲು ಪ್ರಯತ್ನಿಸಿ" ಎಂದು ಉತ್ತೇಜಿಸಿದರು. ಇದಾದನಂತರ 'ಶಶಿ ಕಂಡ ಜರ್ಮನಿ' ಮಕ್ಕಳಿಗಾಗಿ ಬರೆದ ಪುಸ್ತಕದ ಹಸ್ತಪ್ರತಿಯನ್ನೂ ಅವರಿಗೆ ತೋರಿಸಿದೆ. ಅದನ್ನು ಓದಿ ಕೆಲವು ಕಡೆ ವಿವರಣೆ ಕೊಡಬೇಕೆಂದು ಸಲಹೆ ನೀಡಿ, ಈ ಪುಸ್ತಕವನ್ನು ಕನ್ನಡ ಸಾಹಿತ್ಯ ಪರಿಷತ್ತಿಗೆ ಕೊಡಿ, ಸುಲಭ ಬೆಲೆಗೆ ಮಕ್ಕಳು ಓದಲು ಅನುಕೂಲವಾಗಲಿ ಎಂದರು. ಅದೇ ರೀತಿ ಪರಿಷತ್ತಿನವರು ಪ್ರಕಟಿಸಿದರು.

ಬಿ. ಎಂ. ಶ್ರೀ. ಜನ್ಮಶತಾಬ್ದಿಯ ಕಾರ್ಯಾಧ್ಯಕ್ಷರಾಗಿ, ಎಲ್ಲ ಕಾರ್ಯಕ್ರಮಗಳನ್ನು ಯೋಜಿಸಿ, ಇದುವರೆಗೂ ಕರ್ನಾಟಕದಲ್ಲಿ ಎಲ್ಲಿಯೂ ಆಗದಂತಹ, ಕವಿಯ ಜನ್ಮಶತಾಬ್ದಿಯನ್ನು ಶ್ರೀ ಆದಿಚುಂಚನಗಿರಿ ಕ್ಷೇತ್ರದ ಶ್ರೀ ಸ್ವಾಮೀಜಿ ಅವರ ಸಹಕಾರದೊಂದಿಗೆ ಕವಿ ಜನಿಸಿದ ಊರಿನಲ್ಲೇ ವೈಭವವಾಗಿ ಆಚರಿಸಿ ಯಶಸ್ವಿಯಾದರು. ಹಿರಿಯ ಸಾಹಿತಿಗಳಾದ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಶ್ರೀ ಪು.ತಿ. ನರಸಿಂಹಾಚಾರ್, ಪ್ರೊ|| ಎಂ.ವಿ. ಸೀತಾರಾಮಯ್ಯ, ಶ್ರೀ ಸಿಟ್ಟೂರು

ಶ್ರೀನಿವಾಸರಾವ್ ಒಂದು ದಿನ ಮುಂಚಿತವಾಗಿ ಶ್ರೀ ಆದಿಚುಂಚನಗಿರಿ ಪುಣ್ಯಕ್ಷೇತ್ರದಲ್ಲಿ ತಂಗಿದ್ದರು. ನಾನು ಮತ್ತು ಶ್ರೀ ಜಿ. ನಾರಾಯಣರು ಹಿಂದಿನ ದಿನವೇ ಬೆಳ್ಳೂರಿಗೆ ಹೋಗಿದ್ದೆವು. ಪ್ರತಿಯೊಂದು ಕಾರ್ಯವನ್ನೂ ವಿವರವಾಗಿ ಪರಿಶೀಲಿಸಿ ಎಲ್ಲರಿಗೂ ಸೂಕ್ತ ಸಲಹೆ ನೀಡಿದರು. ಮಾರನೇ ದಿನ ಅಂದರೆ ೩-೧-೮೪ರ ಸಮಾರಂಭಕ್ಕೆ ಬೆಂಗಳೂರಿನಿಂದ ೬ ಬಸ್ಸಿನ ಜನ ಭಾಗವಹಿಸಿದರು. ಪುಸ್ತಕ ಪ್ರದರ್ಶನವೂ ಏರ್ಪಟ್ಟಿತ್ತು. ಬಹಳ ವೈಭವದಿಂದ ಜನ್ಮಶತಾಬ್ದಿ ಆಚರಿಸಲಾಯಿತು.

'ಕನ್ನಡದ ಕಣ್ವ ಬಿ.ಎಂ.ಶ್ರೀ.' ಪುಸ್ತಕ ಬರೆಯಲು ಜಿ. ನಾರಾಯಣರೇ ಕಾರಣ. ಈ ಪುಸ್ತಕ ಸಮಾರಂಭದಲ್ಲಿ ಬಿಡುಗಡೆಯಾಯಿತು. ಒಂದು ದಿನ ನಾವಿಬ್ಬರೂ ಯಾವುದೋ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗಿತ್ತು. ಅಲ್ಲಿಗೆ ಹೋಗುವಾಗ ನನ್ನನ್ನು ಕೇಳಿದರು, 'ನೀವು ಬರೆದ ಮಕ್ಕಳ ಪುಸ್ತಕಗಳನ್ನು ನೋಡಬೇಕು' ಅಂದರು. ಆಗಲೇ ಅವರಿಗೆ ಪುಸ್ತಕಗಳನ್ನು ಕೊಟ್ಟೆನು. ಅಂದು ರಾತ್ರಿ ದೂರವಾಣಿ ಮೂಲಕ ಮಾತನಾಡಿ 'ನೀವು ಬರೆದ ಮಕ್ಕಳ ಸಾಹಿತ್ಯ ಶೈಲಿ ತುಂಬಾ ಚೆನ್ನಾಗಿದೆ. ನೀವು ಬಿ.ಎಂ.ಶ್ರೀ. ನೋಡಿದ್ದೀರಾ, ಪರಿಚಯವಿದೆಯೋ. ಎಂದು ಕೇಳಿದರು. 'ಪರಿಚಯ ಹೆಚ್ಚು ಇಲ್ಲದಿದ್ದರೂ ಅವರ ಭಾಷಣಗಳನ್ನು ಕೇಳಿದ್ದೇನೆ. ಸಿದ್ದವನಹಳ್ಳಿ ಕೃಷ್ಣಶರ್ಮರು ಅವರ ವಿಚಾರವನ್ನು ತಿಳಿಸುತ್ತಿದ್ದರು. ಅವರ ಕನ್ನಡ ಸೇವೆಯನ್ನು ತಿಳಿದಿದ್ದೇನೆ' ಅಂದೆ. 'ಹಾಗಾದರೆ ಮಕ್ಕಳಿಗಾಗಿ ಬಿ.ಎಂ.ಶ್ರೀ. ವಿಚಾರದಲ್ಲಿ ಪುಸ್ತಕವನ್ನು ಬರೆಯಬಾರದೇಕೆ' ಎಂದು ಹೇಳಿದರು. 'ಆಗಲಿ' ಎಂದೆ. ಮೂರೇ ದಿವಸಕ್ಕೆ ಎಂ. ವಿ. ಸೀತಾರಾಮಯ್ಯನವರಿಂದ ಒಂದು ಕಾಗದ ಬಂದಿತು. ಬರೆದುಕೊಟ್ಟದ್ದಾಯಿತು. ಪ್ರೊ. ಎಂ.ವಿ. ಸೀತಾರಾಮಯ್ಯನವರು 'ಚೆನ್ನಾಗಿದೆ' ಎಂದು ನನ್ನ ಬೆನ್ನು ತಟ್ಟಿ ಪುಸ್ತಕವನ್ನು ಪ್ರಕಟಿಸಿದರು.

ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ಬಿಟ್ಟನಂತರ ನಾರಾಯಣರಿಗೆ ಆದಷ್ಟು ಸನ್ಮಾನಗಳು ಮತ್ಯಾರಿಗೂ ಆಗಿಲ್ಲವೆಂದು ನನ್ನ ಭಾವನೆ. ಅಧಿಕಾರದಲ್ಲಿದ್ದವರಿಗೆ ಸನ್ಮಾನವನ್ನು ಮಾಡಿ, ಕೆಲಸ ಸಾಧಿಸಿಕೊಳ್ಳುತ್ತಾರೆ. ಆದರೆ ಅಧಿಕಾರ ಬಿಟ್ಟ ಮೇಲೆ ಸನ್ಮಾನ ಮಾಡಿದರೆ ಅದು ಅವರ ಸೇವೆ ಮತ್ತು ಸಾಧನೆಗೆ. ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ನಾಡು-ನುಡಿ ಈ ವಿಚಾರಗಳನ್ನು ಬಿಟ್ಟರೆ ಬೇರೆ ಮಾತೇ ಇಲ್ಲ. ಕೆಲಸಗಾರರನ್ನು ಹುರಿದುಂಬಿಸಿ ಕೆಲಸ ಮಾಡಿಸಿ ಅದನ್ನು ನೋಡುವುದರಲ್ಲಿ ಸಂತೋಷ. ಇಂತಹ ಮಹಾನ್ ವ್ಯಕ್ತಿ. ಸಮಾಜ ಸೇವಕರಿಗೆ, ಬರಹಗಾರರಿಗೆ, ಕಾರ್ಯಕರ್ತರಿಗೆ ಒಬ್ಬ ಮಾರ್ಗದರ್ಶಿ.

(೧೯೮೪)

ಸಜ್ಜನ, ಸಾಹಿತ್ಯಾಭಿಮಾನಿ, ಅಜಾತಶತ್ರು

■ ಎಚ್.ಎಸ್. ದೊರೆಸ್ವಾಮಿ

ಸಜ್ಜನರೂ, ಸಾಹಿತ್ಯಾಭಿಮಾನಿಗಳೂ, ನಿಗರ್ವಿಗಳೂ ಶುದ್ಧಹಸ್ತರೂ, ಹಸನ್ಮುಖಿಗಳೂ ಆದ ಜಿ. ನಾರಾಯಣ ಅವರು ಅಪರೂಪದ ಒಬ್ಬ ವ್ಯಕ್ತಿ. ಬಾಲ್ಯದಲ್ಲಿದ್ದಾಗಲೇ ಮಹಾತ್ಮಾಗಾಂಧಿಯವರ ಪ್ರಭಾವಕ್ಕೊಳಗಾಗಿ, ಆಶ್ರಮ ಜೀವನವನ್ನು ನಡೆಸಿ, ರಚನಾತ್ಮಕ ಕಾರ್ಯದಲ್ಲಿ ತೊಡಗಿಸಿ ಕೊಂಡವರು ನಾರಾಯಣ ಅವರು. ರಾಷ್ಟ್ರಭಕ್ತರಾದ ಎಚ್.ಕೆ. ವೀರಣ್ಣಗೌಡರು ನಡೆಸುತ್ತಿದ್ದ ಚಿತ್ರಗುಪ್ತ ಪತ್ರಿಕೆಯಲ್ಲಿ ಕೆಲಸ ಮಾಡಿದ ನಾರಾಯಣ ಅವರು ತಮ್ಮದೇ ಆದ 'ವಿನೋದ' ಹಾಸ್ಯ ಮಾಸಪತ್ರಿಕೆಯನ್ನು ಆರಂಭಿಸಿ ಇಂದಿಗೂ ನಡೆಸಿಕೊಂಡು ಬರುತ್ತಿದ್ದಾರೆ. ಕಾಂಗ್ರೆಸ್ಸಿನ ನಿಷ್ಠಾವಂತ ಕಾರ್ಯಕರ್ತರಾದ ಜಿ. ನಾರಾಯಣ ಅವರು ಬೆಂಗಳೂರು ಮಹಾಪಾಲಿಕೆಯ ಸದಸ್ಯರಾಗಿ ಆಯ್ಕೆಯಾದ ರಲ್ಲದೆ, ಒಂದು ಅವಧಿಗೆ ಮಹಾಪಾಲಿಕೆಯ ಮಹಾ ಪೌರರೂ ಆಗಿದ್ದರು. ಅವರು ಕಾಮಗಾರಿ ಸಮಿತಿಯ ಅಧ್ಯಕ್ಷರಾಗಿದ್ದಾಗ, ಬೆಂಗಳೂರಿನ ಎಲ್ಲ ಬಡಾವಣೆಗಳ ಕಾರ್ಪೊರೇಟರ್‌ಗಳನ್ನೂ ಕರೆಸಿ ಅವುಗಳಲ್ಲಿ ಆದ್ಯತೆಯ ಮೇಲೆ ಆಗಬೇಕಾದ ಕಾರ್ಯಗಳ ಪಟ್ಟಿಮಾಡಿ, ಅದಕ್ಕೆ ತಗಲುವ ಖರ್ಚು ಎಷ್ಟು ಎಂಬುದನ್ನು ಅಂದಾಜುಮಾಡಿಸಿ ಅವುಗಳನ್ನೆಲ್ಲ ಕಾರ್ಯಗತಗೊಳಿಸಿದ ಕೀರ್ತಿ ಅವರದು. ಈ ಮುಖಾಂತರ ನಾರಾಯಣ ಅವರು ಬೆಂಗಳೂರಿನ ಸರ್ವತೋಮುಖ ಅಭಿವೃದ್ಧಿಗೆ ನೆರವಾದರೆಂಬುದು ಇತಿಹಾಸ.

ಇತರ ಕಾರ್ಪೊರೇಟರ್‌ಗಳಿಗೆ ಅದು ಒಂದು

ಮೇಲ್ಪಂಕ್ತಿ. ನಾರಾಯಣರು ಯಾವ ಕೆಲಸ ಕೈಗೊಂಡರೂ ಅದರಲ್ಲಿ ಒಂದು ಅಚ್ಚುಕಟ್ಟುತನ ಇರುತ್ತದೆ. ಯೋಜನಾಬದ್ಧವಾಗಿಯೇ ಆ ಕೆಲಸ ನಿರ್ವಹಿಸುತ್ತಾರೆ. ಕಾರ್ಯಕರ್ತರ ಸಹಯೋಗ ಪಡೆದು, ಯಶಸ್ವಿಯಾಗಿ ಕೆಲಸ ನಿರ್ವಹಿಸುವುದು ಅವರ ಜಾಯಮಾನ.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದರು. ತಾವು ಸಾಹಿತಿಗಳಲ್ಲ ಎಂಬುದನ್ನೂ ಅರಿತೂ ಆ ಪದವಿಯನ್ನು ಅಲಂಕರಿಸಿದರು. ಆದರೆ ಸಾಹಿತಿಗಳು ಪರಿಷತ್ತಿನ ಕಾರ್ಯ ನಿರ್ವಹಿಸಿದ ರೀತಿಯಲ್ಲೇ ನಡೆಸಿದರು. ವಿದ್ವಾಂಸರ, ಹಿರಿಯ ಸಾಹಿತಿಗಳ ಸಲಹೆ ಸೂಚನೆಗಳನ್ನು ಪಡೆದೇ ಕಾರ್ಯಕ್ರಮಗಳನ್ನು ರೂಪಿಸಿದರು. ಅವರೆಲ್ಲರ ಪ್ರಶಂಸೆಗೆ ಪಾತ್ರರಾದರು. ಮನೆಮನೆಗೆ ಸಾಹಿತ್ಯ ತಲಪಿಸುವ ಕಾರ್ಯಕ್ರಮದ ಒಂದು ವಿಶೇಷ ಪ್ರಯೋಗ ಮಾಡಿದರು ನಾರಾಯಣ ಅವರು. ಇದಕ್ಕಾಗಿ ಕನ್ನಡ ಸಂಘಟನೆಗಳ ಸದಸ್ಯರನ್ನೆಲ್ಲ ಬಳಸಿ ಕೊಂಡು ಬೆಂಗಳೂರಿನ ಅನೇಕ ಬಡಾವಣೆಗಳಲ್ಲಿ ಈ ಕಾರ್ಯಕ್ರಮ ಹಮ್ಮಿಕೊಂಡರು. ಸಾಹಿತಿಯಲ್ಲದ ಒಬ್ಬ ಕನ್ನಡದ ಕಟ್ಟಾಭಿಮಾನಿಯೂ ಕನ್ನಡ ಸಾಹಿತ್ಯ ಪರಿಷತ್ತಿನಂತಹ ಗೌರವಯುತ ಸಾಂಸ್ಕೃತಿಕ ಸಂಸ್ಥೆಯನ್ನು ಗಂಭೀರವಾಗಿ, ಅರ್ಥಪೂರ್ಣವಾಗಿ ನಿರ್ವಹಿಸ ಬಹುದೆಂಬುದನ್ನು ತೋರಿಸಿಕೊಟ್ಟರು.

ಬಿಂದೂರಾಯರು, ಕೃಷ್ಣಗಿರಿ, ಕೃಷ್ಣರಾಯರು, ಪದ್ಮನಾಭರಾಯರು, ಕಳಲೆ ಸಂಪತ್ಕುಮಾರಾ ಚಾರ್ಯರು ಗಮಕ ಕಲೆಯನ್ನು ಬೆಳಕಿಗೆ ತಂದ ಮೊದಲಿಗರು. ಈ ಮಹನೀಯರ ಶಿಷ್ಯವರ್ಗ ವನ್ನೆಲ್ಲ ಕಲೆಹಾಕಿ, ಗಮಕಿ ರಾಘವೇಂದ್ರರಾಯರ ನೇತೃತ್ವದಲ್ಲಿ ಗಮಕಿಗಳ ಸಂಘವೊಂದನ್ನು ರಚಿಸಿದ ಕೀರ್ತಿ ನಾರಾಯಣರದು. 'ಹಿಂದೆ ಗಮಕ ಕಲೆ, ಮೈಸೂರು ಸಂಸ್ಥಾನಕ್ಕೆ ಸೀಮಿತವಾಗಿದ್ದ ಕಲೆಯಾಗಿತ್ತು. ಅದನ್ನು ಕರ್ನಾಟಕಾದ್ಯಂತ ಪಸರಿಸುವಂತೆ ಮಾಡಿದವರು ನಾರಾಯಣ ಅವರು. ಈಗ ಉತ್ತರಕರ್ನಾಟಕದಲ್ಲೂ ಗಮಕಿಗಳು ಕಾಣಸಿಗುತ್ತಾರೆ, ಗಮಕ ಸಂಘಗಳು ಅಲ್ಲೂ ಅಸ್ತಿತ್ವಕ್ಕೆ ಬಂದಿವೆ. ಇದು ಸಾಧ್ಯವಾಗುವಂತೆ ಮಾಡಲು, ಆಯ್ದ ಗಮಕಿಗಳ ತಂಡಗಳನ್ನು ಕರ್ನಾಟಕದಾದ್ಯಂತ ಕಳುಹಿಸಿಕೊಟ್ಟು, ಗಮಕ ಕಾರ್ಯಕ್ರಮಗಳನ್ನು ಎಲ್ಲೆಲ್ಲೂ ಏರ್ಪಡಿಸ ಲಾಯಿತು. ಜನರಿಗೆ ಗಮಕ ಕಲೆಯ ಬಗೆಗೆ ಆಸಕ್ತಿ ಮೂಡುವಂತೆ ಮಾಡಲಾಯಿತು.

ನಾರಾಯಣರು ಅಜಾತಶತ್ರು, ಯಾವುದೇ ಸರ್ಕಾರ ಅಸ್ತಿತ್ವದಲ್ಲಿರಲಿ ನಾರಾಯಣ ಅವರನ್ನು ಅದು, ತಮ್ಮವರೆಂದು ಬಗೆಯುತ್ತದೆ. ಹೀಗಾಗಿ ಅವರು ಎಲ್ಲ ಸರ್ಕಾರದಲ್ಲೂ ಸಲ್ಲುತ್ತಾರೆ. ಇಂತಹ ಒಬ್ಬ ಸಜ್ಜನರನ್ನು ಸಾರ್ವಜನಿಕವಾಗಿ ಗೌರವಿಸಲು ಗುರುಹಿರಿಯರು ಮುಂದೆ ಬಂದಿರುವುದು ಸ್ವಾಗತಾರ್ಹ. ಶ್ರೀ ನಾರಾಯಣ ಅವರು ಆರೋಗ್ಯವಂತರಾಗಿ ನೂರ್ಕಾಲ ಬಾಳಲಿ ಎಂದು ಹಾರೈಸುತ್ತೇನೆ.

❑

ನಾರಾಯಣರ ಕನಸು :
ಹೊಸ ಬೆಂಗಳೂರು ನಿರ್ಮಾಣ

■ ಎನ್.ಅರ್ಜುನದೇವ

ಹೆಸರು : ನಾರಾಯಣ, ಆಕಾರ : ವಾಮನ. ಪರಾಕ್ರಮದಲ್ಲಿ ತ್ರಿವಿಕ್ರಮ. ಘಟಾನುಘಟಿ ರಾಜಕಾರಣಿ ಅಲ್ಲದಿದ್ದರೂ ಕರ್ನಾಟಕದ ರಾಜಧಾನಿಯ ಮೇಯರ್ ಪಟ್ಟದಲ್ಲಿ ಕುಳಿತು ರಾಜಕೀಯದ ಮುಕುಟ ಧರಿಸಿದವರು. ಹೇಳಿಕೊಳ್ಳುವ ಸಾಹಿತಿ ಅಲ್ಲದಿದ್ದರೂ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಕನ್ನಡದ ತೇರು ಎಳೆದವರು. ಯಾವುದೇ ದೊಡ್ಡ ಪತ್ರಿಕೆ ಸಂಪಾದಕರಾಗದಿದ್ದರೂ ಕರ್ನಾಟಕ ಪತ್ರಿಕಾ ಅಕಾಡೆಮಿಯ ಅಧ್ಯಕ್ಷರಾಗಿ ಅದರ ಚಟುವಟಿಕೆಗಳನ್ನು ದಶದಿಕ್ಕುಗಳಿಗೂ ಹರಡಿದವರು. ಕನ್ನಡದ ಹೋರಾಟಗಾರ ಎಂಬ ಗುಣ ವಾಚಕವಿಲ್ಲದಿದ್ದರೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಾರಥ್ಯ ವಹಿಸಿದವರು. ಗಮಕಿಯಲ್ಲದಿದ್ದರೂ ಗಮಕ ಪರಿಷತ್ತಿನ ಅಧ್ಯಕ್ಷ ಪದವಿ, ಜಾನಪದದ ನೆಂಟಿಲ್ಲದಿದ್ದರೂ ಜಾನಪದ ಲೋಕದ ಅಧ್ಯಕ್ಷ ಪದವಿಗೆ ಏರಿದವರು. ಹೀಗೆ ಒಂದೆ ಎರಡೆ ಹಲವಾರು ಕ್ಷೇತ್ರಗಳಲ್ಲಿ–ರಂಗಭೂಮಿ, ಪತ್ರಿಕೋದ್ಯಮ ಸೇರಿದಂತೆ–ಈ ವಾಮನ ಮೂರ್ತಿಯ ತ್ರಿವಿಕ್ರಮ ಸಾಹಸ.

ಸಿಹಿನೆಲ–ಮಂಡ್ಯಜಿಲ್ಲೆಯ ದೇಶಹಳ್ಳಿಯಿಂದ ಬೆಂಗಳೂರಿಗೆ ಬಂದ ಜಿ. ನಾರಾಯಣ ಅವರ ಪ್ರಾರಂಭದ ಆರಂಭ ಪತ್ರಿಕಾ ಕ್ಷೇತ್ರದಲ್ಲಿ. ಅದರ ಜತೆಗೆ ಸ್ವಾತಂತ್ರ್ಯ ಹೋರಾಟದ ಬದುಕು, ಆ ದೀಕ್ಷೆಯ ಪ್ರತೀಕವಾಗಿ ತೊಟ್ಟ ಖಾದಿ ಈಗಲೂ ಅವರ ವಸನ. ಚಿತ್ರಗುಪ್ತ ಮತ್ತು ವಾರ್ತಾ ದೈನಿಕಗಳನ್ನು ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವಾಗಿ ಮೊಳಗಿಸಿದ ಎಚ್.ಕೆ. ವೀರಣ್ಣಗೌಡರೇ

ಇವರಿಗೆ ಉಸ್ತಾದ್. ವಾರ್ತಾ ಪತ್ರಿಕೆ ವ್ಯವಸ್ಥಾಪಕರಾಗಿ ಅವರ ಗರಡಿಯಲ್ಲಿಯೇ ಪಳಗಿದವರು– ದೇಶಹಳ್ಳಿ ಜಿ. ನಾರಾಯಣ.

ಪತ್ರಿಕೆ ನಂಟು 'ವಿನೋದ' ಮಾಸಪತ್ರಿಕೆಯ ಆರಂಭಕ್ಕೆ ಅವರಿಗೆ ಸ್ಫೂರ್ತಿಯೆಂದರೆ ತಪ್ಪಾಗಲಾರದು. ಈಗಲೂ ಕನ್ನಡಿಗರಲ್ಲಿ ಕಚಗುಳಿ ಇಡುತ್ತಿರುವ ಅದಕ್ಕೆ ಅರ್ಧಶತಮಾನ ಮೀರಿದ ಪ್ರಾಯ. ಜಿ. ನಾರಾಯಣ ಅವರ ಜೀವನ ಮಾರ್ಗಕ್ಕೆ ಅದೇ ಸಂಗಾತಿ. ರಾಶಿ (ಡಾ.ಶಿವರಾಮ್) ಅವರು 'ಕೊರವಂಜಿ'ಯನ್ನು ಕಾಡಿಗೆ ಕಳುಹಿಸಿದಂತೆ ನಾರಾಯಣ ಅವರು 'ವಿನೋದ'ವನ್ನು ಕೈಬಿಟ್ಟಿಲ್ಲ. ಅದನ್ನು ಉಳಿಸಿ ಬೆಳೆಸಬೇಕೆಂಬುದೇ ಅವರ ಆಕಾಂಕ್ಷೆ.

ಎಷ್ಟು ಎತ್ತರಕ್ಕೆ ಏರಿದ್ದರೂ ಅವರ ಉಡುಗೆ ತೊಡಿಗೆ; ನಡೆ ನುಡಿ ಬದಲಾಗಿಲ್ಲ. ಸೂಟುಬೂಟಿನಿಂದ ದೂರ ಉಳಿದ ನಾರಾಯಣ ಅಪ್ಪಟ ದೇಶೀಯ ಅದರಲ್ಲಿಯೂ ಸರಳ ಉಡಿಗೆ ತೊಡಿಗೆ. ಕಾಲಿಗೆ ಸಾಮಾನ್ಯ ಪಾದರಕ್ಷೆ, ಉಡಲು ಒಂದು ಪಂಚೆ, ತೊಡಲು ಒಂದು ಷರ್ಟು, ಅದರ ಮೇಲೊಂದು ತೋಳಿಲ್ಲದ 'ನೆಹರೂ ಕವಚ', ಗಾಂಧಿ ಸಮವಸ್ತ್ರಕ್ಕೆ ಕಿರೀಟವಿಟ್ಟಂತೆ ತಲೆಯ ಮೇಲೊಂದು ಖಾದಿ ಟೋಪಿ ಕನ್ನಡಕಧಾರಿ.

ಸಭೆ, ಸಮಾರಂಭಗಳಿಗೆ ಈ ಗಾಂಧಿ ಚೇಲ ಆಗಮಿಸಿದರೆ ಯುವಕರಿಂದ ಮುದುಕರವರೆಗೆ ಗೌರವ ಪಡೆಯುವ ಮಹನೀಯ. ಏನೇ ಮಾತಾಡಿದರೂ ಸಾಕಷ್ಟು 'ಹೋಮ್‌ವರ್ಕ್' ಮಾಡಿದ ಉಪನ್ಯಾಸ. ಸರಳ, ನಿರರ್ಗಳ ಮಾತು. ಅರ್ಥಗರ್ಭಿತ ನುಡಿ, ವಿದ್ವಾಂಸರೂ ತಲೆದೂಗುವ ಉಪನ್ಯಾಸ.

ಹಳ್ಳಿಯಲ್ಲಿ ಹುಟ್ಟಿ ದಿಳ್ಳಿಯಲ್ಲಿ (ಬೆಂಗಳೂರಿನಲ್ಲಿ) ಬೆಳೆದ ನಾರಾಯಣ ಬೆಂಗಳೂರಿನ ಅಭಿವೃದ್ಧಿಯಲ್ಲಿ ದೇಶೀಯ ಸೊಗಡನ್ನು ಕಾಣುವುದು ಆಶ್ಚರ್ಯವೇನಲ್ಲ. ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯಾನಂತರದ ಬೆಂಗಳೂರನ್ನು ಕಂಡವರು. ಅಷ್ಟೇ ಅಲ್ಲದೆ ಮಾಹಿತಿ ತಂತ್ರಜ್ಞಾನದಲ್ಲಿ ಇತ್ತೀಚೆಗೆ ಜಗತ್ಪ್ರಸಿದ್ಧವಾಗಿರುವ ಬೆಂಗಳೂರನ್ನೂ ಕಂಡ ಜಿ. ನಾರಾಯಣ ಅವರ ಕನಸು: ಕೆಂಪೇಗೌಡರ ಬೆಂಗಳೂರು ಇನ್ನು ಬೆಳೆಯುವುದು ಬೇಡ ಇನ್ನು ಬೆಳೆದಷ್ಟು ಅದರ ಸೊಗಡು ನಶಿಸುವುದಲ್ಲದೆ ಬೆಂಗಳೂರಿಗರ ಜೀವನವೂ ದುಸ್ತರವಾಗುವುದೆಂಬ ಶಂಕೆ. ಅದು ಈಗಾಗಲೇ ಬೆಂಗಳೂರಿಗರ ಅನುಭವಕ್ಕೂ ಬಂದಿದೆ.

ಬೆಂಗಳೂರಿನ ಸೊಗಡನ್ನು ಉಳಿಸಲು ಮತ್ತು ಅಭಿವೃದ್ಧಿ ಪಥದಲ್ಲಿ ಅದು ಮುನ್ನಡೆಯಲು ಮಾಜಿ ಮೇಯರ್ ಸಲಹೆ : ಈಗಿನ ಹಳೇ ಬೆಂಗಳೂರಿಗೆ ಪರ್ಯಾಯವಾಗಿ ಸಾಕಷ್ಟು ದೂರದಲ್ಲಿ ಆಧುನಿಕ ವಿನ್ಯಾಸದ ಹೊಸ ಬೆಂಗಳೂರು ನಿರ್ಮಾಣ. ಈ ಉಚಿತ ಸಲಹೆಗೆ ಸರ್ಕಾರ ಓಗೊಡುವುದೇ?

ನಾರಾಯಣರಲ್ಲಿರುವ ಇನ್ನೊಂದು ಸಾಹಸ ಯುವ ಸಂಘಟನೆ. ಅವರು ಯಾವುದೇ ಸಾರ್ವಜನಿಕ ಕಾರ್ಯಕ್ಕೆ ಕೈಹಾಕಿದರು ಅವರು ಸಹಸ್ರಾರ್ಜುನರಾಗುತ್ತಾರೆ. ಅವರ ವಿಚಾರಕ್ಕೆ ಅನುಗುಣವಾಗಿ ಸ್ಪಂದಿಸುವ ಮತ್ತು ಅವರು ಹೇಳಿದಂತೆ ಕೇಳುವ ನೂರಾರು ನಿಷ್ಠಾವಂತ

ಯುವಕರು ಅವರ ಬೆನ್ನು ಹಿಂದೆ ನಿಂತಿದ್ದಾರೆ. ಈ ಬಡಕಲು ಜೀವಕ್ಕೆ ಅದೇ ಸಾವಿರ ಆನೆಯಬಲ.

ದೃಷ್ಟಿ ಬೊಟ್ಟು : ನಾರಾಯಣ ಅವರು ಮೇಯರ್ ಆಗಿದ್ದ ಅವಧಿಯಲ್ಲಿ ನಗರ ಕಾರ್ಪೊರೇಷನ್ ಕಚೇರಿ ಮುಂದಿನ ಪಾರ್ಕ್‌ನಲ್ಲಿದ್ದ ಯುದ್ಧ ಸ್ಮಾರಕ–ಸೆನೆಟಾಫ್‌ನ್ನು ಸ್ಫೋಟಿಸಿ ನೆಲಸಮಗೊಳಿಸಿದುದು ಎಲ್ಲರಿಗಲ್ಲದಿದ್ದರೂ ಕೆಲವರಿಗಾದರೂ ಅದು ಸರಿಕಾಣಲಿಲ್ಲ. ಒಂದು ಐತಿಹಾಸಿಕ ಕುರುಹಾದ ಅದನ್ನು ಕೆಡವಿದ ಮಾತ್ರಕ್ಕೆ ಬ್ರಿಟಿಷರು ನಮ್ಮನ್ನು ಆಳಲಿಲ್ಲವೆಂದಾಗುವುದೇ? ಅದಕ್ಕೆ ಈ ಭಿನ್ನಮತೀಯರ ಉಲ್ಲೇಖ: 'ಪಂಚಾಂಗ ಸುಟ್ಟರೆ ನಕ್ಷತ್ರ ಹೋದೀತೆ'.

ನಾರಾಯಣ ಅವರು ಆಗ ಆ ಸ್ಮಾರಕವನ್ನು ವಿರೋಧಿಸಿ ನಡೆದ ಸಾರ್ವಜನಿಕ ಚಳವಳಿಗೆ ಸ್ಪಂದಿಸಿದರೆಂಬುದು ಇನ್ನೊಂದು ಅಭಿಮತ.

❑

ಜಿ. ನಾರಾಯಣ ಸಾರಥ್ಯದಲ್ಲಿ ಕರ್ನಾಟಕ ಲೇಖಕಿಯರ ಸಂಘ

■ ಎಚ್.ಎಸ್. ಪಾರ್ವತಿ

ಎಲ್ಲ ಭಾಷೆಗಳಂತೆ ಕನ್ನಡದಲ್ಲೂ ಲೇಖಕಿಯರ ಸಂಖ್ಯೆ ಜೊತೆಗೇ ಅವರ ಸ್ಥಾನ ಮಾನಗಳು ಕಡಿಮೆಯೇ. ಇದಕ್ಕೆ ಕಾರಣ ಹುಡುಕಲು ದೊಡ್ಡ ಸಂಶೋಧನೆಯ ಅವಶ್ಯಕತೆಯೇನೂ ಇಲ್ಲ. ಶಿಕ್ಷಣ ಪ್ರೋತ್ಸಾಹಗಳ ಕೊರತೆ, ಬಸಿರು-ಬಾಣಂತನ, ಗೃಹಿಣಿಯ ಜವಾಬ್ದಾರಿ, ಎಲ್ಲಕ್ಕಿಂತ ಹೆಚ್ಚಾಗಿ ಮಹಿಳೆಗೆ ಮನೆಯ ಕೆಲಸಕ್ಕಿಂತ ಬೇರೆ ಯಾವುದ ರಲ್ಲೂ ಆಸಕ್ತಿ ಇರಬೇಕಾದ್ದಿಲ್ಲ ಎನ್ನುವ ಮನೋಭಾವ ಇವುಗಳಿಂದಾಗಿ ಸಾಹಿತ್ಯ ಕಲೆಗಳು ಅವಳಿಂದ ದೂರವೇ ಉಳಿದವು. ಆದರೆ ಪ್ರತಿಭೆ ಎನ್ನುವುದೊಂದು ವಿಚಿತ್ರ ಶಕ್ತಿ, ವಿಪರೀತ ಪರಿಸ್ಥಿತಿಯಲ್ಲೂ ಅದು ಕೆಲವರ ಒಡಲಿನಿಂದ ಚಿಮ್ಮುವುದುಂಟು. ಅಂಥ ಅನೇಕ ಮಹಿಳೆಯರು ಹಾಡುಗಳನ್ನು, ಹಾಡುಗಬ್ಬಗಳನ್ನು ಹೆಳವನಕಟ್ಟೆ ಗಿರಿಯಮ್ಮನಂತೆ ಯಕ್ಷಗಾನ ಪ್ರಸಂಗಗಳನ್ನು ರಚಿಸಿರುವು ದುಂಟು. ಇತರರಿಗೂ ಹೇಳಿಕೊಟ್ಟು ಸಂತೋಷಪಟ್ಟಿ ದ್ದುಂಟು. ದಾಸಯುಗದ ನಂತರವೂ ಅನೇಕ ಹರಿದಾಸರು ರಚಿಸಿದ ದೇವರ ನಾಮಗಳನ್ನು ಸಂಗ್ರಹಿಸಿ, ಅಚ್ಚು ಮಾಡಿಸ ಲಾಗಿದೆ. ಆದರೆ ಮಹಿಳೆಯರ ಈ ಕೃತಿಗಳ ಬಗ್ಗೆ ಅವರಲ್ಲಿ ಸಾಹಿತ್ಯಕ ಗುಣ ಇದ್ದಾಗಲೂ-ಅಂತಹ ಉತ್ಸಾಹವನ್ನು ಯಾರೂ ತೋರಿಸಲಿಲ್ಲ. ಇದಕ್ಕೆ ಆ ಸ್ತ್ರೀಯರ ಸಂಕೋಚ ಪ್ರವೃತ್ತಿಯೂ ಕಾರಣವಾಗಿರಬಹುದು. ಅಲ್ಲದೆ, ಭಗವಂತನ ಅನುಗ್ರಹದಿಂದ ಪ್ರಾಪ್ತವಾದ ಕಾವ್ಯರಚನಾ ಶಕ್ತಿಯಿಂದ ಹೊಮ್ಮಿದ ಕಾವ್ಯವನ್ನು ದೈವದ ಉಪಾಸನೆಗೇ ಮೀಸಲಿಡ ಬೇಕೇ ಹೊರತು ಅದಕ್ಕೆ ಪ್ರಚಾರವೇಕೆ ಎನ್ನುವ ಅಂದಿನವರ ಮನೋಭಾವವೂ ಕಾರಣವಿರಬಹುದು.

ಇಪ್ಪತ್ತನೇಯ ಶತಮಾನದ ಮೊದಲ ಭಾಗದಲ್ಲಿ ಆರಂಭವಾದ ಆಧುನಿಕ ಕನ್ನಡ ಸಾಹಿತ್ಯ ಮಹಿಳೆಯರ ಮೇಲೂ ಪ್ರಭಾವ ಬೀರಿತು. ಅದರ ಫಲವಾಗಿ ಲೇಖಕಿಯರು ಭಾವಗೀತೆಗಳನ್ನು ಕತೆ-ಕಾದಂಬರಿಗಳನ್ನೂ ಬರೆಯತ್ತೊಡಗಿದರು. ಕೆಲವರನ್ನು ಬಿಟ್ಟರೆ ಇತರರಿಗೆ ಸಿಕ್ಕ ಪ್ರೋತ್ಸಾಹವೂ ಹೇಳಿಕೊಳ್ಳುವಂತಹದ್ದೇನಲ್ಲ. ಹೆಣ್ಣುಮಗಳು ಏನೋ ಬರೆಯುತ್ತಾಳೆ, ಇಷ್ಟರ ಮಟ್ಟಿಗೆ ಬರೆಯುತ್ತಾಳಲ್ಲ ಎನ್ನುವಂತಹ ಸಹಾನುಭೂತಿ ಮಾತ್ರ ಅಂದಿನ ಪುರುಷ ಸಾಹಿತಿಗಳಲ್ಲಿತ್ತೇ ಹೊರತು, ಅವರಲ್ಲಿನ ಕುಂದು ಕೊರತೆಗಳನ್ನು ತೋರಿಸಬೇಕು, ತಿದ್ದಬೇಕು ಎನ್ನುವ ಮನಸ್ಸು ಯಾರಿಗೂ ಇದ್ದಂತೆ ತೋರುವುದಿಲ್ಲ.

ಐದು-ಆರನೆಯ ದಶಕದ ಹೊತ್ತಿಗೆ ಪರಿಸ್ಥಿತಿ ಬದಲಾದದ್ದು ನಿಜ. ಕಥೆ-ಕಾದಂಬರಿಗಳನ್ನು ಬರೆಯುವ ಲೇಖಕಿಯರ ಸಂಖ್ಯೆ ಹೆಚ್ಚಿದ್ದೂ ಹೌದು, ಅವರು ಜನಪ್ರಿಯತೆಯನ್ನು ಗಳಿಸಿಕೊಂಡಿದ್ದೂ ಸತ್ಯ. ಇಷ್ಟರಲ್ಲಾಗಲೇ ಅನೇಕ ಸಾಂಸ್ಕೃತಿಕ, ಸಾಹಿತ್ಯಕ ಸಂಘಟನೆಗಳು ಹುಟ್ಟಿಕೊಂಡಿದ್ದವು. ಮಹಿಳೆಯರಿಗಾಗಿ ಕೆಲವೊಂದು ಸ್ತ್ರೀ ಸಂಘಗಳೂ, ಕ್ಲಬ್ಬುಗಳೂ ನಡೆಯುತ್ತಿದ್ದವು. ಆದರೆ ಲೇಖಕಿಯರೂ ಸಂಘಟಿತರಾಗಬಹುದು, ಅದರ ಅವಶ್ಯಕತೆ ಇದೆ ಎನ್ನುವ ಕಲ್ಪನೆ ಯಾರ ಮನಸ್ಸಿಗೂ ಹೊಳೆದಿರಲಿಲ್ಲ.

೧೯೬೭ರಲ್ಲಿ ಮೊದಲ ಬಾರಿಗೆ ಬೆಂಗಳೂರಿನ 'ಚಿತ್ರಕಲಾವಿದರು' ಸಂಸ್ಥೆಯ ಅಂಗಸಂಸ್ಥೆಯಾಗಿ 'ಕನ್ನಡ ಲೇಖಕಿಯರ ಸಂಘ' ಪ್ರಾರಂಭವಾಯಿತು. ದಿವಂಗತ ಎಚ್.ಆರ್. ಇಂದಿರಾ ಈ ಸಂಸ್ಥೆಯ ಸಂಚಾಲಕಿಯಾಗಿ ಕಾರ್ಯ ನಿರ್ವಹಿಸಿದರು. ಚಿತ್ರಕಲಾವಿದರು ಬಳಗದ ಎ.ಎಸ್.ಮೂರ್ತಿ, ಏಷ್ಯನ್ ಟ್ರಾವಲ್ ಲೈನ್ಸ್‌ನ ಎಚ್.ವಿ. ನಾರಾಯಣ್ ಸಂಘದ ಮಾರ್ಗದರ್ಶಕರಾಗಿದ್ದರು. ಈ ಸಂಘ ನಡೆಸಿದ ಅನೇಕ ಉತ್ತಮ ಕಾರ್ಯಕ್ರಮಗಳಿಂದಾಗಿ ಎಷ್ಟೋ ವರ್ಷಗಳಿಂದ ಪರಸ್ಪರ ಅಪರಿಚಿತರಾಗಿಯೇ ಉಳಿದಿದ್ದ ಕನ್ನಡ ಲೇಖಕಿಯರು ಒಬ್ಬರನ್ನೊಬ್ಬರು ಭೇಟಿಯಾಗಲು, ವಿಚಾರ ವಿನಿಮಯ ಮಾಡಿಕೊಳ್ಳಲು ಅವಕಾಶವಾಯಿತು. ಈ ಸಮಯದಲ್ಲಿ ಎಚ್. ಆರ್. ಇಂದಿರಾ ಅವರ ಸಂಪಾದಕತ್ವದಲ್ಲಿ ಸಂಘದ ಮೂಲಕ ಪ್ರಕಟಿಸಿದ 'ಕಥಾತಲ್ಲವ" ಬೃಹತ್ಸಂಕಲನ ಒಂದು ಮಹತ್ತರ ಸಾಧನೆ. ಅಂದು ಬರೆಯುತ್ತಿದ್ದ ಎಲ್ಲ ಹಿರಿಯ ಕಿರಿಯ ಲೇಖಕಿಯರ ಕಥೆಗಳು ಈ ಸಂಕಲನದಲ್ಲಿವೆ. ಕತೆಗಾರ್ತಿಯರ ಕಿರು-ಪರಿಚಯ, ಪ್ರಸಿದ್ಧ ಕಲಾವಿದ ಬಿ.ಕೆ.ಎಸ್.ವರ್ಮ ಅವರ ರೇಖಾ ಚಿತ್ರಗಳು ಈ ಸಂಕಲನಕ್ಕೆ ಶೋಭೆಯನ್ನು ತಂದಿವೆ. ೧೯೬೯ರಲ್ಲಿ ಎಚ್.ಆರ್. ಇಂದಿರಾ ಅವರ ಅಕಾಲ ಮರಣದಿಂದ ಸಂಘ ಅನಾಥವಾಯಿತು. ಮುಂದೆ ಒಂದು ವರ್ಷದ ನಂತರ ನಿಂತೂ ಹೋಯಿತು. ಇದು ಕನ್ನಡ ಲೇಖಕಿಯರ ಸಂಘಟನೆಗಾಗಿ ಮಾಡಿದ ಮೊದಲ ಪ್ರಯತ್ನ.

ಇಷ್ಟರಲ್ಲಾಗಲೇ ಶ್ರೀ ಜಿ. ನಾರಾಯಣ ಅವರು ತಮ್ಮ ಸುಸಂಘಟಿತ, ಸುರುಚಿಪೂರ್ಣ ಕೆಲಸಗಳಿಂದ ಸಾಂಸ್ಕೃತಿಕ ವಲಯದಲ್ಲಿ ಪ್ರಸಿದ್ಧರಾಗಿದ್ದರು. ಅನೇಕ ಸಂಘ ಸಂಸ್ಥೆಗಳ ಅಧ್ಯಕ್ಷರಾಗಿ ಮಾರ್ಗದರ್ಶಕರಾಗಿದ್ದರು. ಬೆಂಗಳೂರಿನ ಮೇಯರಾಗಿ ಹೊಸ ಹೊಸ ಯೋಜನೆಗಳನ್ನು ಜಾರಿಗೊಳಿಸಿದ್ದರು. ಮುಖ್ಯವಾಗಿ ಕಾರ್ಪೊರೇಷನ್ನಿನ ಇದಿರು ಕೆಂಪೇಗೌಡನ

ವಿಗ್ರಹವನ್ನು ಸ್ಥಾಪಿಸಲು ಕಾರಣರಾಗಿದ್ದರು. ಇವರ ಜೊತೆ ನಿಸ್ವಾರ್ಥದಿಂದ ದುಡಿಯುವ ಕಾರ್ಯಕರ್ತರ ಒಂದು ಪಡೆಯೇ ನಿರ್ಮಾಣವಾಗಿತ್ತು. ಪುಸ್ತಕವರ್ಷದ ಸಂದರ್ಭದಲ್ಲಿ ಈ ಪಡೆಯ ನೆರವಿನಿಂದ ಜಿ. ನಾರಾಯಣ ಅವರು ಮನೆಮನೆಗೆ ಪುಸ್ತಕ ಮಾರಾಟ ಎನ್ನುವ ಹೊಸ ಕಾರ್ಯಕ್ರಮವನ್ನು ನಿಯೋಜಿಸಿ ಯಶಸ್ವಿಯಾಗಿದ್ದರು. ನಾರಾಯಣ ಅವರು ಮಹಾತ್ಮಗಾಂಧಿಯ ಅನುಯಾಯಿಗಳಾಗಿದ್ದರಿಂದ, ದೇಶದ ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯರನ್ನೂ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಬೇಕೆಂಬ ಗಾಂಧಿ ಧೋರಣೆಯಲ್ಲಿ ನಂಬಿಕೆ ಇಟ್ಟಿದ್ದರು. ಹೀಗಾಗಿ ಮಹಿಳೆಯರದೇ ಪ್ರತ್ಯೇಕ ಗುಂಪುಗಳನ್ನಾಗಿ ಮಾಡಿ ಅವರೂ ನಗರದ ನಾನಾ ಭಾಗದಲ್ಲಿ ಪುಸ್ತಕ ಮಾರಾಟದ ಕಾರ್ಯದಲ್ಲಿ ಭಾಗವಹಿಸುವಂತೆ ಮಾಡಿದರು. ಈ ಕೆಲಸದಲ್ಲಿ ಬೆಂಗಳೂರಿನ ಪ್ರಮುಖ ಲೇಖಕಿಯರೆಲ್ಲ ಭಾಗವಹಿಸಿದ್ದುದೊಂದು ವಿಶೇಷ.

೧೯೬೯ರಲ್ಲಿ ಜಿ. ನಾರಾಯಣ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದರು. ಪರಿಷತ್ತಿನ ಕಾರ್ಯಕ್ರಮಗಳಲ್ಲಿ ಎಲ್ಲ ಸ್ತರದ ಜನ ಭಾಗವಹಿಸಬೇಕು ಎನ್ನುವ ತಮ್ಮ ಯೋಜನೆಗೆ ಅನುಸಾರವಾಗಿ ಅವರು ಕಾರ್ಯಕ್ರಮಗಳನ್ನು ರೂಪಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಮೊದಲಿಂದಲೂ ಮಹಿಳಾ ವಿಭಾಗ ಇದ್ದದ್ದು ನಿಜ. ಮೊದಮೊದಲು ಅದು ಸಕ್ರಿಯವಾಗಿ ಕಾರ್ಯಕ್ರಮಗಳನ್ನು ನಡೆಸುತ್ತಿತ್ತೆಂದೂ ಹೇಳುತ್ತಾರೆ. ಆದರೆ ಬರಬರುತ್ತ ವರ್ಷಕ್ಕೊಮ್ಮೆ ಎ.ಆರ್.ಕೃಷ್ಣಶಾಸ್ತ್ರಿಗಳ ದತ್ತಿನಿಧಿಯಿಂದ ನಡೆಯುತ್ತಿದ್ದ ದೇವರನಾಮ ಸ್ಪರ್ಧೆಯನ್ನು ಏರ್ಪಡಿಸುವುದಷ್ಟಕ್ಕೇ ಅದು ಸೀಮಿತಗೊಂಡಿತ್ತು.

ವರ್ಷಕ್ಕೊಮ್ಮೆ ನಡೆಯುತ್ತಿದ್ದ ಸಾಹಿತ್ಯ ಸಮ್ಮೇಳನದಲ್ಲಿ ಮಹಿಳಾ ಕಾರ್ಯಕ್ರಮಕ್ಕೂ ಅವಕಾಶವಿತ್ತಾದರೂ ಅದಕ್ಕೆ ಪುರುಷ ಸಾಹಿತಿಗಳ್ಯಾರೂ ಬರುತ್ತಲೂ ಇರಲಿಲ್ಲ, ಭಾಗವಹಿಸುತ್ತಲೂ ಇರಲಿಲ್ಲ. ಅಲ್ಲಿ ನಡೆದ ಚರ್ಚೆಗಳ ಬಗ್ಗೆ ಯಾರೂ ಗಮನ ಕೊಡುತ್ತಲೂ ಇರಲಿಲ್ಲ. ಮಿಕ್ಕ ಮುಖ್ಯಗೋಷ್ಠಿಗಳಲ್ಲಿ ಮಹಿಳೆಯರಿಗೆ ಅವಕಾಶ ಸಿಗುತ್ತಿದ್ದುದು ತೀರ ಕಡಿಮೆ. ಪರಿಷತ್ತು ಹಾಗೂ ಇತರ ಸಂಸ್ಥೆಗಳಲ್ಲಿ ಒಬ್ಬರು ಅಥವಾ ಇಬ್ಬರು ಪ್ರತಿನಿಧಿಗಳಿದ್ದರೆ ಹೆಚ್ಚು. (ಈ ವಿಚಾರದಲ್ಲಿ ಇಷ್ಟು ವರ್ಷಗಳ ನಂತರವೂ ಹೆಚ್ಚೇನೂ ಬದಲಾವಣೆ ಆಗಿಲ್ಲ.)

ಸಾಹಿತ್ಯ ಪರಿಷತ್ತಿನ ವತಿಯಿಂದ ಪ್ರತಿ ವರ್ಷವೂ ಸಮ್ಮೇಳನ ನಡೆಯುತ್ತಿದ್ದು ವಜ್ರೋತ್ಸವ ನಡೆದರೂ ಇದುವರೆಗೂ ಒಬ್ಬರೇ ಒಬ್ಬ ಮಹಿಳೆಯೂ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನ ಅಲಂಕರಿಸಲಿಲ್ಲ. ಈ ಎಲ್ಲ ವಿಚಾರಗಳೂ ಜಿ. ನಾರಾಯಣರ ಗಮನಕ್ಕೆ ಬಂದಿದ್ದವು.

೧೯೭೫ನೆಯ ವರ್ಷವನ್ನು ಮಹಿಳಾವರ್ಷವೆಂದು ಘೋಷಿಸಲಾಯಿತು. ಈ ಸಂದರ್ಭವನ್ನು ಸದುಪಯೋಗ ಪಡಿಸಿಕೊಂಡ ನಾರಾಯಣರು ಈ ವರ್ಷ ಮಹಿಳೆಯರಿಗಾಗಿಯೇ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ವಿವಿಧ ಕ್ಷೇತ್ರಗಳಲ್ಲಿ ಅನುಭವವಿರುವ ಲೇಖಕಿಯರಿಂದ ಪುಸ್ತಕಗಳನ್ನು ಬರೆಸಿದರು. ಈ ಒಂದೇ ವರ್ಷದಲ್ಲಿ ಪರಿಷತ್ತಿನಿಂದ ಲೇಖಕಿಯರ ಇಪ್ಪತ್ತೈದು ಪುಸ್ತಕಗಳು ಪ್ರಕಟವಾದವು. ಬೆಂಗಳೂರು ಮಾತ್ರವಲ್ಲದೆ ನಾಡಿನ

ಬೇರೆ ಬೇರೆ ಭಾಗದಲ್ಲಿ ಮಹಿಳೆಯರೇ ಭಾಗವಹಿಸಿದ ವಿಚಾರಗೋಷ್ಠಿಗಳೂ ನಡೆದವು. ಇದೇ ವರ್ಷ ಮಂಡ್ಯದಲ್ಲಿ ನಡೆದ ಸಾಹಿತ್ಯ ಸಮ್ಮೇಳನಕ್ಕೆ ಸೊಲ್ಲಾಪುರದ ಕವಯಿತ್ರಿ ಜಯದೇವಿತಾಯಿ ಲಿಗಾಡೆಯವರು ಸಮ್ಮೇಳನಾಧ್ಯಕ್ಷೆಯಾಗಿ ಆಯ್ಕೆಯಾದರು.

೧೯೭೬ರಲ್ಲಿ ಮೈಸೂರು ವಿಶ್ವವಿದ್ಯಾಲಯ ಮತ್ತು ಕನ್ನಡ ಅಧ್ಯಯನ ಸಂಸ್ಥೆಗಳ ಆಶ್ರಯದಲ್ಲಿ ಡಾ॥ ಹಾ.ಮಾ.ನಾಯಕರ ನೇತೃತ್ವದಲ್ಲಿ ಮೂರು ದಿನಗಳ ಕಾಲ ಮಹಿಳಾ ಸಮ್ಮೇಳನ ನಡೆಯಿತು. ರಾಷ್ಟ್ರಕವಿ ಕುವೆಂಪು ಅವರು ಉದ್ಘಾಟಿಸಿದ ಈ ಸಮ್ಮೇಳನದಲ್ಲಿ ನಾಡಿನ ಎಲ್ಲ ಭಾಗಗಳಿಂದ ಬಂದಿದ್ದ ಲೇಖಕಿಯರು ವಿವಿಧ ವಿಷಯಗಳ ಬಗ್ಗೆ ವಿಚಾರಗಳನ್ನು ಮಂಡಿಸಿದರು.

ಇಷ್ಟೆಲ್ಲಾ ಆದರೂ ಲೇಖಕಿಯರಿಗೆಂದೇ ಒಂದು ಸಂಘಟನೆ ಅವಶ್ಯಕ ಎಂದು ಜಿ. ನಾರಾಯಣ ಅವರಿಗೆ ಅನ್ನಿಸಿರಬೇಕು. ಸಮಯ ಸಿಕ್ಕಾಗಲೆಲ್ಲ ಅವರು ಈ ಮಾತನ್ನು ಹೇಳುತ್ತಲೇ ಇದ್ದರು. ಒಂದು ದಿನ ಪರಿಷತ್ತಿನ ಸಭಾಂಗಣದಲ್ಲಿ ಸೇರಿದ್ದ ಲೇಖಕಿಯರ ಮುಂದೆಯೂ ಈ ವಿಷಯವನ್ನು ಪ್ರಸ್ತಾಪಿಸಿದ್ದರು. ಆಗ ಅಲ್ಲಿ ಸೇರಿದ್ದ ಎಲ್ಲರೂ ಈ ಪ್ರಸ್ತಾಪವನ್ನು ಸಂತೋಷದಿಂದ ಒಪ್ಪಿದ್ದರು. ಬಹುಶಃ ಲೇಖಕಿಯರಲ್ಲೇ ಯಾರಾದರೊಬ್ಬರು ಇಂಥ ಸಂಘಟನೆಗೆ ಮುಂದಾಗಬಹುದೆಂದು ನಾರಾಯಣರು ಯೋಚಿಸಿದ್ದಿರಬಹುದು. ಆದರೆ ಅಂತಹ ಯಾವ ಪ್ರಯತ್ನಗಳೂ ನಡೆಯದೇ ಇದ್ದುದರಿಂದ ತಾವೇ ಮುತುವರ್ಜಿ ವಹಿಸಿ, ೧೯೭೮ರ ಡಿಸೆಂಬರ್‌ನಲ್ಲಿ ಒಂದು ಸಂಜೆ ಬೆಂಗಳೂರಿನ ಅನೇಕ ಜನ ಲೇಖಕಿಯರನ್ನು ತಮ್ಮ ಮನೆಗೇ ಆಹ್ವಾನಿಸಿದರು. ಬಂದವರಿಗೆ ಉಪಹಾರ ನೀಡಿ ಮಾತಿಗೆ ಆರಂಭಿಸಿದರು. ಅಲ್ಲೇ ಆಗಲೇ ತೀರ್ಮಾನ ಮಾಡಬೇಕೆಂದು ಒತ್ತಾಯಿಸಿದರು. ಎಲ್ಲರಿಗಿಂತ ಹಿರಿಯರಾದ ಟಿ. ಸುನಂದಮ್ಮನವರನ್ನು ಅಧ್ಯಕ್ಷರೆಂದು ಘೋಷಿಸಲಾಯಿತು. ಲೀಲಾದೇವಿ ಆರ್.ಪ್ರಸಾದ್ ಮತ್ತು ಲಲಿತಾ ರಾಮಚಂದ್ರರಾವ್ ಉಪಾಧ್ಯಕ್ಷೆಯರಾದರು. ನಾಗಮಣಿ ಎಸ್.ರಾವ್. ಖಜಾಂಚಿ ಎಂದೂ, ಎಚ್.ಎಸ್. ಪಾರ್ವತಿ ಮತ್ತು ವೇದವತಿರಾವ್ ಕಾರ್ಯದರ್ಶಿಗಳೆಂದೂ ನಿಶ್ಚಯವಾಯಿತು. ಜನವರಿ ೨೬ನೇ ತಾರೀಖು ಸಂಘದ ಆರಂಭೋತ್ಸವ ನಡೆಸುವುದೆಂದು ಗೊತ್ತುಮಾಡಲಾಯಿತು. 'ಕರ್ನಾಟಕ ಲೇಖಕಿಯರ ಸಂಘ'ದ ಸ್ಥಾಪನೆಗೆ ಎಲ್ಲ ವ್ಯವಸ್ಥೆಯೂ ನಡೆಯಿತು.

ಸಂಘ ಆರಂಭವಾಗುತ್ತದೆ ಎನ್ನುವ ಸುದ್ದಿ ಹರಡುತ್ತಿದ್ದಂತೆಯೇ ಅದಕ್ಕೇ ಸಾಕಷ್ಟು ವಿರೋಧವೂ ಬಂತು. ಡಾ॥ ಅನುಪಮಾ, ಚಿ.ನ ಮಂಗಳಾ ರಂತಹ ಪ್ರಮುಖ ಲೇಖಕಿಯರೂ ಇದಕ್ಕೆ ವಿರೋಧ ವ್ಯಕ್ತ ಪಡಿಸಿದರು. ಇಂತಹದೊಂದು ಪ್ರತ್ಯೇಕತೆಯಿಂದ ಲೇಖಕಿಯರು ಮತ್ತಷ್ಟು ಮೂಲೆಗುಂಪಾಗುತ್ತಾರೆ ಎನ್ನುವುದು ಇವರ ಅಭಿಪ್ರಾಯ. ಆದರೆ ಸಂಘ ಬೆಳೆದಂತೆ ಈ ವಿರೋಧದ ಅಲೆ ಅಡಗಿತು. ಈ ಎಲ್ಲ ಲೇಖಕಿಯರೂ ಸಂಘದ ಸಕ್ರಿಯ ಸದಸ್ಯೆಯರಾದರು.

ಸಂಘ ಆರಂಭಿಸುವ ದಿನವೇನೋ ಗೊತ್ತಾಯಿತು. ಆದರೆ ಖರ್ಚಿಗೆ ಹಣ? ಅಂದು ನಾರಾಯಣ ಅವರ ಮನೆಯಲ್ಲಿ ಸೇರಿದ್ದ ಸುಮಾರು ಇಪ್ಪತ್ತೈದು ಜನ ನೂರು ನೂರು ರೂಪಾಯಿಗಳನ್ನು ಕೊಟ್ಟು ಆಜೀವ ಸದಸ್ಯೆಯರಾದರು. ಅದೇ ಸಂಘದ ಮೂಲ ಬಂಡವಾಳ.

ಎರಡನೆಯ ಸಮಸ್ಯೆ ಜಾಗದ್ದು, ಸಂಘದ ಸದಸ್ಯರು ಸೇರಿ ಮಾತಾಡುವುದಕ್ಕೇ, ಕಾಗದ ಪತ್ರಗಳನ್ನಿಡುವುದಕ್ಕೆ ಒಂದು ಜಾಗ ಬೇಡವೇ ಆಗಲೂ ನಾರಾಯಣರೇ ನಮ್ಮ ನೆರವಿಗೆ ಬಂದರು. ಅವರ ಸ್ವತಂತ್ರ ಮುದ್ರಣಾಲಯ (ವಿನೋದ ಕಾರ್ಯಾಲಯ) ಚಾಮರಾಜಪೇಟೆ ಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಇದಿರಿಗೇ ಇದೆ. ಅಲ್ಲೇ ಸಂಘಕ್ಕೂ ಸ್ವಲ್ಪ ಜಾಗ ಮಾಡಿಕೊಟ್ಟರು. ಪ್ರತಿ ಬುಧವಾರ ಸಂಜೆ ಸಂಘದ ಪದಾಧಿಕಾರಿಗಳು ಒಟ್ಟುಗೂಡಿ ಮುಂದಿನ ಕಾಯಕ್ರಮಗಳ ಬಗ್ಗೆ ಚರ್ಚೆಮಾಡುತ್ತಿದ್ದವು. ಯಾವ ಕಾರ್ಯಕ್ರಮ ಮಾಡಬೇಕು. ವಿಷಯ ಯಾವುದು? ಯಾರನ್ನು ಆಹ್ವಾನಿಸಬೇಕು ಪ್ರತಿಯೊಂದಕ್ಕೂ ಜಿ. ನಾರಾಯಣರೇ ಮಾರ್ಗದರ್ಶನ ಮಾಡುತ್ತಿದ್ದರು.

ಎಲ್ಲ ಬಾಲಾರಿಷ್ಟಗಳನ್ನು ದಾಟಿ ಸಂಘ ಬೆಳೆಯಿತು. ಈಗ ತನ್ನ ರಜತ ಮಹೋತ್ಸವವನ್ನು ಆಚರಿಸಿಕೊಂಡು ೨೭ನೆಯ ವರ್ಷಕ್ಕೆ ಕಾಲಿಟ್ಟಿದೆ. ೨೫ ಜನ ಆಜೀವ ಸದಸ್ಯೆಯರಿಂದ ಆರಂಭವಾದ ಸಂಘದಲ್ಲೀಗ, ದೇಶದ ಬೇರೆ ಬೇರೆ ಭಾಗಗಳಲ್ಲಿ ನೆಲೆಸಿರುವ ಸುಮಾರು ಏಳುನೂರು ಜನ ಸದಸ್ಯೆಯರಾಗಿದ್ದಾರೆ. ತನ್ನದೇ ಆದ ಸ್ವಂತ ಕಟ್ಟಡವನ್ನೂ, ಒಳ್ಳೆಯ ಪುಸ್ತಕ ಭಂಡಾರವನ್ನೂ ಹೊಂದಿದೆ. ಆರು ಜನ ಅಧ್ಯಕ್ಷೆಯರ ಸಮರ್ಥ ಮುಂದಾಳತ್ವದಲ್ಲಿ ಸಂಘ ಬೆಳೆದು ಈಗ ಡಾ॥ ಸಂಧ್ಯಾರೆಡ್ಡಿಯವರು ಅದರ ಅಧ್ಯಕ್ಷರಾಗಿದ್ದಾರೆ. ಸಂಘ ಐದು ಸಮ್ಮೇಳನಗಳನ್ನು ಯಶಸ್ವಿಯಾಗಿ ನಡೆಸಿದೆ. ಅನೇಕ ದತ್ತಿನಿಧಿಗಳು ಸ್ಥಾಪಿತವಾಗಿವೆ. ಇಪ್ಪತ್ತೆರಡಕ್ಕೂ ಹೆಚ್ಚು ಮೌಲಿಕ ಕೃತಿಗಳು ಪ್ರಕಟವಾಗಿವೆ. ಬೇರೆ ಯಾವ ಭಾಷೆಯ ಲೇಖಕಿಯರಲ್ಲೂ ಇರದಂತಹ ಒಂದು ವ್ಯವಸ್ಥಿತ ಸಂಘಟನೆಯೆಂದು ಸಂಘ ಹೆಸರು ಮಾಡಿದೆ. ಸಂಘದ ಆರಂಭಕ್ಕೆ ಸೂತ್ರಧಾರರಾಗಿದ್ದಲ್ಲದೆ ಜಿ. ನಾರಾಯಣ ಅವರು ಇಷ್ಟು ವರ್ಷಗಳಿಂದಲೂ ಸಲಹಾ ಸಮಿತಿಯ ಮುಖ್ಯಸ್ಥರಾಗಿ ಕರ್ನಾಟಕ ಲೇಖಕಿಯರ ಸಂಘದ ಬೆಳವಣಿಗೆಗೆ ಕಾರಣರಾಗಿದ್ದಾರೆ. ಇದಕ್ಕಾಗಿ ಕ.ಲೇ.ಸಂ. ಹಾಗೂ ಕನ್ನಡ ಲೇಖಕಿಯರು ನಾರಾಯಣ ಅವರಿಗೆ ಕೃತಜ್ಞರಾಗಿರಬೇಕು.

❑

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ: ಶ್ರೀ ಜಿ. ನಾರಾಯಣ

■ ಡಾ. ಜಯಮ್ಮ ಕರಿಯಣ್ಣ

ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ, ಇತಿಹಾಸ ಮತ್ತು ಜನಪದ ಇವುಗಳ ರಕ್ಷಣೆ ಮತ್ತು ಅಭಿವೃದ್ಧಿಯ ಉದ್ದೇಶದಿಂದ ೧೯೧೫ರಲ್ಲಿ ಸ್ಥಾಪಿತವಾದ ಕನ್ನಡ ಸಾಹಿತ್ಯ ಪರಿಷತ್ತನ್ನು ಬೆಳೆಸಿದ ಮಹನೀಯರ ನಂತರ ೧೫ನೇ ಅಧ್ಯಕ್ಷರಾಗಿ ಶ್ರೀ ಜಿ. ನಾರಾಯಣ ಅವರು ದಿನಾಂಕ ೧೧-೬-೧೯೬೯ರಂದು ಅಧಿಕಾರ ಸ್ವೀಕರಿಸಿದರು. ಶ್ರೀಯುತರು ಪರಿಷತ್ತಿನ ಅಧ್ಯಕ್ಷರಾಗಿ ನಾಡು, ನುಡಿಗಳ ಬಗ್ಗೆ ಕಾಳಜಿ ವಹಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯವ್ಯಾಪ್ತಿಯನ್ನು ರಾಜ್ಯ, ರಾಷ್ಟ್ರ ಮತ್ತು ವಿಶ್ವದ ಬೇರೆ ಬೇರೆ ಭಾಗಗಳಲ್ಲಿ ಹರಡಬೇಕು, ಕನ್ನಡ ಸೌರಭ ಎಲ್ಲೆಡೆ ಸುವಾಸನೆ ಬೀರಬೇಕೆಂಬ ಆಲೋಚನೆಯ ಗರಿ ಬಿಚ್ಚಿದರು. ಆ ಗುರಿ ತಲುಪುವ ದೃಷ್ಟಿಯಿಂದ ೧೯೬೯ರಲ್ಲಿ ೧೫ ಲಕ್ಷ ರೂಪಾಯಿಗಳ ಅಂದಾಜು ವೆಚ್ಚದ ತ್ರೈವಾರ್ಷಿಕ ಯೋಜನೆಯೊಂದನ್ನು ತಯಾರಿಸಿ, ಅದನ್ನು ೧೯೭೦ರಿಂದ ಅನುಷ್ಠಾನಕ್ಕೆ ತಂದರು. ಈ ಯೋಜನೆಯ ಕಾರ್ಯಾನುಷ್ಠಾನಕ್ಕಾಗಿ ರಾಜ್ಯ ಸರ್ಕಾರ ಹತ್ತು ಲಕ್ಷ ರೂಪಾಯಿಗಳ ಸಹಾಯಧನವನ್ನು ನೀಡಿತು. ಅಲ್ಲದೆ ಜಿ. ನಾರಾಯಣ ಅವರು ಸರ್ಕಾರ ಪರಿಷತ್ತಿಗೆ ವರ್ಷಕ್ಕೆ ಇಪ್ಪತ್ತೈದು ಸಾವಿರದಂತೆ ಕೊಡುತ್ತಿದ್ದ ಹಣವನ್ನು ಒಂದು ಲಕ್ಷಕ್ಕೆ ಹೆಚ್ಚಿಸುವಂತೆ ಮನವೊಲಿಸುವಲ್ಲಿ ಯಶಸ್ವಿಯಾದರು.

ತ್ರೈವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗಿದ್ದ ಪರಿಷತ್ತಿನ ಸುವರ್ಣ ಮಹೋತ್ಸವ ಕಟ್ಟಡ ನಿರ್ಮಾಣಕ್ಕೆ

ಕೇಂದ್ರ ಸರ್ಕಾರವೂ ಒಂದು ಲಕ್ಷ ರೂಗಳನ್ನು ನೀಡಿತು. ಬೆಂಗಳೂರು ನಗರ ಕಾರ್ಪೊರೇಷನ್ (ಮಹಾನಗರ ಪಾಲಿಕೆ) ಸಹ ತನ್ನ ಕೊಡುಗೆಯಾಗಿ ಒಂದು ಲಕ್ಷ ರೂಗಳನ್ನು ದೇಣಿಗೆಯಾಗಿ ನೀಡಿತು. ಕನ್ನಡ ಜನತೆಯೂ ಶಕ್ತಿಮೀರಿ ನೆರವು ನೀಡಿತು. ಈ ಯೋಜನೆಯಿಂದ ಕನ್ನಡಿಗರಲ್ಲಿ ಒಂದು ನವಚೈತನ್ಯವೇ ಮೂಡಿ ಬಂದಂತಾಯಿತು.

ಜಿ. ನಾರಾಯಣ ಅವರು ಪರಿಷತ್ತಿನ ಅಧ್ಯಕ್ಷರಾಗಿ ಬಂದಾಗ ಪರಿಷತ್ತಿನ ಕಾರ್ಯ ಚಟುವಟಿಕೆಗಳನ್ನು ರಾಜ್ಯಾದ್ಯಂತ ವಿಸ್ತರಿಸುವ ದೃಷ್ಟಿಯಿಂದ ಎಲ್ಲ ಜಿಲ್ಲೆಗಳಿಗೂ ಪ್ರವಾಸ ಮಾಡಿ ಹತ್ತೊಂಬತ್ತು ಜಿಲ್ಲೆಗಳಲ್ಲಿಯೂ ಜಿಲ್ಲಾ ಸಮಿತಿಗಳನ್ನು ಪ್ರಾರಂಭಿಸಿದರು. ಈ ಜಿಲ್ಲಾ ಪರಿಷತ್ತಿನ ಪದಾಧಿಕಾರಿಗಳು, ಪರಿಷತ್ತಿನ ಕಾರ್ಯಸಮಿತಿಯಲ್ಲಿರುವ ಜಿಲ್ಲಾ ಪ್ರತಿನಿಧಿಗಳೇ ಜಿಲ್ಲಾ ಸಮಿತಿಯ ಅಧ್ಯಕ್ಷರಾಗಿಯೂ, ಜಿಲ್ಲಾ ಮುಖ್ಯ ಪಟ್ಟಣದಲ್ಲಿರುವ ಇಬ್ಬರನ್ನು ಕಾರ್ಯದರ್ಶಿಗಳನ್ನಾಗಿಯೂ, ಒಬ್ಬರು ಕೋಶಾಧಿಕಾರಿಯಾಗಿ ಇರುವಂತೆಯೂ, ಒಬ್ಬ ಮಹಿಳಾ ಪ್ರತಿನಿಧಿ, ಒಬ್ಬ ಸಾಹಿತಿ, ಒಬ್ಬ ಅಧ್ಯಾಪಕರು, ಒಬ್ಬರು ಅಲ್ಲಿಯ ಪ್ರಮುಖ ಕನ್ನಡ ಸಂಸ್ಥೆಯ ಪ್ರತಿನಿಧಿ ಜಿಲ್ಲೆಯ ಪ್ರತಿ ತಾಲೂಕಿನಿಂದ ಒಬ್ಬೊಬ್ಬ ಪ್ರತಿನಿಧಿಗಳೂ ಇರುವಂತೆ ಜಿಲ್ಲಾ ಸಮಿತಿಗಳನ್ನು ಅನುಷ್ಠಾನಕ್ಕೆ ತಂದರು. ಈ ಜಿಲ್ಲಾ ಘಟಕಗಳು ಸಮಸ್ತ ಜಿಲ್ಲೆಯ ಪ್ರತೀಕವಾಗಿದ್ದು ಕನ್ನಡ ಚಟುವಟಿಕೆಗಳನ್ನು ನಡೆಸಲು ನಿಯೋಜಿಸಿ, ಜೊತೆಗೆ ಜಿಲ್ಲಾ ಸಮಿತಿಗಳಿಗೆ ಆಗಿಂದಾಗ್ಗೆ ಸುತ್ತೋಲೆಗಳ ಮೂಲಕ ಸಲಹೆ ಸೂಚನೆಗಳನ್ನು ಕೊಟ್ಟು ಕೆಲಸ ಮಾಡಿಸುತ್ತಿದ್ದರು. ಪರಿಷತ್ತಿನ ಸಹಾಯದಿಂದ ಐದು ಜಿಲ್ಲೆಗಳಲ್ಲಿ ಜಿಲ್ಲಾ ಸಾಹಿತ್ಯ ಸಮ್ಮೇಳನಗಳು ನಡೆದವು. ವರ್ಷದಲ್ಲಿ ಸಾಹಿತ್ಯೋತ್ಸವಗಳು ರಾಜ್ಯೋತ್ಸವಗಳು ಮತ್ತು ಅನೇಕ ಉಪನ್ಯಾಸ ಕಾರ್ಯಕ್ರಮಗಳು ಜೊತೆಗೆ ಪುಸ್ತಕ ಪ್ರಕಟಣೆ ಮತ್ತು ಪ್ರದರ್ಶನ ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲು ಶ್ರೀ ಜಿ.ನಾರಾಯಣ ಅವರು ಪ್ರೇರಕಶಕ್ತಿಯಾದರು.

ಪರಿಷತ್ತಿನ ಸುವರ್ಣ ಮಹೋತ್ಸವ ಮತ್ತು ೪೭ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕಾಗಿ ಅದ್ಧೂರಿಯ ಸಿದ್ಧತೆಗಳು ಆರಂಭವಾದವು. ೧೯೧೫ರಲ್ಲಿ ಸ್ಥಾಪನೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಾರಂಭ ದೆಸೆಯಲ್ಲಿ ಮಾತ್ರ ಬೆಂಗಳೂರಿನಲ್ಲಿ ನಡೆದ ಸಮ್ಮೇಳನಗಳನ್ನು ಹೊರತು ಪಡಿಸಿದರೆ ಐವತ್ತು ವರ್ಷಗಳಿಗಿಂತಲೂ ಹೆಚ್ಚುಕಾಲ ಬೆಂಗಳೂರಿನಲ್ಲಿ ಸಮ್ಮೇಳನ ನಡೆದಿರಲಿಲ್ಲ. ನಗರದ ಕೀರ್ತಿಗೆ ತಕ್ಕಂತೆ ವೈಭವಪೂರ್ಣವಾಗಿಯೇ ಸಮ್ಮೇಳನ ನಡೆಸಬೇಕೆಂಬ ದೃಷ್ಟಿಯಿಂದ ಸಂಬಂಧ ಪಟ್ಟವರೆಲ್ಲಾ ಕಾರ್ಯನಿರತರಾಗಿರುವಂತೆ ಮಾಡಿದರು.

ಅಧ್ಯಕ್ಷರಾದ ಶ್ರೀ ಜಿ. ನಾರಾಯಣ ಅವರು ಸುವರ್ಣಮಹೋತ್ಸವ ಮತ್ತು ಸಾಹಿತ್ಯ ಸಮ್ಮೇಳನ ಸಂಬಂಧವಾಗಿ ನಡೆಯುತ್ತಿದ್ದ ಕಾರ್ಯ ಸಿದ್ಧತೆಗಳ ಬಗೆಗೆ ಪತ್ರಿಕಾ ಪ್ರತಿನಿಧಿಗಳಿಗೆ ವಿವರಿಸಿದ ಮಾಹಿತಿ ಹೀಗಿದೆ. "ಸಮ್ಮೇಳನಕ್ಕೆ ಅಧಿಕ ಸಂಖ್ಯೆಯಲ್ಲಿ ಪ್ರತಿನಿಧಿಗಳು ಬರುವ ನಿರೀಕ್ಷೆ ಇರುವುದರಿಂದ ಊಟ, ವಸತಿಯ ಏರ್ಪಾಟುಗಳನ್ನು ಸಮರ್ಪಕವಾಗಿ ನಡೆಸಲು ಸಿದ್ಧತೆ ಮಾಡಲಾಗುತ್ತಿದೆ. ಕೋಟೆ ಪ್ರೌಢಶಾಲೆಯ ವಿಶಾಲ ಅಂಗಳದಲ್ಲಿ ಬೃಹತ್ ಸಭಾ ಮಂಟಪ ನಿರ್ಮಿಸಿ, ಅದರ ಪಕ್ಕದಲ್ಲಿ ರಂಗಮಂದಿರವೊಂದನ್ನು ಸಜ್ಜುಗೊಳಿಸಲಾಗುವುದು.

ಸಮ್ಮೇಳನದ ಸಭೆ ಮತ್ತು ಕಾರ್ಯಕ್ರಮಗಳಿಗೆ ಬಂದು ಹೋಗಲು ಅನುಕೂಲವಾಗುವಂತೆ ಪರಿಸರದಲ್ಲಿರುವ ಅನೇಕ ಕಟ್ಟಡಗಳನ್ನು ವಸತಿಗಾಗಿ ಉಪಯೋಗಿಸಿಕೊಳ್ಳಲು ವ್ಯವಸ್ಥೆ ಮಾಡಲಾಗುತ್ತಿದೆ. ಡಿಸೆಂಬರ್ ೨೫ರಂದು ಪ್ರಾರಂಭವಾಗುವ ಕಾರ್ಯಕ್ರಮಗಳು ೨೯ರ ವರೆಗೆ ನಡೆಯಲಿವೆ. ೨೫ರಂದು ವಸ್ತುಪ್ರದರ್ಶನದ ಉದ್ಘಾಟನೆ, ೨೬ರಂದು ಸುವರ್ಣ ಮಹೋತ್ಸವದ ಕಾರ್ಯಕ್ರಮಗಳು, ೨೭ರಿಂದ ಮೂರು ದಿನಗಳ ಕಾಲ ಸಾಹಿತ್ಯ ಸಮ್ಮೇಳನದ ನಡೆಯಲಿದೆ" ಎಂದು ವಿವರಿಸಿದರು.

ಪರಿಷತ್ತಿನ ಸುವರ್ಣ ಮಹೋತ್ಸವ ಮತ್ತು ೪೭ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕಾಗಿ ದಿ. ೩-೧೨-೧೯೭೦ ರಂದು ಕೋಟೆ ಹೈಸ್ಕೂಲ್ ಮೈದಾನದಲ್ಲಿ ಬೆಳ್ಳಾವೆ ವೆಂಕಟನಾರಣಪ್ಪ ಮಂಪಟದ ಗುದ್ದಲಿ ಪೂಜೆ ನೆರವೇರಿಸಿದರು. ಅತಿ ವಿಜೃಂಭಣೆಯಿಂದ ೨೬-೧೨-೭೦ರಂದು ಬೆಳ್ಳಾವೆ ವೆಂಕಟನಾರಾಣಪ್ಪ ಹೆಸರಿನ ಮಂಟಪದಲ್ಲಿ ಪ್ರಾರಂಭೋತ್ಸವ ನಡೆಯಿತು. ಆಗಿನ ಸಮ್ಮೇಳನಾಧ್ಯಕ್ಷರಾಗಿ ಆಯ್ಕೆಯಾಗಿದ್ದ ಡಾ. ದೇ. ಜವರೇಗೌಡರ ಮೆರವಣಿಗೆ. ರಾಜ್ಯಪಾಲರಾಗಿದ್ದ ಶ್ರೀ ಧರ್ಮವೀರ ಅವರು ಸಮಾರಂಭವನ್ನು ಉದ್ಘಾಟಿಸಿದರು. ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಅಧ್ಯಕ್ಷರಾಗಿ ಕಾರ್ಯಕ್ರಮಕ್ಕೆ ಚಾಲನೆ ಕೊಟ್ಟರು. ಈ ಸಮಾರಂಭದ ಅಂಗವಾಗಿ ಪುಸ್ತಕ ಪ್ರದರ್ಶನ, ಪತ್ರಿಕಾ ಪ್ರದರ್ಶನ, ಮಕ್ಕಳ ಸಾಹಿತ್ಯ, ಕಲಾ ಪ್ರದರ್ಶನ, ಶಾಸನ ಮತ್ತು ಪ್ರಾಚ್ಯ ವಸ್ತುಗಳ ಪ್ರದರ್ಶನಗಳನ್ನು ಏರ್ಪಡಿಸಲಾಗಿತ್ತು.

ಡಿಸೆಂಬರ್ ೨೬ರಂದು ಬೆಳಗ್ಗೆ ಸುವರ್ಣ ಮಹೋತ್ಸವ ಕಟ್ಟಡದ ಶಂಕುಸ್ಥಾಪನೆ ಮಾಡಿ, ಅತಿಥಿಗಳ ಭಾಷಣ ಮತ್ತು ಹಿರಿಯ ಮತ್ತು ತರುಣಕವಿಗಳ ಕವಿಗೋಷ್ಠಿ ಮುಂತಾದ ಕಾರ್ಯಕ್ರಮಗಳು ನಡೆದು ಸಂಜೆ "ಅಂತರ ಭಾರತಿ" ಕಾರ್ಯಕ್ರಮ ಮತ್ತು ಸನ್ಮಾನ ಸಮಾರಂಭ ಆಯೋಜಿಸಲಾಗಿದ್ದು ಸುವರ್ಣ ಮಹೋತ್ಸವದ ಸವಿ ನೆನಪಿಗಾಗಿ 'ಚಿನ್ನದ ಬೆಳಸು' ಎಂಬ ಶೀರ್ಷಿಕೆಯ ಸ್ಮರಣ ಸಂಚಿಕೆಯನ್ನೂ, ಪರಿಷತ್ತಿನ ಹದಿನಾಲ್ಕು ಗ್ರಂಥಗಳನ್ನು, ಕನ್ನಡ ನಿಘಂಟಿನ ಪ್ರಥಮ ಸಂಪುಟವನ್ನು ಬಿಡುಗಡೆ ಮಾಡಿಸಿದರು. ಕಾರ್ಯಕ್ರಮದ ಅಂಗವಾಗಿ ಅಂತರ ಭಾರತಿ ವಿಚಾರ ಸಂಕಿರಣದಲ್ಲಿ ಎಲ್ಲ ಪ್ರಮುಖ ಭಾಷೆಗಳ ವಿದ್ವಾಂಸರು ಭಾಗವಹಿಸಿದ್ದರು. ಹಾಗೂ ೬೨ ಕನ್ನಡ ಸಾಹಿತಿಗಳನ್ನು ಮತ್ತು ಕಲಾವಿದರನ್ನು ಸನ್ಮಾನಿಸಿ ಗೌರವಿಸಲಾಯಿತು.

ಸಮ್ಮೇಳನದ ೩ನೇ ದಿನ ಬೆಳಿಗ್ಗೆಯಿಂದ ಸಂಜೆಯವರೆಗೆ ಸಾಹಿತ್ಯಗೋಷ್ಠಿ, ಗಮಕ ಗೋಷ್ಠಿ, ಆಡಳಿತ ಭಾಷಾ ಗೋಷ್ಠಿ, ಕನ್ನಡ ಮಾಧ್ಯಮ ಗೋಷ್ಠಿ, ಮಹಿಳಾ ಗೋಷ್ಠಿ ಇತ್ಯಾದಿ ಕಾರ್ಯಕ್ರಮಗಳು ನಡೆದವು. ಕಡೆಯ ದಿನ ಬೆಳಿಗ್ಗೆ ಜಿಲ್ಲಾ ಸಮಿತಿಯ ಪ್ರತಿನಿಧಿಗಳು, ಹೊರನಾಡ ಕನ್ನಡಿಗರು ಮತ್ತು ಕನ್ನಡ ಸಂಘ ಸಂಸ್ಥೆಗಳ ಸಮ್ಮೇಳನ, ಬಹಿರಂಗ ಅಧಿವೇಶನದಲ್ಲಿ ನಿರ್ಣಯಗಳ ಅಂಗೀಕಾರ ಮತ್ತು ಮುಕ್ತಾಯ ಕಾರ್ಯಕ್ರಮಗಳು ನಡೆದವು. ಈ ಐದು ದಿನಗಳೂ ಸಂಜೆ ನಡೆದ ಮನರಂಜನೆ ಕಾರ್ಯಕ್ರಮಗಳು ಪ್ರಾದೇಶಿಕ ಪ್ರಾತಿನಿಧ್ಯದ ಜೊತೆಗೆ ವೈವಿಧ್ಯಪೂರ್ಣವಾಗಿದ್ದವು.

ಪರಿಷತ್ತಿನ ಯಾವುದೇ ಕಾರ್ಯಕ್ರಮದ ಯೋಜನೆ ಕೈಗೆತ್ತಿಕೊಂಡಾಗ

ಶ್ರೀ ಜಿ. ನಾರಾಯಣರು ವ್ಯವಸ್ಥಿತವಾಗಿ ಯೋಜಿಸಿ ವಿವಿಧ ಸಮಿತಿಗಳನ್ನು ರಚಿಸಿ ಅನುಭವಿಗಳ, ಸಾಹಿತಿಗಳ ಮಾರ್ಗದರ್ಶನ ಪಡೆದು ಯಾವ ಯಾವ ಕೆಲಸವನ್ನು ಯಾರು ಯಾರು ಮಾಡಬೇಕೆಂದು ವಹಿಸಿಕೊಟ್ಟು ತಮ್ಮ ಮುಂದಾಳತ್ವದಲ್ಲಿ ಯಶಸ್ವಿಯಾಗಿ ಕಾರ್ಯಕ್ರಮ ನಡೆಸುತ್ತಾರೆ. ಇದು ಅವರ ಕಾರ್ಯ ವೈಖರಿಯ ರೀತಿ.

ತ್ರೈವಾರ್ಷಿಕ ಯೋಜನೆಯ ಎರಡನೆಯ ವರ್ಷದ ಅವಧಿಯಲ್ಲಿ ಆಧುನಿಕ ವ್ಯವಸಾಯ, ಶಬ್ದಾವರ್ತನಿರುಕ್ತ, ತಿರುಳುಗನ್ನಡ ತಿರುಕ, ಗಮಕ ಚಂದ್ರಿಕೆ, ಗಮಕ ರಸಾಯನ, ಭಕ್ತವಾಣಿ ಸಾಹಿತ್ಯ ಶಾಸ್ತ್ರ ಮತ್ತು ಹೆಚ್.ಪಿ. ನಂಜುಂಡಯ್ಯನವರ ಜೀವನ ಮತ್ತು ಕಾರ್ಯ ಎಂಬ ಎಂಟು ಕೃತಿಗಳೂ ಕಾವ್ಯಗಾಯನ ಕಲಾಸಂಗ್ರಹ ಪುಸ್ತಕದ ಪುನರ್ ಮುದ್ರಣವೂ ಸೇರಿದಂತೆ ೯ ಪುಸ್ತಕಗಳನ್ನು ಪರಿಷತ್ತು ಪ್ರಕಟಿಸಿತು. ಅಲ್ಲದೆ ಮೈಸೂರು ಪ್ರಾಂತದ ಹೊರಗಿರುವ ಕನ್ನಡ ಸಂಘ ಸಂಸ್ಥೆಗಳ ವಾಚನಾಲಯಕ್ಕೆ ಪ್ರತಿವರ್ಷ ಕನ್ನಡ ಪುಸ್ತಕಗಳನ್ನು ಕಳಿಸಲಾರಂಭಿಸಿದರು. ವಯಸ್ಕರ ಶಿಕ್ಷಣ ಸಮಿತಿಯ ಸಹಕಾರದಿಂದ ಪರಿಷತ್ತು ಸಾಕ್ಷರತಾ ತರಗತಿಗಳನ್ನು ಆರಂಭಿಸಿ ಸಾಕ್ಷರತಾ ಪ್ರಚಾರವನ್ನೂ ಮಾಡಿತು.

ಜಿ. ನಾರಾಯಣ ಅವರು ಗೌರವ ಕಾರ್ಯಕರ್ತರ ಪಡೆಯನ್ನು ರೂಪಿಸಿದ ವಿಷಯವನ್ನು ಹೇಳಲೇಬೇಕಾಗುತ್ತದೆ. ಉದ್ಯೋಗಿಗಳು, ವಿದ್ಯಾರ್ಥಿಗಳು, ಇಂಜಿನಿಯರುಗಳು, ಸಾರ್ವಜನಿಕರು, ಮಹಿಳೆಯರು ಎಂದು ಹಲವು ಕ್ಷೇತ್ರಗಳವರು ಈ ಪಡೆಯ ಸದಸ್ಯರು. ಈ ತಂಡದಲ್ಲಿ ಕಾರ್ಯತತ್ಪರತೆ, ಕನ್ನಡದ ನಿಷ್ಠೆ, ಸ್ವಯಂ ಸೇವಕ ಮನೋಭಾವ ಹೊಂದಿದವರೇ ಇದ್ದುದು. ಪರಿಷತ್ತಿನ ಸಾರ್ವಜನಿಕ ಸಮಾರಂಭಗಳಲ್ಲಿ, ವಿಶೇಷ ಕಾರ್ಯಕ್ರಮಗಳಲ್ಲಿ, ಪಾದಯಾತ್ರೆ, ಸಮ್ಮೇಳನದ ಸಂದರ್ಭದಲ್ಲಿ ಪ್ರತಿನಿಧಿಗಳ ವಸತಿ ವ್ಯವಸ್ಥೆ, ಊಟ-ಉಪಚಾರಗಳ ವ್ಯವಸ್ಥೆ, ಪುಸ್ತಕ ಪ್ರದರ್ಶನ ಮುಂತಾದ ಕೆಲಸಗಳಲ್ಲಿ ತೊಡಗಿಸಿಕೊಂಡು ಪರಿಷತ್ತಿನ ಅಧ್ಯಕ್ಷರ ಎಲ್ಲಾ ಕೆಲಸಗಳಲ್ಲಿ ಭಾಗಿಯಾಗಿ ಕಾರ್ಯಕ್ರಮದ ಯಶಸ್ಸಿಗೆ ಕಾರಣರಾಗುತ್ತಿದ್ದ ಈ ಕಾರ್ಯಕರ್ತರ ತಂಡದ ಸೇವೆ ಸ್ಮರಣೀಯವೆಂದು ಒಂದೆಡೆ ಶ್ರೀ ಜಿ. ನಾರಾಯಣ ಅವರೇ ಉಲ್ಲೇಖಿಸಿದ್ದಾರೆ.

ಪರಿಷತ್ತಿನ ಯೋಜನೆಗಳು ವ್ಯವಸ್ಥಿತವಾಗಿ ಕಾರ್ಯರೂಪಕ್ಕೆ ತರಲು ಅನೇಕ ಸಲಹಾಸಮಿತಿಗಳನ್ನು, ಉಪಸಮಿತಿಗಳನ್ನು ಆಯೋಜಿಸುತ್ತಿದ್ದರು. ತ್ರೈವಾರ್ಷಿಕ ಯೋಜನೆಯ ಮೂರು ವರ್ಷದ ಅವಧಿಯಲ್ಲಿ ಒಂದು ನೂರು ಪುಸ್ತಕಗಳು ಪ್ರಕಟವಾದವು. ಮಾಸ ಪತ್ರಿಕೆಯಾಗಿದ್ದ ಕನ್ನಡ ನುಡಿಯನ್ನು ಪಕ್ಷಪತ್ರಿಕೆಯನ್ನಾಗಿ ಮಾರ್ಪಡಿಸಿ ಕನ್ನಡ ನಾಡುನುಡಿಯ ಚಟುವಟಿಕೆಗಳ ಪ್ರಕಟಣೆಗೆ ವಿಶೇಷ ಗಮನ ಹರಿಸಿದರು. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯನ್ನು ವಿದ್ವತ್ಪೂರ್ಣವಾದ ಲೇಖನಗಳೊಡನೆ ಕಾಲಕ್ಕೆ ಸರಿಯಾಗಿ ಹೊರತರಲಾಗುತ್ತಿತ್ತು. ಗ್ರಂಥಭಂಡಾರ ಮತ್ತು ವಾಚನಾಲಯಗಳ ಸುಧಾರಣೆಯತ್ತ ಗಮನ ಹರಿಸಿದರು. ಸಾವಿರಾರು ಪುಸ್ತಕಗಳನ್ನು ಕೊಂಡು ಸರಸ್ವತೀ ಪುಸ್ತಕ ಭಂಡಾರಕ್ಕೆ ಸೇರಿಸಿ ಸದಸ್ಯರ ಉಪಯೋಗಕ್ಕೆ ಇರಿಸಲಾಯಿತು. ದತ್ತಿ ಉಪನ್ಯಾಸ ಕಾರ್ಯಕ್ರಮಗಳನ್ನು ಬೆಂಗಳೂರಿನಲ್ಲಿ ಮಾತ್ರವಲ್ಲದೆ ಬೇರೆ ಬೇರೆ ಜಿಲ್ಲೆಗಳಲ್ಲಿ ನಡೆಯುವಂತೆ ಏರ್ಪಾಡು ಮಾಡಿದರು. ಈ ಅವಧಿಯಲ್ಲಿ ಅನೇಕರು ಹೊಸದಾಗಿ ಪರಿಷತ್ತಿಗೆ ದತ್ತಿಯನ್ನು ನೀಡಿದರು.

ಪರಿಷತ್ತಿನ ಆಶ್ರಯದಲ್ಲಿ ನಡೆಯುತ್ತಿದ್ದ ಕಾವ್ಯ, ಜಾಣ, ರತ್ನ ಮತ್ತು ಗಮಕ ಪರೀಕ್ಷೆಗಳು ನಾಡಿನ ಬೇರೆ ಬೇರೆ ಜಿಲ್ಲೆಗಳಲ್ಲಿಯೂ ನಡೆಯುವಂತೆ ವ್ಯವಸ್ಥೆ ಮಾಡಿದರು. ಪ್ರಥಮಬಾರಿಗೆ ಗಮಕ ಸಮ್ಮೇಳನ ಕೀರ್ತನಕಾರರ ಸಮ್ಮೇಳನ, ಅಖಿಲ ಕರ್ನಾಟಕ ನಾಟಕ ಸಮ್ಮೇಳನ ಮುಂತಾದ ಸಮ್ಮೇಳನಗಳು ನಡೆದು ಎಲ್ಲಾ ಬಗೆಯ ಕಲಾವಿದರಿಗೂ ಪ್ರೋತ್ಸಾಹ ದೊರೆಯಿತು.

ಎರಡು ಅಂತಸ್ತಿನ ಸುವರ್ಣಮಹೋತ್ಸವ ಕಟ್ಟಡದಲ್ಲಿ ಆಡಳಿತ ಸಿಬ್ಬಂದಿಗೆ ವಿಶಾಲವಾದ ಹಜಾರವನ್ನು, ಅಲ್ಲಿಯೇ ಪದಾಧಿಕಾರಿಗಳಿಗೆ ಪ್ರತ್ಯೇಕ ಕೊಠಡಿಗಳನ್ನು, ಗಮಕ ತರಗತಿಗೆ ಪ್ರತ್ಯೇಕ ಕೊಠಡಿಯನ್ನು, ಮೊದಲ ಮಹಡಿಯಲ್ಲಿ ಗ್ರಂಥ ಭಂಡಾರ, ವಾಚನಾಲಯ, ಸಂಶೋಧನ ವಿದ್ಯಾರ್ಥಿಗಳಿಗೆ ಬೇಕಾದ ಸ್ಥಳಾವಕಾಶವನ್ನು, ಎರಡನೇ ಅಂತಸ್ತಿನಲ್ಲಿ ವಸ್ತು ಸಂಗ್ರಹಾಲಯ, ಸ್ಥಿರ ಪುಸ್ತಕ ಪ್ರದರ್ಶನ, ನೆಲಮಾಳಿಗೆಯಲ್ಲಿ ಪ್ರಕಟಣೆಗೆ ಸಂಬಂಧಿಸಿದ ಕಾಗದ ಮುಂತಾದ ಸಂಗ್ರಹ, ಹೀಗೆ ಎಲ್ಲ ವ್ಯವಸ್ಥೆಗೂ ಸ್ಥಳಾವಕಾಶ ಮಾಡಿಕೊಂಡ ಈ ಕಟ್ಟಡದ ವೆಚ್ಚ ಅಂದಿಗೆ ಸುಮಾರು ಆರುಲಕ್ಷ ರೂಪಾಯಿಗಳು. ಒಳಾಡಳಿತ ಸಂಪರ್ಕಕ್ಕಾಗಿ ಆಂತರಿಕ ದೂರವಾಣಿ ಪ್ರಯೋಜನ ಅಳವಡಿಸಲಾಯಿತು. ಪರಿಷತ್ತಿನ ಅಭಿಮಾನಿಗಳಾದ ಶ್ರೀ ಬಿ.ವಿ. ರಾಘವೇಂದ್ರ ರಾಯರು ಕಂಟ್ರಾಕ್ಟರ್ ಮತ್ತು ಶ್ರೀ ದಿವಾಕರ್ ಅವರು ಕಟ್ಟಡ ವಿನ್ಯಾಸಕರರಾಗಿ ಸೇವೆ ನೀಡಿದರು.

ಯುನೆಸ್ಕೋ ಸಾರಿದ ಅಂತರರಾಷ್ಟ್ರೀಯ 'ಪುಸ್ತಕ ವರ್ಷ' ಹಾಗೂ ನಮ್ಮ ರಾಷ್ಟ್ರದ ಸ್ವಾತಂತ್ರ್ಯದ ಬೆಳ್ಳಿ ಹಬ್ಬದ ಸವಿ ನೆನಪಿಗಾಗಿ ಪರಿಷತ್ತು ಹಮ್ಮಿಕೊಂಡ ಸಾಹಿತ್ಯ ಪ್ರಸಾರ ಯೋಜನೆ ವಿಶಿಷ್ಟ. ಲೇಖಕ, ಪ್ರಕಾಶಕ, ಓದುಗ – ಎಲ್ಲರನ್ನೂ ಗಮನದಲ್ಲಿರಿಸಿಕೊಂಡು ರೂಪಿಸಿದ ಯೋಜನಾಬದ್ಧ ಕಾರ್ಯಕ್ರಮ ಈ ಸಾಹಿತ್ಯ ಪ್ರಸಾರ ಯೋಜನೆ. ನಾಡಿನ ಎಲ್ಲ ಪುಸ್ತಕ ಪ್ರಕಾಶಕರಿಂದ ಪುಸ್ತಕ ತರಿಸಿಕೊಂಡು, ನಾಡಿನಾದ್ಯಂತ ಪುಸ್ತಕ ಪ್ರದರ್ಶನ ಮಾರಾಟ, ವಿಚಾರ ಸಂಕಿರಣ, ಚರ್ಚೆ, ಪ್ರಬಂಧ, ಸ್ಪರ್ಧೆ, ಕಲಾಮೇಳ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಹಳ್ಳಿಯಿಂದ ಹಳ್ಳಿಗೆ ಮನೆಯಿಂದ ಮನೆಗೆ ಪುಸ್ತಕದ ಮಹತ್ವವನ್ನು ಸಾರಿದ ಒಂದು ಉತ್ತಮ ಮತ್ತು ಅಪೂರ್ವ ಕಾರ್ಯಕ್ರಮ.

ಅಖಿಲ ಭಾರತ ಮಟ್ಟದಲ್ಲಿ ಸಾಹಿತ್ಯ ಪ್ರಸಾರ ಯೋಜನೆ ೧೯೭೩ ಆಗಸ್ಟ್ ೧೬ಕ್ಕೆ ಮುಕ್ತಾಯವಾಗುತ್ತಿತ್ತು. ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ವಿಧಾನಸೌಧದ ಬ್ಯಾಂಕ್ವೆಟ್ ಹಾಲಿನಲ್ಲಿ ದಿ॥ ೫-೮-೭೩ರಿಂದ ೧೫-೮-೭೩ರ ವರೆಗೆ ಸುಮಾರು ಹದಿನೈದು ಸಾವಿರಕ್ಕೂ ಹೆಚ್ಚಿನ ಪುಸಕಗಳ ಪ್ರದರ್ಶನ ವ್ಯವಸ್ಥೆಮಾಡಿತು. ಈ ಪ್ರದರ್ಶನದಲ್ಲಿ ಯುನೆಸ್ಕೊ, ಕೇಂದ್ರ ಸಾಹಿತ್ಯ ಅಕಾಡೆಮಿ, ಹಿಂದಿ ಡೈರೆಕ್ಟೋರೇಟ್, ಕೇಂದ್ರ ಸರ್ಕಾರದ ಪ್ರಕಟನಾ ವಿಭಾಗ, ಭಾರತೀಯ ಭಾಷಾ ಸಂಸ್ಥೆ, ನ್ಯಾಷನಲ್ ಬುಕ್ ಟ್ರಸ್ಟ್, ಭಾರತದ ಮತ್ತು ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳು, ಪ್ರಕಟನಾ ಸಂಸ್ಥೆಗಳು ತಮ್ಮಲ್ಲಿಯ ವಿಶಿಷ್ಟ ಗ್ರಂಥಗಳನ್ನು ಪ್ರದರ್ಶನಕ್ಕೆ ಕಳಿಸಿದರು. ಇದೇ ಸಂದರ್ಭದಲ್ಲಿ ಭಾರತದ ವಿವಿಧ ಭಾಷೆಗಳಲ್ಲಿ ನಡೆದಿರುವ ಗ್ರಂಥಾಭಿವೃದ್ಧಿಯ ಕೆಲಸ ಕಾರ್ಯಗಳ ಸಮೀಕ್ಷೆಯನ್ನೊಳಗೊಂಡ 'ಅಂತರ ಭಾರತಿ' ಎಂಬ ಹೆಸರಿನ ಸ್ಮರಣ

ಸಂಚಿಕೆಯನ್ನು ಇಂಗ್ಲೀಷ್ ಮತ್ತು ಕನ್ನಡದಲ್ಲಿ ಪ್ರಕಟಿಸಲಾಯಿತು. ಈ ಪುಸ್ತಕ ಪ್ರದರ್ಶನ, ಭಾರತದ ಭಾಷೆಗಳ ಭಾವೈಕ್ಯತೆಗೆ ಪರಿಷತ್ತಿನ ಕಾಣಿಕೆ. ಕನ್ನಡವನ್ನು ರಾಜ್ಯದ ಆಡಳಿತ ಭಾಷೆಯನ್ನಾಗಿ ಜಾರಿಗೆ ತರಲು ರಾಜ್ಯಕ್ಕೆ ಕರ್ನಾಟಕ ಎಂದು ಹೆಸರು ಬರುವುದಕ್ಕೂ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಕನ್ನಡ ಆಡಳಿತ ಭಾಷೆಯಾಗುವುದಕ್ಕೂ, ಪರಿಷತ್ತು ಪಟ್ಟ ಶ್ರಮ ಮರೆಯುವಂತಿಲ್ಲ.

ಹೊರನಾಡ ಕನ್ನಡಿಗರಲ್ಲಿ ನಾಡು ನುಡಿಯ ಅಭಿಮಾನವನ್ನು ಬೆಳೆಸುವುದಕ್ಕೂ ಪರಿಷತ್ತು ಪ್ರಯತ್ನ ಮಾಡಿದೆ. ಮುಂಬಯಿ, ಕಾಸರಗೋಡು ಮತ್ತು ಸೊಲ್ಲಾಪುರದಲ್ಲಿ ಕನ್ನಡಿಗರು ನಡೆಸಿದ ಸಾಹಿತ್ಯ ಸಮ್ಮೇಳನಗಳಿಗೆ ಪರಿಷತ್ತು ಉದಾರವಾಗಿ ಸಹಾಯ ನೀಡಿದೆ. ಗಡಿ ಸಮಸ್ಯೆಗಳ ಬಗ್ಗೆ ಚರ್ಚಿಸಲು ಗಡಿನಾಡು ಕನ್ನಡಿಗರ ಸಮ್ಮೇಳನವನ್ನು ನಡೆಸಲಾಯಿತು.

ಪರಿಷತ್ತಿನಲ್ಲಿ ನಡೆಯುತ್ತಿದ್ದ ಗಮಕ ಶಿಕ್ಷಣ ಮತ್ತು ಗಮಕ ವಾಚನಾಭಿವೃದ್ಧಿಯ ಕಡೆಗೆ ಜಿ. ನಾರಾಯಣ ಗಮನ ಕೊಟ್ಟರು. ನಾಡಿನ ಸಂಸ್ಕೃತಿ ನಮ್ಮ ಕಾವ್ಯಗಳಲ್ಲಿದೆ. ಕಾವ್ಯಗಳನ್ನು ಕೇಳುಗರಿಗೆ ಅರ್ಥವಾಗುವಂತೆ ಹಾಡುವ ಕಲೆ ಗಮಕವಾಚನ. ಗಮಕ ಪ್ರಚಾರ ಮಂದಗತಿಯಲ್ಲಿ ನಡೆಯುತ್ತಿದ್ದು ಕಾವ್ಯಗಳು ಜನರಿಂದ ದೂರ ಸರಿಯುತ್ತಿವೆ. ಈ ಕೊರತೆ ನೀಗಿಸಲು ಹೊಸ ಕಾರ್ಯಕ್ರಮವನ್ನು ಪರಿಷತ್ತು ಆಯೋಜಿಸಿತು.

ಪರಿಷತ್ತಿನಲ್ಲಿ ಗಮಕ ಶಿಕ್ಷಣ ತರಬೇತಿ ಕೇಂದ್ರವನ್ನು ತೆರೆದು ಗಮಕ ಶಿಕ್ಷಣವನ್ನು ಕೊಡುವುದು, ಗಮಕ ವಾಚನ ಬಲ್ಲವರಿಂದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಗಮಕ ತರಗತಿಗಳನ್ನು ನಡೆಸಿ ಈ ಕಲೆಯ ಬಗ್ಗೆ ಜನತೆ ಹೆಚ್ಚಿನ ಗಮನ ಹರಿಸುವಂತೆ ಮಾಡುವುದು, ಶಾಲಾ ಕಾಲೇಜುಗಳಲ್ಲಿಯೂ ಗಮಕ ಕಲೆಗೆ ಸ್ಥಾನ ದೊರೆಯಲು ಪ್ರಯತ್ನಿಸುವುದು, ನಾಡಿನ ಎಲ್ಲಾ ಜಿಲ್ಲೆಗಳಲ್ಲಿ ಗಮಕವಾಚನ, ಗಮಕರೂಪಕ ಸ್ಪರ್ಧೆ ನಡೆಸಿ ಗಮಕಿಗಳನ್ನು ಗೌರವಿಸಿ ಪ್ರೋತ್ಸಾಹ ನೀಡುವುದು, ಪರಿಷತ್ತಿನ ಕಾರ್ಯಕ್ರಮಗಳಲ್ಲಿ ಗಮಕ ವಾಚನಕ್ಕೆ ಅವಕಾಶ ಮಾಡುವುದು, ಅಲ್ಲದೆ ಮೂರು ವರ್ಷಕ್ಕೊಮ್ಮೆಯಾದರೂ ಪರಿಷತ್ತಿನ ಆಶ್ರಯದಲ್ಲಿ ಗಮಕ ಸಮ್ಮೇಳನ ನಡೆಸುವ ಬಗ್ಗೆ ಕ್ರಮ ಕೈಗೊಳ್ಳುವುದು ಮುಂತಾಗಿ ಯೋಜಿಸಿ ಜಾರಿಗೊಳಿಸುವಲ್ಲಿ ಪರಿಷತ್ತು ಯಶಸ್ವಿಯಾಯಿತು. ೧೯೭೨ರಲ್ಲಿ ಗಮಕ ಸಮ್ಮೇಳನವನ್ನು ಪರಿಷತ್ತು ನಡೆಸಿಕೊಟ್ಟಿದೆ.

ತ್ರೈವಾರ್ಷಿಕ ಯೋಜನೆಯಲ್ಲಿ ಕೈಗೊಂಡಿದ್ದ ಕೆಲಸವಲ್ಲದೆ ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿಗಳ ಅಭಿವೃದ್ಧಿಗಾಗಿ ಪರಿಷತ್ತು ಮಾಡಬೇಕಾದ ಕೆಲಸ ಬೇಕಾದಷ್ಟಿದೆ. ತನ್ನ ಪಾಲಿನ ಕರ್ತವ್ಯವನ್ನು ನಿರ್ವಹಿಸಲು ತನ್ನ ಇತಿ ಮಿತಿಯನ್ನು ಅರಿತು ಯೋಜನಾಬದ್ಧವಾಗಿ ಕಾರ್ಯಪ್ರವೃತ್ತರಾಗಬೇಕಾಗಿದೆ. ಅಂಥ ಒಂದು ಯೋಜನೆಯನ್ನು ತಾರೀಕು ೨೮-೧೦-೧೯೭೩ರಂದು ನಡೆದ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಮುಂದಿಟ್ಟು ಒಪ್ಪಿಗೆಯ ತರುವಾಯ ೨೫-೧೧-೭೩ ರಂದು ನಡೆದ ಪರಿಷತ್ತಿನ ಸಕಲ ಸದಸ್ಯರ ಸಭೆಯಲ್ಲಿಯೂ ಒಪ್ಪಿಗೆ ಪಡೆಯಲಾಯಿತು. ಅದೇ ಪರಿಷತ್ತಿನ 'ಪಂಚವಾರ್ಷಿಕ ಯೋಜನೆ'. ಈ ಯೋಜನೆಗೆ ಒಟ್ಟು ಐವತ್ತು ಲಕ್ಷ ರೂಪಾಯಿಗಳ ಹಣ ಬೇಕಾಗಬಹುದೆಂದು ಅಂದಾಜುಮಾಡಿ, ಸರ್ಕಾರ

ಮುಕ್ಕಾಲು ಭಾಗ ಹಣವನ್ನು ಒದಗಿಸುವಂತೆ ಪ್ರಾರ್ಥಿಸಲಾಯಿತು. ತ್ರೈವಾರ್ಷಿಕ ಯೋಜನೆ ೧೯೭೩ನೇ ಡಿಸೆಂಬರ್‌ಗೆ ಮುಗಿದು, ೧೯೭೪ನೇ ಜನವರಿಯಿಂದ ಪಂಚವಾರ್ಷಿಕ ಯೋಜನೆ ಜಾರಿಗೆ ಬಂದಿತು. ಈ ಯೋಜನೆಯಲ್ಲಿ ಅನೇಕ ಅಂಶಗಳನ್ನು ಅನುಷ್ಠಾನಕ್ಕೆ ತಂದಿದೆ. ಕೆಲವು ವಿವರಗಳು ಇಂತಿವೆ.

ಪ್ರಾಚೀನ ಕನ್ನಡ ಕಾವ್ಯಗಳ ಪರಿಷ್ಕರಣ ಮತ್ತು ಪ್ರಕಟಣೆಗೆ ಸಂಬಂಧಿಸಿದಂತೆ ಆರಿಸಿದ ಹಳಗನ್ನಡ ಮತ್ತು ನಡುಗನ್ನಡ ಕಾವ್ಯಗಳನ್ನು ಹೊಸಗನ್ನಡ ಗದ್ಯಕ್ಕೆ ಅನುವಾದಿಸಿ ಮೂಲಗ್ರಂಥ ಸಹಿತ ಪ್ರಕಟಿಸುವುದು ಮತ್ತು ಸುಲಭ ಬೆಲೆಯಲ್ಲಿ ದೊರೆಯುವಂತೆ ಮಾಡುವುದು ಒಂದು. ಆಧುನಿಕ ವಿಜ್ಞಾನ ಇತ್ಯಾದಿ ವಿಷಯಗಳಿಗೆ ಸಂಬಂಧಪಟ್ಟ ಗ್ರಂಥಗಳನ್ನು ವಿದ್ಯಾರ್ಥಿಗಳಿಗೆ ಮತ್ತು ಜನಸಾಮಾನ್ಯರಿಗೆ ಉಪಯೋಗವಾಗುವಂತೆ ಸುಲಭ ಬೆಲೆಯಲ್ಲಿ ಪ್ರಕಟಿಸುವುದು ಇನ್ನೊಂದು. ಕನ್ನಡ ಭಾಷೆಯಿಂದ ಇತರ ಭಾಷೆಗಳಿಗೂ ಇತರ ಭಾಷೆಗಳಿಂದ ಕನ್ನಡ ಭಾಷೆಗೂ ಗ್ರಂಥಗಳನ್ನು ಅನುವಾದ ಮಾಡಿಸುವುದು ; ಕನ್ನಡದ ಅಮೂಲ್ಯ ಕೃತಿಗಳನ್ನು ಆಯ್ದು ಪುನರ್ಮುದ್ರಿಸುವುದು ಯೋಜನೆಯಲ್ಲಿ ಸೇರಿತ್ತು. ನಾಡು ನುಡಿಯ ಅಭಿವೃದ್ಧಿಗಾಗಿ ಶ್ರಮಿಸಿದ ಮಹನೀಯರ ಜೀವನ ಚರಿತ್ರೆ ಬರೆಸುವುದು, ಸಾಹಿತ್ಯ ವಿಮರ್ಶೆ ಗ್ರಂಥಗಳನ್ನು ಪ್ರಕಟಿಸುವುದು, ಉದಯೋನ್ಮುಖ ಬರಹಗಾರರ ಕೃತಿ ಸಂಕಲನಗಳನ್ನು ಹೊರ ತರುವುದು ಈ ಎಲ್ಲ ಕಾರ್ಯಗಳನ್ನು ಕೈಗೊಂಡು ಅನೇಕ ಗ್ರಂಥಗಳನ್ನು ಪ್ರಕಟಿಸಲಾಯಿತು. ಕಾವ್ಯಗಳ ಹೊಸಗನ್ನಡ ಗದ್ಯಾನುವಾದಗಳು ಇಂದಿಗೂ ಉಪಯುಕ್ತ ಗ್ರಂಥಗಳಾಗಿ ಜನಪ್ರಿಯವಾಗಿವೆ. ಅಲ್ಲದೆ ಕನ್ನಡೇತರರು ಕನ್ನಡ ಕಲಿಯಬೇಕಾದ ಉಪಯುಕ್ತ ಭಾಷಾ ಬೋಧೆ ಕೈಪಿಡಿಗಳನ್ನು ಪ್ರಕಟಿಸಿತು. ಪರಿಷತ್ತು ಪ್ರಕಟಣೆಯ ವೈವಿಧ್ಯಮಯ ಯೋಜನೆಯನ್ನು ಕೈಗೊಂಡು ಕೆಲಸ ಮಾಡಿತು. ಸಮ್ಮೇಳನಾಧ್ಯಕ್ಷರ ಭಾಷಣಗಳನ್ನು ಮೂರು ಸಂಪುಟಗಳಲ್ಲಿ ಪ್ರಕಟಿಸಲಾಯಿತು.

'ಕನ್ನಡ–ಕನ್ನಡ ನಿಘಂಟಿನ' ಎರಡನೆಯ ಸಂಪುಟ ಪ್ರಕಟವಾಯಿತು. ವಿದ್ಯಾರ್ಥಿಗಳ ಹಾಗೂ ಜನಸಾಮಾನ್ಯರ ಉಪಯೋಗಕ್ಕಾಗಿ ಸಾವಿರ ಪುಟಗಳ ಒಂದು ಲಕ್ಷ ಪದಗಳುಳ್ಳ 'ಸಂಕ್ಷಿಪ್ತ ನಿಘಂಟು' ಹಾಗೂ ಇಂಗ್ಲೀಷಿನ ಜೆಮ್ ಡಿಕ್ಷನರಿ ಮಾದರಿಯಲ್ಲಿ 'ರತ್ನಕೋಶ'ಗಳನ್ನು ಮುದ್ರಿಸಿ ಅತ್ಯಂತ ಕಡಿಮೆ ಬೆಲೆಯಲ್ಲಿ ಮಾರಾಟಕ್ಕೆ ಇಟ್ಟಿತು. ಸರ್ಕಾರ ಈ ಯೋಜನೆಗೆ ಧನ ಸಹಾಯ ನೀಡಿದ್ದರಿಂದ ಅತ್ಯಂತ ಸುಲಭ ಬೆಲೆಗೆ ಕೊಡಲು ಸಾಧ್ಯವಾಯಿತು.

ಪರಿಷತ್ತಿನ ಧ್ಯೇಯ ಮತ್ತು ಉದ್ದೇಶಗಳಿಗನುಗುಣವಾಗಿ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನೂ ಕನ್ನಡ ಜನತೆಗೆ ತಿಳಿಸಿ, ಅವರು ಕನ್ನಡದ ಸರ್ವತೋಮುಖ ಅಭಿವೃದ್ಧಿ ಕಾರ್ಯದಲ್ಲಿ ಭಾಗಿಯಾಗುವಂತೆ ಪ್ರೇರಿಸಲು 'ಕನ್ನಡ ನುಡಿ'ಯಲ್ಲಿ ಹಲವಾರು ಸುಧಾರಣೆಗಳನ್ನು ಮಾಡಲಾಯಿತು. ಹಾಗೆಯೇ ಪರಿಷತ್ಪತ್ರಿಕೆಯನ್ನು ಮತ್ತಷ್ಟು ಸುಧಾರಿಸಿ, ವಿದ್ವತ್ಪೂರ್ಣ ಲೇಖನಗಳನ್ನು, ಅಪೂರ್ವವಾದ ಪ್ರಾಚೀನ ಕೃತಿಗಳನ್ನು, ಐತಿಹಾಸಿಕವಾದ ಕೈಫಿಯತ್, ಬಖೈರ್‌ಗಳನ್ನು, ಜಾನಪದ ಗೀತೆಗಳನ್ನು ಪ್ರಕಟಿಸಲು ಅವಕಾಶ ಮಾಡಿಕೊಡಲಾಯಿತು.

ಪರಿಷತ್ತಿನಲ್ಲಿರುವ ಸರಸ್ವತೀ ಗ್ರಂಥಭಂಡಾರ ಮತ್ತು ವಾಚನಾಲಯಗಳನ್ನು ಹಳೆಯ

ಕಟ್ಟಡದಿಂದ ಸುವರ್ಣ ಮಹೋತ್ಸವ ಕಟ್ಟಡಕ್ಕೆ ಸ್ಥಳಾಂತರಿಸಿ ಸೌಕರ್ಯಗಳನ್ನು ಹೆಚ್ಚಿಸಿದರು. ಪದವೀಧರ ಗ್ರಂಥಾಧಿಕಾರಿಗಳನ್ನು ನೇಮಿಸಿಕೊಂಡು ಪುಸ್ತಕಗಳನ್ನು ವರ್ಗೀಕರಿಸಿ ಸಾರ್ವಜನಿಕರಿಗೆ, ಪ್ರಾಸಂಗಿಗಳಿಗೆ, ಸಂಶೋಧಕರಿಗೆ ಅನುಕೂಲವಾಗುವಂತೆ ಪುನರ್‌ವ್ಯವಸ್ಥೆ ಮಾಡಿದರು. ಕನ್ನಡದಲ್ಲಿ ಈವರೆಗೆ ಪ್ರಕಟವಾಗಿರುವ ಮತ್ತು ಪ್ರತಿ ವರ್ಷ ಪ್ರಕಟವಾಗುವ ಎಲ್ಲ ಪುಸ್ತಕಗಳೂ ಇಲ್ಲಿ ದೊರೆಯಬೇಕು ಎಂದು ಲೇಖಕ ಪ್ರಕಾಶಕರನ್ನು ಸಂಪರ್ಕಿಸಿ ಪುಸ್ತಕ ತರಿಸುವ ವ್ಯವಸ್ಥೆ ಮಾಡಿದರು. ಓದುಗರಿಗೆ ವ್ಯವಸ್ಥಿತ ಪೀಠೋಪಕರಣಗಳನ್ನು ಒದಗಿಸಿದರು. ವಾಚನಾಲಯಕ್ಕೆ ಕನ್ನಡದಲ್ಲಿ ಪ್ರಕಟವಾಗುವ ಎಲ್ಲ ಪತ್ರಿಕೆಗಳನ್ನು ಒದಗಿಸುವ ವ್ಯವಸ್ಥೆಮಾಡುವುದರ ಜೊತೆಗೆ, ಹಳೆಯ ಸಂಚಿಕೆಗಳನ್ನು ಬೈಂಡ್ ಮಾಡಿಸಿ ಅಧ್ಯಯನಕ್ಕೆ ಅನುಕೂಲ ಮಾಡಿಕೊಟ್ಟರು. ಪುಸ್ತಕ ಭಂಡಾರಗಳನ್ನು ಸ್ಥಾಪಿಸುವ ಬಗೆ ಹೇಗೆ ಎನ್ನುವ ಬಗ್ಗೆ ಉಪನ್ಯಾಸ ಏರ್ಪಡಿಸುವುದರ ಜೊತೆಗೆ ಆಸಕ್ತರಿಗೆ ತರಬೇತಿಯನ್ನು ಕೊಡಿಸಿದರು.

ಹೊರನಾಡ ಕನ್ನಡಿಗರೊಂದಿಗೆ ಬಿ.ಎಂ.ಶ್ರೀ. ಅವರ ಕಾಲದಿಂದ ಬೆಳೆದುಬಂದ ಪರಿಷತ್ತಿನ ಸಂಬಂಧ ಶ್ರೀ ಜಿ. ನಾರಾಯಣರ ಕಾಲದಲ್ಲಿ ಇನ್ನೂ ಹೆಚ್ಚು ಕ್ರಿಯಾತ್ಮಕವಾಯಿತು. ಲೇಖಕರು, ಪ್ರಕಾಶಕರು ಮತ್ತು ದಾನಿಗಳಿಂದ ಪುಸ್ತಕಗಳನ್ನು ಸಂಗ್ರಹಿಸಿ, ಪರಿಷತ್ತಿನ ಪ್ರಕಟಣೆಗಳನ್ನೂ ಸೇರಿಸಿ ಹೊರನಾಡ ಕನ್ನಡ ಸಂಘ ಸಂಸ್ಥೆಗಳ ವಾಚನಾಲಯಕ್ಕೆ ಉಚಿತವಾಗಿ ಕೊಡಲಾಯಿತು. ಹೊರನಾಡ ಕನ್ನಡಿಗರ ಸಮ್ಮೇಳನವನ್ನು ಬೆಂಗಳೂರಿನಲ್ಲಿ ಏರ್ಪಡಿಸಿ ಅವರ ಸಮಸ್ಯೆಗಳಿಗೆ ಸ್ಪಂದಿಸಿ ವಿಶೇಷ ಗಮನ ನೀಡಲಾಯಿತು. ಹೊರದೇಶಗಳ ಕನ್ನಡ ಸಂಘಗಳಿಗೂ ಪರಿಷತ್ತು ನೆರವಿನ ಹಸ್ತ ನೀಡಿತು.

ಸರ್ವಜ್ಞ ಕವಿಯ ಚತುಶ್ಶತಮಾನೋತ್ಸವ ಆಚರಣೆಯನ್ನು ೧೯೭೪ರ ರಾಜ್ಯೋತ್ಸವ ಸಂದರ್ಭದಲ್ಲಿ ರೂಪಿಸಿ ಒಂದು ವಾರ ಕಾಲ ಹಳ್ಳಿ ಮತ್ತು ಪಟ್ಟಣಗಳನ್ನೊಳಗೊಂಡಂತೆ ೨೦೦ಕ್ಕೂ ಹೆಚ್ಚು ಸ್ಥಳಗಳಲ್ಲಿ ಉತ್ಸವ ನಡೆಸಲಾಯಿತು. ಕವಿಯ ಭಾವಚಿತ್ರದ ಮೆರವಣಿಗೆ. ಕಂಠಪಾಠ ಸ್ಪರ್ಧೆ, ಕವಿ, ಕಾವ್ಯ ವಿಚಾರ ಸಂಕಿರಣ, ಉಪನ್ಯಾಸ ಮೊದಲಾದ ಕಾರ್ಯಕ್ರಮಗಳನ್ನು ಆಯೋಜಿಸಿ ನಡೆಸಿದರು. ಅಲ್ಲದೆ ಈ ಕವಿಯ ಆಯ್ದ ೧೦೦ ವಚನಗಳನ್ನು ಮುದ್ರಿಸಿ ಪ್ರತಿಗಳನ್ನು ನಾಡಿನಾದ್ಯಂತ ವಿತರಿಸಲಾಯಿತು.

೧೯೭೫ನೇ ವರ್ಷವನ್ನು ಅಂತರರಾಷ್ಟ್ರೀಯ ಮಹಿಳಾ ವರ್ಷವೆಂದು ಯುನೆಸ್ಕೋ ಘೋಷಿಸಿದಾಗ, ಪರಿಷತ್ತು, ಮಹಿಳಾ ವರ್ಷವನ್ನು ಅರ್ಥಪೂರ್ಣವಾಗಿ ಆಚರಿಸುವ ಸಲುವಾಗಿ, ಮಹಿಳೆಯರ ಸಾಹಿತ್ಯ, ಶಿಕ್ಷಣ ಮತ್ತು ಕಲೆಗೆ ಸಂಬಂಧಿಸಿದಂತೆ ಸುಮಾರು ೨೦೦ ಕ್ಕೂ ಹೆಚ್ಚು ಗೋಷ್ಠಿಗಳನ್ನು ನಡೆಸಿತು. ಗಣ್ಯ ಮಹಿಳೆಯರ ಜೀವನಕ್ಕೆ ಸಂಬಂಧಿಸಿದ ೨೫ ಪುಸ್ತಕಗಳನ್ನು ಪ್ರಕಟಿಸಲಾಯಿತು. ಉದಯೋನ್ಮುಖ ಲೇಖಕಿಯರಿಗಾಗಿ ತರಬೇತಿ ಶಿಬಿರ ನಡೆಸಿತು. ಅನೇಕರು ಈ ಶಿಬಿರದ ಪ್ರಯೋಜನ ಪಡೆದುಕೊಂಡರು. ಅಂತರರಾಷ್ಟ್ರೀಯ ಮಹಿಳಾ ಸಮ್ಮೇಳನ ಬೆಂಗಳೂರಿನಲ್ಲಿ ೧೯೭೬ ಫೆಬ್ರವರಿಯಲ್ಲಿ ನಡೆಯಿತು. ಸಮ್ಮೇಳನದ ನೆನಪಿಗಾಗಿ ಹತ್ತು ಸಾವಿರ ರೂಗಳ ದತ್ತಿ ನಿಧಿಯೊಂದನ್ನು ಸ್ಥಾಪಿಸಲಾಯಿತು. ಈ ಹಣದಿಂದ ಬರುವ ಬಡ್ಡಿಯಲ್ಲಿ ಮಹಿಳೆಯರಿಗಾಗಿ ಪ್ರತಿವರ್ಷ ಪ್ರತ್ಯೇಕ ಬಹುಮಾನ ನೀಡಲಾಗುತ್ತಿದೆ.

ಜಿ. ನಾರಾಯಣ ಅವರು ತಮ್ಮ ಅಧಿಕಾರಾವಧಿಯಲ್ಲಿ ಗ್ರಾಮೀಣ ಕಲೆಗಳ ಕಡೆಗೂ ಕಣ್ಣು ಹಾಯಿಸಿದರು. ಗ್ರಾಮಕಲೆಗಳು ನಮ್ಮ ಸಂಸ್ಕೃತಿಯ ವಿವಿಧ ಮುಖಗಳ ಅಭಿವ್ಯಕ್ತಿ. ಕನ್ನಡ ಸಂಸ್ಕೃತಿಯ ನಿಜವಾದ ಲಕ್ಷಣಗಳನ್ನು ನಮ್ಮ ಗ್ರಾಮಗಳಲ್ಲಿ ಕಾಣಬಹುದು. ಗ್ರಾಮೀಣ ಜನತೆ ಅವರವರ ವಿಶಿಷ್ಟ ಆಚಾರ-ವಿಚಾರಗಳನ್ನು ಸಂಪ್ರದಾಯಗಳನ್ನೂ ಉಳಿಸಿ ಬೆಳೆಸಿಕೊಂಡು ಬಂದಿದ್ದಾರೆ. ಇವೆಲ್ಲವೂ ನಮ್ಮ ಸಂಸ್ಕೃತಿಯ ವಿವಿಧ ಮುಖಗಳು. ಈ ಜನಪದ ಕಲೆಗಳನ್ನು ನಾಡಿನ ಎಲ್ಲರಿಗೂ ಹಾಗೂ ಮುಂದಿನ ಪೀಳಿಗೆಗೂ ಪರಿಚಯಿಸುವ ಉದ್ದೇಶದಿಂದ ಪರಿಷತ್ತು ಜನಪದ ಸಾಹಿತ್ಯ ಮತ್ತು ಕಲೆಗಳ ರಕ್ಷಣೆಯ ಬಗ್ಗೆ ಕಾರ್ಯಕ್ರಮವನ್ನು ರೂಪಿಸಿತು. ಜಾನಪದ ಸ್ನಾತಕೋತ್ತರ ಪದವೀಧರರನ್ನು, ಆಸಕ್ತ ನುರಿತ ತಜ್ಞರನ್ನು ಗ್ರಾಮಾಂತರ ಪ್ರದೇಶಗಳಿಗೆ ಕಳಿಸಿ ಆಯಾ ಭಾಗದ ಗ್ರಾಮ ಜೀವನಕ್ಕೆ ಸಂಬಂಧಪಟ್ಟ ಹಬ್ಬ ಹರಿದಿನಗಳ, ಸಂಪ್ರದಾಯಗಳ ಹಾಡು, ಲಾವಣಿ, ಗೀತೆ, ಕಥೆ, ಜನಪದ ಆಟಗಳು ನೃತ್ಯಗಳನ್ನು, ಸಾಂಸ್ಕೃತಿಕ ಇತರ ಚಟುವಟಿಕೆಗಳನ್ನು ಧ್ವನಿಮುದ್ರಿಸಿ ಸಂಗ್ರಹಿಸುವುದು. ಗ್ರಾಮಾಂತರ ಜನರು ಬಳಸುವ ನಿತ್ಯೋಪಯೋಗಿ ಶಬ್ದಗಳನ್ನು ಅಲ್ಲಿ ಕಂಡು ಬರುವ ವಿಶಿಷ್ಟ ಪದ, ವಸ್ತುಗಳನ್ನು ಸಂಗ್ರಹಿಸಿ ಅವುಗಳಿಗೆ ಅರ್ಥ ವಿವರಗಳನ್ನು ಕೊಡುವುದು, ಸಂಗ್ರಹಿಸಿದ ಜನಪದ ಸಾಹಿತ್ಯವನ್ನು ಪರಿಶೋಧಿಸಿ ಪ್ರಕಟಿಸುವುದು ಮತ್ತು ಪರಿಷತ್ತಿನ ವಸ್ತು ಪ್ರದರ್ಶನದಲ್ಲಿ ಪ್ರಾಚೀನ ಜನಪದ ವಸ್ತುಗಳನ್ನು ಪ್ರದರ್ಶಿಸುವುದು. ಸಮ್ಮೇಳನದಲ್ಲಿ ಜನಪದ ಸಾಹಿತ್ಯ, ಸಂಸ್ಕೃತಿ ಮತ್ತು ಕಲೆಗೆ ಸಂಬಂಧಿಸಿದ ಗೋಷ್ಠಿಯನ್ನು ಏರ್ಪಡಿಸುವುದು ಇತ್ಯಾದಿ. ಆಯಾ ಜಿಲ್ಲೆಯ ವಿಶಿಷ್ಟ ಕಲಾ ಪ್ರಕಾರಗಳನ್ನು, ಕಲಾವಿದರನ್ನು ಆಯ್ಕೆ ಮಾಡಿ ಪ್ರತಿ ಜಿಲ್ಲೆಯಲ್ಲಿಯೂ ಕಲಾಮೇಳಗಳನ್ನು ನಡೆಸಲಾಯಿತು. ಗ್ರಾಮ ಕಲಾತಂಡಗಳನ್ನು ಬೆಂಗಳೂರಿಗೆ ಕರೆಸಿ ೧೯೭೬ ನವೆಂಬರ್ ೧೩ ರಿಂದ ಮೂರು ದಿನಗಳ ಕಾಲ ರಾಜ್ಯ ಮಟ್ಟದ ಬೃಹತ್ ಜಾನಪದ ಕಲಾಮೇಳವನ್ನು ನಡೆಸಿದರು. ಈ ಜಾನಪದ ವಿಭಾಗದ ಚಟುವಟಿಕೆಗಳಿಗೆ ಶ್ರೀ. ಗೊ.ರು. ಚನ್ನಬಸಪ್ಪನವರು ಪ್ರಧಾನ ಸಂಚಾಲಕರಾಗಿದ್ದರು.

ಗ್ರಂಥಗಳು, ಪತ್ರಿಕೆಗಳು ಮತ್ತು ಇತರ ದಾಖಲೆಗಳ ಸಂಗ್ರಹದ ಮೂಲಕ ಜನತೆಯ ಜ್ಞಾನ ಭಂಡಾರವನ್ನು ಅಭಿವೃದ್ಧಿಪಡಿಸುವಂತೆ ಧ್ವನಿಮುದ್ರಿಕೆಗಳ ಸಂಗ್ರಹಾಲಯದ ಮೂಲಕ ನಮ್ಮ ನಾಡಿನ ಜನತೆಗೆ ಪ್ರತಿಭಾವಂತರ ಹಿರಿಮೆ-ಗರಿಮೆಯನ್ನು ಪರಿಚಯ ಮಾಡಿಕೊಡಲು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಒಂದು ಹೊಸ ಕಾರ್ಯಕ್ರಮ ಹಾಕಿಕೊಂಡರು. ನುರಿತ ಸಿಬ್ಬಂದಿಯನ್ನು ನೇಮಿಸಿ ವ್ಯವಸ್ಥಿತವಾದ ಒಂದು ಧ್ವನಿ ಮುದ್ರಿಕೆಗಳ ಭಂಡಾರವನ್ನು ಪರಿಷತ್ತಿನಲ್ಲಿ ಸ್ಥಾಪಿಸುವುದು. ದಿವಂಗತರಾಗಿರುವ ಕನ್ನಡದ ಸುಪ್ರಸಿದ್ಧ ಕವಿಗಳು, ಸಾಹಿತಿಗಳು ಕಲಾವಿದರು ಮತ್ತಿತರ ಪ್ರತಿಭಾವಂತರ ಧ್ವನಿಗಳನ್ನು ಆಕಾಶವಾಣಿ ಇತರೆ ಸಂಸ್ಥೆಯವರು ಸಂಗ್ರಹಿಸಿರುವ ಧ್ವನಿಮುದ್ರಿಕೆಗಳ ಸಹಾಯದಿಂದ ಪುನರ್ ಮುದ್ರಿಸಿ ಪರಿಷತ್ತಿನಲ್ಲಿಡುವುದು. ನಾಡಿನ ಹಿರಿಯ ಸಾಹಿತಿಗಳು ಮತ್ತು ಅವರ ಜೀವನ ಸಾಕ್ಷ್ಯ ಚಿತ್ರಗಳು, ಕವಿಗಳು, ಕಲಾವಿದರು, ಪ್ರವಚನಕಾರರು, ಯಕ್ಷಗಾನ ಕಲಾವಿದರು, ಜನಪದ ಸಾಹಿತಿಗಳು, ಕೀರ್ತನಕಾರರು ಮುಂತಾದವರ ಧ್ವನಿ ಮುದ್ರಣ ಮಾಡಿಕೊಳ್ಳುವುದು ಸಂಪ್ರದಾಯದ ಹಾಡುಗಳು, ದಾಸರ

ಪದಗಳು, ಹಾಗೂ ನಾಡಿನಲ್ಲಿ ಆಚರಿಸುವ ಹಬ್ಬ ಹರಿದಿನಗಳು, ಉತ್ಸವಗಳು, ಮುಂತಾದ ಮಾದರಿಗಳನ್ನು ಧ್ವನಿ ಮುದ್ರಣ ಮಾಡಿಸಿ ಸಂಗ್ರಹಿಸುವ ಕೆಲಸದ ಜೊತೆ ಅದನ್ನು ಬಯಸುವ ಕನ್ನಡಿಗರಿಗೆ ಕಳಿಸುವುದು, ಇತ್ಯಾದಿ. ಸಂಗ್ರಹಿಸಿದ ಮಾಹಿತಿಗಳ ಪ್ರದರ್ಶನಕ್ಕೆ ಬೇಕಾದ ಪ್ರೊಜೆಕ್ಟರ್ ಮೊದಲಾದ ಸಾಮಗ್ರಿಗಳನ್ನು ಪರಿಷತ್ತಿಗೆ ಕೊಂಡು ಸುಸಜ್ಜಿತ ವ್ಯವಸ್ಥೆ ಮಾಡಲಾಯಿತು.

ಅತ್ಯಂತ ಹಳೆಯ ತಾಳೆ ಗರಿ ಓಲೆ ಗ್ರಂಥಗಳು, ಕೈ ಬರಹದ ಪುಸ್ತಕ ಮುಂತಾದ ೧೨೦೦ ಕ್ಕೂ ಹೆಚ್ಚಿನ ಸಂಖ್ಯೆಯ ಸಂಗ್ರಹ ಪರಿಷತ್ತಿನ ಹಸ್ತ ಪ್ರತಿ ವಿಭಾಗದಲ್ಲಿದೆ. ಅಲ್ಲದೆ ಅತ್ಯಂತ ಹಳೆಯದೆಂದು ನಂಬಲಾದ ಕ್ರಿ.ಶ. ೧೫೭೬ ರಲ್ಲಿ ಪ್ರತಿ ಮಾಡಿದ 'ಕರ್ಣಾಟ ಭಾರತ ಕಥಾಮಂಜರಿ'ಯ ಹಸ್ತಪ್ರತಿಯೂ ಪರಿಷತ್ತಿನ ಭಂಡಾರದಲ್ಲಿ ಸಂಗ್ರಹಿಸಿಡಲಾಗಿದೆ.

ಕನ್ನಡ ನಾಡು ನುಡಿಯ ಬಗ್ಗೆ ನಿಜವಾದ ಕಲ್ಪನೆ ತಂದುಕೊಡುವ ಉದ್ದೇಶದಿಂದ ಪರಿಷತ್ತು ಈ ಯೋಜನೆಯನ್ನು ರೂಪಿಸಿತು. ಕರ್ನಾಟಕದ ಭವ್ಯ ಸಾಂಸ್ಕೃತಿಕ ಪರಂಪರೆಯನ್ನು ಕನ್ನಡಿಗರಿಗೂ ದೇಶ, ವಿದೇಶೀಯರಿಗೂ ಪರಿಚಯ ಮಾಡಿಕೊಡುವ ದೃಷ್ಟಿಯಿಂದ ಸುವರ್ಣ ಮಹೋತ್ಸವ ಕಟ್ಟಡದ ಕಡೆಯ ಅಂತಸ್ತಿನಲ್ಲಿ ಕರ್ನಾಟಕ ಸಾಹಿತ್ಯ, ಸಂಗೀತ, ಚಿತ್ರಕಲೆ, ವಾಸ್ತುಶಿಲ್ಪ, ಸಾಹಿತಿ–ಕವಿಗಳ ಕೈಬರಹಗಳನ್ನು, ಹಳೆ ನಾಣ್ಯಗಳನ್ನು, ಶಿಲಾ ಶಾಸನದ ಪ್ರತಿಗಳನ್ನು ಜನಪದ ವಾದ್ಯ ಮುಂತಾದ ವಸ್ತುಗಳನ್ನು ರಕ್ಷಿಸಿಡಲು ಸಾಂಸ್ಕೃತಿಕ ವಸ್ತುಸಂಗ್ರಹಾಲಯವನ್ನು ಸ್ಥಾಪಿಸಿದೆ. ಈ ಸಂಗ್ರಹಾಲಯಕ್ಕೆ ಸಾಹಿತಿಗಳಾದ ಶ್ರೀ ಸೂರ್ಯನಾರಾಯಣ ಚಡಗರು ತಮ್ಮಲ್ಲಿದ್ದ ಅನೇಕ ಅಮೂಲ್ಯ ವಸ್ತುಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಈ ಸಂಗ್ರಹಾಲಯಕ್ಕೆ ಪೂರಕವಾಗಿ ಅಧ್ಯಯನಕ್ಕೆ ಸಂಬಂಧಿಸಿದ ಸಂಶೋಧನಾ ಶಾಖೆಯನ್ನು ತೆರೆಯುವ ಯೋಜನೆಯೂ ರೂಪುಗೊಂಡಿತು. ಪರಿಷತ್ತಿನಲ್ಲಿ ಪ್ರಕಟವಾದ ಆಯಾ ವರ್ಷದ ಎಲ್ಲ ಕನ್ನಡ ಪುಸ್ತಕಗಳನ್ನು ಪ್ರದರ್ಶಿಸುವ ಸ್ಥಿರ ಪುಸ್ತಕ ಪ್ರದರ್ಶನದ ವ್ಯವಸ್ಥೆಯನ್ನು ಮಾಡಲಾಯಿತು.

ಪ್ರಾಚೀನ ಶಾಸನ ಲಿಪಿಯನ್ನು ಕಲಿಸುವ ಮತ್ತು ಇತಿಹಾಸ ಅಧ್ಯಯನವನ್ನು ಕುರಿತಂತೆ ಶಾಸನ ಶಾಸ್ತ್ರ ತರಗತಿಗಳನ್ನು, ಜಾನಪದ ತರಗತಿಗಳನ್ನು ಆರಂಭಿಸಿದರು. ಅದು ಇಂದಿಗೂ ನಡೆದುಕೊಂಡು ಬರುತ್ತಿದೆ. ಈ ಶಾಸನಶಾಸ್ತ್ರ ಮತ್ತು ಜಾನಪದ ಪರೀಕ್ಷೆಗಳ ಜೊತೆ ಇತರ ಸಾಹಿತ್ಯ ಪರೀಕ್ಷೆಗಳೂ ನಡೆಯುತ್ತಿವೆ. ಕನ್ನಡ ಭಾಷಾ ಬೆಳವಣಿಗೆ ದೃಷ್ಟಿಯಿಂದ ಕನ್ನಡ ಬೆರಳಚ್ಚಿಗೂ ಮತ್ತು ಶೀಘ್ರಲಿಪಿಗೂ ಹೆಚ್ಚು ಗಮನ ಕೊಡುವ ಅಗತ್ಯವನ್ನು ಅರಿತು ಪರಿಷತ್ತಿನಲ್ಲಿ ಕನ್ನಡ ಬೆರಳಚ್ಚುಗಾರರ ತರಗತಿಯನ್ನೂ, ಕನ್ನಡ ಶೀಘ್ರಲಿಪಿಗಾರರ ತರಗತಿಗಳನ್ನೂ ತೆರೆಯಲಾಯಿತು.

ಪರಿಷತ್ತಿನ ಕೆಲಸ ಕಾರ್ಯಗಳಲ್ಲಿ ಕನ್ನಡಾಭಿಮಾನಿಗಳು ಹೆಚ್ಚಿನ ಆಸಕ್ತಿ ವಹಿಸಲಾರಂಭಿಸಿದರು. ಅನೇಕರು ತಮ್ಮ ಹೆಸರಿನಲ್ಲಿ ಅಥವಾ ತಮ್ಮ ಅಪ್ತೇಷ್ಟರ ಹೆಸರಿನಲ್ಲಿ ಉಪನ್ಯಾಸ, ಸ್ಪರ್ಧೆ, ಕಲಾವಿದರಿಗೆ ಬಹುಮಾನ ಅಥವಾ ಬೇರೆ ಕಾರ್ಯಕ್ರಮಗಳನ್ನು ಪರಿಷತ್ತಿನ ಆಶ್ರಯದಲ್ಲಿ ನಡೆಸುವಂತೆ ದತ್ತಿ ನಿಧಿಯನ್ನು ಇಡುತ್ತಾರೆ. ಈ ಹಣವನ್ನು ಬ್ಯಾಂಕಿನಲ್ಲಿ ಇಡುಗಂಟಾಗಿಟ್ಟು ಅದರಿಂದ ಬರುವ ಬಡ್ಡಿ ಹಣದಿಂದ ದತ್ತಿ ನೀಡಿದವರ ಉದ್ದೇಶಗಳಿಗನುಗುಣವಾಗಿ

ಕಾರ್ಯಕ್ರಮಗಳನ್ನು ನಡೆಸುವುದು ದತ್ತಿ ನಿಧಿಯ ವೈಶಿಷ್ಟ್ಯ. ದತ್ತಿ ಉಪನ್ಯಾಸಗಳನ್ನು ಬೆಂಗಳೂರು ನಗರದಲ್ಲಿ ಮಾತ್ರವಲ್ಲದೆ ಜಿಲ್ಲಾ ಸಮಿತಿಗಳ ಮೂಲಕ ನಾಡಿನ ಇತರ ಭಾಗ ಗಳಲ್ಲಿಯೂ ಏರ್ಪಡಿಸಲಾಯಿತು. ಶ್ರೀ ಜಿ.ನಾರಾಯಣರ ಕಾಲದಲ್ಲಿ ದತ್ತಿ ನಿಧಿ ೭೭ ಸಾವಿರಕ್ಕೂ ಮೀರಿತು.

ಪರಿಷತ್ತು ಸ್ಥಾಪನೆಯಾದ ಲೆಕ್ಕದಲ್ಲಿ ಪರಿಷತ್ತಿನ ವಜ್ರಮಹೋತ್ಸವ ೧೯೭೫ರಲ್ಲಿ ನಡೆಯ ಬೇಕಿತ್ತು. ೧೯೭೭ ಏಪ್ರಿಲ್ ೨೩ರಿಂದ ೨೮ರ ವರೆಗೆ ೬ ದಿನಗಳ ಕಾಲ ನಡೆದ ವಜ್ರಮಹೋತ್ಸವ ಅನೇಕ ವೈಶಿಷ್ಟ್ಯಗಳಿಂದ ಕೂಡಿತ್ತು. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಪರಿಷತ್ತಿನ ವೇದಿಕೆ ಕಲ್ಪಿಸಿತು. ಅಂತರ ಭಾರತಿ ಸಾಹಿತ್ಯ ಗೋಷ್ಠಿಯಲ್ಲಿ ಭಾರತದ ಅನೇಕ ಭಾಷೆಯ ವಿದ್ವಾಂಸರು, ಜ್ಞಾನಪೀಠ ಪ್ರಶಸ್ತಿ ವಿಜೇತರು ಭಾಗವಹಿಸಿದ್ದರು. ಪುಸ್ತಕ ಮತ್ತು ಪತ್ರಿಕಾ ಪ್ರದರ್ಶನ, ಪ್ರಾಚ್ಯವಸ್ತು ಪ್ರದರ್ಶನ, ಚಿತ್ರಕಲಾ ಪ್ರದರ್ಶನಗಳು ಏರ್ಪಟ್ಟಿದ್ದವು. ವಜ್ರಮಹೋತ್ಸವದ ಕಟ್ಟಡದ ಶಂಕುಸ್ಥಾಪನೆ ಮಾಡಲಾಯಿತು. ಕನ್ನಡ–ಕನ್ನಡ ನಿಘಂಟಿನ ೩ನೇ ಸಂಪುಟ ಬಿಡುಗಡೆ ಈ ಸಂದರ್ಭದಲ್ಲಿ ನಡೆಯಿತು. ‘ಕೌಸ್ತುಭ’ ಎಂಬ ಸಂಸ್ಮರಣ ಸಂಚಿಕೆಯನ್ನು ಕನ್ನಡ ಹಾಗೂ ಇಂಗ್ಲೀಷ್‌ನಲ್ಲಿ ಹೊರತರಲಾಯಿತು. ಹೊರನಾಡ ಕನ್ನಡ ಸಂಘ ಸಂಸ್ಥೆಗಳ ಸಭೆ, ಭಾರತದ ವಿವಿಧ ಭಾಷಾ ಸಾಹಿತ್ಯ ಅಕಾಡೆಮಿಗಳ ಅಧ್ಯಕ್ಷರ ಕಾರ್ಯದರ್ಶಿಗಳ ಸಭೆಗಳು ನಡೆದವು. ಜ್ಞಾನಪೀಠ ಪ್ರಶಸ್ತಿ ವಿಜೇತರಿಗೆ ಸನ್ಮಾನ, ಸಮ್ಮೇಳನಾಧ್ಯಕ್ಷರುಗಳಿಂದ ಶುಭ ಹಾರೈಕೆಯ ನುಡಿಗಳು. ಕನ್ನಡದ ಸರ್ವಾಂಗೀಣ ಪ್ರಗತಿಯ ಮುಂದಿನ ಹೆಜ್ಜೆಗಳು ಗೋಷ್ಠಿ ಹಾಗೂ ಕವಿಗೋಷ್ಠಿ ಇತ್ಯಾದಿ ಉಪಯುಕ್ತ ಕಾರ್ಯಕ್ರಮಗಳಿಂದ ವಜ್ರಮಹೋತ್ಸವ ಸಮಾರಂಭ ಬೆಂಗಳೂರಿನ ಕೋಟೆ ಪ್ರೌಢಶಾಲೆಯ ಸಭಾಂಗಣದಲ್ಲಿ ಯಶಸ್ವಿ ಮತ್ತು ವೈಶಿಷ್ಟ ಪೂರ್ಣವಾಗಿ ಜರುಗಿತು.

ಶ್ರೀ ಜಿ. ನಾರಾಯಣರ ೯ ವರ್ಷಗಳ ಅಧಿಕಾರಾವಧಿಯಲ್ಲಿ ನಾಲ್ಕು ಸಾಹಿತ್ಯ ಸಮ್ಮೇಳನಗಳು ನಡೆದವು. ೪೭ನೇ ಸಾಹಿತ್ಯ ಸಮ್ಮೇಳನ ಸುವರ್ಣ ಮಹೋತ್ಸವದ ಜೊತೆಗೆ (ದೇ. ಜವರೇಗೌಡರು ಸಮ್ಮೇಳನಾಧ್ಯಕ್ಷರಾಗಿ) ನಡೆಯಿತು. ೪೮ನೇ ಸಮ್ಮೇಳನದಲ್ಲಿ ಶ್ರೀಮತಿ ಜಯದೇವಿ ತಾಯಿ ಲಿಗಾಡೆಯವರು ಪ್ರಥಮ ಮಹಿಳಾಧ್ಯಕ್ಷೆಯಾಗಿ ಮಂಡ್ಯದಲ್ಲಿ ನಡೆಯಿತು. ೪೯ನೇ ಸಮ್ಮೇಳನ ಶ್ರೀ ಎಸ್.ವಿ. ರಂಗಣ್ಣನವರು ಸಮ್ಮೇಳನಾಧ್ಯಕ್ಷರಾಗಿ ಶಿವಮೊಗ್ಗದಲ್ಲಿ ೧೯೭೬ರಲ್ಲಿ ನಡೆಯಿತು, ಶಿವಮೊಗ್ಗದಲ್ಲಿ ಈ ಸಮ್ಮೇಳನ ನಡೆದಾಗ ‘ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ’ ಎಂದು ಕರೆದು ಅಖಿಲ ಭಾರತ ಮಟ್ಟಕ್ಕೆ ಏರಿಸಲಾಯಿತು.

೫೦ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನವನ್ನು ೧೯೭೮ರಲ್ಲಿ ನವದೆಹಲಿಯಲ್ಲಿ ನಡೆಸಿದರು. ಇಲ್ಲಿ ಡಾ॥ ಜಿ.ಪಿ. ರಾಜರತ್ನಂ ಅವರು ಸಮ್ಮೇಳನಾಧ್ಯಕ್ಷರು. ಭಾರತದ ಆಗಿನ ಪ್ರಧಾನ ಮಂತ್ರಿಗಳಾಗಿದ್ದ ಮಾನ್ಯ ಮೊರಾರ್ಜಿದೇಸಾಯಿಯವರು ಸಮ್ಮೇಳನದ ಉದ್ಘಾಟನೆ ಮಾಡಿದರು. ಬೆಂಗಳೂರು ಮತ್ತಿತರ ಕಡೆಯಿಂದ ಸಮ್ಮೇಳನಕ್ಕೆ ಹೊರಟ ಸದಸ್ಯರು ಸುಮಾರು ೨೦೦೦ಕ್ಕೂ ಹೆಚ್ಚು ಜನ. ಈ ಪ್ರತಿನಿಧಿಗಳನ್ನು ದೆಹಲಿಗೆ ಕರೆದೊಯ್ಯಲು ಮತ್ತು ಅಲ್ಲಿಂದ

ಓಂದಿರುಗಲು ಒಂದು ವಿಶೇಷ ರೈಲನ್ನು ಹೊರಡಿಸಿದರು. ಪ್ರತಿನಿಧಿಗಳಿಗೆ ಯಾವುದೇ ತೊಂದರೆ ಆಗಬಾರದೆಂದು ಅಂದಿನ ರೈಲ್ವೆ ಮಂತ್ರಿ ಮಧುದಂಡವತೆಯವರ ಸಹಕಾರ ಪಡೆಯಲಾಗಿತ್ತು. ದೆಹಲಿಯಲ್ಲಿ ಎಲ್ಲ ಪ್ರತಿನಿಧಿಗಳಿಗೂ ಅಚ್ಚುಕಟ್ಟಾದ ಊಟ ಮತ್ತು ವಸತಿಯನ್ನು ಏರ್ಪಡಿಸಲಾಗಿತ್ತು. ಅನೇಕ ಪ್ರಥಮಗಳನ್ನು ಸಾಧಿಸಿ ತೋರಿಸಿದ ಕ್ರಿಯಾಶೀಲ ವ್ಯಕ್ತಿತ್ವವುಳ್ಳ ಶ್ರೀ ಜಿ. ನಾರಾಯಣರು ಪರಿಷತ್ತಿನ ಕೀರ್ತಿ ಪತಾಕೆಯನ್ನು ರಾಷ್ಟ್ರಮಟ್ಟದಲ್ಲಿ ಹಾರಿಸಲು ದೆಹಲಿಯ ಸಮ್ಮೇಳನ ನೆರವಾಯಿತು. ಈ ಸಮ್ಮೇಳನ ಅನೇಕ ದೃಷ್ಟಿಯಿಂದ ಬಹುಕಾಲ ನೆನಪಿನಲ್ಲುಳಿಯುತ್ತದೆ.

ದೆಹಲಿಯಲ್ಲಿ ಸಮ್ಮೇಳನ ನಡೆಸಲು ಕಾರಣವನ್ನು ಶ್ರೀ ಜಿ. ನಾರಾಯಣರು ವಿವರಿಸಿದ್ದಾರೆ. ವಜ್ರಮಹೋತ್ಸವದ ಕಾರ್ಯಕ್ರಮಕ್ಕೆ ದೆಹಲಿಯಿಂದ ಶ್ರೀ.ಎ.ಎಸ್.ಕೆ. ರಾವ್ ಬಂದಿದ್ದರು. ಆಗ ಒಂದು ದಿನ ನಾರಾಯಣರ ಮನೆಗೆ ಬಂದಾಗ ಅವರೊಡನೆ ಮಾತನಾಡುತ್ತಾ ಜಿ. ನಾರಾಯಣರು ಪರಿಷತ್ತು ಈಗ ಎಲ್ಲರ ಕಣ್ಣಿಗೂ ಬಿದ್ದಿದೆ. ಅವರೂ ದಕ್ಷಿಣ ಎಂದರೆ ಮದರಾಸು ಎಂದು ಉತ್ತರದವರು ಭಾವಿಸಿದ್ದಾರೆ. ಕನ್ನಡ ಒಂದು ಭಾಷೆ ಎಂಬುದು ಇತರ ಭಾಷೆಯ ಅನೇಕ ಸಾಹಿತಿಗಳಿಗೆ, ಕವಿಗಳಿಗೆ ಗೊತ್ತಿಲ್ಲ. ಅವರು ಗುರುತಿಸದಿದ್ದರೂ ನಾವೇ ಅವರ ಬಳಿ ಹೋಗಿ ಗುರುತು ಮಾಡಿಕೊಳ್ಳಬೇಕು. ಕೇಂದ್ರ ಸರ್ಕಾರಕ್ಕೂ, ಕನ್ನಡ ಕರ್ನಾಟಕ ಎಂದರೆ ಗೌರವ ಭಾವನೆ ಮೂಡುವಂತೆ ಮಾಡಬೇಕು. ಇದಕ್ಕಿರುವ ಉಪಾಯ ಭಾರತದ ರಾಜಧಾನಿ ದೆಹಲಿಯಲ್ಲಿ ಒಮ್ಮೆ ವಿಜೃಂಭಣೆಯಿಂದ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಬೇಕು" ಎಂದು ಹೇಳಿದ ಅಭಿಪ್ರಾಯವನ್ನು ಶ್ರೀ ರಾವ್ ಒಪ್ಪಿದರು. ಈ ಹಿನ್ನೆಲೆಯೇ ದೆಹಲಿ ಸಮ್ಮೇಳನ. ಇದರಿಂದ ಕನ್ನಡದ ಮತ್ತು ಕರ್ನಾಟಕದ ಘನತೆ ಗೌರವ ಹೆಚ್ಚಿತು ಎಂಬುದನ್ನು ಮರೆಯುವಂತಿಲ್ಲ.

ಶ್ರೀಯುತರು ಪರಿಷತ್ತಿನ ಅಧ್ಯಕ್ಷರಾಗಿ ಚುನಾವಣೆಯಲ್ಲಿ ಗೆದ್ದು ಬಂದಾಗ ಸಾಹಿತ್ಯ ಕ್ಷೇತ್ರಕ್ಕೆ ರಾಜಕೀಯ ಪ್ರವೇಶವಾದಂತಾಯಿತು ಎಂದವರಿಗೆಲ್ಲಾ, ಕಾದು ನೋಡಿ ಎಂದು ಸಮಾಧಾನಕರ ವಾಗಿಯೇ ಉತ್ತರಕೊಟ್ಟು ಸಮರ್ಥವಾಗಿ ಯೋಜನಾಬದ್ಧವಾಗಿ ವ್ಯವಸ್ಥಿತವಾಗಿ ಕೆಲಸಮಾಡಿ ಪರಿಷತ್ತನ್ನು ಬಿಟ್ಟು ಬರುವ ವೇಳೆಗೆ ಬ್ಯಾಂಕಿನಲ್ಲಿ ಇಡಗಂಟು ಲೆಕ್ಕದಲ್ಲಿ ಮತ್ತು ಕರೆಂಟ್ ಅಕೌಂಟ್ ಲೆಕ್ಕದಲ್ಲಿ ೧೬,೭೩,೦೦೦/- ರೂಪಾಯಿಗಳನ್ನು ಇಟ್ಟಿದ್ದರು.

ವಜ್ರಮಹೋತ್ಸವಕ್ಕೆ ಸಂಬಂಧಿಸಿದ ವಿಷಯ

ವಜ್ರಮಹೋತ್ಸವದಂತಹ ಒಂದು ಒಳ್ಳೆಯ ಸಮಾರಂಭದ ಸಂದರ್ಭದಲ್ಲಿ ಪರಿಷತ್ತಿನ ಧೋರಣೆಯನ್ನು ಪ್ರತಿಭಟಿಸಿ ಡಾ॥ ಶ್ರೀರಂಗರ ನೇತೃತ್ವದಲ್ಲಿ ಕವಿ ಗೋಪಾಲಕೃಷ್ಣ ಅಡಿಗ, ಶ್ರೀಯುತರಾದ ಬಿ.ವಿ. ವೈಕುಂಠರಾಜು, ಕ.ವೆಂ. ರಾಜಗೋಪಾಲ್, ಕೋ. ಚೆನ್ನಬಸಪ್ಪ, ಬರಗೂರು ರಾಮಚಂದ್ರಪ್ಪ, ಹಂಪ ನಾಗರಾಜಯ್ಯ, ಸೂರ್ಯನಾರಾಯಣ ಚಡಗ, ಮಾವಿನಕೆರೆ ರಂಗನಾಥ್, ಎ.ಎಸ್.ಮೂರ್ತಿ, ಶ್ರೀಮತಿ ವಿಜಯಾ ಮೊದಲಾದವರು ಸಮಕಾಲೀನ ವಿಚಾರ ವೇದಿಕೆಯ ಸಾಹಿತಿಗಳು ಧರಣೆ ನಡೆಸಿದರು. ಪ್ರತಿಭಟನೆ ಮತ್ತು ಧರಣೆಗೆ ಕಾರಣ

(೧) ತುರ್ತು ಪರಿಸ್ಥಿತಿಯನ್ನು ಘೋಷಿಸಿದಾಗ ವಿರೋಧಿಸಿದ ಲೇಖಕ ಕಲಾವಿದರಿಗೆ ನೈತಿಕ ಬೆಂಬಲ ನೀಡದ ಪರಿಷತ್ತಿನ ಧೋರಣೆ (೨) ಪರಿಷತ್ತು ಸರ್ಕಾರದ ಅಂಗ ಸಂಸ್ಥೆಯಲ್ಲ, ನಿರ್ಗತಿಕ ಅಸಹಾಯಕ ಸಾಹಿತಿಗಳ ನೆರವಿಗೆ ಸ್ಥಾಯಿ ನಿಧಿ ಸ್ಥಾಪಿಸಿಲ್ಲ (೩) ಪುಸ್ತಕ ಪ್ರಕಟಣೆಯಲ್ಲಿ ಗುಣಮಟ್ಟದ ಕಡೆ ಗಮನ ಕೊಡುತ್ತಿಲ್ಲ ಅಲ್ಲದೆ ಪರಿಷತ್ತು ರಾಜಕೀಯ ವಾತಾವರಣವನ್ನು ಪುರಸ್ಕರಿಸಿದೆ ಎಂದು ಆಪಾದಿಸಿದರು.

ಉದ್ಘಾಟನಾ ಸಮಾರಂಭದಲ್ಲಿ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಜಿ. ನಾರಾಯಣರು ಪ್ರಾಸ್ತಾವಿಕ ಭಾಷಣದಲ್ಲಿ ಪ್ರತಿಭಟನೆ ಮಾಡಿದವರಿಗೆ ಈ ರೀತಿ ಸೌಮ್ಯವಾಗಿ ಉತ್ತರುಸುತ್ತಾ 'ಗಾಳಿಯ ಹೊಡೆತ ಬೆಳೆದ ಮರಕ್ಕಲ್ಲದೆ ಬೇರೆ ಮರಕ್ಕಲ್ಲ. ಬೃಹತ್ ವೃಕ್ಷವಾಗಿ ಬೆಳೆದಿರುವ ಪರಿಷತ್ತನ್ನು ಟೀಕಿಸುವುದು ಸಹಜ, ಎಂದರು. ಮುಂದಿನ ೫ ದಿನಗಳು ಯಾವ ತೊಡಕೂ ಇಲ್ಲದೆ ಸಮಾರಂಭ ಯಶಸ್ವಿಯಾಗಿ ನಡೆಯಿತು.

ಸಮಿತಿಗಳು

೧. ಪ್ರಾಚ್ಯವಸ್ತು ಸಂಶೋಧನಾ ಸಲಹಾ ಸಮಿತಿ
೨. ವಿಜ್ಞಾನ ಸಲಹಾ ಸಮಿತಿ
೩. ಗಮಕ ಕಲಾ ಸಾಹಿತ್ಯ ಸಲಹಾ ಸಮಿತಿ
೪. ಗ್ರಂಥ ಪ್ರಕಟನಾ ಸಲಹಾ ಸಮಿತಿ
೫. ಜನಪದ ಸಾಹಿತ್ಯ ಕಲಾ ಸಾಹಿತ್ಯ ಸಲಹಾ ಸಮಿತಿ
೬. ಮಹಿಳಾ ಸಲಹಾ ಸಮಿತಿ
೭. ಧ್ವನಿಮುದ್ರಣ ಸಲಹಾ ಸಮಿತಿ
೮. ಸಾಕ್ಷರತಾ ಪ್ರಚಾರ ಸಲಹಾ ಸಮಿತಿ
೯. ಸುವರ್ಣ ಮಹೋತ್ಸವ ಸಲಹಾ ಸಮಿತಿ
೧೦. ಮಹಾವೀರ ಜಯಂತಿ ಸಲಹಾ ಸಮಿತಿ
೧೧. ಉದಯೋನ್ಮುಖ ಲೇಖಕರ ಶಿಬಿರ ಸಲಹಾ ಸಮಿತಿ
೧೨. ಚಿತ್ರಕಲಾ ಪುಸ್ತಕ ಸಲಹಾ ಸಮಿತಿ
೧೩. ದತ್ತಿ ನಿಧಿ ಉಪನ್ಯಾಸ ಸಲಹಾ ಸಮಿತಿ
೧೪. ಸಿಬ್ಬಂದಿ ಸಲಹಾ ಸಮಿತಿ
೧೫. ಪುಸ್ತಕ ಭಂಡಾರದ ಸಾಹಿತ್ಯ ಸಲಹಾ ಸಮಿತಿ
೧೬. ಸಣ್ಣ ನಿಘಂಟುವಿನ ಸಲಹಾ ಸಮಿತಿ
೧೭. ಶೀಘ್ರಲಿಪಿ ಸಲಹಾ ಸಮಿತಿ
೧೮. ಗಮಕ ಕಲೆ ಮತ್ತು ಕೀರ್ತನಕಾರರ ಸಲಹಾ ಸಮಿತಿ
೧೯. ಸಂಘಸಂಸ್ಥೆಗಳ ಪ್ರತಿನಿಧಿಗಳ ಸಲಹಾ ಸಮಿತಿ
೨೦. ಹಾಸ್ಯ ಸಾಹಿತಿಗಳ ಸಲಹಾ ಸಮಿತಿ – ಇತ್ಯಾದಿ

ಉಪ ಸಮಿತಿಗಳು

೧. ರಂಗಮಂದಿರ ಉಪ ಸಮಿತಿ
೨. ಸುವರ್ಣ ಮಹೋತ್ಸವದ ಕಟ್ಟಡ ಸಲಹಾ ಸಮಿತಿ
೩. ಪರೀಕ್ಷಾ ಸಮಿತಿ
೪. ಅಚ್ಚುಕೂಟದ ಸಲಹಾ ಸಮಿತಿ
೫. ಗಮಕ ಶಿಕ್ಷಣ ಉಪಸಮಿತಿ
೬. ಮಹಿಳಾ ಉಪಸಮಿತಿ
೭. ಅಂಗರಚನೆ ತಿದ್ದುಪಡಿ ಉಪಸಮಿತಿ
೮. ಅಂತರ ಭಾರತಿ ಪುಸ್ತಕ ಪ್ರದರ್ಶನ
೯. ಹಳಗನ್ನಡ ಗ್ರಂಥಗಳ ಭಾವಾನುವಾದ

❑

ಮೌನದೊಳಗಣ ಮಹತ್ತು

■ ಪ್ರೊ. ಹಿ.ಶಿ. ರಾಮಚಂದ್ರಗೌಡ

ಶ್ರೀ ಜಿ. ನಾರಾಯಣ ಅವರು ನಮ್ಮ ನಡುವಿನ ಒಂದು ಪುರಾಣ. ಹಲವರಿಗೆ ಹಲವು ರೀತಿಯಲ್ಲಿ ಕಾಣುವ, ಅರ್ಥೈಸಿಕೊಳ್ಳಲು ಸಾಧ್ಯವಿರುವ ವ್ಯಕ್ತಿ. ಹಲವು ಕಡೆ ಅವರ ಬಗ್ಗೆ ಮಾತು ಬಂದಾಗ ಹಲವು ಅರ್ಥಗಳು ಬಂದಿವೆ. 'ಅವರಾ ಸಾ ಕನ್ನಡದ ನಾರಾಯಣ' ಅಂದರು ಒಬ್ಬರು. ಮತ್ತೊಬ್ಬರು 'ಟೋಪಿ ಹಾಕುತ್ತಾರಲ್ಲ ಅವರಲ್ಲವಾ ಸಾ' ಅಂದರು. ಇಲ್ಲ ಮಾರಾಯ ಜೀವನದಲ್ಲಿ ಅವರು ಯಾರಿಗೂ ಟೋಪಿಹಾಕಿದ್ದಿಲ್ಲ ಅಂದೆ. 'ಅಂಗಲ್ಲ ಸಾ, ಗಾಂಧಿ ಮನುಷ್ಯ ಅಂತ ಅಂಗಂದೆ' ಅಂದರು. ಮತ್ತೆಲ್ಲೊ ಒಂದು ಕಡೆ ಮಾತನಾಡುತ್ತಿದ್ದಾಗ 'ಗೊತ್ತು ಬಿಡಿ ಸಾ ಅವರು ಸ್ಮಾರ್ತ ಬ್ರಾಹ್ಮಣರಲ್ಲವೆ' ಅಂದರು ಒಬ್ಬ ಸಭ್ಯರು. ನನಗೆ ಆಶ್ಚರ್ಯವಾಯಿತು. ಇದೇನಿದು ಅಂತ. ಬಹುಶಃ ಜಿ. ನಾರಾಯಣ ಬಿಳಿಪಂಚೆ, ಬಿಳಿಲುಂಗಿ ಇವರನ್ನು ಮಿಸ್‌ಲೀಡ್ ಮಾಡಿರಬಹುದೆ? ಹಾಗಂದುಕೊಂಡೆ. ಇದೂ ಇರಬಹುದು: ಅವರು ಬಿಳಿಯಂಗಿ, ಅಂಗಿ ಮತ್ತು ಟೋಪಿಯನ್ನು ಹಾಕಿಕೊಂಡು, ತುಂಬ ಎತ್ತರವೂ ತುಂಬ ಕುಳ್ಳೂ ಅಲ್ಲದ ತುಂಬ ಸ್ಮಾರ್ಟ್ ಆಗಿ ಕಾಣುತ್ತಿದ್ದುದನ್ನು ನೋಡಿ ಇವರು ಸ್ಮಾರ್ತರು ಅಂದು ಕೊಂಡಿರಬಹುದು.

ಹಿರಿಯರೊಬ್ಬರು ಹೇಳುತ್ತಿದ್ದರು 'ಸರಿಯಾಗಿ ಹೇಳಬೇಕೆಂದರೆ ಅವರು ಬೆಂಗಳೂರು ನಾರಾಯಣ' ಅಂತ. ನಾನು ಸುಮ್ಮನೆ ಕೇಳಿದೆ 'ಹಾಗಿದ್ದರೆ ವೈಕುಂಠದ ನಾರಾಯಣನಿಗೂ ಇವರಿಗೂ ಏನು ವ್ಯತ್ಯಾಸ ಅಂತ'. ಅದು ಬಿಡಿ ವೈಕುಂಠದ ನಾರಾಯಣ ಅಂದ್ರೆ ಅವನು

ಬೇರೆ ಬೇರೆ ಥರದ ವ್ಯವಹಾರ ಇಟ್ಟುಕೊಂಡವನು. ಈ ನಮ್ಮ ಜಿ. ನಾರಾಯಣರು ಅಂದ್ರೆ ತುಂಬ ಶುದ್ಧ ಮನುಷ್ಯ. ಆ ನಾರಾಯಣನ ಥರ ರಗಳೆ ಮನುಷ್ಯ ಅಲ್ಲ ಅಂದರು. ಬೆಂಗಳೂರಿಗೆ ಮೇಯರ್ ಆಗಿದ್ದರು ಅಂತೀರಿ ಅಲ್ಲಿ ಅಲ್ಪಸ್ವಲ್ಪವಾದರೂ ರಗಳೆ ಮಾಡಿರಬೇಕಲ್ಲ ಅಂದೆ ನಾನು. ಛೇ ಏನ್ ಹೇಳ್ತೀರಿ ಬೆಂಗಳೂರಿಗೇ ಸಭ್ಯತೆ ಕಲಿಸಿದ ಮನುಷ್ಯ ನಮ್ಮ ಜಿ. ನಾರಾಯಣ. ಈಗಿನ ಬೆಂಗಳೂರಿಗೆ ಈ ಮೇಯರ್‌ಗಳಿಗೆ ಯಾವ ಮಾನ ಮರ್‍ಯಾದೆ ಇದೆ...... ಮುಂದೆ ಕ್ಯೂ ನಿಂತುಕೊಂಡವರಂತೆ ಕಾಣುತ್ತಾರೆ ಈ ಹೊತ್ತಿನ ಮೇಯರ್‌ಗಳು ಅಂದರು.

ಒಮ್ಮೆ ಧಾರವಾಡ ಕಡೆಗೆ ಹೋದಾಗ ಇದೇ ಜಿ. ನಾರಾಯಣ ಅವರ ಬಗ್ಗೆ ಪ್ರಸ್ತಾಪ ಬಂತು. ಅಲ್ಲಿನ ಕನ್ನಡ ಹೋರಾಟಗಾರರು ಹೇಳಿದರು 'ಸುಮ್ಮನೆ ತಿಳ್ಕೋ ಬ್ಯಾಡ್ರಿ, ತುಂಬ ಶ್ಯಾಣೆ ಮನುಷ್ಯ, ಏನ್ ಮಾಡಬೇಕೋ ಅದ್ನ ಬರೋಬರಿ ಮಾಡ್ತಾರೆ ನೋಡ್ರಿ ಬೆಂಗಳೂರಿನ ಮಂದೀನ ಹಿಂಗ್ರೀ' ಅಂದ್ರು. ಅವರ ಮಾತಿನೊಳಗೆ ಏನೇನು ಅರ್ಥಗಳಿದ್ದವೋ ನನಗೆ ತಿಳಿಯಲಾಗಲಿಲ್ಲ. ಗುಲಬರ್ಗಾದ ಕಡೆಗೆ ಹೋಗಿದ್ದಾಗ ಹೇಳಿದ ಮಾತು 'ಉತ್ತಮ ಕನ್ನಡಿಗ ಬಿಡ್ರಿ' ಅಂದರು. ಮಂಡ್ಯದ ಜನರನ್ನು ಕೇಳಿದರೆ ಜಿ. ನಾರಾಯಣ ಸಗಟು ನಮ್ಮವರ ಅನ್ನುತ್ತಾರೆ, ಬೀಗುತ್ತಾರೆ. ಮಂಡ್ಯದ ಕೆ.ವಿ ಶಂಕರಗೌಡರು, ವೀರಣ್ಣಗೌಡರು, ಜಿ. ಮಾದೇಗೌಡರು, ಎಚ್.ಎಲ್. ನಾಗೇಗೌಡರು ಹಾಗೂ ಜಿ. ನಾರಾಯಣ ಅವರು ನಮ್ಮ ಜ್ಞಾನದ ಮಂಡಿ ಇದ್ದ ಹಾಗೆ. ಅವರನ್ನು ಬಿಟ್ಟು ಮಂಡ್ಯವನ್ನು ಗ್ರಹಿಸುವುದು ಹೇಗೆ ಅನ್ನುತ್ತಾರೆ. ಅಲ್ಲಿ ಜಾತಿಯ ಅಭಿಮಾನವಿಲ್ಲ, ಸಾಧನೆಯ ಸಾಧಕರ ಬಗ್ಗೆಯ ಹೆಮ್ಮೆ. ಮಂಡ್ಯದ ಜನ ಅಷ್ಟೇ ಆಪ್ತವಾಗಿ ಸರ್.ಎಂ. ವಿಶ್ವೇಶ್ವರಯ್ಯ ಮತ್ತು ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್ ಅವರನ್ನು ಗೌರವಪೂರ್ವಕವಾಗಿ ನೆನೆಸಿಕೊಳ್ಳುತ್ತಾರೆ.

ಜಿ. ನಾರಾಯಣ ಅವರು ಬೆಂಗಳೂರು ಮೇಯರ್ ಆಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದರು. ಅವರು ಇನ್ನೂ ಅನೇಕ ಸಂಸ್ಥೆಗಳಲ್ಲಿ ಗೌರವದ ಸ್ಥಾನದಲ್ಲಿದ್ದಾರೆ. ಅವರು ಯಾರೂ ಬೇಡ ಎನ್ನದ ಮನುಷ್ಯ. ಅವರು ಎಲ್ಲೆಲ್ಲಿ ಇದ್ದರು ಎಂಬುದು ಮುಖ್ಯವಲ್ಲ. ಇದ್ದಲ್ಲಿ ಅವರು ಹೇಗಿದ್ದರು, ಏನು ಮಾಡಿದರು ಎಂಬುದು ಮುಖ್ಯ. ಏನೂ ಗಲಾಟೆ ಮಾಡಿಕೊಳ್ಳದೆ, ಏನು ಮಾಡಬೇಕೋ ಯಾವುದು ಜನರಿಗೆ ಹಿತವೋ ಅದನ್ನು ಜಿ. ನಾರಾಯಣರು ತಟ್ಟನೆ ಸಾಧಿಸಿಬಿಡುತ್ತಾರೆ. ಇವರನ್ನು ನಾನು ವಾಮನ ಮೂರ್ತಿ ಎಂದು ಕರೆಯುವುದಿಲ್ಲ. ಆ ವಾಮನ ವಿಷ್ಣುವಿನ ಕ್ರೂರ ರೂಪಿ, ರೈತರ ಪರಮಶತ್ರು. ರೈತರ ಪರವಾದ ಬಲಿಚಕ್ರವರ್ತಿಯನ್ನು ಭೂಮಿಗೆ ತುಳಿದು, ಭೋಗಜೀವಿಗಳ ಸವಲತ್ತುಗಳನ್ನು ಉಳಿಸಿಕೊಟ್ಟವನು. ಇತ್ತೀಚಿನ ದಿನಗಳಲ್ಲಿ 'ಸೈಲೆಂಟ್ ಕಿಲ್ಲರ್ಸ್' ಅಂತ ಒಂದು ಭಯಾನಕವರ್ಗ ಹುಟ್ಟಿಕೊಂಡಿದೆ. ಅವರ ಕೃತ್ಯವಷ್ಟೆ ಕಾಣುತ್ತದೆ, ಅವರು ಕಾಣುವುದಿಲ್ಲ. ಜಿ. ನಾರಾಯಣ ಅವರು ತುಂಬ ಸೈಲೆಂಟ್, ಅವರಲ್ಲಿ ಯಾವ ಬಗೆಯ ಕ್ರೂರತೆಯೂ ಇಲ್ಲ. ಅವರನ್ನು ನಾವು 'ಸೈಲೆಂಟ್ ಕ್ರಿಯೇಟರ್' ಎಂದು

ಕರೆಯಬಹುದು. ಮೌನದೊಳಗೆ ಮನಸ್ಸನ್ನು ಸೃಷ್ಟಿಸಬಹುದೆಂಬುದು ಅವರ ನಿಲುವಿದ್ದಂತೆ ಕಾಣುತ್ತದೆ.

ಈಗ ಜಿ. ನಾರಾಯಣ ಅವರು ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರಾಗಿದ್ದಾರೆ. ದಿ.ಎಚ್.ಎಲ್. ನಾಗೇಗೌಡರಂಥ ಜಾನಪದ ದೈತ್ಯನ ಬೆನ್ನ ಹಿಂದೆ ಹೊರಟಿದ್ದಾರೆ. ಹೇಗೆ ಕಾಣಿಸಿಕೊಳ್ಳುತ್ತಾರೆ, ಎಂಬುದೆ ಅವರ ಪ್ರಸ್ತುತ ಅಸ್ತಿತ್ವದ ಪ್ರಶ್ನೆಯಾಗುತ್ತದೆ. ಈ ಸಂಸ್ಥೆ ಸರ್ಕಾರದಿಂದ ಅನುದಾನ ಪಡೆದುಕೊಳ್ಳುತ್ತದೆ ನಿಜ, ಅದು ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಇದ್ದಹಾಗೆ. ಸಂಸ್ಥೆಯ ವ್ಯಾಪ್ತಿ ಭೂಮಿಯ ಅಗಲ ಆಕಾಶದ ಎತ್ತರ ಇದೆ. ಈ ಮಧ್ಯೆ ಜಿ. ನಾರಾಯಣ ನಿಂತಿದ್ದಾರೆ. ಇದು ಜಿ. ನಾರಾಯಣ ಅವರ ಜೀವನದ ಹೊಸ ಶಕೆ, ಹೊಸ ಆಯಾಮ. ಅವರ ಖಾತೆಯಲ್ಲಿ ಮಹತ್ವದ ಸಾಧನೆಯ ಲೆಕ್ಕವಿದೆ. ದಿ. ಎಚ್.ಎಲ್. ನಾಗೇಗೌಡರು ಕೂಡ ಒಂದು ಮಹತ್ವದ ಸಾಧನೆಯ ಲೆಕ್ಕವನ್ನು ಕೊಟ್ಟು ಹೋಗಿದ್ದಾರೆ. ಈ ಒಬ್ಬರನ್ನು ಒಬ್ಬರಿಂದ ಭಾಗಿಸಲಾಗುವುದಿಲ್ಲ, ಕೂಡಿಸಿದರೆ ಎಷ್ಟಾಗುತ್ತದೆ, ಮೇಲೆ ಜಿ. ನಾರಾಯಣರು ಎಷ್ಟು ಸೇರಿಸುತ್ತಾರೆ? ಕಾಯೋಣ. ಅದನ್ನು ತಾನೆ ತಪಸ್ಸು ಎಂದು ಕರೆಯುವುದು.

❑

ಯೋಜನೆಗಳ ಹರಿಕಾರ : ಕರ್ನಾಟಕ ಪತ್ರಿಕಾ ಅಕಾಡೆಮಿ ಅಧ್ಯಕ್ಷ ಶ್ರೀ ಜಿ. ನಾರಾಯಣ

■ ಮುಕುಂದ ಪುರೋಹಿತ್

ಕನ್ನಡ ಸಾಂಸ್ಕೃತಿಕ ಕ್ಷೇತ್ರದಲ್ಲಿ ಶ್ರೀ ಜಿ. ನಾರಾಯಣ ಅವರದು ಒಂದು ಗಟ್ಟಿಯಾದ ಹೆಸರು. ಪ್ರಚಾರಕ್ಕೆ ಹೆಚ್ಚು ಒತ್ತು ಕೊಡದ ಇವರ ಗುಣಗಳಲ್ಲಿ ಪ್ರಮುಖವಾಗಿರುವುದು ಕ್ರಿಯಾಶೀಲತೆ. ಹೀಗಾಗಿ ಜಿ. ನಾರಾಯಣ ಅವರು ವಹಿಸಿಕೊಂಡ ಯಾವ ಅಧಿಕಾರವಲ್ಲೇ ಆಗಲಿ ಅವರು ಸೋಲು ಕಂಡಿಲ್ಲ ಎಂಬುದು ಗಣನೀಯ ಅಂಶ. ಅದಕ್ಕೆ ಮುಖ್ಯ ಕಾರಣ ಅವರ ಜನಸ್ಪಂದನ ಹಾಗೂ ಮುಂದಾಲೋಚನೆಯುಳ್ಳ ಯೋಜನೆಗಳ ತಯಾರಿಗಳ ವೈಖರಿ ಎಂಬುದು ಗಮನಿಸಬೇಕಾದ ಅಂಶ.

ಕರ್ನಾಟಕ ಪತ್ರಿಕಾ ಅಕಾಡೆಮಿ ಜನಿಸಿದ್ದೆ ಒಂದು ಸುಸಂದರ್ಭದಲ್ಲಿ. ಎಂಬತ್ತರ ದಶಕದಲ್ಲಿ ಹಿರಿಯ ಪತ್ರಕರ್ತ ರಾದ ಶ್ರೀ ಎನ್. ಅರ್ಜುನದೇವ ಅವರು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾಗಿದ್ದರು. ಆ ಸಂದರ್ಭದಲ್ಲಿ ಹಾಸನದಲ್ಲಿ ಪತ್ರಕರ್ತರ ರಾಜ್ಯಮಟ್ಟದ ಸಮ್ಮೇಳನ ಜರುಗಿತು. ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ್ದ ಅಂದಿನ ಮುಖ್ಯಮಂತ್ರಿ ಶ್ರೀ ಆರ್. ಗುಂಡೂ ರಾವ್ ಅವರಲ್ಲಿ ಪತ್ರಕರ್ತರಿಗಾಗಿ ಒಂದು ಅಕಾಡೆಮಿ ಸ್ಥಾಪನೆಯಾಗಬೇಕೆಂದು ಸಂಘ ಬೇಡಿಕೆಯನ್ನು ಮುಂದಿಟ್ಟಿತು. ಬೇಡಿಕೆಗೆ ಮುಖ್ಯಮಂತ್ರಿಯವರು 'ಅಸ್ತು' ಎಂದೇಬಿಟ್ಟರು. ಅದರ ಪರಿಣಾಮವಾಗಿ ಸರ್ಕಾರದ ಮಟ್ಟದಲ್ಲಿ ಕರ್ನಾಟಕ ಪತ್ರಿಕಾ ಅಕಾಡೆಮಿ ೧೯೮೧ರಲ್ಲಿ ಸ್ಥಾಪನೆಯಾಯಿತು. ಪ್ರಥಮ ಅಧ್ಯಕ್ಷರಾಗಿ ಮೈಸೂರು ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮುಖ್ಯಸ್ಥರಾಗಿದ್ದ

ಪ್ರೊ. ನಾಡಿಗ್ ಕೃಷ್ಣಮೂರ್ತಿ ಅವರು ನೇಮಕವಾದರು. ತದನಂತರ ಶ್ರೀ ಖಾದ್ರಿ ಶಾಮಣ್ಣ ಅವರು ಅಧ್ಯಕ್ಷರಾದರು.

ಹಿರಿಯ ಪತ್ರಕರ್ತ ಖಾದ್ರಿ ಶಾಮಣ್ಣ ಅವರು ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಸರ್ಕಾರ ಅಕಾಡೆಮಿಗೆ ನೀಡುತ್ತಿದ್ದ ಅನುದಾನ ಕೇವಲ ಒಂದು ಲಕ್ಷ ಮಾತ್ರ. ಅದು ಸಾಲದೆಂಬುದು ಸ್ಪಷ್ಟವಾದರೂ ಶ್ರೀ ಖಾದ್ರಿ ಅವರು ಅದರಲ್ಲೇ ಸಿಬ್ಬಂದಿ, ಕಚೇರಿ ಸ್ಥಾಪನೆ, ತರಬೇತಿ ಶಿಬಿರ ವಿಚಾರ ಸಂಕಿರಣ ಮುಂತಾದವುಗಳನ್ನು ನಡೆಸಿದರು. ಈ ಹಣ ಅಕಾಡೆಮಿ ಕಾರ್ಯಶೀಲತೆಗೆ ಸಾಲದೆಂದು ಮನವರಿಕೆಯಾದಾಗ, ಮುಂದಿನ ಅಧ್ಯಕ್ಷರು ಹೆಚ್ಚು ಕೆಲಸ ಮಾಡಬೇಕೆಂದಾದರೆ ಸರ್ಕಾರ ಅನುದಾನದ ಹಣವನ್ನು ಹೆಚ್ಚಿಸಬೇಕೆಂದು ಆಗ್ರಹಿಸಿ, ತಾವು ನಿರ್ಗಮಿಸುತ್ತಿದ್ದಾಗಲೇ ಐದು ಲಕ್ಷ ರೂಗಳ ಅನುದಾನ ಅಕಾಡೆಮಿಗೆ ಬರುವಂತೆ ಮಾಡಿದರು. ಆಗ ಶ್ರೀ ಜಿ. ನಾರಾಯಣ ಅವರು ಆಯ್ಕೆಯಾಗುತ್ತಾರೆಂಬ ಕಲ್ಪನೆಯೂ ಇರಲಿಲ್ಲ.

ಶ್ರೀ ಜಿ. ನಾರಾಯಣ ೧೯೮೭ರಲ್ಲಿ ಕರ್ನಾಟಕ ಪತ್ರಿಕಾ ಅಕಾಡೆಮಿಯ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡರು.

ಶ್ರೀ ಜಿ. ನಾರಾಯಣ ಅವರಿಗೆ ಅಕಾಡೆಮಿಯ ಪರಿಚಯವಿತ್ತಾದರೂ ಅದರ ಕಾರ್ಯವೈಖರಿಯ ಬಗ್ಗೆ ಹೆಚ್ಚು ಅರಿವಿರಲಿಲ್ಲ. ಅಕಾಡೆಮಿಗೆ ಅಧ್ಯಕ್ಷರಾಗಿ ಬಂದನಂತರ ಅಂದಿನ ಕಾರ್ಯದರ್ಶಿ ಎಸ್.ಎಚ್. ರಾಜಣ್ಣ ಅವರಿಂದ ಅಕಾಡೆಮಿಯ ಸ್ಥೂಲ ಪರಿಚಯವನ್ನು ಮಾಡಿಕೊಂಡು, ಕಾರ್ಯಕ್ರಮದ ವಿವರ ಪಡೆದರು. ಒಮ್ಮೊಮ್ಮೆ ನನ್ನನ್ನು ಅವರ ಕೂಡಿಗೆ ಕರೆಸಿಕೊಂಡು ಅಕಾಡೆಮಿಯ ಬಗ್ಗೆ ಹೆಚ್ಚಿನ ವಿವರಗಳನ್ನು ಪಡೆಯುತ್ತಿದ್ದರು. ಅಧ್ಯಕ್ಷರಿಗೆ ನಾನು ಜಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ಕೆಲಸ ಮಾಡಿದಾಗಿನಿಂದಲೂ ಪರಿಚಯವಿದ್ದು ನನ್ನ ಸ್ವಭಾವವನ್ನು ಅರಿತಿದ್ದರಿಂದ ತಮ್ಮ ಮನೆಗೂ ಆಹ್ವಾನಿಸಿ ಅಕಾಡೆಮಿಯ ಕಾರ್ಯವಿಧಾನದ ಪರಿಚಯ ಮಾಡಿಕೊಂಡರು. ಹೀಗೆ 'ಕೆಲವಂ ಬಲ್ಲವರಿಂದ ಕಲ್ತು' ಎಂಬಂತೆ ಅನೇಕರಿಂದ ಅನೇಕ ವಿಚಾರಗಳನ್ನು ಅರಿತು ಸಾಂಸ್ಕೃತಿಕ ಕ್ಷೇತ್ರದ ಹಿರಿಯರೊಡನೆ ತಾವು ಮಾಡಬಹುದಾದ ಕೆಲಸಗಳ ಬಗ್ಗೆ ಯೋಜನೆಗಳ ಬಗ್ಗೆ ಚರ್ಚಿಸಿ ತಮ್ಮದೇ ಆದ ಕ್ರಿಯಾಶೀಲ ಯೋಜನೆಗೆ ಅಡಿಪಾಯ ಹಾಕಲು ಪ್ರಯತ್ನಿಸಿದರು. ಆ ಸಂದರ್ಭದಲ್ಲಿ ಶ್ರೀ ನಾರಾಯಣ ಅವರು ಹಿರಿಯ ಪತ್ರಕರ್ತರ, ಹಿರಿಯ ಸಾಹಿತಿಗಳ ಸಾಂಸ್ಕೃತಿಕ ಕ್ಷೇತ್ರದ ದಿಗ್ಗಜರ ಸಲಹೆಗಳನ್ನು ತೆಗೆದುಕೊಳ್ಳುತ್ತಿದ್ದರು. ತಮ್ಮ ಯೋಜನೆಗಳನ್ನು ಅವರ ಮುಂದಿಟ್ಟು ಪೂರಕವಾದ ಸಲಹೆಗಳನ್ನು ಸ್ವೀಕರಿಸಿ, ಜಾರಿಗೆ ತರುವಲ್ಲಿ ಸಾಧಕ ಬಾಧಕಗಳನ್ನು ವಿಶ್ಲೇಷಿಸಿ ಕಾರ್ಯಕ್ರಮ ಹಮ್ಮಿಕೊಳ್ಳುವ ವೈಶಿಷ್ಟ್ಯ ಅವರದು. ಹೀಗಾಗಿ ಅವರ ಯೋಜನೆಗಳಿಗೆ ಗುಣಗಳು ಸ್ಪಷ್ಟವಾಗಿ ಮೂಡಿ ಯೋಜನೆಗಳು ಜಾರಿಗೆ ಬರುವಲ್ಲಿ ಯಶಸ್ವಿಯಾಗುತ್ತಿದ್ದುವು.

ಈ ದಿಶೆಯಲ್ಲಿ ಅಕಾಡೆಮಿ ಅಧ್ಯಕ್ಷರಾಗಿ ಜಿ. ನಾರಾಯಣ ಅವರು ಕೈಗೊಂಡ ಮೊದಲ ಕೆಲಸವೆಂದರೆ ಮೂರು ವರ್ಷದ ತಮ್ಮ ಅಧ್ಯಕ್ಷ ಅವಧಿಯಲ್ಲಿ (೧೯೮೭–೧೯೯೦) ನಡೆಸಬಹುದೆಂದು ಯೋಜಿಸಿ ರೂಪಿಸಿದ ತ್ರೈವಾರ್ಷಿಕ ಯೋಜನೆ – ೧೯೮೭ – ೧೯೯೦

ಕರಡು ಪ್ರತಿ. ಇದರಲ್ಲಿ ಅಕಾಡೆಮಿ ಮೂರು ವರ್ಷ ನಿರಂತರವಾಗಿ ಮಾಡಬಹುದಾದ ೨೧ ಅಂಶಗಳುಳ್ಳ ವಿವಿಧ – ವೈಶಿಷ್ಟ್ಯಪೂರ್ಣ ಕಾರ್ಯಗಳು ಅಡಗಿದ್ದುದು ಒಂದು ವಿಶೇಷ, ಇದೆಲ್ಲವನ್ನು ತಮ್ಮ ಕ್ರಿಯಾಶೀಲತೆಗೆ ಇಂಬು ಕೊಡುವ ಆಪ್ತರ ವಲಯಕ್ಕೆ – ಅಕಾಡೆಮಿಯ ಕಾರ್ಯದರ್ಶಿಗಳಿಗೆ ತೋರಿಸಿ ಚರ್ಚಿಸಿ ಇದೆಲ್ಲವನ್ನು ಒಂದು ಚೌಕಟ್ಟಿನಲ್ಲಿ ಜಿಂಜಿಸಿ ೧೯೮೭ರ ಸೆಪ್ಟೆಂಬರ್‌ನಲ್ಲಿ ನಡೆದ ಅಕಾಡೆಮಿಯ ಸರ್ವಸದಸ್ಯ ಸಭೆಯ ಮುಂದೆ ಮಂಡಿಸಿದರು.

ಸರ್ವಸದಸ್ಯರ ಸಭೆ ಈ ಯೋಜನೆಯನ್ನು ಕಂಡು ಹೌಹಾರಿದ್ದೂ ಉಂಟು, ಸಂತೋಷ ಪಟ್ಟಿದ್ದೂ ಉಂಟು. ಇದೆಲ್ಲವನ್ನೂ ನಡೆಸಲು ಸಾಧ್ಯವೇ? ಎಂಬ ಸಂಶಯವನ್ನು ವ್ಯಕ್ತಪಡಿಸಿದವರೂ ಅಲ್ಲಿದ್ದರು. ಶ್ರೀ ಜಿ. ನಾರಾಯಣ ಅವರ ಕಾರ್ಯನಿಷ್ಠೆಯ ಬಗ್ಗೆ – ಸಾಮರ್ಥ್ಯದ ಬಗ್ಗೆ ಯಾರಿಗೂ ಅಪನಂಬಿಕೆ ಇರಲಿಲ್ಲ. ಆದರೆ ಕಾರ್ಯಯೋಜನೆಯ ಜಾರಿಗೆ ಕೆಲವು ಅನುಮಾನಗಳಿತ್ತು ಅದು ಸಹಜವೂ ಕೂಡ. ಕಾರಣ ಅಂದಿನ ಸಿಬ್ಬಂದಿಗಳ ಸಂಖ್ಯೆ ಬೆರಳೆಣಿಕೆಯಷ್ಟು, ವಾರ್ಷಿಕ ಅನುದಾನ ಕೇವಲ ಐದು ಲಕ್ಷ ಮುಂತಾದವು. ಸದಸ್ಯರು ಈ ಬಗ್ಗೆ ಚರ್ಚಿಸಿದರು.

ಅಧ್ಯಕ್ಷರು ಒಂದೇ ಮಾತು ಹೇಳಿದರು. ತಾವುಗಳು ಹೇಳುವುದೆಲ್ಲ ಸರಿ, ಒಪ್ಪಿಕೊಳ್ಳುವೆ. ಜನಬಲ, ಧನಬಲವನ್ನು ಪ್ರಯತ್ನಿಸೋಣ. ಈ ಯೋಜನೆಗೆ ಸರ್ವಸದಸ್ಯರ ಒಪ್ಪಿಗೆ ಇದೆಯೊ ತಿಳಿಸಿ. ಎಲ್ಲರ ಒಪ್ಪಿಗೆ ಇದ್ದಲ್ಲಿ ಕಷ್ಟವೇನಿಲ್ಲ. ೨೧ ಅಂಶಗಳ ಕಾರ್ಯಕ್ರಮಗಳಲ್ಲಿ ೧೫ ಅಂಶಗಳು ಪೂರ್ಣವಾಗಿ ಅಚ್ಚುಕಟ್ಟಾಗಿ ಜಾರಿಗೆ ಬರಲಿ ಸಾಕು. ನಾವೊಂದು ಕಾರ್ಯಕ್ರಮ ಹಾಕಿಕೊಂಡಾಗ ಅದಕ್ಕೆ ಒಂದು ರೂಪಿತ ಯೋಜನೆ ಇರಬೇಕು. ಅದಕ್ಕಾಗಿ ಇದರ ಸೃಷ್ಟಿ. ನಾನೇ ಎಲ್ಲವನ್ನೂ ಮಾಡುವೆ ಎಂಬ ಭ್ರಮೆ ನನಗಿಲ್ಲ. ನಿಮ್ಮೆಲ್ಲರ ಸಹಕಾರ ಜೊತೆಗೆ ಸಾಂಸ್ಕೃತಿಕ ಕ್ಷೇತ್ರದ ದಿಗ್ಗಜರ ಸಹಕಾರ, ನನ್ನ ಕನ್ನಡ ಸಾಹಿತ್ಯ ಪರಿಷತ್ತಿನ ಅನುಭವ, ಅಲ್ಲಿ ನನಗೆ ಸಹಕರಿಸಿದ ಅನೇಕರ ಸಹಾಯ ಪಡೆಯೋಣ, 'ಪ್ರಯತ್ನ ನಮ್ಮದು ಫಲಾಫಲ ಅವನದು' ಎಂದು ಸದಸ್ಯರ ಮನವೊಲಿಸಿದರು. ಸರ್ವಸದಸ್ಯರ ಸಭೆಯ ಒಪ್ಪಿಗೆ ದೊರೆಯಿತು. ತ್ರೈವಾರ್ಷಿಕ ಯೋಜನೆಗೆ ಚಾಲನೆ ಸಿಕ್ಕ ತಕ್ಷಣವೇ ಹಸಿರು ಬಾವುಟವನ್ನು ಹಾರಿಸಿಯೇಬಿಟ್ಟರು ಅಧ್ಯಕ್ಷ ಶ್ರೀ ಜಿ. ನಾರಾಯಣ.

ಅಕಾಡೆಮಿಯ ತ್ರೈವಾರ್ಷಿಕ ಯೋಜನೆಗೆ ಚಾಲನೆ ಸಿಕ್ಕಾಕ್ಷಣ ಕಾರ್ಯದರ್ಶಿ ಎಸ್.ಎಚ್. ರಾಜಣ್ಣ ಹಾಗೂ ಸಿಬ್ಬಂದಿಗಳು ಚುರುಕಾದರು. ಯೋಜನೆಯ ಉದ್ಘಾಟನಾ ಕಾರ್ಯಕ್ರಮವನ್ನು ಅದ್ದೂರಿಯಿಂದ ಮಾಡಲು ಏರ್ಪಾಡು ಮಾಡಿಕೊಂಡರು. ಇದಕ್ಕೆ ಓಡಾಡುವ ಜನರ ಅಗತ್ಯವಾಗಿತ್ತು. ಇದಕ್ಕಾಗಿ ಶ್ರೀ ಜಿ. ನಾರಾಯಣರ ಕಾರ್ಯಕರ್ತರ ಪಡೆ ಸಿದ್ಧವಾಗಿತ್ತು. ಅವರೆಲ್ಲರನ್ನೂ ಸೇರಿಸಿ ಅಕಾಡೆಮಿಯ ಕಾರ್ಯಕ್ರಮವನ್ನು ವಿವರಿಸಿ ಕಾರ್ಯಕ್ರಮಕ್ಕೆ ಸಹಕಾರ ಕೋರಿದರು. ಕಾರ್ಯಕರ್ತರಲ್ಲಿ ಎಲ್ಲರೂ ನಾಲ್ಕು ಅಂಕಿ ಸಂಬಳದ ಪ್ರತಿಭಾವಂತ ವ್ಯಕ್ತಿಗಳೇ ಆದರೂ ಜಿ. ನಾರಾಯಣ ಅವರ ಕೆಲಸವೆಂದರೆ ಸೊಂಟಕ್ಕೆ ಪಟ್ಟಿ ಕಟ್ಟಿ ಹೇಳಿದ ಕೆಲಸವನ್ನು ಚಾಚೂ ತಪ್ಪದಂತೆ ಲೋಪವಿಲ್ಲದೆ ಮಾಡುವವರಿದ್ದರು. ಅಲ್ಲಿ ಆ ಕಾರ್ಯಕರ್ತರಿಗೆ ತಾವು ತಮ್ಮ ಪ್ರತಿಷ್ಠೆ ಎಂಬ ಹಮ್ಮು ಬಿಮ್ಮುಗಳಿಲ್ಲ. ನಾರಾಯಣರ ಕೆಲಸವೆಂದರೆ ಪ್ರಾಮಾಣಿಕತೆಯಿಂದ

ಮಾಡುವುದೊಂದೇ ಅವರಿಗೆ ಗೊತ್ತಿರುವ ಅಂಶ. ಹೀಗಾಗಿ ಅವರಲ್ಲಿ ಇನ್ನೂ ಅನೇಕರು ಪ್ರಾರಂಭದಿಂದಲೂ ಉಳಿದುಕೊಂಡಿದ್ದಾರೆ.

ಇಂತಹ ಕಾರ್ಯಕರ್ತರ ಸಹಕಾರದಿಂದ, ಪತ್ರಿಕೋದ್ಯಮ ಮತ್ತು ಸಾಂಸ್ಕೃತಿಕ ದಿಗ್ಗಜರ ಹಾಗೂ ಅಕಾಡೆಮಿ ಸದಸ್ಯರ ಸಹಕಾರದಿಂದ ಗಾಂಧಿ ಜಯಂತಿಯ (೨-೧೦-೧೯೮೭) ಶುಭದಿನದಂದು ಕರ್ನಾಟಕ ಪತ್ರಿಕಾ ಅಕಾಡೆಮಿಯ ತ್ರೈವಾರ್ಷಿಕ ಯೋಜನೆ ರಾಜ್ಯದ ಹಿರಿಯ ಗಾಂಧಿವಾದಿ ಆರ್.ಆರ್. ದಿವಾಕರ್ ಅವರಿಂದ ಉದ್ಘಾಟನೆಯಾಯಿತು. ಮುಖ್ಯ ಅತಿಥಿಗಳಾಗಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಡಾ.ವಿ.ಕೃ. ಗೋಕಾಕ್, ನಗರಾಭಿವೃದ್ಧಿ ಸಚಿವ ಶ್ರೀ ಎಂ. ಚಂದ್ರಶೇಖರ್, ಲೋಕಸಭಾ ಸದಸ್ಯ ಶ್ರೀ ಕೆ.ಎಚ್. ರಂಗನಾಥ್ ಮತ್ತು ವಿ.ಎಸ್. ಕೃಷ್ಣಯ್ಯರ್ ಸಮಾರಂಭದಲ್ಲಿ ಭಾಗವಹಿಸಿದ್ದರು.

ಹೀಗೆ ತ್ರೈವಾರ್ಷಿಕ ಯೋಜನೆ ಉದ್ಘಾಟನೆಯಾದ ನಂತರ ರಾಜ್ಯಮಟ್ಟದ ಮೂರು ದಿನದ ಪತ್ರಕರ್ತರ ಸಮಾವೇಶಕ್ಕೆ ಅಕಾಡೆಮಿ ಸಜ್ಜಾಯಿತು.

೧೯೮೭ರ ಡಿಸೆಂಬರ್‌ನಲ್ಲಿ ಮೂರು ದಿನಗಳ ಕಾಲ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಪತ್ರಕರ್ತರ ಕಾರ್ಯಾಗಾರದಲ್ಲಿ ೫೦೦ಕ್ಕೂ ಮೀರಿ ಪತ್ರಕರ್ತರು ಆಗಮಿಸಿದ್ದರು. ಜಿಲ್ಲಾ ತಾಲ್ಲೂಕುಗಳಿಂದ ಆಗಮಿಸಿದ ಪತ್ರಕರ್ತರಿಗೆ ಗಾಯನ ಸಮಾಜದ ಅಕ್ಕಪಕ್ಕದ ಛತ್ರಗಳಲ್ಲಿ ಉಳಿದುಕೊಳ್ಳುವ ವ್ಯವಸ್ಥೆಯನ್ನು ಮಾಡಲಾಗಿತ್ತು. ವಸತಿ ಊಟದ ವ್ಯವಸ್ಥೆಯಲ್ಲದೆ ಸಮಾರಂಭದ ಎಲ್ಲಾ ಕಾರ್ಯಕ್ರಮಗಳಿಗೆ ಉಪಸಮಿತಿಯನ್ನು, ಹಾಗೂ ಕಾರ್ಯಕರ್ತರ ಪಡೆಯನ್ನು ನಿಯೋಜಿಸಿದ್ದ ಅಧ್ಯಕ್ಷರು, ಅವರುಗಳಿಗೆ ಯಾವ ಕೆಲಸವನ್ನು ಯಾರಿಗೆ ವಹಿಸಬೇಕೆಂಬ ಮುಂದಾಲೋಚನೆ ವಹಿಸಿದ್ದರು. ಹೀಗಾಗಿ ಯಾವ ಲೋಪವೂ ಬಾರದಂತೆ ಕಾರ್ಯನಿರ್ವಹಿಸುತ್ತಿದ್ದರು. ರಾತ್ರಿ – ಬೆಳಿಗ್ಗೆ ಅಧ್ಯಕ್ಷ ಜಿ. ನಾರಾಯಣ ಅವರೇ ಖುದ್ದಾಗಿ ಬಂದು ಪ್ರತಿ ಕೊಠಡಿಗೆ ಹೋಗಿ ಅವರುಗಳ ಸೌಕರ್ಯದ ಬಗ್ಗೆ ವಿಚಾರಿಸಿಕೊಂಡು ಹೋಗುತ್ತಿದ್ದುದು ದೂರದ ಊರಿನಿಂದ ಬಂದ ಪತ್ರಕರ್ತರಿಗೆ ತುಂಬಾ ಸಂತೋಷವಾಗಿತ್ತು.

ಈ ನಿಟ್ಟಿನಲ್ಲಿ ಶ್ರೀ ಜಿ. ನಾರಾಯಣ ಅವರ ಹಿರಿಯ ಕಾರ್ಯಕರ್ತ ಜಿ.ಕೆ. ಗುಂಡೂರಾವ್ ಆರ್.ಎಚ್. ರಾಜು, ಶ್ರೀ ರಾಮೇಗೌಡ, ಎಸ್.ಆರ್. ಚಂದ್ರನ್, ಎಂ. ನರಸಿಂಹ, ಎಚ್.ಎಂ. ಜೋರಯ್ಯ, ರಮಾದೇವಿ ವಿಶ್ವೇಶ್ವರಯ್ಯ, ರಮಾದೇವಮ್ಮ, ಕುಮಾರ್, ಚಿರಂಜೀವಿ ಆಳ್ಲ, ರವೀಂದ್ರಕಾಂತ್ ಎಸ್. ರಾಜಶೇಖರಯ್ಯ, ನಂಜಪ್ಪ, ಅನಂತು, ವೆಂಕಟೇಶ್, ಗಂಗಾಧರ್ ಮುಂತಾದವರ ಶ್ರಮ ಸ್ಮರಣೀಯ.

ಸಮಾವೇಶದ ಉದ್ಘಾಟನೆಯನ್ನು ವಿಧಾನಸಭಾಧ್ಯಕ್ಷ ಶ್ರೀ ಬಿ.ಜಿ. ಬಣಕರ್ ಜ್ಯೋತಿ ಬೆಳಗಿಸುವ ಮೂಲಕ ನೆರವೇರಿಸಿದರು. ರೇಷ್ಮೆಖಾತೆ ಸಚಿವ ಶ್ರೀ ಕೆ. ಎಂ. ಮುನಿಯಪ್ಪ ಅವರು ಪತ್ರಿಕಾ ಅಕಾಡೆಮಿಯ ಪ್ರಕಟಣೆಯಾದ ದ್ವೈಮಾಸಿಕ 'ಪತ್ರಿಕೆ'ಯನ್ನು ಹಾಗೂ ಹಿರಿಯ ಪತ್ರಕರ್ತ ಎಸ್.ಎಸ್. ಸೀತಾರಾಮಶಾಸ್ತ್ರಿ ಅವರು ಬರೆದುಕೊಟ್ಟಿರುವ 'ಕನ್ನಡ ಪತ್ರಿಕೋದ್ಯಮ ಒಂದು ಪರಿಚಯ' ಪುಸ್ತಕವನ್ನು ಬಿಡುಗಡೆ ಮಾಡಿದರು.

ಶ್ರೀ ಜಿ. ನಾರಾಯಣ ಅವರು ತ್ರೈವಾರ್ಷಿಕ ಯೋಜನೆಯನ್ನು ಚರ್ಚೆಗೆ ಮೊದಲು ವಿವರಿಸಿದರು. ಇದಕ್ಕೆ ಅಂದಿನ ವಾರ್ತಾ ಸಚಿವ ಶ್ರೀ ಎಂ.ಪಿ. ಪ್ರಕಾಶ್ ಉತ್ತಮ ಭಾಷಣ ಮಾಡಿ ಚಾಲನೆ ನೀಡಿದರು. ಸುಮಾರು ೭೦ ಮಂದಿ ಪತ್ರಕರ್ತರು ಚರ್ಚೆಯಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು. 'ಕ್ಷೇತ್ರಾನುಭವ' ಅಧಿವೇಶನದಲ್ಲಿ ಹಿರಿಯ ಪತ್ರಕರ್ತರಾದ ಶ್ರೀ ಖಾದ್ರಿ ಶಾಮಣ್ಣ, ಸಂತೋಷಕುಮಾರ್ ಗುಲ್ವಾಡಿ, ಡಾ. ಎ.ಎಸ್. ಬಾಲಸುಬ್ರಮಣ್ಯಂ, ಡಾ. ಪಾಟೀಲ ಪುಟ್ಟಪ್ಪ ಹಾಗೂ ಶ್ರೀಮತಿ ವಿಜಯ ಅವರುಗಳು ಭಾಗವಹಿಸಿದ್ದರು.

ಕೊನೆಯ ದಿನ (ಡಿ. ೨೧) ಮಾಜಿ ಮುಖ್ಯಮಂತ್ರಿ ಕಡಿದಾಳ್ ಮಂಜಪ್ಪ ಅಧ್ಯಕ್ಷತೆಯಲ್ಲಿ ಜರುಗಿದ "ಕನ್ನಡ ಪತ್ರಿಕೆಗಳು : ಪ್ರತಿಕ್ರಿಯೆ" ಅಧಿವೇಶನದಲ್ಲಿ ರಾಜ್ಯ ವಿಧಾನಸಭೆಯ ವಿರೋಧ ಪಕ್ಷದ ನಾಯಕರಾದ ಶ್ರೀಮತಿ ಕೆ.ಎಸ್. ನಾಗರತ್ನಮ್ಮ, ಶಿಕ್ಷಣ ತಜ್ಞ ಡಾ.ಎಚ್. ನರಸಿಂಹಯ್ಯ, ಪ್ರೊ. ಜಿ.ಎಸ್. ಶಿವರುದ್ರಪ್ಪ, ಸಂಸತ್ ಸದಸ್ಯ ಶ್ರೀ ಪಿ.ಎಸ್. ಕೃಷ್ಣಯ್ಯರ್, ಭಾಗವಹಿಸಿದ್ದರು.

ಪ್ರಶಸ್ತಿ ಪ್ರದಾನ

ಅಕಾಡೆಮಿ ಹಿರಿಯ ಪತ್ರಕರ್ತರನ್ನು ಗುರುತಿಸಿ ಪ್ರಶಸ್ತಿ ನೀಡುವ ಅವಕಾಶವಿದ್ದರೂ ಅದು ಖಾದ್ರಿ ಶಾಮಣ್ಣ ಅವರ ಅಧ್ಯಕ್ಷಾವಧಿಯಲ್ಲಿ ಅನುದಾನದ ಕೊರತೆಯಿಂದ ಸಾಧ್ಯವಾಗಲಿಲ್ಲ. ಶ್ರೀ ಜಿ. ನಾರಾಯಣ ಅವರು ಅಧ್ಯಕ್ಷರಾದ ಅವಧಿಯಲ್ಲಿ ಅದಕ್ಕೆ ಅಡಿಪಾಯ ಹಾಕಲಾಯಿತು. ಪ್ರಥಮವಾಗಿ ರಾಜ್ಯಮಟ್ಟದ ೧೫ ಹಿರಿಯ ಪತ್ರಕರ್ತರನ್ನು ಗುರುತಿಸಿ ರಾಜ್ಯಮಟ್ಟದ ಪತ್ರಕರ್ತರ ಸಮಾವೇಶವಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ಸಾಲಿನಲ್ಲಿ ಅಗರಂ ರಂಗಯ್ಯ, ಎನ್.ಎಸ್. ಸೀತಾರಾಮಶಾಸ್ತ್ರಿ, ಅವರುಗಳಿಂದ ಹಿಡಿದು ಶ್ರೀ ಜಿ. ನಾರಾಯಣಸ್ವಾಮಿ ಅವರ ವರೆಗೆ ಎಲ್ಲರೂ ಕ್ಷೇತ್ರದಲ್ಲಿ ಸಾಧನೆ ಮಾಡಿದವರೇ ಎಂದರೆ ಅತಿಶಯೋಕ್ತಿಯಲ್ಲ.

ಪತ್ರಕರ್ತರ ಸಮಾವೇಶದ ಮೂರು ದಿನಗಳೂ ವೇಳೆ ಪೋಲಾಗದಂತೆ ನಡೆದ ಅನೇಕ ಗೋಷ್ಠಿಗಳು, ಚರ್ಚೆಗಳು ಅನೇಕ ಚಿಂತನೆ ಹಾಗೂ ಕ್ರಿಯಾಶೀಲತೆಗೆ ಇಂಬುಕೊಟ್ಟಂತೆ ಇದ್ದವು. ಈ ಮೂರು ದಿನಗಳಲ್ಲಿ ಅಧ್ಯಕ್ಷರಿಂದ ಹಿಡಿದು ಅವರ ಕಾರ್ಯಕರ್ತರು, ಸದಸ್ಯರು, ಸಿಬ್ಬಂದಿಗಳು ನಡೆದುಕೊಂಡ ರೀತಿ ನೀತಿ ನಡವಳಿಕೆ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು ಹಾಗೂ ಅಕಾಡೆಮಿಯ ಆತಿಥ್ಯ ಮುದನೀಡಿತ್ತು ಎಂಬುದೂ ಹೆಮ್ಮೆಯ ಸಂಗತಿ.

ರಾಜ್ಯಮಟ್ಟದ ಪತ್ರಕರ್ತರ ಸಮಾವೇಶವೂ ಸೇರಿದಂತೆ ಶ್ರೀ ಜಿ. ನಾರಾಯಣ ಅವರ ಅಧ್ಯಕ್ಷತೆಯ ಅವಧಿಯಲ್ಲಿ ಹೀಗೆ ಅನೇಕ ಪ್ರಥಮಗಳು ಯಶಸ್ಸನ್ನು ಕಂಡವು ಎನ್ನಬಹುದು.

ರಾಜ್ಯಮಟ್ಟದ ವಿಚಾರ ಸಂಕಿರಣ ಹಾಗೂ ಸಮಾರಂಭಗಳನ್ನು ಅಕಾಡೆಮಿ ನಡೆಸುತ್ತಿದ್ದರೂ ಅದರ ಮೂಲ ಉದ್ದೇಶವಾದ ಗ್ರಾಮಾಂತರ ತರಬೇತಿ ಶಿಬಿರಗಳನ್ನು ಅಕಾಡೆಮಿ ಮರೆತಿರಲಿಲ್ಲ. ಮಂಡ್ಯ, ಶಿವಮೊಗ್ಗ, ಬಳ್ಳಾರಿ, ಚಿತ್ರದುರ್ಗ ಮುಂತಾದ ಕಡೆ ಒಂದು ವಾರ, ನಾಲ್ಕು ದಿನಗಳ ತರಬೇತಿ ಶಿಬಿರಗಳನ್ನು ನಡೆಸಿ ಸ್ಥಳೀಯ ಹಿರಿಯ ಪತ್ರಕರ್ತರನ್ನು ಗುರುತಿಸಿ ಗೌರವಿಸುವ ಕಾರ್ಯಕ್ರಮವನ್ನು ಅಕಾಡೆಮಿ ಹಮ್ಮಿಕೊಂಡಿತ್ತು.

ಧ್ವನಿಮುದ್ರಣ

ಹಿರಿಯ ಪತ್ರಕರ್ತರ ಧ್ವನಿಯನ್ನು ಮುದ್ರಿಸಿ ದಾಖಲೆಯ ದೃಷ್ಟಿಯಿಂದ ಅಕಾಡೆಮಿಯಲ್ಲಿ ಇಡಬೇಕೆಂಬ ಯೋಜನೆಯನ್ನು ಹಾಕಿಕೊಂಡ ಶ್ರೀ ಜಿ. ನಾರಾಯಣ ಅವರಿಗೆ ಅದರ ಕಾರ್ಯವನ್ನು ನಡೆಸಿಕೊಡುವ ಅರ್ಹರಾದ ವ್ಯಕ್ತಿಗಳ ಅಗತ್ಯವಿತ್ತು. ಇದಕ್ಕಾಗಿ ಒಂದು ಸಮಿತಿಯನ್ನು ರೂಪಿಸಿ ಯೋಜಿತ ಕೆಲಸ ನಿರ್ವಹಿಸಲು ತೊಡಗಿದರು. ಸಮಿತಿಯಲ್ಲಿ ಸಾಂಸ್ಕೃತಿಕ ಕ್ಷೇತ್ರದ ಹಿರಿಯರಾದ ಎಂ.ಎಚ್. ಕೃಷ್ಣಯ್ಯ, ಚಿರಂಜೀವಿ, ಸಿಎನ್. ಕೃಷ್ಣಮಾಚಾರ್, ಗೊರುಚ, ಶ್ರೀಮತಿ ನಾಗಮಣಿ ಎಸ್ ರಾವ್ ಅವರನ್ನೊಳಗೊಂಡ ಸಮಿತಿಯನ್ನು ರಚಿಸಿ ಆಗಸ್ಟ್ ೮೯ರ ಮೊದಲ ವಾರದಲ್ಲಿ ಅವರುಗಳ ಸಮಾಲೋಚನಾ ಸಭೆಯನ್ನು ನಡೆಸಿದರು. ಸಭೆ ಅನೇಕ ಸಲಹೆಗಳನ್ನು ನೀಡಿತು. ಅದರಂತೆ ಸಮಿತಿಯ ಸದಸ್ಯರು ಕಾರ್ಯಪ್ರವೃತ್ತರಾಗಲು ಸಜ್ಜಾದರು.

ಈ ನಿಟ್ಟಿನಲ್ಲಿ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಮೂವತ್ತೈದು ಮಂದಿ ಹಿರಿಯ ಪತ್ರಕರ್ತರ ಧ್ವನಿಮುದ್ರಣವನ್ನು ಮಾಡಿದ್ದರಲ್ಲದೆ ಅಕಾಡೆಮಿಯ ಅಧ್ಯಕ್ಷ ಖಾದ್ರಿ ಶಾಮಣ್ಣ ಹಿರಿಯರಾದ ಪಾಟೀಲ ಪುಟ್ಟಪ್ಪ ಮುಂತಾದವರ ಧ್ವನಿಮುದ್ರಣವನ್ನು ಸಂಗ್ರಹ ಮಾಡಿದೆ. ಇದು ಅಕಾಡೆಮಿಗೆ ಈಗಲೂ ದಾಖಲೆಯಾಗಿ ಉಳಿದಿದೆ ಎಂಬುದು ಸಂತೋಷದ ಸಂಗತಿ.

ವಿಚಾರ ಸಂಕಿರಣ

ಸಮಾಜದ ಪ್ರಸ್ತುತ ಘಟನೆಗಳ ಅಭಿಪ್ರಾಯಗಳನ್ನು ಪ್ರತಿಬಿಂಬಿಸುವ ವಿಚಾರ ಸಂಕಿರಣಗಳನ್ನು ಏರ್ಪಡಿಸುವುದು ಅಕಾಡೆಮಿಯ ಕಾರ್ಯಕ್ರಮಗಳಲ್ಲಿ ಒಂದು ಎನ್ನುವುದರಲ್ಲಿ ಸಂಶಯವಿಲ್ಲ. ಶ್ರೀ ಜಿ. ನಾರಾಯಣ ಅವರು ಅಧ್ಯಕ್ಷರಾದ ಸಂದರ್ಭದಲ್ಲಿ ಕೆಲವು ವಿಷಯಗಳ ಬಗ್ಗೆ ವಿಚಾರ ಸಂಕಿರಣವನ್ನು ನಡೆಸುವ ಅವಕಾಶಗಳು ತಾನೇ ತಾನಾಗಿ ಉದ್ಭವಿಸಿತು. ಈ ಬಗ್ಗೆ ಅಕಾಡೆಮಿ ಎಚ್ಚರ ವಹಿಸಿ ಸ್ವಾತಂತ್ರ್ಯ ವಿಧೇಯಕದ ಬಗ್ಗೆ ಅಂದು ಚರ್ಚೆಯಾಗುತ್ತಿರುವ ಸಂದರ್ಭವನ್ನು ಉಪಯೋಗಿಸಿಕೊಂಡು "ಕರ್ನಾಟಕ ಪತ್ರಿಕಾ ಸ್ವಾತಂತ್ರ್ಯ ವಿಧೇಯಕ - ೧೯೮೮" ಹಾಗೂ "ಕರ್ನಾಟಕ ವಿಧಾನ ಮಂಡಲ ವಿಧೇಯಕ - ೧೯೮೮" ವಿಚಾರವಾಗಿ ನ್ಯಾಯಾಂಗ ಶಾಸಕಾಂಗದ ಧುರೀಣರಿಂದ ವಿಚಾರ ಸಂಕಿರಣವನ್ನು ಏರ್ಪಡಿಸಿತ್ತು.

ಈ ವಿಚಾರ ಸಂಕಿರಣದಲ್ಲಿ ಹಿರಿಯರಾದ ಶ್ರೀ ಕಡಿದಾಳ್ ಮಂಜಪ್ಪ, ಕೋ, ಚೆನ್ನಬಸಪ್ಪ, ಲಕ್ಷ್ಮೀಸಾಗರ್, ವೀರಪ್ಪ ಮೋಯ್ಲಿ, ಹೇಮಲತಾ ಮಹಿಷಿ, ಖಾದ್ರಿ ಶಾಮಣ್ಣ ಮುಂತಾದವರು ಪಾಲ್ಗೊಂಡಿದ್ದರು.

ಡಿ.ವಿ.ಜಿ. ಜನ್ಮಶತಮಾನೋತ್ಸವ ಸಂದರ್ಭವನ್ನು ಬಳಸಿಕೊಂಡು, 'ಡಿ.ವಿ.ಜಿ. ಮತ್ತು ಪತ್ರಿಕೋದ್ಯಮ' ಎಂಬ ವಿಚಾರದ ಬಗ್ಗೆ ವಿಚಾರ ಸಂಕಿರಣವನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಹಯೋಗದೊಡನೆ ಏರ್ಪಡಿಸಿ ಆ ಸಂದರ್ಭದಲ್ಲಿ ಡಿ.ವಿ.ಜಿ. ಅವರ 'ವೃತ್ತ ಪತ್ರಿಕೆ' ಕೃತಿಯನ್ನು ಬಿಡುಗಡೆ ಮಾಡಿದರು. ಹಿಂದಿನ ತಲೆಮಾರಿನವರು ಮಾತ್ರ ಕಂಡಿದ್ದ ಆ ಕೃತಿ ಇಂದಿನ ತಲೆಮಾರಿನವರು ಓದುವಂತೆ ಅವರ ಕೈಗೆಟುಕುವ ಬೆಲೆಯಲ್ಲಿ ಅಕಾಡೆಮಿ ನೀಡಿದ್ದು ನಿಜಕ್ಕೂ ಪ್ರಶಂಸಾರ್ಹವಾದ ಸಂಗತಿ.

ಕರ್ನಾಟಕ ವಿಶ್ವವಿದ್ಯಾಲಯ ಹಾಗೂ ವಾರ್ತಾ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ ಅಕಾಡೆಮಿಯು ಪ್ರಕಟಣೆಯಾದ ಶ್ರೀ ಹ.ವೆಂ.ನಾಗರಾಜರಾವ್ ಬರೆದಿರುವ 'ವಾರಪತ್ರಿಕೆ' ಹಾಗೂ ಶ್ರೀ ಎಸ್.ಎಸ್. ರಾಮಪ್ರಸಾದ್ ಅವರು ಬರೆದಿರುವ 'ಪತ್ರಿಕಾ ವರದಿಗಾರಿಕೆ' ಪುಸ್ತಕಗಳನ್ನು ಕರ್ನಾಟಕ ವಿಶ್ವವಿದ್ಯಾಲಯದ ಅಂದಿನ ಕುಲಪತಿ ಡಾ.ಜಿ.ಕೆ. ನಾರಾಯಣ ರೆಡ್ಡಿ ಅವರು ಲೋಕಾರ್ಪಣೆ ಮಾಡಿದರು.

ಹುಬ್ಬಳ್ಳಿಯ ವಾಣಿಜ್ಯೋದ್ಯಮಿಗಳ ಸಂಘಗಳ, ಪತ್ರಿಕೆ ಹಾಗೂ ಪ್ರಚಾರ ಉಪಸಮಿತಿಯ ಸಹಯೋಗದೊಡನೆ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ ಸಭಾ ಭವನದಲ್ಲಿ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು.

ಸಾಕ್ಷ್ಯಚಿತ್ರ ಲೋಕಾರ್ಪಣೆ

ಕನ್ನಡ ಪತ್ರಿಕೋದ್ಯಮಕ್ಕೆ ಶತಮಾನದ ಸಂಭ್ರಮವಿದ್ದರೂ ಕನ್ನಡ ಪತ್ರಿಕೋದ್ಯಮ ಕುರಿತ ಸಾಕ್ಷ್ಯಚಿತ್ರ ಬಂದಿಲ್ಲವೆಂಬ ಕೊರಗು ಶ್ರೀ ಜಿ. ನಾರಾಯಣ ಅವರನ್ನು ಕಾಡುತ್ತಿತ್ತು. ಅಕಾಡೆಮಿಯಿಂದ ಅದನ್ನು ಮಾಡಲು ಪ್ರಯತ್ನಿಸಿದರು. ಚಿತ್ರನಿರ್ದೇಶಕ ಶ್ರೀ ಎಸ್.ಎಸ್. ಲಕ್ಷ್ಮೀನಾರಾಯಣ್ ಯಾವುದೇ ಲಾಭದ ಆಸೆಯಿಲ್ಲದೆ ಅಕಾಡೆಮಿಗೆ ಅಲ್ಪ ವೆಚ್ಚದಲ್ಲೇ ಸಾಕ್ಷ್ಯಚಿತ್ರ ತಯಾರಿಸಿಕೊಡಲು ಮುಂದಾದಾಗ ಶ್ರೀ ಜಿ. ನಾರಾಯಣ ಅವರು ಅದಕ್ಕೆ ಒಪ್ಪಿ ಸಿದ್ಧರಾದರು.

ಚಿತ್ರನಿರ್ದೇಶಕ ಶ್ರೀ ಎಸ್.ಎಸ್. ಲಕ್ಷ್ಮೀನಾರಾಯಣ್ ಅದಕ್ಕಾಗಿ ಹಲವಾರು ಕಡೆ ಜಿಲ್ಲೆಗಳಲ್ಲಿ ಸಂಚರಿಸಬೇಕಾಯಿತು. ಜಿಲ್ಲಾ ಪತ್ರಿಕೆಗಳ ಬಗ್ಗೆ ಅಧ್ಯಯನ ನಡೆಸಿ ಜಿಲ್ಲಾ ಪತ್ರಿಕೆಗಳ ಮುದ್ರಣ ಪ್ರಸರಣ ಕಾರ್ಯ, ಪತ್ರಿಕೋದ್ಯಮದ ಸಮಸ್ಯೆ, ವರದಿಗಾರರ ಕಾರ್ಯದಕ್ಷತೆ, ಪತ್ರಿಕಾ ಕಚೇರಿಯ ವಿವಿಧ ವಿಭಾಗಗಳ ಪರಿಚಯ ಒತ್ತಡಗಳ ಮಧ್ಯದಲ್ಲಿ ಪತ್ರಕರ್ತರ ಕಾರ್ಯವಿಧಾನ ಮುಂತಾದವುಗಳ ಬಗ್ಗೆ ಚಿತ್ರೀಕರಿಸಿಕೊಂಡು ಪತ್ರಿಕಾ ಕ್ಷೇತ್ರದ ದಿಗ್ಗಜರನ್ನು ಸಂದರ್ಶಿಸಿ ಪತ್ರಿಕೋದ್ಯಮದ ಬಗ್ಗೆ ಅಭಿಪ್ರಾಯ ಅವರುಗಳ ಅನುಭವಗಳನ್ನು ಅಳವಡಿಸಿ 'ಕನ್ನಡ ಪತ್ರಿಕೋದ್ಯಮ' ಎಂಬ ಸಾಕ್ಷ್ಯಚಿತ್ರವನ್ನು ೭೦ ಎಂ.ಎಂ. ಹಾಗೂ ೩೫ ಎಂ.ಎಂ. ಕಲರ್‌ನಲ್ಲಿ ಹೊರತಂದರು. ಅದರ ಲೋಕಾರ್ಪಣೆಯ ಸಮಾರಂಭ ವಾರ್ತಾ ಇಲಾಖೆಯ ಸಹಕಾರದೊಡನೆ ನಗರದ ಬಾದಾಮಿ ಹೌಸ್‌ನಲ್ಲಿ ನಡೆಯಿತು. ವರ್ಣ ಸಾಕ್ಷ್ಯಚಿತ್ರದ ಪ್ರಥಮ ಪ್ರದರ್ಶನವನ್ನು ಕರ್ನಾಟಕ ಸರ್ಕಾರದ ರಾಜ್ಯ ವಾರ್ತಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವ ಶ್ರೀ ಎಂ.ಪಿ. ಪ್ರಕಾಶ್ ಅವರು ಲೋಕಾರ್ಪಣೆ ಮಾಡಿದರು.

ಕನ್ನಡ ಪತ್ರಿಕೋದ್ಯಮದ ೧೫೫ನೇ ವರ್ಷದ ಉತ್ಸವ

ಕನ್ನಡ ಪತ್ರಿಕೋದ್ಯಮಕ್ಕೆ ೧೫೫ ವರ್ಷವಾದರೂ ಅದರ ಉತ್ಸವವನ್ನು ಯಾರೂ ಆಚರಿಸಿದಂತೆ ಕಾಣಲಿಲ್ಲ. ಶತಮಾನದ ಸಂದರ್ಭದಲ್ಲಿ ಕೆಲವು ಹಿರಿಯರು ಲೇಖನಗಳ ಮೂಲಕ ಬೆಳಕು ಚೆಲ್ಲಿರುವುದನ್ನು ಬಿಟ್ಟರೆ ಅದರ ಆಚರಣೆಯನ್ನು ಮಾಡಿದಂತೆ ಇಲ್ಲ. ಈ ಸಂದರ್ಭವನ್ನು ಬಳಸಿಕೊಂಡು ೧೫೦ ವರ್ಷಕ್ಕೆ ಅಡಿಪಾಯ ಹಾಕಲು ಅಕಾಡೆಮಿ ಯೋಜಿಸಿತು. ನಾರಾಯಣ ಅವರಿಗೆ ಇವೆಲ್ಲ ಹೊಳೆದಂತೆ, ಅದರ ಹಿಂದೆ ಇದಕ್ಕೆ ಒಂದು ಯೋಜನೆ ತಯಾರಿ ಎಂಬುದು ಶತಸಿದ್ಧ.

ಕರ್ನಾಟಕದಲ್ಲಿ ಕನ್ನಡ ಪತ್ರಿಕೋದ್ಯಮಕ್ಕೆ ೧೪೫ ವರ್ಷವಾಗುತ್ತಿದ್ದುದನ್ನು ಗುರಿಯಾಗಿಟ್ಟುಕೊಂಡು ಹಲವಾರು ಯೋಜನೆಗಳನ್ನು ಹಮ್ಮಿಕೊಂಡು ಸರ್ವಸದಸ್ಯರ ಹಾಗೂ ಹಿರಿಯ ಪತ್ರಕರ್ತರ ಮುಂದಿಟ್ಟರು. ಎಲ್ಲರ ಒಪ್ಪಿಗೆ ಸಿಕ್ಕಂತೆ ಅದಕ್ಕೆ ಸಂಬಂಧಪಟ್ಟಂತೆ ಉಪಸಮಿತಿ ಸಲಹಾ ಸಮಿತಿಗಳನ್ನು ರಚಿಸಿದರು.

ಕನ್ನಡ ಪತ್ರಿಕೋದ್ಯಮದ ಬಗ್ಗೆ ಚರ್ಚೆಯಾಗಿ ಪತ್ರಿಕಾ ಸಂಗ್ರಹಕಾರರನ್ನು ಒಂದುಗೂಡಿಸಿ ಆ ಬಗ್ಗೆ ನಿಖರ ಮಾಹಿತಿಯನ್ನು ಪಡೆದರು. ಶ್ರೀ ಶ್ರೀನಿವಾಸ ಹಾವನೂರು, ಮೋಹನ್ ಜಿ.ಹೆಗಡೆ, ಭಂಡಾರಿ ಚೆಲ್ಲಪ್ಪನ್ ಮುಂತಾದವರ ಸಲಹೆ ಸಹಕಾರ ಪತ್ರಿಕಾ ಸೂಚಿ ತರಲು ಪ್ರಯತ್ನಿಸಿದರು. ಕನ್ನಡ ಪತ್ರಿಕೋದ್ಯಮದ ಮೊಟ್ಟ ಮೊದಲ ಪತ್ರಿಕೆ 'ಮಂಗಳೂರ ಸಮಾಚಾರ' ೧೮೪೩ರ ಜುಲೈ ೧ರಂದು ಮಂಗಳೂರಿನಲ್ಲಿ ಜನಿಸಿತು ಎಂಬ ಕಾರಣವನ್ನೇ ನೆಪವಾಗಿಟ್ಟುಕೊಂಡು ೧೪೫ನೇ ಪತ್ರಿಕೋದ್ಯಮ ವರ್ಷದ ಆಚರಣೆಯನ್ನು ಮಂಗಳೂರಿನಲ್ಲಿ ೨೮-೧-೧೯೮೯ರಿಂದ ೧-೨-೧೯೮೯ರ ವರೆಗೆ ಆಚರಿಸಲಾಯಿತು. ಈ ಸಂದರ್ಭದಲ್ಲಿ ಪತ್ರಿಕಾ ಸಂಗ್ರಹಕಾರ ಶ್ರೀ ಜಿ.ವಿ. ಮೂರ್ತಿ ಅವರಿಂದ ಪತ್ರಿಕಾ ಪ್ರದರ್ಶನ, ವ್ಯಂಗ್ಯ ಚಿತ್ರ ಪ್ರದರ್ಶನ, ಸಾಕ್ಷ್ಯಚಿತ್ರ ಪ್ರದರ್ಶನಗಳನ್ನು ಹಾಗೂ ವಿಚಾರ ಸಂಕಿರಣ ಮುಂತಾದ ಕಾರ್ಯಕ್ರಮಗಳನ್ನು ಏರ್ಪಡಿಸಲಾಯಿತು.

೧೪೫ನೇ ವರ್ಷಾಚರಣೆಗಾಗಿ ಜಿಲ್ಲಾ ಮಟ್ಟದಲ್ಲಿ ಕಾರ್ಯಕ್ರಮಗಳ ನಿರ್ವಹಣೆಗಾಗಿ ಜಿಲ್ಲಾ ಪರಿಷತ್ತು, ಜಿಲ್ಲೆಗಳ ವಾರ್ತಾಧಿಕಾರಿ, ಪತ್ರಕರ್ತರ ಸಂಘಗಳು ಸಾರ್ವಜನಿಕ ಮುಖಂಡರನ್ನೊಳಗೊಂಡ ಸಮಿತಿಗಳನ್ನು ರಚಿಸಿ ಕಾರ್ಯಕ್ರಮಗಳನ್ನು ಈ ಸಮಿತಿಗಳ ನೇತೃತ್ವದಲ್ಲಿ ನಿರ್ವಹಿಸಲು ಅಕಾಡೆಮಿ ಯೋಜನೆ ಕೈಗೊಂಡು ಎಲ್ಲಾ ಜಿಲ್ಲೆಗಳಲ್ಲಿ ಯಶಸ್ವಿಯಾಗಿ ಕಾರ್ಯಕ್ರಮಗಳನ್ನು ನಡೆಸಿತು.

೧೪೫ನೇ ವರ್ಷಾಚರಣೆಯ ಸಂಬಂಧದಲ್ಲಿ ಮಂಗಳೂರಿನಲ್ಲಿ ಅದ್ಧೂರಿಯಾಗಿ ಸಮಾರಂಭವನ್ನು ಆಚರಿಸಿದ ನಂತರ ರಾಜ್ಯಮಟ್ಟದ ಕಾರ್ಯಕ್ರಮಗಳನ್ನು 'ಪತ್ರಿಕಾ ಭಾರತಿ' ಎಂಬ ಸಂಸ್ಮರಣ ಸಂಚಿಕೆಯನ್ನು 'ಕಾಲುಶತಮಾನಕಂಡ ಕನ್ನಡ ಪತ್ರಿಕೆಗಳು' ಪುಸ್ತಕಗಳನ್ನು ಹೊರತಂದಿತು. ಕನ್ನಡ ಪತ್ರಿಕೋದ್ಯಮದಲ್ಲಿ ೨೫ ವರ್ಷ ಪೂರ್ಣಗೊಳಿಸಿದ ಪತ್ರಿಕೆಗಳನ್ನು ಗುರುತಿಸಿ ಅದನ್ನು ದಾಖಲಿಸುವ ದೃಷ್ಟಿಯಿಂದ ಹೊರತಂದ ಆ ಕೃತಿಗೆ ಸಂಪಾದಕ ಮಂಡಳಿಯೊಂದನ್ನು ಮಾಡಿ ಅದನ್ನು ಗುರುತಿಸುವ ಕೆಲಸವನ್ನು ಕೆಲವರಿಗೆ ಹಚ್ಚಿ ಪತ್ರಿಕೆಗಳ ಬಗ್ಗೆ ಬರೆಯುವ ಕೆಲಸವನ್ನು ಕೆಲವರಿಗೆ ವಹಿಸಿದರು. ಅದರ ಸಂಗ್ರಹ ಸಂಪಾದನೆಯ ಕಾರ್ಯವನ್ನು ಎಂ.ಎಚ್.ಕೃಷ್ಣಯ್ಯ ನಿರ್ವಹಿಸಿದರು. ಅಷ್ಟೇ ಅಲ್ಲದೆ ಸಮಾರೋಪ ಸಮಾರಂಭದಲ್ಲಿ ಆಯಾ ಪತ್ರಿಕೆಯ ಸಂಪಾದಕರನ್ನು ಅರ್ಹತಾಪತ್ರ ನೀಡಿ ಗೌರವಿಸಿದ್ದೂ ಒಂದು ಸಾಧನೆಯೇ ಸರಿ.

ಕನ್ನಡ ಪತ್ರಿಕೋದ್ಯಮದ ೧೪೫ನೇ ವರ್ಷಾಚರಣೆ ರಾಜ್ಯದ ಜಿಲ್ಲೆಗಳಾದ ಮಡಿಕೇರಿ, ಕಾರವಾರ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ತುಮಕೂರು, ಚಿತ್ರದುರ್ಗ, ಬೆಳಗಾವಿ, ಬಿಜಾಪುರ, ಕಲ್ಬುರ್ಗಿ, ಬೀದರ್, ರಾಯಚೂರು, ಬಳ್ಳಾರಿ, ಧಾರವಾಡ, ಕೋಲಾರ, ಮೈಸೂರು,

ಮಂಡ್ಯ, ರಾಮನಗರ, ಶಿರಸಿ, ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆಗಳಲ್ಲಿ ಪಟ್ಟಣಗಳಲ್ಲಿ ಯಶಸ್ವಿಯಾಗಿ ನಡೆಯಿತು. ಈ ಸಂದರ್ಭದಲ್ಲಿ ಹಲವಾರು ವಿಚಾರ ಸಂಕಿರಣಗಳು ಸಿದ್ಧವನಹಳ್ಳಿ ಕೃಷ್ಣಶರ್ಮ, ಡಿ.ವಿ.ಜಿ. ಮೊಹರೆ, ತಿ.ತಾ.ಶರ್ಮ, ಪಿ.ರಾಮಯ್ಯ ಮುಂತಾದ ಪತ್ರಿಕೋದ್ಯಮದ ದಿಗ್ಗಜರ ಸ್ಮರಣೆ ಪುಸ್ತಕ ಹಾಗೂ ಪತ್ರಿಕೆಗಳ ಪ್ರದರ್ಶನ, ಸ್ಥಳೀಯರಿಗೆ ಗೌರವ ಮುಂತಾದವುಗಳು ಅನೇಕರಿಗೆ ಸ್ಫೂರ್ತಿ ನೀಡಿತಲ್ಲದೆ ಅನೇಕರಿಗೆ ಜ್ಞಾನಾರ್ಜನೆಗೊಂದು ಅವಕಾಶ ಕಲ್ಪಿಸಿದಂತಾಯಿತು.

೧೯೮೯ರ ಜನವರಿಯಲ್ಲಿ ಮಂಗಳೂರಿನಿಂದ ಪ್ರಾರಂಭವಾದ ಕನ್ನಡ ಪತ್ರಿಕೋದ್ಯಮದ ೧೫೦ನೇ ವರ್ಷಾಚರಣೆಯ ತೇರು ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ ೧೯೯೦ ರ ಜನವರಿಯಲ್ಲಿ ನಿಂತು ತನ್ನ ಸಮಾರೋಪ ಸಮಾರಂಭವನ್ನು 'ರಾಷ್ಟ್ರೀಯ ಉತ್ಸವ'ದ ರೀತಿ ಮಾಡಿಸಿಕೊಂಡಿತು.

ಜನವರಿ ೧೯೯೦, ೨೨ರಿಂದ ೨೪ರ ವರೆಗೆ ನಡೆದ ೧೫೦ನೇ ಕನ್ನಡ ಪತ್ರಿಕೋದ್ಯಮದ ವರ್ಷಾಚರಣೆ ಸಮಾರೋಪ ಸಮಾರಂಭವನ್ನು ರಾಷ್ಟ್ರೀಯ ಹಬ್ಬವಾಗಿ ಆಚರಿಸಲಾಯಿತು. ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವ ಶ್ರೀ ಪಿ. ಉಪೇಂದ್ರ ಅವರು ಸಮಾರಂಭವನ್ನು ಉದ್ಘಾಟಿಸಿದರು. 'ಪತ್ರಿಕಾ ಭಾರತಿ' ಸ್ಮರಣೆ ಸಂಚಿಕೆಯನ್ನು ವಾರ್ತಾ ಸಚಿವ ಶ್ರೀ ಎಂ. ವೀರಪ್ಪ ಮೊಯ್ಲಿ ಬಿಡುಗಡೆ ಮಾಡಿದರು. ವಿದ್ವತ್ ಗೋಷ್ಠಿಯ ರಾಷ್ಟ್ರಮಟ್ಟದ ಹಿರಿಯ ಪತ್ರಕರ್ತರು ನಾನಾ ಕ್ಷೇತ್ರದ ಗಣ್ಯರು ಮಂಡಿಸಿದ ವಿವಿಧ ವಿಚಾರಗಳು ಅನೇಕರ ಪ್ರಶಂಸೆಗೆ ಕಾರಣವಾಯಿತು. 'ಕಾಲುಶತಮಾನ ಕಂಡ ಪತ್ರಿಕೆಗಳು' ಗ್ರಂಥದ ಲೇಖಕರುಗಳಿಗೆ ಶಾಲು ಹೊದಿಸಿ ಸನ್ಮಾನಿಸಿದ್ದು ಅನೇಕ ಪತ್ರಕರ್ತರಿಗೆ ಆನಂದವನ್ನು ತಂದಿತು. ಪತ್ರಿಕಾ ಪ್ರದರ್ಶನ ಹಿರಿಯರಿಂದ ಕಿರಿಯರವರೆಗೆ ಜ್ಞಾನದಾಸೋಹವನ್ನು ನೀಡಿತು.

ಮಾಜಿ ಉಪರಾಷ್ಟ್ರಪತಿ ಶ್ರೀ ಬಿ.ಡಿ. ಜತ್ತಿ, ಕರ್ನಾಟಕ ವಿಧಾನ ಸಭಾಧ್ಯಕ್ಷ ಎಸ್.ಎಂ. ಕೃಷ್ಣ ಅವರು ಪುಸ್ತಕಗಳ ಬಿಡುಗಡೆ ಮಾಡಿದರು. ಮುಖ್ಯಮಂತ್ರಿ ವೀರೇಂದ್ರಪಾಟೀಲ್, ಬಿ.ಕೆ. ಚಂದ್ರಶೇಖರ್, ರಾಜ್ಯಪಾಲ ಶ್ರೀ ಪಿ.ವೆಂಕಟಸುಬ್ಬಯ್ಯ ಮುಂತಾದ ಗಣ್ಯರು ಭಾಗವಹಿಸಿದ್ದ ಈ ಸಭೆ ನಿಜಕ್ಕೂ ಪತ್ರಿಕೋದ್ಯಮದಲ್ಲಿ ಒಂದು ದಾಖಲಾರ್ಹ ಸಮಾರಂಭವಾಗಿತ್ತು.

ಶ್ರೀ ಜಿ.ನಾರಾಯಣ ಅವರ ಅಧ್ಯಕ್ಷಾವಧಿಯಲ್ಲಿ ಅಕಾಡೆಮಿಯು ಪುಸ್ತಕಗಳನ್ನು ಹೊರತಂದಿತು. ಅದಕ್ಕೆ ಪ್ರೊ. ಎಲ್.ಎಸ್. ಶೇಷಗಿರಿರಾವ್ ಅವರ ಸಂಪಾದಕತ್ವದಲ್ಲಿ ಮಂಡಳಿಯನ್ನು ರಚಿಸಲಾಗಿತ್ತು. ಶೇಷಗಿರಿರಾವ್ ಅವರ ಶ್ರಮದಿಂದ ಇಂಗ್ಲಿಷ್‌ನಲ್ಲಿದ್ದ ಡಾ. ಕಾಮತ್ ಅವರ 'ಪ್ರೊಫೆಷನಲ್ ಜರ್ನಲಿಸಂ' ಪುಸ್ತಕ ಕನ್ನಡದಲ್ಲಿ 'ವೃತ್ತಿ ಪತ್ರಿಕೋದ್ಯಮ' ಎಂದು ಸಿದ್ಧವಾಯಿತು. ಅದೂ ಸೇರಿದಂತೆ ಹಲವಾರು ಪುಸ್ತಕಗಳು ಹೊರಬಂದುವು ಅಷ್ಟೇ ಅಲ್ಲದೆ ಕನ್ನಡ ಪತ್ರಿಕೋದ್ಯಮದ ಧೀಮಂತರ ಬಗ್ಗೆ ನಾಲ್ಕು ಭಾಗಗಳ ಕೃತಿಗಳೂ ಸೇರಿ ೧೮ ಉತ್ತಮ ಪ್ರಕಟಣೆಗಳು ಹೊರಬಂದವು.

ಅಕಾಡೆಮಿಗೆ ಅನೇಕ ಗಣ್ಯರು ಭೇಟಿ ನೀಡಿದ್ದಾರೆ. ಸಾಂಸ್ಕೃತಿಕ ದಿಗ್ಗಜರೇ ಅಲ್ಲದೆ

ಡಾ. ಚಿದಾನಂದ ಮೂರ್ತಿ, ಎಂ.ಎಚ್. ಕೃಷ್ಣಯ್ಯ, ಜಿ.ಎಸ್. ಶಿವರುದ್ರಪ್ಪ, ಡಾ. ಸೂರ್ಯನಾಥ ಕಾಮತ್. ಪ್ರೊ. ಎಲ್.ಎಸ್. ಶೇಷಗಿರಿರಾವ್. ಎಚ್.ಎಸ್. ಪಾರ್ವತಿ, ನೀಲತ್ತಹಳ್ಳಿ ಕಸ್ತೂರಿ. ಹೊ. ಶ್ರೀನಿವಾಸಯ್ಯ, ಡಾ. ಶ್ರೀನಿವಾಸ ಹಾವನೂರು ಮುಂತಾದವರನ್ನು ಆಗಾಗ ಅಕಾಡೆಮಿಗೆ ಆಹ್ವಾನಿಸಿ ಸಲಹೆ ಪಡೆಯುತ್ತಿದ್ದರು. ಅಷ್ಟೇ ಅಲ್ಲದೆ ಅಕಾಡೆಮಿಗೆ ವಿದೇಶಿ ಗಣ್ಯರು ಆಗಮಿಸಿದಾಗಲೂ ಅಧ್ಯಕ್ಷರು ಅವರೊಡನೆ ವಿಚಾರ ವಿನಿಮಯ ನಡೆಸಲು ಆಪ್ತೇಷ್ಟರನ್ನು ಕರೆಯುತ್ತಿದ್ದರು.

ಭಾರತದ ನಾನಾ ಕೇಂದ್ರಗಳಲ್ಲಿ ಪ್ರದರ್ಶಿತವಾಗುತ್ತಿದ್ದ ಸೋವಿಯತ್ ಸಾಂಸ್ಕೃತಿಕ ಉತ್ಸವಗಳ ಕುರಿತ ವರದಿ ಮಾಡಲು ಭಾರತಕ್ಕೆ ಆಗಮಿಸಿದ್ದ ಸೋವಿಯತ್ ಪತ್ರಕರ್ತರ ತಂಡವೊಂದು ಪತ್ರಿಕಾ ಅಕಾಡೆಮಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಅಧ್ಯಕ್ಷ ಶ್ರೀ ಜಿ. ನಾರಾಯಣ ಅವರು ವಿವಿಧ ಅಕಾಡೆಮಿಯ ಅಧ್ಯಕ್ಷರನ್ನು ಹಾಗೂ ಹಿರಿಯ ಪತ್ರಕರ್ತ ಖಾದ್ರಿ ಶಾಮಣ್ಣ, ಪ್ರೊ. ಎಲ್.ಎಸ್. ಶೇಷಗಿರಿರಾವ್ ಅವರನ್ನು ಅಕಾಡೆಮಿ ಕಚೇರಿಗೆ ಕರೆಸಿ ಪರಸ್ಪರ ಪರಿಚಯ ಮಾಡಿಕೊಟ್ಟು ಸುದ್ದಿ ಹಾಗೂ ವಿಚಾರಗಳನ್ನು ವಿನಿಮಯ ಮಾಡಿಕೊಂಡರು. ಆ ಸಂದರ್ಭದಲ್ಲಿ ಸೋವಿಯತ್ ತಂಡದಲ್ಲಿ ನಾಲ್ವರು ಸದಸ್ಯರನ್ನು ನೆನಪಿನ ಕಾಣಿಕೆ ಕೊಟ್ಟು ಅಕಾಡೆಮಿ ಸನ್ಮಾನಿಸಿತು.

ಇಷ್ಟೆಲ್ಲ ಕಾರ್ಯಕ್ರಮಗಳು ಯಶಸ್ವಿಯಾಗಲು ಅಕಾಡೆಮಿಯ ಅಧ್ಯಕ್ಷ ಶ್ರೀ ಜಿ. ನಾರಾಯಣ ಅವರಿಗೆ ಬೆನ್ನೆಲುಬಾಗಿ ನಿಂತವರು ಕನ್ನಡ ಪತ್ರಿಕೋದ್ಯಮದ ಹಿರಿಯರು, ಸಾಂಸ್ಕೃತಿಕ ಕ್ಷೇತ್ರದ ದಿಗ್ಗಜರು, ಕನ್ನಡಕ್ಕಾಗಿ ಪ್ರಚಾರದ ಹಂಗಿಲ್ಲದೆ ಅಕಾಡೆಮಿಯ ಕಾರ್ಯಕ್ರಮಕ್ಕೆ ಸಹಯೋಗ ದೊಡನೆ ದುಡಿಯುತ್ತಿರುವ ಸಂಘ ಸಂಸ್ಥೆಗಳು ಹಾಗೂ ನಾರಾಯಣರ ಕನ್ನಡ ಕಾರ್ಯಕರ್ತರು. ಇವರೆಲ್ಲರೂ ಇಲ್ಲದಿದ್ದಲ್ಲಿ ಇಂತಹ ಮಹತ್ವದ ಕೆಲಸಗಳು ಆಗುತ್ತಿರಲಿಲ್ಲ. ಹೀಗಾಗಿ ಅವರೆಲ್ಲರಿಗೂ ಅಧ್ಯಕ್ಷರೊಂದಿಗೆ ಅಕಾಡೆಮಿ ಸದಾ ಕೃತಜ್ಞವಾಗಿದೆ ಎಂದರೆ ಅತಿಶಯೋಕ್ತಿಯಲ್ಲ.

ಶ್ರೀ ಜಿ. ನಾರಾಯಣ ಅವರು ಹಾಕಿಕೊಟ್ಟ ಅನೇಕ ಅಭಿವೃದ್ಧಿ ಕಾರ್ಯಗಳ ಅಡಿಪಾಯ ಇಂದು ಅಕಾಡೆಮಿಯಲ್ಲಿ ಗಟ್ಟಿಯಾಗಿ ನಿಂತಿದೆ. ನಂತರ ಬಂದ ಅಧ್ಯಕ್ಷರೆಲ್ಲ ಅವರ ಕಾರ್ಯವನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಪ್ರಕಟಣೆಯ ವಿಷಯ ಬಂದಾಗಲೆಲ್ಲ ಅಕಾಡೆಮಿಯ ಕಾರ್ಯದರ್ಶಿ ಎಚ್.ಬಿ. ದಿನೇಶ್ ಅವರು ಅಧ್ಯಕ್ಷ ಶ್ರೀ ಜಿ. ನಾರಾಯಣ ಅವರನ್ನು ಗೌರವದಿಂದ ಸ್ಮರಿಸುತ್ತಾರೆ. ಹೀಗೆ ಸಾಂಸ್ಕೃತಿಕ ಕ್ಷೇತ್ರದ ದಿಗ್ಗಜ ಶ್ರೀ ಜಿ. ನಾರಾಯಣ ಎಲ್ಲರ ಮನದಲ್ಲಿ ಸದಾ ಸ್ಮರಣೀಯವಾಗಿರುವುದು ನಿಜಕ್ಕೂ ಸಂತೋಷದ ಹಾಗೂ ಹೆಮ್ಮೆಯ ಸಂಗತಿ. ಇಂತಹ ಹಿರಿಯರು ನನಗೆ ಹಾಗೂ ಅಕಾಡೆಮಿಯ ಎಲ್ಲಾ ಸಿಬ್ಬಂದಿ ವರ್ಗದವರಿಗೆ ಪೂಜ್ಯರೂ ಹೌದು. ಅವರಿಗೆ – ಅವರ ಕ್ರಿಯಾಶೀಲತೆಗೆ ನಮ್ಮ ಗೌರವಪೂರ್ವಕ ನಮಸ್ಕಾರಗಳು.

❑

ಕನ್ನಡಪರ ಕೆಲಸಗಳಿಗೆ ಸಾತ್ವಿಕ ಶಕ್ತಿ ಜಿ. ನಾರಾಯಣ

■ ರಾ.ನಂ. ಚಂದ್ರಶೇಖರ

ಸರಳತೆ, ಸಜ್ಜನಿಕೆ, ಸಹೃದಯತೆ, ಸಂಯಮ, ಶಿಸ್ತು, ಪ್ರಶ್ನಾತೀತ ಪ್ರಾಮಾಣಿಕತೆಗಳಿಂದ ಎಲ್ಲರ ಗೌರವಕ್ಕೆ ಪಾತ್ರರಾಗಿರುವ ಜಿ. ನಾರಾಯಣರು ತಾವು ಕೆಲಸ ಮಾಡಿದ ಕ್ಷೇತ್ರಗಳಲ್ಲೆಲ್ಲ ಮಾಸಲಾಗದ ಹೆಜ್ಜೆಗುರುತುಗಳನ್ನು ಮೂಡಿಸಿದ್ದಾರೆ. ಆಗಿರ ಇಳಿವಯಸ್ಸಿನಲ್ಲೂ ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರಾಗಿ 'ತ್ರೈವಾರ್ಷಿಕ ಜಾನಪದ ಯೋಜನೆ'ಯನ್ನು ಆಗುಮಾಡಲು ನಡೆಸುತ್ತಿರುವ ಪ್ರಯತ್ನಗಳನ್ನು, ಉತ್ಸಾಹ-ಕ್ರಿಯಾಶೀಲತೆಯನ್ನು ಕಂಡು ವಿಸ್ಮಯವಾಗುತ್ತದೆ. ಕನ್ನಡ ನಾಡು ಕಂಡ ಅಪ್ರತಿಮ ಸಂಘಟಕ, ಅನನ್ಯ ಕನ್ನಡ ಪರಿಚಾರಕ ಜಿ. ನಾರಾಯಣರ ಬಗ್ಗೆ ಬರೆಯುವುದೆಂದರೆ ಹೆಮ್ಮೆಯೆನಿಸುತ್ತದೆ. ಅವರು ಮಾಡಿರುವ ಅಪಾರ ಕನ್ನಡ ಕೆಲಸಗಳನ್ನು ನೆನೆದಾಗ ಅದು ಅಷ್ಟು ಸುಲಭವಲ್ಲ ಎನ್ನುವುದು ಅರಿವಿಗೆ ಬರುತ್ತದೆ. 'ಕೆಲಸ ಮಾಡುವವರಿಗೆ ಅವಕಾಶಗಳು ಅರಿಸಿ ಬರಬೇಕಿಲ್ಲ; ಅವರೇ ನಿರ್ಮಿಸಿಕೊಳ್ಳುತ್ತಾರೆ' ಎನ್ನುವ ಪ್ರಸಿದ್ಧ ಮಾತಿದೆ. ಇದು ನಾರಾಯಣರಂತಹವರನ್ನು ನೋಡಿಯೇ ಬಂದಿರಬಹುದೆನಿಸುತ್ತದೆ. ಸ್ವತಃ ತಾವೇ ಕನ್ನಡ ಕೆಲಸಗಳನ್ನು ಮಾಡಿರುವುದರ ಜೊತೆಗೆ ಹಲವು ಕನ್ನಡ ಕೆಲಸಗಳಿಗೆ ಪ್ರೇರಕ ಶಕ್ತಿಯಾಗಿದ್ದಾರೆ. ಹಿಡಿದ ಕೆಲಸ, ರೂಪಿಸಿದ ಯೋಜನೆಗಳನ್ನು ವಿವಾದಕ್ಕೆಡೆಗೊಡದೆ ಸಮರ್ಥವಾಗಿ ಆಗುಮಾಡುವುದರಲ್ಲಿ ಜಿ. ನಾರಾಯಣರು ಸಿದ್ಧಹಸ್ತರು. ಕನ್ನಡ ಕಾರ್ಯಕರ್ತನಾಗಿ ಇವರ ಸಂಘಟನಾಶಕ್ತಿ, ಮಾರ್ಗ ನನಗೆ ಅನುಕರಣೀಯ ಆದರ್ಶ. ಕನ್ನಡ ಚಳವಳಿಯ ಕಾರ್ಯಕರ್ತನಾಗಿ ಎಂದೂ

ನೇರವಾಗಿ ಚಳವಳಿಯಲ್ಲಿ ಪಾಲ್ಗೊಳ್ಳದ ಅವರ, ಚಳವಳಿಗೆ ಪೂರಕವಾದ, ಪ್ರೇರಕವಾದ ಕನ್ನಡ ಕೆಲಸ ಮಾಡಿರುವ ನಾರಾಯಣರ ಯಾವ ಕೆಲಸವನ್ನು ದಾಖಲಿಸುವುದು ಎಂಬ ಸಂದಿಗ್ಧದಿಂದಲೇ ನನಗೆ ನೆನಪಿನಲ್ಲುಳಿದಿರುವ ಕೆಲವು ಘಟನೆಗಳನ್ನು ಮಾತ್ರ ದಾಖಲಿಸಿದ್ದೇನೆ.

'ಸೆನೊಟಾಫ್' ಹೋಯಿತು 'ನಾಡಪ್ರಭು ಕೆಂಪೇಗೌಡ' ಪ್ರತಿಮೆ ಸ್ಥಾಪನೆ ಆಯಿತು:

ಬ್ರಿಟಿಷ್ ಸಾಮ್ರಾಜ್ಯ ನಡೆಸಿದ ಮಹಾಯುದ್ಧದಲ್ಲಿ ಮಡಿದ ಸೈನಿಕರ ಸ್ಮಾರಕ 'ಸೆನೊಟಾಫ್' ಬೆಂಗಳೂರು ನಗರ ಸಭೆ ಕಟ್ಟಡದ ಎದುರಿನಲ್ಲಿತ್ತು. ವಸಾಹತುಶಾಹಿ ಪ್ರತೀಕವಾದ ಈ ಸ್ಮಾರಕವನ್ನು ಕಿತ್ತು ಅಲ್ಲಿ ಬೆಂಗಳೂರು ಸ್ಥಾಪಕ ಕೆಂಪೇಗೌಡ ಪ್ರತಿಮೆ ಸ್ಥಾಪಿಸುವಂತೆ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಕನ್ನಡ ಚಳವಳಿಗಾರರು ಹೋರಾಟ ನಡೆಸಿದ್ದರು. ಹಲವು ಬುದ್ಧಿಜೀವಿಗಳು ಬೆಂಬಲಿಸಿದ್ದರು. ಇದು ಸ್ಮಾರಕವಾಗಿದ್ದರಿಂದ ತೆಗೆಯಲು ಕೇಂದ್ರದ ಪರವಾನಗಿ ಬೇಕಾಗಿತ್ತು. ಪೊಲೀಸ್ ಠಾಣೆ ಎದುರೇ ಇದ್ದುದರಿಂದ ತೆಗೆಯುವುದು ಅಸಾಧ್ಯವೆನಿಸಿತ್ತು. ಹಾಗಾಗಿ ಕನ್ನಡಾಭಿಮಾನಿಗಳು ಪತ್ರಿಕೆಗಳು, ಸಾರ್ವಜನಿಕ ಪ್ರದರ್ಶನದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದರು. ಇದೇ ಸಂದರ್ಭದಲ್ಲಿ ಬೆಂಗಳೂರಿನ ಮೇಯರ್ ಆಗಿ ಆಯ್ಕೆಯಾದ ಜಿ. ನಾರಾಯಣರು ಸದ್ದಿಲ್ಲದೆ ಒಂದು ರಾತ್ರಿ 'ಸೆನೊಟಾಫ್' ತೆಗೆದು ವಸ್ತುಸಂಗ್ರಹಾಲಯಕ್ಕೆ ಕಳುಹಿಸಿ ಸ್ವಲ್ಪ ದಿನದ ನಂತರ ನಾಡಪ್ರಭು ಕೆಂಪೇಗೌಡ ಪ್ರತಿಮೆಯನ್ನು ಸ್ಥಾಪಿಸಿ ಎಲ್ಲ ಕನ್ನಡಾಭಿಮಾನಿಗಳ ಪ್ರೀತಿ ಗೌರವಕ್ಕೆ ಪಾತ್ರರಾದರು. ಈ ವಿಚಾರವಾಗಿ ನಾರಾಯಣರನ್ನು ವಿಚಾರಿಸಿದಾಗ 'ಸೆನೊಟಾಫ್ ತೆಗೆಯುವಂತೆ ಸಾರ್ವಜನಿಕರ ಒತ್ತಡವಿತ್ತು. ನಾನು ಮೇಯರ್ ಆಗುವುದಕ್ಕೆ ಮುನ್ನ ಎರಡುಬಾರಿ ಕಾಮಗಾರಿ ಸಮಿತಿ ಅಧ್ಯಕ್ಷನಾಗಿದ್ದೆ. ಹಳೇ ಕಡತಗಳನ್ನು ನೋಡುತ್ತಿದ್ದಾಗ್ಯೆ ಆರ್. ಸುಬ್ಬಣ್ಣನವರು ಮೇಯರ್ ಆಗಿದ್ದಾಗ ಕೆಂಪೇಗೌಡ ಪ್ರತಿಮೆ ಸ್ಥಾಪನೆ ಮಾಡಲು ನಿರ್ಧರಿಸಿ ಜಾಹಿರಾತು ಕೊಟ್ಟಿದ್ದನ್ನು ಗಮನಿಸಿದ್ದೆ. ನಗರ ಸಭಾ ಸದಸ್ಯ ವಾಟಾಳ್ ಈ ವಿಷಯದ ಬಗ್ಗೆ ಪ್ರಸ್ತಾಪಿಸುತ್ತಲೇ ಇದ್ದರು. ಹೋರಾಟಗಾರರ ನಿಲುವು ಸರಿಯಿತ್ತು. ಸರ್ಕಾರದಿಂದ ಪ್ರತಿಮೆ ಸ್ಥಾಪನೆಗೆ ಒಪ್ಪಿಗೆ ಪಡೆದು, ಪ್ರತಿಮೆ ಸಿದ್ಧವಾದ ನಂತರ ವಸಾಹತು ಪ್ರತೀಕವಾದ ಸ್ಮಾರಕ, ಕೆಂಪೇಗೌಡ ಪ್ರತಿಮೆ ಎರಡೂ ಒಂದೇ ಸ್ಥಳದಲ್ಲಿರುವುದು ವಿರೋಧಾಭಾಸವಾಗುತ್ತದೆ, ಆದ್ದರಿಂದ ಸೆನೊಟಾಫ್ ತೆಗೆದುಬಿಡಲು ಮುಖ್ಯ ಕಾರ್ಯದರ್ಶಿ ಅವರಿಗೆ ಸೂಚಿಸಿದೆ. ಆಗ ಅವರು ಗೃಹಮಂತ್ರಿಯಾಗಿದ್ದ ಆರ್.ಎಂ. ಪಾಟೀಲರನ್ನು ಕಾಣಲು ಸೂಚಿಸಿದರು. ಅವರು ಮುಖ್ಯಮಂತ್ರಿ ನಿಜಲಿಂಗಪ್ಪನವರು ದೆಹಲಿಗೆ ಹೋಗುತ್ತಿದ್ದಾರೆ. ಅವರನ್ನು ಕಂಡು ವಿಷಯ ತಿಳಿಸಿ ಎಂದರು. ಮುಖ್ಯಮಂತ್ರಿಗಳನ್ನು ವಿಮಾನ ನಿಲ್ದಾಣದಲ್ಲಿ ಕಂಡು ವಿಷಯ ಪ್ರಸ್ತಾಪಿಸಿದಾಗ ಸ್ಮಾರಕ ತೆಗೆಯಲು ಒಪ್ಪಿದರು. ಇದಾದ ನಂತರ ಆಯುಕ್ತರಾಗಿದ್ದ ರೂಪ್ಲನಾಯಕ್ ಮತ್ತು ಮುಖ್ಯ ಎಂಜಿನಿಯರ್ ನಾರಾಯಣಶೆಟ್ಟಿ ಅವರಿಗೆ ಸೆನೊಟಾಫ್ ತೆಗೆಯಲು ಸಿದ್ಧರಾಗಿರುವಂತೆ ತಿಳಿಸಿದೆ. ಒಂದು ದಿನ ರಾತ್ರಿ ಆಯುಕ್ತರ ಕಚೇರಿಗೆ ಬಂದು ಪೊಲೀಸ್ ಆಯುಕ್ತರೂಡನೆ ಮಾತನಾಡಲು ಹೇಳಿದೆ. ಆಯುಕ್ತ ಜಾಂಡಿ ಒಪ್ಪದಿದ್ದಾಗ ನಾನೇ ಮಾತನಾಡಿ ಮುಖ್ಯಮಂತ್ರಿಗಳು ಒಪ್ಪಿರುವ ವಿಚಾರ ತಿಳಿಸಿದಾಗ ಒಪ್ಪಿದರು. ರಾತ್ರಿ ಬಂದೋಬಸ್ತಕ್ಕೆ ಪಾಲಿಕೆಯ ೪೦-೫೦ ಸಿಬ್ಬಂದಿಗಳು

ಕೆಲಸ ಶುರು ಮಾಡಿದರು. ರಾತ್ರಿ-ಹಗಲು ನಿರಂತರ ಕೆಲಸ ಮಾಡಿ 'ಸನೊಟಾಫ್' ತೆಗೆದು ಕೆಲವು ದಿನಗಳ ನಂತರ ಕೆಂಪೇಗೌಡ ಪ್ರತಿಮೆ ಸ್ಥಾಪಿಸಿದೆವು, ಎನ್ನುತ್ತಾರೆ. ಇದು ಜಿ. ನಾರಾಯಣರು ಕೆಲಸ ಮಾಡುವ ವಿಧಾನ. ಅಸಾಧ್ಯವಾದದ್ದನ್ನು ಸಾಧಿಸಿ ಆಳುವವರು ಮನಸ್ಸು ಮಾಡಿದರೆ ಏನೆಲ್ಲ ಸಾಧಿಸಬಹುದೆಂಬುದಕ್ಕೆ ಇದೊಂದು ನಿದರ್ಶನ.

'ಕನ್ನಡ ಜಾಗೃತಿ ಸಮಾವೇಶ' – 'ಗೋಕಾಕ್ ಚಳವಳಿಗೆ ಪ್ರಚೋದನೆ'

ಎಂಬತ್ತರ ದಶಕದ ಹೊತ್ತಿಗೆ ಕನ್ನಡ ಚಳವಳಿ ಹೆಚ್ಚು ಕಡಿಮೆ ಸ್ಥಗಿತವಾಗಿತ್ತು. ಗಾಂಭೀರ್ಯ ಕಳೆದುಕೊಂಡು ಹಾಸ್ಯಾಸ್ಪದವಾಗಿ ಕಾಣುವ ಹಂತ ತಲುಪಿತ್ತು. ಕನ್ನಡ ಕಾರ್ಯಕರ್ತರು, ಅಭಿಮಾನಿಗಳು ನಿಸ್ಸಹಾಯಕರಾಗಿ ಒದ್ದಾಡುತ್ತಿದ್ದರು. ಇಂತಹ ಸನ್ನಿವೇಶದಲ್ಲಿ ನಾರಾಯಣ ಅವರು 'ಕನ್ನಡ-ಕನ್ನಡಿಗ-ಕರ್ನಾಟಕ'ಗಳು ಎದುರಿಸುತ್ತಿರುವ ಆತಂಕಗಳನ್ನು ಗುರುತಿಸಿ, ಅವುಗಳ ನಿವಾರಣೆಗೆ ಪರಿಹಾರೋಪಾಯಗಳನ್ನು ಕಂಡುಕೊಳ್ಳಲು ೧೦-೪-೧೯೮೨ರಂದು ಬೆಂಗಳೂರಿನ ನ್ಯಾಷನಲ್ ಕಾಲೇಜಿನ ಸಭಾಂಗಣದಲ್ಲಿ 'ಕನ್ನಡ ಜಾಗೃತಿ ಸಮಾವೇಶ'ವನ್ನು ವ್ಯವಸ್ಥೆ ಮಾಡಿದರು. ಹಲವು ಶಾಸಕರು, ಪಾಟೀಲ ಪುಟ್ಟಪ್ಪನವರು, ಬಹುತೇಕ ಗಣ್ಯ ಸಾಹಿತಿಗಳು ಬಂದಿದ್ದರು. ಕನ್ನಡ ಕಾರ್ಯಕರ್ತರು ಆರಂಭದಿಂದ ಕೊನೆಯವರೆಗೂ ಸಮಾವೇಶದಲ್ಲಿ ಪಾಲ್ಗೊಂಡರು. ಈ ಸಮಾವೇಶವು ಕನ್ನಡ ಕಾರ್ಯಕರ್ತರಲ್ಲಿ ನವೋತ್ಸಾಹ ಮೂಡಿಸಿ, ಕನ್ನಡ ಹೋರಾಟಕ್ಕೆ ಹೊಸ ಹುಟ್ಟು ನೀಡಿತು.

ಪ್ರೌಢಶಾಲೆಯ ಭಾಷಾ ಕಲಿಕೆಯಲ್ಲಿ ಕನ್ನಡವನ್ನು ಕಡ್ಡಾಯಗೊಳಿಸುವ 'ಗೋಕಾಕ್ ಭಾಷಾ ಸೂತ್ರ'ದ ಜಾರಿಗೆ ಒತ್ತಾಯಿಸಿ ಧಾರವಾಡ, ಮೈಸೂರು, ಬೆಳಗಾವಿಗಳಲ್ಲಿ ಚಳವಳಿ ಆರಂಭವಾಗಿತ್ತು. ಸಾಮಾನ್ಯವಾಗಿ ಕನ್ನಡ ಹೋರಾಟಗಳಲ್ಲಿ ಮುಂಚೂಣಿಯಲ್ಲಿರುತ್ತಿದ್ದ ಬೆಂಗಳೂರು ಈ ಮಹತ್ವದ ಚಳವಳಿಯಲ್ಲಿ ತಣ್ಣಗಿರುವುದು ಕನ್ನಡ ಕಾರ್ಯಕರ್ತರನ್ನು ಚಿಂತೆಗೀಡುಮಾಡಿತ್ತು. ಕನ್ನಡ ಚಳವಳಿ ಇಂತಹ ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸುತ್ತಿದ್ದ ಸಂದರ್ಭದಲ್ಲಿ ನಾರಾಯಣರು ಏರ್ಪಡಿಸಿದ ಈ ಜಾಗೃತ ಸಮಾವೇಶ ಬೆಂಗಳೂರಿನಲ್ಲಿ ಗೋಕಾಕ್ ಚಳವಳಿ ನಡೆಯಲು ವೇದಿಕೆ ಆಯಿತು. ಅದು ಹೀಗೆ– ಮೊದಲು ಡಾ॥ ಎಂ. ಚಿದಾನಂದ ಮೂರ್ತಿ, ಡಾ॥ ಪಿ.ವಿ. ನಾರಾಯಣ ಕೆಲವು ಕನ್ನಡ ಕಾರ್ಯಕರ್ತರು ಚಳವಳಿ ಆರಂಭಿಸುವ ಬಗ್ಗೆ ಪರಸ್ಪರ ಚರ್ಚಿಸಿದರು. ಊಟದ ಬಿಡುವಿನಲ್ಲಿ ಸೇರುವಂತೆ ಚೀಟಿಗಳು ವಿನಿಮಯವಾದವು. ರಂ.ಶ್ರೀ. ಮುಗಳಿ, ಚಿದಾನಂದಮೂರ್ತಿ, ಪಿ.ವಿ. ನಾರಾಯಣ, ಜಿ. ರಾಮಕೃಷ್ಣ, ಕ.ವೆಂ. ನಾಗರಾಜ್ ಸೇರಿದಂತೆ ಹಲವರು ಉತ್ಸಾಹದಿಂದ ಕೂಡಿದರು. ಏಪ್ರಿಲ್ ೧೩ರಂದು ಧರಣಿ ಮತ್ತು ಮೆರವಣಿಗೆ ಎಂದು ನಿರ್ಧಾರವಾಯಿತು. ಅಂದು ನಡೆದ ಪ್ರತಿಭಟನೆ ಕನ್ನಡ ಚಳವಳಿಗೆ ಹೊಸ ಆಯಾಮ ನೀಡಿದ 'ಸಾಹಿತಿಗಳ ಕಲಾವಿದರ ಬಳಗ' ಅಸ್ತಿತ್ವಕ್ಕೆ ಬರಲು ಕಾರಣವಾಯಿತು. ಡಾ॥ ಎಂ. ಚಿದಾನಂದಮೂರ್ತಿಯವರು ಚಳವಳಿಯನ್ನು ಪ್ರವೇಶಿಸಲು ವೇದಿಕೆಯಾಯಿತು. ನಂತರ ಚಳವಳಿ ಪಡೆದುಕೊಂಡ ಆಯಾಮ ಈಗ ಜನರ ಮುಂದಿದೆ. ಇದಕ್ಕೆ ಕಾರಣ ಜಿ. ನಾರಾಯಣ ಎಂಬುದು ಉಲ್ಲೇಖನೀಯ.

ಸಾಹಿತಿಗಳ ಕಲಾವಿದರ ಬಳಗವು ರೂಪಿಸುತ್ತಿದ್ದ ಕಾರ್ಯಕ್ರಮಗಳಿಗೆ ಮಾರ್ಗದರ್ಶನ ಮಾಡುತ್ತಿದ್ದರು. ಕೆಲವು ಕಾರ್ಯಕ್ರಮಗಳಲ್ಲೂ ಪಾಲ್ಗೊಂಡಿದ್ದಾರೆ. ಕನ್ನಡ ಶಕ್ತಿ ಕೇಂದ್ರದ ಸ್ಥಾಪನೆಯ ದಿನ ನಡೆದ ಸಮಾವೇಶಕ್ಕೆ ಪೂರ್ವಭಾವಿಯಾಗಿ ಸಲಹೆಗಳನ್ನು ನೀಡಿ ಸಮಾವೇಶದಲ್ಲಿ ಸಮಾರೋಪ ಭಾಷಣ ಮಾಡಿದರು. ಅನಂತರ ಕೇಂದ್ರದ ಸಲಹೆಗಾರರಾಗಿ ಕಾರ್ಯಕ್ರಮಗಳನ್ನು ರೂಪಿಸುವ ಮುನ್ನ ನಡೆಯುತ್ತಿದ್ದ ಬಹಳಷ್ಟು ಪೂರ್ವಭಾವಿ ಸಭೆಗಳಲ್ಲಿ ಪಾಲ್ಗೊಂಡು ತಮ್ಮ ಅನುಭವವನ್ನು ಧಾರೆಯೆರೆದಿದ್ದಾರೆ. ಶಿಕ್ಷಣ, ಸಂಸ್ಕೃತಿ, ವಲಸೆಗಳಿಗೆ ಸಂಬಂಧಿಸಿದಂತೆ ನಡೆದ ಕಾರ್ಯಕ್ರಮಗಳಲ್ಲಿ ನೇರವಾಗಿ ಪಾಲ್ಗೊಂಡಿದ್ದಾರೆ. ಪ್ರಧಾನಿ, ಮುಖ್ಯಮಂತ್ರಿ ಮುಂತಾದ ಗಣ್ಯರನ್ನು ಭೇಟಿ ಮಾಡಿದ ಸಂದರ್ಭದಲ್ಲೆಲ್ಲಾ ನಾರಾಯಣ ಅವರು ಶಕ್ತಿ ಕೇಂದ್ರದ ನಿಯೋಗದಲ್ಲಿ ತಪ್ಪದೇ ಇರುತ್ತಿದ್ದರು. ಕಾವೇರಿ ಜಲವಿವಾದಕ್ಕೆ ಸಂಬಂಧಿಸಿದಂತೆ ನ್ಯಾಯಮಂಡಲಿ ನೀಡಿದ ತೀರ್ಪು ಕರ್ನಾಟಕಕ್ಕೆ ಮಾರಕವಾಗಿದ್ದುದರಿಂದ ತೀವ್ರ ಪ್ರತಿಭಟನೆಗಳಾಯಿತು. ಸಾವು ನೋವುಗಳಾದವು. ತಮಿಳರು ಮಾನವಹಕ್ಕು ಉಲ್ಲಂಘನೆ ಆಗಿದೆ ಎಂದರೆ, ನಮ್ಮವರೆ ಕೆಲವರು ಕನ್ನಡಪರ ಸಂಘಟನೆಗಳನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದರು. ಹಲವು ಬಗೆಯ ಅಭಿಪ್ರಾಯಗಳು ಪ್ರಕಟವಾದವು. ಬಹಳಷ್ಟು ಪ್ರತಿಕ್ರಿಯೆಗಳು ಕನ್ನಡಿಗರ ವಿರುದ್ಧವಾಗಿತ್ತು. ಆಗ ಕನ್ನಡ ಶಕ್ತಿ ಕೇಂದ್ರದ ಕಾರ್ಯಕರ್ತರ ನಾಲ್ಕು ತಂಡಗಳು ಬೆಂಗಳೂರಿನಲ್ಲಿ ಗಲಭೆ ನಡೆದ ಸ್ಥಳಗಳಿಗೆ ಭೇಟಿ ನೀಡಿ ಸಂತ್ರಸ್ತರನ್ನು ಕಂಡು ವರದಿಯನ್ನು ಸಿದ್ಧಪಡಿಸಿ ಪ್ರಕಟಿಸಿತು. ಅದು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಇಂತಹ ವರದಿಯನ್ನು ಸಿದ್ಧಪಡಿಸುವ ಸಲಹೆ ಬಂದದ್ದು ಜಿ. ನಾರಾಯಣರಿಂದ. 'ಕನ್ನಡ-ಕನ್ನಡಿಗ-ಕರ್ನಾಟಕ'ಗಳ ಹಿತಕ್ಕೆ ಧಕ್ಕೆ ಬರುತ್ತಿದೆ ಎನ್ನುವಂತಹ ಸಂಗತಿಗಳು ನಡೆದಾಗ ಗಣ್ಯರ ಸಹಿ ಪಡೆದು ಆ ಮನವಿಯನ್ನು ಸರ್ಕಾರಕ್ಕೆ ಸಾರ್ವಜನಿಕರ ಗಮನಕ್ಕೆ ತರುವ ಪರಿಪಾಠವನ್ನು ಕನ್ನಡ ಶಕ್ತಿ ಕೇಂದ್ರ, ಕನ್ನಡ ಗೆಳೆಯರ ಬಳಗ ಮಾಡುತ್ತಿವೆ. ಬಹುತೇಕ ಮನವಿಗಳಿಗೆ ನಾರಾಯಣರ ಒಪ್ಪಿಗೆ ಇದ್ದೇ ಇರುತ್ತದೆ. ೨೭-೩-೧೯೯೪ರಿಂದ ಪ್ರಾಥಮಿಕ ಶಿಕ್ಷಣವು ಮಾತೃಭಾಷೆಯಲ್ಲೇ ಇರಬೇಕೆಂದು ಆಗ್ರಹಿಸಿ ಕನ್ನಡ ಶಕ್ತಿ ಕೇಂದ್ರದ ಅಧ್ಯಕ್ಷ ಡಾ॥ ಎಂ. ಚಿದಾನಂದಮೂರ್ತಿ ಆಮರಣ ಉಪವಾಸ ಆರಂಭಿಸಿದರು. ಆಗ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಜಿ. ನಾರಾಯಣ (ಜೊತೆಯಲ್ಲಿ ಹಾ. ಮಾ. ನಾಯಕ, ಎಲ್.ಎಸ್. ಶೇಷಗಿರಿರಾವ್, ಗೊ.ರು.ಚ. ಅವರೂ ಇದ್ದರು) ಅವರು ವಹಿಸಿದ ಪಾತ್ರ ಮಹತ್ವದ್ದು. ಮುಖ್ಯಮಂತ್ರಿ ವೀರಪ್ಪ ಮೊಯ್ಲಿಯವರನ್ನು ಮನವೊಲಿಸಿ 'ಕಡ್ಡಾಯ ಮಾತೃಭಾಷಾ ಶಿಕ್ಷಣ' ಆಜ್ಞೆಯನ್ನು ತಕ್ಷಣ ಬರುವಂತೆ ಮಾಡಿದರು. ಮಹಾಜನ್ ವರದಿಯ ಅನುಷ್ಠಾನಕ್ಕೆ ಒತ್ತಾಯಿಸಿ ರಾಜ್ಯಮಟ್ಟದ ಧರಣಿ ನಡೆಯಿತು. ನಿಜಲಿಂಗಪ್ಪನವರು ಉದ್ಘಾಟಿಸಿದ ಧರಣಿಯಲ್ಲಿ ಜಿ. ನಾರಾಯಣರು ಪಾಲ್ಗೊಂಡಿದ್ದುದು ನನಗೆ ಮರೆಯಲಾಗದ ಘಟನೆ.

೧೯೮೭ರಲ್ಲಿ ಡಿ.ವಿ.ಜಿ. ಶತಮಾನೋತ್ಸವ ನಡೆಯಿತು. ಸಮಿತಿಯ ಅಧ್ಯಕ್ಷರಾಗಿದ್ದ ಜಿ. ನಾರಾಯಣರು ಸಂಘಗಳ ಸಹಕಾರದಿಂದ ಒಂದು ದಿನದ ಶಿಬಿರ ನಡೆಸಿದರು. ಆ ಶಿಬಿರದಲ್ಲಿ ನಾಡು-ನುಡಿಯ ವಿಚಾರವು ಸೇರಿತ್ತು. ಇಂತಹ ಒಂದು ಶಿಬಿರವನ್ನು ನಡೆಸಲೆಂದು

ಕೆಲವು ಗೆಳೆಯರು ಸೇರಿ 'ಕನ್ನಡ ಗೆಳೆಯರ ಬಳಗ'ವನ್ನು ಸ್ಥಾಪಿಸಿದೆವು. (ಇಂದು ಆ ಬಳಗವು ಏನೆಲ್ಲ ಮಾಡಿದೆ ಎಂಬುದು ಹೇಳಬೇಕಿಲ್ಲ. ರಾಜ್ಯ ಮಟ್ಟದಲ್ಲಿ ಎಲ್ಲರ ಗಮನ ಸೆಳೆದಿದೆ). ಈ ಶಿಬಿರದ ಪರಿಣಾಮವಾಗಿ ಕನ್ನಡ ಶಕ್ತಿ ಕೇಂದ್ರ ಹಲವು ಕನ್ನಡ ಕಾರ್ಯಕರ್ತರ ಶಿಬಿರ ನಡೆಸಿತು. ಅವರಲ್ಲೂ ಜಿ. ನಾರಾಯಣರು ಪಾಲ್ಗೊಂಡರು. ಇಂತಹ ಶಿಬಿರಗಳು ಕಾರ್ಯಕರ್ತರಲ್ಲಿ ಶಿಸ್ತು ಮೂಡಿಸಿ ಸಮಸ್ಯೆಗಳ ಅರಿವು ಮೂಡಿಸಿತು. ಇಂದು ಬಹಳಷ್ಟು ಸಂಘಟನೆಗಳು ಇಂತಹ ಶಿಬಿರಗಳನ್ನು ನಡೆಸುತ್ತಿವೆ. ಇಂತಹ ಕನ್ನಡ ಶಿಬಿರವನ್ನು ನಡೆಸಿದ ಮೊದಲಿಗರು ಜಿ. ನಾರಾಯಣ. ಇವರು ಆರಂಭಿಸಿದ ಇನ್ನೊಂದು ಕೆಲಸ ಸಂತ್ರಸ್ತ ಕನ್ನಡಿಗರಿಗೆ ನೆರವಾಗುವುದು. ೧೯೮೫ರಲ್ಲಿ ಉತ್ತರ ಕರ್ನಾಟಕವು ತೀವ್ರ ಬರಗಾಲಕ್ಕೆ ಈಡಾಯಿತು. ಆಗ ನಾರಾಯಣರ ಪ್ರಚೋದನೆಯಿಂದ ಸಾಹಿತಿಗಳ ಕಲಾವಿದರ ಬಳಗವು ಬೆಂಗಳೂರಿನ ಎಲ್ಲ ಕನ್ನಡ ಕಾರ್ಯಕರ್ತರ ಸಭೆ ಕರೆದು ಜಿ. ನಾರಾಯಣರ ಅಧ್ಯಕ್ಷತೆಯಲ್ಲಿ 'ಬರ ಪರಿಹಾರ ನಿಧಿ' ಸ್ಥಾಪಿಸಿತು. ಪ್ರತಿ ಭಾನುವಾರ ಹಿರಿಯ ಸಾಹಿತಿಗಳು, ಕಲಾವಿದರು, ಇತರ ಕ್ಷೇತ್ರದ ಗಣ್ಯರನ್ನೊಳಗೊಂಡ ಕಾರ್ಯಕರ್ತರ ತಂಡ ಮನೆ ಮನೆಗೆ ಹೋಗಿ ನಿಧಿ ಸಂಗ್ರಹಿಸಿ ೫೧ ಸಾವಿರಗಳನ್ನು ಮುಖ್ಯಮಂತ್ರಿ ಬರಪರಿಹಾರ ನಿಧಿಗೆ ನೀಡಿ. ಇಂದು ಅಂತಹ ಕೆಲಸಗಳು ಕನ್ನಡ ಪರ ಸಂಘಟನೆಯ ಭಾಗವಾಗಿವೆ.

ಜಿ. ನಾರಾಯಣ ಅವರು ಬೆಂಗಳೂರಿನ ಪ್ರಮುಖ ಕನ್ನಡ ಸಂಘಟನೆಗಳೊಡನೆ ನಿಕಟ ಸಂಪರ್ಕ ಇರಿಸಿಕೊಂಡಿದ್ದಾರೆ. ಇಲ್ಲಿ ವಿಶೇಷವಾಗಿ ಪ್ರಸ್ತಾಪಿಸಲೇ ಬೇಕಾದದ್ದು ಕರ್ನಾಟಕ ಕೆಥೋಲಿಕ್ ಕ್ರೈಸ್ತರ ಕನ್ನಡ ಸಂಘದ ಹೋರಾಟಕ್ಕೆ ಬೆಂಬಲಿಸಿ ವ್ಯಾಟಿಕನ್ ಪೋಪ್‌ಗೆ ಪತ್ರ ಬರೆದದ್ದಲ್ಲದೆ, ಅವರಿಗೆ ನಿರಂತರ ಬೆಂಬಲ ನೀಡಿದ್ದು. ಒಂದಲ್ಲ ಒಂದು ಸಂದರ್ಭದಲ್ಲಿ ಕನ್ನಡ ಸಂಘಟನೆಗಳು ಅವರ ಮಾರ್ಗದರ್ಶನ ಪಡೆದುಕೊಂಡಿವೆ. ಇಂದಿಗೂ ಹಲವು ಸಂಟನೆಗಳು ಜಿ. ನಾರಾಯಣರವರ ಸಲಹೆ ಪಡೆದೇ ಕಾರ್ಯಕ್ರಮಗಳನ್ನು ರೂಪಿಸುತ್ತವೆ. ಬೆಂಗಳೂರಿನ ಕನ್ನಡೀಕರಣ, ವಲಸೆ ಸಮಸ್ಯೆಗಳ ಬಗ್ಗೆ ಅವರಿಗಿರುವಷ್ಟು ತಿಳಿವು ಇನ್ನಾರಿಗೂ ಇಲ್ಲ ಎಂದರೆ ತಪ್ಪಾಗಲಾರದು. ಕನ್ನಡನಾಡು-ನುಡಿಗಳ ಸಮಸ್ಯೆ ಮತ್ತು ಅವುಗಳ ಪರಿಹಾರಕ್ಕೆ ನಾರಾಯಣರದೇ ಆದ ಮಾರ್ಗೋಪಾಯಗಳಿವೆ. ಇವರ ಚಿಂತನೆಗಳು ಸೌಮ್ಯಸ್ವರೂಪದ್ದು, ಸಂಪ್ರದಾಯಿಯಾದದ್ದು ಅನ್ನಿಸಿದರೂ ಸಮಸ್ಯೆಗಳನ್ನು ಗ್ರಹಿಸಿ ವಿಶ್ಲೇಷಿಸುವ ರೀತಿ, ತೆಗೆದು ಕೊಳ್ಳುವ ಸಂಯಮದ ನಿರ್ಧಾರಗಳಿಂದ ಕನ್ನಡಪರ ಕೆಲಸಗಳಿಗೆ ಸಾತ್ವಿಕ ಶಕ್ತಿಯೆನಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ಇವರು ಕಟ್ಟಿದ ಕಾರ್ಯಕರ್ತರ ತಂಡ ಕನ್ನಡ ಕೆಲಸಗಳಿಗೆ ಹೊಸ ಆಯಾಮ ನೀಡಿತು. ಈ ತಂಡವು ಶಿಸ್ತು, ಸಂಯಮ, ನಿಷ್ಠೆ, ಅರ್ಪಣಾಭಾವದಿಂದ ಕೆಲಸಮಾಡಿ ಕನ್ನಡಿಗರ ಮನದಲ್ಲಿ ವಿಶಿಷ್ಟ ಸ್ಥಾನ ಗಳಿಸಿಕೊಂಡಿದೆ, ಆದರ್ಶಪ್ರಾಯವಾಗಿದೆ. ಹಲವರ ಪಾಲಿಗೆ ನಾರಾಯಣ ಅವರು 'ಶಾಶ್ವತ ಅಧ್ಯಕ್ಷರು'. ಇಂದಿಗೂ ಅವರ ಹೆಸರನ್ನು ಹೇಳದೆ 'ಅಧ್ಯಕ್ಷರು' ಎನ್ನುವ ಕಾರ್ಯಕರ್ತರ ದೊಡ್ಡ ತಂಡವೇ ಇದೆ. ಕಾರ್ಯಕರ್ತರನ್ನು ಕುಟುಂಬದ ಸದಸ್ಯರಂತೆ ನೋಡಿಕೊಳ್ಳುವುದರ ಜೊತೆಗೆ ಕಷ್ಟ-ಸುಖಗಳಲ್ಲಿ ಭಾಗಿಯಾಗುತ್ತಾರೆ. ಎಲ್ಲರನ್ನೂ ಒಂದೇ ವಿಶ್ವಾಸದಿಂದ ಕಾಣುವುದು, ಸಮಾನ

ಕಾಣಿಸಿ ತೋರುವುದರಿಂದ ನಾರಾಯಣರ ಮಾತೆಂದರೆ ವೇದವಾಕ್ಯ. ಆ ಕಾರಣದಿಂದಾಗಿಯೇ ಅವರಿದ್ದೆಡೆಯಲ್ಲೆಲ್ಲ ಅವರನ್ನು ಹಿಂಬಾಲಿಸುವ ಒಂದು ದೊಡ್ಡ ತಂಡ ಶಾಶ್ವತವಾಗಿ ಉಳಿದಿದೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ

ಕನ್ನಡ ಶಕ್ತಿ ಕೇಂದ್ರದ ಸಲಹೆಯನ್ನು ಒಪ್ಪಿ ಮುಖ್ಯಮಂತ್ರಿಯಾಗಿದ್ದ ಬಂಗಾರಪ್ಪನವರು ೧೯೯೨ರಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರವನ್ನು ಪ್ರಕಟಿಸಿದಾಗ ಜಿ. ನಾರಾಯಣರು ಅದರ ಅಧ್ಯಕ್ಷರಾದರು. ಅಧಿಕಾರ ಸ್ವೀಕರಿಸಿದ ತಕ್ಷಣ ವಿವಿಧ ಕ್ಷೇತ್ರದ ಗಣ್ಯರೊಡನೆ ಸಮಾಲೋಚನೆ ನಡೆಸಿದರು. ಕನ್ನಡ ಶಕ್ತಿ ಕೇಂದ್ರವು ಅವರ ಸಲಹೆಯ ಮೇರೆಗೆ 'ಕನ್ನಡ ಅಭಿವೃದ್ಧಿ ಪ್ರಾಧಿಕಾರ–ಕನ್ನಡಿಗರ ನಿರೀಕ್ಷೆ' ಎಂಬ ಸಭೆಯನ್ನು ಜಿ.ಎಸ್. ಶಿವರುದ್ರಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆಸಿತು. ವಿವಿಧ ಸಂಘಟನೆಗಳು, ಕ್ಷೇತ್ರದ ಗಣ್ಯರು ಪಾಲ್ಗೊಂಡಿದ್ದ ಈ ಸಭೆಯಲ್ಲಿ ಸಕ್ರಿಯವಾಗಿ ನಾರಾಯಣ ಅವರು ಪಾಲ್ಗೊಂಡರು. ಈ ಪ್ರಕ್ರಿಯೆಗಳ ನಂತರ ೨೦ ಅಂಶಗಳನ್ನೊಳಗೊಂಡ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕ್ರಿಯಾ ಯೋಜನೆಯನ್ನು ರೂಪಿಸಿದರು. ಸಾಕಷ್ಟು ಶ್ರಮಿಸಿದರು. ಅಧಿಕಾರಶಾಹಿಗಳ ಅಸಹಕಾರ, ಸರ್ಕಾರದ ನಿರಾಸಕ್ತಿಯಿಂದ ಅದು ಪೂರ್ಣವಾಗಿ ಅನುಷ್ಠಾನಗೊಳ್ಳಲಿಲ್ಲ. ಅದು ಅನುಷ್ಠಾನಗೊಂಡಿದ್ದರೆ ಕರ್ನಾಟಕ ಕನ್ನಡಮಯವಾಗಿರುತ್ತಿತ್ತು (ಅದನ್ನು ಅನುಬಂಧವಾಗಿ ಕೊಡಲಾಗಿದೆ) ಅವುಗಳು ಇಂದಿಗೂ ಪ್ರಸ್ತುತವಾಗಿವೆ. ಆ ಅಂಶಗಳು ಎಂಬುದು ಗಮನಕ್ಕೆ ಬಂದಾಗ ಸಾಕಷ್ಟು ಪತ್ರ ಬರೆದಿದ್ದಾರೆ. ಹಿಂದಿ ಹೇರಿಕೆ ಕೇಂದ್ರದಿಂದ ಕರ್ನಾಟಕಕ್ಕಾಗಬೇಕಾದ ಕೆಲಸಗಳು, ವಿಶ್ವವಿದ್ಯಾಲಯ, ಕನ್ನಡಪರ ಸಂಘಟನೆಗಳಿಗೆ ಬರೆದಿರುವ ಪತ್ರಗಳು ಅಕ್ಷರಶಃ ಸಾವಿರಾರು. ಇವುಗಳು ಒಂದು ಪಿಎಚ್.ಡಿ. ಪ್ರಬಂಧಕ್ಕೆ ವಿಷಯವಾಗ ಬಲ್ಲದು. ಕನ್ನಡ ಕೆಲಸ ಮಾಡುವವರಿಗೆ ಮಾರ್ಗಸೂಚಿ ಆಗುತ್ತದೆ. ರಾಜ್ಯದ ಎಲ್ಲ ಜಿಲ್ಲೆಗಳ ಜೊತೆಗೆ ದೆಹಲಿಯವರೆಗೂ ವ್ಯಾಪಕ ಪ್ರವಾಸಮಾಡಿ ೧೬೦ಕ್ಕೂ ಹೆಚ್ಚು ಕಚೇರಿಗಳಿಗೆ ಭೇಟಿ ನೀಡಿ ೧೧೨ ಅಧಿಕಾರಿಗಳ ಸಭೆಯನ್ನು ನಡೆಸಿದರು. ಭೇಟಿ ನೀಡಿದ ಊರುಗಳಲ್ಲಿ ಕನ್ನಡ ಸಂಘಟನೆ, ವ್ಯಕ್ತಿಗಳ ಸಭೆ ನಡೆಸಿದರು. ಅಲ್ಲಿನ ಸಭೆಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ಸರ್ಕಾರಕ್ಕೆ ವರದಿಗಳನ್ನು ನೀಡಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದರು.

೧೯೯೬ನ್ನು 'ಕನ್ನಡ ಜಾಗೃತಿ ವರ್ಷ' ಎಂದು ಘೋಷಿಸಿದ ಜಿ. ನಾರಾಯಣರು ಇಡೀ ವರ್ಷ ನಡೆಸಿದ ಕೆಲಸಗಳು ಅಪೂರ್ವವಾದದ್ದು (ಆ ಸಂದರ್ಭದ ಎರಡು ಪತ್ರಗಳನ್ನು ಲೇಖನದ ಕೊನೆಯಲ್ಲಿ ಕೊಡಲಾಗಿದೆ) ವಿಧಾನ ಸೌಧದ ದ್ವಾರಗಳಲ್ಲಿ ಕಾಣಿಸಿಕೊಂಡ ಬ್ಯಾನರ್ 'ಕನ್ನಡವೇ ಸತ್ಯ; ಕನ್ನಡವೇ ನಿತ್ಯ' ಮರೆಯಲಾಗದು. ಆ ಸಂದರ್ಭದಲ್ಲಿ ಹೊರತಂದ 'ಆಡಳಿತ ಕನ್ನಡ ಅನುಷ್ಠಾನ – ಆದೇಶಗಳ ಸಂಕಲನ' (ಸುಮಾರು ೫೦೦ ಪುಟ) 'ಡಾ: ಸರೋಜಿನಿಮಹಿಷಿ ವರದಿ ಅನುಷ್ಠಾನ ಆದೇಶಗಳ ಸಂಕಲನ' 'ಸಿರಿಗನ್ನಡ ಅರ್ಥಕೋಶ' ಪ್ರಕಟಣೆಗಳು ಅರ್ಥಪೂರ್ಣ ಪ್ರಯತ್ನಗಳು. ಜಾಗೃತಿ ವರ್ಷದ ಅಂಗವಾಗಿ ನಡೆದ ಕನ್ನಡ ಸಂಘಟನೆಗಳೂ ಕಾರ್ಯಕರ್ತರ ಸಭೆಗಳಿಗೆ ಲೆಕ್ಕವೇ ಇಲ್ಲ. ವೀರಪ್ಪ ಮೊಯಿಲಿಯವರ ಅಧ್ಯಕ್ಷತೆಯಲ್ಲಿ ಉದ್ಘಾಟನೆಯಾಗಿ ಎಚ್.ಡಿ. ದೇವೇಗೌಡರ ಅಧ್ಯಕ್ಷತೆಯಲ್ಲಿ ಸಮಾರೋಪವಾದ

'ಕನ್ನಡ ಜಾಗೃತಿ ವರ್ಷ' ಕನ್ನಡ ಉಳಿಸಲು ಏನೆಲ್ಲ ಪ್ರಯತ್ನ ಮಾಡಬಹುದು ಎಂಬುದನ್ನು ತೋರಿಸಿಕೊಟ್ಟಿತು.

ಕನ್ನಡ ಜಾಗೃತಿ ವರ್ಷದ ಅಂಗವಾಗಿ ೧೯೯೩ರ ನವೆಂಬರ್ ೧ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿಯವರು 'ಪುಸ್ತಕ-ಆಂದೋಲನ'ವನ್ನು ಉದ್ಘಾಟಿಸಿದರು. ಅಂದು ಮಂತ್ರಿಗಳೂ, ಅಧಿಕಾರಿಗಳೂ ವಿವಿಧ ಕ್ಷೇತ್ರದ ಗಣ್ಯರೂ. ದೊಡ್ಡ ಸಂಖ್ಯೆಯ ಕಾರ್ಯಕರ್ತರೂ ಸದ್ಭಾವನಾ ಟೋಪಿ ತಲೆಗೇರಿಸಿ ಬಗಲಿಗೆ ಪುಸ್ತಕ ಜೋಳಿಗೆ ಹಾಕಿಕೊಂಡು ರಸ್ತೆಯಲ್ಲಿ ತಿರುಗಿ ಮನೆಗಳಿಗೆ ಹೋಗಿ ಮಾರಾಟ ಮಾಡಿದ್ದು ಮರೆಯಲಾಗದ ಘಟನೆ.

ಜಿ. ನಾರಾಯಣರು ನನ್ನಂಥ ನೂರಾರು ಕಾರ್ಯಕರ್ತರಿಗೆ ಸಂಘಟನೆಯ ಮೂಲ ಪಾಠ ಹೇಳಿಕೊಟ್ಟವರು. ಅರುವತ್ತು ವರ್ಷಗಳ ಅವರ ಸಾರ್ವಜನಿಕ ಜೀವನದಲ್ಲಿ ನಡೆಸಿದ ಎಲ್ಲ ಕನ್ನಡ ಕೆಲಸಗಳನ್ನು ದಾಖಲಿಸಲು ಸಾಧ್ಯವಿಲ್ಲ ಎಂಬ ಅರಿವಿದೆ. ಅವರು ನಡೆಸಿದ ಕನ್ನಡ ಕೆಲಸಗಳಿಗೆ ಇದೊಂದು ಮುನ್ನುಡಿ ಅಷ್ಟೆ. ಎಲ್ಲ ಕನ್ನಡಪರ ಕೆಲಸಗಳಿಗೆ ಸ್ಫೂರ್ತಿಯ ಸೆಲೆಯಾಗಿರುವ ನಾರಾಯಣರ ಬಗ್ಗೆ ಎಷ್ಟು ಹೇಳಿದರೂ ಹೇಳಬೇಕಾದದ್ದು ಉಳಿದಿರುತ್ತದೆ. ಇಂತಹ ಕ್ರಿಯಾಶೀಲ ವ್ಯಕ್ತಿಯ ಸೇವೆ ನಮಗೆ ಇನ್ನೂ ನೂರ್ಕಾಲ ಲಭಿಸಲಿ ಎಂದು ಹಾರೈಸುವುದು ನಮ್ಮ ಕರ್ತವ್ಯ ಎಂದು ತಿಳಿದಿದ್ದೇನೆ.

ಅನುಬಂಧ–೧
ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಭಾಷೆಯು ಮಾನವನ ಸಮಷ್ಟಿ ಜೀವನದ ವಾಹಕವಾಗಿರುವಂತೆ ಆತನ ತಲೆಮಾರಿನ ಸ್ಫೂರ್ತಿ, ಸಂದೇಶಗಳ ವಾಹಕವೂ ಆಗಿದೆ. ಈ ದೃಷ್ಟಿಯಿಂದ ಕನ್ನಡವು ಅನೇಕ ಶತಮಾನಗಳ ತನ್ನ ಸಂಸ್ಕೃತಿಯನ್ನು ಇಂದಿಗೂ ಅಚ್ಚಳಿಯದೆ ಉಳಿಸಿಕೊಂಡು ಬಂದಿದೆ. ಕನ್ನಡ ಭಾಷೆಗೆ ಸಾವಿರಾರು ವರ್ಷಗಳ ಉಜ್ವಲ ಚರಿತ್ರೆಯಿದೆ. ಆಡಳಿತದ ಸುಗಮತೆಗೆ ಭಾಷೆ ಒಂದು ಸಾಧನ. ಆಡಳಿತವನ್ನು ಜನರ ಹತ್ತಿರಕ್ಕೆ ಒಯ್ಯಲು, ಶ್ರೀಸಾಮಾನ್ಯನ ಕಷ್ಟಸುಖಗಳಿಗೆ ಸ್ಪಂದಿಸಲು ಜನಸಾಮಾನ್ಯರ ಭಾಷೆಯೇ ಮುಖ್ಯ ಸಂಪರ್ಕ ಸಾಧನ. ಪ್ರಜಾಪ್ರಭುತ್ವದ ಯಶಸ್ಸಿಗೂ ಇದೇ ಕಾರಣ. ಇದನ್ನರಿತೇ ಭಾರತದ ಎಲ್ಲ ರಾಜ್ಯಗಳು ತಮ್ಮ ರಾಜ್ಯ ಭಾಷೆಗಳನ್ನು ಆಡಳಿತ ಭಾಷೆಯಾಗಿ ಬಳಸುತ್ತಿವೆ. ಇದಕ್ಕೆ ಸಂವಿಧಾನದ ಬೆಂಬಲವಿದೆ.

ಕನ್ನಡ ನಾಡಿನಲ್ಲಿ ಹೈದರಾಲಿ, ಟಿಪ್ಪುಸುಲ್ತಾನ್ ಕಾಲದಲ್ಲಿ ಮತ್ತು ಅದಕ್ಕೂ ಪೂರ್ವದಲ್ಲಿ, ಅನಂತರ ಬ್ರಿಟಿಷರ ಕಾಲದಲ್ಲಿ ಇಲ್ಲಿಯ ಆಡಳಿತ ಭಾಷೆ ಕನ್ನಡವೇ ಆಗಿತ್ತು ಎಂಬುದಕ್ಕೆ ಅನೇಕ ನಿದರ್ಶನಗಳಿವೆ. ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಕೇಂದ್ರ ಸರ್ಕಾರ ಪ್ರಾಂತೀಯ ಭಾಷೆಗಳಿಗೆ ವಿಶೇಷ ಪ್ರೋತ್ಸಾಹ ಮತ್ತು ಮನ್ನಣೆ ನೀಡಿರುವುದಲ್ಲದೆ ಕೆಲವು ಅಧಿಕೃತ ಭಾಷೆಗಳಿಗೆ ರಾಷ್ಟ್ರಭಾಷೆಯ ಸ್ಥಾನಮಾನವನ್ನು ನೀಡಿದೆ. ಆ ರೀತಿ ಸ್ಥಾನಮಾನ ಪಡೆದ ಅಧಿಕೃತ ಭಾಷೆಗಳಲ್ಲಿ ಕನ್ನಡವೂ ಒಂದು. ತ್ರಿಭಾಷಾ ಸೂತ್ರದಲ್ಲಿ ರಾಜ್ಯಭಾಷೆಗೆ ಪ್ರಥಮ ಸ್ಥಾನ. ಕರ್ನಾಟಕದಲ್ಲಿ ಕನ್ನಡವೇ ರಾಜ್ಯಭಾಷೆ ಆಗಿರತಕ್ಕದ್ದು ಎಂಬ ತತ್ವವನ್ನು ೧೯೬೩ರಲ್ಲಿಯೇ ಕರ್ನಾಟಕ ಸರ್ಕಾರ ಒಪ್ಪಿಕೊಂಡಿದೆ. ಭಾಷಾವಾರು ಪ್ರಾಂತ ರಚನೆಯ ಉದ್ದೇಶವೂ ಅದೇ ಆಗಿದೆ. ಕರ್ನಾಟಕ ಸರ್ಕಾರ ಭಾಷಾ ಅಲ್ಪಸಂಖ್ಯಾತರಿಗೆ ಅಗತ್ಯವಾದ ಸೌಲಭ್ಯಗಳನ್ನು ಒದಗಿಸಿಕೊಟ್ಟಿದೆ.

ಕರ್ನಾಟಕದಲ್ಲಿ ೧-೪-೧೯೬೮ರಿಂದ ತಾಲ್ಲೂಕು ಮಟ್ಟದ ಕಛೇರಿಗಳಲ್ಲಿ, ೧೪-೮-೧೯೭೨ರಿಂದ ಜಿಲ್ಲಾ ಮಟ್ಟದ ಕಛೇರಿಗಳಲ್ಲಿ, ೧-೧೧-೧೯೭೮ರಿಂದ ಸಚಿವಾಲಯವೂ ಸೇರಿದಂತೆ ಆಡಳಿತದ ಎಲ್ಲ ಹಂತಗಳಲ್ಲಿ ಕನ್ನಡವನ್ನು ಜಾರಿಗೊಳಿಸಬೇಕೆಂದು ರಾಜ್ಯ ಸರ್ಕಾರ ಹಿಂದೆಯೇ ಆದೇಶ ಹೊರಡಿಸಿದೆ. ಕನ್ನಡ ಆಡಳಿತ ಭಾಷಾ ಸಮಿತಿ, ಕನ್ನಡ ಆಡಳಿತ ಭಾಷಾ ಕಾವಲು ಸಮಿತಿ, ಕನ್ನಡ ಕಾವಲು ಮತ್ತು ಗಡಿ ಸಲಹಾ ಸಮಿತಿ, ಜಿಲ್ಲಾ ಮಟ್ಟದ ಸಮಿತಿ, ಕನ್ನಡ ಅಭಿವೃದ್ಧಿ ಮಂಡಳಿ ಮುಂತಾದ ಸಮಿತಿಗಳನ್ನು ರಚಿಸಿ, ಅವುಗಳ ಸಲಹೆ ಸೂಚನೆ ಪಡೆದು ಕನ್ನಡವನ್ನು ಅನುಷ್ಠಾನಕ್ಕೆ ತರಲು ಪ್ರಯತ್ನ ನಡೆಸಿದೆ. ಅಧಿಕಾರಿಗಳಿಗೆ, ನೌಕರರಿಗೆ ಆಡಳಿತ ಕನ್ನಡದಲ್ಲಿ ತರಬೇತಿ ನೀಡುವುದು, ಕನ್ನಡ ಬೆರಳಚ್ಚು ಮತ್ತು ಕನ್ನಡ ಶೀಘ್ರಲಿಪಿಯಲ್ಲಿ ತರಬೇತಿ ಕೊಡುವುದು, ಕನ್ನಡ ಬಾರದವರಿಗೆ ಅಂಚೆ ಮೂಲಕ ಕನ್ನಡ ಕಲಿಸುವುದು, ಪ್ರತಿಯೊಂದು ಇಲಾಖೆಗೂ ಅದರದೇ ಆದ ಪಾರಿಭಾಷಿಕ ಪದಕೋಶ ತಯಾರಿಸಿಕೊಡುವುದು, ಇಲಾಖಾ ಕೈಪಿಡಿ, ಕಛೇರಿ ಕೈಪಿಡಿ, ಆಡಳಿತ ಸಂಹಿತೆ, ರಾಜ್ಯ ಮತ್ತು ಕೇಂದ್ರ ಅಧಿನಿಯಮಗಳು, ನಿಯಮಾವಳಿಗಳು, ಇಲಾಖಾ ನಮೂನೆಗಳು ಮೊದಲಾದವುಗಳ ಕನ್ನಡ ಅನುವಾದ ಮಾಡಿಸಿ ಪ್ರಕಟಿಸುವುದು, ಪೂರಕ ಸಾಹಿತ್ಯ ಪ್ರಕಟಣೆ, ಕನ್ನಡ ಅನುಷ್ಠಾನದ ಬಗ್ಗೆ ವಿಚಾರ ಸಂಕಿರಣಗಳನ್ನು ಏರ್ಪಡಿಸುವುದು ಮುಂತಾದ ಹಲವು ಹತ್ತಾರು ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಸಚಿವಾಲಯದಿಂದ ಅಧೀನ ಕಛೇರಿಗಳಿಗೆ ಇನ್ನೂರ ಅರುವತ್ತಕ್ಕೂ ಮೀರಿ ಆದೇಶಗಳು ಹೋಗಿವೆ. ಇವೆಲ್ಲದರ ಪರಿಣಾಮವಾಗಿ ಆಡಳಿತದಲ್ಲಿ ತಕ್ಕ ಮಟ್ಟಿಗೆ ಕನ್ನಡ ಜಾರಿಗೆ ಬಂದಿದೆ.

ಇವನ್ನು ನೂರಕ್ಕೆ ನೂರರಷ್ಟು ಯಶಸ್ವಿಗೊಳಿಸಲು ಮತ್ತು ಕನ್ನಡಿಗರ ಉದ್ಯೋಗಕ್ಕೆ ಸಂಬಂಧಿಸಿದಂತೆ ಡಾ. ಸರೋಜಿನಿ ಮಹಿಷಿ ಸಮಿತಿ ವರದಿಯನ್ನು ಅನುಷ್ಠಾನಕ್ಕೆ ತರಲು ಸರ್ಕಾರವು ದಿನಾಂಕ ೬-೨-೧೯೯೨ರಂದು "ಕನ್ನಡ ಅಭಿವೃದ್ಧಿ ಪ್ರಾಧಿಕಾರ"ವನ್ನು ರಚಿಸಿದೆ. ದಿನಾಂಕ ೮-೭-೧೯೯೨ರಂದು ಇದರ ಉದ್ಘಾಟನೆ ಆಯಿತು. ಪ್ರಾಧಿಕಾರ ಸಾರ್ವಜನಿಕರ ಸಲಹೆ ಸೂಚನೆಗಳನ್ನು ಪಡೆದು ಒಂದು ಕಾರ್ಯ ಯೋಜನೆಯನ್ನು ರೂಪಿಸಿ ಅದರಂತೆ ಕೆಲಸ ಮಾಡುತ್ತಿದೆ. ಇದನ್ನು ಗಮನಿಸಿ ಸರ್ಕಾರವು ಆದೇಶಗಳನ್ನು ಹೊರಡಿಸಿದೆ. ಈ ಕಾರ್ಯಯೋಜನೆಗಳಲ್ಲಿ ಕೆಳಕಂಡ ೨೦ ಮುಖ್ಯ ಅಂಶಗಳು ಸೇರಿವೆ.

೧. ಕರ್ನಾಟಕ ಸರ್ಕಾರ ಆಡಳಿತದ ಎಲ್ಲ ಹಂತಗಳಲ್ಲಿ ಕನ್ನಡವನ್ನು ಅನುಷ್ಠಾನಕ್ಕೆ ತರಲು ೧೯೬೩ರಿಂದ ಈವರೆಗೆ ಹೊರಡಿಸಿರುವ ಎಲ್ಲ ಆದೇಶಗಳನ್ನು ಸಂಗ್ರಹಿಸಿ, ಪುಸ್ತಕ ರೂಪದಲ್ಲಿ ಪ್ರಕಟಿಸಿ ಪ್ರತಿಯೊಂದು ಇಲಾಖೆಗೂ ಅದನ್ನು ಕಳುಹಿಸಿಕೊಡಲಾಗುವುದು.

೨. ಆ ಎಲ್ಲ ಆದೇಶಗಳನ್ನು ಸಮೀಕ್ಷಿಸಿ ಇನ್ನೂ ಕಾರ್ಯಗತವಾಗದೆ ಉಳಿದಿರುವ ಆದೇಶಗಳು ಕಾರ್ಯಗತವಾಗುವಂತೆ ಕ್ರಮ ಜರುಗಿಸುವುದು.

೩. ಕನ್ನಡಿಗರಿಗೆ ಉದ್ಯೋಗಾವಕಾಶಗಳನ್ನು ಒದಗಿಸುವ ದೃಷ್ಟಿಯಿಂದ ರಚಿಸಲಾದ ಡಾ. ಸರೋಜಿನಿ ಮಹಿಷಿ ಸಮಿತಿ ವರದಿಯ ಶಿಫಾರಸ್ಸುಗಳನ್ನು ಆದೇಶಗಳ ಸಹಿತ ಪ್ರಕಟಿಸಿ, ಅವು ಪರಿಣಾಮಕಾರಿಯಾಗಿ ಕಾರ್ಯಾಚರಣೆಗೆ ಬರಲು ಅಗತ್ಯವಾದ ಕ್ರಮ ಕೈಗೊಳ್ಳುವುದು

೪. ರಾಜ್ಯ ಮಟ್ಟದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಭಾಗ ಮಟ್ಟದಲ್ಲಿ ವಿಭಾಗಾಧಿಕಾರಿಗಳು, ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿ, ಉಪ ವಿಭಾಗ ಮಟ್ಟದಲ್ಲಿ ಉಪ ವಿಭಾಗಾಧಿಕಾರಿ ಮತ್ತು ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರ್ – ಇವರನ್ನು ಪ್ರಾಧಿಕಾರದ ಉದ್ದೇಶಗಳನ್ನು ನೆರವೇರಿಸಲು ಜವಾಬ್ದಾರರನ್ನಾಗಿ ಮಾಡಿ ಪ್ರಾಧಿಕಾರ ಆಗಾಗ ಪರಿವೀಕ್ಷಣೆ ನಡೆಸುವುದು.

೫. ಕನ್ನಡ ಅನುಷ್ಠಾನ ಮತ್ತು ಡಾ. ಸರೋಜಿನಿ ಮಹಿಷಿ ಸಮಿತಿ ವರದಿ ಶಿಫಾರಸ್ಸುಗಳು ಎಷ್ಟರಮಟ್ಟಿಗೆ ಜಾರಿಯಾಗಿವೆ ಎಂಬುದನ್ನು ಪರಿಶೀಲಿಸಲು ಸರ್ಕಾರಿ ಕಛೇರಿಗಳಿಗೆ, ಸರ್ಕಾರದ ಅನುದಾನ ಪಡೆಯುತ್ತಿರುವ ಸಂಸ್ಥೆಗಳಿಗೆ ಮತ್ತು ಸಾರ್ವಜನಿಕ ಉದ್ಯಮಗಳಿಗೆ ಭೇಟಿ ನೀಡುವುದು. ಈ ಸಂಬಂಧ ಸರ್ಕಾರದ ಆದೇಶಗಳನ್ನು ಜಾರಿಗೆ ತರುವಲ್ಲಿ ಕರ್ತವ್ಯಲೋಪ ಮಾಡಿದ ಅಧಿಕಾರಿ ಮತ್ತು ನೌಕರರ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು.

೬. ಆದೇಶಗಳ ಧ್ಯೇಯ ಮತ್ತು ಉದ್ದೇಶಗಳನ್ನು ಸರಿಯಾಗಿ ಮತ್ತು ಪರಿಣಾಮಕಾರಿಯಾಗಿ ಅನುಷ್ಠಾನ

ಗೊಳಿಸುವಂತೆ ಮಾಡುವ ಸಲುವಾಗಿ ಪ್ರಾಧಿಕಾರವು ರಾಜ್ಯ ಸರ್ಕಾರ, ಸ್ಥಳೀಯ ನಿಕಾಯಗಳು, ಸಾರ್ವಜನಿಕ ಉದ್ದಿಮೆಗಳು ಮತ್ತು ಸರ್ಕಾರದ ಅನುದಾನಗಳನ್ನು ಪಡೆಯುತ್ತಿರುವ ಎಲ್ಲ ಸಂಸ್ಥೆಗಳ ಅಧಿಕಾರಿಗಳು ಅಥವಾ ನೌಕರರನ್ನು ಪ್ರಾಧಿಕಾರದ ಮುಂದೆ ಹಾಜರಾಗುವಂತೆ ನಿರ್ದೇಶಿಸುವುದು.

೭. ರಾಜ್ಯದಲ್ಲಿ ಹೆಚ್ಚು ಜನಸಂಪರ್ಕ ಹೊಂದಿರುವ ಕೇಂದ್ರ ಸರ್ಕಾರದ ಕಛೇರಿಗಳು, ಬ್ಯಾಂಕುಗಳು, ಅಂಚೆ ಕಛೇರಿಗಳು ಹಾಗೂ ಮತ್ತಿತರ ಕಛೇರಿಗಳು ಮತ್ತು ಉದ್ದಿಮೆಗಳಲ್ಲಿ ದೈನಂದಿನ ಬಳಕೆಯಲ್ಲಿರುವ ನಮೂನೆ, ನೋಟೀಸು, ನಾಮಫಲಕಗಳಲ್ಲಿ ಕೇಂದ್ರ ಸರ್ಕಾರದ ತ್ರಿಭಾಷಾ ನೀತಿಗೆ ಅನುಗುಣವಾಗಿ ಪ್ರಾದೇಶಿಕ ಭಾಷೆಯನ್ನು ಬಳಸಲಾಗುತ್ತಿದೆಯೇ ಎಂಬುದಾಗಿ ಪರಿಶೀಲಿಸುವುದು ಮತ್ತು ಆ ಸಂಬಂಧ ಅಂಥ ಕಛೇರಿಗಳೊಂದಿಗೆ ಪತ್ರವ್ಯವಹಾರ ನಡೆಸುವುದು.

೮. ರಾಜ್ಯ ಸರ್ಕಾರಿ ನೌಕರರ ವಾರ್ಷಿಕ ರಹಸ್ಯ ವರದಿಯಲ್ಲಿ "ಉದ್ಯೋಗಿಗೆ ಕನ್ನಡ ಅನುಷ್ಠಾನದಲ್ಲಿರುವ ಆಸಕ್ತಿ" ಎಂಬುದನ್ನು ಒಂದು ಗಣನಾತ್ಮಕ ಅಂಶವಾಗಿ ಸೇರಿಸುವಂತೆ ಮಾಡುವುದು.

೯. ನೇಮಕಾತಿ ಮತ್ತು ಇಲಾಖಾ ಪರೀಕ್ಷೆಗಳು (ಸೇವಾ ಪರೀಕ್ಷೆಗಳು) ಕನ್ನಡದಲ್ಲೇ ನಡೆಯುವಂತೆ ಮಾಡುವುದು.

೧೦. ಈಗ 'ಸಿ' ಗುಂಪಿನ ನೌಕರರಿಗೆ ನೇಮಕಾತಿ ಪೂರ್ವ ಕನ್ನಡ ಭಾಷಾ ಪರೀಕ್ಷೆ ಕಡ್ಡಾಯವಾಗಿ ಇರುವುದನ್ನು 'ಎ' ಮತ್ತು 'ಬಿ' ಗುಂಪಿನವರಿಗೂ ವಿಸ್ತರಿಸುವಂತೆ ಮಾಡುವುದು. ಕ್ರಮೇಣ ನೇಮಕಾತಿಗೆ ಸಂಬಂಧಿಸಿದ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಒಂದು ಕನ್ನಡ ಭಾಷಾ ಪತ್ರಿಕೆಯನ್ನು ಕಡ್ಡಾಯಗೊಳಿಸುವುದು.

೧೧. ಸರ್ಕಾರ ರಚಿಸುವ ಯಾವುವೇ ಅಧಿನಿಯಮಗಳು ಮೊದಲು ಇಂಗ್ಲೀಷ್‌ನಲ್ಲಿ ರಚನೆಯಾಗಿ ಅನಂತರ ಅವು ಕನ್ನಡದಲ್ಲಿ ಅನುವಾದವಾಗುವ ಬದಲು ಮೊದಲು ಕನ್ನಡದಲ್ಲೇ ಅವು ರಚನೆಯಾಗುವಂತೆ ಸರ್ಕಾರಕ್ಕೆ ಒತ್ತಾಯ ತರುವುದು.

೧೨. ಅಧಿಕಾರಿಗಳಿಗೆ, ನೌಕರರಿಗೆ ಕನ್ನಡ ಬಳಕೆಗೆ ಅನುಕೂಲವಾದ ತರಬೇತಿ ಕಾರ್ಯಕ್ರಮ, ಶಿಬಿರ, ಪ್ರದರ್ಶನ, ಮತ್ತು ವಿಚಾರ ಸಂಕಿರಣಗಳನ್ನು ಏರ್ಪಡಿಸುವುದು. ಕನ್ನಡೇತರರಿಗೆ ಕನ್ನಡ ಕಲಿಕೆ ಕಾರ್ಯಕ್ರಮಗಳು ಮತ್ತು ಆ ಸಂಬಂಧ ಪಠ್ಯಕ್ರಮ, ಸಾಹಿತ್ಯ ಸಿದ್ಧಪಡಿಸುವುದು.

೧೩. ಕನ್ನಡ ಬೆರಳಚ್ಚು ಯಂತ್ರಗಳ ತಯಾರಿಕೆ, ಖರೀದಿ ಮತ್ತು ವಿತರಣೆ ಬಗ್ಗೆ, ಕಛೇರಿ ಆಧುನೀಕರಣದಲ್ಲಿ ಬಳಸಲಾಗುವ ಕಂಪ್ಯೂಟರ್, ಟೆಲಿಪ್ರಿಂಟರ್, ಟೆಲೆಕ್ಸ್ ಇತ್ಯಾದಿ ಆಧುನಿಕ ಉಪಕರಣಗಳಲ್ಲಿ ಕನ್ನಡವನ್ನು ಬಳಸುವ ಬಗ್ಗೆ ಅಧ್ಯಯನ ಹಾಗೂ ಸಮಾಲೋಚನೆ ನಡೆಸುವುದು.

೧೪. ಕನ್ನಡ ಅಭಿವೃದ್ಧಿಗೆ ಸಂಬಂಧಿಸಿದ ಉಪಯುಕ್ತ ಪ್ರಕಟಣೆಗಳನ್ನು ಪ್ರಕಟಿಸುವುದು, ಖರೀದಿಸುವುದು ಮತ್ತು ವಿತರಿಸುವುದು.

೧೫. ಕಚೇರಿಗಳಲ್ಲಿ ಬಳಸಲಾಗುವ ಎಲ್ಲಾ ನಮೂನೆಗಳೂ ಕನ್ನಡದಲ್ಲಿ ಮುದ್ರಣವಾಗುವಂತೆ ನೋಡಿಕೊಳ್ಳುವುದು ಹಾಗೂ ಕನ್ನಡೇತರ ಭಾಷೆಗಳಲ್ಲಿ ಇರಲೇಬೇಕಾದ ನಮೂನೆ, ಪ್ರಕಟಣೆ ಮತ್ತು ರಿಜಿಸ್ಟರುಗಳನ್ನು ಪರಿಶೀಲಿಸಿ ಮುದ್ರಣಕ್ಕೆ ಅನುಮತಿ ನೀಡುವುದು.

೧೬. ಆಡಳಿತ ಪೂರಕ ಸಾಹಿತ್ಯ ರಚನೆ, ಪರಿಷ್ಕರಣೆ, ಮುದ್ರಣ ಮತ್ತು ವಿತರಣೆ ವಿಷಯಗಳಲ್ಲಿ ತೀರ್ಮಾನ ಕೈಗೊಳ್ಳುವುದು ಮತ್ತು ಈ ಕ್ಷೇತ್ರದಲ್ಲಿನ ಪ್ರಗತಿಯನ್ನು ಆಗಿಂದಾಗ್ಗೆ ಸಮೀಕ್ಷಿಸಿ ಸೂಕ್ತ ಕ್ರಮ ಸೂಚಿಸುವುದು.

೧೭. ಕೇಂದ್ರ ಸರ್ಕಾರವು ಕರ್ನಾಟಕದಲ್ಲಿರುವ ತನ್ನ ಕಛೇರಿಗಳು, ಉದ್ದಿಮೆಗಳು, ಬ್ಯಾಂಕುಗಳು ಮುಂತಾದ ಕಡೆಗಳಲ್ಲಿ ನೌಕರರಿಗೆ 'ಹಿಂದಿ' ಅಧಿಕಾರಿಯನ್ನು ನೇಮಿಸಿ ಹಿಂದಿ ಕಲಿಸುವಂತೆ ಕನ್ನಡೇತರ ನೌಕರರಿಗೆ ಕನ್ನಡ ಕಲಿಸಲು 'ಕನ್ನಡ ಅಧಿಕಾರಿ'ಯನ್ನು ನೇಮಿಸಬೇಕು ಮತ್ತು ಅಲ್ಲಿ ಒಂದು 'ಆಡಳಿತ ಕನ್ನಡ ಭಾಷಾ ಘಟಕ'ವೂ ಇರಬೇಕು ಎಂದು ಒತ್ತಾಯಿಸುವುದು.

೧೮. ಕನ್ನಡದ ಇತಿಹಾಸವೂ ಸೇರಿದಂತೆ ಆಡಳಿತ ಕನ್ನಡವನ್ನು ಕುರಿತ ಸಾಕ್ಷ್ಯಚಿತ್ರ ತಯಾರಿಸಿ ರಾಜ್ಯದ ಎಲ್ಲೆಡೆಯೂ ಪ್ರದರ್ಶಿಸುವುದು.

೧೯. ಡಾ. ಸರೋಜಿನಿ ಮಹಿಷಿ ವರದಿ ಅನುಷ್ಠಾನ ಹಾಗೂ ಆಡಳಿತ ಕನ್ನಡ ರಂಗದಲ್ಲಿನ ಚಟುವಟಿಕೆಗಳನ್ನು ತಿಳಿಸುವಂತಹ ಆಂತರಿಕ ಪ್ರಸಾರ ಪತ್ರಿಕೆ "ಕನ್ನಡ ಜಾಗೃತಿ" ಕನ್ನಡ ತ್ರೈಮಾಸಿಕ ಪ್ರಕಟಿಸುವುದು.

೨೦. ಕರ್ನಾಟಕದಲ್ಲಿ ಕನ್ನಡ ವಾತಾವರಣ ನಿರ್ಮಾಣವಾಗದೆ ಆಡಳಿತದಲ್ಲಿ ಕನ್ನಡ ಜಾರಿಗೆ ತರುವುದು ಕಷ್ಟವಾಗುವುದರಿಂದ ರಾಜ್ಯದಲ್ಲಿರುವ ಕನ್ನಡ ವಿಶ್ವವಿದ್ಯಾಲಯಗಳು, ಅಕಾಡೆಮಿಗಳು, ಸಾಹಿತ್ಯ ಪರಿಷತ್ತು ಮುಂತಾದ ಸಂಘ-ಸಂಸ್ಥೆಗಳ ಸಹಕಾರದಿಂದ ಕನ್ನಡಿಗರಲ್ಲಿ ಕನ್ನಡದ ಬಗ್ಗೆ ಜಾಗೃತಿ ಉಂಟುಮಾಡಲು ೧೯೯೩ನೇ ಏಪ್ರಿಲ್‌ನಿಂದ ೧೯೯೪ನೇ ಮಾರ್ಚ್‌ವರೆಗೆ ಒಂದು ವರ್ಷಕಾಲ "ಕನ್ನಡ ಜಾಗೃತಿ ವರ್ಷ"ವನ್ನು ಆಚರಿಸುವುದು.

ಈ ಅಂಶಗಳು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯಯೋಜನೆಯಲ್ಲಿ ಸೇರಿವೆ. ಕನ್ನಡ ಮತ್ತು ಕನ್ನಡಿಗರ ಹಿತಚಿಂತನೆಗಾಗಿ ಹಮ್ಮಿಕೊಂಡಿರುವ ಈ ಯೋಜನೆಯನ್ನು ಕನ್ನಡ ಜನತೆ ಹೃತ್ಪೂರ್ವಕವಾಗಿ ಸ್ವಾಗತಿಸಿ, ಇದನ್ನು ಯಶಸ್ವಿಯಾಗಿ ನಡೆಸಲು ತಮ್ಮ ಸಂಪೂರ್ಣ ಸಹಕಾರ ನೀಡಬೇಕೆಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಪ್ರಾರ್ಥಿಸುತ್ತದೆ.

ಜಿ. ನಾರಾಯಣ
ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಅನುಬಂಧ-೨
ಕನ್ನಡ ಜಾಗೃತಿ ವರ್ಷ – ರೂಪುರೇಷೆಗಳು

ಕರ್ನಾಟಕದಲ್ಲಿ ಕನ್ನಡ ವಾತಾವರಣ ನಿರ್ಮಾಣವಾಗದೆ ಕನ್ನಡದ ಯಾವ ಕೆಲಸಗಳೂ ಯಶಸ್ವಿಯಾಗುವುದು ಕಷ್ಟ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕನ್ನಡಿಗರಲ್ಲಿ ಜಾಗೃತಿಯನ್ನುಂಟು ಮಾಡಲು ೧೯೯೩ನೇ ಏಪ್ರಿಲ್‌ನಿಂದ ೧೯೯೪ನೇ ಮಾರ್ಚಿವರೆಗೆ "ಕನ್ನಡ ಜಾಗೃತಿ ವರ್ಷ"ವೆಂದು ಘೋಷಿಸಿ ಆಡಳಿತದಲ್ಲಿ ಕನ್ನಡದ ಬಳಕೆ ಮತ್ತು ಕನ್ನಡಿಗರ ಉದ್ಯೋಗಕ್ಕೆ ಸಂಬಂಧಿಸಿದ ಡಾ. ಸರೋಜಿನಿ ಮಹಿಷಿ ಸಮಿತಿ ವರದಿಯ ಶಿಫಾರಸ್ಸುಗಳನ್ನೂ ಪೂರ್ಣವಾಗಿ ಅನುಷ್ಠಾನಗೊಳಿಸಲು ಭಾಷಾ ಅಲ್ಪಸಂಖ್ಯಾತರ ಹಿತವನ್ನೂ ಗಮನದಲ್ಲಿಟ್ಟುಕೊಂಡು ಕೆಲವು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಸಚಿವರು, ಶಾಸಕರು, ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತಿಗಳು, ನಗರಪಾಲಿಕೆಗಳು, ಪುರಸಭೆಗಳು ಮುಂತಾದ ಸ್ಥಳೀಯ ಸಂಸ್ಥೆಗಳು ಸರ್ಕಾರದ ಎಲ್ಲ ಇಲಾಖೆಗಳ ಅಧಿಕಾರಿಗಳು, ನೌಕರರು, ಕೇಂದ್ರ ಸರ್ಕಾರದ ಕಛೇರಿಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರದ ಉದ್ದಿಮೆಗಳು, ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಸಂಸ್ಥೆಗಳು ಈ ಯೋಜನೆಯಲ್ಲಿ ಪಾಲ್ಗೊಂಡು ಪ್ರಾಧಿಕಾರದ ಉದ್ದೇಶ ಸಫಲವಾಗುವಂತೆ ಸಹಕರಿಸಬೇಕಾಗಿ ಕೋರಲಾಗಿದೆ.

ವಿಶ್ವವಿದ್ಯಾಲಯಗಳು, ಅಕಾಡೆಮಿಗಳು, ಸಾಹಿತ್ಯ ಪರಿಷತ್ತು, ಕನ್ನಡ ಸಂಘ ಸಂಸ್ಥೆಗಳು, ವಾಣಿಜ್ಯ ಮಹಾಮಂಡಳಿ, ಚಲನಚಿತ್ರ ವಾಣಿಜ್ಯ ಮಂಡಳಿ, ವಕೀಲರ ಸಂಘಗಳು, ಪತ್ರಕರ್ತರ ಸಂಘ, ಮಹಿಳಾ ಸಂಘಗಳು, ಅಧಿಕಾರಿ ಮತ್ತು ನೌಕರರ ಸಂಘಗಳು, ಕಾರ್ಮಿಕ ಸಂಘಗಳು, ರೈತ ಸಂಘಗಳು, ವಿದ್ಯಾರ್ಥಿ ಸಂಘಗಳು ಈ ಜಾಗೃತಿ ವರ್ಷದಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಏರ್ಪಡಿಸಿ, ನಾಡಿನ ಜನರಲ್ಲಿ ಕನ್ನಡ ನಾಡುನುಡಿಯ ಬಗ್ಗೆ ಜಾಗೃತಿ ಮೂಡಿಸಬೇಕಾಗಿ ಪ್ರಾಧಿಕಾರವು ಎಲ್ಲ ಸಂಘ ಸಂಸ್ಥೆಗಳಲ್ಲಿ ವಿನಂತಿ ಮಾಡಿಕೊಳ್ಳುತ್ತದೆ.

ಸಚಿವರು, ಶಾಸಕರು ಮತ್ತು ಜನತೆಯ ಪ್ರತಿನಿಧಿಗಳು:

ಸಚಿವರು, ಶಾಸಕರು, ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತಿ ಸದಸ್ಯರು ಹಾಗೂ ನಗರಪಾಲಿಕೆ ಮತ್ತು ಪುರಸಭಾ ಸದಸ್ಯರು ಮುಂತಾದ ಜನತೆಯ ಪ್ರತಿನಿಧಿಗಳು ಸರ್ಕಾರದ ಭಾಷಾ ನೀತಿಗೆ ಅನುಗುಣವಾಗಿ ತಮ್ಮ ದೈನಂದಿನ ಪತ್ರ ವ್ಯವಹಾರಗಳನ್ನು ಮತ್ತು ಕಡತಗಳ ಮೇಲೆ ಬರೆಯುವ ಟಿಪ್ಪಣಿಗಳನ್ನೂ, ತೀರ್ಪುಗಳನ್ನು ಕನ್ನಡದಲ್ಲೇ ಬರೆಯಬೇಕು.

ಅಧಿಕಾರಿಗಳು ಮತ್ತು ನೌಕರರು:

೧. ಕನ್ನಡ ಜಾಗೃತಿ ವರ್ಷದ ಸಂಬಂಧವಾಗಿ ಪ್ರಾಧಿಕಾರ ಕಳುಹಿಸಿಕೊಡುವ ಸಾಹಿತ್ಯ ಮತ್ತು ಪ್ರಚಾರ ಸಾಮಗ್ರಿ (ಪ್ರಕಟಣೆ)ಯನ್ನು ಎಲ್ಲ ಕಛೇರಿಗಳಲ್ಲಿ ಸಾರ್ವಜನಿಕರಿಗೆ ಕಾಣಿಸುವಂತೆ ಪ್ರದರ್ಶಿಸಬೇಕು.

೨. ಸಾರ್ವಜನಿಕರು ಬಯಸಿದಲ್ಲಿ ಕನ್ನಡ ಆಡಳಿತ ಮತ್ತು ಡಾ. ಸರೋಜಿನಿ ಮಹಿಷಿ ಸಮಿತಿ ವರದಿಗೆ ಸಂಬಂಧಪಟ್ಟ ಕೆಲವು ಪ್ರಕಟಣೆಗಳನ್ನು (ಕಛೇರಿ ಕೈಪಿಡಿ. ಇಲಾಖಾ ಪದಕೋಶಗಳು. ಸಚಿವಾಲಯದ ಕೈಪಿಡಿ. ಆದೇಶಗಳು ಇತ್ಯಾದಿ) ಮಾರಾಟ ಮಾಡಲು ತಕ್ಕ ವ್ಯವಸ್ಥೆ ಮಾಡಬೇಕು.

೩. ಕನ್ನಡ ವಾತಾವರಣ ನಿರ್ಮಿಸುವಲ್ಲಿ. ನಾಮಫಲಕಗಳ ಹಾಗೂ ಜಾಹಿರಾತು ಫಲಗೆಗಳ ಪಾತ್ರ ಬಹು ದೊಡ್ಡದು. ಪ್ರತಿಯೊಂದು ಕಛೇರಿಯಲ್ಲೂ ನಾಮಫಲಕಗಳು ಕನ್ನಡದಲ್ಲಿರಬೇಕಲ್ಲದೆ ರಸ್ತೆಗಳಲ್ಲಿ. ವೃತ್ತಗಳಲ್ಲಿ ಇನ್ನಿತರ ಸಾರ್ವಜನಿಕ ಸ್ಥಳಗಳಲ್ಲಿ ಹಾಕುವ ಇತರ ಭಾಷೆಯ ಜಾಹಿರಾತಿನ ಬೋರ್ಡುಗಳಲ್ಲಿ ಮೇಲಿನ ಕೆಲವು ಸಾಲುಗಳಾದರೂ ಕನ್ನಡದಲ್ಲಿರುವಂತೆ ಎಲ್ಲ ಪುರಸಭೆ ಹಾಗೂ ನಗರಪಾಲಿಕೆ ಅಧಿಕಾರಿಗಳು ಗಮನ ಕೊಡಬೇಕು. ಜಾಹಿರಾತು ಪ್ರದರ್ಶಿಸಲು ಒಪ್ಪಿಗೆ ನೀಡುವಾಗಲೇ ಈ ಕರಾರು ಹಾಕಬೇಕು.

೪. ಆಡಳಿತ ಕನ್ನಡ ಮತ್ತು ಡಾ. ಸರೋಜಿನಿ ಮಹಿಷಿ ಸಮಿತಿ ವರದಿಯ ಅನುಷ್ಠಾನದ ಬಗ್ಗೆ ರಾಜ್ಯ ಸರ್ಕಾರ ಈವರೆಗೆ ಹೊರಡಿಸಿರುವ ಎಲ್ಲ ಆದೇಶಗಳನ್ನು ಎಲ್ಲ ಇಲಾಖೆಗಳಿಗೂ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಉದ್ದಿಮೆಗಳಿಗೂ. ಸ್ಥಳೀಯ ಸಂಸ್ಥೆಗಳಿಗೂ. ಸರ್ಕಾರದ ಅನುದಾನ ಪಡೆಯುತ್ತಿರುವ ಸಂಸ್ಥೆಗಳಿಗೂ ಕಳುಹಿಸಿಕೊಡಲಾಗುವುದು. ಈ ಆದೇಶಗಳನ್ನು ಎಲ್ಲ ಇಲಾಖಾ ಮುಖ್ಯಸ್ಥರು. ಕಛೇರಿ ವ್ಯವಸ್ಥಾಪಕರು ಓದಿ ನೋಡಬೇಕಲ್ಲದೆ ಆಯಾ ಇಲಾಖೆಯ ನೌಕರರ ಸಭೆ ಕರೆದು ಆ ಆದೇಶಗಳ ಮುಖ್ಯಾಂಶಗಳನ್ನು ಎಲ್ಲರಿಗೂ ಓದಿ ತಿಳಿಸಬೇಕು. ಅಲ್ಲದೆ ಈ ಆದೇಶಗಳನ್ನು ತಪ್ಪದೆ ಪಾಲಿಸುವಂತೆ ಸೂಚನೆ ನೀಡಬೇಕು.

೫. ಸಚಿವಾಲಯದ ಪ್ರತಿ ಇಲಾಖೆಗಳಲ್ಲಿ ಅಧೀನ ಕಾರ್ಯದರ್ಶಿ. ಶಾಖಾಧಿಕಾರಿ ಮತ್ತು ಇಬ್ಬರು ಸಹಾಯಕರು: ಇಲಾಖಾ ಮುಖ್ಯಸ್ಥರ ಕಛೇರಿ. ವಿಭಾಗ ಮಟ್ಟದ ಮತ್ತು ಜಿಲ್ಲಾ ಮಟ್ಟದ ಕಛೇರಿಗಳಲ್ಲಿ 'ಎ' ಗುಂಪಿನ ಅಥವಾ 'ಬಿ' ಗುಂಪಿನ ಅಧಿಕಾರಿಯೊಬ್ಬರು ಮತ್ತು ಇಬ್ಬರು ಸಹಾಯಕರು: ಉಪವಿಭಾಗ ಮತ್ತು ತಾಲ್ಲೂಕು ಮಟ್ಟದ ಕಛೇರಿಗಳಲ್ಲಿ 'ಬಿ' ಗುಂಪಿನ ಅಧಿಕಾರಿ ಮತ್ತು ಇಬ್ಬರು ಸಹಾಯಕರು – ಇವರನ್ನೊಳಗೊಂಡ ತನಿಖಾ ತಂಡವನ್ನು ರಚಿಸಲಾಗಿದೆ.

ಈ ತಂಡದ ಅಧಿಕಾರಿ ಮತ್ತು ನೌಕರರು ಪ್ರತಿಯೊಂದು ಇಲಾಖೆಗೂ ಭೇಟಿಕೊಟ್ಟು ಆಡಳಿತ ಕನ್ನಡ ಮತ್ತು ಡಾ. ಸರೋಜಿನಿ ಮಹಿಷಿ ಸಮಿತಿ ವರದಿ ಅನುಷ್ಠಾನ ಎಷ್ಟರ ಮಟ್ಟಿಗೆ ಕಾರ್ಯಗತವಾಗಿದೆ ಎಂಬುದನ್ನು ನಿಯತಕಾಲಿಕವಾಗಿ ತನಿಖೆ ಮಾಡಿ ವರದಿಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಕಳುಹಿಸಿಕೊಡಬೇಕು.

೬. ಪ್ರತಿ ಜಿಲ್ಲೆಯಲ್ಲಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಹಾಗೂ ವಿಭಾಗದ ಉಪ ನಿರ್ದೇಶಕರು ಆಗಾಗ ಸರ್ಕಾರದ ಎಲ್ಲ ಕಛೇರಿಗಳಿಗೂ ಭೇಟಿ ನೀಡಿ. ಕನ್ನಡ ಬಳಕೆಯ ಪ್ರಗತಿ ಮತ್ತು ಡಾ. ಸರೋಜಿನಿ ಮಹಿಷಿ ಸಮಿತಿ ವರದಿಯ ಅನುಷ್ಠಾನದ ಬಗ್ಗೆ ತನಿಖೆ ಮಾಡಿ ಆಯಾ ಜಿಲ್ಲಾಧಿಕಾರಿಗಳಿಗೂ. ಸರ್ಕಾರಕ್ಕೂ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೂ ಮತ್ತು ಕನ್ನಡ ಅಭಿವೃದ್ಧಿ ಪ್ರಧಿಕಾರಕ್ಕೂ ವರದಿ ಕಳುಹಿಸಿಕೊಡಬೇಕು.

೭. ಸರ್ಕಾರಿ ಆದೇಶದಂತೆ. ರಾಜ್ಯಮಟ್ಟದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು. ವಿಭಾಗ ಮಟ್ಟದಲ್ಲಿ ವಿಭಾಗಾಧಿಕಾರಿಗಳು. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು. ಉಪವಿಭಾಗ ಮಟ್ಟದಲ್ಲಿ ಉಪವಿಭಾಗಾಧಿಕಾರಿಗಳು ಮತ್ತು ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರರು ಪ್ರಾಧಿಕಾರದ ಉದ್ದೇಶಗಳನ್ನು ನೆರವೇರಿಸಲು ಜವಾಬ್ದಾರರಾಗಿರುವುದರಿಂದ ಜಿಲ್ಲಾಧಿಕಾರಿಗಳು ತಿಂಗಳಿಗೊಮ್ಮೆ ನಡೆಸುವ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಪರಿಶೀಲನಾ ಸಭೆಯಲ್ಲಿ ಆಡಳಿತ ಕನ್ನಡ ಮತ್ತು ಡಾ. ಸರೋಜಿನಿ ಮಹಿಷಿ ಸಮಿತಿ ವರದಿ ಶಿಫಾರಸುಗಳ ಅನುಷ್ಠಾನದ ಬಗ್ಗೆ ಸಮೀಕ್ಷೆ ನಡೆಸಿ ಅದರ ವರದಿಯನ್ನು ಪ್ರತಿ ತಿಂಗಳು ಪ್ರಾಧಿಕಾರಕ್ಕೆ ಕಳುಹಿಸಿಕೊಡಬೇಕು.

೮. ಸಚಿವಾಲಯ ಇಲಾಖೆಗಳಲ್ಲಿ ಮತ್ತು ಇಲಾಖಾ ಮುಖ್ಯಸ್ಥರ ಕಛೇರಿಗಳಲ್ಲಿ ಕನ್ನಡದ ಬಳಕೆ ತುಂಬ

ಕಡಿಮೆಯಾಗಿದೆ ಎಂಬ ದೂರುಗಳು ಕೇಳಿ ಬರುತ್ತಿರುವುದರಿಂದ ಪ್ರಾಧಿಕಾರವು ಅಂಥ ಕಚೇರಿಗಳಿಗೆ ಭೇಟಿ ಕೊಟ್ಟು ತನಿಖೆ ಕಾರ್ಯ ಆರಂಭಿಸುವುದು.

೯. ಸರ್ಕಾರಿ ಅಧಿಕಾರಿಗಳಿಗೆ, ನೌಕರರಿಗೆ ಕನ್ನಡ ಬಳಕೆಗೆ ಅನುಕೂಲವಾದ ತರಬೇತಿ ಶಿಬಿರ, ಕಮ್ಮಟ, ಪ್ರದರ್ಶನ, ವಿಚಾರ ಸಂಕಿರಣ, ಕನ್ನಡೇತರರಿಗೆ ಕನ್ನಡ ಕಲಿಸುವುದು ಇತ್ಯಾದಿ ಕಾರ್ಯಕ್ರಮಗಳನ್ನು ಕಳೆದ ವರ್ಷಗಳಿಗಿಂತ ಈ ವರ್ಷ ನಾಲ್ಕು ಪಟ್ಟು ಹೆಚ್ಚಿಸಲಾಗುವುದು.

೧೦. ಸಾರ್ವಜನಿಕರಿಂದ ಕನ್ನಡದಲ್ಲಿ ಬಂದ ಅರ್ಜಿಗಳಿಗೆ ಆದ್ಯತೆ ನೀಡಬೇಕಲ್ಲದೆ ಇತರೆ ಭಾಷೆಗಳಲ್ಲಿ ಅರ್ಜಿ ಬರೆದು ತಂದವರನ್ನು ಬರಮಾಡಿಕೊಂಡು ಮುಂದೆ ಕನ್ನಡದಲ್ಲಿ ಬರೆದು ತರುವಂತೆ ಅಧಿಕಾರಿಗಳು ಅವರ ಮನವೊಲಿಸಬೇಕು.

೧೧. ಆಡಳಿತ ಕನ್ನಡ ಹಾಗೂ ಡಾ. ಸರೋಜಿನಿ ಮಹಿಷಿ ಸಮಿತಿ ವರದಿಯ ಶಿಫಾರಸುಗಳ ಅನುಷ್ಠಾನದ ಬಗ್ಗೆ ಸಾರ್ವಜನಿಕರು ಅಥವಾ ಸಂಘಸಂಸ್ಥೆಗಳ ಪ್ರತಿನಿಧಿಗಳು ಮಾಹಿತಿ ಪಡೆಯಲು ಬಂದಲ್ಲಿ ಅಧಿಕಾರಿಗಳು ಅವರೊಡನೆ ವಿನಯದಿಂದ ವರ್ತಿಸಬೇಕು.

ಕನ್ನಡ ಬೆರಳಚ್ಚು ಯಂತ್ರ ಸರಬರಾಜು ಮತ್ತು ಕನ್ನಡ ಬೆರಳಚ್ಚುಗಾರರ ನೇಮಕ:

೧. ಅನೇಕ ಸರ್ಕಾರಿ ಕಚೇರಿಗಳಿಗೆ, ಶಾಲಾ ಕಾಲೇಜುಗಳಿಗೆ, ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಾರ್ವಜನಿಕ ಉದ್ಯಮಗಳಿಗೆ ಸರ್ಕಾರದ ಅನುದಾನ ಪಡೆಯುತ್ತಿರುವ ಸಂಸ್ಥೆಗಳಿಗೆ, ಕನ್ನಡ ಬೆರಳಚ್ಚು ಯಂತ್ರಗಳನ್ನು ಒದಗಿಸಬೇಕಾಗಿದೆ. ಈ ಕನ್ನಡ ಜಾಗೃತಿ ವರ್ಷದಲ್ಲಿ ಆದಷ್ಟು ಹೆಚ್ಚು ಕನ್ನಡ ಬೆರಳಚ್ಚು ಯಂತ್ರಗಳನ್ನು ಕೊಂಡು ಆದ್ಯತೆ ಮೇಲೆ ಇಲಾಖೆಗಳಿಗೆ ಒದಗಿಸಲಾಗುವುದು.

೨. ಖಾಸಗಿ ಸಂಸ್ಥೆಗಳು, ಸಾಹಿತಿಗಳು, ಪತ್ರಕರ್ತರು, ಪ್ರಾಧ್ಯಾಪಕರು, ವಕೀಲರು, ಶಾಸಕರು, ವೃತ್ತಿನಿರತ ಬೆರಳಚ್ಚುಗಾರರು, ಗ್ರಾಮಾಂತರ ಪ್ರದೇಶಗಳಲ್ಲಿರುವ ವಾಣಿಜ್ಯ ವಿದ್ಯಾಶಾಲೆಗಳು ಮುಂತಾದವರಿಗೆ ರಿಯಾಯಿತಿ ದರದಲ್ಲಿ ಕನ್ನಡ ಬೆರಳಚ್ಚು ಯಂತ್ರಗಳನ್ನು ಒದಗಿಸಲು ಸರ್ಕಾರವನ್ನು ಕೋರಲಾಗುವುದು. ಇದರಿಂದ ಕನ್ನಡದ ಬಳಕೆ ಹೆಚ್ಚು ವ್ಯಾಪಕವಾಗುವುದಲ್ಲದೆ ಅನೇಕ ನಿರುದ್ಯೋಗಿ ಕನ್ನಡ ಬೆರಳಚ್ಚುಗಾರರಿಗೆ ಉದ್ಯೋಗ ದೊರೆಯುವುದು.

೩. ಇಂದು ರಾಜ್ಯದ ಹಲವು ಇಲಾಖೆಗಳಲ್ಲಿ ಕನ್ನಡ ಬೆರಳಚ್ಚುಗಾರರ ಮತ್ತು ಕನ್ನಡ ಶೀಘ್ರಲಿಪಿಗಾರರ ಹುದ್ದೆಗಳು ಭರ್ತಿಯಾಗಬೇಕಾಗಿದೆ. ಸರ್ಕಾರದ ಮಿತವ್ಯಯ ಕಾರ್ಯಾಚರಣೆಯನ್ನು ಸಡಿಲಿಸಿ, ಎಲ್ಲ ಇಲಾಖೆಗಳಲ್ಲಿರುವ ಕನ್ನಡ ಶೀಘ್ರಲಿಪಿಗಾರರ ಮತ್ತು ಕನ್ನಡ ಬೆರಳಚ್ಚುಗಾರರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವನ್ನು ಕೋರಲಾಗುವುದು. ಕೆಲವು ಕಛೇರಿಗಳಲ್ಲಿ ಹಿಂದೆ ಇಂಗ್ಲೀಷ್ ಶೀಘ್ರಲಿಪಿ ಮತ್ತು ಇಂಗ್ಲೀಷ್ ಬೆರಳಚ್ಚುಗಾರರನ್ನು ನೇಮಿಸಿಕೊಳ್ಳಲಾಗಿತ್ತು. ಅವರಲ್ಲಿ ಕೆಲವರು ಈಗಲೂ ಕನ್ನಡ ಶೀಘ್ರಲಿಪಿ ಮತ್ತು ಕನ್ನಡ ಬೆರಳಚ್ಚು ಕಲಿತಿರುವುದಿಲ್ಲ. ಈಗ ಆಡಳಿತ ವ್ಯವಹಾರವೆಲ್ಲ ಕನ್ನಡದಲ್ಲಿ ನಡೆಯುತ್ತಿರುವುದರಿಂದ ಅವರುಗಳು ಕನ್ನಡ ಶೀಘ್ರಲಿಪಿ ಮತ್ತು ಕನ್ನಡ ಬೆರಳಚ್ಚು ಕಲಿಯಬೇಕೆಂದು ತಿಳಿಸಿ, ಸರ್ಕಾರದಿಂದ ಆದೇಶ ಹೊರಡಿಸಲಾಗುವುದು.

೪. ಕಛೇರಿಗಳ ಆಧುನೀಕರಣದಲ್ಲಿ ಬಳಸಲಾಗುವ ಎಲ್ಲ ಎಲೆಕ್ಟ್ರಾನಿಕ್ ಉಪಕರಣಗಳು, ಕಂಪ್ಯೂಟರ್‌ಗಳು, ಟೆಲೆಕ್ಸ್‌ಗಳು, ಟೆಲಿಪ್ರಿಂಟರ್‌ಗಳು, ಎಲೆಕ್ಟ್ರಾನಿಕ್ ಬೆರಳಚ್ಚು ಯಂತ್ರ ಇತ್ಯಾದಿಗಳಲ್ಲಿ ಕನ್ನಡವನ್ನು ಅಳವಡಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಸಾರ್ವಜನಿಕ ಉದ್ಯಮಗಳು ಹಾಗೂ ಸಹಕಾರಿ ಸಂಸ್ಥೆಗಳು.

ಕರ್ನಾಟಕದಲ್ಲಿರುವ ರಾಜ್ಯ ಸರ್ಕಾರದ ಎಲ್ಲ ಸಾರ್ವಜನಿಕ ಉದ್ಯಮಗಳು, ನಿಗಮಗಳು, ಸಹಕಾರಿ ಬ್ಯಾಂಕುಗಳು ಹಾಗೂ ಇನ್ನಿತರ ಖಾಸಗಿ ಹಾಗೂ ಸಹಕಾರಿ ಸಂಸ್ಥೆಗಳು ಆಡಳಿತ ಕನ್ನಡ ಮತ್ತು ಡಾ. ಸರೋಜಿನಿ ಮಹಿಷಿ ಸಮಿತಿ ವರದಿಯನ್ನು ಎಷ್ಟರ ಮಟ್ಟಿಗೆ ಪಾಲಿಸಿವೆ ಎಂಬುದನ್ನು ತನಿಖೆ ಮಾಡಿ ಸರ್ಕಾರಕ್ಕೆ ವರದಿ ಮಾಡಲಾಗುವುದು.

ಸರ್ಕಾರದ ಅನುದಾನ ಪಡೆಯುತ್ತಿರುವ ಸಂಸ್ಥೆಗಳು:

ಕರ್ನಾಟಕ ರಾಜ್ಯದಲ್ಲಿದ್ದು, ಇಲ್ಲಿಯ ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಯಾವ ಸಂಸ್ಥೆಯೇ ಆಗಲಿ ಆಡಳಿತ ಕನ್ನಡ ಮತ್ತು ಡಾ. ಸರೋಜಿನಿ ಮಹಿಷಿ ಸಮಿತಿ ವರದಿಯನ್ನು ಅನುಷ್ಠಾನಕ್ಕೆ ತರಬೇಕು. ಇಂಥ ಸಂಸ್ಥೆಗಳಿಗೂ ಪ್ರಾಧಿಕಾರ ಆಗಾಗ ಭೇಟಿ ಕೊಟ್ಟು ಸರ್ಕಾರದ ಆದೇಶ ಪಾಲನೆಯಾಗುತ್ತಿದೆಯೇ ಎಂಬುದನ್ನು ಪರಿಶೀಲಿಸುವುದು.

ಕೇಂದ್ರ ಸರ್ಕಾರದ ಕಛೇರಿಗಳು

೧. ಕರ್ನಾಟಕ ರಾಜ್ಯದಲ್ಲಿರುವ ಕೇಂದ್ರ ಸರ್ಕಾರದ ಎಲ್ಲ ಕಛೇರಿಗಳು, ಸಾರ್ವಜನಿಕ ಉದ್ಯಮಗಳು, ಬ್ಯಾಂಕುಗಳು, ಅಂಚೆ ಇಲಾಖೆ, ರೈಲ್ವೆ ಇತ್ಯಾದಿ ಕಛೇರಿಗಳಲ್ಲಿ ತ್ರಿಭಾಷಾ ಸೂತ್ರದ ಪ್ರಕಾರ ರಾಜ್ಯದಲ್ಲಿ ನಡೆಯುವ ಎಲ್ಲ ಪತ್ರವ್ಯವಹಾರಗಳು, ಸಾರ್ವಜನಿಕರಿಗೆ ನೀಡುವ ಬಿಲ್, ರಸೀದಿ, ನಮೂನೆ, ವೋಚರ್, ಕರಪತ್ರ ಮುಂತಾದವುಗಳು ಕನ್ನಡದಲ್ಲಿರಬೇಕು.

೨. ಸಮಾರಂಭಗಳಲ್ಲಿ ಉಪಯೋಗಿಸುವ ಬ್ಯಾನರುಗಳು, ಆಹ್ವಾನ ಪತ್ರಿಕೆಗಳಲ್ಲಿ ಕನ್ನಡವನ್ನು ಬಳಸಬೇಕು.

೩. ಡಾ. ಸರೋಜಿನಿ ಮಹಿಷಿ ಸಮಿತಿ ವರದಿಯ ಪ್ರಕಾರ ಎಲ್ಲ ದರ್ಜೆಯ ಹುದ್ದೆಗಳಿಗೆ ಕನ್ನಡಿಗರನ್ನು ನೇಮಿಸಬೇಕು. ಪ್ರಾಧಿಕಾರವು ಕೇಂದ್ರ ಸರ್ಕಾರದ ಕಛೇರಿಗಳಿಗೂ ಸಾರ್ವಜನಿಕ ಉದ್ದಿಮೆಗಳಿಗೂ ಆಗಾಗ ಭೇಟಿ ನೀಡಿ ಮೇಲ್ಕಂಡ ನಿಬಂಧನೆಗಳು ಪಾಲನೆಯಾಗುತ್ತಿವೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸುತ್ತದೆ.

೪. ಕೇಂದ್ರ ಸರ್ಕಾರ ಕರ್ನಾಟಕದಲ್ಲಿರುವ ತನ್ನ ಕಛೇರಿಗಳು, ಉದ್ದಿಮೆಗಳು, ಬ್ಯಾಂಕುಗಳು ಮುಂತಾದ ಕಡೆಗಳಲ್ಲಿರುವ ನೌಕರರಿಗೆ ಹಿಂದಿ ಕಲಿಸಲು 'ಹಿಂದಿ ಅಧಿಕಾರಿ'ಯನ್ನು ನೇಮಿಸುವಂತೆ ಕನ್ನಡ ಕಲಿಸಲು 'ಕನ್ನಡ ಭಾಷಾ ಅಧಿಕಾರಿ'ಯನ್ನು ನೇಮಿಸಬೇಕು. ಅಂತಹ ಕಡೆ ಒಂದು 'ಆಡಳಿತ ಕನ್ನಡ ಘಟಕ' ಇರಬೇಕು. ಪ್ರಾಧಿಕಾರ ಈ ವಿಷಯದಲ್ಲಿ ಸಂಬಂಧಪಟ್ಟ ಸಂಸ್ಥೆಗಳೊಡನೆ ಪತ್ರವ್ಯವಹಾರ ನಡೆಸುವುದಲ್ಲದೆ ಅನಿವಾರ್ಯವೆನಿಸಿದಾಗ ಕೇಂದ್ರ ಸರ್ಕಾರಕ್ಕೂ ಪತ್ರ ಬರೆಯುವುದು.

ಕನ್ನಡ ಸಂಘ ಸಂಸ್ಥೆಗಳು

೧. ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ, ಕಾರ್ಖಾನೆಗಳಲ್ಲಿ, ಬ್ಯಾಂಕುಗಳಲ್ಲಿ, ಅಂಚೆ ಕಛೇರಿಗಳಲ್ಲಿ, ರೈಲ್ವೆ ಇಲಾಖೆಯಲ್ಲಿ ಇರುವ ಕನ್ನಡ ಸಂಘಗಳು 'ಕನ್ನಡ ಜಾಗೃತಿ ವರ್ಷ'ದಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಏರ್ಪಡಿಸಿ ತಾವು ಸೇವೆ ಸಲ್ಲಿಸುತ್ತಿರುವ ಸಂಸ್ಥೆಗಳಲ್ಲಿ 'ಆಡಳಿತ ಕನ್ನಡ ಹಾಗೂ ಡಾ. ಸರೋಜಿನಿ ಮಹಿಷಿ ಸಮಿತಿ ವರದಿಯ ಅನುಷ್ಠಾನ' ಯಶಸ್ವಿಯಾಗಿ ಜಾರಿಗೆ ಬರುವಂತೆ ನೋಡಿಕೊಳ್ಳಬೇಕು.

೨. ಸಂಸ್ಥೆಯ ಮುಖ್ಯಸ್ಥರಿಗೆ ಸಲ್ಲಿಸುವ ಮನವಿಯಲ್ಲಿ ಇತರ ಬೇಡಿಕೆಗಳ ಜೊತೆಗೆ 'ಆಡಳಿತ ಕನ್ನಡ ಮತ್ತು ಡಾ. ಸರೋಜಿನಿ ಮಹಿಷಿ ಸಮಿತಿ ವರದಿಯ ಅನುಷ್ಠಾನವು' ಒಂದು ಅಂಶವಾಗಿರಬೇಕು.

೩. ನಗರ, ಜಿಲ್ಲೆ, ತಾಲ್ಲೂಕು ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿರುವ ಕನ್ನಡ ಸಂಘ ಸಂಸ್ಥೆಗಳು ರಾಜ್ಯೋತ್ಸವ ಕಾರ್ಯಕ್ರಮಗಳಲ್ಲಿ ಮಾತ್ರವಲ್ಲದೆ ಇನ್ನಿತರ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಾಹಿತಿಗಳು, ಕವಿಗಳು, ಪತ್ರಕರ್ತರೊಂದಿಗೆ ಮಂತ್ರಿಗಳು, ಶಾಸಕರು, ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತಿ ಸದಸ್ಯರು, ನಗರಸಭಾ ಸದಸ್ಯರು, ಪುರಸಭಾ ಸದಸ್ಯರು, ಅಧಿಕಾರಿಗಳು ಮುಂತಾದವರು ಪಾಲ್ಗೊಳ್ಳುವಂತೆ ಮಾಡಿ, ಅವರಿಂದ ಕನ್ನಡ ಆಡಳಿತ ಭಾಷೆ, ಡಾ. ಸರೋಜಿನಿ ಮಹಿಷಿ ಸಮಿತಿ ವರದಿ, ಶಿಕ್ಷಣ ಮಾಧ್ಯಮ, ಮುಂತಾದವುಗಳ ಬಗ್ಗೆ ಉಪನ್ಯಾಸ ಏರ್ಪಡಿಸಿ ಸಾರ್ವಜನಿಕರಲ್ಲಿ ಕನ್ನಡ ನಾಡುನುಡಿಯ ಬಗ್ಗೆ ಜಾಗೃತಿ ಉಂಟುಮಾಡಬೇಕು.

೪. ಕನ್ನಡ ಅಭಿವೃದ್ಧಿ ಪ್ರಾಧಿಕಾರ ತಯಾರಿಸಿರುವ ಕನ್ನಡ ಸಾಕ್ಷ್ಯಚಿತ್ರವನ್ನು ಜಿಲ್ಲಾ ವಾರ್ತಾ ಮತ್ತು ಪ್ರಚಾರ ಇಲಾಖಾ ಉಪನಿರ್ದೇಶಕರ ಮೂಲಕ ತರಿಸಿಕೊಂಡು ಸಾರ್ವಜನಿಕರಿಗೆ ಪ್ರದರ್ಶಿಸಬೇಕು.

೫. ಸರ್ಕಾರದ ನಾನಾ ಇಲಾಖೆಯ ಕಛೇರಿಗಳಿಂದ ಸಾರ್ವಜನಿಕರಿಗೆ ಬರುವ ಪತ್ರಗಳು ಕನ್ನಡದಲ್ಲಿರದೆ ಇಂಗ್ಲೀಷಿನಲ್ಲಿದ್ದರೆ ಅಂಥ ಪತ್ರಗಳನ್ನು ಸಂಗ್ರಹಿಸಿ ಸಂಬಂಧಪಟ್ಟ ಸರ್ಕಾರಿ ಆದೇಶದ ಉಲ್ಲಂಘನೆ ಆಗಿರುವುದನ್ನು ಅವರ ಗಮನಕ್ಕೆ ತರಬೇಕು ಮತ್ತು ಆ ವಿಷಯವನ್ನು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗೂ, ತಾಲ್ಲೂಕು ಮಟ್ಟದ್ದಾದರೆ ತಹಶೀಲ್ದಾರರಿಗೂ ಹಾಗೂ ಪ್ರಾಧಿಕಾರದ ಗಮನಕ್ಕೂ ದಯವಿಟ್ಟು ತರಬೇಕು.

೬. ತಮ್ಮ ಬಡಾವಣೆಯಲ್ಲಿರುವ ಕನ್ನಡೇತರ ಸಂಘಗಳ ಸದಸ್ಯರನ್ನು ಭೇಟಿಮಾಡಿ, ಅವರಿಗೆ ಕನ್ನಡ ಕಲಿಸುವ ಏರ್ಪಾಡು ಮಾಡಲು ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಿಗೆ ಪತ್ರ ಬರೆದು ಅದರ ಒಂದು ಪ್ರತಿಯನ್ನು ಪ್ರಾಧಿಕಾರಕ್ಕೆ ಕಳುಹಿಸಿಕೊಡಬೇಕು.

೭. ಕನ್ನಡೇತರರು ಕನ್ನಡ ಕಲಿತು ಇಲ್ಲಿಯ ಜನರೊಡನೆ ಪರಸ್ಪರ ಸೌಹಾರ್ದದಿಂದ ಬಾಳಲು ಅನುಕೂಲ ವಾಗುವಂತೆ ಕನ್ನಡ ವಾತಾವರಣ ನಿರ್ಮಾಣ ಮಾಡಬೇಕು.

೮. ಕನ್ನಡ ಕಾರ್ಯಕ್ರಮಗಳಿಗೆ ಕನ್ನಡೇತರರನ್ನು ಆಹ್ವಾನಿಸಿ ಕನ್ನಡ ಸಾಹಿತ್ಯ, ಸಂಸ್ಕೃತಿಯ ಪರಿಚಯ ಮಾಡಿಕೊಡಬೇಕು. ಹಾಗೆಯೇ ಕನ್ನಡೇತರರು ನಡೆಸುವ ಕಾರ್ಯಕ್ರಮಗಳಲ್ಲಿ ಕನ್ನಡಿಗರೂ ಭಾಗವಹಿಸಬೇಕು.

೯. ಸರ್ಕಾರಕ್ಕೆ ಬರೆಯುವ ಎಲ್ಲ ಕಾಗದ ಪತ್ರಗಳು ಕನ್ನಡದಲ್ಲೇ ಇರುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿಕೊಳ್ಳಬೇಕು.

೧೦. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಚಟುವಟಿಕೆಗಳು ಹಾಗೂ ಕನ್ನಡ ಅಭಿವೃದ್ಧಿಗೆ ಸಂಬಂಧಿಸಿದ ಮಾಹಿತಿಯನ್ನು ಪರಿಚಯಿಸುವ ಉದ್ದೇಶದಿಂದ "ಕನ್ನಡ ಜಾಗೃತಿ" ದ್ವೈಮಾಸಿಕ ಪ್ರಕಟಿಸಲಾಗುವುದು.

ವಿಶ್ವವಿದ್ಯಾಲಯಗಳು, ಅಕಾಡೆಮಿಗಳು :

೧. ವಿಶ್ವವಿದ್ಯಾಲಯಗಳು ಮತ್ತು ಅಕಾಡೆಮಿಗಳು ತಮ್ಮ ಆಡಳಿತಕ್ಕೆ ಸಂಬಂಧಪಟ್ಟ ಎಲ್ಲ ಪತ್ರವ್ಯವಹಾರಗಳು ಕನ್ನಡದಲ್ಲಿರುವಂತೆ ನೋಡಿಕೊಳ್ಳಬೇಕು. (ಕೇಂದ್ರ ಸರ್ಕಾರ ಮತ್ತು ನೆರೆರಾಜ್ಯಗಳಿಗೆ ಬರೆಯುವ ಪತ್ರಗಳನ್ನು ಬಿಟ್ಟು).

೨. ಈ ಜಾಗೃತಿ ವರ್ಷದಲ್ಲಿ ಕನ್ನಡ ನಾಡುನುಡಿಗೆ ಸಂಬಂಧಪಟ್ಟ ವಿಚಾರ ಸಂಕಿರಣಗಳನ್ನು ಏರ್ಪಡಿಸಿ ಅಧ್ಯಾಪಕರಲ್ಲಿ, ವಿದ್ಯಾರ್ಥಿಗಳಲ್ಲಿ ಕನ್ನಡಾಭಿಮಾನ ಹೆಚ್ಚುವಂತೆ ಮಾಡಬೇಕು ಮತ್ತು ಕನ್ನಡ ನಾಡುನುಡಿಗಳಿಗೆ ಸಂಬಂಧಿಸಿದ ಪ್ರಕಟಣೆಗಳನ್ನು ಹೊರತಂದು ಸಾರ್ವಜನಿಕರಿಗೆ ಸುಲಭ ಬೆಲೆಯಲ್ಲಿ ದೊರೆಯುವಂತೆ ಮಾಡಬೇಕು.

ಕನ್ನಡ ಸಾಹಿತ್ಯ ಪರಿಷತ್ತು :

೧. ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಸಮಿತಿಗಳು ತಾಲ್ಲೂಕು ಸಮಿತಿಗಳು ಪ್ರಾಧಿಕಾರದಿಂದ ಮಾಹಿತಿ ತರಿಸಿಕೊಂಡು ಆಡಳಿತ ಕನ್ನಡ ಮತ್ತು ಡಾ. ಸರೋಜಿನಿ ಮಹಿಷಿ ಸಮಿತಿ ವರದಿ ಬಗ್ಗೆ ಜನರಲ್ಲಿ ಸರಿಯಾದ ತಿಳುವಳಿಕೆ ಮೂಡಿಸಬೇಕು.

೨. ಈ ವರ್ಷದ ರಾಜ್ಯೋತ್ಸವದ ಕಾರ್ಯಕ್ರಮದಲ್ಲಿ ಜನರಲ್ಲಿ ಕನ್ನಡ ಜಾಗೃತಿ ಉಂಟಾಗುವಂಥ ಕಾರ್ಯಕ್ರಮ ಗಳನ್ನು ರೂಪಿಸುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿಕೊಳ್ಳಬೇಕು.

ಮೇಲ್ಕಂಡ ಕಾರ್ಯಕ್ರಮಗಳಿಂದ ಆಡಳಿತದ ಎಲ್ಲ ಹಂತಗಳಲ್ಲಿ ಕನ್ನಡದ ಬಳಕೆ ಹೆಚ್ಚುವುದಲ್ಲದೆ, ಆಡಳಿತದಲ್ಲಿ ದಕ್ಷತೆಯೂ ಹೆಚ್ಚುವುದು ಮತ್ತು ಕನ್ನಡಿಗರಿಗೆ ಉದ್ಯೋಗಾವಕಾಶಗಳೂ ಹೆಚ್ಚುವುವು.

ಜಿ. ನಾರಾಯಣ

ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಅನುಬಂಧ-೩

ಕನ್ನಡ ಅಭಿವೃದ್ಧಿ ಪ್ರಾಧಿಕಾರ

"ಕನ್ನಡ ಜಾಗೃತಿ ವರ್ಷ"

ಮಾನ್ಯರೆ.

ದಿನಾಂಕ ೧೦-೧೦-೧೯೬೩ರಂದು ಕರ್ನಾಟಕ ಸರ್ಕಾರವು ಕನ್ನಡವನ್ನು ಕರ್ನಾಟಕ ರಾಜ್ಯದ ಆಡಳಿತ ಭಾಷೆ ಎಂದು ಘೋಷಿಸಿದೆ. ಅಂದಿನಿಂದ ಇಂದಿನವರೆಗೆ ಅನೇಕ ಅನುಕೂಲಗಳನ್ನು ಕಲ್ಪಿಸಿ. ಅಗತ್ಯ ಪೂರಕ ಸಾಹಿತ್ಯ ತಯಾರಿಕೆಗಾಗಿ ವಿವಿಧ ಸಮಿತಿಗಳನ್ನು ರಚನೆ ಮಾಡಿ. ತರಬೇತಿಗಳನ್ನು ಏರ್ಪಡಿಸಿ. ಪ್ರೋತ್ಸಾಹಧನ. ಉತ್ತೇಜನಗಳನ್ನು ಒದಗಿಸಿ. ಆಗಾಗ ಸೂಕ್ತ ನಿರ್ದೇಶನಗಳನ್ನು ನೀಡಿ ಹಾಗೂ ಅಲ್ಪಸಂಖ್ಯಾತರ ಹಿತವನ್ನೂ ಗಮನದಲ್ಲಿಟ್ಟುಕೊಂಡು ಸುಮಾರು ೨೮೦ಕ್ಕೂ ಹೆಚ್ಚು ಆದೇಶಗಳನ್ನು ಹೊರಡಿಸಿದೆ. ಈಗ ತಾಲ್ಲೂಕು ಮಟ್ಟದಲ್ಲಿ ಶೇಕಡ ೯೦ರಷ್ಟು ಜಿಲ್ಲಾ ಮಟ್ಟದಲ್ಲಿ ಶೇಕಡ ೮೦ರಷ್ಟು ಕನ್ನಡ ಬಳಕೆಯಾಗುತ್ತಿದ್ದರೂ ಕನ್ನಡವು ಸರ್ಕಾರದ ಎಲ್ಲ ಹಂತಗಳಲ್ಲೂ ವಿಶೇಷವಾಗಿ ಸಚಿವಾಲಯದಲ್ಲಿ ಹೆಚ್ಚಾಗಿ ಬಳಕೆ ಆಗುತ್ತಿಲ್ಲ. ಕನ್ನಡ ಪರವಾದ ಮನೋಭೂಮಿಕೆ ಕನ್ನಡ ಬಳಸಬೇಕೆಂಬ ಇಚ್ಛಾಶಕ್ತಿ ಸರ್ಕಾರದ ಅಧಿಕಾರಿಗಳಲ್ಲಿ ಹಾಗೂ ನೌಕರರಲ್ಲಿ ಒಡಮೂಡದ ಹೊರತು ಕನ್ನಡವು ಆಡಳಿತ ಭಾಷೆಯಾಗಿ ಸ್ಥಿರವಾಗಿ ನೆಲೆ ನಿಲ್ಲುವುದು ಸಾಧ್ಯವಿಲ್ಲ.

ಇದನ್ನು ಮನಗಂಡು ಕನ್ನಡ ಅಭಿವೃದ್ಧಿ ಪ್ರಾಧಿಕಾರ ೧೯೯೬ರ ಏಪ್ರಿಲ್‌ನಿಂದ ೧೯೯೭ರ ಮಾರ್ಚ್‌ವರೆಗಿನ ಒಂದು ವರ್ಷವನ್ನು "ಕನ್ನಡ ಜಾಗೃತಿ ವರ್ಷ" ಎಂದು ಆಚರಿಸುತ್ತಿದೆ. ಭಾರತದ ಸಂವಿಧಾನದಲ್ಲಿ ಮಾನ್ಯತೆ ಪಡೆದ ಭಾಷೆಗಳಲ್ಲಿ ಕನ್ನಡವೂ ಒಂದು. ೧೯೬೩ರ ರಾಜಭಾಷಾ ಅಧಿನಿಯಮದ ಪ್ರಕಾರ ಕನ್ನಡವೇ ಕರ್ನಾಟಕದ ರಾಜಭಾಷೆ. ಆದುದರಿಂದ ಸಂವಿಧಾನ. ಕಾನೂನು ಹಾಗೂ ಆದೇಶಗಳ ಉಲ್ಲಂಘನೆ ಮಾಡದೆ ಅಧಿಕಾರಿಗಳು ಕನ್ನಡವನ್ನು ಆಡಳಿತದಲ್ಲಿ ಜಾರಿಗೆ ತರಬೇಕು. ನಾಲ್ಕೂವರೆ ಕೋಟಿ ಕನ್ನಡಿಗರ ಆಶೋತ್ತರವನ್ನು ಸರಿಯಾಗಿ ಅರಿತು ದಕ್ಷ ಆಡಳಿತವನ್ನು ನೀಡಬೇಕಾದರೆ ನಾಲ್ಕೂವರೆ ಲಕ್ಷ ಸರ್ಕಾರಿ ನೌಕರರು ಕನ್ನಡದ ದೀಕ್ಷೆ ತೊಡಬೇಕು. ದೃಢನಿಶ್ಚಯದಿಂದ ಈ ಮುಂದಿನ ಕಾರ್ಯಕ್ರಮಗಳನ್ನು ಜಾರಿಗೆ ತಂದು ಜಾಗೃತಿ ವರ್ಷಾಂತ್ಯದಲ್ಲಿ ಸರ್ಕಾರದ ಎಲ್ಲ ಹಂತಗಳಲ್ಲಿ ಕನ್ನಡದ ಬಳಕೆ ನೆಲೆ ಊರುವಂತೆ ಮಾಡಬೇಕು ಎಂದು ಈ ಮೂಲಕ ಕೋರಲಾಗಿದೆ.

೧. ಸರ್ಕಾರದ ಪತ್ರ ವ್ಯವಹಾರ. ಟಿಪ್ಪಣಿ. ವರದಿ ಇತ್ಯಾದಿಗಳನ್ನು ಕನ್ನಡದಲ್ಲಿಯೇ ಬರೆಯಬೇಕು. ಪರ್ಯಾಯ ಕನ್ನಡ ಶಬ್ದ ತಕ್ಷಣವೇ ಹೊಳೆಯದಿದ್ದರೆ ಬಳಕೆಯಲ್ಲಿರುವ ಇಂಗ್ಲೀಷ್ ಪದವನ್ನೇ ಕನ್ನಡ ಲಿಪಿಯಲ್ಲಿ ಬರೆದು ಬಳಸಬಹುದು.

೨. ಕನ್ನಡ ಜಾಗೃತಿ ವರ್ಷದ ಸಂಬಂಧವಾಗಿ ಪ್ರಾಧಿಕಾರ ಕಳುಹಿಸಿಕೊಡುವ ಸಾಹಿತ್ಯ ಮತ್ತು ಪ್ರಚಾರ ಸಾಮಗ್ರಿ (ಪ್ರಕಟಣೆ)ಗಳನ್ನು ಎಲ್ಲ ಕಛೇರಿಗಳಲ್ಲಿ ಸಾರ್ವಜನಿಕರಿಗೆ ಕಾಣಿಸುವಂತೆ ಪ್ರದರ್ಶಿಸಬೇಕು.

೩. ಸಾರ್ವಜನಿಕರು ಬಯಸಿದಲ್ಲಿ ಆಡಳಿತ ಕನ್ನಡ ಮತ್ತು ಡಾ. ಸರೋಜಿನಿ ಮಹಿಷಿ ಸಮಿತಿ ವರದಿಗೆ ಸಂಬಂಧಪಟ್ಟ ಕೆಲವು ಪ್ರಕಟಣೆಗಳನ್ನು (ಕಛೇರಿ ಕೈಪಿಡಿ. ಇಲಾಖಾ ಪದಕೋಶಗಳು. ಸಚಿವಾಲಯದ ಕೈಪಿಡಿ. ಆದೇಶಗಳು ಇತ್ಯಾದಿ) ಮಾರಾಟ ಮಾಡಲು ಸಂಬಂಧಪಟ್ಟ ಇಲಾಖೆಗಳು ತಕ್ಕ ವ್ಯವಸ್ಥೆ ಮಾಡಬೇಕು.

೪. ಕನ್ನಡ ವಾತಾವರಣ ನಿರ್ಮಿಸುವಲ್ಲಿ ನಾಮಫಲಕಗಳ ಹಾಗೂ ಜಾಹಿರಾತು ಫಲಗಗಳ ಪಾತ್ರ ಬಹು ದೊಡ್ಡದು. ಪ್ರತಿಯೊಂದು ಕಛೇರಿಯಲ್ಲೂ ನಾಮಫಲಕಗಳು ಕನ್ನಡದಲ್ಲಿರಬೇಕಲ್ಲದೆ ರಸ್ತೆಗಳಲ್ಲಿ, ವೃತ್ತಗಳಲ್ಲಿ, ಇನ್ನಿತರ ಸಾರ್ವಜನಿಕ ಸ್ಥಳಗಳಲ್ಲಿ ಹಾಕುವ ಇತರ ಭಾಷೆಯ ಜಾಹಿರಾತಿನ ಬೋರ್ಡುಗಳಲ್ಲಿ ಮೇಲಿನ ಹಲವು ಸಾಲುಗಳಾದರೂ ಕನ್ನಡದಲ್ಲಿರುವಂತೆ ಎಲ್ಲ ಪುರಸಭೆ ಹಾಗೂ ನಗರಪಾಲಿಕೆ ಅಧಿಕಾರಿಗಳು ಗಮನ ಕೊಡಬೇಕು. ಜಾಹಿರಾತು ಪ್ರದರ್ಶಿಸಲು ಒಪ್ಪಿಗೆ ನೀಡುವಾಗಲೇ ಈ ನಿರ್ಬಂಧ ಹಾಕಬೇಕು.

೫. ಆಡಳಿತ ಕನ್ನಡ ಮತ್ತು ಡಾ. ಸರೋಜಿನಿ ಮಹಿಷಿ ಸಮಿತಿ ವರದಿ ಅನುಷ್ಠಾನದ ಬಗ್ಗೆ ರಾಜ್ಯ ಸರ್ಕಾರವು

ಹೊರಡಿಸಿರುವ ಎಲ್ಲ ಆದೇಶಗಳನ್ನು ಎಲ್ಲ ಇಲಾಖೆಗಳಿಗೂ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಉದ್ಯಮಗಳಿಗೂ ಸ್ಥಳೀಯ ಸಂಸ್ಥೆಗಳಿಗೂ, ಸರ್ಕಾರದ ಅನುದಾನ ಪಡೆಯುತ್ತಿರುವ ಸಂಸ್ಥೆಗಳಿಗೂ ಕಳುಹಿಸಿ ಕೊಡಲಾಗುವುದು. ಈ ಆದೇಶಗಳನ್ನು ಎಲ್ಲ ಇಲಾಖಾ ಮುಖ್ಯಸ್ಥರು, ಕಛೇರಿ ವ್ಯವಸ್ಥಾಪಕರು ಓದಿಕೊಂಡು ಆಯಾ ಇಲಾಖೆಯ ನೌಕರರ ಸಭೆ ಕರೆದು ಆ ಆದೇಶಗಳ ಮುಖ್ಯಾಂಶಗಳನ್ನು ಎಲ್ಲರಿಗೂ ಓದಿ ತಿಳಿಸಬೇಕು. ಅಲ್ಲದೆ ಈ ಆದೇಶಗಳನ್ನು ತಪ್ಪದೆ ಪಾಲಿಸುವಂತೆ ಸೂಚನೆ ನೀಡಬೇಕು.

೬. ಸಚಿವಾಲಯದ ಪ್ರತಿ ಇಲಾಖೆಗಳಲ್ಲಿ ಅಧೀನ ಕಾರ್ಯದರ್ಶಿ, ಶಾಖಾಧಿಕಾರಿ ಮತ್ತು ಇಬ್ಬರು ಸಹಾಯಕರು; ಇಲಾಖಾ ಮುಖ್ಯಸ್ಥರ ಕಛೇರಿ, ವಿಭಾಗ ಮಟ್ಟದ ಮತ್ತು ಜಿಲ್ಲಾ ಮಟ್ಟದ ಕಛೇರಿಗಳಲ್ಲಿ 'ಎ' ಅಥವಾ 'ಬಿ' ಗುಂಪಿನ ಅಧಿಕಾರಿ ಮತ್ತು ಇಬ್ಬರು ಸಹಾಯಕರು – ಇವರನ್ನೊಳಗೊಂಡ ತನಿಖಾ ತಂಡವನ್ನು ರಚಿಸಲಾಗಿದೆ. ಈ ತಂಡದ ಅಧಿಕಾರಿ ಮತ್ತು ನೌಕರರು ಪ್ರತಿಯೊಂದು ಇಲಾಖೆಗೂ ಭೇಟಿ ಕೊಟ್ಟು ಆಡಳಿತ ಕನ್ನಡ ಮತ್ತು ಡಾ. ಸರೋಜಿನಿ ಮಹಿಷಿ ಸಮಿತಿ ವರದಿ ಅನುಷ್ಠಾನ ಎಷ್ಟರಮಟ್ಟಿಗೆ ಕಾರ್ಯಗತವಾಗಿದೆ ಎಂಬುವನ್ನು ನಿಯತಕಾಲಿಕವಾಗಿ ತನಿಖೆ ಮಾಡಿ, ತನಿಖಾ ವರದಿಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಕಳುಹಿಸಿಕೊಡಬೇಕು.

೭. ಪ್ರತಿ ಜಿಲ್ಲೆಯಲ್ಲಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಹಾಗೂ ವಿಭಾಗದ ಉಪ ನಿರ್ದೇಶಕರು ಆಗಾಗ ಸರ್ಕಾರದ ಎಲ್ಲ ಕಛೇರಿಗಳಿಗೂ ಭೇಟಿ ನೀಡಿ, ಕನ್ನಡ ಬಳಕೆಯ ಪ್ರಗತಿ ಮತ್ತು ಡಾ. ಸರೋಜಿನಿ ಮಹಿಷಿ ಸಮಿತಿ ವರದಿ ಅನುಷ್ಠಾನದ ಬಗ್ಗೆ ತನಿಖೆ ಮಾಡಿ ಆಯಾ ಜಿಲ್ಲಾಧಿಕಾರಿಗಳಿಗೂ, ಸರ್ಕಾರಕ್ಕೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೂ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೂ ವರದಿ ಕಳುಹಿಸಿಕೊಡಬೇಕು.

೮. ಸರ್ಕಾರದ ಆದೇಶದಂತೆ ರಾಜ್ಯ ಮಟ್ಟದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಭಾಗ ಮಟ್ಟದಲ್ಲಿ ವಿಭಾಗಾಧಿಕಾರಿಗಳು, ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು, ಜಿಲ್ಲಾ ಪರಿಷತ್ತುಗಳ ಸಂಬಂಧದಲ್ಲಿ ಅಲ್ಲಿನ ಮುಖ್ಯ ಕಾರ್ಯದರ್ಶಿಗಳು, ಉಪ ವಿಭಾಗ ಮಟ್ಟದಲ್ಲಿ ಉಪ ವಿಭಾಗಾಧಿಕಾರಿಗಳು ಮತ್ತು ತಾಲ್ಲೂಕು ಮಟ್ಟದಲ್ಲಿ ತಹಸೀಲ್ದಾರರು ಪ್ರಾಧಿಕಾರದ ಉದ್ದೇಶಗಳನ್ನು ನೆರವೇರಿಸಲು ಜವಾಬ್ದಾರರಾಗಿರುವುದರಿಂದ ಆಯಾ ಅಧಿಕಾರಿಗಳು ತಿಂಗಳಿಗೊಮ್ಮೆ ನಡೆಸುವ ಪರಿಶೀಲನಾ ಸಭೆಯಲ್ಲಿ ಆಡಳಿತ ಕನ್ನಡ ಮತ್ತು ಡಾ. ಸರೋಜಿನಿ ಮಹಿಷಿ ಸಮಿತಿ ವರದಿಯ ಅನುಷ್ಠಾನದ ಬಗ್ಗೆ ಸಮೀಕ್ಷೆ ನಡೆಸಿ ಅದರ ವರದಿಯನ್ನು ಪ್ರತಿ ತಿಂಗಳು ಪ್ರಾಧಿಕಾರಕ್ಕೆ ಕಳುಹಿಸಿಕೊಡಬೇಕು.

೯. ಸಚಿವಾಲಯ ಇಲಾಖೆಗಳಲ್ಲಿ ಮತ್ತು ಇಲಾಖಾ ಮುಖ್ಯಸ್ಥರ ಕಛೇರಿಗಳಲ್ಲಿ ಕನ್ನಡದ ಬಳಕೆ ತುಂಬ ಕಡಿಮೆಯಾಗಿದೆ ಎಂಬ ದೂರುಗಳು ಕೇಳಿಬರುತ್ತಿರುವುದರಿಂದ ಅಂಥ ಕಛೇರಿಗಳು ಮುಖ್ಯಮಂತ್ರಿಗಳ ಆಶ್ವಾಸನೆ ಹಾಗೂ ಮುಖ್ಯ ಕಾರ್ಯದರ್ಶಿಗಳ ಆದೇಶಕ್ಕೆ ಅನುಗುಣವಾಗಿ ತಮ್ಮ ಪೂರ್ಣ ವ್ಯವಹಾರವನ್ನು ಕನ್ನಡದಲ್ಲಿ ಮಾಡಬೇಕು. ಕಾರ್ಯದರ್ಶಿಗಳು ಮತ್ತು ಇಲಾಖಾ ಮುಖ್ಯಸ್ಥರು ನಿಯತಕಾಲಿಕ ಭೇಟಿ ನೀಡಿ ತಪಾಸಣೆ ಮಾಡಬೇಕು.

೧೦. ಸರ್ಕಾರದ ಎಲ್ಲ ಇಲಾಖಾ ಮುಖ್ಯಸ್ಥರು ತಮ್ಮ ತಮ್ಮ ಇಲಾಖೆಗಳಿಗೆ ಸಂಬಂಧಿಸಿದ ಅಧಿನಿಯಮಗಳನ್ನು, ಪಾರಿಭಾಷಿಕ ಪದಕೋಶಗಳನ್ನು ಭಾಷಾಂತರ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳಿಂದ ತರಿಸಿಕೊಂಡು ತಮ್ಮ ಅಧೀನ ಕಛೇರಿಗಳಿಗೆ ವಿತರಣೆ ಮಾಡಬೇಕು.

೧೧. ಯಾವ ಇಲಾಖೆಗಳ ಇಲಾಖಾ ಕೈಪಿಡಿಗಳು ಅಥವಾ ಪಾರಿಭಾಷಿಕ ಪದಕೋಶಗಳು ಕನ್ನಡದಲ್ಲಿ ತಯಾರಾಗಿಲ್ಲವೋ ಆ ಇಲಾಖೆಗಳವರು ತಮ್ಮ ಇಲಾಖಾ ಕೈಪಿಡಿ ಹಾಗೂ ಪದಕೋಶಗಳನ್ನು ತಮ್ಮ ಇಲಾಖೆಯ ತಜ್ಞರ ಮುಖೇನ ತಯಾರಿಸಿ ಪ್ರಾಧಿಕಾರಕ್ಕೆ ಕಳುಹಿಸಬೇಕು.

೧೨. ಕನ್ನಡ ಶೀಘ್ರಲಿಪಿ ಹಾಗೂ ಬೆರಳಚ್ಚುಗಳ ತರಬೇತಿ ಪಡೆಯದ ಇಂಗ್ಲೀಷ್ ಶೀಘ್ರಲಿಪಿಗಾರರು ಮತ್ತು ಬೆರಳಚ್ಚುಗಾರರು ಈ ವರ್ಷಾಂತ್ಯದೊಳಗೆ ತರಬೇತಿ ಪಡೆದುಕೊಳ್ಳಬೇಕು.

೧೩. ಸರ್ಕಾರಿ ಅಧಿಕಾರಿಗಳಿಗೆ. ನೌಕರರಿಗೆ ಕನ್ನಡ ಬಳಕೆಗೆ ಅನುಕೂಲವಾದ ತರಬೇತಿ ಶಿಬಿರ. ಕಮ್ಮಟ. ಪ್ರದರ್ಶನ. ವಿಚಾರ ಸಂಕಿರಣ. ಕನ್ನಡೇತರರಿಗೆ ಕನ್ನಡ ಕಲಿಸುವುದು ಇತ್ಯಾದಿ ಕಾರ್ಯಕ್ರಮಗಳನ್ನು ಕಳೆದ ವರ್ಷಗಳಿಗಿಂತ ಈ ವರ್ಷ ನಾಲ್ಕು ಪಟ್ಟು ಹೆಚ್ಚಿಸಲಾಗುವುದು. ಅಧಿಕಾರಿಗಳು ಮತ್ತು ನೌಕರರು ಇವುಗಳಲ್ಲಿ ತಪ್ಪದೇ ಭಾಗವಹಿಸುವಂತೆ ಆಯಾ ಇಲಾಖಾ ಮುಖ್ಯಸ್ಥರು ನೋಡಿಕೊಳ್ಳಬೇಕು.

೧೪. ಸಾರ್ವಜನಿಕರಿಂದ ಕನ್ನಡದಲ್ಲಿ ಬಂದ ಅರ್ಜಿಗಳಿಗೆ ಆದ್ಯತೆ ನೀಡಬೇಕಲ್ಲದೆ ಇತರ ಭಾಷೆಗಳಲ್ಲಿ ಅರ್ಜಿ ಬರೆದು ತಂದವರನ್ನು ಬರಮಾಡಿಕೊಂಡು ಮುಂದೆ ಕನ್ನಡದಲ್ಲಿ ಬರೆದು ತರುವಂತೆ ಅಧಿಕಾರಿಗಳು ಅವರ ಮನವೊಲಿಸಬೇಕು.

೧೫. ಆಡಳಿತ ಕನ್ನಡ ಮತ್ತು ಡಾ. ಸರೋಜಿನಿ ಮಹಿಷಿ ಸಮಿತಿ ವರದಿಯ ಅನುಷ್ಠಾನದ ಬಗ್ಗೆ ಸಾರ್ವಜನಿಕರು ಅಥವಾ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಮಾಹಿತಿ ಪಡೆಯಲು ಬಂದಲ್ಲಿ ಅಧಿಕಾರಿಗಳು ಅವರೊಡನೆ ವಿನಯದಿಂದ ವರ್ತಿಸಿ ಆವಶ್ಯಕ ಮಾಹಿತಿಯನ್ನು ಒದಗಿಸಬೇಕು.

ಕರ್ನಾಟಕದಲ್ಲಿ ಕನ್ನಡವನ್ನು ಆಡಳಿತ ಭಾಷೆಯಾಗಿ ಘೋಷಿಸಿ ೩೦ ವರ್ಷಗಳೇ ಆಗಿದ್ದರೂ ಸರ್ಕಾರದ ಎಲ್ಲ ಹಂತಗಳಲ್ಲೂ ಕನ್ನಡವು ನೂರಕ್ಕೆ ನೂರರಷ್ಟು ಸ್ಥಿರವಾಗಿ ನೆಲೆ ಊರಿರುವುದಿಲ್ಲ. ಸರ್ಕಾರದ ಎಲ್ಲ ಅಧಿಕಾರಿಗಳು ಮತ್ತು ನೌಕರರು ಈ ಜಾಗೃತಿ ವರ್ಷದಲ್ಲಿ ದೃಢ ಸಂಕಲ್ಪದಿಂದ ಕನ್ನಡವನ್ನು ಸ್ಥಿರವಾಗಿ ಆಡಳಿತದಲ್ಲಿ ನೆಲೆ ನಿಲ್ಲಿಸಲು ಪ್ರಯತ್ನಿಸಬೇಕೆಂದು ಕೋರಲಾಗಿದೆ.

ಜಿ. ನಾರಾಯಣ

ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ

❑

ಜಿ. ನಾರಾಯಣ : ಸಾಧನೆಗಳ ಶಕ್ತಿ

■ ಎಂ. ನರಸಿಂಹ

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು ।
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ ॥
ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಂಗೆ ।
ಎಲ್ಲರೊಳಗೊಂದಾಗು – ಮಂಕುತಿಮ್ಮ ॥

ಇರುವ ಕೆಲಸವ ಮಾಡು ಕಿರಿದೆನದೆ ಮನವಿಟ್ಟು ।
ದೊರೆತುದ ಹಸಾದವೆಂದುಣ್ಣು ಗೊಣಗಿಡದೆ ॥
ಧರಿಸು ಲೋಕದ ಭರವ ಪರಮಾರ್ಥವನು ಬಿಡದೆ ।
ಹೊರಡು ಕರೆ ಬರಲ್ ಅಳದೆ – ಮಂಕುತಿಮ್ಮ ॥

ಡಿ.ವಿ.ಜಿ.ಯವರ 'ಮಂಕುತಿಮ್ಮನ ಕಗ್ಗ'ದಿಂದ ಆಯ್ದ ಈ ಎರಡು ಕವನಗಳು ಶ್ರೀ ಜಿ.ನಾರಾಯಣ ಅವರ ಜೀವನ ಪಥ ಎಂಬುದು ನನ್ನ ಅನಿಸಿಕೆ. "ಜನ ಸೇವೆಯೆ ಜನಾರ್ಧನ ಸೇವೆ" ಎನ್ನುವ ಇವರು ತಮ್ಮ ಕಾರ್ಯ ಜವಾಬ್ದಾರಿಯನ್ನು ನಿರ್ವಹಿಸುವ ಪರಿ ಮತ್ತು ಜೀವನವನ್ನು ಅರ್ಥಮಾಡಿಕೊಂಡಿರುವ ರೀತಿ ಈ ಉದಾಹರಣೆಗಳಿಂದ ಸ್ಪಷ್ಟವಾಗುತ್ತದೆ.

ಹಿರಿಯರು – ಕಿರಿಯರು, ದೊಡ್ಡವರು – ಚಿಕ್ಕವರು, ಪಂಡಿತರು – ಪಾಮರರು, ಅಧಿಕಾರಸ್ಥರು – ಕಾರ್ಯಕರ್ತರು ಈ ಯಾವುದೇ ತಾರತಮ್ಯವಿಲ್ಲದ ವಿಶ್ವಾಸಪೂರ್ವಕ ಸಮಾನ ಸ್ನೇಹ ಶ್ರೀ ಜಿ.ನಾರಾಯಣ ಅವರಿಂದ ಮಾತ್ರ ಪಡೆಯಲು ಸಾಧ್ಯ. ದೇಶಹಳ್ಳಿಯ ಒಬ್ಬ ಬಾಲಕ ಅಂದಿನ ದಿನಗಳಲ್ಲೆ 'ಅಕ್ಷರವ ನೀವ್ ಕಲಿಯಿರಿ' ಕೃತಿಗಳನ್ನು ರಚಿಸಿ ಹಾಡಿ ಜನಜಾಗೃತಿ ಮೂಡಿಸುತ್ತಿದ್ದುದು ಭವಿಷ್ಯದ ದಿನಗಳಿಗೆ ಅಡಿಪಾಯ ವಾಗಿತ್ತು (1943). ಪ್ರೌಢಶಾಲಾ ವಿದ್ಯಾಭ್ಯಾಸಕ್ಕೆ ವಿದಾಯ

ಹೇಳಿ(1940) ಗಾಂಧೀಜಿ ಕರೆಗೆ ಓಗೊಟ್ಟು, ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿ(1942) ಸೆರೆವಾಸದ ರುಚಿಯನ್ನು ಕಂಡವರು. ಸೆರೆವಾಸದಲ್ಲಿ ಸಂಜೆಯ ವೇಳೆ ಸಹಪಾಠಿಗಳೆಲ್ಲರೂ ಕೂಡಿ ರಾಷ್ಟ್ರದ ಆಗು-ಹೋಗುಗಳ ಬಗ್ಗೆ ಚರ್ಚಿಸುತ್ತಿದ್ದರು. ಅಂದು ಒಬ್ಬ ಲಾವಣಿಕಾರ "ಪ್ರಜಾಪ್ರಭುತ್ವ ಎಂದರೇನು?" ಎಂಬ ಪ್ರಶ್ನೆಗೆ ನೀಡಿದ ಉತ್ತರವನ್ನು ಇಂದೂ ನೆನಪು ಮಾಡಿಕೊಳ್ಳುತ್ತಾರೆ - "ತಲೆ ತುಂಬ ಬುದ್ಧಿ, ಹೊಟ್ಟೆ ತುಂಬ ಊಟ, ಮೈ ತುಂಬ ಬಟ್ಟೆ" - ಇದು ಪ್ರಜಾಪ್ರಭುತ್ವದ ತಿರುಳು.

ಶ್ರೀ ಎಚ್.ಕೆ. ವೀರಣ್ಣ ಗೌಡ, ಶ್ರೀ ಎಸ್. ನಿಜಲಿಂಗಪ್ಪ, ಶ್ರೀ ಕೆ.ಆರ್. ಮಾಧವರಾವ್ ಅವರಂತಹ ಹಿರಿಯರ ಸಹವಾಸದಲ್ಲಿ ಅಂದಿನ ಕಾಂಗ್ರೆಸ್ ಕಛೇರಿಯ ಕಾರ್ಯಕರ್ತರಾಗಿ ಸಲ್ಲಿಸಿದ ಸೇವೆ ಅವರಿಗೆ ಇಂದಿಗೂ ಪ್ರೇರಕ ಶಕ್ತಿ (1946). 1950 ರಲ್ಲಿ ಸ್ವತಂತ್ರ ಮುದ್ರಣಾಲಯ ಸ್ಥಾಪಿಸಿ, 1951ರಲ್ಲಿ 'ವಿನೋದ' ಹಾಸ್ಯ ಪತ್ರಿಕೆ ಜನ್ಮ ತಳೆಯಿತು. ಬೆಂಗಳೂರು ನಗರ ಸಭೆಯ ಸದಸ್ಯರಾಗಿ (1957 ಮತ್ತು 1960) ಎರಡು ಅವಧಿಯಲ್ಲಿ ಸೇವೆ ಸಲ್ಲಿಸಿ ತಮ್ಮ ವಾರ್ಡಿನ (ಚಾಮರಾಜಪೇಟೆ) ಪೌರ ಸೌಲಭ್ಯಗಳ ಅಭಿವೃದ್ಧಿಗೆ ಅಂದಿನ ದಿನಗಳಲ್ಲಿ ನಿರ್ವಹಿಸಿದ ಯೋಜನಾಬದ್ಧ ಕಾರ್ಯವೈಖರಿ ಜನರ ಮೆಚ್ಚುಗೆ ಗಳಿಸಿತ್ತು. ಕಾಲ-ಕಾಲಕ್ಕೆ ಜನ ಸಂಪರ್ಕ ಸಭೆ ಎಂದೆಂದಿಗೂ ಅನುಕರಣೀಯ ಪರಿಕಲ್ಪನೆ. ಅಂದಿನ ವಾರ್ಡಿನ ವಾರ್ಷಿಕ ಖರ್ಚು ಸುಮಾರು ರೂ.4 ಲಕ್ಷಗಳು! (ಇಂದು ಈ ಮೊತ್ತ ಕೇವಲ ಒಂದು ಚರಂಡಿ ರಿಪೇರಿಗೂ ಸಾಲದು) ಕಣಿಯರ ಕಾಲೊನಿ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನದ ವ್ಯವಸ್ಥಿತ ಪುರೋಭಿವೃದ್ಧಿಗೆ ಇವರ ಶ್ರಮ ಅಪಾರ. ನಗರಸಭೆಯ ಕಾಮಗಾರಿ ಸ್ಥಾಯಿ ಸಮಿತಿಗೆ ಸತತವಾಗಿ ಮೂರು ಬಾರಿ ಅಧ್ಯಕ್ಷ ಸ್ಥಾನ ನಿರ್ವಹಿಸಿದ್ದು ಸಾಧನೆಯ ಹಿರಿಮೆಗೆ ಕಿರೀಟಪ್ರಾಯ. ನಗರದ ಮೇಯರ್‌ರಾಗಿ (1964) ಮೊಟ್ಟಮೊದಲು ಬೆಂಗಳೂರು ನಗರಕ್ಕೆ ಕಾವೇರಿ ಮಾತೆಯ ಪಾದಾರ್ಪಣೆ ಮಾಡಿಸಿದ ಕೀರ್ತಿ ಜಿ. ನಾರಾಯಣ ಅವರಿಗೆ ಸಲ್ಲುತ್ತದೆ. ನಗರಸಭೆಯ ಮುಂಭಾಗದಲ್ಲಿ ಕನ್ನಡಿಗರ ಆತ್ಮಗೌರವವನ್ನು ಅಣಕಿಸುತ್ತಿದ್ದ 'ಸೆನೆಟಾಫ್' ಯಾವುದೇ ಘರ್ಷಣೆ-ಗೊಂದಲಗಳಿಲ್ಲದೆ ನೆಲ ಕಚ್ಚುವಂತೆ ಮಾಡಿದ ಕಾರ್ಯವೈಖರಿ ಗಾಂಧಿವಾದಿಗೆ ಸಲ್ಲುವ ಕೀರ್ತಿ. ಇಂದಿನ 'ಯೂನಿಟಿ ಬಿಲ್ಡಿಂಗ್' ನಿರ್ಮಾಣಕ್ಕೆ ಅನುಮತಿಗಾಗಿ ಕಾಮಗಾರಿ ಸಮಿತಿ ಅಧ್ಯಕ್ಷರಾಗಿದ್ದ ಇವರ ಮುಂದೆ ಬಂದಾಗ ನೀಡಿದ ಸಲಹೆ ಇವರ ದೂರದೃಷ್ಟಿಯ ಪ್ರತೀಕ. ರಸ್ತೆಯ ಅಂಚಿನಿಂದ 40 ಅಡಿಗಳಷ್ಟು ಬಿಟ್ಟು ಕಟ್ಟಡ ಕಟ್ಟುವಂತೆ ಸೂಚನೆ ನೀಡಿ ಅನುಮತಿ ನೀಡಿದರು. ಅಂದಿನ ಅವರ ದೂರದೃಷ್ಟಿ ಜೆ.ಸಿ.ರಸ್ತೆಯಲ್ಲಿ ಇಂದಿನ ವಾಹನಗಳ ಒತ್ತಡವನ್ನು ಗಮನಿಸಿದವರಿಗೆ ಎಷ್ಟು ಮುಖ್ಯ ಎಂಬುದು ಇಂದು ವೇದ್ಯವಾಗುತ್ತದೆ. ಎರಡನೆಯ ಅವಧಿಗೆ ಮೇಯರ್‌ರಾಗಿ ಮುಂದುವರಿಯುವಂತೆ ಕಾಂಗ್ರೆಸ್ ಪುರಸ್ಕರಿಸಿದ ಒತ್ತಡವನ್ನು ನಯವಾಗಿ ತಳ್ಳಿಹಾಕಿ, ಪಕ್ಷದ ಹಿತದೃಷ್ಟಿಯಿಂದ ಮುಂದಿನ ದಿನಗಳಲ್ಲಿ ಕೆಟ್ಟ ಸಂಪ್ರದಾಯ ಹಾಕಿಕೊಟ್ಟಂತಾಗುತ್ತದೆ ಎಂದು ತಿಳಿ ಹೇಳಿದರು. ಇದು ರಾಜಕಾರಣದಲ್ಲಿ ಅಪರೂಪದ ಮೇಲ್ಪಂಕ್ತಿ!

ಮಹಾಪೌರರಾಗಿ ಅಧಿಕಾರ ಹಸ್ತಾಂತರಿಸಿದ ನಂತರ ಇವರು ಮನೆಗೆ ಹೊರಡಲು ಕಛೇರಿ ವಾಹನ ಸಿದ್ಧವಾಗಿತ್ತು. ಆದರೆ ಅದನ್ನು ನಯವಾಗಿ ತಳ್ಳಿ, ಬಾಡಿಗೆ ಆಟೋರಿಕ್ಷಾದಲ್ಲಿ ಮನೆ ತಲುಪಿದರು.

ರಂ.ಶ್ರೀ. ಮುಗಳಿ, ಡಿ.ವಿ.ಜಿ., ಮಾಸ್ತಿ ಮುಂತಾದವರ ಸ್ನೇಹಮಯ ಮಾರ್ಗದರ್ಶನ–ಸಹಕಾರ ಕನ್ನಡದ ತೇರು ರಾಷ್ಟ್ರದ ರಾಜಧಾನಿ ನವದೆಹಲಿಯವರೆಗೂ ಸಂಚಾರ ಮಾಡಿ ನೆಲೆಯೂರಿತು (1976). ಪರಿಷತ್ತಿಗೆ ಮೊದಲ ಬಾರಿಗೆ ತ್ರೈವಾರ್ಷಿಕ ಯೋಜನೆಯ ಪರಿಕಲ್ಪನೆ ನೀಡಿದ ಗೌರವ ಇವರಿಗೆ ಸಲ್ಲುತ್ತದೆ(1969). ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವ, ವಜ್ರ ಮಹೋತ್ಸವ, ಸಾಹಿತ್ಯ ಸಮ್ಮೇಳನಕ್ಕೆ 'ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ' ಎಂಬ ವ್ಯಾಪ್ತಿ ಮುಂತಾದವು ಇವರ ಸಾಧನೆಗಳು. ಇವು ನಾಡಿನ ಸಾಹಿತ್ಯಕ–ಸಾಂಸ್ಕೃತಿಕ ಕ್ಷೇತ್ರದಲ್ಲಿ ಸದಾ ಹಚ್ಚ–ಹಸಿರಾಗಿವೆ. ಅಂತಾರಾಷ್ಟ್ರೀಯ ಮಹಿಳಾ ವರ್ಷ ಆಚರಣೆಯನ್ನು (1975) ತುಂಬಾ ಅರ್ಥಪೂರ್ಣವಾಗಿ ಆಚರಿಸಿ ಸಮಾಜದಲ್ಲಿ ಮಹಿಳೆಯರ ಸ್ಥಾನವನ್ನು ಭದ್ರಪಡಿಸಿದರು. 1972ರಲ್ಲಿ 'ರಾಜ್ಯ ಪ್ರಶಸ್ತಿ' ಪುರಸ್ಕಾರ ಇವರನ್ನು ಅರಸಿ ಬಂತು.

ಡಿ.ವಿ.ಜಿ.ಯವರ ಅಂಚೆ ಕಾರ್ಡು – "ಬಂದು ನೋಡುವುದು" ಎಂಬ ಬರಹ ಆಗಾಗ್ಗೆ ಇವರಿಗೆ ತಲುಪುತ್ತಿತ್ತು. ಪರಿಷತ್ತಿನ ಅಧ್ಯಕ್ಷರಾಗಿ ಬೆಳಗಿನ ತಮ್ಮ ಕೆಲಸಗಳನ್ನು ಮುಗಿಸಿ ಮಧ್ಯಾಹ್ನ ಊಟಕ್ಕೆ ಮುನ್ನ ಡಿ.ವಿ.ಜಿ.ಯವರ ಭೇಟಿ, ಕನ್ನಡದ ಆಗು–ಹೋಗುಗಳ ಬಗ್ಗೆ ಚರ್ಚೆ – ಇವರಿಗೆ ಇಂದಿಗೂ ಧನ್ಯತಾ ಭಾವನೆಯನ್ನು ಮೂಡಿಸಿದೆ.

ಡಾ. ರಂ.ಶ್ರೀ. ಮುಗಳಿ ಅವರ ಸಹಕಾರ ಇವರಿಗೆ ನೆನಪಿನಲ್ಲಿ ಉಳಿಯುತ್ತದೆ. ಆ ಕಾಲದಲ್ಲಿ 'ಕರ್ನಾಟಕ ರಾಜ್ಯೋತ್ಸವ ಸಾಹಿತ್ಯ ಪ್ರಚಾರ ಸಮಿತಿ' ರಚಿಸಿ (1967) ಕಾರ್ಯಾಧ್ಯಕ್ಷರಾಗಿ, ಮನೆ–ಮನೆಗೆ ಪುಸ್ತಕ, ಬಡಾವಣೆಗಳಲ್ಲಿ ಪುಸ್ತಕ ಪ್ರದರ್ಶನ–ಪ್ರಚಾರ, ಸಮಾಜದ ಹಿರಿಯ–ಕಿರಿಯ ಕಾರ್ಯಕರ್ತರ ಪಡೆ – ಆ ಮೂಲಕ ಸಾಹಿತ್ಯ ಪ್ರಸಾರ, ಪರಿಷತ್ತಿನ ತೇರಿಗೆ ಎಲ್ಲೆಡೆ ಚಾಲನೆ – ಇಂದೂ ಕನ್ನಡ ಕಾರ್ಯಕರ್ತರು ನೆನಪು ಮಾಡಿಕೊಳ್ಳುತ್ತಾರೆ. ಅಂದು ಯುವಕರಾಗಿದ್ದವರು ಇಂದು ತಾತಂದಿರಾಗಿದ್ದರೂ ಇಂದಿಗೂ ನಾರಾಯಣರ ಕರೆಗೆ ಚಿಮ್ಮುವ ಉತ್ಸಾಹದಲ್ಲಿ ಒಡಗೂಡಿ ಕೆಲಸ ಮಾಡುತ್ತಾರೆ. ಆ ಸಾಧನೆ ಸಾಹಿತ್ಯ–ಸಾಂಸ್ಕೃತಿಕ ಕ್ಷೇತ್ರದಲ್ಲಿ ಬೇರೆ ಯಾರಿಂದಲೂ ಸಾಧ್ಯವಾಗಲಿಲ್ಲ, ಏಕೆ ? ಆ ಕಾರ್ಯಕರ್ತರ ತಂಡಕ್ಕೆ ಸಾಂಸ್ಥಿಕ ರೂಪ ನೀಡಲು ಇವರು ಒಲವು ತೋರಲಿಲ್ಲ. ಅದಕ್ಕೆ ಕಾರಣ ತಿಳಿಯದು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ (1992) ಇವರು ಸರ್ಕಾರದ ವಿವಿಧ ಅಂಗ–ಸಂಸ್ಥೆಗಳಿಗೆ ಭೇಟಿ ನೀಡಿ ಕನ್ನಡ ಆಡಳಿತ ಭಾಷೆಯಾಗಿ ಜಾರಿಗೆ ತರಲು ನೀಡಿದ ಸ್ನೇಹಪರ ಸೂಚನೆಗಳನ್ನು ಅಲ್ಲಿಯ ಮುಖ್ಯ ಅಧಿಕಾರಿಗಳಾಗಿದ್ದವರು ಇಂದಿಗೂ ನೆನಪು ಮಾಡಿಕೊಳ್ಳುತ್ತಾರೆ. ಕರ್ನಾಟಕ ಪತ್ರಿಕಾ ಅಕಾಡೆಮಿಯ ಅಧ್ಯಕ್ಷರಾಗಿ(1987) ಕನ್ನಡ ಪತ್ರಿಕೋದ್ಯಮದ 145ನೆಯ ವರ್ಷವನ್ನು ಮುಂದಿಟ್ಟುಕೊಂಡು ಮಾಡಿದ ಸಾಧನೆ ದೊಡ್ಡದು. ಗ್ರಾಮೀಣ ಕಿರಿಯ ಪತ್ರಕರ್ತರಿಗೆ ನೀಡಿದ ಉತ್ತೇಜನ, ವಿಶ್ವ ಪತ್ರಿಕಾ ಪ್ರದರ್ಶನ, ವಿಚಾರಗೋಷ್ಠಿ, ಪ್ರಕಟಣೆಗಳು ದಾಖಲಾಗಿವೆ.


ಕೆಂಗಲ್ ಹನುಮಂತಯ್ಯನವರು ಗದುಗಿನ ಭಾರತವನ್ನು ಸಂಸ್ಕೃತಿ ಪ್ರಚಾರ ಇಲಾಖೆಯ ಮೂಲಕ ಅಚ್ಚು ಹಾಕಿಸಿ ಸುಲಭ ಬೆಲೆಗೆ ರೂ.2/-ಗಳಿಗೆ ವಿತರಿಸಿ ಕನ್ನಡ ಓದುಗರ ಕೃತಜ್ಞತೆಗೆ ಪಾತ್ರರಾದರು. ಹಾಗೆಯೇ ಜಿ. ನಾರಾಯಣ ಮತ್ತು ವಿ.ಎಸ್. ಕೃಷ್ಣಯ್ಯರ್ ಅವರು ಕಾಂಗ್ರೆಸ್ ವಸ್ತು ಪ್ರದರ್ಶನಗಳನ್ನು ಈಗಿನ ಕೆಂಪೇಗೌಡ ಬಸ್ ನಿಲ್ದಾಣ (ಸುಭಾಶ್ ನಗರ ಮೈದಾನ - ಹಿಂದಿನ ಧರ್ಮಾಂಬುಧಿ ಕೆರೆ ಅಂಗಳ) ದಲ್ಲಿ ನಡೆಯಿಸುತ್ತಿದ್ದರು. ಆಗ ಇವರ ದಕ್ಷತೆಯನ್ನು ವ್ಯವಸ್ಥಾಪನಾ ಕೌಶಲ್ಯವನ್ನು ಕಂಡವರ ನೆನಪು ಈಗಲೂ ಹಸುರಾಗಿದೆ. ಇನ್ನೊಂದು ಇಂತಹುದೇ ಒಂದು ಕೆಲಸವೆಂದರೆ ಚಾಮರಾಜೋಕ್ತಿ ವಿಲಾಸ ರಾಮಾಯಣ ಗ್ರಂಥ. ಉತ್ತಮವಾದ ಕನ್ನಡ ಗದ್ಯದಲ್ಲಿ ಪ್ರಕಟವಾಗಿದ್ದ ವಾಲ್ಮೀಕಿ ರಾಮಾಯಣದ ಮರು ಮುದ್ರಣ ಮಾಡಿ ಅತ್ಯಂತ ಕಡಿಮೆ ಬೆಲೆಗೆ ಎಲ್ಲರಿಗೂ ಎಟಕುವಂತೆ (ರೂ.10/-) ಕನ್ನಡಿಗರಿಗೆ ಒದಗಿಸಿ, ಇದರಿಂದ ಬಂದ ಹಣವನ್ನು ಈ ಇಬ್ಬರ ಸಮಿತಿ ಮುಕ್ತಾಯವಾದಾಗ ಸಂಪೂರ್ಣವಾಗಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಕನ್ನಡದಲ್ಲಿ ಹೆಚ್ಚು ಅಂಕ ಪಡೆಯುವ ವಿದ್ಯಾರ್ಥಿಗಳಿಗೆ ಬಹುಮಾನ ನೀಡಲು ಉಪಯೋಗಿಸಲು ನೀಡಿದರು.

ಇಂತಹ ಸಾಧನೆಯ ಹರಿಕಾರ, ಗಾಂಧಿ ಅನುಯಾಯಿ, 'ನಾಡೋಜ' ಜಿ. ನಾರಾಯಣ ಅವರು ಹಲವು - ಹತ್ತು ಸಂಸ್ಥೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಮಾರ್ಗದರ್ಶನ ನೀಡಿ ಒಳ್ಳೆಯ ಕೆಲಸಗಳನ್ನು ಮಾಡಿಸಿದ್ದಾರೆ. ಚಾಮರಾಜಪೇಟೆಯಲ್ಲಿ ಇವರು ಪ್ರಾರಂಭಿಸಿದ ಪ್ರಾಥಮಿಕ ವಿದ್ಯಾಸಂಸ್ಥೆ ಇಂದು 'ಜಿ.ಟಿ.ಎಲ್ ವಿದ್ಯಾಸಂಸ್ಥೆ'ಯಾಗಿ ಬೆಳೆದಿದೆ. 'ಶಶಿ ಕಲಾವಿದರು ಸಂಸ್ಥೆ'(1958) ಸುವರ್ಣ ಮಹೋತ್ಸವವನ್ನು ಆಚರಿಸುತ್ತಿದೆ. ಕರ್ನಾಟಕ ಗಮಕ ಕಲಾ ಪರಿಷತ್ತು ಬೆಳೆದು ನಿಂತಿದೆ. ಕರ್ನಾಟಕ ಲೇಖಕಿಯರ ಸಂಘದ ಉಗಮಸ್ಥಾನ ಇವರ ಮನೆ ಎಂಬುದು ಗಮನಿಸಬೇಕಾದ ದಾಖಲೆ. ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವಾಧ್ಯಕ್ಷರಾಗಿದ್ದಾರೆ. ಆ ಸಂಸ್ಥೆ ಇವರ ಪೂರ್ಣ ಪ್ರಮಾಣದ ಪಾದಾರ್ಪಣೆಗೆ ಹಾತೊರೆಯುತ್ತಿದೆ. 1987ರಲ್ಲಿ ಡಿ.ವಿ.ಜಿ. ಜನ್ಮ ಶತಮಾನೋತ್ಸವ ಸಮಿತಿ, 1994ರಲ್ಲಿ ಬಿ.ಎಂ.ಶ್ರೀ. ಶತಮಾನೋತ್ಸವ ಸಮಿತಿಗಳ ಕಾರ್ಯಾಧ್ಯಕ್ಷರಾಗಿ ಇವರ ಕಾರ್ಯಸಾಧನೆ ದೊಡ್ಡದು. ಪ್ರಸ್ತುತ, ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರಾಗಿ ಆ ಸಂಸ್ಥೆಗೆ ರೂಪ ನೀಡುತ್ತಿದ್ದಾರೆ.

ಸಾಮಾನ್ಯವಾಗಿ ನಾರಾಯಣರು ಬೆಂಗಳೂರಿನ ಬಡಾವಣೆಗಳಲ್ಲಿ ಸಾಹಿತ್ಯ ಪ್ರಚಾರ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದಾಗ ಮಲ್ಲೇಶ್ವರ, ಜಯನಗರ ಮುಂತಾದ ಸ್ಥಳಗಳನ್ನು ಆಯ್ಕೆ ಮಾಡುತ್ತಿದ್ದರು. ಕನ್ನಡೇತರ ಬಡಾವಣೆಗಳಲ್ಲಿ ಹಲಸೂರು ಸೇರುತ್ತಿತ್ತು. ಕನ್ನಡೇತರ ಬಡಾವಣೆಗಳಾದ ಶ್ರೀರಾಂಪುರ, ರಾಮಚಂದ್ರಪುರ, ಓಕಳಿಪುರ ಮುಂತಾದ ಬಡಾವಣೆಗಳು ಸೇರುತ್ತಿರಲಿಲ್ಲ. ಕೆಂಪೇಗೌಡನಗರ (ಅಂದಿನ ಗವೀಪುರ ಗುಟ್ಟಹಳ್ಳಿ) ದಂತಹ ಬಡಾವಣೆಗಳೂ ಇರುತ್ತಿರಲಿಲ್ಲ. ಆದರೆ ಉತ್ಸಾಹಿ ಉದಯಭಾನು ಕಾರ್ಯಕರ್ತರು ಅವರನ್ನು ಮನವೊಲಿಸಿ ಆ ಬಡಾವಣೆಯಲ್ಲೂ ಕಾರ್ಯಕ್ರಮಗಳನ್ನು ವ್ಯವಸ್ಥೆ ಮಾಡಿಸುತ್ತಿದ್ದರು. ಅಂತಹ ಬಡಾವಣೆ ಕಾರ್ಯಕ್ರಮಗಳನ್ನು, ಈ ಲೇಖನದ ಲೇಖಕರಿಗೆ ವಹಿಸಿ ಮಾರ್ಗದರ್ಶನ ಮಾಡಿ ಯಶಸ್ವಿಗೊಳಿಸುತ್ತಿದ್ದರು. ಹೀಗೆ 'ನಾರಾಯಣ-ಉದಯಭಾನು' ಬಾಂಧವ್ಯ ಗಟ್ಟಿಯಾಗಿ

ಸಂಘವು ಕ್ರಿಯಾತ್ಮಕ ಯೋಜನೆಗಳನ್ನು ರೂಪಿಸಿಕೊಂಡಿದೆ. ಬಡಾವಣೆಯಲ್ಲಿ ಅನಕ್ಷರಸ್ಥರ ಜನಗಣತಿ ಮಾಡಿ ಅವರಿಗೆ 15-20 ಕೇಂದ್ರಗಳಲ್ಲಿ ಅಕ್ಷರದಾನ ಮಾಡಿಸಿದ ಯಶಸ್ಸು ಸಂಘಕ್ಕೆ ಕೃತಾರ್ಥ ಭಾವನೆಯನ್ನು ಮೂಡಿಸಿದೆ. ಆ ಸಂದರ್ಭದಲ್ಲಿ ಶ್ರೀ ಎ.ಎಸ್. ರಾಮಕೃಷ್ಣ ಅವರ ತಂಡದಿಂದ ಅನಕ್ಷರತೆಯ ಬಗ್ಗೆ ಜನಜಾಗೃತಿ ಮೂಡಿಸಲು ಬಡಾವಣೆಯ ರಸ್ತೆಗಳ ಬದಿಯಲ್ಲಿ ಬೀದಿ ನಾಟಕಗಳ ಪ್ರದರ್ಶನ ಏರ್ಪಡಿಸಲಾಗುತ್ತಿತ್ತು. ಆ ಸಂದರ್ಭದಲ್ಲಿ ತಾವೆ ಮುಂದೆ ನಿಂತು ಸಂಘದ ಕಾರ್ಯಕರ್ತರೊಡನೆ ಪೂರ್ಣಕಾಲ ತೊಡಗಿಸಿಕೊಳ್ಳುತ್ತಿದ್ದರು. ಇದು ಎಲ್ಲರೂ 'ಅಕ್ಷರಸ್ಥರಾಗಬೇಕು' ಎಂಬ ಬಗ್ಗೆ ಅವರಿಗೆ ಇದ್ದ ಕಾಳಜಿ ತೋರಿಸುತ್ತದೆ.

ನಾರಾಯಣರಿಗೆ ಸಾಮಾನ್ಯವಾಗಿ ವಿವಿಧ ಸಾಮಾಜಿಕ ವಿಷಯಗಳನ್ನು ಕುರಿತು ಕಿರು ಹೊತ್ತಿಗೆಗಳನ್ನು ಪ್ರಕಟಿಸಿ ಸಾರ್ವತ್ರಿಕವಾಗಿ ಸುಲಭ ಬೆಲೆಯಲ್ಲಿ ಎಲ್ಲರ ಕೈ ತಲುಪಿಸಬೇಕೆಂಬುದು ಹೆಬ್ಬಯಕೆ. ಆದರೆ, ಉದಯಭಾನು ವಿವಿಧ ಪ್ರಮುಖ ಕಾಲಘಟ್ಟಗಳಲ್ಲಿ ಪ್ರಮುಖ ವಿಷಯಗಳನ್ನು ಆಯ್ಕೆ ಮಾಡಿ ನಾಲ್ಕು ಕಾಲ ಹೌದೆನ್ನುವಂತಹ ಕೃತಿಗಳನ್ನು ಪ್ರಕಟಿಸುವ ಆಶಯ. ಅದರಂತೆ ಬೆಂಗಳೂರು ದರ್ಶನ(1975), ಕೆಂಪೇಗೌಡನಗರ ದರ್ಶನ(1980), ಪ್ರೊ. ಎಂ.ವಿ.ಸೀ. ಅಭಿನಂದನಾ ಗ್ರಂಥ 'ಆಸ್ವಾದ' ಪ್ರಕಟವಾಗಿದ್ದವು. 'ಆಸ್ವಾದ' ಪ್ರಕಟಿಸುವ ಕಾಲಕ್ಕೆ(1993) ಪ್ರೊ.ಎಲ್.ಎಸ್. ಶೇಷಗಿರಿರಾವ್, ಪ್ರೊ. ಜಿ. ವೆಂಕಟಸುಬ್ಬಯ್ಯ, ಡಾ. ಹಾ.ಮಾ. ನಾಯಕ ಅವರಂತಹ ಹಿರಿಯರ ಸಲಹೆಗಳನ್ನು ಪಡೆದು ಪ್ರಕಟಿಸಿ ಲೋಕಾರ್ಪಣೆ ಮಾಡಲಾಯಿತು.



ಸಂಘದ ರಜತ ಮಹೋತ್ಸವ(1990, ಆಚರಣೆ 1993) ಆಚರಣೆಗೆ ಮತ್ತೆ ಜಿ.ನಾರಾಯಣ ಅವರ ಮಾರ್ಗದರ್ಶನಕ್ಕೆ ದುಂಬಾಲು ಬಿದ್ದೆವು. ಕ್ರಿಯಾತ್ಮಕ ಮಾರ್ಗದರ್ಶನ ನೀಡಿದರು. ಆಗ ಪ್ರಕಟವಾದ ಬೃಹತ್ ಆಕರ ಗ್ರಂಥ 'ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ' – ಇಂದಿಗೂ ಕನ್ನಡ ಅಧ್ಯಯನ ಮಾಡುವವರಿಗೆ ಮಾರ್ಗದರ್ಶಕ ಗ್ರಂಥವಾಗಿ ಉಳಿದು ಬಂದಿದೆ. ಈ ಗ್ರಂಥ ಸಂಪಾದನೆ ಪ್ರೊ. ಎಲ್.ಎಸ್. ಶೇಷಗಿರಿ ರಾವ್, ಪ್ರೊ. ಎಂ.ಎಚ್. ಕೃಷ್ಣಯ್ಯ ಹಾಗೂ ಡಾ.ವಿಜಯಾ ಅವರುಗಳಿಂದ. ಕಾರ್ಯನಿರ್ವಾಹಕ ಸಂಪಾದಕರು ಶ್ರೀ ಆರ್.ಎಸ್. ರಾಮರಾವ್ ಅವರು.

ಇವರ ಮಾರ್ಗದರ್ಶನದಲ್ಲಿ ಉದಯಭಾನು ಕಲಾಸಂಘವು ತನ್ನ ನಾಲ್ಕು ದಶಕಗಳ ಸಾಧನಾ ಉತ್ಸವವನ್ನು 2005ರಲ್ಲಿ ಕ್ರಿಯಾತ್ಮಕವಾಗಿ ಆಚರಿಸಿತು. ಈ ಸಂದರ್ಭದಲ್ಲಿ 'ಬೆಂಗಳೂರು ದರ್ಶನ' (2005) ಎಂಬ ಎರಡು ಬೃಹತ್ ಸಂಪುಟಗಳನ್ನು 2000 ಪುಟಗಳಲ್ಲಿ ಲೋಕಾರ್ಪಣೆ ಮಾಡಲಾಯಿತು. ವಿಶ್ವದಲ್ಲೇ ಅಗ್ರಗಣ್ಯ ನಗರವಾದ ಬೆಂಗಳೂರಿನ ಚರಿತ್ರೆ, ಭೂಗೋಳ, ಶಿಕ್ಷಣ, ಉದ್ಯಮ – ಹೀಗೆ 23 ಅಧ್ಯಾಯಗಳಲ್ಲಿ ವಿದ್ವತ್‌ಪೂರ್ಣ ಲೇಖನಗಳು ಒಳಗೊಂಡಿವೆ. ಅಪರೂಪವಾದ ಸುಮಾರು 1500 ಚಿತ್ರಗಳು ಸೇರಿವೆ. 'ನಗರದ ಬೆಳವಣಿಗೆ



ಹಾಗೂ ಬಹುಮುಖಿಗಳನ್ನು ದಾಖಲಿಸುವ ಇಂಥದೊಂದು ಮಹತ್ವಾಕಾಂಕ್ಷೆಯ ಪ್ರಯತ್ನ ಬಹುಶಃ ಬೇರಾವ ಭಾರತೀಯ ನಗರದ ಬಗೆಗೂ, ಬೇರ್‍ಯಾವ ಭಾಷೆಯಲ್ಲೂ ನಡೆದಿರಲಿಕ್ಕಿಲ್ಲ', 'ಕರ್ನಾಟಕದ ಇತಿಹಾಸದಲ್ಲಿ ಮಹತ್ವಪೂರ್ಣ ಕೃತಿ', 'ವಿಶ್ವಕೋಶ ಸಮಾನ – ಬೆಂಗಳೂರು ದರ್ಶನ' ಎಂಬುದು ವಿಮರ್ಶಕರ ಅಭಿಪ್ರಾಯವಾಗಿದೆ. ಈ ಮಹತ್ವಪೂರ್ಣ ಕೃತಿಯ ಪ್ರಧಾನ ಸಂಪಾದಕರು ಪ್ರೊ. ಎಲ್.ಎಸ್. ಶೇಷಗಿರಿರಾವ್, ಡಾ. ಸೂರ್ಯನಾಥ ಕಾಮತ್ ಮತ್ತು ಪ್ರೊ. ಎಂ.ಎಚ್. ಕೃಷ್ಣಯ್ಯ ಅವರು ಸಂಪಾದಕರು. ಡಾ. ವಿಜಯಾ ಅವರು ಕಾರ್ಯ ನಿರ್ವಾಹಕ ಸಂಪಾದಕರು.

ಜಿ. ನಾರಾಯಣ ಅವರು 'ಉದಯಭಾನು ಒಂದು ಒಳ್ಳೆಯ ಸಾಂಸ್ಕೃತಿಕ ಕೇಂದ್ರವಾಗುತ್ತದೆ' ಎಂದು ಹರಸಿದರು. ಅವರ ಹಾರೈಕೆ ಫಲ ನೀಡಿದೆ. ಸುವರ್ಣ ಕರ್ನಾಟಕ ರಾಜ್ಯೋತ್ಸವ ಸಂದರ್ಭದಲ್ಲಿ(2005) ರಾಜ್ಯ ಸರ್ಕಾರ ಸಂಘಕ್ಕೆ 'ರಾಜ್ಯ ಪ್ರಶಸ್ತಿ' ನೀಡಿ ಗೌರವಿಸಿದೆ. ಸಂಘವು ನೆಲಮನೆ ಸೇರಿದಂತೆ ಐದು ಅಂತಸ್ತುಗಳ 'ಸಾಂಸ್ಕೃತಿಕ ಭವನ' ನಿರ್ಮಾಣವನ್ನು ಕೈಗೊಂಡು ನೆಲಮನೆ ನಿರ್ಮಾಣ ಪೂರ್ತಿಯಾಗಿ ಬಳಕೆಯಲ್ಲಿದೆ. ಇದಕ್ಕೆ ಸರ್ಕಾರದ ಆರ್ಥಿಕ ಸಹಾಯ ಹಸ್ತ ಕೋರಿದ್ದೇವೆ.

ಸಂಘ–ಸಂಸ್ಥೆಗಳು ಬೆಳೆದು ಶಕ್ತಿಶಾಲಿಯಾಗಿ ನಿಲ್ಲಬೇಕಾದರೆ ಪ್ರಾಮಾಣಿಕ ಮನಸ್ಸಿನ ಹಿರಿಯರ ಮಾರ್ಗದರ್ಶನ–ಹಾರೈಕೆ ಅತ್ಯವಶ್ಯಕ. ಜಿ.ನಾರಾಯಣ ಅವರಿಂದ ಅದನ್ನು ಪಡೆದುಕೊಂಡು 'ಉದಯಭಾನು' ಧನ್ಯವಾಗಿದೆ. ಸುವರ್ಣ ಮಹೋತ್ಸವದೆಡೆಗೆ ದಾಪುಗಾಲು ಇಡುತ್ತಿದೆ.

ಇವರು ನಾಡಿನ ಪ್ರಗತಿ ಮತ್ತು ಜನಸಮುದಾಯದ ಕಲ್ಯಾಣಕ್ಕಾಗಿ ಸದಾ ಚಿಂತನೆ ನಡೆಸುತ್ತಿರುತ್ತಾರೆ. ಅವರ ಈ ಕೆಳಕಂಡ ಚಿಂತನೆಗಳನ್ನು ಅಧಿಕಾರಸ್ಥರು ಪ್ರಾಮಾಣಿಕವಾಗಿ ಗಮನಿಸುವುದು ಅತ್ಯವಶ್ಯಕ.

1. ಪ್ರತಿನಿತ್ಯ ಕರ್ನಾಟಕ ರಾಜ್ಯಕ್ಕೆ ಅದರಲ್ಲೂ ಬೆಂಗಳೂರು ನಗರಕ್ಕೆ ವಲಸೆ ಬರುತ್ತಿರುವ ಜನರನ್ನು ತಡೆಗಟ್ಟಲು ಪ್ರಯತ್ನಿಸಬೇಕು. ಹಾಗೆ ಸಾಧ್ಯವಾಗದಿದ್ದಲ್ಲಿ ನಿಯಂತ್ರಣಕ್ಕಾದರೂ ಕ್ರಮ ಕೈಗೊಳ್ಳಬೇಕು. ರಾಷ್ಟ್ರದ ಪ್ರಧಾನ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಎಲ್ಲ ಮುಖ್ಯಮಂತ್ರಿಗಳನ್ನೊಳಗೊಂಡ ರಾಷ್ಟ್ರೀಯ ಅಭಿವೃದ್ಧಿ ಮಂಡಲಿ ಸಭೆಯಲ್ಲಿ ಈ ವಿಷಯವನ್ನು ಚರ್ಚಿಸಿ ಮಾರ್ಗಸೂಚಿಗಳನ್ನು ರೂಪಿಸಬೇಕು. ಬೇರೆ ರಾಜ್ಯದಿಂದ ವಲಸೆ ಬರುವ ಜನರ ಅವಶ್ಯಕತೆಗಳ ಪೂರೈಕೆಗಾಗಿ ವಲಸಿಗ ರಾಜ್ಯ ಸರ್ಕಾರ ಸಂಬಂಧಪಟ್ಟ ರಾಜ್ಯಕ್ಕೆ ಇಂತಿಷ್ಟು ಹಣವನ್ನು ಒದಗಿಸುವುದು ಅವಶ್ಯಕ ಎಂಬುದು ಇವರ ಅನಿಸಿಕೆ.

2. ಬೆಂಗಳೂರು ನಗರದ ಮೇಲೆ ಎಲ್ಲ ಕ್ಷೇತ್ರಗಳಲ್ಲೂ 360 ಕೋನಗಳಲ್ಲೂ ಒತ್ತಡ ಬೀಳುತ್ತಿದೆ. ಈ ಒತ್ತಡಗಳಿಂದ ನಗರವು ದಿನೇ-ದಿನೇ ಹೊಸ ಹೊಸ ಸಮಸ್ಯೆಗಳನ್ನು ಹುಟ್ಟುಹಾಕುತ್ತಿದೆ. ಆದ್ದರಿಂದ ಈಗಿನ ನಗರದ ಬೆಳವಣಿಗೆಯನ್ನು ಇಲ್ಲಿಗೆ ತಡೆಯಬೇಕು. "ಬೆಂಗಳೂರು ನವ ಬೆಂಗಳೂರು ಆಗಬೇಕು" (ಉದಾ: ದೆಹಲಿ - ನವದೆಹಲಿ) ಅಂದರೆ ನಗರಕ್ಕೆ ಪೂರಕವಾದ ಮತ್ತೊಂದು ನಗರವನ್ನು ಅಭಿವೃದ್ಧಿಪಡಿಸಬೇಕು ಎಂಬುದು ಇವರ ಪ್ರಾಮಾಣಿಕ ಕಾಳಜಿ.

3. ಕನ್ನಡ ನಾಡಿನ ಸಾಹಿತ್ಯಕ - ಸಾಂಸ್ಕೃತಿಕ ಪ್ರಗತಿಗಾಗಿ ಸರ್ಕಾರ, ಪರಿಷತ್ತು, ಅಕಾಡೆಮಿಗಳು, ವಿವಿಧ ವಿಶ್ವವಿದ್ಯಾಲಯಗಳು, ಸಾವಿರಾರು ಸಂಘ-ಸಂಸ್ಥೆಗಳು ಕೆಲಸ ಮಾಡುತ್ತಿವೆ. ಆದರೆ ಒಂದು ಸಂಯೋಜಿತ ವ್ಯವಸ್ಥೆ ಇಲ್ಲದೆ ಸಂಘಟಿತ ಪ್ರಗತಿ ಆಗುತ್ತಿಲ್ಲ. ಆದ್ದರಿಂದ ಕರ್ನಾಟಕ ರಾಜ್ಯದ ಸಾಹಿತ್ಯಕ-ಸಾಂಸ್ಕೃತಿಕ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಒಂದು ಪಂಚವಾರ್ಷಿಕ ಅಥವಾ ದಶವಾರ್ಷಿಕ ಯೋಜನೆ ಸಿದ್ಧವಾಗಬೇಕು. ಅಂತಹ ಯೋಜನೆಯಿಂದ ಕಾರ್ಯಜವಾಬ್ದಾರಿಯನ್ನು ಆರ್ಥಿಕ ನೆರವಿನೊಂದಿಗೆ ಕಾಲಮಿತಿಯಲ್ಲಿ ಕಾರ್ಯರೂಪಕ್ಕೆ ತರಲು ಮೇಲ್ಕಂಡ ಸಂಸ್ಥೆಗಳಿಗೆ ವಹಿಸಿ ಸರ್ಕಾರ ಕಾರ್ಯಪ್ರಗತಿಯನ್ನು ಕಾಲ-ಕಾಲಕ್ಕೆ ಸಮೀಕ್ಷೆ ನಡೆಸಬೇಕು. ಅದರಿಂದ ಕ್ರಿಯಾತ್ಮಕ ಪ್ರಗತಿ ಸಾಧ್ಯ ಎಂಬುದು ಇವರ ಅನಿಸಿಕೆ.

ಸದಾ ಚಿಂತನಶೀಲ ಜಿ. ನಾರಾಯಣ ಅವರ ಕ್ರಿಯಾಶೀಲ ಬುದ್ಧಿವಂತಿಕೆಯನ್ನು ಸರ್ಕಾರ ಸಮರ್ಪಕವಾಗಿ ಬಳಸಿಕೊಂಡಲ್ಲಿ ನಾಡಿಗೆ ಉಪಕಾರವಾಗುವುದೆಂಬುದು ಸಾರ್ವತ್ರಿಕ ಅನಿಸಿಕೆ.

❑

ಸರಳ ಸಜ್ಜನಿಕೆ ವಿನಯಗಳ ಮೂರ್ತಿ

■ ಪ್ರೊ॥ ಜಯಪ್ರಕಾಶಗೌಡ

ತಲೆಯ ಮೇಲೊಂದು ಬಣ್ಣದ ಗಾಂಧಿ ಟೋಪಿ, ಮೂಗಿನ ಮೇಲೊಂದು ಕನ್ನಡಕ. ಮೈಮೇಲೊಂದು ಬಿಳಿಯ ಖಾದಿ ಜುಬ್ಬ. ಜುಬ್ಬದ ಮೇಲೊಂದು ವೇಸ್ಟ್‌ಕೋಟ್, ನಡುವಿಗೆ ಸುತ್ತಿರುವ ದಟ್ಟಿ ಖಾದಿ ಪಂಚೆ, ಕಾಲಿಗೆ ಜೋಡು; ಇಷ್ಟು ಉಡಿಗೆ ತೊಟ್ಟು ಮನೆ ಬಿಟ್ಟು ಹೊರಟ ಕೂಡಲೇ ಎದುರಿಗೆ ಸಿಕ್ಕವರನ್ನು ಏನು ಸ್ವಾಮಿ, ಚೆನ್ನಾಗಿದ್ದೀರಾ? ಎಂದು ಮೆದು ಧ್ವನಿಯಲ್ಲಿ ಮಾತಾಡುವ ವ್ಯಕ್ತಿ ಯಾರಾದರೂ ನಿಮಗೆ ಎದುರಾದರೆ, ಅವರು ಖಂಡಿತಾ ಜಿ. ನಾರಾಯಣ ಆಗಿರುತ್ತಾರೆ. ಇತ್ತೀಚಿನ ದಿನಗಳಲ್ಲಿ ಈ ರೀತಿಯ ಉಡುಗೆಯುಟ್ಟ ವ್ಯಕ್ತಿಗಳು ವಿರಳವಾಗುತ್ತಿರುವ ಸಂದರ್ಭದಲ್ಲಿ ಜಿ. ನಾರಾಯಣರು ಅವರನ್ನು ಎಲ್ಲೇ ಇದ್ದರೂ ತಟಕ್ಕನೆ ಗುರುತಿಸಬಹುದು. ಅಪರೂಪದ ಉಡುಗೆ ತೊಡುಗೆಗಳಂತೆಯೇ, ವಿರಳ ವ್ಯಕ್ತಿತ್ವವನ್ನು ಹೊಂದಿರುವ ಜಿ. ನಾರಾಯಣ ಅವರು ಯಾರಿಗೆ ತಾನೆ ಗೊತ್ತಿಲ್ಲ! ಕರ್ನಾಟಕದ ಉದ್ದಗಲಕ್ಕೆ ಸಾಹಿತ್ಯಿಕ–ಸಾಂಸ್ಕೃತಿಕ ವಲಯದಲ್ಲಿ ಕೆಲಸ ಮಾಡುತ್ತಿರುವ ಹಿರಿಯ–ಕಿರಿಯರಿಗೆಲ್ಲಾ ಜಿ. ನಾರಾಯಣ ಅವರು ಪರಿಚಿತರಾಗಿದ್ದಾರೆಂದರೆ ಅದು ನಿಜಕ್ಕೂ ಅತಿಶಯೋಕ್ತಿಯಲ್ಲ.

೮೨ ವಸಂತಗಳನ್ನು ಪೂರೈಸಿ ೮೩ಕ್ಕೆ ಕಾಲಿಟ್ಟಿರುವ ಜಿ. ನಾರಾಯಣ ಅವರದು ಮೇರು ಸದೃಶ ವ್ಯಕ್ತಿತ್ವ. ಈ ದೀರ್ಘ ಅವಧಿಯಲ್ಲಿ ಸ್ವಸ್ಥ ಮನಸ್ಸಿಟ್ಟುಕೊಂಡಿರುವುದು, ಅವರ ಅಕಳಂಕಿತ ಜೀವನಕ್ಕೆ ಸಾಕ್ಷಿ. ತಮ್ಮ ದೀರ್ಘಾವಧಿಯಲ್ಲಿ ಎಲ್ಲಿಯೂ ಕಪ್ಪುಚುಕ್ಕೆಯನ್ನಂಟಿಸಿಕೊಳ್ಳದೆ ಈಗಲೂ

ಸೇವಾಕ್ಷೇತ್ರದಲ್ಲಿ ಸಕ್ರಿಯವಾಗಿರುವುದು ಯಾರಿಗಾದರೂ ಆಶ್ಚರ್ಯವನ್ನುಂಟುಮಾಡು ವಂತಹುದೇ. ಸರಳತೆ–ಸಜ್ಜನಿಕೆ–ವಿನಯಗಳ ಮೂಲಕ ಯಾವ ವ್ಯಕ್ತಿಯಾದರೂ ಅತ್ಯಂತ ಎತ್ತರಕ್ಕೆ ಬೆಳೆದು ನಿಲ್ಲಬಹುದೆಂಬುದಕ್ಕೆ ಜಿ. ನಾರಾಯಣರೇ ಸಾಕ್ಷಿ.

ಜಿ. ನಾರಾಯಣ ಅವರು, ಹಾದು ಬಂದ ಹಾದಿ ಅಷ್ಟೇನೂ ಸುಗಮವಾದುದಲ್ಲ. ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ದೇಶಹಳ್ಳಿ ಎಂಬ ಗ್ರಾಮದ ರೈತಾಪಿ ಕುಟುಂಬವೊಂದರಲ್ಲಿ ಜನಿಸಿದ ಜಿ. ನಾರಾಯಣ ಅವರು ಕಲಿತದ್ದು, ಎಸ್.ಎಸ್.ಎಲ್.ಸಿ.ವರೆಗೆ, ಆದರೆ ಲೋಕವೆಂಬ ಶಾಲೆಯಲ್ಲಿ ಅವರು ಕಲಿತದ್ದು ಅಪಾರ; ಚಿಂತಿಸಿದ್ದು, ಯೋಚಿಸಿದ್ದು ಅನುಷ್ಠಾನಗೊಳಿಸಿದ್ದು, ಯಾವ ಎತ್ತರದ ವ್ಯಕ್ತಿಗೂ ಕಡಿಮೆಯಲ್ಲ. ಶಾಲೆಗೆ ಹೋಗುತ್ತಿದ್ದಾಗಲೇ ಸ್ವಾತಂತ್ರ್ಯ ಚಳವಳಿಯ ಕಾವು ದೇಶದ ಉದ್ದಗಲಕ್ಕೂ ವ್ಯಾಪಿಸಿದ್ದು, ವಿದ್ಯಾರ್ಥಿಯಾದ ನಾರಾಯಣ ಅವರ ಮೇಲೆ ಪ್ರಭಾವ ಬೀರಿದ್ದು, ನಾಡಿನ ಅದೃಷ್ಟವೆಂದೇ ಹೇಳಬೇಕು. ಅಕ್ಷರವಂತ ಕುಟುಂಬದಿಂದ ಬಂದಿರದ ಜಿ. ನಾರಾಯಣ ಅವರು ದೇಶದ ಹಾಗೂ ಸ್ವಾತಂತ್ರ್ಯದ ಬಗ್ಗೆ ಯೋಚಿಸಿದ್ದೇ ನಿಜಕ್ಕೂ ಮಹತ್ತರ ವಿಷಯ ಎಂದೇ ನನ್ನ ಭಾವನೆ. ಗಾಂಧೀಜಿಯನ್ನು ತನ್ನ ಆದರ್ಶ ಪುರುಷನನ್ನಾಗಿ ಮಾಡಿಕೊಂಡ ಜಿ. ನಾರಾಯಣ ಅವರು ಕೇವಲ ಗಾಂಧಿಯನ್ನು ಜಪಿಸುತ್ತಾ ಕೂರಲಿಲ್ಲ ಬದಲಿಗೆ ಅವರ ಪ್ರಮುಖ ಆಶಯವಾದ ರಚನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಮುಂದಾದರು. ಅಂದಿನಿಂದ ಪ್ರಾರಂಭವಾದ ಅವರ ಈ ಪರಿಯ ತೊಡಗಿಸಿಕೊಳ್ಳುವಿಕೆ ಇಲ್ಲಿಯವರೆಗೂ ನಿಂತಿಲ್ಲ.

ಮನೆಯವರ ಸಿಟ್ಟಿಗೆ ಒಳಗಾಗಿ, ಮನೆತೊರೆದು, ದೂರದ ಬೆಳಗಾವಿಯ ಹುದಲಿಯ ಖಾದಿ ಕೇಂದ್ರಕ್ಕೆ ಹೋದದ್ದು, ಅಲ್ಲಿಯೇ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿ, ಪೋಲೀಸರ ಲಾಠಿ ಏಟುಗಳಿಗೆ ಒಳಗಾಗಿ, ನ್ಯಾಯಾಲಯದಲ್ಲಿ ಹಾಜರಾಗಿ ಎಳೆಯರಾದ್ದರಿಂದ ನ್ಯಾಯಾಧೀಶರ ಕೃಪೆಗೆ ಒಳಗಾಗಿ ಬಿಡುಗಡೆಗೊಂಡ ಅವರ ಬಾಲ್ಯದ ಕಥೆ ನಿಜಕ್ಕೂ ಅಭ್ಯಾಸ ಯೋಗ್ಯ. ಅಲ್ಲಿಂದ ಹಿಂದಿರುಗಿದ ಶ್ರೀಯುತರು ಊರಿನಲ್ಲಿದ್ದು, ಹತ್ತಿರದಲ್ಲೇ ಇದ್ದ ಸ್ವಾತಂತ್ರ್ಯ ಹೋರಾಟಗಾರ, ಅಂದಿನ ಮಂಡ್ಯ ಜಿಲ್ಲೆಯ ಧೀಮಂತ ನಾಯಕ ಎಚ್.ಕೆ.ವೀರಣ್ಣಗೌಡರ ಸಮೀಪವರ್ತಿಯಾಗಿ, ಗ್ರಾಮದಲ್ಲಿ ಸಾಕ್ಷರತೆ, ಸ್ವಚ್ಛತೆಯ ಕಡೆಗೆ ಗಮನಹರಿಸಿದರು. ಎಲ್ಲರೂ ಅಕ್ಷರವಂತರಾದಾಗ ಮಾತ್ರ ಈ ದೇಶಕ್ಕೆ ಸ್ವಾತಂತ್ರ್ಯ ಬರಲು ಸಾಧ್ಯ ಎಂದು ಭಾವಿಸಿ ವೀರಣ್ಣಗೌಡರ ಬಳಿ ಸ್ವಯಂ ಸೇವಕರಂತೆ ದುಡಿಯಲು ಪ್ರಾರಂಭಿಸಿದ್ದು ಇಂದು ಇತಿಹಾಸ.

ಎಚ್.ಕೆ. ವೀರಣ್ಣಗೌಡರ ಇಚ್ಛೆಯಂತೆ ಬೆಂಗಳೂರಿನ ಕಾಂಗ್ರೆಸ್ ಕಛೇರಿಯಲ್ಲಿ ಸ್ವಯಂ ಸೇವಕನಾಗಿ ಕೆಲಸ ನಿರ್ವಹಿಸಲು ಬೆಂಗಳೂರಿಗೆ ತೆರಳಿದ್ದು ಜಿ. ನಾರಾಯಣ ಅವರು ತಮ್ಮ ಬಾಳಿಗೊಂದು ಗುರಿ ಕಂಡುಕೊಳ್ಳಲು ಸಾಧ್ಯವಾಯಿತು. ಅಲ್ಲಿಂದ ಎಂದೂ ಹಿಂದಿರುಗಿ ನೋಡದ ಜಿ. ನಾರಾಯಣ ಅವರು, ಸಾಹಿತ್ಯ, ಸಾಮಾಜಿಕ, ಸಾಂಸ್ಕೃತಿಕ, ರಾಜಕಾರಣ ಕ್ಷೇತ್ರಗಳಲ್ಲಿ ಕೈಯಾಡಿಸಿ ಸೈ ಎನಿಸಿಕೊಂಡಿದ್ದಾರೆ. ಅವರದು ತಣ್ಣನೆಯ ವ್ಯಕ್ತಿತ್ವ. ಮೃದು ಮಧುರ ಮಂದಹಾಸ. ಲೆಕ್ಕಾಚಾರದ ಮಾತುಗಳು ಒಟ್ಟಾರೆ ಪಾರದರ್ಶಕ ವ್ಯಕ್ತಿತ್ವ, ಆದರೆ

ಸಮಯ ಬಂದಾಗ ತಣ್ಣನೆಯ ಪ್ರತಿಭಟನೆ. ಆತ್ಮಸಾಕ್ಷಿಗೊಪ್ಪದ ಕೆಲಸವನ್ನು ಎಂದಿಗೂ ನಯವಾಗಿಯೇ ನಿರಾಕರಿಸುವ ಜಿ. ನಾರಾಯಣ ಅವರು ಸಮಯ ಬಂದಾಗ ಆರ್ಭಟವಿಲ್ಲದ ಪ್ರತಿಭಟನೆಗೆ ಮುಂದಾದ ಅನೇಕ ನಿದರ್ಶನಗಳುಂಟು. ಕಾಂಗ್ರೆಸ್ ತನ್ನ ಪ್ರಚಾರಕ್ಕಾಗಿ ತರುತ್ತಿದ್ದ ಪತ್ರಿಕೆಯ ಪರವಾಗಿ ಕೆಲಸ ಮಾಡುತ್ತಿದ್ದಾಗ ತಮ್ಮ ವ್ಯಕ್ತಿತ್ವಕ್ಕಾದ ಅಪಮಾನಕ್ಕಾಗಿ ಅಂದೇ ಅದನ್ನು ತೊರೆದು ೬೦ ವರ್ಷಗಳಷ್ಟು ಹಿಂದೆಯೇ ಸ್ವಂತದ್ದಾದ 'ಸ್ವತಂತ್ರ ಮುದ್ರಣಾಲ'ಯವನ್ನು ತೆರೆದು ಆ ಮೂಲಕ ಸಾಹಿತ್ಯ ಮತ್ತು ಜೀವನೋಪಾಯದ ಮಾರ್ಗಗವನ್ನು ಕಂಡುಕೊಂಡ ಜಿ. ನಾರಾಯಣ ಅವರು ಇಂದಿಗೂ ಅದನ್ನು ಮುಂದುವರಿಸಿ ಕೊಂಡು ಬರುತ್ತಿರುವುದು ಅವರ ವ್ಯವಹಾರ ಕುಶಲತೆಗೊಂದು ಸಾಕ್ಷಿಯೊದಗಿಸುತ್ತದೆ. ಮಾತಿನಲ್ಲಿ ತಿಳಿಹಾಸ್ಯದ ಲೇಪನ ಬೆರೆಸುವ ಜಿ. ನಾರಾಯಣ ಅವರಿಗೆ ಹಾಸ್ಯ ಕೇವಲ ನಗುವುದಕ್ಕೆ ಮಾತ್ರ ಅಲ್ಲ; ಅದರ ಮೂಲಕ ಜೀವನವನ್ನು ಹಗುರಾಗಿಸುವ, ವಾತಾವರಣವನ್ನು ತಿಳಿಗೊಳಿಸುವ, ಆಪ್ತತೆಯನ್ನುಂಟು ಮಾಡುವ ಮಾಧ್ಯಮವೆಂದೇ ಭಾವಿಸಿದ್ದಾರೆ. ಆದ್ದರಿಂದಾಗಿ ಅವರು ಕಳೆದ ೫೦ ವರ್ಷಗಳಿಂದ ಹೊರತರುತ್ತಿರುವ 'ವಿನೋದ' ಮಾಸಪತ್ರಿಕೆ ಸದ್ದುಗದ್ದಲವಿಲ್ಲದೆ ಹಾಸ್ಯ ಕ್ಷೇತ್ರದಲ್ಲಿ ಕ್ರಾಂತಿಯನ್ನುಂಟುಮಾಡಿದೆ. ಕೊರವಂಜಿಯಂತಹ ಹಾಸ್ಯ ಪತ್ರಿಕೆ, ಮುದ್ರಣದ ಭಾರವನ್ನು ಭರಿಸಿಕೊಳ್ಳಲಾರದೆ ಕಾಡಿಗೆ ಹೊರಟುಹೋಯಿತು. ಅನಂತರದ ಎಷ್ಟೋ ಹಾಸ್ಯಪತ್ರಿಕೆಗಳು ಕಣ್ಮರೆ ಆದರೆ ವಿನೋದ ಮಾತ್ರ ನಿಯತವಾಗಿ ನಂಬಿಕೆಗೆ ಅಸಾಧ್ಯವಾದ ಬೆಲೆಗೆ ಪ್ರಕಟಗೊಳ್ಳುತ್ತಿರುವುದು ನಿಜಕ್ಕೂ ವಿಸ್ಮಯ ತರುತ್ತಿದೆ. ಈ ವಿನೋದದ ಮೂಲಕ ಪ್ರಸಿದ್ಧಿ ಹೊಂದಿದ ನಾಡಿನ ಉದ್ದಾಮ ಹಾಸ್ಯ ಸಾಹಿತಿಗಳಿಗೆ ಲೆಕ್ಕವಿಲ್ಲ.

ಜಿ. ನಾರಾಯಣ ಅವರದು ಹೊಂದಿಕೊಂಡು ಹೋಗುವ ಸ್ವಭಾವ. ಅಂದಮಾತ್ರಕ್ಕೆ ಯಾವಾಗಲೂ ಅಲ್ಲ, ತಮ್ಮ ಕಣ್ಣೆದುರು ದೊಡ್ಡ ಅನ್ಯಾಯ ನಡೆಯುತ್ತಿದೆ ಎಂದಾಗ ಅವರು ಸುಮ್ಮನೆ ಕೂತವರಲ್ಲ. ಅವರೆಂತಹವರೇ ಆಗಲಿ, ಎಂತಹ ಪರಿಸ್ಥಿತಿಯೇ ಆಗಲಿ, ಜೊತೆಯಾಗಾದರೂ ಸರಿ, ಒಂಟಿಯಾಗಾದರೂ ಸರಿ ಪ್ರತಿಭಟಿಸಿಯೇ ತೀರುತ್ತಾರೆಂಬುದಕ್ಕೆ ಈ ಕೆಳಗಿನ ನಿದರ್ಶನ ಸಾಕು. ದೇಶಕ್ಕೆ ಸ್ವಾತಂತ್ರ್ಯ ಬಂದ ಹೊಸದು. ಸನ್ಮಾನ್ಯ ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿಯಾಗಿದ್ದ ಸಂದರ್ಭ. ಆ ಹೊತ್ತಿನಲ್ಲಿ ಮೈಸೂರಿನ ರಾಜಕೀಯದಲ್ಲಿ ಸಾಹುಕಾರ್ ಚನ್ನಯ್ಯ ಅತ್ಯಂತ ಪ್ರಬಲರಾಗಿದ್ದ ಕಾಲ ಜೊತೆಗೆ ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಹೀಗಾಗಿ ರಾಜ್ಯ ರಾಜಕಾರಣದಲ್ಲಿ ಎರಡು ಗುಂಪುಗಳಾಗಿದ್ದವು. ಒಂದು ಕೆಂಗಲ್ ಹನುಮಂತಯ್ಯನವರದ್ದಾಗಿದ್ದರೆ ಮತ್ತೊಂದು ಸಾಹುಕಾರ್ ಚನ್ನಯ್ಯನವರದು–ಹನುಮಂತಯ್ಯನವರು ದಕ್ಷರು, ಪ್ರಾಮಾಣಿಕರೂ ಕರ್ತವ್ಯಪರರಾಗಿದ್ದರೆ, ಸಾಹುಕಾರ್ ಚನ್ನಯ್ಯನವರು ವ್ಯವಹಾರ ಚತುರರು, ಜೊತೆಗೆ ಯಜಮಾನಿಕೆಯ ಗತ್ತುಳ್ಳವರಾಗಿದ್ದರು. ಹನುಮಂತಯ್ಯನವರ ಬಗೆಗಿನ ವಿರೋಧದಿಂದಾಗಿ, ಅವರ ಮೇಲೆ ಅವಿಶ್ವಾಸ ನಿರ್ಣಯ ತಂದು ಅಧಿಕಾರದಿಂದ ಕೆಳಗಿಳಿಸಬೇಕೆಂಬ ಹಠ ಚನ್ನಯ್ಯನವರಲ್ಲುಂಟಾಯಿತು. ಆಗ ಮುಖ್ಯಮಂತ್ರಿಗಿಂತ ಪಕ್ಷಾಧ್ಯಕ್ಷರೇ ಹೆಚ್ಚು ಪ್ರಾಭಾವಶಾಲಿ ಯಾಗಿದ್ದರು. ಈಗಿನ ಹಾಗೆ ಕಾಂಗ್ರೆಸ್ ಅಧ್ಯಕ್ಷರಾದವರು ಮೇಲಿನಿಂದ ಹೇರಲ್ಪಟ್ಟವರಾಗಿರಲಿಲ್ಲ.

ಕಾರ್ಯಕರ್ತರು, ಸ್ಥಳೀಯ ನಾಯಕರ ಬೆಂಬಲವಿದ್ದವರೇ ಅಧ್ಯಕ್ಷರಾಗುತ್ತಿದ್ದರು. ಹೀಗಾಗಿ ಚೆನ್ನಯ್ಯನವರ ಮಾತೆಂದರೆ ಕಾಂಗ್ರೆಸ್‌ನ ಶಾಸಕರಾಗಲೀ, ಜಿಲ್ಲಾಧ್ಯಕ್ಷರಾಗಲೀ, ಕಾರ್ಯಕಾರಿ ಸಮಿತಿಯ ಸದಸ್ಯರಾಗಲೀ, ಯಾರೂ ಎದುರಾಡದ ಸಂದರ್ಭ. ಆ ಸಂದರ್ಭದಲ್ಲಿ, ಶಾಸಕರು ಮತ್ತು ಸ್ಥಳೀಯ ನಾಯಕರನ್ನು ಕರೆದುಕೊಂಡು ದೂರದ ದಿಲ್ಲಿಯವರೆಗೂ ಪಯಣ ಬೆಳೆಸಿ, ಹನುಮಂತಯ್ಯನವರನ್ನು ಅಧಿಕಾರದಿಂದ ಕೆಳಗಿಳಿಸಲು ಪ್ರಾರಂಭಿಸಿದ್ದ ಚೆನ್ನಯ್ಯನವರ ಪ್ರಯತ್ನವನ್ನು, ಅಂದಿನ ಚಾಮರಾಜಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಜಿ. ನಾರಾಯಣ ಅವರು ಪತ್ರ ಮುಖೇನ ಪ್ರತಿಭಟಿಸುತ್ತಾರೆ. ಪತ್ರದಲ್ಲಿ "ಮುಖ್ಯಮಂತ್ರಿಗಳನ್ನು ಇಳಿಸುವ ಅಥವಾ ಏರಿಸುವ ಜವಾಬ್ದಾರಿ ಶಾಸಕರಿಗೆ ಬಿಟ್ಟ ವಿಚಾರವಾದರೂ, ಒಂದು ಪಕ್ಷದ ಸರ್ಕಾರ ಇರುವುದರಿಂದ ಆ ವಿಚಾರ ಎಂ.ಪಿ.ಸಿ.ಸಿ.ಯಲ್ಲೂ ಚರ್ಚೆಯಾಗಬೇಕು, ಯಾವ ಕಾರಣಕ್ಕೆ ಅವರನ್ನ ಇಳಿಸಲಾಗುತ್ತದೆ? ಎಂಬ ಸತ್ಯಾಂಶ ಕಾರ್ಯಕರ್ತರಿಗೂ ಗೊತ್ತಾಗಬೇಕು ಇದು ನಿಜವಾದ ಪ್ರಜಾಪ್ರಭುತ್ವ" ಎಂದು ಚೆನ್ನಯ್ಯನವರನ್ನು ಕೋರಲಾಯ್ತು. ಆದರೆ ಅವರಿಂದ ಯಾವ ಉತ್ತರವೂ ಬರದಿದ್ದಾಗ ಈ ವಿಚಾರವಾಗಿ ರೇಸ್‌ಕೋರ್ಸ್ ರಸ್ತೆಯಲ್ಲಿರುವ ಕಾಂಗ್ರೆಸ್ ಕಛೇರಿಯ ಮುಂದೆ ಧರಣಿ ನಡೆಸುವುದಾಗಿ ತಿಳಿಸಿದರಂತೆ. ಅಂತೆಯೇ, ಏಕಾಂಗಿಯಾಗಿ, ಪ್ರಮುಖರಲ್ಲದ ಕೆಲವೇ ಕಾರ್ಯಕರ್ತರ ಜೊತೆಗೂಡಿ ೧೯೫೬ರ ಆಗಸ್ಟ್ ತಿಂಗಳ ೧೫ನೇ ತಾರೀಖು ಪ್ರತಿಭಟನೆಗೆ ಇಳಿಯುತ್ತಾರೆ. ಕೇವಲ ನೂರಿನ್ನೂರು ಮಂದಿಯ ಪ್ರತಿಭಟನೆಗೆ ಯಾವ ಬೆಲೆಯಿಲ್ಲದಿದ್ದರೂ, ಸ್ವತಃ ಕೆಂಗಲ್ ಹನುಮಂತಯ್ಯನವರೇ ಖುದ್ದು ಬಂದು ವಿಚಾರಿಸಿಕೊಂಡು ಹೋಗುತ್ತಾರೆ. ಇದರಿಂದಾಗಿ ಹನುಮಂತಯ್ಯನವರು ಅಧಿಕಾರದಲ್ಲಿ ಉಳಿಯಲಾಗದಿದ್ದರೂ ಇದೊಂದು ಐತಿಹಾಸಿಕವಾದ ಕಾರ್ಯವೆಂದು ಮನದಟ್ಟಾಗುತ್ತದೆ. ಇದು ಸಾಮಾನ್ಯ ಘಟನೆಯಲ್ಲ. ಅಂದಿನ ದಿನಮಾನದಲ್ಲಿ ಕಾಂಗ್ರೆಸ್‌ನಲ್ಲಿ ಸಾಹುಕಾರ್ ಚೆನ್ನಯ್ಯನವರನ್ನು ಎದುರು ಹಾಕಿಕೊಂಡು ರಾಜಕೀಯದಲ್ಲಿ ಉಳಿಯಲು ಸಾಧ್ಯವಿಲ್ಲವೆಂಬ ವಿಷಯ ಸಾಮಾನ್ಯ ಕಾರ್ಯಕರ್ತನಿಗೂ ತಿಳಿದಿದ್ದ ಸಂಗತಿಯೇ, ಅಂತಹುದರಲ್ಲಿ ಜಿ. ನಾರಾಯಣ ಅವರ ಸಾತ್ವಿಕ ಪ್ರತಿಭಟನೆ ಪ್ರಜಾಪ್ರಭುತ್ವದ ಮಾದರಿಗೊಂದು ನಿದರ್ಶನ. ಇದರಿಂದಾಗಿ ಮುಂದೆ ರಾಜಕೀಯದಲ್ಲಿ ಅವರಿಗೆ ತೊಂದರೆಯಾಯಿತು ನಿಜ. ಆದರೆ ಅವರಿಗೆ ಸ್ಥಾನಮಾನಕ್ಕಿಂತ ನೈತಿಕ ಹೊಣೆಗಾರಿಕೆ ಮುಖ್ಯ ಎನಿಸಿದ್ದು ನಿಜಕ್ಕೂ ಸಂತಸದ ಸಂಗತಿ. ಇಂತಹ ಹಲವಾರು ಘಟನೆಗಳನ್ನು ಜಿ. ನಾರಾಯಣ ಅವರ ವಿಷಯದಲ್ಲಿ ಹೇಳುತ್ತಾ ಹೋಗಬಹುದು.

ಜಿ. ನಾರಾಯಣ ಅವರದು ಸಮನ್ವಯದ ವ್ಯಕ್ತಿತ್ವ. ವಿರೋಧಿಗಳನ್ನು ಸ್ನೇಹಿತರನ್ನಾಗಿ ಮಾಡಿಕೊಂಡುಬಿಡುವ ಮನೋಭಾವ. ಇದಕ್ಕೊಂದು ನಿದರ್ಶನ ಈ ರೀತಿಯಿದೆ. ಜಿ. ನಾರಾಯಣ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷಗಾದಿಗೆ ಸ್ಪರ್ಧಿಸುವ ಸಮಯ. ಹಲವಾರು ಹಿರಿಯ ಸಾಹಿತಿಗಳ ಒತ್ತಾಸೆಯಿಂದ, ಅಪೇಕ್ಷೆಯಿಂದ ಸ್ಪರ್ಧಿಸಲು ತೀರ್ಮಾನಿಸುತ್ತಾರೆ. ಅವರಿಗೆ ಎದುರಾಳಿಯಾಗಿ ನಿಲ್ಲಲು ಬಯಸಿದ ವ್ಯಕ್ತಿ ಅಂದಿನ ಕಾಲಕ್ಕೆ ಕರ್ನಾಟಕದಲ್ಲಿ ಪ್ರಸಿದ್ಧರಾಗಿದ್ದ ಕೀರ್ತನ ಕೇಸರಿ ಜಿ. ಶಿವಮೂರ್ತಿ ಶಾಸ್ತ್ರಿಗಳು. ಜಿ. ಶಿವಮೂರ್ತಿ ಶಾಸ್ತ್ರಿಗಳು

ಸ್ಪರ್ಧಿಗಳಾಗಿ ಖಚಿತವಾಗುತ್ತಿದ್ದಂತೆಯೇ ನಾರಾಯಣ ಅವರಿಗೆ ಹೆದರಿಕೆ ಪ್ರಾರಂಭವಾಗುತ್ತದೆ. ಅಂತಹ ವಿದ್ವಾಂಸರ ಎದುರು ಗೆಲ್ಲಲು ಸಾಧ್ಯವೇ? ಎಂದು ಯೋಚಿಸುತ್ತಾರೆ. ಆದರೆ ಕಾರ್ಯಕರ್ತರ ಒತ್ತಾಯದ ಮೇರೆಗೆ 'ಆದುದಾಗಲಿ' ಎಂದು ಪ್ರಚಾರಕ್ಕಿಳಿಯುತ್ತಾರೆ. ಕೊನೆಗೆ ಸ್ಪರ್ಧೆಯಲ್ಲಿ ಶಿವಮೂರ್ತಿಶಾಸ್ತ್ರಿಗಳನ್ನು ಸೋಲಿಸುತ್ತಾರೆ. ಗದ್ದು ಮಾರನೆಯ ದಿನವೇ ಒಂಟಿಯಾಗಿ ಶಿವಮೂರ್ತಿಶಾಸ್ತ್ರಿಗಳ ಮನೆಗೆ ಹೋಗುತ್ತಾರೆ. ಇವರನ್ನು ಕಂಡ ಶಿವಮೂರ್ತಿಶಾಸ್ತ್ರಿಗಳು ಅವಾಕ್ಕಾಗುತ್ತಾರೆ. ಅವರ ಕೈಹಿಡಿದು "ನೋಡಿ ಶಾಸ್ತ್ರಿಗಳೇ ನೀವು ಚುನಾವಣೆಯ ಸಂದರ್ಭದಲ್ಲಿ ಹೊರಡಿಸಿದ್ದ ಕರಪತ್ರವನ್ನು ನನ್ನ ಜೊತೆಯಲ್ಲಿಯೇ ತಂದಿದ್ದೇನೆ. ಅಲ್ಲಿ ತಾವು ಮಾಡುತ್ತೇನೆಂದು ಆಶ್ವಾಸನೆ ಕೊಟ್ಟಿದ್ದ ಕೆಲಸಗಳನ್ನು ನಾನು ಖಂಡಿತ ಮಾಡಲು ಪ್ರಯತ್ನಿಸುತ್ತೇನೆ. ತಾವು ದೊಡ್ಡವರು, ವಿದ್ವಾಂಸರು. ತಮ್ಮ ಸಹಾಯ ಸಹಕಾರ ನನಗೆ ಬೇಕು" ಎಂದು ಕೇಳಿಕೊಳ್ಳುತ್ತಾರೆ. ಶಿವಮೂರ್ತಿಶಾಸ್ತ್ರಿಗಳು ಅತ್ಯಂತ ಸಂತೋಷದಿಂದ ನಾರಾಯಣ ಅವರನ್ನು ತಬ್ಬಿಕೊಂಡು "ಛೇ! ಛೇ! ನಾನು ನಿಮ್ಮ ವಿರುದ್ಧನಿಲ್ಲಬಾರದಿತ್ತು! ಆಯ್ತು ಶಿವನಿಚ್ಛೆಯಿದ್ದಂತಾಗಲಿ. ಖಂಡಿತ ನಿಮ್ಮ ಜೊತೆಗೆ ನಾನು ನಿಲ್ಲುತ್ತೇನೆ." ಎಂದು ಹೇಳಿ ಪ್ರೀತಿಯಿಂದ ಕಳಿಸಿಕೊಟ್ಟರು. ಇದಕ್ಕಿಂತ ನಾರಾಯಣ ಅವರ ವ್ಯಕ್ತಿತ್ವಕ್ಕೆ ಬೇರೊಂದು ಸಾಕ್ಷಿ ಬೇಕೆ?

ಜಿ. ನಾರಾಯಣ ಅವರು ಎಂದಿಗೂ ತಮ್ಮ ಸ್ವಾತಂತ್ರ್ಯ ಹೋರಾಟದ ದಿನಗಳನ್ನು ಸ್ವಂತಕ್ಕಾಗಿ ಬಳಸಿಕೊಂಡವರಲ್ಲ. ಸ್ವಾತಂತ್ರ್ಯ ಹೋರಾಟಗಾರರಿಗೆ ಸರ್ಕಾರ ನೀಡುವ ಸೌಲಭ್ಯಗಳನ್ನು ತಮ್ಮದಾಗಿಸಿಕೊಳ್ಳಲು ಪ್ರಯತ್ನಿಸಿದವರಲ್ಲ. ಇದಕ್ಕೊಂದು ನಿದರ್ಶನ ಕೊಡಬಹುದು. ಬೆಂಗಳೂರಿನಲ್ಲಿ ಸ್ವಂತ ನಿವೇಶನವನ್ನು ಪಡೆಯಲು ಇಚ್ಛಿಸುತ್ತಾರೆ. ಬೆಂಗಳೂರಿನ ಸಿ.ಐ.ಟಿ.ಬಿ.ಗೆ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿ ಎಂದು ಸ್ನೇಹಿತರು ಒತ್ತಾಯಿಸುತ್ತಾರೆ. ಆಗ ಸಿ.ಐ.ಟಿ.ಬಿ. ಅಧ್ಯಕ್ಷರಾಗಿದ್ದವರು, ಶ್ರೀ ಬಿ.ವಿ ಲಂಕಪ್ಪನವರು. ಬಿ.ವಿ. ಲಂಕಪ್ಪನವರು ಚಾಮರಾಜಪೇಟೆ ಕ್ಷೇತ್ರದಿಂದ ವಿಧಾನಸಭೆಗೆ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಜಿ. ನಾರಾಯಣ ಅವರು ಕಾಂಗ್ರೆಸ್ ಅಭ್ಯರ್ಥಿಯಾದ ಅನಂತರಾಮನ್ ಅವರ ಪರವಾಗಿ ನಿಂತು ಕೆಲಸ ಮಾಡಿ ಅವರ ಗೆಲುವಿಗೆ ಕಾರಣವಾಗಿದ್ದರು. ಸೋತ ಲಂಕಪ್ಪನವರ ಯೋಗ್ಯತೆಯನ್ನು ಗುರುತಿಸಿದ ಕಾಂಗ್ರೆಸ್ ಸರ್ಕಾರ ಲಂಕಪ್ಪನವರನ್ನು ಸಿ.ಐ.ಟಿ.ಬಿ. ಅಧ್ಯಕ್ಷರನ್ನಾಗಿ ನೇಮಿಸಿತ್ತು. ಇದು ಆ ಕಾಲದ ದೊಡ್ಡ ಗುಣ ಹಾಗೂ ಮೌಲ್ಯ. ಲಂಕಪ್ಪನವರ ವಿರುದ್ಧವಾಗಿ ಕೆಲಸ ಮಾಡಿದ ಜಿ. ನಾರಾಯಣ ಅವರು ಅಳುಕಿನಿಂದಲೇ ಒಂದು ದಿನ ಅವರ ಕಛೇರಿಗೆ ತೆರಳಿದರು. ಇವರನ್ನು ಕಂಡ ಲಂಕಪ್ಪನವರು ಅತ್ಯಂತ ಪ್ರೀತಿಯಿಂದ ನಾರಾಯಣ ಅವರನ್ನು ಮಾತಾಡಿಸಿ "ನೀವು ನನಗೆ ವಿರೋಧವಾಗಿ ಕೆಲಸಮಾಡಿದಿರಿ ನಿಜ, ಆದರೆ ನಿಮ್ಮ ಕಾರ್ಯತತ್ಪರತೆ, ಕಾರ್ಯಕರ್ತರನ್ನು ಸಂಘಟಿಸುತ್ತಿದ್ದ ರೀತಿ ಅತ್ಯಂತ ಪರಿಣಾಮಕಾರಿಯಾಗಿತ್ತು. ಅದನ್ನು ಕಂಡು ಮೆಚ್ಚಿಕೊಂಡಿದ್ದೇನೆ. ಖಂಡಿತ ನನಗೆ ಬೇಸರವಿಲ್ಲ, ಏನು ಬಂದಿರಿ?" ಎಂದು ಕೇಳಿದರಂತೆ. ನಾರಾಯಣ ಅವರು ಅತ್ಯಂತ ಅಳುಕಿನಿಂದಲೇ "ತಾವೊಂದು ಮನೆ ಮಾಡಿಕೊಳ್ಳಬೇಕೆಂದು, ಅದಕ್ಕಾಗಿ ಒಳ್ಳೆಯ ನಿವೇಶನ ಕೊಡಿಸಿಕೊಡಬೇಕೆ"ಂದು

ಕೇಳಿಕೊಂಡರಂತೆ. ತಕ್ಷಣ ಲಂಕಪ್ಪನವರು, ಸಂಬಂಧಿಸಿದ ಗುಮಾಸ್ತೆಯನ್ನು ಕರೆದು ನಿವೇಶನಗಳ ನಕ್ಷೆ ತರಿಸಿ ಯಾವ ನಿವೇಶನಬೇಕು ಆರಿಸಿಕೊಳ್ಳಿ ಎಂದು ತಿಳಿಸಿ, ಅಲ್ಲೇ ಅರ್ಜಿ ತರಿಸಿ ತುಂಬಿಸಿ ಅರ್ಜಿ ಶುಲ್ಕ ನಾಲ್ಕಾಣೆಯನ್ನು ತಾವೇ ಕಟ್ಟಿ. ನಿವೇಶನದ ಬೆಲೆ ೪ ಸಾವಿರವೆಂದು ತಿಳಿಸಿ, "೧೫ ದಿನದೊಳಗೆ ಅರ್ಧ ಹಣ ಕಟ್ಟಿ, ಉಳಿದರ್ಧ ಹಣವನ್ನು ಎರಡು ಕಂತುಗಳಲ್ಲಿ ಕಟ್ಟಿ, ನಿವೇಶನವನ್ನು ಸ್ವಾಧೀನಕ್ಕೆ ಪಡೆಯಿರಿ" ಎಂದು ತಿಳಿಸಿ ಆದೇಶ ಹೊರಡಿಸಿದರಂತೆ. ನಾರಾಯಣ ಅವರು ಲಂಕಪ್ಪನವರ ದೊಡ್ಡ ಗುಣ ಕಂಡು ಮೂಕರಾಗಿ ಅಲ್ಲಿಂದ ಮನೆಗೆ ಬಂದು ೧೫ ದಿವಸದಲ್ಲಿ ಎರಡುಸಾವಿರ ಕಟ್ಟಿದರಂತೆ. ಉಳಿದ ಎರಡುಸಾವಿರ ಹಣವನ್ನು ನಿಗಧಿತ ಅವಧಿಯೊಳಗೆ ಕಟ್ಟಲಾಗದೆ ಪರಿತಪಿಸುತ್ತಿದ್ದಾಗ ಕೆಲವು ಸ್ನೇಹಿತರು "ನೀವು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ್ದೀರಿ. ಚಳವಳಿಯಲ್ಲಿ ಭಾಗವಹಿಸಿದವರಿಗೆ ಸರ್ಕಾರ ಕೆಲವು ಸವಲತ್ತುಗಳನ್ನು ನೀಡುತ್ತದೆ. ಆದ್ದರಿಂದ ನೀವು ಅರ್ಜಿ ಸಲ್ಲಿಸಿ ಬೆಲೆಯಲ್ಲಿ ರಿಯಾಯಿತಿ ಕೊಡಬೇಕೆಂದು ಕೋರಿಕೆ ಸಲ್ಲಿಸಿ" ಎಂದರಂತೆ. ಅದಕ್ಕೆ ನಾರಾಯಣ ಅವರು "ಸ್ವಾತಂತ್ರ್ಯಕ್ಕಾಗಿ ಅಂಥ ಹೋರಾಟವನ್ನೇನೂ ನಾನು ಮಾಡಿಲ್ಲ. ಮಾಡಿದ್ದರೂ ಮುಂದೆ ಇಂಥ ಲಾಭ ಪಡೆಯುತ್ತೇವೆಂಬ ಉದ್ದೇಶದಿಂದ ಮಾಡಿಲ್ಲ, ಆದ್ದರಿಂದ ಅರ್ಧಬೆಲೆಗೆ ನಿವೇಶನ ಪಡೆಯಲು ನನಗೆ ಇಷ್ಟವಿಲ್ಲ" ಎಂದು ತಿಳಿಸಿ, ಉಳಿದ ಅರ್ಧ ಹಣ ಕಟ್ಟಿ ನಿವೇಶನವನ್ನು ಸ್ವಾಧೀನಕ್ಕೆ ತೆಗೆದುಕೊಂಡರಂತೆ. ಇದು. ಜಿ. ನಾರಾಯಣ ಅವರ ಬದುಕು.

ಜಿ. ನಾರಾಯಣರು ಅವರು ಮೇಯರ್ ಆಗಿ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ, ಕನ್ನಡ ಪತ್ರಿಕಾ ಅಕಾಡೆಮಿಯ ಅಧ್ಯಕ್ಷರಾಗಿ, ಸೇವೆ ಸಲ್ಲಿಸಿದ್ದಾರೆ. ಅಲ್ಲೆಲ್ಲಾ ಅವರು ತಮ್ಮ ಹೆಜ್ಜೆಗುರುತುಗಳನ್ನು ಬಿಟ್ಟಿದ್ದಾರೆ. ಜಿ. ನಾರಾಯಣ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದಾಗ, ಅವರನ್ನು "ಸಾಹಿತಿಗಳಲ್ಲ" ಎಂದು ಮೂಗುಮುರಿದವರು ಅನೇಕ ಮಂದಿ. ಆದರೆ ಅವರ ಅವಧಿ ಮುಗಿಯುವುದ ರೊಳಗಾಗಿ, ಸಾಹಿತ್ಯ ಪರಿಷತ್ತನ್ನು ಬೆಳೆಸಿ, ನಾಡಿನ ಮೂಲೆಮೂಲೆಗಳಲ್ಲೂ ಅದರ ಶಾಖೆಗಳನ್ನು ತೆರೆದು, ಅದಕ್ಕೊಂದು ವಿಸ್ತಾರವನ್ನು ಗಳಿಸಿಕೊಟ್ಟಿದ್ದನ್ನು ಅವಲೋಕಿಸಿದಾಗ ಮೂಗು ಮುರಿದವರು ಮುಖ ಮುಚ್ಚಿಕೊಳ್ಳುವಂತಾದದ್ದು ಅವರ ಕ್ರಿಯಾಶೀಲ ನಡವಳಿಕೆಗೆ, ದೂರದೃಷ್ಟಿಗೆ ಕನ್ನಡಿ ಹಿಡಿಯುತ್ತದೆ.

ಕೇವಲ ತನ್ನ ಅಭಿವ್ಯಕ್ತಿಯನ್ನು ಅಕ್ಷರ ರೂಪಕ್ಕಿಳಿಸಿದರೆ ಮಾತ್ರ ಸಾಹಿತಿ ಎನ್ನುವ ಪರಿಕಲ್ಪನೆ ಇಂದಿನ ದಿನಮಾನದಲ್ಲಿ ಖಂಡಿತ ಬದಲಾಗಬೇಕು. ಸಾಹಿತ್ಯದ ವ್ಯಾಪ್ತಿಯೂ ಬದಲಾಗಬೇಕು. ಸುಂದರವಾದದ್ದೂ, ಮನೋಹರವಾದದ್ದೂ ಸಾಹಿತ್ಯ ಎನ್ನುವುದಾದರೆ, ನಮ್ಮ ಎಲ್ಲ ಸುಂದರವಾದದ್ದು, ಅದು ಕೃಷಿಯಿರಲಿ ಸಂಘಟನೆಯಿರಲಿ. ಕಾರ್ಯಕ್ರಮಗಳಿರಲಿ ಎಲ್ಲವೂ ಸಾಹಿತ್ಯವೆಂದೇ ಪರಿಗಣಿಸುವಂತಾಗಬೇಕು. ಹಾಗಾದಾಗ ಜಿ. ನಾರಾಯಣ ಅವರು ನಿಜಕ್ಕೂ ದೊಡ್ಡ ಸಾಹಿತಿಯೆಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಅವರ ಸತತ ಓದು, ಕಾಲಕಾಲಕ್ಕೆ ವಿವಿಧ ವಿಷಯಗಳಿಗೆ ಅವರು ಮಾಡಿರುವ ಟಿಪ್ಪಣಿ, ಭಾಷಣ, ಮುಂತಾದವುಗಳನ್ನು ಗಮನಿಸಿದಾಗ, ಅವರು ಯಾವ ಸಾಹಿತಿಗೂ ಕಡಿಮೆಯಿಲ್ಲ ಎಂದೆನಿಸುತ್ತದೆ.

ಜಿ. ನಾರಾಯಣ ಅವರು ಅಪ್ರತಿಮ ಸಂಘಟಕರು. ಸಂಘಟನೆ ಅವರ ತೀವ್ರ ಕಾಳಜಿಯ ಕ್ಷೇತ್ರ. ಸಂಘಟಕನಿಗಿರಬೇಕಾದ ತಾಳ್ಮೆ, ಸಹಿಷ್ಣುತೆ, ಪ್ರಾಮಾಣಿಕತೆ, ವ್ಯವಹಾರಕುಶಲತೆ, ಲೆಕ್ಕಾಚಾರ, ಸೂಕ್ಷ್ಮತೆ ಮುಂತಾದ ಗುಣಗಳನ್ನು ಮೈಗೂಡಿಸಿಕೊಂಡಿರುವ ಜಿ. ನಾರಾಯಣ ಅವರು ಸಂಘಟಕರಿಗೊಂದು ಮಾದರಿ. ಅವರ ನೇತೃತ್ವದ ಯಾವುದೇ ಸಭೆ ಸಮಾರಂಭ ಸಮ್ಮೇಳನಗಳಾಗಲಿ, ಅವೆಲ್ಲಾ ತಮ್ಮ ಅಚ್ಚುಕಟ್ಟುತನ ಕಾಲಬದ್ಧತೆ, ಒಪ್ಪ ಓರಣಗಳಿಗೆ ಹೆಸರಾದಂಥವುಗಳು. ತಮ್ಮ ವೇಸ್ಟ್‌ಕೋಟ್‌ನೊಳಗಿನಿಂದ ಒಂದು ಚಿಕ್ಕಪುಸ್ತಕ ತೆಗೆದು ಕೈಯಲ್ಲೊಂದು ಪೆನ್ ಹಿಡಿದು, ಆಗಿರುವ ಕೆಲಸಗಳಿಗೆ ಗುರುತು ಹಾಕುತ್ತಾ, ಆಗಬೇಕಿರುವ ಕೆಲಸಗಳನ್ನು ಬರೆದುಕೊಳ್ಳುತ್ತಾ, ಕಾರ್ಯಕರ್ತರಿಗೆ ಸೂಚನೆ ಕೊಡುತ್ತಾ, ಎಲ್ಲವನ್ನೂ ತಲಸ್ಪರ್ಶಿಯಾಗಿ ಶೋಧಿಸುತ್ತಾ ಮುನ್ನಡೆಯುವ ಜಿ. ನಾರಾಯಣ ಅವರ ಜ್ಞಾಪಕಶಕ್ತಿಗೆ ನಮೋ ಎನ್ನಬೇಕಾಗುತ್ತದೆ. ಯಾವುದೇ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿ, ಉದ್ಘಾಟಿಸಲಿ, ಎಲ್ಲಕ್ಕೂ ಪೂರ್ವಸಿದ್ಧತೆ ಮಾಡಿಕೊಂಡೇ ಬರುವ ನಾರಾಯಣ ಅವರ ವ್ಯಕ್ತಿತ್ವ ಯಾರಿಗೂ ಮಾದರಿಯಾಗುವಂತಹುದು. ಯಾರನ್ನೂ ನೋಯಿಸದೆ, ತಮಗೆ ಸರಿಕಾಣಿಸಿದ್ದನ್ನು ನಯವಾಗಿ ಹೇಳುತ್ತಾ, ಸರಿ ಕಾಣದ್ದನ್ನು ಮೃದುವಾಗಿ ಟೀಕಿಸುತ್ತಾ ಸಾಗುವ ನಾರಾಯಣ ಅವರ ಭಾಷಣ ಘೋರ್ಗರೆವ ಜಲಪಾತವಲ್ಲ ಜುಳು ಜುಳು ಹರಿಯುವ ನಿನಾದವೂ ಅಲ್ಲ, ಹಾವಿನಂತೆ ಸರ ಸರನೆ ಸಾಗುವ ತಿಳಿಹಾಸ್ಯ ಮಿಶ್ರಿತ ಶೈಲಿ, ಪ್ರೇಕ್ಷಕರ ಸಹನೆಯನ್ನು ಎಂದಿಗೂ ಪರೀಕ್ಷಿಸದ ನಾರಾಯಣ ಅವರ ಮಾತು ಪ್ರಾರಂಭವಾಗುವುದೇ "ಒಂದೈದು ನಿಮಿಷದಲ್ಲಿ ಮಾತು ಮುಗಿಸುತ್ತೇನೆ" ಎಂದು ನಂಬಿಕೆ ಹುಟ್ಟಿಸಿ ಹೇಳಬೇಕಾದ್ದನ್ನೆಲ್ಲ ಹೇಳಿಯೇ ಸಭಿಕರನ್ನು "ಒಂದೈದು ನಿಮಿಷದ" ಗುಂಗಿನಲ್ಲಿಯೇ ಇರಿಸುವ ಪರಿ. ಕೊನೆಯದಾಗಿ ಬೆಂಗಳೂರಿನ ಪ್ರತಿಷ್ಠಿತರ ಸಾಲಿನಲ್ಲಿ ಜಿ. ನಾರಾಯಣ ಅವರಿದ್ದಾರೆ. ಅದಕ್ಕೆ ಸಾಕ್ಷಿ ಅವರಿಲ್ಲದ ಸಮಾರಂಭಗಳು ಅಪರೂಪ-ಜಾತ್ಯತೀತರಾಗಿಯೂ ಅವರು ಉಳಿದುಕೊಂಡಿದ್ದಾರೆ. ಯಾವ ಗಣ್ಯವ್ಯಕ್ತಿಗಳ ಅಭಿನಂದನಾ ಸಮಾರಂಭವಿರಲಿ, ಶತಮಾನೋತ್ಸವವಿರಲಿ, ಅಲ್ಲೆಲ್ಲಾ ಸ್ವಾಗತ ಸಮಿತಿಯ ಅಧ್ಯಕ್ಷರಾಗಿಯೋ, ಉದ್ಘಾಟಕರಾಗಿಯೋ, ಸಮಾರಂಭದ ಅಧ್ಯಕ್ಷರಾಗಿಯೋ ವಿರಾಜಮಾನ ರಾಗುವ ಶ್ರೀ ಜಿ. ನಾರಾಯಣ ಅವರದು ಸೆಕ್ಯುಲರ್ ವ್ಯಕ್ತಿತ್ವ.

ಪ್ರಸ್ತುತ ದಿವಂಗತ ಎಚ್.ಎಲ್. ನಾಗೇಗೌಡರಿಂದ ಪ್ರಾರಂಭಗೊಂಡ ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿರುವ ಜಿ. ನಾರಾಯಣರವರು ಈಗಾಗಲೇ ತ್ರೈವಾರ್ಷಿಕ ಯೋಜನೆಯೊಂದನ್ನು ಸಿದ್ಧಪಡಿಸಿ ಅದರ ಅನುಷ್ಠಾನಕ್ಕಾಗಿ ಶ್ರಮಿಸುತ್ತಿರುವುದು ಶ್ಲಾಘನೀಯವಾದ ಕಾರ್ಯವೆ. ಯೋಜನೆ-ಯೋಜನೆ-ಅನುಷ್ಠಾನ ಇವು ಅವರ ಗಾಯಿತ್ರಿ ಮಂತ್ರ. ಇಂತಹ ವಯೋಜ್ಞಾನವೃದ್ಧ ನಾಡಿನ ಯುವ ಚೇತನಗಳಿಗೆ ದಾರಿದೀಪವಾಗಿ ನೂರ್ಕಾಲ ಬಾಳಲಿ ಎಂದು ಹಾರೈಸುವುದಷ್ಟೇ ನನ್ನ ಕೆಲಸ.

❑

ನಾನು ಕಂಡಂತೆ ನಮ್ಮೂರ ನಾರಾಯಣ

■ ಡಾ. ಅರ್ಜುನಪುರಿ ಅಪ್ಪಾಜಿಗೌಡ

ಸರಳ ಸ್ವಚ್ಛ ಶುಭ್ರವಾದ ಖಾದಿ ಉಡುಪು, ಗಾಂಧಿ ಟೋಪಿ, ಸಾಧಾರಣದ ಚಪ್ಪಲಿ, ಸರ್ವರ ಉದಯವನ್ನೇ ಬಯಸುವ ಅಪ್ಪಟ ಗಾಂಧೀವಾದಿ, ಅಚ್ಚ ಕನ್ನಡಿಗ, ಯಾರನ್ನೂ ದ್ವೇಷಿಸದ ಯಾರ ಪ್ರಗತಿಗೂ ಹೊಟ್ಟೆಕಿಚ್ಚು ಪಡದ, ಧನಿಕ ದರಿದ್ರ ಎಂಬ ಭಾವನೆ ಹತ್ತಿರಕ್ಕೂ ಸುಳಿಯಗೊಡದ, ವಯಸ್ಸಿನಲ್ಲಿ ಹಿರಿಯ ಕಿರಿಯ ಎಲ್ಲರನ್ನೂ ಸಮಾನವಾಗಿ ಗೌರವಿಸುವ ರಾಜ್ಯದ ರಾಜಧಾನಿಯ ರಾಜಕೀಯ ಪಕ್ಷಗಳ ಎಲ್ಲ 'ಹಿರಿಯ' ಮುಖಂಡರಿಂದ ಸಮಾನ ಗೌರವ ಪ್ರೀತಿ ಅಭಿಮಾನಕ್ಕೆ ಪಾತ್ರವಾಗಿರುವ ಅಜಾತಶತ್ರು ದೇಶಹಳ್ಳಿ ಜಿ. ನಾರಾಯಣರು.

ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ದೇಶಹಳ್ಳಿಯ ಸಾಧಾರಣ ಕುಟುಂಬದ ಶ್ರೀಮತಿ ಸಣ್ಣಮ್ಮ, ಶ್ರೀಮಾನ್ ಗಿರಿಗೌಡರ ಸತ್ಪುತ್ರರಾಗಿ ೧೯೨೩ನೇ ಇಸವಿಯಲ್ಲಿ ಹುಟ್ಟಿದ ನಮ್ಮೂರ ಜಿ. ನಾರಾಯಣರು ಸಮಯ ಪಾಲನೆ, ತತ್ತ್ವನಿಷ್ಠೆ ಮಾನವೀಯತೆಗೆ ಬೆಲೆ ಕೊಡುವ, ಪ್ರಚಾರದ ಆರ್ಭಟವಿಲ್ಲದೆ, ಕಳಂಕರಹಿತವಾಗಿ ಸದ್ದಿಲ್ಲದೆ ನಿರಂತರ ಸಾಧನೆ ಮಾಡುತ್ತಿರುವ ಜಿ. ನಾರಾಯಣ ಗಾಂಧಿ ಮಾತನಾಡದೆ ಮಾಡಿ ತೋರಿಸಿದ ಸರಳ ಪಥದಲ್ಲಿ, ಯುವ ಜನತೆಗೆ ಮಾದರಿ ಎನ್ನಿಸುವಂತಹ ದಾರಿಯಲ್ಲಿ, ೮೩ರ ಹರೆಯದಲ್ಲಿ ಸಕ್ರಿಯವಾಗಿ ಸಾಮಾಜಿಕ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿರುವ ಅಕ್ಷರಶಃ ಗಾಂಧಿವಾದಿ ಆಗಿದ್ದಾರೆ.

ಒಂದೆರಡು ವರ್ಷಗಳ ಹಿಂದೆ ಎಲ್ಲಿಯೂ ಇಲ್ಲದವರು, ತಮ್ಮವರು ಮಂತ್ರಿಗಳಾದೊಡನೆ ರಾಜ್ಯ

ಮಟ್ಟದ ಸಮಿತಿಗಳಲ್ಲಿ ಸದಸ್ಯರೂ, ಅಧ್ಯಕ್ಷರೂ ಆಗುತ್ತಾರೆ. ಜಾನಪದದ ಅರಿವಿಲ್ಲದವರು ಜಾನಪದ ಅಕಾಡೆಮಿ ಸದಸ್ಯರು, ಓದುವಾಗ 'ಏನೆಲ್ಲ ಆಡಿ' ಪದವಿ ಪಡೆದವರು ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ ಸರ್ಕಾರದಿಂದ ನಾಮಕರಣಗೊಳ್ಳುತ್ತಾರೆ. ಸಾಹಿತಿಯೇ ಅಲ್ಲದ, ಕಲಾವಿದರೇ ಅಲ್ಲದ ರಾಜಕೀಯದಲ್ಲಿ ಪ್ರತಿಭಾವಂತರಾದವರು ವಿಧಾನ ಪರಿಷತ್ ಮೇಲ್ಮನೆಗೆ ನಾಮಕರಣಗೊಳ್ಳುತ್ತಾರೆ. ಇದೆಲ್ಲ ನಮ್ಮ ವ್ಯವಸ್ಥೆಯ ವಿಪರ್ಯಾಸ, ರಾಜಕೀಯದ ಅಟ್ಟಹಾಸ.

ದೇವರಾಜ ಅರಸು ಮುಖ್ಯಮಂತ್ರಿಯಾಗಿದ್ದಾಗ ಜಿ. ನಾರಾಯಣ ಅವರನ್ನು ರಾಜ್ಯ ವಯಸ್ಕರ ಶಿಕ್ಷಣ ಸಂಸ್ಥೆಗೆ ಅಧ್ಯಕ್ಷರನ್ನಾಗಿ ಮಾಡಲು ತೀರ್ಮಾನವಾಯಿತು. ಪ್ರಕಟಣೆ ಸರ್ಕಾರದಿಂದ ಹೊರಬೀಳುವ ಮುನ್ನ ಮುಖ್ಯಮಂತ್ರಿಗೆ ಒಂದು ಸುದ್ದಿ ಮುಟ್ಟಿಸಿದರು: "ಇದು ನನಗೆ ಪ್ರಿಯವಾದ ಕೆಲಸವೇ ಹೌದು, ವಯಸ್ಕರ ಶಿಕ್ಷಣ ಸಮಿತಿ ಪ್ರಧಾನ ಕಛೇರಿ ಮೈಸೂರಿನಲ್ಲಿದೆ, ನಾನು ಬೆಂಗಳೂರಿನಲ್ಲಿದ್ದೇನೆ. ವೈಯಕ್ತಿಕ ಕಾರಣಗಳಿಂದ ನಾನು ಬೆಂಗಳೂರು ಬಿಟ್ಟು ಮೈಸೂರಿಗೆ ಹೋಗಲು ಸಾಧ್ಯವಿಲ್ಲ. ನನಗಾಗಿ ಕಛೇರಿಯನ್ನೇ ಬೆಂಗಳೂರಿಗೆ ಸ್ಥಳಾಂತರಿಸಿ ಬಿಡಿ ಎನ್ನುವುದು ಸಾಧುವಲ್ಲ, ದಯವಿಟ್ಟು ನನ್ನನ್ನು ಬಿಟ್ಟುಬಿಡಿ".

ಜಾನಪದ ಜಗದ್ಗುರು ಎಚ್.ಎಲ್. ನಾಗೇಗೌಡರು ಹೇಳಿದರಂತೆ "ಎಂತೆಂತಹ ಗಲೀಜು ಜನರನ್ನು ಕಟ್ಕೊಂಡು ಒದ್ದಾಡ್ತೀರಿ ನಾರಾಯಣ; ನಾನಾಗಿದ್ರೆ ಇವ್ರನ್ನ ಹತ್ತಿರ ಸೇರಿಸ್ತಿರಲಿಲ್ಲ....." ಎಂದರಂತೆ. ತುಂಬಾ ತಣ್ಣಗೆ, ನಾರಾಯಣ ಹೇಳಿದರಂತೆ: "ನೋಡಿ ನಾಗೇಗೌಡ್ರೆ, ಒಂದು ಹಣ್ಣಿದೆ ಅಂತ ಇಟ್ಕೊಳ್ಳಿ, ಆ ಹಣ್ಣಿನ ಒಂದು ಭಾಗ ಕೆಟ್ಟಿದೆ ಅಂದ್ಕೊಳ್ಳಿ, ನಾವು ಆ ಹಣ್ಣಿನ ಕೆಟ್ಟ ಭಾಗ ಕತ್ತರಿಸಿ ಹಾಕ್ಬುಟ್ಟು, ಚೆನ್ನಾಗಿರೊ ಭಾಗದ ಹಣ್ಣು ತಿನ್ನೋದಿಲ್ವೆ. ಹಾಗೆ ಎಲ್ರಲ್ಲೂ ಕೆಟ್ಟಗುಣ ಒಳ್ಳೆಗುಣ ಎರಡೂ ಇರ್ತವೆ. ನಾವು ಅವರ ಒಳ್ಳೆಯ ಗುಣ ಗಮನಿಸಿ, ಅವರನ್ನು ತಕ್ಕ ಕೆಲ್ಸದಲ್ಲಿ ತೊಡಗಿಸಿ, ನಮ್ಮ ಕೆಲ್ಸ ಮಾಡಿಸ್ಕೊಬೇಕು, ಇಡೀ ಮನುಷ್ಯನನ್ನೇ ದೂರ ಮಾಡೋದು ಸರಿಯೆ ಯೋಚ್ನೆ ಮಾಡಿ" ಎಂದರಂತೆ. ಒಳ್ಳೆಯ ಗುಣ, ನಡತೆ ಇರುವವರು ಎಲ್ಲಿ ಸಿಕ್ಕಿಯಾರು, ಎಷ್ಟು ಜನ ಇದ್ದಾರು, ಅವನ ಗುಣ ಸರಿಯಾಗಿಲ್ಲ ಎಂದರೆ, ಯಾರೂ ಗೆಳೆಯರೇ ಆಗೋದಿಲ್ಲ. ಎಲ್ಲರಲ್ಲೂ ಒಂದಲ್ಲ ಒಂದು ದೋಷ ಇರುವಂತಾದ್ದೆ, ಅವುಗಳ ಪ್ರಮಾಣದಲ್ಲಿ ಸ್ವಲ್ಪ ಹೆಚ್ಚುಕಡಿಮೆ ಇದ್ದೀತಷ್ಟೆ.

ದೇಶಹಳ್ಳಿ ನಾರಾಯಣ ಅವರು ಅಪ್ಪಟ ಕಾಂಗ್ರೆಸ್ಸಿಗರು ಎಂದಾಗ ಜನತಾದಳ, ಭಾ.ಜ.ಪ., ಕಮ್ಯೂನಿಸ್ಟರು ಸಿಟ್ಟಾಗಬೇಕಿಲ್ಲ. ಅವರು ಈಗಿನ ಕಾಂಗ್ರೆಸ್ಸಲ್ಲ, ಸ್ವಾತಂತ್ರ್ಯಪೂರ್ವದ ೧೯೪೭ರ ಹಿಂದಿನ ಗಾಂಧಿ ಕಾಂಗ್ರೆಸ್ಸಿಗರು, ಸ್ವಾತಂತ್ರ್ಯ ಹೋರಾಟಗಾರರು. ಪ್ರೌಢಶಾಲಾ ಓದು ಪೂರ್ಣ ಮಾಡದ ನಾರಾಯಣರ ಸೇವಾ ಕ್ಷೇತ್ರ ಒಂದೆರಡಲ್ಲ. ಬೆಂಗಳೂರು ಚಾಮರಾಜಪೇಟೆ ಕ್ಷೇತ್ರದಿಂದ ೧೯೫೦ರಲ್ಲಿ ತಮ್ಮ ೩೯ನೇ ವಯಸ್ಸಿನಲ್ಲಿ ನಗರಸಭೆಗೆ ಆಯ್ಕೆಯಾಗಿ, ೧೯೬೪ರಲ್ಲಿ ೪೧ನೇ ವಯಸ್ಸಿಗೆ ೨೮ ಚದರ ಮೈಲಿ ವಿಸ್ತೀರ್ಣದ ಬೆಂಗಳೂರು ಮೇಯರ್ ಆದರು; ತೊರೆಕಾಡನಹಳ್ಳಿ ಬಳಿ ಕಾವೇರಿ ನದಿಯ ನೀರನ್ನು ಬೆಂಗಳೂರು ನಾಗರೀಕರಿಗೆ ಕುಡಿಸಲು ೨೧-೦೫-೧೯೬೪ರಂದು ಕೇಂದ್ರ ಸರ್ಕಾರದ ಸಚಿವ ಲಾಲ್ ಬಹದ್ದೂರ್ ಶಾಸ್ತ್ರಿ ಅವರಿಂದ

ಕಾವೇರಿ ಕುಡಿಯುವ ನೀರು ಒಳಚರಂಡಿ ಯೋಜನೆಗಳಿಗೆ ಉದ್ಘಾಟನೆ ಮಾಡಿಸಿ ಆರು ತಿಂಗಳಿನಲ್ಲಿ ೦೭-೧೦-೧೯೬೪ರಂದು ಅಂದಿನ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪನವರಿಂದ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯನ್ನೂ ಉದ್ಘಾಟನೆ ಮಾಡಿಸಿದರು. ಏಳು ವರ್ಷಗಳು ನಾರಾಯಣ ಮಾಡಿದ ಪೌರಸೇವೆ ಅದ್ಭುತ, ಅವಿಸ್ಮರಣೀಯ!

ಹಾರ್ಡಿಂಜ್ ರಸ್ತೆಯನ್ನು ಪಂಪಮಹಾಕವಿ ರಸ್ತೆ, ಸೆನೆಟಾಫ್ ರಸ್ತೆಯನ್ನು ನೃಪತುಂಗ ರಸ್ತೆ ಮಾಡಿದ್ದಲ್ಲದೆ, ಬ್ರಿಟಿಷರ ಪ್ರತಿಮೆಗಳನ್ನು ಬದಲಿಸಿ, ಬೆಂಗಳೂರು ಕೆಂಪೇಗೌಡ ಸೇರಿದಂತೆ ಕೆಲವು ಪ್ರತಿಮೆಗಳನ್ನು ಆಯಕಟ್ಟಿನ ಸ್ಥಳಗಳಲ್ಲಿ ನಿರ್ಮಾಣಮಾಡಿಸಿ ಸ್ಥಾಪಿಸಿದ್ದಾರೆ.

'ಅಸಾಹಿತಿ'ಯೊಬ್ಬರು ಕನ್ನಡ ಸಾಹಿತ್ಯ ಪರಿಷತ್ತಿಗೆ ೧೯೭೮ರಲ್ಲಿ ಅಧ್ಯಕ್ಷರಾಗಿ ಆಯ್ಕೆ ಆದವರೇ ನಾರಾಯಣ. ಜಿಲ್ಲಾ ಸಮಿತಿಗಳ ರಚನೆ, ರಾಜ್ಯದಲ್ಲಿ ಪ್ರಪ್ರಥಮವಾಗಿ ಸ್ವಂತ ತಾಲ್ಲೂಕು ಮದ್ದೂರಿನಲ್ಲಿ ತಿ.ತಾ. ಶರ್ಮ ಅಧ್ಯಕ್ಷತೆಯಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಮಾಡಿದ್ದು; ಅಖಿಲ ಕರ್ನಾಟಕ ಗಮಕ ಸಮ್ಮೇಳನ ಮಾಡಿದ್ದು; ಪ್ರಥಮ ಬಾರಿಗೆ ಮಹಿಳೆಯೊಬ್ಬರನ್ನು ಜಯದೇವಿತಾಯಿ ಲಿಗಾಡೆ ಅಧ್ಯಕ್ಷತೆಯಲ್ಲಿ ಮಂಡ್ಯದಲ್ಲಿ ೪೮ನೇ ಕನ್ನಡ ಸಾಹಿತ್ಯ ಸಮ್ಮೇಳನ ಮಾಡಿದ್ದು, ಭಾರತದ ರಾಜಧಾನಿ ದೆಹಲಿಯಲ್ಲಿ ೫೦ನೇ ಕನ್ನಡ ಸಾಹಿತ್ಯ ಸಮ್ಮೇಳನ ಮಾಡಿದ್ದು; ನೂರಾರು ಕನ್ನಡ ಸಾಹಿತ್ಯ ಕೃತಿಗಳನ್ನು ಪ್ರಕಟಿಸಿ ಸುಲಭ ಬೆಲೆಗೆ ಮಾರಾಟ ಮಾಡಿದ್ದು ನೆನಪಿನಲ್ಲಿರುವ ವಿಶೇಷ ಸಂಗತಿಗಳಾಗಿವೆ. ಒಂಬತ್ತು ವರ್ಷ ನಾಲ್ಕು ತಿಂಗಳು ಪರಿಷತ್ತಿನ ಅಧ್ಯಕ್ಷರಾಗಿ, ಸರ್ಕಾರದಿಂದ ಹಣದ ನೆರವು ಮಹಾಪೂರದಂತೆ ತರಿಸಿ, ಪರಿಷತ್ತಿನಿಂದ ಹೊರಬಂದರು.

ವಿವಿಧ ರಾಜಕೀಯ ಪಕ್ಷಗಳು ನಾರಾಯಣ ಅವರನ್ನು ತಮ್ಮತ್ತ ಆಕರ್ಷಿಸಿ ಚುನಾವಣೆಗೆ ನಿಲ್ಲಿಸಲು ಶತಪ್ರಯತ್ನ ಮಾಡಿದ್ದು ಉಂಟು. "ನೋಡಿ, ನಾನು ಚುನಾವಣೆಗೆ ನಿಲ್ಲಲೇಬಾರದು ಎಂದೇನಿಲ್ಲ, ನಾನೀಗ ಕರ್ನಾಟಕ ರಾಜ್ಯ ಸಾಹಿತ್ಯ ಪರಿಷತ್ತಿಗೆ ಅಧ್ಯಕ್ಷನಾಗಿದ್ದೇನೆ. ಅನೇಕ ಕಾರ್ಯಗಳ ಬಗ್ಗೆ ಸರ್ಕಾರವನ್ನು ಈಗ ಒತ್ತಾಯಿಸುತ್ತಿದ್ದೇನೆ. ಪರಿಷತ್ತಿನ ಅಧ್ಯಕ್ಷ ಎಂದು ಅವರೂ ಗೌರವಿಸುತ್ತಿದ್ದಾರೆ. ಹೀಗಿರುವಾಗ ಯಾವುದೇ ರಾಜಕೀಯ ಸ್ಥಾನ ಒಪ್ಪಿಕೊಳ್ಳಲು ನನಗೆ ಮನಸ್ಸಿಲ್ಲ...." ಎಂದು ಆತ್ಮೀಯರಿಗೆ ಹೇಳಿದರಂತೆ.

ಸಾರ್ವಜನಿಕರಿಗೆ ಸೇರಿದ ಹಣವನ್ನು ಎಷ್ಟೊಂದು ಎಚ್ಚರಿಕೆಯಿಂದ ಬಳಸುತ್ತಿದ್ದರು ಎಂಬುದಕ್ಕೆ ಒಂದು ಉದಾಹರಣೆ : ನಾನು ಅಧ್ಯಕ್ಷನಾಗಿದ್ದಾಗ ಒಂದೊಂದು ಊರಿಗೆ, ಪ್ರತ್ಯೇಕ ಪ್ರವಾಸ ಹಾಕಿಕೊಳ್ಳುತ್ತಿರಲಿಲ್ಲ, ಅನೇಕ ಊರುಗಳಿಗೆ ಒಮ್ಮೆಲೆ ಪ್ರವಾಸ ಹಾಕಿಕೊಳ್ಳುತ್ತಿದ್ದೆ. ಮಡಿಕೇರಿಯಲ್ಲಿ ಒಂದು ಕಾರ್ಯಕ್ರಮಕ್ಕೆ ಒಪ್ಪಿಕೊಂಡರೆ ಮಾರ್ಗ ಮಧ್ಯೆ ಸಿಗುವ ಚನ್ನಪಟ್ಟಣ, ಮಂಡ್ಯ, ಮೈಸೂರು, ಹುಣಸೂರುಗಳಲ್ಲಿ ಕಾರ್ಯಕ್ರಮ ಹಾಕಿಕೊಳ್ಳುತ್ತಿದ್ದೆ ಎಂದಿದ್ದಾರೆ. ಪ್ರವಾಸವನ್ನೇ ಮಾಡದೆ, ಪ್ರವಾಸ ಭತ್ಯೆ ಪಡೆಯುವ ಅಧಿಕಾರಿಗಳು, ರಾಜಕಾರಣಿಗಳು ಈ ವಿಚಾರದತ್ತ ಚಿಂತಿಸಬೇಕಾಗಿದೆ.

ಪತ್ರಿಕೋದ್ಯಮದ ಅನುಭವದ ಹಿನ್ನೆಲೆಯಲ್ಲಿ ೧೯೫೦ರಲ್ಲಿ 'ಸ್ವತಂತ್ರ ಮುದ್ರಣಾಲಯ'

ಸ್ಥಾಪಿಸಿ ೧೯೫೧ರಲ್ಲಿ 'ವಿನೋದ' ಹಾಸ್ಯ ಮಾಸಪತ್ರಿಕೆ ಪ್ರಾರಂಭಿಸಿ ಲೇಖಕರಿಗೆ ಗೌರವ ಸಂಭಾವನೆ ನೀಡುವ ರೂಢಿ, ಅರ್ಧ ಶತಮಾನದಿಂದಲೂ ಮುಂದುವರಿಸಿಕೊಂಡು ಬಂದಿದ್ದಾರೆ. ನಾಡಿಗೇರ ಕೃಷ್ಣರಾಯರು 'ವಿನೋದ' ಪತ್ರಿಕೆಗೆ ಲೇಖನ ಬರೆದುಕೊಡಲು 'ಸ್ವತಂತ್ರ ಮುದ್ರಣಾಲಯ'ಕ್ಕೆ ಹೋಗುತ್ತಿದ್ದರಂತೆ. ಅರ್ಧ ಪ್ಯಾಕ್ ಸಿಗರೇಟು, ಒಂದು ಬೆಂಕಿಪೊಟ್ಟಣ, ಒಂದು ಕಪ್ ಕಾಫಿ ತರಿಸಿಕೊಟ್ಟು, ಮೇಲೆ ಸಂಭಾವನೆಯನ್ನು ಕೊಡುತ್ತಿದ್ದರಂತೆ. ಇಪ್ಪತ್ತು ವರ್ಷ 'ವಿನೋದ'ಕ್ಕೆ ನಿರಂತರ ಲೇಖನ ಬರೆದ ನಾಡಿಗೇರ್ ಒಮ್ಮೆ ಹೇಳಿದರಂತೆ' 'ನಾರಾಯಣ', 'ವಿನೋದ' ಪತ್ರಿಕೆ ನಿಲ್ಲಿಸಿದರೆ ನಿಮಗೆ ಲಾಭವಾಗುತ್ತದೆ. ಆಗ ನಾರಾಯಣ್ ನಗುತ್ತ "ಯಾವುದಾದರೂ ಕನ್ನಡದಲ್ಲಿ ಹಾಸ್ಯ ಪತ್ರಿಕೆ ಇದೆಯೇ? ಅಂತ ಕೇಳಿದರೆ 'ಇಗೋ ಇಲ್ಲಿದೆ' ಅಂತ ತೋರಿಸುವುದಕ್ಕೆ 'ವಿನೋದ' ಹೊರಡಿಸುತ್ತಿದ್ದೇನೆ" ಎಂದರಂತೆ.

ನಾನು ಒಮ್ಮೆ ನನ್ನ ಎರಡು ಪುಸ್ತಕಗಳಿಗೆ ಮುಖಪುಟ ಮುದ್ರಿಸಲು ನಾರಾಯಣರ ಪ್ರೆಸ್ಸಿಗೆ ಹೋಗಿದ್ದೆ, ಅವರ ಮಗ ಶ್ರೀ ರಘು ಮುದ್ರಣಾಲಯದ ಮೇಲ್ವಿಚಾರಣೆ ನೋಡಿ ಕೊಳ್ಳುತ್ತಿದ್ದರು. ಸಂಜೆ ೫ ಘಂಟೆಗೆ ನಾರಾಯಣರು ಪ್ರೆಸ್ಸಿಗೆ ಬಂದರು, ನಾನೂ ಅಲ್ಲಿಯೇ ಇದ್ದೆ. ಮುಖಪುಟ ಮುದ್ರಣಕ್ಕೆ ಮಗ ಮಾಡಿದ್ದ ಬಿಲ್ಲು ತರಿಸಿ "ಮದ್ದೂರಿನಿಂದ ಇಲ್ಲಿಗೆ ಬಂದಿದ್ದಾರೆ, ಪೇಪರು, ಇಂಕು, ಇವೆಲ್ಲ ಇರಲಿ, ಲೇಬರ್ ಕಡಿಮೆ ಮಾಡು, ಅಪ್ಪಾಜಿಗೌಡರು ದುಬಾರಿ ಅನ್ನಬಾರದು, ಲಾಭ ಬೇಡ, ನಿನ್ನ ಅಸಲಿಗೆ ಮಾಡಿಕೊಡು, ನಿಧಾನವಾಗಿ ಚೆನ್ನಾಗಿ ಮಾಡಿಕೊಡು" ಎಂದು ಹಾಕಿದ್ದ ಬಿಲ್ಲಿನಲ್ಲಿ ಧಾರಾಳ ರಿಯಾಯಿತಿ ಮಾಡಿಸಿದ್ದು ನನಗಿನ್ನೂ ಹಸಿರಾಗಿದೆ.

ರಾಜ್ಯ ಗ್ರಂಥಾಲಯ ಇಲಾಖೆ ಪುಸ್ತಕ ಸಗಟು ಖರೀದಿ ತಾತ್ಕಾಲಿಕವಾಗಿ ನಿಂತುಹೋದಾಗ ನಾನು ಬರೆದ ೨೫ ಪೈಸೆ ಅಂಚೆ ಕಾರ್ಡಿಗೆ, ನಾಲ್ಕು ಪುಟದ ಸುದೀರ್ಘ ಉತ್ತರ ಬರೆದು, ಪುಸ್ತಕೋದ್ಯಮ ರಾಜ್ಯದಲ್ಲಿ ಹೇಗೆ ನರಳುತ್ತಿದೆ, ಯುವ ಪ್ರತಿಭೆಗಳಿಗೆ ಪ್ರೋತ್ಸಾಹ ದೊರಕಿಸಲು ಏನು ಮಾಡಬೇಕು, ಕೇರಳದಲ್ಲಿ ಪುಸ್ತಕ ಮಾರಾಟ ಹೇಗಿದೆ, ನಾವು ಏನು ಮಾಡಬಹುದು, ಮುಂತಾದ ಅಂಶಗಳನ್ನೆಲ್ಲ ಪತ್ರದಲ್ಲಿ ಚರ್ಚಿಸಿದ್ದರು.

ಜಿ. ನಾರಾಯಣರು ಎಲ್ಲಿ ಏನೇ ಭಾಷಣ ಮಾಡಲಿ, ಕಾರ್ಯಕ್ರಮ ನಡೆಸಲಿ, ಯೋಜನಾ ಬದ್ಧ ತಯಾರಿ ನಡೆಸಿಕೊಂಡು ಬರುವುದು ಇಂದಿಗೂ ನಿಜ. ಇಂದಿನ ಕೆಲಸಗಳ ಒಂದು ಚೀಟಿ ಅವರ ಜೇಬಿನಲ್ಲಿರುತ್ತದೆ. ಒಂದೊಂದಾಗಿ ಮುಗಿಸುವುದನ್ನು ನಾನು ಗಮನಿಸಿದ್ದೇನೆ.

ನಾನು ಕೇಳಿದ ಒಂದು ಭಾಷಣದಲ್ಲಿ ಅವರು ಆಡಿದ ಮಾತುಗಳು ನನ್ನ ಸ್ಮೃತಿ ಪಟಲದಲ್ಲಿ ಅಳಿಸದೆ ನಿಂತು ಬಿಟ್ಟಿವೆ. "ನಾನು ಒಂದು ವಿಚಾರದಲ್ಲಿ ಮತ್ತೆ ಮತ್ತೆ ಯೋಚನೆ ಮಾಡುತ್ತಿದ್ದೇನೆ, ನನ್ನ ಮನೆಯ ಮಕ್ಕಳಿಗೆ ನಾಡಿನ ಮಕ್ಕಳಿಗೆ 'ನೀವು ಇವರನ್ನು ಮೇಲ್ಪಂಕ್ತಿಯಾಗಿಟ್ಟುಕೊಳ್ಳಿ ಎಂದು ಹೇಳುವಾಗ ಯಾರನ್ನು ತೋರಿಸುವುದು, ಈ ಪ್ರಶ್ನೆಗೆ ಉತ್ತರ ಸಿಗುತ್ತಿಲ್ಲ."

ದೇಶಹಳ್ಳಿಯ ಜಿ. ನಾರಾಯಣ ಅವರು ನೂರು ವರ್ಷ ಬದುಕುವುದು ಮಾತ್ರ ಅಲ್ಲ, ಆರೋಗ್ಯಪೂರ್ಣವಾಗಿ ಬದುಕಲಿ ಎಂದು ಪ್ರೀತಿಯಿಂದ ಪರಮಾತ್ಮನನ್ನು ಪ್ರಾರ್ಥಿಸುತ್ತೇನೆ.

❑

ಜಿ. ನಾರಾಯಣ

■ ಟಿ. ನಾಗರಾಜು

ಒಬ್ಬ ಮನುಷ್ಯನ ಸರ್ವತೋಮುಖ ಬೆಳವಣಿಗೆಗೆ, ಕಾರ್ಯಸಾಧನೆಗೆ ಅವನು ಬೆಳೆದು ಬಂದ ಪರಿಸರ, ಇಚ್ಛಾಶಕ್ತಿ ಬಹುಮಟ್ಟಿಗೆ ಕಾರಣವಾಗುತ್ತದೆ.

ಹಳೇ ಮೈಸೂರು ಸಂಸ್ಥಾನದ ಅಂದಿನ ಒಂಬತ್ತು ಜಿಲ್ಲೆಗಳಲ್ಲಿ ಮಂಡ್ಯ ಜಿಲ್ಲೆ ಚಿಕ್ಕದಾದರೂ ಚಾರಿತ್ರಿಕವಾಗಿ ಬಹಳ ಸತ್ವಪೂರ್ಣ ಹಾಗೂ ಸಮೃದ್ಧ ಜಿಲ್ಲೆಯಾಗಿದೆ.

ಒಂದಾನೊಂದು ಕಾಲದಲ್ಲಿ ಬರಡು ಪ್ರದೇಶವಾಗಿದ್ದ ಮಂಡ್ಯ ಪ್ರದೇಶ, ಮೈಸೂರಿನ ದಿವಾನರಾಗಿದ್ದ ಭಾರತ ರತ್ನ ಸರ್. ಎಂ. ವಿಶ್ವೇಶ್ವರಯ್ಯ ಅವರ ದೂರದೃಷ್ಟಿಯ ಫಲವಾಗಿ ಕಾವೇರಿ ನದಿಗೆ ಅಡ್ಡಲಾಗಿ ಕನ್ನಂಬಾಡಿ ಕಟ್ಟೆ ನಿರ್ಮಾಣಗೊಂಡಿತು. ಇದರಿಂದ ಜಿಲ್ಲೆಗೆ ನೀರಾವರಿ ಸೌಲಭ್ಯ ದೊರೆತು ರೈತರು ಯಥೇಚ್ಛವಾಗಿ ಕಬ್ಬು – ಭತ್ತ ಬೆಳೆದು ಮಂಡ್ಯ ಸಿಹಿ ಜಿಲ್ಲೆಯಾಗಿ, ಭತ್ತದ ಕಣಜವಾಯಿತು. ಸರ್. ಎಂ.ವಿ ಅವರು ಜಿಲ್ಲೆಯ ಅನ್ನದಾತರೆನಿಸಿಕೊಂಡರು.

ಇಂತಹ ಜಿಲ್ಲೆಯಲ್ಲಿ ಜನಿಸಿದ ಶ್ರೀ ಜಿ. ನಾರಾಯಣ ಅವರ ಕಾರ್ಯಸಾಧನೆ, ರಾಜ್ಯಕ್ಕೆ ಸಲ್ಲಿಸುತ್ತಿರುವ ಬಹುಮುಖ ಸೇವೆಯನ್ನು ತಿಳಿಯುವ ಮುನ್ನ ಮಂಡ್ಯ ಹೆಸರಿನ ಮಹತ್ವವನ್ನು ತಿಳಿಯುವುದು ಅವಶ್ಯವೆನಿಸುತ್ತದೆ. ಏಕೆಂದರೆ ಸ್ಥಳ ನಾಮಗಳು ಹೇಗೆ ಬಂದವು ಎಂಬುದನ್ನು ಅರಿಯುವುದು ಮುಂದಿನ ಜನಾಂಗದ ದೃಷ್ಟಿಯಿಂದಲೂ ಮುಖ್ಯ.

ಚಾರಿತ್ರಿಕವಾಗಿ ತಿಳಿಯುವ ಒಂದು ಅಂಶವೆಂದರೆ

ಸೋಮವರ್ಮ ಎಂಬ ದೊರೆ ಇಲ್ಲಿ ಒಂದು ಕೋಟೆ ಮತ್ತು ಅಗ್ರಹಾರವನ್ನು ಕಟ್ಟಿಸಿ ಅದಕ್ಕೆ ಮಂಡವೇಮು ಎಂದು ನಾಮಕರಣ ಮಾಡಿದನೆಂದೂ ಅದೇ ಮುಂದೆ ಮಂಡ್ಯವಾಗಿ ಪರಿಚಯವಾಯಿತೆಂದೂ ಒಂದು ಕಥೆ.

ಮತ್ತೊಂದು ಐತಿಹ್ಯದ ಪ್ರಕಾರ ಮಾಂಡವ್ಯ ಋಷಿ ಇಲ್ಲಿ ನೆಲೆಸಿದ್ದುದರಿಂದ 'ಮಂಡ್ಯ' ಎಂಬ ಹೆಸರು ಬಂದಿತೆಂದೂ ತಿಳಿದು ಬಂದಿದೆ.

ಮೂರನೆಯದಾಗಿ, ವಿಜಯನಗರ ಸಾಮ್ರಾಜ್ಯದ ಅರಸು ಶ್ರೀ ಕೃಷ್ಣದೇವರಾಯ ೧೫೧೬ರಲ್ಲಿ ಪುಟ್ಟದಾಗಿದ್ದ ಶ್ರೀ ಗ್ರಾಮವನ್ನು ಸಧ್ಯದ ತಮಿಳುನಾಡಿನಿಂದ ವಲಸೆ ಬಂದು ಮೇಲುಕೋಟೆಯಲ್ಲಿ ನೆಲೆಸಿದ ಆಚಾರ್ಯತ್ರಯರಲ್ಲಿ ಒಬ್ಬರಾದ ಶ್ರೀ ರಾಮಾನುಜಾಚಾರ್ಯ ಅವರ ಶಿಷ್ಯವಂಶೀಯರಾದ ಶ್ರೀ ಗೋವಿಂದರಾಜ ಎಂಬುವರಿಗೆ ದಾನವಾಗಿ ಕೊಟ್ಟರಂತೆ. ತಿರುಪತಿ ಬಳಿಯಿರುವ 'ಮಂಡ್ಯ' ಎಂಬ ಊರಿನಿಂದ ಬಂದು ಇಲ್ಲಿ ನೆಲೆಸಿದುದರಿಂದ ಈ ಊರಿಗೆ "ಮಂಡ್ಯ" ಎಂದು ಕರೆಯಲಾಯಿತೆಂದೂ ಇತಿಹಾಸದ ಪುಟಗಳಲ್ಲಿ ಉಲ್ಲೇಖಿತವಾಗಿದೆ.

ನಾರಾಯಣ ಅವರ ಜನನ

೧೯೩೯ರಲ್ಲಿ ಮಂಡ್ಯ ಪ್ರತ್ಯೇಕ ಜಿಲ್ಲೆಯಾಗಿ ರೂಪುಗೊಂಡಿತು. ಅಂದು ಮೈಸೂರು ಜಿಲ್ಲೆಯ ಭಾಗವಾಗಿದ್ದ ಇಂದಿನ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಶಿವಪುರ ಸಮೀಪದ ದೇಶಹಳ್ಳಿ ಗ್ರಾಮದಲ್ಲಿ ೮೩ ವರ್ಷಗಳ ಹಿಂದೆ (೨೦೦೬ಕ್ಕೆ) ೨-೯-೧೯೨೩ರಲ್ಲಿ ನಾರಾಯಣರ ಜನನ. ತಂದೆ ಗಿರಿಗೌಡರದು ರೈತ ಕುಟುಂಬ.

ಪ್ರಾಥಮಿಕ ವಿದ್ಯಾಭ್ಯಾಸ ಹುಟ್ಟೂರು ದೇಶಹಳ್ಳಿಯಲ್ಲೇ. ಮಾಧ್ಯಮಿಕ ಶಿಕ್ಷಣ ಇಂದಿನ ತಾಲ್ಲೂಕು ಕೇಂದ್ರ ಮದ್ದೂರಿನಲ್ಲಿ. ಪ್ರೌಢ ಶಿಕ್ಷಣ ೧೯೩೭-೪೦ನೇ ಸಾಲಿನಲ್ಲಿ ಚನ್ನಪಟ್ಟಣದಲ್ಲಿ. ಕುಟುಂಬದ ಜವಾಬ್ದಾರಿ ಸೋದರಮಾವ ಶ್ರೀ ಪಿ. ತಮ್ಮಯ್ಯ ಅವರದು. ನಾರಾಯಣರ ವಿದ್ಯಾಭ್ಯಾಸದ ಬಗೆಗೂ ಅವರದೇ ಉಸ್ತುವಾರಿ. ಹೈಸ್ಕೂಲಿಗೆ ಬಂದ ಕೂಡಲೆ ವಿದ್ಯಾರ್ಥಿಗಳ ಸಂಘಟನೆ, ಗಣೇಶೋತ್ಸವ ಮುಂತಾದ ಕಾರ್ಯಕ್ರಮಗಳಿಂದ ನಾಯಕತ್ವ ಗುಣಗಳಿಗೆ ನಾಂದಿಯಾಯಿತು. ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡುದರಿಂದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಲಿಲ್ಲ. ಸರಿ, ಇಲ್ಲಿಗೆ ವಿದ್ಯಾಭ್ಯಾಸ ಮುಕ್ತಾಯವಾಯಿತು. ಹುಡುಗ ದಾರಿ ತಪ್ಪುತ್ತಾನೆಂದು ಭಾವಿಸಿದ ಅವರ ಮಾವ ತಾವು ನಡೆಸುತ್ತಿದ್ದ ಜವಳಿ ಅಂಗಡಿ ಮತ್ತು ಕಿರಾಣಿ ಅಂಗಡಿಯನ್ನು ಕೆಲವು ತಿಂಗಳು ನಾರಾಯಣರ ವಶಕ್ಕೆ ಬಿಟ್ಟುಕೊಟ್ಟರಂತೆ. ಆದರೆ ಈ ವ್ಯವಹಾರದಲ್ಲಿ ನಾರಾಯಣರಿಗೆ ಆಸಕ್ತಿಯೂ ಬರಲಿಲ್ಲ. ಹಿರಿಯರ ಗುರಿಸಾಧನೆಯೂ ಆಗಲಿಲ್ಲವಂತೆ.

ಮುಂದೇನು? ಆ ಚಿಕ್ಕ ವಯಸ್ಸಿನಲ್ಲಿ ನಿರ್ದಿಷ್ಟ ಗೊತ್ತುಗುರಿಯಿಲ್ಲದ ನಾರಾಯಣರಿಗೆ ೧೯೩೮ರಲ್ಲಿ ಮದ್ದೂರು ಬಳಿಯ ಶಿವಪುರದಲ್ಲಿ ಮೈಸೂರು ಪ್ರದೇಶ ಕಾಂಗ್ರೆಸ್ಸಿನ ಅಧಿವೇಶನ ನಡೆಯಿತು. ಶ್ರೀ ಟಿ. ಸಿದ್ದಲಿಂಗಯ್ಯ ಅವರು ಅಧ್ಯಕ್ಷರು. ಶ್ರೀ ಎಚ್.ಕೆ. ವೀರಣ್ಣಗೌಡರು

ಕಾರ್ಯದರ್ಶಿಗಳು. ಅಷ್ಟು ಹೊತ್ತಿಗೆ ಏನೂ ತೋಚದ ನಾರಾಯಣರು ತಮ್ಮ ಊರಿನ ಇನ್ನಿಬ್ಬರು ಗೆಳೆಯರೊಂದಿಗೆ ನೇರವಾಗಿ ವೀರಣ್ಣಗೌಡರಲ್ಲಿ ಹೋಗಿ ಶಿಬಿರದಲ್ಲಿ ಸ್ವಯಂ ಸೇವಕರಾಗಿ ಕೆಲಸ ಮಾಡಿದರಂತೆ. ಇದು ಒಂದು ರೀತಿ ಅವರ ರಾಜಕೀಯ ಪ್ರವೇಶಕ್ಕೆ ದಾರಿಯಾಯಿತೆನ್ನಬಹುದು.

ಇಷ್ಟು ಹೊತ್ತಿಗೆ ಮನೆ – ಮಠ (ಶಾಲೆ) ಸಂಪೂರ್ಣ ತ್ಯಜಿಸಿ ಜೀವನಶಾಲೆಗೆ ಕಾಲಿಟ್ಟಂತಾಯಿತು. ಸುಮಾರು ೧೯೪೨ರ ವೇಳೆಗೆ ಬೆಳಗಾವಿ ಬಳಿಯ ಹುದಲಿ ಗ್ರಾಮದಲ್ಲಿ ಜಮನಾಲಾಲ್ ಖಾದಿ ತಯಾರಿಕಾ ಕೇಂದ್ರ ಸ್ಥಾಪನೆಯಾಗಿತ್ತು. ದೇಶಭಕ್ತಿ, ಗಾಂಧೀಜಿಯವರ ತತ್ವಗಳು ಮತ್ತು ಅವರ ರಚನಾತ್ಮಕ ಕಾರ್ಯಗಳಲ್ಲಿ ಆಕರ್ಷಿತರಾಗಿದ್ದ ನಾರಾಯಣರು ಶ್ರೀ ವೀರಣ್ಣಗೌಡರ ನೆರವಿನಿಂದ ಶಿಬಿರದಲ್ಲಿ ಪ್ರವೇಶ ಪಡೆದರು. ಅಲ್ಲಿ ಎರಡು ಮೂರು ತಿಂಗಳು ಶಿಕ್ಷಣ ಪಡೆದ ನಂತರ ಅಲ್ಲಿಯೇ ೧೯೪೨ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ದಸ್ತಗಿರಿಯಾಗಿ ದಂಡ ಕೊಡಲು ಒಪ್ಪದಿದ್ದುದಕ್ಕಾಗಿ ಮೂರು ತಿಂಗಳು ಕಠಿಣ ಶಿಕ್ಷೆ ಅನುಭವಿಸಿ ೧೯೪೩ನೇ ಜನವರಿ ೨೦ರಂದು ಜೈಲಿನಿಂದ ಬಿಡುಗಡೆಯಾಗಿ ಊರಿಗೆ ಹಿಂದಿರುಗಿದರು.

ಅನಂತರ ಅಮಲ್ದಾರರು ಹೇಗೋ ಇವರ ಸಾರ್ವಜನಿಕ ಸೇವೆಯ ಆಸಕ್ತಿ ತಿಳಿದು ಪಂಚಾಯತಿ ಸದಸ್ಯನನ್ನಾಗಿ ನಾಮಕರಣ ಮಾಡುತ್ತಾರೆ. ನಾರಾಯಣರು ಪಂಚಾಯತಿ ಕೆಲಸದಲ್ಲಿ ಆಸಕ್ತಿ ವಹಿಸುವ ಜೊತೆಗೆ ವಯಸ್ಕರ ಶಿಕ್ಷಣದ ಬಗೆಗೂ ಒಲವು ತೋರುತ್ತಾರೆ. ಮೈಸೂರಿನಲ್ಲಿ ಅಕ್ಷರ ಪ್ರಚಾರ ಸಮಿತಿಯವರು ವಯಸ್ಕರಿಗಾಗಿ ಏರ್ಪಡಿಸಿದ್ದ ಶಿಕ್ಷಣ ಶಿಬಿರದಲ್ಲಿ ಒಂದು ವಾರ ತರಬೇತಿ ಪಡೆದು ವಾಪಸಾದ ನಂತರ ಊರಿನಲ್ಲಿ ವಯಸ್ಕರ ಶಿಕ್ಷಣ ತರಗತಿ ಆರಂಭಿಸಿ ಅಕ್ಷರ ಕಲಿಸಿದುದಲ್ಲದೆ ಪದ್ಯಗಳ ಮೂಲಕ ಬರಹ ಆರಂಭಿಸುತ್ತಾರೆ. ವಯಸ್ಕರಿಗಾಗಿ 'ಅಕ್ಷರವ ನೀವೆ ಕಲಿಯಿರಿ' ಎಂಬ ನೂರು ಪದ್ಯಗಳನ್ನು 'ಗೋವಿನ ಕಥೆ' ದಾಟಿಯಲ್ಲಿ ಬರೆದು ಸಿದ್ದವನಹಳ್ಳಿ ಕೃಷ್ಣಶರ್ಮರ ಮುನ್ನುಡಿಯೊಂದಿಗೆ ಅಕ್ಷರ ಪ್ರಚಾರ ಸಮಿತಿಗೆ ಕಳುಹಿಸಿಕೊಡುತ್ತಾರೆ. ಅವರು 'ಬೆಳಕು' ವಿಶೇಷ ಸಂಚಿಕೆಯಲ್ಲಿ ಪುಸ್ತಕ ರೂಪದಲ್ಲಿ ಪ್ರಕಟಿಸಿರುತ್ತಾರೆ.

ಬಹುಶಃ ನಾರಾಯಣರಿಗೆ ಊರಿನಲ್ಲಿ ತಮಗೆ ಇಷ್ಟವಾದ ಕೆಲಸ ಸಾಕಷ್ಟು ಇರಲಿಲ್ಲಾಂತ ಕಾಣುತ್ತೆ. ಅಷ್ಟು ಹೊತ್ತಿಗೆ ಕಾಂಗ್ರೆಸ್ ನಾಯಕರಾದ ಶ್ರೀ ಎಚ್.ಕೆ. ವೀರಣ್ಣಗೌಡರು ನಾರಾಯಣರ ಮನೋಧರ್ಮವನ್ನು ಅರಿತು ೧೯೪೬ರ ಪ್ರಾರಂಭದಲ್ಲಿ ಅವರ ಜೊತೆಯಲ್ಲಿ ಕೆಲಸ ಮಾಡಲು ಬೆಂಗಳೂರಿಗೆ ಕರೆಯುತ್ತಾರೆ. 'ರೋಗಿ ಬಯಸಿದ್ದೂ ಹಾಲು ಅನ್ನ, ವೈದ್ಯ ಹೇಳಿದ್ದೂ ಹಾಲು ಅನ್ನ' ಎನ್ನುವಂತೆ ನಾರಾಯಣರು ಹಿಂದುಮುಂದೆ ನೋಡದೆ ಅಂದು ಅರಳೇ ಪೇಟೆಯಲ್ಲಿದ್ದ ಕಾಂಗ್ರೆಸ್ ಭವನಕ್ಕೆ ಕಾಲಿಡುತ್ತಾರೆ.

ಕಾಂಗ್ರೆಸ್ ಕಛೇರಿಯಲ್ಲಿ ಜವಾನ ಬರದಿದ್ದರೆ ಜವಾನ ಕೆಲಸ, ಅಡಿಗೆ ಕೆಲಸ, ಕಾಂಗ್ರೆಸ್ ಸಭೆಗಳ ವ್ಯವಸ್ಥೆ ಹೀಗೆ ಅಲ್ಲಿ ಅಗತ್ಯವಾದ ಎಲ್ಲಾ ಕೆಲಸಗಳನ್ನು ಮಾಡಬೇಕಾಗಿತ್ತು.

ಪತ್ರಿಕಾ ರಂಗಕ್ಕೆ ಪಾದಾರ್ಪಣೆ

ಮೈಸೂರು ಕಾಂಗ್ರೆಸ್ಸಿಗೆ ತಮ್ಮ ಪ್ರಚಾರ ಕಾರ್ಯಗಳಿಗೆ ತನ್ನದೇ ಒಂದು ಪತ್ರಿಕೆ ಬೇಕಾಗಿತ್ತು. ಆಗ ವೀರಕೇಸರಿ ಸೀತಾರಾಮಶಾಸ್ತ್ರಿಗಳು ನಡೆಸುತ್ತಿದ್ದ 'ವಾರ್ತಾ' ಪತ್ರಿಕೆಯನ್ನು ಕಾಂಗ್ರೆಸ್ಸಿನ ಬೆನ್ನೆಲುಬಾಗಿದ್ದ ಸಾಹುಕಾರ ಚನ್ನಯ್ಯ ಅವರು ಕೊಂಡುಕೊಂಡರು. ಅಷ್ಟು ಹೊತ್ತಿಗೆ ಊರಿಗೆ ಹಿಂದಿರುಗಿದ್ದ ಜಿ. ನಾರಾಯಣರು ತಮ್ಮ ಗುರು ವೀರಣ್ಣಗೌಡರ ಬುಲಾವ್‌ನಂತೆ ಬೆಂಗಳೂರಿಗೆ ಬಂದು 'ವಾರ್ತಾ' ಪತ್ರಿಕೆ ಮತ್ತು ಮುದ್ರಣಾಲಯದ ವ್ಯವಸ್ಥಾಪಕರ ಜವಾಬ್ದಾರಿ ಹೊತ್ತುಕೊಳ್ಳುತ್ತಾರೆ. ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆ ಹೋರಾಟದ ನಂತರ ವೀರಣ್ಣಗೌಡರು ವಾರ್ತಾ ಪತ್ರಿಕೆಯನ್ನು ನಿಲ್ಲಿಸಿ, ತಾವು ಹಿಂದೆ ನಡೆಸುತ್ತಿದ್ದ 'ಚಿತ್ರಗುಪ್ತ' ದಿನ ಪತ್ರಿಕೆಯನ್ನೇ ಪ್ರಾರಂಭಿಸುತ್ತಾರೆ. ಇದರಲ್ಲಿಯೂ ನಾರಾಯಣರು ಮ್ಯಾನೇಜರ್ ಆಗಿ ಕೆಲಸ ಮಾಡಿ ಕ್ಷುಲ್ಲಕ ಕಾರಣಕ್ಕಾಗಿ ರಾಜೀನಾಮೆ ಕೊಟ್ಟು ಹೊರಬರುತ್ತಾರೆ.

ಸ್ವತಂತ್ರ ಮುದ್ರಣಾಲಯ ಸ್ಥಾಪನೆ

ಈಗಾಗಲೇ ಎರಡು ಪತ್ರಿಕೆಗಳಲ್ಲಿ ವ್ಯವಸ್ಥಾಪಕರಾಗಿ ಕೆಲಸ ಮಾಡಿ ಅನುಭವ ಗಳಿಸಿದ್ದ ನಾರಾಯಣರು ಸ್ವತಂತ್ರವಾಗಿಯೇ ಬದುಕಬೇಕೆಂಬ ಛಲದಿಂದ ಹಲವಾರು ತೊಡಕುಗಳನ್ನು ನಿವಾರಿಸಿಕೊಂಡು ೧೯೫೦ರಲ್ಲಿ ಸ್ವತಂತ್ರ ಮುದ್ರಣಾಲಯವನ್ನು ಸ್ಥಾಪಿಸಿಯೇಬಿಡುತ್ತಾರೆ. ಇಷ್ಟು ಸಾಕೆ? ಇಲ್ಲಾ, ತಿಂಗಳುಗಳ ನಂತರ ಯೋಚನೆ ಮಾಡಿ ಬರೀ ಪ್ರೆಸ್ ಆದರೆ ಸಾಲದೆಂದು 'ವಿನೋದ' ಎಂಬ ಹೆಸರಿನ ಹಾಸ್ಯಪ್ರಧಾನ ಮಾಸಪತ್ರಿಕೆಯನ್ನು ೧೯೫೧ನೆ ಜನವರಿ ೨೬ರ ಗಣರಾಜ್ಯ ದಿನದಂದು ಪ್ರಾರಂಭಿಸುತ್ತಾರೆ. ಆಗ ಅವರು ಸರಿ ಮಾಡಿ ಹಾಕಿದ ಬಂಡವಾಳ ಎಷ್ಟು ಗೊತ್ತೆ? ಕೇವಲ ೬ ಸಾವಿರ. ಕಳೆದ ೫೦ ವರ್ಷಗಳಿಗೂ ಮೇಲ್ಪಟ್ಟು ಇಂದಿಗೂ ಸತತವಾಗಿ ಅತ್ಯಂತ ಕಡಿಮೆ ಬೆಲೆಯಲ್ಲಿ ಪ್ರಕಟವಾಗುತ್ತಿರುವ ಹಾಸ್ಯ ಮಾಸ ಪತ್ರಿಕೆಯೆಂದರೆ 'ವಿನೋದ' ಒಂದೇ ಎನ್ನಬಹುದು.

ಶ್ರೀ ನಾರಾಯಣರು ಪತ್ರಿಕೆಯ ಜೊತೆಗೆ ಕಾಂಗ್ರೆಸ್ ಪ್ರಾಥಮಿಕ ಮತ್ತು ಸಕ್ರಿಯ ಸದಸ್ಯರಾಗಿ ಮುಂದೆ ಚಾಮರಾಜಪೇಟೆ ಕಾಂಗ್ರೆಸ್ ಸಮಿತಿಗೆ ಅಧ್ಯಕ್ಷರಾಗಿ ಈ ಕಡೆ ಪಕ್ಷದ ಸಂಘಟನೆ, ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳು ಹಾಗೂ ಕನ್ನಡದ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ.

ವಿವಾಹ

ಮದುವೆ ವಯಸ್ಸಿಗೆ ಬಂದ ನಂತರ ಮನೆಯಲ್ಲಿ ತಂದೆ ತಾಯಿ ಮತ್ತು ಸೋದರ ಮಾವ ಅವರು ನಾರಾಯಣರಿಗೆ ಮದುವೆ ಮಾಡಿಸಲು ನಿರ್ಧರಿಸಿದರು. ಬ್ಯಾಟರಾಯನಪುರದಲ್ಲಿ ೭೦-೮೦ ಜನರಿದ್ದ ಅವಿಭಕ್ತ ಕುಟುಂಬದ ಛೇರ್ಮನ್ ನರಸಿಂಹಯ್ಯ ಅವರ ಮೊದಲ ತಮ್ಮ ಶ್ರೀ ರಾಮಪ್ಪನವರ ಮಗಳು ಚಿ॥ ಸೌ॥ ಯಶೋದಮ್ಮ ಅವರೊಂದಿಗೆ ನಾರಾಯಣರ ವಿವಾಹ ನೆರವೇರಿತು. ಮದುವೆಯಾಗಿ ಬೆಂಗಳೂರಿನಲ್ಲಿ ನೆಲೆಸಿದರೂ ತಮ್ಮ ಊರಿಗೆ

ಆಗಾಗ ಹೋಗಿಬರುತ್ತಿದ್ದು, ಶಾಲಾ ಕಟ್ಟಡವೊಂದರ ಸಹಾಯಾರ್ಥ ಊರಿನವರು ಅಭಿನಯಿಸಿದ ಕುರುಕ್ಷೇತ್ರ ನಾಟಕದಲ್ಲಿ ವಿದುರನ ಪಾತ್ರ ವಹಿಸಿದ್ದರಂತೆ.

೧೯೫೭ರಲ್ಲಿ ಮೊದಲ ಬಾರಿಗೆ ನಾರಾಯಣರು ಚಾಮರಾಜಪೇಟೆಯಿಂದಲೇ ಸ್ಪರ್ಧಿಸಿ ಕಾರ್ಪೊರೇಷನ್‌ಗೆ ಆಯ್ಕೆಯಾಗುತ್ತಾರೆ. ಪುನಃ ಎರಡನೇ ಬಾರಿಗೂ ಸ್ಪರ್ಧಿಸಿ, ಗೆದ್ದು ೧೯೬೪ರಲ್ಲಿ ಮೇಯರ್ ಆಗಿ ಚುನಾಯಿತರಾಗುತ್ತಾರೆ. ಈ ಎರಡು ಅವಧಿಯಲ್ಲಿ ನಾರಾಯಣರು ಬೆಂಗಳೂರಿನ ಅಭಿವೃದ್ಧಿಗೆ ಕೈಗೊಂಡ ಕಾರ್ಯಗಳನ್ನು ಮೆಲುಕು ಹಾಕುವುದಾದರೆ ಒಂದು ಬೃಹತ್ ಗ್ರಂಥವನ್ನೇ ಬರೆಯಬೇಕಾಗುವುದು. ಆದರೆ ಎರಡು ಕಾರ್ಯಗಳನ್ನು ಬೆಂಗಳೂರಿನ ಮಹಾಜನತೆ ಇಂದಿಗೂ ಕೃತಜ್ಞತೆಯಿಂದ ನೆನಪಿಸಿಕೊಳ್ಳಬೇಕಾಗುತ್ತದೆ.

ಒಂದು, ಈಗ ಬೆಂಗಳೂರು ಮಹಾನಗರ ಪಾಲಿಕೆ ಮುಂದಿದ್ದ ಸೆನೆಟಾಫ್ ಸ್ಮಾರಕವನ್ನು ನೆಲಸಮ ಮಾಡಿ ಅದೇ ಜಾಗದಲ್ಲಿ ೧-೧೧-೬೪ರಂದು ಬೆಂಗಳೂರಿನ ನಿರ್ಮಾಪಕ ಶ್ರೀ ಕೆಂಪೇಗೌಡ ಪೂರ್ಣ ಪ್ರಮಾಣದ ಕಂಚಿನ ಪ್ರತಿಮೆಯನ್ನು ಸ್ಥಾಪಿಸಿದ್ದು. ಎರಡನೆಯದು ಕೆಂಪೇಗೌಡ ೧೫೩೭ರಲ್ಲಿ ಬೆಂಗಳೂರನ್ನು ಸ್ಥಾಪಿಸಿ ಊರಿನ ನಾಲ್ಕು ದಿಕ್ಕಿನಲ್ಲಿ ಗೋಪುರಗಳ ನಿರ್ಮಾಣದ ಮೂಲಕ ಗಡಿಯನ್ನು ಗುರುತಿಸಿದ್ದು. ಬೆಂಗಳೂರು ನಗರ ಬೆಳೆಯುತ್ತಿದ್ದ ಪರಿಯನ್ನು ನೋಡಿ ಮುಂದೆ ಜನರಿಗೆ ನೀರಿನ ಪೂರೈಕೆ ಸಾಲದೆಂಬ ದೂರದೃಷ್ಟಿಯಿಂದ ಕಾವೇರಿ ನದಿ ನೀರನ್ನು ಬೆಂಗಳೂರಿಗೆ ಹರಿಸಿದ್ದು. ಇದರ ಶಂಕುಸ್ಥಾಪನೆ ಸಮಾರಂಭ ೧೯೬೪ರ ಮೇ ೨೧ರಂದು ನಗರದ ಎಂ.ಎನ್. ಕೃಷ್ಣರಾವ್ ಪಾರ್ಕ್‌ನಲ್ಲಿ ನಡೆಯಿತು. ಅಂದಿನ ಎ.ಪಿ.ಸಿ.ಸಿ. ಅಧ್ಯಕ್ಷರಾಗಿದ್ದ ಕಾಮರಾಜ ನಾಡಾರ್ ಅವರು ಅಧ್ಯಕ್ಷತೆ ವಹಿಸಿದ್ದು, ಕೇಂದ್ರ ಸಚಿವರಾಗಿದ್ದ ಲಾಲ್‌ಬಹದ್ದೂರ್ ಶಾಸ್ತ್ರಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ನಮ್ಮ ಮನೆಯ ಸಮೀಪದಲ್ಲೇ ನಡೆದ ಈ ಸ್ಮರಣೀಯ ಸಮಾರಂಭದಲ್ಲಿ ಭಾಗವಹಿಸಿದ್ದುದು ನನ್ನ ಪುಣ್ಯವೆಂದೇ ಹೇಳಬೇಕು.

ಮೇಯರ್ ಅವಧಿ ನಂತರ ಕಾರ್ಪೊರೇಷನ್ ಕಾರು ಉಪಯೋಗಿಸದೆ ಆಟೋದಲ್ಲಿ ಮನೆಗೆ ಮರಳುತ್ತಾರೆ. ಸರ್. ಎಂ. ವಿಶ್ವೇಶ್ವರಯ್ಯನವರು ದಿವಾನ್ ಅವರ ಅಧಿಕಾರ ಅವಧಿ ಮುಗಿದ ನಂತರ ಸರ್ಕಾರಿ ಕಾರು ಬಳಸದೆ ತಮ್ಮ ಸ್ವಂತ ಕಾರಿನಲ್ಲಿ ಮನೆಗೆ ಹಿಂದಿರುಗಿದರಂತೆ

ಕನ್ನಡ ಸಾಹಿತ್ಯ ಪರಿಷತ್ ಪ್ರವೇಶ

ಬೆಂಗಳೂರು ನಗರದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದ ನಂತರ, ಸದಾ ಕನ್ನಡ ಭಾಷೆ, ಸಾಹಿತ್ಯದ ಬಗ್ಗೆ ಅಪಾರ ಕಳಕಳಿ ಹೊಂದಿದ ನಾರಾಯಣರು ರಾಜ್ಯ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಸೇವೆ ಸಲ್ಲಿಸಲು ಮನಸ್ಸು ಮಾಡುತ್ತಾರೆ. ಅದರಂತೆ ಕನ್ನಡಾಭಿಮಾನಿಗಳ ಪ್ರೋತ್ಸಾಹದಿಂದ ಮಹಾನ್ ಸಾಹಿತಿ ಪಂಡಿತ ರತ್ನ ಜಿ. ಶಿವಮೂರ್ತಿಶಾಸ್ತ್ರಿಗಳ ವಿರುದ್ಧ ಅನಿವಾರ್ಯವಾಗಿ ಸ್ಪರ್ಧಿಸಿ ಅಧ್ಯಕ್ಷರಾಗಿ ಜಯ ಗಳಿಸುತ್ತಾರೆ. ಅಧಿಕಾರ ವಹಿಸಿಕೊಂಡ ಕೂಡಲೇ ಹಗಲಿರುಳು ಚಿಂತಿಸಿ, ಪ್ರಾರಂಭದಲ್ಲಿ ತ್ರೈಮಾಸಿಕ ಯೋಜನೆ, ಅನಂತರ ಎರಡನೆ ಅವಧಿಗೆ ಪಂಚವಾರ್ಷಿಕ ಯೋಜನೆ ತಯಾರಿಸಿ

ಕಾರ್ಯಕಾರಿ ಸಮಿತಿಯ ಒಪ್ಪಿಗೆ ಪಡೆದು ಒಂದೊಂದಾಗಿ ಯೋಜನೆಯ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುತ್ತಾರೆ.

೧೯೧೫ರಲ್ಲಿ ಸ್ಥಾಪನೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವವನ್ನು ೨೬-೧೨-೭೦ರಲ್ಲಿ ವಿಜೃಂಭಣೆಯಿಂದ ನೆರವೇರಿಸುತ್ತಾರೆ. ಇವರ ಅಧಿಕಾರ ಅವಧಿಯಲ್ಲೇ ೨ ವರ್ಷ ತಡವಾಗಿ ವಜ್ರ ಮಹೋತ್ಸವವು ೨೩-೪-೭೭ರಿಂದ ೨೮-೪-೭೭ರ ವರೆಗೆ ೫ ದಿನಗಳ ಕಾಲ ಅತ್ಯಂತ ಯಶಸ್ವಿಯಾಗಿ ನಡೆಯುತ್ತದೆ. ಒಬ್ಬರ ಅಧಿಕಾರ ಅವಧಿಯಲ್ಲೇ ಸುವರ್ಣ ಮತ್ತು ವಜ್ರ ಮಹೋತ್ಸವ ನಡೆಯುವುದು ಅವರ ಪುಣ್ಯ ವಿಶೇಷವೆಂದೇ ಹೇಳಬಹುದು. ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ೧೩-೫-೧೯೬೯ರಲ್ಲಿ ಆಯ್ಕೆಯಾದ ನಾರಾಯಣರು ೨೨-೭-೧೯೭೮ರ ವರೆಗೆ ಅಂದರೆ ೯ ವರ್ಷಗಳ ಕಾಲ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿ, ಇದರ ವ್ಯಾಪ್ತಿಯನ್ನು ಕರ್ನಾಟಕ ಮೂಲೆ ಮೂಲೆಗಳಿಗೆ ಕೊಂಡೊಯ್ದು ಕನ್ನಡದ ಕಾಯಕವನ್ನು ನಿರೀಕ್ಷೆಗೂ ಮೀರಿ ಕೈಗೊಳ್ಳುತ್ತಾರೆ. ಪರಿಷತ್ತಿನ ಸಾಹಿತ್ಯ ಸಮ್ಮೇಳನಗಳನ್ನು ಕೇವಲ ಕರ್ನಾಟಕ ರಾಜ್ಯ, ಗಡಿನಾಡು, ಹೊರನಾಡು ಪ್ರಾಂತ್ಯಗಳಿಗೆ ಮಾತ್ರ ಸೀಮಿತಗೊಳಿಸದೆ ಭಾರತದ ರಾಜಧಾನಿ ದೆಹಲಿಗೂ ಕೊಂಡೊಯ್ದು, ಕನ್ನಡದ ಕಹಳೆಯನ್ನು ದೇಶಾದ್ಯಂತ ಮೊಳಗಿಸಿ ಕನ್ನಡದ ಜನರ ಸಾಹಿತಿಗಳ ಅಭಿಮಾನಕ್ಕೆ ಪಾತ್ರರಾಗುತ್ತಾರೆ. ಕಾಂಗ್ರೆಸ್ ಮುಖಂಡರಾಗಿದ್ದ ನಾರಾಯಣರು ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ಆಯ್ಕೆಯಾದಾಗ ಸಾಹಿತ್ಯ ಪರಿಷತ್‌ಗೂ ರಾಜಕೀಯ ಪ್ರವೇಶವಾಯಿತೆಂದು ಕೆಲವರು ದಿಗಿಲುಗೊಂಡರಂತೆ. ಆದರೆ ನಾರಾಯಣರು ಸ್ನಾನಕ್ಕೆ ಹೋಗುವಾಗ ತೊಟ್ಟ ಬಟ್ಟೆಯನ್ನು ಕಳಚಿದ ಹಾಗೆ ಅವರ ರಾಜಕೀಯವನ್ನು ಅಲ್ಲಿಗೆ ಬಿಟ್ಟು ಸಾಹಿತ್ಯ ಸೇವೆಯನ್ನು ಸಾಹಿತಿಯಲ್ಲದ ಮಹಾನ್ ಸಾಹಿತಿಯಾಗಿ ನಿರ್ವಹಿಸಿದರೆಂಬುದು ಗಮನಾರ್ಹ.

ಕರ್ನಾಟಕ ಪತ್ರಿಕಾ ಅಕಾಡೆಮಿ ಅಧ್ಯಕ್ಷರಾಗಿ

ಶ್ರೀ ಜಿ. ನಾರಾಯಣರು ಬೆಂಗಳೂರು ಮಹಾನಗರದ ಮೇಯರ್ ಆಗಿ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ನಂತರ, ರಾಜ್ಯ ಸರ್ಕಾರ ಅವರನ್ನು ಕನ್ನಡ ಪತ್ರಿಕಾ ಅಕಾಡೆಮಿ ಅಧ್ಯಕ್ಷರನ್ನಾಗಿ ನೇಮಿಸುತ್ತದೆ. ಇವರ ಅವಧಿ ೧೯೮೭ರಿಂದ ೧೯೯೦ರ ವರೆಗೆ. ಸರಿ, ಅಧಿಕಾರ ವಹಿಸಿಕೊಂಡ ಕೂಡಲೇ ಇಲ್ಲಿಯೂ ಒಂದು ತ್ರೈಮಾಸಿಕ ಯೋಜನೆ ಸಿದ್ಧಪಡಿಸುತ್ತಾರೆ.

ಇಲ್ಲಿಯೂ ಕೆಲವರು, ಪತ್ರಕರ್ತರೇ ಅಲ್ಲದ ಜಿ. ನಾರಾಯಣ ಅವರನ್ನು ನೇಮಕ ಮಾಡಿದೆ ಎಂದು ಗೊಣಗಿದ್ದರಂತೆ. ಆದರೆ ಅವರಾರಿಗೂ ಜಿ. ನಾರಾಯಣ ಅವರು ಸ್ವಾತಂತ್ರ್ಯಾನಂತರ ೧೯೫೧ರಿಂದಲೇ 'ವಿನೋದ' ಹಾಸ್ಯ ಮಾಸಿಕ ಪತ್ರಿಕೆಯನ್ನು ಅವರೇ ಸಂಪಾದಕರಾಗಿ ಪ್ರಕಟಿಸುತ್ತಿದ್ದಾರೆಂದು ತಿಳಿಯದಿದ್ದುದು ಅವರ ಅಜ್ಞಾನ ಪ್ರದರ್ಶನವೆಂದು ಕಾಣುತ್ತದೆ.

ಜಿ. ನಾರಾಯಣರು ಅಧಿಕಾರ ವಹಿಸಿಕೊಂಡ ಕೂಡಲೇ ೩೦ ಲಕ್ಷ ರೂ. ವೆಚ್ಚದ

ತ್ರೈಮಾಸಿಕ ಯೋಜನೆಯನ್ನು ತಯಾರಿಸಿ ಸರ್ಕಾರಕ್ಕೆ ಕಳುಹಿಸಿಕೊಡುತ್ತಾರೆ. ಅಕಾಡೆಮಿಯ ಕಾರ್ಯಚಟುವಟಿಕೆಗಳ ಪ್ರಸಾರಕ್ಕಾಗಿ 'ಪತ್ರಿಕೆ' ಎಂಬ ದ್ವೈಮಾಸಿಕ ಪ್ರಕಟಣೆಯನ್ನು ಪ್ರಪ್ರಥಮವಾಗಿ ಆರಂಭಿಸುತ್ತಾರೆ. ಅವರ ಅವಧಿಯ ನಂತರ ಪತ್ರಿಕೆ ಈಗ ಪ್ರಕಟವಾಗುತ್ತಿಲ್ಲ. ಇದೊಂದು ವಿಷಾದನೀಯ ಸಂಗತಿ.

ಇಡೀ ರಾಜ್ಯದ ಮೂಲೆ, ಮೂಲೆಗಳಲ್ಲಿರುವ ಸಣ್ಣ ಪುಟ್ಟ ಪತ್ರಿಕೆಗಳ ಪತ್ರಕರ್ತರ ಸಹಿತ ಎಲ್ಲಾ ಪತ್ರಕರ್ತರನ್ನೊಳಗೊಂಡ ರಾಜ್ಯ ಮಟ್ಟದ ಪತ್ರಕರ್ತರ ಸಮ್ಮೇಳನವನ್ನು ೧೯೮೭ನೇ ಡಿಸೆಂಬರ್ ೧೯ರಿಂದ ೨೧ರ ವರೆಗೆ ನಗರದ ಗಾಯನ ಸಮಾಜದಲ್ಲಿ ಯಶಸ್ವಿಯಾಗಿ ನಡೆಸುತ್ತಾರೆ.

ಇಷ್ಟೂ ಸಾಲದೆಂಬಂತೆ ೧೯೮೮ರ ಮೇ ೧೩ರಿಂದ ೧೫ರ ವರೆಗೆ ವ್ಯಂಗ್ಯಚಿತ್ರಗಾರರ ಕಾರ್ಯಾಗಾರವನ್ನು ವ್ಯವಸ್ಥೆ ಮಾಡಿ ವ್ಯಂಗ್ಯಚಿತ್ರಗಳ ಮಹತ್ವವನ್ನು ಸಾಮಾನ್ಯ ಜನರಿಗೂ ತಿಳಿಸಿರುತ್ತಾರೆ.

ಯಾವೊಂದು ವ್ಯವಸ್ಥಿತ ತರಬೇತಿಯಿಲ್ಲದ ಜಿಲ್ಲಾ ಮತ್ತು ಗ್ರಾಮಾಂತರ ಪತ್ರಕರ್ತರಿಗಾಗಿ ಬಳ್ಳಾರಿಯಲ್ಲಿ ಒಂದು ತರಬೇತಿ ಶಿಬಿರವನ್ನು ವ್ಯವಸ್ಥೆಗೊಳಿಸಿದ್ದರು. ಅಂದಿನ ರಾಜ್ಯದ ರಾಜ್ಯಪಾಲರಾದ ಶ್ರೀ ವಿ. ವೆಂಕಟಸುಬ್ಬಯ್ಯ ಅವರು ತರಬೇತಿ ಶಿಬಿರದ ಸಮಾರೋಪ ಭಾಷಣ ಮಾಡಿ ಅರ್ಹತಾ ಪತ್ರಗಳನ್ನು ವಿತರಿಸಿದರು. ಅಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾಗಿದ್ದ ಈ ಲೇಖಕ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ತಮ್ಮ ಅಧಿಕಾರ ಅವಧಿಯಲ್ಲಿ ೧೫೦ನೆ ಕನ್ನಡ ಪತ್ರಿಕೋದ್ಯಮ ವರ್ಷ (೧೯೮೯)ವನ್ನು ಯಶಸ್ವಿಯಾಗಿ ಆಚರಿಸಿದರು. ಈವರೆಗೆ ಯಾರೂ ಮಾಡದ ಅಕಾಡೆಮಿ ಬಗೆಗೆ ಒಂದು ಸಾಕ್ಷ್ಯ ಚಿತ್ರವನ್ನು ಸಿದ್ಧಗೊಳಿಸಿ ಪ್ರದರ್ಶಿಸಿದರು. ಇದರ ಜೊತೆಗೆ ಪತ್ರಕರ್ತ ಶ್ರೀ ಮೇಗರವಳ್ಳಿ ಮೂರ್ತಿ ಅವರು ಸಂಗ್ರಹಿಸಿದ್ದ ದೇಶ ವಿದೇಶಗಳ ಅಪರೂಪದ ಪತ್ರಿಕಾ ಪ್ರದರ್ಶನವನ್ನು ಏರ್ಪಡಿಸಿದ್ದರು. ನಾರಾಯಣರ ಮತ್ತೊಂದು ಶ್ಲಾಘನೀಯ ಕಾರ್ಯ ಕಾಲು ಶತಮಾನ ಕಂಡ ಕನ್ನಡ ಪತ್ರಿಕೆಗಳ ಬಗೆಗೆ ಪರಿಚಯ ಪುಸ್ತಕಗಳನ್ನು ಪ್ರಕಟಿಸಿದುದು.

ಶ್ರೀ ಜಿ. ನಾರಾಯಣರು ಸಲ್ಲಿಸಿದ ಸೇವೆ ಮತ್ತು ಜೀವಮಾನದ ಸಾಧನೆಗಾಗಿ ರಾಜ್ಯ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದುದಲ್ಲದೆ ನಾಡಿನ ಸಂಘ ಸಂಸ್ಥೆಗಳು ನೀಡಿದ ಗೌರವ ಪ್ರಶಸ್ತಿ, ಪುರಸ್ಕಾರ, ಸನ್ಮಾನ ಸಮಾರಂಭಗಳಿಗೆ ನಿಜವಾಗಿಯೂ ಲೆಕ್ಕವಿಲ್ಲವೆಂದು ಹೇಳಬಹುದು. ಆದರೆ ಇಷ್ಟೆಲ್ಲಾ ಸ್ವೀಕರಿಸಿದ ಜಿ. ನಾರಾಯಣ, 'ಕೆರೆಯ ನೀರನು ಕೆರೆಗೆ ಚೆಲ್ಲಿ' ಎಂಬಂತೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ತಮ್ಮ ಧರ್ಮಪತ್ನಿ ಶ್ರೀಮತಿ ಯಶೋದಮ್ಮ ನಾರಾಯಣ ಅವರ ಹೆಸರಿನಲ್ಲಿ ರೂ. ೧೦ ಸಾವಿರಗಳ ದತ್ತಿ ನಿಧಿಯನ್ನು ಸ್ಥಾಪಿಸಿದ್ದಾರೆ.

ರಾಜ್ಯ ಸರ್ಕಾರ ಸ್ಥಾಪಿಸಿರುವ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ೧೯೯೨ರಲ್ಲಿ

ನೇಮಕಗೊಂಡು, ಅಲ್ಲಿಯೂ ಒಂದು ತ್ರೈಮಾಸಿಕ ಯೋಜನೆ ಮೂಲಕ ಕನ್ನಡ ಜಾಗೃತಿ ವರ್ಷವನ್ನು ರಾಜ್ಯಾದ್ಯಂತ ಆಚರಿಸಿ, ಕನ್ನಡಿಗರಲ್ಲಿ ಜಾಗೃತಿಯನ್ನು ಮೂಡಿಸಿದ್ದಾರೆ.

ಕರ್ನಾಟಕ ಗಮಕ ಕಲಾ ಪರಿಷತ್ತಿನ ಅಧ್ಯಕ್ಷರಾಗಿ ನಶಿಸಿ ಹೋಗುತ್ತಿದ್ದ ಗಮಕ ಕಲೆಯನ್ನು ರಾಜ್ಯಾದ್ಯಂತ ಪ್ರಚಾರಮಾಡಿ ಜನಪ್ರಿಯಗೊಳಿಸಿದ್ದಾರೆ.

ಇದಲ್ಲದೆ ಸದ್ಯದಲ್ಲಿ (೨೦೦೬) ನಗರದ ತ್ಯಾಗರಾಜನಗರ ಬಡಾವಣೆಯಲ್ಲಿರುವ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಗೌರವ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಇದೀಗ ೮೩ ವರ್ಷದ ವಯೋವೃದ್ಧ ಶ್ರೀ ಜಿ. ನಾರಾಯಣ ಅವರು ಅನಿವಾರ್ಯ ಹಾಗೂ ಒತ್ತಡ ಕಾರಣಗಳಿಂದಾಗಿ ರಾಮನಗರದ ಬಳಿ ದಿ। ಡಾ। ಎಚ್.ಎಲ್. ನಾಗೇಗೌಡರು ಸ್ಥಾಪಿಸಿರುವ "ಜಾನಪದ ಲೋಕ"ದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಕೆಲವರಿಗೆ ಅಧಿಕಾರ ಸ್ಥಾನಗಳಿಂದ ಗೌರವ ಲಭಿಸಿದರೆ, ಜಿ. ನಾರಾಯಣರು ತಾವು ಅಧಿಕಾರ ವಹಿಸಿಕೊಂಡು ಸಂಘ ಸಂಸ್ಥೆಗಳಿಗೆ ಗೌರವ ತಂದುಕೊಟ್ಟು ದೊಡ್ಡವರಾಗಿದ್ದಾರೆ. ಇಂದಿಗೂ ಶಿಸ್ತಿನ ಜೀವನ ನಡೆಸಿಕೊಂಡು ಕಾಯಾ ವಾಚಾ ಮನಸಾ ಸಮಾಜಕ್ಕೆ, ದೇಶಕ್ಕೆ ಸೇವೆ ಸಲ್ಲಿಸುತ್ತಿರುವ ಜಿ. ನಾರಾಯಣರು ನೂರ್ಕಾಲ ಆಯುರಾರೋಗ್ಯಗಳಿಂದ ನೆಮ್ಮದಿಯ ಜೀವನ ನಡೆಸಲು ಭಗವಂತ ಅನುಗ್ರಹಿಸಲೆಂದು ನಾವೆಲ್ಲಾ ಪ್ರಾರ್ಥಿಸೋಣ.

❑

ಆದರ್ಶಗಳ ಸಾಕಾರ ಮೂರ್ತಿ

■ ಜಿ.ಕೆ. ಗುಂಡೂರಾವ್

ಅಸಾಧಾರಣ ವ್ಯಕ್ತಿತ್ವ, ಅನುಕರಣೀಯ ಗುಣಾದರ್ಶಗಳು, ನೇತಾರ ಶ್ರೇಷ್ಠ, ಕರ್ತವ್ಯ ನಿಷ್ಠ, ಯೋಜನಕಾರ, ಸ್ವಾತಂತ್ರ್ಯ ಹೋರಾಟಗಾರ, ಕನ್ನಡ ಭಾಷಾ ಪ್ರೇಮಿ ದೇಶಹಳ್ಳಿ ಶ್ರೀ ಜಿ. ನಾರಾಯಣ ಅವರು.

೧೯೫೦ರ ಆಸುಪಾಸಿನ ದಿನಗಳಲ್ಲಿ ಚಾಮರಾಜಪೇಟೆಯಲ್ಲಿ ಜಿ. ನಾರಾಯಣರು ವಾಸವಾಗಿದ್ದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡು ಬೆಳಗಾಂ ಹಿಂಡಲಿಗಿ ಜೈಲಿನಲ್ಲಿ ಕೆಲವು ಕಾಲ ಇದ್ದು ಬಂದಿದ್ದ ಕಾಂಗ್ರೆಸ್‌ನವರು. ಚಾಮರಾಜಪೇಟೆಯ ನಾಗರಿಕ ಸೌಲಭ್ಯಗಳು, ಮುನಿಸಿಪಾಲಿಟಿ ಜವಾಬ್ದಾರಿ, ಹೀಗೆ ಜನ ಸಂಪರ್ಕ ಬೆಳೆಸಿಕೊಳ್ಳುತ್ತಾ ಜನಪ್ರಿಯತೆ ಗಳಿಸಿ ತಮ್ಮ ವ್ಯಕ್ತಿತ್ವ ಬೆಳೆಸಿಕೊಂಡವರು. ಕಾಂಗ್ರೆಸ್ ಚಟುವಟಿಕೆಗಳು, ಕಛೇರಿ ನಿರ್ವಹಣೆ, ಕಾರ್ಯಕ್ರಮಗಳ ಏರ್ಪಾಡು, ಹಿರಿಯರು ರಾಜಕಾರಣಿಗಳ ಸಂಪರ್ಕ ಬೆಳೆಸಿಕೊಂಡವರು. ಆಗಂತೂ ಆಗಬೇಕಾದ ಕೆಲಸಕಾರ್ಯಗಳು ಬೇಕಾದಷ್ಟು, ತಾವೇ ನಿಂತು ಇಲಾಖೆಗಳ ಸಹಾಯ ಪಡೆದು ಕಾರ್ಯನಿರ್ವಹಿಸಿ ಉಪಕರಿಸಿದವರು ನಮ್ಮ ನಾರಾಯಣ. ಕಾರ್ಯವಾಗಬೇಕು ಎಂದುಕೊಂಡಾಗ ಅವರು ಸಂಗ್ರಹಿಸುತ್ತಿದ್ದ ವಿವರ, 'ಮುಂದಿನ ಅವಶ್ಯಕತೆಗಳು, ಆಗಬೇಕಾದ ರೀತಿ, ಸಂಪರ್ಕಿಸುತ್ತಿದ್ದ ಇಲಾಖಾಧಿಕಾರಿಗಳು ಇವೆಲ್ಲ "ಸ್ಪಷ್ಟಯೋಜಿತ" ವಾಗಿರುತ್ತಿದ್ದವು. ಕಾರ್ಪೊರೇಟರ್ ಆದಾಗಂತೂ ಇವರು ಮಾಡಿದ್ದ ಕೆಲಸ ಕಾರ್ಯಗಳೇ ಇವರಿಗೆ ಸುಲಭಮಾರ್ಗವಾಯಿತು. ತಮಗಿದ್ದ ಅವಕಾಶ, ದೊರೆತ ಹೆಚ್ಚು

ಅನುಕೂಲತೆಗಳು ಚಾಮರಾಜಪೇಟೆಗೆ ವರಪ್ರದಾನವಾದುವು. ನಿಸ್ಪೃಹ ಶ್ರದ್ಧೆ ಮಹಾಪೌರರಾಗಲು ಅನುವಾಯಿತು. ಅವರಿಗಿದ್ದ "ಸ್ನೇಹ-ಸಂಬಂಧ" ಮಹಾಪೌರತ್ವ ಒದಗಿ ಬಂದಾಗ, ಅದೀಗ ನನಗಲ್ಲ ನನಗಿಂತ ಮುಂಚಿನ ಸದಸ್ಯರದ್ದು ಎಂದು ತಿಳಿಸಿ ತಮ್ಮ ಅತ್ಯಂತ ಆತ್ಮೀಯರನ್ನು ಆ ವರ್ಷ ಆ ಸ್ಥಾನದಲ್ಲಿ ಕೂಡಿಸಿದ "ಮಹಾನುಭಾವ" ನಾರಾಯಣರು. ತಮ್ಮ ಸರದಿಯಲ್ಲಿ ಪದಾಧಿಕಾರ ಸ್ವೀಕರಿಸಿ ಅನೇಕ ಮಹತ್ಕಾರ್ಯಗಳನ್ನು ಮಾಡಿಸಿದ ಕೀರ್ತಿವಂತರು. ಕಾವೇರಿ ನೀರು ನಗರಕ್ಕೆ ಅವರದೇ ಕೊಡುಗೆ. ಅಂದಿನ ಬೆಂಗಳೂರಿನ ಅನೇಕ ಅಭಿವೃದ್ಧಿ ಕಾರ್ಯಗಳು ನಾರಾಯಣರ "ಯೋಜಿತ" ಕೈಂಕರ್ಯಗಳು. ಅವರು ಮೇಯರ್ ಅಧಿಕಾರ ಸ್ವೀಕರಿಸಿದ ದಿನವನ್ನು ಚೆನ್ನಾಗಿ ಜ್ಞಾಪಕವಿಟ್ಟುಕೊಂಡಿದ್ದು ಮೇಯರ್ ಅವಧಿ ಒಂದು ವರ್ಷ ಎಂಬುವನ್ನು ತಿಳಿದು, ಆ ದಿನ ಬರುವುದನ್ನು ಲೆಕ್ಕ ಹಾಕಿ ದಿನ-ವಾರ-ತಾರೀಕು ತಿಂಗಳು ಗುರುತು ಹಾಕಿಟ್ಟುಕೊಂಡು ತಮಗಿದ್ದ ಕಾಲಾವಧಿಯಲ್ಲಿ ಆ ಹುದ್ದೆಯ ಗೌರವ, ಅಧಿಕಾರ ಸದುಪಯೋಗ ಪಡಿಸಿಕೊಂಡು ಅನೇಕ ಅತ್ಯುತ್ತಮ ಕಾರ್ಯ ನೆರವೇರಿಸಿದ ಹಿರಿಮೆ ನಾರಾಯಣರದು. ಅನೇಕ ಮಹತ್ಕಾರ್ಯಗಳ ರೂವಾರಿಗಳಾದರು, ಕೆಂಪೇಗೌಡ ದಿನಾಚರಣೆ ಅನೇಕ ನಗರ ಸಂಬಂಧಿತ ಕಾರ್ಯಕ್ರಮಗಳು ನಡೆಸಲು ಕಾರಣಕರ್ತರಾದರು. ತಮ್ಮ ಮೇಯರ್ ಅವಧಿಯಲ್ಲಿ ಕಛೇರಿಯ ಎಲ್ಲರೊಡನೆ ಅವರು ಬೆಳೆಸಿಕೊಂಡ ಬಾಂಧವ್ಯ ಅನುಕರಣೀಯ.

ತಾವೇ ಗೊತ್ತುಪಡಿಸಿಕೊಂಡಿದ್ದ ಒಂದು ದಿನ – ತಮ್ಮದೇ ಲೆಕ್ಕಾಚಾರದಲ್ಲಿ ಹಲವಾರು ನೆನಪು ಕೊಡುಗೆಗಳನ್ನು ಅಂದರೆ ಪೆನ್ನು-ಕೀಚೈನ್-ಪರ್ಸ್ ಮುಂತಾದವುಗಳನ್ನು ತರಿಸಿಟ್ಟು ಕೊಂಡು ತಮ್ಮೊಡನೆ ದಿನ ನಿತ್ಯದ ಕೆಲಸ ಮಾಡುತ್ತಿದ್ದವರಿಗೆ ಗೌರವಪೂರ್ವಕವಾಗಿ ತಾವೇ ತಲುಪಿಸಿದರು. ಅವರಲ್ಲಿ ಅಧಿಕಾರ ಅಂತಸ್ತು ಪ್ರವೇಶಿಸದೆ – ನೆನಪಿನದೇ ಗುರಿಯಾಗಿ ವಂದನೆಗಳೊಂದಿಗೆ ವಿತರಿಸಿದರು. ಅಂತೆಯೇ ಆ ತಿಂಗಳಿನಲ್ಲಿ ಆಗಬೇಕಾಗಿದ್ದ ಒಂದು ಬೃಹತ್ ಕಾರ್ಯಕ್ರಮವನ್ನು ಎಲ್ಲರಿಗೂ ತಿಳಿಸಿ ತಮಗೆ ಬೇಕಾದ ಸಂಜೆ ಏರ್ಪಡಿಸಿದರು. ನಗರಪಾಲಿಕೆಯ ಎಲ್ಲ ನೌಕರರು ಅಧಿಕಾರಿಗಳು ನಗರ ಪಾಲಿಕೆ ಸದಸ್ಯರು ಹೀಗೆ ಸಾವಿರಾರು ಮಂದಿ ಸೇರಿದ ಸಭೆ ಆದಾಯಿತು. ಅಂದಿನ ನಿರ್ದಿಷ್ಟ ಕಾರ್ಯಕ್ರಮ ನಡೆದು ಮೇಯರ್ – ಅಧ್ಯಕ್ಷರಾಗಿ ಮಾತನಾಡಿದರು. ತಮ್ಮ ಮಾತಿನಲ್ಲಿ ಎಲ್ಲರ ಕೆಲಸ ಕಾರ್ಯಗಳನ್ನು ಅಭಿನಂದಿಸುತ್ತಾ ಇಂದು ನನಗೊಂದು ಮಹತ್ವದ ದಿನ. ಕಳೆದ ವರ್ಷ ಇದೇ ದಿನದಂದು ನಾನು 'ಪ್ರಥಮ ಪ್ರಜೆ' ಮೇಯರ್ ಆಗಿ ತಮ್ಮೆಲ್ಲರ ಶುಭ ಹಾರೈಕೆಯೊಂದಿಗೆ ಅಧಿಕಾರ ಸ್ವೀಕರಿಸಿದ್ದೆ – ಇಂದಿಗೆ ಆ ಅವಧಿ ಮುಗಿಯಿತು. ನನ್ನ ಕೈಲಾದ ಸೇವೆ ಸಲ್ಲಿಸಿದ್ದೇನೆ. ಈಗ ಆ ಉನ್ನತ ಗೌರವದ ಹುದ್ದೆಯನ್ನು ಅವಧಿ ಮುಗಿದ ಕಾರಣ ನಿಯಮಾನುಸಾರ ಬಿಟ್ಟು ಕೊಡುತ್ತಿದ್ದೇನೆ. ಈಗ ಆ ವಿಸರ್ಜನಾ ಮುಹೂರ್ತ ಬಂದಿದೆ. ತಮಗೆಲ್ಲಾ ನನ್ನ ಕೃತಜ್ಞತೆಗಳು. ಇಂದಿನಿಂದ ನಾನು ಮತ್ತೆ ಒಬ್ಬ ನಗರ ಪಾಲಿಕೆ ಸದಸ್ಯ" ಎಂದು ಹೇಳಿದರು.

ಅಲ್ಲಿದ್ದವರಿಗೆಲ್ಲಾ ಪರಮಾಶ್ಚರ್ಯ – ಸಭೆ ಮುಗಿಯಿತು. ಹಾರಗಳ ಸುರಿಮಳೆ ನಾರಾಯಣರಿಗೆ – ಎಲ್ಲ ಹಾರ ಸ್ವೀಕಾರ ಕೊನೆಗೊಂದು ಹಾರ ಕೈಯಲ್ಲಿ ಹಿಡಿದು – ನಾನು

ಬರುತ್ತೇನೆ ಎಂದು ಸಭೆಯಿಂದ ಹೊರಟರು. ಎಲ್ಲಿಗೆ? ನನಗೆ ಹಿಂದಿನ ದಿನ ಆ ಸಭೆಗೆ ಬರಲು ತಿಳಿಸಿ - ಬರುವಾಗ ಒಂದು ಆಟೋ ತರಿಸಲು ತಿಳಿಸಿದ್ದರು -- ನಾನು ಹಾಗೆಯೇ ಮಾಡಿದ್ದೆ.

ನನ್ನ ಹೆಸರು ಕೂಗುತ್ತಾ ಆಟೋ ತನ್ನಿ ಎಂದರು – ಅದರ ಬಳಿ ಬಂದರು ಮೇಯರ್ ಕಾರಿನ ಸಂಚಾಲಕರು ಇತರೇ ಅಧಿಕಾರಿಗಳು – ಅನೇಕ ಹಿತೈಷಿಗಳು ಎಷ್ಟೇ ಕರೆದರೂ ಯಾವುದೇ ಕಾರ್–ವ್ಯಾನ್ ಹತ್ತದೇ–ಸುಮಾರು ಹಳೆಯದಾಗಿದ್ದ "ಆಟೋ" ಹತ್ತಿಯೇಬಿಟ್ಟರು. ಜೊತೆಗೆ ನಾನು, ಚಾಮರಾಜಪೇಟೆ ಮನೆಗೆ ಬಂದೆವು. ಅವರೇ ಆಟೋ ಬಾಡಿಗೆ ಕೊಟ್ಟಾಗ– ನಾನು ಅತ್ತದ್ದಷ್ಟೇ ಜ್ಞಾಪಕ–ಮನೆಯವರಿಗೆ ಆಶ್ಚರ್ಯ– ಒಳಗೆ ಬಂದವರೇ ಅವರ ಧರ್ಮಪತ್ನಿಗೆ– ನೋಡು, ತೊಗೋ ಹಾರ – ಇಂದಿಗೆ ನನ್ನ ಮೇಯರ್ ಅವಧಿ ಮುಗಿಯಿತು. ಅಂದರು. ಅದೂ ನಗು ನಗುತ್ತಾ. ಇಂಥವರೆಷ್ಟು ಜನ – ಅಧಿಕಾರ ಸ್ವೀಕಾರದ ಸಂದರ್ಭದಲ್ಲೂ ಅಧಿಕಾರ ಬಿಡುವಾಗಲೂ ಅದರ ಮಹತ್ವವನ್ನು ಜನತೆಗೆ ತೋರಿಸಿದ ಮಹಾನುಭಾವರು ಶ್ರೀ ಜಿ. ನಾರಾಯಣ.

ಅಧಿಕಾರ ಅವಧಿ ಮುಗಿದ ಕ್ಷಣ "ಮೇಯರ್" ಪದವಿಯ ಕಾರು ಬೇಡವೆಂದರು, ಬಿಡುವ ದಿನದ ಪ್ರಕಟಣೆ ಮಾಡಲಿಲ್ಲ. ಅವರೇ "ನೆನಪಿನ ಕಾಣಿಕೆ" ಇತ್ತು ನಡೆಯಬೇಕಿದ್ದ ಯಾವುದೋ ಸಮಾರಂಭದಿಂದ ನಗುನಗುತ್ತಾ ಹೊರಬಂದರು.

ಅದೆಂತಹ ಆದರ್ಶ ನಮ್ಮ ದೇಶಹಳ್ಳಿ ನಾರಾಯಣ ಅವರದು.

* * *

"ಸೇತಾರ" ಎಂಬ ಗೌರವಾನ್ವಿತ ಕೀರ್ತಿ ಪಡೆಯುವ ಹಿರಿಮೆ ನಮ್ಮ ಆತ್ಮೀಯರೂ ಅನುಕರಣೀಯರೂ ಆದ ಶ್ರೀ ಜಿ. ನಾರಾಯಣ ಅವರದು. ನಮ್ಮ ಅದೃಷ್ಟ–ಪುಣ್ಯ– ಶಾಲಾದಿನಗಳಲ್ಲಿ ಚಾಮರಾಜಪೇಟೆಯಲ್ಲಿದ್ದ ನಮಗೆ ಅವರ ಪರಿಚಯವಾಯಿತು. ಅವರೊಡನೆ ಕೆಲಸ ಕಾರ್ಯಗಳಲ್ಲಿ ಬೆರೆಯುವ ಅವಕಾಶ ದೊರೆಯಿತು. ನಗರ ಸ್ವಚ್ಛತೆ, ಅನೇಕ ದಿನಾಚಾರಣೆಗಳು, ಜಯಂತಿಗಳನ್ನು ನಡೆಸುವ ರೀತಿಯ ಮಾರ್ಗದರ್ಶನ ಅವರಿಂದ ದೊರೆಯಿತು.

ನಾಟಕದ ಹವ್ಯಾಸವಿದ್ದ ನಾವು ಪ್ರಾರಂಭಿಸಿದ ಕಲಾವಿಲಾಸಿ ಸಂಸ್ಥೆ "ಶಶಿಕಲಾವಿದರು" ಅದರ ಅಧ್ಯಕ್ಷರು ನಮ್ಮ ನಾರಾಯಣ ಅವರೇ. ನಾಟಕ ಸ್ಪರ್ಧೆ ಕಲಾವಿದರ ಸನ್ಮಾನ– ಕಾರ್ಯಕ್ರಮ ಹೀಗೆ ಎಲ್ಲಕ್ಕೂ ಅವಧಿ ಯೋಚಿಸಿ ನೀಡುತ್ತಿದ್ದ ಸಲಹೆ ಸೂಚನೆ ಮಾರ್ಗದರ್ಶನ ಮಹತ್ವದ ಮರೆಯಲಾಗದ ಮರೆಯಬಾರದ ಮಾರ್ಗದರ್ಶನ. ಪೂಜ್ಯ ಡಿ.ವಿ.ಜಿ. ಮಾಸ್ತಿ, ವಿ.ಸೀ–ಹೀಗೆ ಅವರು ಅಭ್ಯಾಸಿಸದ ಹಿರಿಯರೇ ಅಪರೂಪ. ಅವರಿಗೆಲ್ಲಾ ಅದೇನು ಗೌರವ ನಾರಾಯಣರ ಮೇಲೆ. ಅವರ ಕಾರ್ಯ ಯೋಜನೆಗಳ ಮೇಲೆ. ಕಲಾವಿದರ ಸನ್ಮಾನಕ್ಕಂತೂ ಅವರು ಕೊಡುತ್ತಿದ್ದ ಪ್ರಾಧಾನ್ಯತೆ – ಪಡೆಯುತ್ತಿದ್ದ ಹಿರಿಯ ಕಲಾವಿದರ ಸಾಹಿತಿಗಳ ಸಲಹೆ

ಆದರ್ಶಪ್ರಾಯ. ಸನ್ಮಾನಪತ್ರ ಶಾಲು ಸ್ಮರಣೀಯ ಕೊಡುಗೆ- ಇವೆಲ್ಲ ಅವರದೇ ಸಲಹೆ. ಪುರಂದರದಾಸರ-ದಾಸವರೇಣ್ಯರ ದಿನಾಚರಣೆ-ಹಿರಿಯರನೇಕರ ಜನ್ಮಶತಾಬ್ದಿಗಳು ಪುಸ್ತಕ ಪ್ರದರ್ಶನ-ಮಾರಾಟ, ಉಪನ್ಯಾಸಗಳು-ಷಷ್ಟ್ಯಬ್ದಿ- ವಿದೇಶಪ್ರವಾಸ ಬೀಳ್ಕೊಡುಗೆ- ಹೀಗೆ ಶಶಿಕಲಾವಿದರಿಂದ ಅವರು ನಡೆಸಿದ ಕಾರ್ಯಕ್ರಮಗಳು ನೂರಾರು. ಅದರದೇ ಗುಣಮಟ್ಟ, ಕಾರ್ಯಕ್ರಮದ ವೈಖರಿ ಅನುಪಮ ಅನುಕರಣೀಯ. ಅವರೊಂದಿಗಿನ ಕೆಲಸ ಕಾರ್ಯ ನಿರ್ವಹಣೆ ಅತ್ಯಂತ ಜವಾಬ್ದಾರಿಯುತ, ಅಷ್ಟೇ ಅಚ್ಚುಕಟ್ಟು; ಯಾವುದೇ ಕೆಲಸ- ಅದೊಂದು ಪತ್ರ,-ಕರೆತರುವುದು,- ಏನನ್ನಾದರೂ ಸಿದ್ಧಪಡಿಸುವುದು, ಯಾರನ್ನಾದರೂ ನೋಡಿ ಬರುವುದು, ಯಾವುದಾದರೂ ಸರಿ-ಜವಾಬ್ದಾರಿ ವಹಿಸಿದರೆ ಅದಾಗುವವರೆಗೆ ಅವರ ಆಸಕ್ತಿ, ಅದನ್ನು ಕೇಳುತ್ತಿದ್ದ ರೀತಿ ಅವರ ಆದರ್ಶ ನಾಯಕತ್ವಕ್ಕೆ ಒಂದು ನಿದರ್ಶನ. ತಮ್ಮದೇ ಸಂಕಲ್ಪಿತ ರೀತಿಯಲ್ಲಿ ಕೆಲಸ ಆಗಬೇಕು ಎಂಬುದು ಅವರೆಂದೂ ವ್ಯಕ್ತಪಡಿಸದಿದ್ದರೂ, ಎಲ್ಲರ ಅಭಿಪ್ರಾಯ ಬಹಳ ತಾಳ್ಮೆಯಿಂದ ಕೇಳಿ ಅಗತ್ಯವಾದರೆ ಅದರ ಅಳವಡಿಕೆ ಮಾಡಿ ತಮ್ಮದೇ ಯೋಜಿತ ರೀತಿಯನ್ನು ಇತರರಿಗೆ ಒಪ್ಪಿಸಿ-ಕಾರ್ಯ ನಡೆಸುವ "ಜಾಣ್ಮೆ" ಅವರದು.

'ಶಶಿಕಲಾವಿದರು' ಸಂಸ್ಥೆಯು ಸುವರ್ಣ ಮಹೋತ್ಸವ ನಡೆಸುತ್ತಿರುವ ವರ್ಷವಿದು. ದಶಮಾನೋತ್ಸವ ರಜತ ಮಹೋತ್ಸವ-೨೦, ೨೫, ೩೦, ೩೫ ಹೀಗೆ ಆಗಾಗ್ಗೆ ನಡೆದ ವಿಶೇಷ ಮಹೋತ್ಸವಗಳು ಆಗ ನಡೆದ ವಿವಿಧ ಕಾರ್ಯಕ್ರಮಗಳು ನಡೆಸಿದ ಅದ್ದೂರಿಯ ಸನ್ಮಾನಗಳು ಹೊರತಂದ ಸಂಚಿಕೆಗಳು ಇವೆಲ್ಲಾ ನಮ್ಮ ಅಧ್ಯಕ್ಷರದೇ ಮಾರ್ಗದರ್ಶನ. ಅವರಿಗಿದ್ದ ನಾಟಕದ ಒಲವು ಅವರು ನಟರಾಗಿ ನಾಟಕ ಮಾಡಿದ್ದರ ಫಲ ಎಂಬುದು ನಿಸ್ಸಂದೇಹ.

ಕಲಾವಿಲಾಸಿ ಸಂಸ್ಥೆಯೊಂದರ ಅಧ್ಯಕ್ಷ ಸ್ಥಾನ ಅವರಿಗೆ ವೈಯಕ್ತಿಕವಾಗಿ ಅವರ ರಾಜಕೀಯ ಚಟುವಟಿಕೆಗೆ ಅನುವಾಯಿತೋ ಇಲ್ಲವೋ ಗೊತ್ತಿಲ್ಲ. ಆದರೆ ಅದರಿಂದ "ಶಶಿಕಲಾವಿದರು" ಸಂಸ್ಥೆ ಕಲಾವಿಲಾಸಿಗಳು ವೃತ್ತಿ ಕಲಾವಿದರೂ ಪಡೆದ ಅನುಭವ ಗಳಿಸಿದ ಕೀರ್ತಿ ಗೌರವ ಅಪಾರ.

ಶ್ರೀ ಜಿ. ನಾರಾಯಣ ಅವರನ್ನು ಅಧ್ಯಕ್ಷರನ್ನಾಗಿ ಪಡೆದ ನಾವೇ ಶಶಿಕಲಾವಿದರೇ - ಧನ್ಯರು ಅವರಿಗೆ ಧನ್ಯೋಸ್ಮಿ.

ಸ್ವತಂತ್ರ ಮುದ್ರಣಾಲಯ

ತಾವು ಕಾರ್ಯನಿರ್ವಹಿಸುತ್ತಿದ್ದ - "ಚಿತ್ರಗುಪ್ತ" ಪತ್ರಿಕೆಯ ಮುದ್ರಣಾಲಯ - ಆಫೀಸ್ ವ್ಯವಸ್ಥೆ ಏನೋ ಮಾತು - ಹೊರ ಬಂದರು - ಆದರೆ ತಮ್ಮದೇ ಪತ್ರಿಕೆ (ವಿನೋದ)ಯ ನಿರ್ಧಾರ, ಅನೇಕರ ಸಮಯದಲ್ಲಿನ ನೆರವು-ಚಾಮರಾಜಪೇಟೆಯಲ್ಲಿ ಅಂಗಡಿಯೇ ಮುದ್ರಣಾಲಯ - ಕಛೇರಿ ಹೆಸರು ಸ್ವತಂತ್ರ ಮುದ್ರಣಲಯ. ಪತ್ರಿಕೆ- ವಿನೋದ

ಇದೇ ಪ್ರಾರಂಭ - ಅಂದಿಟ್ಟ ಹೆಸರು - ತಮಗಿದ್ದ ದೇಶಪ್ರೇಮ ಸ್ವಾತಂತ್ರ್ಯದ ಬಗೆಗಿನ ಗೌರವ ಇಂದೂ ಮುಂದುವರೆದಿದ್ದು ಅದೇ ಹೆಸರು ರಾರಾಜಿಸುತ್ತಿದೆ.

ಆದರ್ಶ ಪತ್ರಕರ್ತ

"ವಿನೋದ" ಹಾಸ್ಯ ಪ್ರಧಾನ ಮಾಸಪತ್ರಿಕೆ. ಶ್ರೀ ಜಿ. ನಾರಾಯಣ ಅವರು ಪತ್ರಿಕಾ ಅನುಭವ ಪಡೆದ ನಂತರ ತಾವೇ ಪ್ರಾರಂಭಿಸಿದ ಪತ್ರಿಕೆ.

ಅದೆಷ್ಟು "ಲೇಖಕರ" ಸಂಪರ್ಕ. ಪ್ರತಿ ತಿಂಗಳ ಮೊದಲವಾರ ಪ್ರಕಟಣೆ ಆಗಸ್ಟ್ ೧೫ರಂದು ವಿಶೇಷ ಸಂಚಿಕೆ. ಅದೇನು ಆಸಕ್ತಿ – ಎಂದೂ ತಡವಾಗದಂತೆ ಹೊರತರುವಿಕೆ.

ವಿಶೇಷ – ಹಿರಿತನವೆಂದರೆ ಇದೀಗ ವರ್ಷಗಳು ಕಳೆದಿರುವ ವಿನೋದದ "ಒಂದೇ" ಸಂಚಿಕೆ ಬಾರದೇ ಇರುವ ಪ್ರಸಂಗ ಒದಗಿಬಂದಿಲ್ಲ. ಒಮ್ಮೆ ಬಹಳ ಹಿಂದೇನೂ ಅಲ್ಲ ಅವರಿಗೆ ಆರೋಗ್ಯ ಸರಿ ಇಲ್ಲದೇ ಆಸ್ಪತ್ರೆಯಲ್ಲಿದ್ದರು, ಆದರೂ ಅವರ "ವಿನೋದ" ಚಿಂತೆ ಜವಾಬ್ದಾರಿ ಆಸ್ಪತ್ರೆಗೆ ಬೇಕಾದ ಎಲ್ಲ ಕಾಗದ ಲೇಖನಗಳೂ ತರಿಸಿ ಹೀಗೆ ಬರಬೇಕು ಎಂದು ಸೂಚಿಸಿ ಆ ತಿಂಗಳೂ ನಿರ್ದಿಷ್ಟ ದಿನ ವಿನೋದ ಹೊರತಂದ ಹಿರಿಮೆ ನಮ್ಮ ನಾರಾಯಣರದು. ಬಹುಶಃ ಈ ಬಗ್ಗೆ ಸೂಕ್ತ ಪ್ರಚಾರ ದೊರೆತರೆ ಇದೊಂದು ದಾಖಲೆಯೇ ಸರಿ. ಅವರು ಹೊರತಂದಿರುವ 'ವಿನೋದ ವ್ಯಂಗ್ಯ ಚಿತ್ರ ಸಂಕಲನ' ಹಾಸ್ಯ ಲೇಖಕರ ಪರಿಚಯ ಪುಸ್ತಕ ಇವೆಲ್ಲಾ ಹಾಸ್ಯ ಸಾಹಿತ್ಯ ಕ್ಷೇತ್ರಕ್ಕೆ ಅವರು ನೀಡಿರುವ ಅನುಪಮ ಕೊಡುಗೆ.

ಇತ್ತ ರಾಜಕಾರಣ– ಸಾಹಿತ್ಯ ಕ್ಷೇತ್ರ–ಸಮಾಜಸೇವೆ– ಪ್ರಾಧಿಕಾರಗಳು– ಸಂಸ್ಥೆಗಳ ಅಧ್ಯಕ್ಷ ಸ್ಥಾನ ಹೀಗೆ – ಅವರು ಸಮರ್ಥ ಜನಪ್ರಿಯ ದಕ್ಷ ನೇತಾರರಾಗದ ಕ್ಷೇತ್ರವೇ ಇಲ್ಲ.

❑

ಪುಸ್ತಕ ಸಂಸ್ಕೃತಿಯ ಪ್ರಮುಖ ಪ್ರವರ್ತಕ

■ ಎಸ್.ವಿ. ಶ್ರೀನಿವಾಸರಾವ್

ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆಗಾಗಿ ಸರ್ ಎಂ. ವಿಶ್ವೇಶ್ವರಯ್ಯ: ಎಚ್.ವಿ. ನಂಜುಂಡಯ್ಯ, ಕರ್ಪೂರ ಶ್ರೀನಿವಾಸರಾವ್, ಕೆ.ಪಿ. ಪುಟ್ಟಣ್ಣಶೆಟ್ಟಿ ; ಎಂ. ಶಾಮ ರಾಯರು, ಪಿ.ಎಸ್. ಅಚ್ಯುತರಾಯರು, ಎಂ. ಕಾಂತರಾಜೇ ಅರಸ್, ಸಿ.ಕೆ. ವೆಂಕಟರಾಮಯ್ಯ, ಬೆಳ್ಳಾವೆ ವೆಂಕಟ ನಾರಾಯಣಪ್ಪ, ಸರ್ ಮಿರ್ಜಾ ಇಸ್ಮಾಯಿಲ್ ಮುಂತಾದ ವರು ಕಾರಣಕರ್ತರಾದರೂ ಇದರ ಪ್ರರೋಭಿವೃದ್ಧಿಗಾಗಿ ಶ್ರಮಿಸಿ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಅಲ್ಲದೆ ರಾಜಕೀಯ ಕ್ಷೇತ್ರದಲ್ಲೂ ಗೌರವಯುತ, ಗಮನಾರ್ಹ ಮಟ್ಟಕ್ಕೇರಿಸಿದ ಮಹನೀಯರುಗಳಲ್ಲಿ ಶ್ರೀ ಜಿ. ನಾರಾಯಣ ಅವರಿಗೆ ಪ್ರಥಮ ಸ್ಥಾನ ಸಲ್ಲುತ್ತದೆ. ಶ್ರೀ ಕೃಷ್ಣರಾಜೇಂದ್ರ ಮಂದಿರದಲ್ಲಿದ್ದ ಪರಿಷತ್ತಿಗೆ ಭವ್ಯ ಸುವರ್ಣ ಮಹೋತ್ಸವ ಕಟ್ಟಡ, ವಜ್ರಮಹೋತ್ಸವ ಕಟ್ಟಡ ನಿರ್ಮಿಸಿ ಸೇರ್ಪಡಿಸಿದ ಹೆಗ್ಗಳಿಕೆಗೂ ಶ್ರೀ ಜಿ. ನಾರಾಯಣ ಪಾತ್ರರಾಗಿದ್ದಾರೆ.

ಜಿ. ನಾರಾಯಣ ಅವರು ಸಾಹಿತ್ಯ ಪರಿಷತ್ತಿಗೆ ಅಧ್ಯಕ್ಷ ರಾದಮೇಲೆ ಶ್ರೀಮನ್ನಾರಾಯಣನೇ ಪ್ರತ್ಯಕ್ಷ ವಾದಂತಾಯಿತು' ಕುವೆಂಪುರವರ ಈ ಪ್ರಶಂಸನೀಯ ಮಾತುಗಳನ್ನು ಸಾರ್ಥಕಪಡಿಸುವಂತೆ ಇವರು ಕನ್ನಡ ನಾಡಿಗೆ, ಕನ್ನಡ ನುಡಿಗೆ, ಕನ್ನಡ ಜನತೆಗೆ ಅಗಣಿತ ವರಗಳನ್ನಿತ್ತಿದ್ದಾರೆ. ಕನ್ನಡವನ್ನೇ ಕಾಯಕವನ್ನಾಗಿ ಮಾಡಿ ಕೊಂಡು ಅಹರ್ನಿಶಿ ಶ್ರಮಿಸುತ್ತಿರುವ ಜಿ. ನಾರಾಯಣ ರವರದು ಅನುಕರಣೀಯ ವ್ಯಕ್ತಿತ್ವ. ಆದರ್ಶ ನಡವಳಿಕೆ ; ನಿಷ್ಕಳಂಕ ಸೇವಾನಿಷ್ಠೆ ; ಪರಿಪಕ್ವ ಮೇಧಾಶಕ್ತಿ ;

ಪ್ರಶಂಸನೀಯ ಮಾನವೀಯತೆ, ಆಡಳಿತಾತ್ಮಕ ದಕ್ಷತೆ, ಸಹೃದಯತೆ, ವ್ಯಾವಹಾರಿಕ ಕುಶಲತೆ, ಕನ್ನಡಾಭಿಮಾನ, ಸ್ವಾತಂತ್ರ್ಯಾಕಾಂಕ್ಷಿ, ಕಾಯಾ ವಾಚಾ ಮನಸಾ ಗಾಂಧಿತತ್ವದ ಅನುಪಾಲನೆ ಇವೆಲ್ಲವುಗಳ ಸಮಷ್ಟಿ ರೂಪವನ್ನು ಯಾರಲ್ಲಾದರೂ ಕಾಣಬಯಸಿದರೆ ನಮಗೆ ಕಾಣಸಿಗುವ ಏಕೈಕವ್ಯಕ್ತಿಯೆಂದರೆ ಶ್ರೀ ಜಿ. ನಾರಾಯಣ ಎಂಬುದರಲ್ಲಿ ಸಂಶಯವಿಲ್ಲ.

“ಏಕನಿಷ್ಠೆಗೆ ಇನ್ನೊಂದು ಹೆಸರು ಶ್ರೀ ಜಿ. ನಾರಾಯಣ. ರಾಜಕೀಯ ರಂಗದಲ್ಲಿ ಅವರಿದ್ದಾರೆ ಇಲ್ಲದಂತೆ ; ಸಾರ್ವಜನಿಕ ರಂಗದಲ್ಲಿಯೂ ಇದ್ದಾರೆ ಇಲ್ಲದಂತೆ ; ಆದರೆ ಕನ್ನಡ ಕಾಯಕದಲ್ಲಿ ಅವರು ಇದ್ದೂ ಇಲ್ಲದಂತಿರುವುದು ಸಾಧ್ಯವಿಲ್ಲ. ‘ಕನ್ನಡ ಅವರ ಉಸಿರು ; ಕನ್ನಡ ಕಾಯಕ ಅವರ ಪಂಚಪ್ರಾಣ’ ಡಾ ಸಿದ್ಧಯ್ಯ ಪುರಾಣಿಕರ ಅಭಿಪ್ರಾಯ ಶ್ರೀ ಜಿ. ನಾರಾಯಣರ ನಿಜಜೀವನದಲ್ಲಿ ತುಡಿಯುತ್ತಿರುವುದನ್ನು ಇಂದೂ ನಾವು ಕಾಣಬಹುದಾಗಿದೆ. ಇವರು ನಿಜವಾಗಿ ಅಜಾತಶತ್ರು, ನಿಷ್ಕಾಮ ಕರ್ಮಯೋಗಿ. ಗಾಂಧಿತತ್ತ್ವದ ಪ್ರತಿಮಾ ರೂಪ. ಈ ಕೆಳಗಿನ ಕಾರ್ಯಚಟುವಟಿಕೆಗಳು ಈ ನಿಲುವನ್ನು ದೃಢೀಕರಿಸುತ್ತವೆ.

ನಾನು ಜಿ. ನಾರಾಯಣರವರನ್ನು ಮೊದಲು ಕಂಡದ್ದು ೧೯೬೯ರ ನವೆಂಬರ್‌ನಲ್ಲಿ, ಅದೂ ದೂರದಿಂದ. ಕನ್ನಡ ರಾಜ್ಯೋತ್ಸವ ಸಾಹಿತ್ಯ ಪ್ರಚಾರ ಸಮಿತಿ ವತಿಯಿಂದ, ಅದರ ಕಾರ್ಯಾಧ್ಯಕ್ಷರಾಗಿ, ಕನ್ನಡ ಸಾಹಿತ್ಯ ಪರಿಷತ್ತಿನ ಪರವಾಗಿ ‘ಪುಸ್ತಕ ಪ್ರಚಾರ ಕಾರ್ಯಕ್ರಮ’ದಲ್ಲಿ ಅವರು ಹಲವಾರು ಸಾಹಿತಿಗಳೊಡನೆ ಮಲ್ಲೇಶ್ವರದಲ್ಲಿ ಮನೆಮನೆಗೆ ಪುಸ್ತಕ ಹೊತ್ತು, ಅದನ್ನು ಪ್ರದರ್ಶಿಸಿ ಮಾರಾಟ ಮಾಡುವ ಕ್ರಾಂತಿಕಾರಿ ಯೋಜನೆಯನ್ನು ಒರೆ ಹಚ್ಚಲು ಪ್ರಯತ್ನಿಸಿದ್ದರು. ಅಷ್ಟು ಹೊತ್ತಿಗಾಗಲೇ ನನ್ನೆರಡು ಕಾದಂಬರಿಗಳು ಪ್ರಕಟಗೊಂಡಿದ್ದವು. ವಿಶ್ವಕರ್ನಾಟಕ, ಉಷಾ, ಕಥಾಂಜಲಿ, ಕಥೆಗಾರ, ಕಸ್ತೂರಿ, ಸಂಯುಕ್ತ ಕರ್ನಾಟಕ, ಕರ್ಮವೀರ, ಕನ್ನಡಪ್ರಭ, ಸುಧಾ, ಮಯೂರ ಮುಂತಾದ ಪತ್ರಿಕೆಗಳಲ್ಲಿ ಪ್ರಕಟಗೊಂಡಿದ್ದ ಹಲವು ಕಥೆಗಳನ್ನೊಳಗೊಂಡ ಒಂದು ಕಥಾಸಂಕಲನ ಸಹ ಬಿಡುಗಡೆಗೊಂಡಿತ್ತು. ಅವನ್ನು ನಾನು ಪ್ರದರ್ಶನ / ಮಾರಾಟಕ್ಕೆ ನೀಡಿದ್ದೆ. ಸಾಹಿತಿಯಾಗಿ ನಾನು ಆ ಕಾರ್ಯಕ್ರಮದಲ್ಲಿ ಭಾಗಿಯಾಗಲು ಸಾಧ್ಯವಾಗಿರಲಿಲ್ಲ. ಏಕೆಂದರೆ ೧೯೬೨ರಿಂದ ೧೯೬೯ರ ನವೆಂಬರ್‌ವರೆಗೆ ನಾನು ಮುಂಬಯಿ ಆಫೀಸಿನಲ್ಲಿ (ಛೀಫ್ ಕಂಟ್ರೋಲರೇಟ್ ಆಫ್ ಇನ್‌ಸ್ಪೆಕ್ಷನ್ ಎಲೆಕ್ಟ್ರಾನಿಕ್ಸ್, ರಕ್ಷಣಾ ಇಲಾಖೆ) ಅದೇ ತಾನೆ ಬೆಂಗಳೂರಿಗೆ ಬಂದಿದ್ದೆ. ಆದರೆ ಈ ಪುಸ್ತಕ ಪ್ರದರ್ಶನ ಯೋಜನೆಯಿಂದ ಪ್ರಭಾವಿತನಾಗಿದ್ದೆ. ಈ ಯೋಜನೆಯಲ್ಲಿ ಖುದ್ದಾಗಿ ಪ್ರವೇಶ ಮಾಡುವ ಅವಕಾಶ ನನಗೆ ದೊರೆತದ್ದು ೧೯೭೨ರಲ್ಲಿ. ‘ಯುನೆಸ್ಕೊ’ ಸಾರಿದ್ದ ಅಂತರರಾಷ್ಟ್ರೀಯ ಪುಸ್ತಕ ವರ್ಷ ಹಾಗೂ ರಾಷ್ಟ್ರದ ಸ್ವಾತಂತ್ರ್ಯದ ಬೆಳ್ಳಿಹಬ್ಬ – ಇವುಗಳ ನೆನಪಿಗಾಗಿ ಪರಿಷತ್ತು ‘ಸಾಹಿತ್ಯ ಪ್ರಸಾರ ಯೋಜನೆ’ ಹಮ್ಮಿಕೊಂಡಿತ್ತು. ಇವರಲ್ಲಿ ಲೇಖಕ, ಪ್ರಕಾಶಕ, ಓದುಗ ಹೀಗೆ ಎಲ್ಲರಿಗೂ ಪ್ರವೇಶವಿತ್ತು. ನಾಡಿನ ಎಲ್ಲಾ ಪುಸ್ತಕ ಪ್ರಕಾಶಕರಿಂದ ಪುಸ್ತಕಗಳನ್ನು ತರಿಸಿಕೊಂಡು ನಾಡಿನಾದ್ಯಂತ ಪುಸ್ತಕ ಪ್ರದರ್ಶನವು ಮಾರಾಟ ಹಾಗೂ ಈ ಬಗ್ಗೆ ವಿಚಾರ ಸಂಕಿರಣ, ಚರ್ಚಾಸ್ಪರ್ಧೆ ಮುಂತಾದವನ್ನು ಪರಿಷತ್ತು ಜಿ. ನಾರಾಯಣರವರ ನೇತೃತ್ವದಲ್ಲಿ ಏರ್ಪಡಿಸಿತ್ತು. ರಾಜ್ಯದ ರಾಜಧಾನಿಯಲ್ಲಿ ಪಾದಯಾತ್ರೆಯ

ಮೂಲಕ ಮನೆಮನೆಗೆ ಹೋಗಿ ಪುಸ್ತಕ ಮಾರಾಟ ಮಾಡಿದ್ದು ಈ ಕಾರ್ಯಕ್ರಮದ ವೈಶಿಷ್ಟ್ಯವಾಗಿತ್ತು. ಈ ಕಾರ್ಯಕ್ರಮದಿಂದಾಗಿ ಸುಮಾರು ೩ ಲಕ್ಷ ರೂಪಾಯಿ ಪುಸ್ತಕ ಮಾರಾಟವಾಗಿ ವಿಕ್ರಮ ಸಾಧಿಸಿತ್ತು. ಜುಲೈ ೧೫, ೧೬, ೧೭ರಂದು ನಡೆದ ಗೋಷ್ಠಿಗಳಲ್ಲಿ ಮಂಥನಗೊಂಡ ವಿಷಯಗಳು : ಗ್ರಂಥ ಪ್ರಕಾಶನ ಮತ್ತು ಮಾರಾಟದ ಸಮಸ್ಯೆ ; ಗ್ರಂಥ ಪ್ರಕಾಶನಕ್ಕೆ ಸರ್ಕಾರ ಮತ್ತು ಸಂಸ್ಥೆಗಳ ನೆರವು ; ಜನತೆಯಲ್ಲಿ ವಾಚನಾಭಿರುಚಿ ಬೆಳೆಸುವ ಕ್ರಮಗಳು ; ಸಹಕಾರಿ ಸಂಸ್ಥೆಗಳ ಮೂಲಕ ಪ್ರಕಾಶನ ; ಮನೆಗೊಂದು ಪುಸ್ತಕ ಭಂಡಾರ, ಗ್ರಂಥ ಪ್ರಕಾಶನದ ಮತ್ತು ಮಾರಾಟದ ವ್ಯವಸ್ಥೆ. ಈ ಎಲ್ಲಾ ಗೋಷ್ಠಿಗಳಲ್ಲೂ ನಾನು ಭಾಗವಹಿಸಿದ್ದೆ.

ಪುಸ್ತಕ ಮತ್ತು ನಾರಾಯಣರವರದು ಅವಿನಾಸಂಬಂಧ. ಪುಸ್ತಕದ ಬಗ್ಗೆ ಎಲ್ಲೇ ಏನೇ ಕಾರ್ಯಕ್ರಮ ನಡೆಯಲಿ ಅಲ್ಲಿ ನಾರಾಯಣರು ಇದ್ದೇ ಇರುತ್ತಿದ್ದರು. ಈಗಲೂ ಇರುತ್ತಾರೆ. ಒಂದು ವರ್ಷದ ಸಾಹಿತ್ಯ ಪ್ರಚಾರ ಯೋಜನೆ ಆಗಸ್ಟ್ ೧೬, ೧೯೭೩ರಂದು ಮುಕ್ತಾಯಗೊಳಿಸಬೇಕಾಗಿದ್ದುದರಿಂದ ಸಾಹಿತ್ಯ ಪ್ರಚಾರ ಪರಿಷತ್ತಿನ ಅಧ್ಯಕ್ಷರಾಗಿದ್ದ ಶ್ರೀ ಜಿ. ನಾರಾಯಣರವರು ವಿಧಾನಸೌಧದ ಬ್ಯಾಂಕ್ವೆಟ್ ಹಾಲಿನಲ್ಲಿ ನ್ಯಾಷನಲ್ ಬುಕ್ ಟ್ರಸ್ಟ್, ಪ್ರಕಾಶಕರ ಸಂಘ, ಅಕಾಡೆಮಿಗಳು, ವಿಶ್ವವಿದ್ಯಾಲಯಗಳು, ಸರ್ಕಾರದ ಪ್ರಕಟನಾ ವಿಭಾಗಗಳು ಹಾಗೂ ಖಾಸಗಿ ಪ್ರಕಾಶಕರುಗಳ ಸಹಯೋಗದೊಡನೆ ಅದ್ದೂರಿಯ ಪುಸ್ತಕ ಪ್ರದರ್ಶನ ಏರ್ಪಡಿಸಿದ್ದರು. ಅದರಲ್ಲಿ ೧೫ ಸಾವಿರಕ್ಕೂ ಹೆಚ್ಚು ಗ್ರಂಥಗಳು ಪ್ರದರ್ಶಿತಗೊಂಡಿದ್ದವು. ಆಗ ನಾನು ಅದರಲ್ಲಿ ಪ್ರಕಾಶಕರ ಸಂಘದ ಪ್ರತಿನಿಧಿಯಾಗಿ, ಲೇಖಕನಾಗಿ, ಪ್ರಕಾಶಕನಾಗಿ ಭಾಗವಹಿಸಿದ್ದೆ. ಈ ಸಂದರ್ಭದಲ್ಲಿ ಅವರ ಹತ್ತಿರ ಸುಳಿಯುವ ಸಂದರ್ಭ ಒದಗಿ ಬಂದಿದ್ದು ಅವರ ಪರಿಚಯ ಗಾಢವಾಗಲು ಕಾರಣವಾಗಿತ್ತು.

ಇದೇ ವರ್ಷ ಖ್ಯಾತ ಸಾಹಿತಿ ಶ್ರೀಮತಿ ನಿರುಪಮಾರವರು ನನ್ನದೊಂದು "ಕಾಗೆಯ ಗೂಡಿನಲ್ಲಿ ಕೋಗಿಲೆ ಹಾಡಿತು" ಎಂಬ ಕಥಾ ಸಂಕಲನವನ್ನು ತಮ್ಮ "ಶ್ರೀ ಪ್ರಕಾಶನ" ವತಿಯಿಂದ ಮುದ್ರಿಸಿದ್ದು, ಅದರ ಬಿಡುಗಡೆ ಸಮಾರಂಭವನ್ನು ೭-೪-೧೯೭೩ರಂದು ಹೋಟೆಲ್ ಏರ್‌ಲೈನ್ಸ್‌ನಲ್ಲಿ ಏರ್ಪಡಿಸಿದ್ದರು. ಇದರ ಅಧ್ಯಕ್ಷತೆಯನ್ನು ಕೇಂದ್ರ ಸರ್ಕಾರದ ಮಂತ್ರಿ ಹಾಗೂ ಖ್ಯಾತ ಸಾಹಿತಿಗಳಾಗಿದ್ದ ಶ್ರೀಮತಿ ಸರೋಜಿನಿ ಮಹಿಷಿಯವರು ವಹಿಸಲಿದ್ದರು. ಅಂದೇ ಶ್ರೀಮತಿ ನಿರುಪಮಾರವರು ನನ್ನನ್ನು ಅವರಿಗೆ ವಿಧ್ಯುಕ್ತವಾಗಿ ಪರಿಚಯಿಸಿದರು. ಜಿ. ನಾರಾಯಣ ಅವರು ಬಿಡುಗಡೆ ಕಾರ್ಯ ನೆರವೇರಿಸಿಕೊಟ್ಟರು. ಒಳ್ಳೆಯ ನುಡಿಗಳನ್ನಾಡಿ ನನ್ನ ಸಾಹಿತ್ಯ ರಚನೆಗೆ ಶುಭ ಆಶಿಸಿದ್ದರು. ದಿನದಿನಕ್ಕೆ ನಮ್ಮ ಪರಿಚಯ ಗಾಢವಾಗಿ, ಆತ್ಮೀಯವಾಗಿ ಪರಿವರ್ತನಗೊಂಡಿದೆ.

೧೯೭೫ನ್ನು 'ಯುನೆಸ್ಕೊ ಅಂತಾರಾಷ್ಟ್ರೀಯ ಮಹಿಳಾವರ್ಷ'ವೆಂದು ಘೋಷಿಸಿತ್ತು. ಆಗ ಪರಿಷತ್ತು ಮಹಿಳೆಯರಿಂದ ಪುಸ್ತಕಗಳನ್ನು ಬರೆಸಿ ಪ್ರಕಟಿಸಿದ್ದಲ್ಲದೆ ಪುಸ್ತಕಗಳ ಪ್ರದರ್ಶನ ಹಾಗೂ ಮಾರಾಟಕ್ಕೂ ವ್ಯವಸ್ಥೆಯನ್ನು ಮಾಡಲಾಗಿತ್ತು. ಶ್ರೀಮತಿ ಸರೋಜಿನಿ ಮಹಿಷಿಯವರ

ನೇತೃತ್ವದಲ್ಲಿ ಮನೆಮನೆಗೂ ಪುಸ್ತಕ ಮಾರಾಟ ಕಾರ್ಯಕ್ರಮ ಸಹ ಏರ್ಪಡಿಸಿತ್ತು. ಇವರಲ್ಲಿ ಡಾ. ಅನುಪಮಾ ನಿರಂಜನ, ಜ.ನ. ಮಂಗಳಾ, ನಿರುಪಮಾ, ಹೇಮಲತಾ ಮಹಿಷಿ, ಬನಶಂಕರಮ್ಮ, ಅನುಸೂಯಾ ರಾವ್ ಮುಂತಾದ ಹಲವರು ಭಾಗವಹಿಸಿದ್ದರು. ಇದಕ್ಕೆ ಶ್ರೀ ನಾರಾಯಣರವರೇ ನೇತೃತ್ವ ವಹಿಸಿದ್ದರು.

೧೯೭೭ ರಲ್ಲಿ ಅದ್ದೂರಿಯಾಗಿ ನಡೆದ ಪರಿಷತ್ತಿನ ವಜ್ರಮಹೋತ್ಸವ ಆಚರಣೆ ಸಂದರ್ಭದಲ್ಲಿ ಪುಸ್ತಕ ಪ್ರದರ್ಶನ, ಪತ್ರಿಕಾ ಪ್ರದರ್ಶನ, ಚಿತ್ರಕಲಾ ಪ್ರದರ್ಶನ ಮೊದಲಾದವುಗಳನ್ನು ಕೋಟೆ ಹೈಸ್ಕೂಲ್ ಆವರಣದಲ್ಲಿ ಏರ್ಪಡಿಸಲಾಗಿತ್ತು. ಆಗ ನಡೆದ ವಿಶಿಷ್ಟ ಕಾರ್ಯಕ್ರಮವೆಂದರೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತರಿಗೆ ಪ್ರಶಸ್ತಿ ಪ್ರದಾನ ಸಮಾರಂಭ. ಪ್ರಥಮಬಾರಿಗೆ ಅದು ಬೆಂಗಳೂರಿನಲ್ಲಿ ನಡೆದಿತ್ತು. ನಾನು 'ಒರಿಯಾ ಕಥೆ'ಗಳನ್ನು ನ್ಯಾಷನಲ್ ಬುಕ್ ಟ್ರಸ್ಟ್‌ಗಾಗಿ ಅನುವಾದಿಸಿ ನೀಡಿದ್ದೆ. ಅದರ ಒಬ್ಬ ಲೇಖಕರಾದ ಗೋಪಿನಾಥ ಮಹಂತಿಯವರನ್ನು ಆಗ ಭೇಟಿ ಮಾಡುವ ಅವಕಾಶ ನನಗೆ ಲಭಿಸಿತ್ತು (೧೯೮೩ರಲ್ಲಿ ಈ ಗ್ರಂಥಕ್ಕೆ ಉತ್ತಮ ಅನುವಾದಕ್ಕಾಗಿ ರಾಜ್ಯ ಸರ್ಕಾರದ ಬಹುಮಾನ ಲಭಿಸಿತು.

ಜಿ. ನಾರಾಯಣ ಅವರು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದಾಗ ೧೯೯೩ನೇ ರಾಜ್ಯೋತ್ಸವವನ್ನು ವಿಭಿನ್ನ ರೀತಿಯಲ್ಲಿ ಆಚರಿಸಲು ತೀರ್ಮಾನಿಸಿದ್ದರು. ಅವರ ಯೋಜನೆಗೆ ಕರ್ನಾಟಕ ಪ್ರಕಾಶಕರ ಸಂಘ ಸ್ಪಂದಿಸಿತು. ನಾರಾಯಣರ ಸಲಹೆ ಮೇರೆಗೆ ಅದ್ಭುತ ರೀತಿಯಲ್ಲಿ ಪುಸ್ತಕ ಪ್ರದರ್ಶನ ಮತ್ತು ಮಾರಾಟ ಕಾರ್ಯಕ್ರಮವನ್ನು, ಪ್ರಕಾಶಕರ ಸಂಘ ಪ್ರೊ. ಹೆಚ್.ಆರ್. ದಾಸೇಗೌಡರ ಅಧ್ಯಕ್ಷತೆಯಲ್ಲಿ ರೂಪಿಸಿತು. ಸಂಪರ್ಕ ನಿರ್ವಾಹಕ ಕಾರ್ಯದರ್ಶಿಯಾಗಿದ್ದ ನನಗೆ, ಶ್ರೀಮತಿ ನಿರುಪಮಾ, ಶ್ರೀ ಶಾನುಭಾಗ್‌ರವರಿಗೆ ವಹಿಸಿಕೊಡಲಾಗಿತ್ತು. ನಾವು ರಾಜ್ಯಾದ್ಯಂತ ಎಲ್ಲಾ ಲೇಖಕರು, ಪ್ರಕಾಶಕರು, ಅಕಾಡೆಮಿಗಳು, ವಿಶ್ವವಿದ್ಯಾಲಯಗಳು – ಕೇಂದ್ರ ಹಾಗೂ ರಾಜ್ಯ ಅಕಾಡೆಮಿಗಳು, ಸಾಹಿತ್ಯ ಪರಿಷತ್ತು, ಲೇಖಕಿಯರ ಸಂಘ ಮುಂತಾಗಿ ಎಲ್ಲಾ ಪ್ರಕಟಣಾ ಸಂಸ್ಥೆಗಳಿಂದ ಪ್ರತಿ ಶೀರ್ಷಿಕೆಯ ಅರುವತ್ತು ಕೃತಿಗಳನ್ನು ತರಿಸಿ ಶ್ರೀಮತಿ ನಿರುಪಮಾರವರ ಮನೆಯಲ್ಲಿ ಅವನ್ನು ೨೦ ಗುಂಪುಗಳಾಗಿ ವಿಂಗಡಿಸಿ ಎಲ್ಲಾ ಗ್ರಂಥಗಳ ಪ್ರದರ್ಶನ ಮತ್ತು ಮಾರಾಟದ ವ್ಯವಸ್ಥೆಯನ್ನು ನಗರದ ಪ್ರಮುಖ ಪ್ರಕಾಶಕರು ಹಾಗೂ ಸಂಘ ಸಂಸ್ಥೆಗಳಿಗೆ ವಹಿಸಿಕೊಟ್ಟೆವು. ಈ ಬೃಹತ್ ಪ್ರಮಾಣದ ಕೆಲಸ ವನ್ನು ನಿರ್ವಹಿಸಲು ನಮಗೆ ಬಹಳ ಜನ ಸ್ವಯಂ ಸೇವಕರು ನೆರವು ನೀಡಲು ಮುಂದಾದರು. ನವೆಂಬರ್ ೧ ರಂದು ನಗರದ ಇಪ್ಪತ್ತು ಸ್ಥಳಗಳಲ್ಲಿ ಈ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟದ ವ್ಯವಸ್ಥೆಯನ್ನು ಮಾಡಿದೆವು. ಎರಡು ದಿನ ಈ ಕಾರ್ಯಕ್ರಮ ಬಹು ವ್ಯವಸ್ಥಿತವಾಗಿ ನಡೆದು ಲಕ್ಷಾಂತರ ರೂಪಾಯಿಯ ವ್ಯಾಪಾರ ನಡೆದಿತ್ತು. ಈ ದಿನಗಳಲ್ಲಿ ಪ್ರತಿ ಬಡಾವಣೆಯಲ್ಲೂ ಸ್ವಯಂ ಸೇವಕರು ಈ ಪುಸ್ತಕಗಳನ್ನು ಮನೆಮನೆಯ ಹತ್ತಿರ ಗಾಡಿಯಲ್ಲಿ, ಕೈಚೀಲಗಳಲ್ಲಿ ಹೊತ್ತು ಪ್ರದರ್ಶಿಸಿದ್ದರು, ಮಾರಾಟ ಮಾಡಿದ್ದರು. ಈ ಕೈಚೀಲಗಳ ವ್ಯವಸ್ಥೆಯನ್ನು ಬಹು ಚೆನ್ನಾಗಿ ಶ್ರೀ ನಾರಾಯಣ್‌ರವರೇ ಪ್ರಾಧಿಕಾರದ ವತಿಯಿಂದ ಮಾಡಿದ್ದರು. ಈ ಕಾರ್ಯಕ್ರಮದ ಸಮಾರೋಪ ಸಮಾರಂಭ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಏರ್ಪಾಡಾಗಿತ್ತು. ಆಗಿನ

ಕರ್ನಾಟಕದ ಮುಖ್ಯಮಂತ್ರಿ ಶ್ರೀ ಎಂ. ವೀರಪ್ಪಮೊಯಿಲಿ ಉದ್ಘಾಟಿಸಿದ್ದರು. ಪುಸ್ತಕ ಮಾರಾಟ / ಪ್ರದರ್ಶನದ ಈ ವ್ಯವಸ್ಥೆ ಅಭೂತಪೂರ್ವವಾದದ್ದೆಂದು ಮುಖ್ಯಮಂತ್ರಿಗಳು ಹೊಗಳಿದರು. ಈ ವ್ಯವಸ್ಥೆ ನಿರ್ವಹಣೆಯಲ್ಲಿ ನಾವು ಅನುಭವಿಸಿದ ಅನುಭವಗಳನ್ನು ನಾನು ವಂದನಾರ್ಪಣೆ ಮಾಡುವಾಗ ತಿಳಿಸಿದೆನಾದರೂ ಈ ಪುಸ್ತಕಗಳನ್ನು ಮಾಲೀಕರಿಗೆ ಹಿಂದಿರುಗಿಸಲು ಹಾಗೂ ಹಣವನ್ನು ತಲುಪಿಸುವಲ್ಲಿ ನಾವು ಅನುಭವಿಸಿದ ತೊಂದರೆಗಳು ಈಗಲೂ ನಮ್ಮ ಮನದಲ್ಲಿ ಹಸಿರಾಗಿವೆ.

ಉಳಿಕೆ ಪುಸ್ತಕಗಳನ್ನು ಸಂಬಂಧಪಟ್ಟವರಿಗೆ ಹಿಂತಿರುಗಿಸುವ ಮುನ್ನ ಇವುಗಳ ಪ್ರದರ್ಶನ / ಮಾರಾಟ ವ್ಯವಸ್ಥೆಯನ್ನು ಪರಿಷತ್ತಿನಲ್ಲಿ ಏಕೆ ಮಾಡಬಾರದೆಂದು ಜಿ. ನಾರಾಯಣರವರು ಸೂಚಿಸಿದಾಗ ನಾವು ೧೦ ದಿನಗಳ ಪರ್ಯಂತ ಈ ಗ್ರಂಥಗಳನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀಕೃಷ್ಣರಾಜೇಂದ್ರ ಭವನದಲ್ಲಿ ನವಕರ್ನಾಟಕ, ನ್ಯಾಷನಲ್ ಬುಕ್ ಟ್ರಸ್ಟ್, ಕ.ಸಾ.ಪ.ನ ನೆರವಿನಿಂದ ಪ್ರದರ್ಶಿಸಿದೆವು. ನಮ್ಮ ನಿರೀಕ್ಷೆಗೆ ಮೀರಿ ಅಲ್ಲಿ ಪುಸ್ತಕಗಳು ಮಾರಾಟಗೊಂಡು ಲೇಖಕರಿಗೆ / ಪ್ರಕಾಶಕರುಗಳಿಗೆ ಉಪಕಾರವಾಗಿತ್ತು.

ಎಲ್ಲಿ ಪುಸ್ತಕಗಳಿರುತ್ತವೆಯೋ ಅಲ್ಲೆಲ್ಲಾ ನಾರಾಯಣ್ ಇದ್ದೇ ಇರುತ್ತಾರೆ ಎಂಬುದು ನಾವೆಲ್ಲಾ ಕಂಡ ಕಟು ಸತ್ಯ.

೧೯೯೧ರಲ್ಲಿ ಪರಿಷತ್ತು ಆಚರಿಸಿದ ಅಮೃತ ಮಹೋತ್ಸವ ಆಚರಣೆಯಲ್ಲಿ ಪ್ರಕಾಶಕರ ಸಂಘ ಮತ್ತು ನ್ಯಾಷನಲ್ ಬುಕ್ ಟ್ರಸ್ಟ್ ಸಹಯೋಗದೊಡನೆ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ರಾಷ್ಟ್ರೀಯ ಪುಸ್ತಕ ಮೇಳ ಏರ್ಪಾಡಾಗಿತ್ತು. ಇದರ ಉದ್ಘಾಟನೆ ಸಹ ಪುಸ್ತಕ ಪ್ರೇಮಿ ಹಾಗೂ ಸಾಹಿತಿಗಳಾದ ಶ್ರೀ ವೀರಪ್ಪ ಮೊಯಿಲಿಯವರಿಂದಲೇ ನಡೆದಿತ್ತು. ಈ ಯೋಜನೆ ಸಹ ನಾರಾಯಣ್‌ರವರೇ ರೂಪಿಸಿದ್ದರು. ಅವರಿಲ್ಲದೆ ಪುಸ್ತಕಕ್ಕೆ ಸಂಬಂಧಪಟ್ಟ ಯಾವ ಕಾರ್ಯಕ್ರಮವೂ ನಡೆದದ್ದು ಇಲ್ಲ. ಕರ್ನಾಟಕ ಮಕ್ಕಳ ಸಾಹಿತ್ಯ ಪರಿಷತ್ತು ಮತ್ತು ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್ ನಡೆಸಿದ (೧೯೯೩) ಸಮಾರಂಭದಲ್ಲೂ ಪುಸ್ತಕ ಪ್ರದರ್ಶನ ಏರ್ಪಾಡಾಗಿತ್ತು. ಸಮಾರೋಪ ಭಾಷಣ ಜಿ. ನಾರಾಯಣರವರಿಂದಲೇ ನಡೆದಿತ್ತು. ಕರ್ನಾಟಕ ಸಾಹಿತ್ಯ ಅಕಾಡೆಮಿ, ಪ್ರಕಾಶಕರ ಸಂಘ (೧೯೯೪) ಸಂಯುಕ್ತಾಶ್ರಯದಲ್ಲಿ ಬಾಪ್ಕೋ ಸಂಸ್ಥೆಯ ಆವರಣದಲ್ಲಿ ನಡೆಸಿದ 'ಪುಸ್ತಕೋದ್ಯಮದ ಸ್ವರೂಪ–ವಿಚಾರ ಸಂಕಿರಣ'ದ ಸಮಾರೋಪ ಭಾಷಣ ಜಿ. ನಾರಾಯಣರವರೇ ನಡೆಸಿಕೊಟ್ಟಿದ್ದರು. ಆಗ ಅಖಿಲ ಭಾರತ ಪುಸ್ತಕ ಪ್ರದರ್ಶನ ನಡೆದಿತ್ತು.

೧೯೯೮ರಲ್ಲಿ ಡಾ. ಎಚ್.ಜಿ. ಲಕ್ಕಪ್ಪಗೌಡರು ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿದ್ದಾಗ ಅವರು "ಶಾಲೆಯಿಂದ ಶಾಲೆಗೆ', "ಕಾಲೇಜಿನಿಂದ ಕಾಲೇಜಿಗೆ' ಕಾರ್ಯಕ್ರಮ ಹಮ್ಮಿಕೊಂಡು ಯಶಸ್ವಿಯಾಗಿ ಕೆಲ ತಿಂಗಳು ನಡೆಸಿದ್ದರು. ಶ್ರೀನಗರದ ಪಿ.ಇ.ಎಸ್. ಕಾಲೇಜಿನಲ್ಲಿ ನಾವು (ಬನಶಂಕರಿ ಸಾಂಸ್ಕೃತಿಕ ಸಂಘ) ಪುಸ್ತಕ ಪ್ರದರ್ಶನ ಮತ್ತು ಮಾರಾಟ ಕಾರ್ಯಕ್ರಮ ನಡೆಸಿಕೊಟ್ಟಿದ್ದೆವು. ಆಗಲೂ ಜಿ. ನಾರಾಯಣರವರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಡಾ. ಲಕ್ಕಪ್ಪಗೌಡರು ಅಧ್ಯಕ್ಷ ಪದವಿಯಿಂದ ನಿವೃತ್ತರಾಗುವುದಕ್ಕೆ ಕೆಲದಿನಗಳ ಮುಂಚೆ ಚಾಮರಾಜಪೇಟೆಯಲ್ಲಿ "ಮನೆಮನೆಗೆ ಪುಸ್ತಕ' ಯೋಜನೆಯನ್ನು ಜಿ. ನಾರಾಯಣರವರ ನೇತೃತ್ವದಲ್ಲಿ ಏರ್ಪಡಿಸಿದ್ದರು. ಅದೂ ಬಹು ಯಶಸ್ವಿಯಾಗಿತ್ತು. ಸಾವಿರಾರು ರೂಪಾಯಿಗಳ ಪುಸ್ತಕ ಮಾರಾಟವಾಗಿತ್ತು.

ಪುಸ್ತಕ ಸಂಸ್ಕೃತಿಯ ಸಮರ್ಥ ಪ್ರವರ್ತಕ ಜಿ. ನಾರಾಯಣರೆಂಬುದರಲ್ಲಿ ಸಂದೇಹವಿಲ್ಲ.

ಪುಸ್ತಕ ಸಂಸ್ಕೃತಿ ಸಂಪನ್ನವಾಗಿ ಬೆಳೆಯಲಿ. ಶ್ರೀ ಜಿ. ನಾರಾಯಣ ಆರೋಗ್ಯದಿಂದಿದ್ದು ಶತವರ್ಷ ಸುಖದಿಂದ ಬಾಳಿ ನಲಿಯಲಿ ಎಂದು ಹಾರ್ದಿಕವಾಗಿ ಆಶಿಸುತ್ತೇನೆ.

❑

ವಿದ್ಯಾ ಸಂಸ್ಥೆಯ ಸ್ಥಾಪಕರಾಗಿ ನಾಡೋಜ ನಾರಾಯಣ

■ ಡಾ. ಕೆ.ವಿ. ಚಂದ್ರಣ್ಣಗೌಡ

ಸರಳ ಸಜ್ಜನಿಕೆಯ ಸಾಕಾರಮೂರ್ತಿಯಾಗಿ ಇಂದು ನಮ್ಮೊಡನಿರುವವರೇ ಗಾಂಧಿವಾದಿ ನಾಡೋಜ ಜಿ. ನಾರಾಯಣ ಅವರು. ಬೆಂಗಳೂರು ಮಹಾನಗರ ಪಾಲಿಕೆಯ ಮಹಾಪೌರರಾಗಿ ದುಡಿದ ಸಂದರ್ಭದಲ್ಲಿ ತೀರಾ ಹಿಂದುಳಿದ ಪ್ರದೇಶದಲ್ಲಿ ಶಿಕ್ಷಣ ಸಂಸ್ಥೆಗಳನ್ನು ಆರಂಭ ಮಾಡಬೇಕೆಂಬ ತುಂಬು ಹೇರಾಸೆ, ಮಹತ್ವಾಕಾಂಕ್ಷೆ ಹೊಂದಿದ್ದ ವ್ಯಕ್ತಿಯಾಗಿ-ಶಕ್ತಿಯಾಗಿ ದುಡಿದಿದ್ದಾರೆ. ಜನರ ಆಶೋತ್ತರಗಳಿಗೆ ನಿತ್ಯ ಸ್ಪಂದಿಸಿದ್ದಾರೆ. ಬೆಂಗಳೂರು ಮೈಸೂರು ರಸ್ತೆಯ ಹೆದ್ದಾರಿಯಲ್ಲಿರುವ ಬ್ಯಾಟರಾಯನಪುರ ದಲ್ಲಿ ಒಂದು ಶಿಕ್ಷಣ ಸಂಸ್ಥೆ ಅಗತ್ಯವೆಂದು ಮನಗಂಡು ಅದರಲ್ಲಿಯೂ ಆ ಸ್ಥಳದ ಹೆಣ್ಣು ಮಕ್ಕಳ ಬವಣೆ ಅವರಿಗೆ ದೊರೆಯಬೇಕಾದ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ ಎಂದು ಅರಿತ ಮೇಯರ್‌ರವರು 'ಶ್ರೀ ಶಾರದ ವಿದ್ಯಾಪೀಠ' ಎಂಬ ಹೆಸರಿನ ಸಂಸ್ಥೆಯನ್ನು ಆರಂಭಿಸಲು ಸ್ಥಳೀಯರಿಗೆ ಪ್ರೋತ್ಸಾಹ ನೀಡಿದರು.

ಶ್ರೀ ಗಾಳಿಆಂಜನೇಯ ಸ್ವಾಮಿ ದೇವಸ್ಥಾನದ ಆವರಣ ದಲ್ಲಿ ಹೆಣ್ಣುಮಕ್ಕಳಿಗಾಗಿಯೇ 'ಶ್ರೀ ಶಾರದಾ ವಿದ್ಯಾಪೀಠ' ಆರಂಭಿಸಿದರು. ಮೈಸೂರು ರಸ್ತೆಯಲ್ಲಿರುವ ಬಹುತೇಕ ಪ್ರದೇಶಗಳು ತೀರಾ ಹಿಂದುಳಿದಿದ್ದು ಬಡ ಕೂಲಿ ಕಾರ್ಮಿಕರೇ ಹೆಚ್ಚು ವಾಸ ಮಾಡುವ ಸ್ಥಳವಾಗಿತ್ತು. ೧೯೬೬ರಲ್ಲಿ ಆರಂಭಿಸಿದ ಈ ವಿದ್ಯಾಪೀಠದಲ್ಲಿ ಸುಮಾರು ಪದಿನೈದರಿಂದ ಇಪ್ಪತ್ತು ವಿದ್ಯಾರ್ಥಿನಿಯರು ವಿದ್ಯಾಭ್ಯಾಸ ಮಾಡುತ್ತಿದ್ದರು. ಕೃಷ್ಣರಾಜ ಮಾರುಕಟ್ಟೆಯವರೆಗೆ ಹೆಣ್ಣು

ಮಕ್ಕಳು ಪ್ರಯಾಣ ಬೆಳೆಸಿ, ವಿದ್ಯಾಭ್ಯಾಸ ಮಾಡುವುದು ತುಂಬ ದುಸ್ತರವಾದ ಕಾರಣ, ಸ್ಥಳೀಯವಾಗಿ ಈ ವಿದ್ಯಾ ಸಂಸ್ಥೆಯನ್ನು ಪ್ರಾರಂಭಿಸಿ ಜನ-ಮನದಲ್ಲಿ ಮೇಯರ್ ನಾರಾಯಣ ಅವರು ತುಂಬು ಗೌರವಕ್ಕೆ ಪಾತ್ರರಾದರು. ಸುಮಾರು ವರ್ಷಗಳ ಕಾಲ ಸದರಿ ವಿದ್ಯಾಸಂಸ್ಥೆಯ ಅಧ್ಯಕ್ಷರಾಗಿ, ನಂತರ ಗೌರವ ಅಧ್ಯಕ್ಷರಾಗಿ, ಈಗ ಸಂಸ್ಥಾಪಕರಾಗಿ ಜ್ಞಾನದೀಪ್ತಿಯನ್ನು ಬೆಳಗಿಸಿದ ಮಹಾಚೇತನವಾಗಿದ್ದಾರೆ.

ಅಂದು ತಮ್ಮ ಸಮಕಾಲೀನರ ಒಡನಾಟದಲ್ಲಿ ಸ್ಥಳೀಯರನ್ನು ಒಟ್ಟುಗೂಡಿಸಿದ ನಾರಾಯಣ ಅವರು ನಂತರ ಎರಡನೇ ಹಂತದ ಯುವಕರನ್ನು ಬೆಳೆಸಿ ಸಂಸ್ಥೆಯನ್ನು ಮುನ್ನಡೆಸಲು ಅನುವು ಮಾಡಿಕೊಟ್ಟಿದ್ದಾರೆ. ಶ್ರೀ ಗಾಳಿಆಂಜನೇಯಸ್ವಾಮಿ ದೇವಸ್ಥಾನದ ಆವರಣದಿಂದ ಅನಂತರ ಶ್ರೀ ರಾಮಪ್ಪ ಆಶ್ರಯದಲ್ಲಿ ಬೆಳೆದ ವಿದ್ಯಾಪೀಠವು ಇಂದು ದೊಡ್ಡ ಆಲದಮರದಂತೆ ಕಂಗೊಳಿಸುತ್ತಿದೆ. ಪ್ರತಿವರ್ಷ ಸಾವಿರಾರು ವಿದ್ಯಾರ್ಥಿಗಳಿಗೆ ಜ್ಞಾನದಾಸೋಹ ನೀಡುತ್ತಿರುವ ಶ್ರೀ ಶಾರದ ವಿದ್ಯಾಪೀಠ, ಮೈಸೂರು ರಸ್ತೆಯಲ್ಲಿನ ಪ್ರತಿಷ್ಠಿತ ವಿದ್ಯಾಸಂಸ್ಥೆಗಳಲ್ಲಿ ಒಂದಾಗಿದೆ. ಮಾಂಟೆಸರಿಯಿಂದ ಕೂಡಿರುವ ವಿದ್ಯಾಪೀಠ ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲೆ, ಪದವಿಪೂರ್ವ, ಪದವಿ, ಜೆ.ಒ.ಸಿ., – ಹೀಗೆ ಹಲವಾರು ಶಾಖೆಗಳನ್ನು ಹೊಂದಿದ್ದು ಸುಮಾರು ಮೂರು ಸಾವಿರ ವಿದ್ಯಾರ್ಥಿಗಳಿಗೆ ಜ್ಞಾನಾಮೃತ ಸಿಂಚನ ಮಾಡುತ್ತಿದೆ. ಸ್ವಂತ ಕಟ್ಟಡ ಪಡೆದಿರುವ ನಮ್ಮೀ ಸಂಸ್ಥೆ, ಕನ್ನಡ ಮಾಧ್ಯಮಕ್ಕೆ ಮೊದಲಿನಿಂದಲೂ ಪ್ರಥಮ ಆದ್ಯತೆ ನೀಡಿದೆ. ಕನ್ನಡ ಮಾಧ್ಯಮದಲ್ಲಿ ಸುಮಾರು ಹದಿನೈದು ವಿಭಾಗಗಳನ್ನು ಹೊಂದಿದ್ದು-ನುಡಿಯ ಬಗೆಗೆ ಅನನ್ಯ ಸೇವೆ ಸಲ್ಲಿಸುತ್ತಾ ಬಂದಿದೆ.

ನಾಡೋಜ ಜಿ. ನಾರಾಯಣ ಅವರು ನಾಡು-ನುಡಿಯ ಬಗೆಗೆ ನಿತ್ಯ ನಿರಂತರ ಸೇವೆ ಮಾಡುತ್ತಾ ಬಂದಿದ್ದು, ತಾವು ಸ್ಥಾಪಿಸಿ ಬೆಳೆಸಿದ ವಿದ್ಯಾಸಂಸ್ಥೆಯು ಕೂಡ ಅದರಲ್ಲಿ ಚಾಚೂ ತಪ್ಪದೆ ತನ್ನ ಪಾಲನ್ನು ನಾಡು-ನುಡಿಗಾಗಿ ಅರ್ಪಿಸುತ್ತಿದೆ. ಕಡಿಮೆ ಶುಲ್ಕವನ್ನು ಪಡೆಯುವುದರ ಮೂಲಕ ಬಡವರಿಗೆ, ಕೂಲಿಕಾರರಿಗೆ, ಹಿಂದುಳಿದವರಿಗೆ, ಕಾರ್ಮಿಕರಿಗೆ ಪರಿಶಿಷ್ಟ-ಜಾತಿ ಮತ್ತು ಪಂಗಡದವರಿಗೆ, ಆರ್ಥಿಕವಾಗಿ ಹಿಂದುಳಿದವರಿಗೆ ಶಿಕ್ಷಣ ಕೊಡುವಲ್ಲಿ ತನ್ನದೆ ಆದ ದಾಪುಗಾಲಿಡುತ್ತಿದೆ. ಶ್ರೀ ಜಿ. ನಾರಾಯಣ ಅವರು ಸ್ಥಾಪಿಸಿದ ಸಂಸ್ಥೆ – ಅವರ ಧ್ಯೇಯ, ಆದರ್ಶ, ತತ್ವಗಳಿಗೆ – ಭಂಗ ಬಾರದ ರೀತಿಯಲ್ಲಿ ಕಾರ್ಯತತ್ಪರವಾಗಿದೆ. ಗಿಡ ನೆಟ್ಟು ನೀರೆರೆದು ಬೆಳೆಸಿದ ಶ್ರೀ ಶಾರದ ವಿದ್ಯಾಪೀಠ – ನಾರಾಯಣ ಅವರ ಶಿಕ್ಷಣದ ಕನಸನ್ನು ಸಾಕಾರಗೊಳಿಸುವಲ್ಲಿ ನಿತ್ಯ ಪ್ರಯತ್ನಿಸುತ್ತಲೇ ನಡೆದಿದೆ. ಸುಮಾರು ನೂರರಿಂದ ನೈವತ್ತು ಶಿಕ್ಷಕರನ್ನು ಹೊಂದಿರುವ ಈ ಸಂಸ್ಥೆ, ಸಾಹಿತ್ಯ ಮತ್ತು ಸಾಂಸ್ಕೃತಿಕವಾಗಿಯೂ ತುಂಬ ಮಹತ್ವದ ಸಾಧನೆ ಮಾಡುತ್ತಿದೆ. ಮಕ್ಕಳ ಸುಪ್ತ ಪ್ರತಿಭೆಗೆ ಸೂಕ್ತ ಅವಕಾಶ ಕಲ್ಪಿಸಿಕೊಟ್ಟು ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿಯೂ ಯುವ ಪ್ರತಿಭೆಗಳು ಅರಳುವಂತೆ ಮಾಡಿದೆ. ಕ್ರೀಡೆಗೆ ಉತ್ತೇಜನ ನೀಡುವುದು, ಕ್ರೀಡೆಯಲ್ಲಿ ಆಸಕ್ತಿ ಹೊಂದಿರುವವರನ್ನು ಪ್ರೋತ್ಸಾಹಿಸುವ ಮಹತ್ವದ ಯೋಜನೆಗಳನ್ನು ತನ್ನ ಮುಂದಿರಿಸಿಕೊಂಡಿದೆ.

ಕಾಲೇಜು ಮಟ್ಟದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಅಡಿಯಲ್ಲಿ ಹಲವಾರು ಗ್ರಾಮಗಳಿಗೆ ತನ್ನ ಪ್ರಮಾಣಿಕ ಸೇವೆ ಸಲ್ಲಿಸುತ್ತಾ ಬಂದಿದೆ. ನಾಡೋಜ ಜಿ. ನಾರಾಯಣ ಅವರು ಸ್ಥಾಪಿಸಿದ ಶ್ರೀ ಶಾರದ ವಿದ್ಯಾಪೀಠವು-ಜ್ಞಾನ-ವಿಜ್ಞಾನದೆಡೆಗೆ ದಾಪುಗಾಲು ಹಾಕುತ್ತಾ, ಜನ-ಮನದಲ್ಲಿ ತನ್ನದೆ ಆದ ವಿಶಿಷ್ಠ ಸಾಧನೆ ಮಾಡುತ್ತಿದೆ ಎಂಬ ಪ್ರಶಂಸೆಗೆ ಪಾತ್ರವಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಪತ್ರಿಕಾ ಅಕಾಡೆಮಿ ಅಧ್ಯಕ್ಷರಾಗಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ, ಹಲವಾರು ಸಂಘ-ಸಂಸ್ಥೆಗಳಲ್ಲಿ ಅಧ್ಯಕ್ಷ, ಗೌರವ ಅಧ್ಯಕ್ಷರಾಗಿ ಪ್ರಮಾಣಿಕ ಸೇವೆ ಸಲ್ಲಿಸಿ ನಮ್ಮೊಡನಿರುವ ಚೇತನ ಜಿ. ನಾರಾಯಣ ಅವರು ಶಿಕ್ಷಣ ಕ್ಷೇತ್ರಕ್ಕೂ ತಮ್ಮ ಕೊಡುಗೆ ನೀಡಿದ್ದಾರೆ. ಬೆಂಗಳೂರು ಮಹಾನಗರ ಪಾಲಿಕೆಯ ಪೂಜ್ಯ ಮೇಯರ್ ಆಗಿದ್ದ ಕಾಲದಲ್ಲಿ ಪಾಲಿಕೆಯಿಂದ ಶಿಕ್ಷಣ ಸಂಸ್ಥೆಯನ್ನು ಆರಂಭಿಸಲಾಗದ ಪ್ರದೇಶದಲ್ಲಿ ಸ್ಥಳೀಯವಾಗಿ ಉತ್ತೇಜಿಸಿ, ಅವರ ಸಹಕಾರ ಸಹಾಯದಿಂದ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿರುವ ಒಬ್ಬ ಶ್ರೇಷ್ಠ ಜ್ಞಾನದಾಸೋಹಿ.

ನಾಡೋಜ ಜಿ. ನಾರಾಯಣ ಅವರ ಬಹುಮುಖಿ ಕಾರ್ಯಬಾಹುಳ್ಯ ಯುವ ಜನತೆಗೆ ಮಾರ್ಗದರ್ಶಕವಾಗಿದೆ. ಬಡಜನತೆಗೆ ನೆರವು ನೀಡಿದೆ. ಕಲಿಕೆಗೆ ದಾರಿ ದೀಪವಾಗಿದೆ. ಮೈಸೂರು ರಸ್ತೆಯ ಬ್ಯಾಟರಾಯನಪುರ, ಬಾಪೂಜಿನಗರ, ದೀಪಾಂಜಲಿನಗರ, ನಾಯಂಡಹಳ್ಳಿ, ಪಂತರಪಾಳ್ಯ, ಆವಲಹಳ್ಳಿ, ಐಯ್ಯಣ್ಣ ಶೆಟ್ಟಿ ಬಡಾವಣೆ, ಗುಡ್ಡದಹಳ್ಳಿ, ಕಸ್ತೂರಿಬಾ ನಗರ – ಹೀಗೆ ಹಲವಾರು ಪ್ರದೇಶದ ಹೆಣ್ಣು ಮಕ್ಕಳಿಗೆ ತಮ್ಮ ವಿದ್ಯಾಭ್ಯಾಸ ಮುಂದುವರಿಸಲು ಶ್ರೀ ಶಾರದ ವಿದ್ಯಾಪೀಠ ತುಂಬ ನೆರವು ನೀಡಿದೆ. ಈ ಪ್ರದೇಶದ ಹೆಣ್ಣು ಮಕ್ಕಳು ಎಲ್ಲೇ ಇದ್ದರೂ ಶ್ರೀ ಶಾರದ ವಿದ್ಯಾಪೀಠವನ್ನು ನೆನೆಯುತ್ತಾರೆ. ಶ್ರೀ ಶಾರದ ವಿದ್ಯಾಪೀಠದ ಆತ್ಮವೇ ನಮ್ಮೀ ಜಿ. ನಾರಾಯಣ ಅವರಾಗಿದ್ದಾರೆ. ಸಮಾಜಮುಖಿಯಾದ ಶ್ರೀಯುತರು ಹಲವಾರು ರೀತಿಯ ಆಚಂದ್ರಾರ್ಕ ಕೆಲಸಗಳನ್ನು ಮಾಡುವುದರ ಮುಖಾಂತರ ನಮ್ಮೆಲ್ಲರಿಗೂ ಆದರ್ಶಪ್ರಾಯರಾಗಿದ್ದಾರೆ.

ಶ್ರೀ ಜಿ. ನಾರಾಯಣ ಅವರು ನಮ್ಮ ಪ್ರೀತಿ-ವಿಶ್ವಾಸ-ಗೌರವ ಆದರಗಳಿಗೆ ಪಾತ್ರರಾಗಿದ್ದು ಶ್ರೀ ಶಾರದಾ ವಿದ್ಯಾಪೀಠ ಆರಂಭವಾದ ಸಂದರ್ಭದಿಂದಲೂ ಇದ್ದ ಆಡಳಿತ ಮಂಡಳಿ ಮತ್ತು ಪ್ರಸ್ತುತ ಇಂದಿರುವ ಆಡಳಿತ ಮಂಡಳಿಯವರೆಲ್ಲರೂ ಕೂಡ ಶ್ರೀಯುತರಿಗೆ ಪ್ರಾಮಾಣಿಕ ನುಡಿಮುತ್ತುಗಳಲ್ಲಿ ಅಭಿನಂದನೆ ಅರ್ಪಿಸುತ್ತಿದ್ದೇವೆ.

❑

ಶೈಕ್ಷಣಿಕ ಚಿಂತಕ ಹಾಗೂ ಶ್ರೀ ಶಾರದಾ ವಿದ್ಯಾ ಪೀಠ ಸಂಸ್ಥಾಪಕರು.

■ ಎಂ. ಪುಟ್ಟಸ್ವಾಮಿ

ಬ್ಯಾಟರಾಯನಪುರ, ಮೈಸೂರು ರಸ್ತೆ, ಬೆಂಗಳೂರು ೧೯೬೭ರಲ್ಲಿ ಅತ್ಯಂತ ಕುಗ್ರಾಮವಾಗಿದ್ದು ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಹಿಂದುಳಿದ ಪ್ರದೇಶವಾಗಿತ್ತು. ಈ ಗ್ರಾಮದಲ್ಲಿ ಆರ್ಥಿಕವಾಗಿ ಹಿಂದುಳಿದವರು, ಅಲ್ಪಸಂಖ್ಯಾತರು, ದಿನಗೂಲಿ ಕಾರ್ಮಿಕರೇ ಹೆಚ್ಚಾಗಿ ವಾಸಿಸುತ್ತಿದ್ದರು. ಇಲ್ಲಿನ ಜನ ಸಮುದಾಯದಲ್ಲಿ ವಿದ್ಯಾವಂತರ ಸಂಖ್ಯೆ ಅತ್ಯಂತ ತೀರ ವಿರಳ.

ಈ ಗ್ರಾಮ ವೃಷಭಾವತಿ ನದಿಯ ದಂಡೆಯ ಮೇಲೆ, ಶ್ರೀ ಗಾಳಿ ಆಂಜನೇಯ ಸ್ವಾಮಿ ಸನ್ನಿಧಿಯಲ್ಲಿ ಬೆಳೆದಿದ್ದರೂ ಈ ಕುಗ್ರಾಮದಲ್ಲಿ ಜನರ ವೃತ್ತಿ ವ್ಯವಸಾಯವಾಗಿತ್ತು. ಈ ಗ್ರಾಮದ ನೆರೆಯಲ್ಲಿ ದೀಪಾಂಜಲಿನಗರ, ಅತ್ತಿಗುಪ್ಪೆ, ಬಾಪೂಜಿನಗರ, ಗುಡ್ಡದಹಳ್ಳಿ, ಆವಲಹಳ್ಳಿ, ನಾಯಂಡಹಳ್ಳಿ ಮುಂತಾದ ಗ್ರಾಮಗಳಿವೆ. ಈ ಎಲ್ಲಾ ಹಳ್ಳಿಗಳು ಶೈಕ್ಷಣಿಕವಾಗಿ ಹಿಂದುಳಿದಿದ್ದು, ವಿದ್ಯಾಭ್ಯಾಸಕ್ಕೆ ಸುಮಾರು ೮-೧೦ ಕಿ.ಮೀ ದೂರ ಹೋಗಿ ಬರಬೇಕಾಗಿತ್ತು. ಆಗಿನ್ನು ನಗರ ಸಾರಿಗೆಯು ಇರಲಿಲ್ಲ.

ಶ್ರೀಮಂತ ವರ್ಗದವರ ಮಕ್ಕಳ ಪಾಲಾಗಿದ್ದ ಶಿಕ್ಷಣ ಹೆಣ್ಣು ಮಕ್ಕಳಿಗಂತೂ ಕನಸಿನ ಮಾತಾಗಿತ್ತು. ಇದೇ ಸಂದರ್ಭದಲ್ಲಿ "ದೇಶಹಳ್ಳಿ" ಎಂಬ ಗ್ರಾಮದಲ್ಲಿ ಜನಿಸಿ ಸರಳ ಜೀವನದ, ಸಜ್ಜನಿಕೆಯ, ಭಾಷಾದಾರ್ಶನಿಕರೂ ಆದಂತಹ ಗಾಂಧೀವಾದಿ **"ಶ್ರೀ ಜಿ. ನಾರಾಯಣ"** ವೈವಾಹಿಕ ಜೀವನಕ್ಕಾಗಿ ಬ್ಯಾಟರಾಯನಪುರದ

ಸಂಬಂಧವನ್ನು ಬೆಳೆಸಿಕೊಂಡಿದ್ದರು. ಅಂತೆಯೇ ಬೆಂಗಳೂರು ನಗರಪಾಲಿಕೆಯಲ್ಲಿ ಪೂಜ್ಯ ಮಹಾಪೌರರಾಗಿದ್ದರು.

ಬ್ಯಾಟರಾಯನಪುರದ ಹಲವಾರು ಸವಲತ್ತುಗಳನ್ನು ಪೂರೈಸಲು ಈ ಗ್ರಾಮದ ಪ್ರಮುಖರ ಸ್ನೇಹವನ್ನು ಸಂಪಾದಿಸಿ ಶೈಕ್ಷಣಿಕ ವಿಚಾರದ ಬಗ್ಗೆ ಚಿಂತಿಸಿ ಆಲೋಚಿಸಿದರು. ಹೆಣ್ಣುಮಕ್ಕಳ ಸಮೂಹಕ್ಕೆ ಶಿಕ್ಷಣ ಅಗತ್ಯ ಎಂಬುದನ್ನು ಅರಿತರು. ಊರಿನ ಪ್ರಮುಖರ ನೆರೆಯ ಗ್ರಾಮಸ್ಥರ ಸಹಕಾರವನ್ನು ಪಡೆದು ೧೯೬೭ರಲ್ಲಿ **ಶ್ರೀ ಶಾರದ ವಿದ್ಯಾಪೀಠ** ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಈ ವಿದ್ಯಾಪೀಠದ ಆಶ್ರಯದಲ್ಲಿ "ಶ್ರೀ ಶಾರದ ಬಾಲಿಕೆಯರ ಪ್ರೌಢಶಾಲೆ"ಯನ್ನು ೧೯೬೭ರಲ್ಲಿ ಸ್ಥಾಪಿಸಿದರು. ಈ ಶಾಲೆಗೆ ಯಾವುದೇ ನಿವೇಶನವಾಗಲಿ ಕಟ್ಟಡವಾಗಲಿ ಇರಲಿಲ್ಲ. ಆಗ ಗಾಳಿ ಆಂಜನೇಯ ದೇವಸ್ಥಾನದ ಪ್ರಧಾನ ಆಗಮಿಕರಾಗಿದ್ದ ಪ್ರೊ. ವೈ.ಆರ್. ವಾಸುದೇವ ಭಟ್ಟಾಚಾರ್ಯರ ಸಹಕಾರದೊಂದಿಗೆ ದೇವಸ್ಥಾನದ ಸಣ್ಣ ಕೊಠಡಿಯಲ್ಲಿ ಪ್ರಾರಂಭವಾಯಿತು. ಅಂದು ೧೨ ಮಂದಿ ವಿದ್ಯಾರ್ಥಿನಿಯರು ೩ ಮಂದಿ ಉಪಾಧ್ಯಾಯರಿಂದ ಪ್ರಾರಂಭವಾದ ಈ ಸಂಸ್ಥೆ ಈಗ ಹಲವಾರು ವಿಭಾಗಗಳನ್ನು ಪಡೆದಿದ್ದು ಸುಮಾರು ೨೦೦೦ ವಿದ್ಯಾರ್ಥಿಗಳು ಶೈಕ್ಷಣಿಕ ನೆರವು ಪಡೆಯುತ್ತಿದ್ದು ೮೦ಕ್ಕೂ ಹೆಚ್ಚು ಅಧ್ಯಾಪಕವರ್ಗದವರು ಸೇವೆ ಸಲ್ಲಿಸುತ್ತಿದ್ದಾರೆ. ಬ್ಯಾಟರಾಯನಪುರ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರ್ಪಡೆಯಾಗಿ ಇಂದು ಪ್ರತಿಷ್ಠಿತ ಬಡಾವಣೆಯಾಗಿದೆ.

❑

ಕಲಾಪೋಷಕ :
ಶ್ರೀ ಜಿ. ನಾರಾಯಣ

■ ಎಂ.ಆರ್.ಸತ್ಯನಾರಾಯಣ

೧೯೭೬-ಕನ್ನಡ ಸಾಹಿತ್ಯ ಪರಿಷತ್ತು ತನ್ನ ವಜ್ರಮಹೋತ್ಸವವನ್ನ ಆಚರಿಸುತ್ತಿದ್ದ-ಸಂದರ್ಭ. ಆ ವರ್ಷದಲ್ಲಿ ಗಮಕ ಅಧ್ಯಾಪಕರ ಶಿಕ್ಷಣ ಶಿಬಿರದ ಮುಕ್ತಾಯ ಸಮಾರಂಭ. ದಿನಾಂಕ ೫-೭-೧೯೭೬ರಂದು ಪರಿಷತ್ತಿನಲ್ಲಿ ಶಿಬಿರದ ವಿದ್ಯಾರ್ಥಿಗಳ ಸಂತೋಷಕೂಟ. ನಾನು ಮೊತ್ತಮೊದಲಿಗೆ ಜಿ. ನಾರಾಯಣ ಅವರನ್ನು ಕಂಡ ದಿನವೂ ಅದೇ ಆಗಿತ್ತು. ಶಿಬಿರದ ನಿರ್ದೇಶಕರು ಸುವಿಖ್ಯಾತ ಗಮಕಿಗಳಾದ ಎಂ. ರಾಘವೇಂದ್ರರಾಯರು.

ಪರಿಷತ್ತಿಗೂ ಗಮಕ ಕಲೆಗೂ ಇದ್ದ ದಶಕಗಳ ನಂಟು ಜಿ. ನಾರಾಯಣ ಅವರ ಕಾಲದಲ್ಲಿ ಮುಂದುವರೆದದ್ದೇ ಅಲ್ಲದೆ ಗಮಕ ತರಗತಿಗಳು ದಾಖಲೆ ಪ್ರಮಾಣದಲ್ಲಿ ನಡೆದು ಸುಮಾರು ೧೦೦೦೦ ವಿದ್ಯಾರ್ಥಿಗಳು ನಾಡಿನಾದ್ಯಂತ ಪರೀಕ್ಷೆ ತೆಗೆದುಕೊಂಡದ್ದು ಇಂದು ಇತಿಹಾಸವಾಗಿದೆ ! ಶ್ರೀ ಜಿ. ನಾರಾಯಣ ಮತ್ತು ಶ್ರೀ ಎಂ.ರಾಘವೇಂದ್ರರಾಯರ ಜೋಡಿ ಹೇಗಿತ್ತೆಂದರೆ ಗಮಕಕ್ಕೆ ಸಂಗೀತ-ಸಾಹಿತ್ಯದ ಸುಮಧುರ ಬಾಂಧವ್ಯ ಹೇಗೋ ಹಾಗೇ ಇತ್ತು ಎನ್ನಬಹುದು. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕಾಲಕ್ರಮೇಣ ಗಮಕ ಸೊರಗುತ್ತಿರುವುದನ್ನು ಕಂಡು ಮನನೊಂದ ರಾಘವೇಂದ್ರರಾಯರು ಈ ಕಲೆಗೆ ಪ್ರತ್ಯೇಕವಾದ ರಾಜ್ಯ ಮಟ್ಟದ ಸಂಸ್ಥೆ ಉದಯಿಸಲೇಬೇಕು ಎಂಬ ತೀರ್ಮಾನಕ್ಕೆ ಬಂದರು. ಆ ತೀರ್ಮಾನ ಎಷ್ಟು ದೃಢ ಇತ್ತೆಂದರೆ ಅವರೆಂದು ಕೊಂಡ ಕೆಲಸಮಯದಲ್ಲೇ ಗಮಕ ಪರಿಷತ್ತು ಜನ್ಮತಾಳಿತು. ಪರಿಷತ್ತೇನೋ ಜನ್ಮತಾಳಿದೆ. ಅದಕ್ಕೆ

ಸಮರ್ಥರೊಬ್ಬರು ಅಧ್ಯಕ್ಷ ಸ್ಥಾನ ತುಂಬಬೇಕಲ್ಲ. ಈ ಒಂದು ಪ್ರಶ್ನೆಗೆ ರಾಯರ ಉತ್ತರ ಸಿದ್ಧವಿತ್ತು. "ಗಮಕ ಕಲಾ ಪರಿಷತ್ತಿಗೆ ಜಿ. ನಾರಾಯಣ ಅವರೇ ಅಧ್ಯಕ್ಷರು" ಏಕೆಂದರೆ ಜಿ ಅಂದರೆ ಗದುಗು ನಾರಾಯಣ ಇದ್ದೇ ಇದೆ ! ಗಮಕ ಕಲೆಗೆ ಗಮಕಿಗಳಿಗೆ ಗದುಗಿನ ಭಾರತ ಆಸರೆ, ಆ ಕಾವ್ಯದ ನಾಯಕ ಆರಾಧ್ಯದೈವ ; ರಾಯರ ನಿಲುವಿಗೆ ಸ್ಪಂದಿಸಿದ ನಾರಾಯಣ ಅವರು ಸುಮಾರು ಎರಡು ದಶಕಗಳ ಕಾಲ ಆ ಸಂಸ್ಥೆಯ ಅಧ್ಯಕ್ಷರಾಗಿ ಗಮಕ ಕಲೆಯ ಸೇವೆ ಮಾಡಿದರು. ರಾಜ್ಯ ಮಟ್ಟದ ಮೂರು ಸಮ್ಮೇಳನಗಳಲ್ಲದೆ ಜಿಲ್ಲಾ – ತಾಲ್ಲೂಕು ಮಟ್ಟದ ಅನೇಕ ಗಮಕ ಸಮ್ಮೇಳನಗಳು ಜಿ. ನಾರಾಯಣ ಅವರ ನೇತೃತ್ವದಲ್ಲಿ ಗಮಕಿ ರಾಘವೇಂದ್ರರಾಯರ ಸಾರಥ್ಯದಲ್ಲಿ ಸಾಂಗವಾಗಿ ನೆರವೇರಿತು.

ರಾಘವೇಂದ್ರರಾಯರ ಆತ್ಮಕಥನ "ಕಲೆಯ ಕಾಣಿಕೆ' ಪುಸ್ತಕದ ಕೊನೆಯ ಭಾಗದಲ್ಲಿ ಗಮಕ ತರಗತಿಗಳ ವಿದ್ಯಾರ್ಥಿಗಳ ಛಾಯಾಚಿತ್ರಗಳಿವೆ. ಆ ಅವಧಿಯಲ್ಲಿ ಗಮಕಕ್ಕೆ ಅದೆಷ್ಟು ಪ್ರಾಧಾನ್ಯತೆ ನೀಡಿದ್ದರು ಎಂಬುದು ತಿಳಿಯುತ್ತದೆ.

ಒಂದು ಸಣ್ಣ ಸಮಿತಿ ಸಭೆ ಇರಲಿ, ಅಧಿವೇಶನ ಇರಲಿ ಸಮ್ಮೇಳನ ಇರಲಿ ಯಾವುದೇ ಸಂದರ್ಭದಲ್ಲಿಯೂ ಅವರ ಮಾತು, ಅವರು ಯೋಜಿಸಿರುವ ರೀತಿ, ಎಂಥವರನ್ನು ಉತ್ತೇಜಿಸುವ ಜಾಣ್ಮೆ ನಿಜಕ್ಕೂ ಮೆಚ್ಚಲೇಬೇಕಾದ ಸಂಗತಿಗಳು. ''ಗಮಕ ಕಲೆ' ನಮ್ಮ ನಾಡಿನ ವಿಶಿಷ್ಟ ಕಲೆ. ಇದನ್ನು ಉಳಿಸಿ ಬೆಳೆಸಲು ಗಮಕಿಗಳು ಏನು ಮಾಡಬೇಕು ಎಂಬುದರ ಬಗ್ಗೆ ಇಂದಿಗೂ ಅವರು ಹೇಳುವ ಮಾತುಗಳು ತುಂಬಾ ಸ್ಪಷ್ಟ ಹಾಗೂ ಅನುಕರಣೀಯ.

ಶಿಸ್ತಿನ, ನೇರ ಮಾತಿನ, ಜಾಣತನದಿಂದ ಕೂಡಿದ ಹತ್ತು ಬಾರಿ ಯೋಜಿಸಿದ – ದೂರದೃಷ್ಟಿ ಹೊಂದಿದ ಆಡಳಿತಾನುಭವದಿಂದ ಕೂಡಿದ ಯಾವುದೇ ಕೆಲಸಕ್ಕೂ ಬದ್ಧತೆ – ಯೋಜನಾಬದ್ಧ ನಿಲುವಳಿಗಳನ್ನು ನೀಡಬಲ್ಲ ಮೇಧಾವಿ ಜಿ. ನಾರಾಯಣ ಎಂದರೆ ತಪ್ಪಲ್ಲ. ಸಾಹಿತ್ಯ ಗೊತ್ತಿಲ್ಲ ಪರಿಷತ್ತಿಗೆ ಅಧ್ಯಕ್ಷನಾದೆ, ಗಮಕ ಗೊತ್ತಿಲ್ಲ ಗಮಕ ಪರಿಷತ್ತಿನ ಅಧ್ಯಕ್ಷನಾದೆ ಎಂದು ಆಗಾಗ ಹೇಳುತ್ತಿದ್ದ ಜಿ. ನಾ. ಈಗ ಜಾನಪದ ಲೋಕದ ಅಧ್ಯಕ್ಷರಾಗಿದ್ದಾರೆ. ಇವೆಲ್ಲ ಅವರನ್ನು ಅಲಂಕರಿಸಿದ್ದು ಅವರಿಗೆ ಆಡಳಿತದಲ್ಲಿರುವ ಹಿಡಿತದಿಂದಾಗಿ. ಸಂಸ್ಕೃತಿಯ ಅಭಿವೃದ್ಧಿಗೆ ಪಣತೊಟ್ಟಿರುವ ಸರಳ ಜೀವಿ ಗಾಂಧಿವಾದಿ ಶ್ರೀ ನಾರಾಯಣ ಅವರು ಸಮ್ಮೇಳನ ಗಳನ್ನು ಹೇಗೆ ಆಯೋಜಿಸುತ್ತಿದ್ದರು, ಕಾರ್ಯಕ್ರಮಗಳೆಲ್ಲ (ಗೋಷ್ಠಿಗಳು) ಎಷ್ಟು ಅಚ್ಚುಕಟ್ಟಾಗಿ ಅವರ ಕಟ್ಟೆಚ್ಚರದಲ್ಲಿ ನಡೆಯುತ್ತಿದ್ದವು ಎಂಬುದಕ್ಕೆ ಆ ಉತ್ಸವಗಳ ಯಶಸ್ಸೇ ಸಾಕ್ಷಿಯಾಗಿದೆ. ಕಾರ್ಯಕ್ರಮದ ಗುಣಮಟ್ಟದಿಂದ ಮೊದಲುಗೊಂಡು ಶುಚಿತ್ವದ ರುಚಿತ್ವದ (ಪಾಕ) ಸಹೃದಯ ಬಾಂಧವರ ಆರೋಗ್ಯದ ಕಡೆ ಗಮನಹಿಡುವ ಜಿ. ನಾರಾಯಣ ಎಲ್ಲೂ ಯಾವ ಹಂತದಲ್ಲೂ ನ್ಯೂನತೆ ಉಂಟಾಗದಂತೆ ಎಚ್ಚರ ವಹಿಸುವಂಥವರು.

ಹಲವು ದಶಕಗಳಿಂದ ತುಂಬ ಹತ್ತಿರದಿಂದ ಬಲ್ಲವನಾದ್ದರಿಂದ ಈ ಗುಣವಾಚಕಗಳು ಸಹಜವಾಗಿ ಬಂದಿವೆ ಎನ್ನಬಹುದು. ವಯಸ್ಸಿನಲ್ಲಿ ನನಗಿಂತ ತುಂಬಾ ಹಿರಿಯರಾದರೂ ಅವರು ರಾಘವೇಂದ್ರರಾಯರ ಮೇಲೆ ಎಷ್ಟು ಅಭಿಮಾನವಿತ್ತೋ ಅದೇ ರೀತಿಯ

ಅಭಿಮಾನವನ್ನು ನನ್ನ ಮೇಲೂ ತೋರಿರುವುದು ನನ್ನ ಅದೃಷ್ಟ. ಇತ್ತೀಚಿನ ಒಂದೆರಡು ಸಮಾರಂಭಗಳಲ್ಲಿ ಗಮಕ ಕಲಾವಿದನಾದ ನನ್ನ ಬಗ್ಗೆ ಒಳ್ಳೆಯ ಮಾತುಗಳನ್ನಾಡುವುದರ ಜೊತೆಗೆ ಅವರ ಅಮೃತಹಸ್ತದಿಂದ ಸನ್ಮಾನಿಸಿಕೊಂಡಿರುವುದು ನಿಜಕ್ಕೂ ನನಗೆ ಹೆಮ್ಮೆ ಎನಿಸುತ್ತಿದೆ.

ನನ್ನ ತಂದೆ ರಾಘವೇಂದ್ರರಾಯರ ಸಾಕ್ಷ್ಯಚಿತ್ರ ನಿರ್ಮಾಣ ಸಂದರ್ಭದಲ್ಲಿ ಅವರಿನ್ನೂ ಗಮಕ ಕಲಾಪರಿಷತ್ತಿನ ಅಧ್ಯಕ್ಷರಾಗಿದ್ದರು. ಆಗಾಗ ಅವರ ಮನೆಗೆ ಹೋಗುತ್ತಿದ್ದ ನಾನು ಕ್ಯಾಮರಾ ಜೊತೆಗೆ ಹೋದಾಗ ಅವರಿಗೆ ಅಚ್ಚರಿ! 'ಏನು ಸತ್ಯನಾರಾಯಣ ಬನ್ನಿ ಬನ್ನಿ' ಎಂದು ಆತ್ಮೀಯವಾಗಿ ಕರೆದರು. ಅವರ ಮುಖದಲ್ಲಿ ಮುಗುಳ್ನಗೆ, ಸಂತೋಷ. ಕಾರಣ ಅವರಿಗೆ ತುಂಬಾ ಆತ್ಮೀಯರಾಗಿದ್ದವರ ಬಗ್ಗೆ ಸಾಕ್ಷ್ಯಚಿತ್ರ ಮಾಡುತ್ತಿದ್ದುದು. ರಾಘವೇಂದ್ರರಾಯರ ಬಗ್ಗೆ ಅವರಾಡಿದ ಮಾತುಗಳು ಎಂದಿಗೂ ಮರೆಯುವಂತಿಲ್ಲ. ಗಮಕಲೋಕಕ್ಕೆ ರಾಯರು ಸಲ್ಲಿಸಿದ ಅವಿಸ್ಮರಣೀಯ ಸೇವೆಯನ್ನು ಸಾಹಿತ್ಯ ಪರಿಷತ್ತಿನಲ್ಲಿ ಡಿ.ವಿ.ಜಿ. ಅವರಿದ್ದ ಕಾಲದಿಂದ ತಮ್ಮ ಕಾಲದವರೆಗೆ ಸ್ಮರಿಸಿದರು. "ಸತ್ಯನಾರಾಯಣ ನೀವು ತುಂಬಾ ಒಳ್ಳೆ ಕೆಲಸ ಮಾಡುತ್ತಿದ್ದೀರಿ, ರಾಯರು ಇದ್ದಾಗಲೇ ಚಿತ್ರ ನಿರ್ಮಾಣ ಆಗಬೇಕಿತ್ತು" ಎಂದು ನೊಂದು ನುಡಿದರು.

ರಾಘವೇಂದ್ರರಾಯರು ೧೯೯೯ರಲ್ಲಿ ಕಾಲವಾದ ನಂತರವೂ ಅಧ್ಯಕ್ಷರಾಗಿಯೇ ಮುಂದುವರಿದ ಜಿ. ನಾರಾಯಣ ಅವರು ಮೂರುವರ್ಷದ ಹಿಂದೆ ಗಮಕ ಕಲಾ ಪರಿಷತ್ತಿನಿಂದ ಬಿಡುಗಡೆಯಾದರು. ಅದಕ್ಕೆ ಕಾರಣ ಅವರ ಆರೋಗ್ಯ. ಸಿರಿಗನ್ನಡಂ ಗೆಲ್ಗೆ – ಗಮಕ ಕಲೆ ಬಾಳ್ಗೆ ಎನ್ನುವ ಧ್ಯೇಯವಾಕ್ಯಕ್ಕೆ ಸ್ಪಂದಿಸಿದ ನಾರಾಯಣ ಅವರು ಗಮಕ ತರಗತಿಗಳ ಕಾವ್ಯ ಪಠ್ಯಕ್ಕೆ ಗಮಕ ಅಧ್ಯಾಪಕ ಶಿಬಿರಕ್ಕೆ – ಗಮಕಿಗಳಿಗೆ, ಗಮಕ ಕಲೆಗೆ ಹೆಚ್ಚು ಪ್ರಾಶಸ್ತ್ಯ ನೀಡಿ ಆ ವಿಭಾಗಗಳಿಗೆ ಸಂಬಂಧಪಟ್ಟಂತೆ ಹಲವಾರು ಅಮೂಲ್ಯ ಗ್ರಂಥಗಳನ್ನು ಬರೆಸಿ ಹೊರತಂದರು. ಶ್ರೀ ಜಿ. ನಾರಾಯಣ ಅವರ ಕಾಲದಲ್ಲಿ ಅನೇಕ ಅಪೂರ್ವ ಕಾವ್ಯಗಳು ಪ್ರಕಟಗೊಂಡಿದ್ದು ಕಾವ್ಯ ಕಲಾಸಕ್ತರ ಆಸಕ್ತಿಯನ್ನು ಮತ್ತಷ್ಟು ಹೆಚ್ಚಿಸಿತೆನ್ನಬಹುದು.

"ಮಾಧ್ಯಮಗಳಲ್ಲಿ ಅದರಲ್ಲೂ ಆಕಾಶವಾಣಿ – ದೂರದರ್ಶನ ಮತ್ತಿತರ ವಾಹಿನಿಗಳಲ್ಲಿ ಕನ್ನಡ ಕಾವ್ಯಗಳ ಬಗ್ಗೆ ಗಮಕದ ಬಗ್ಗೆ ವಾಚನ–ವ್ಯಾಖ್ಯಾನದ ಬಗ್ಗೆ ಕಾರ್ಯಕ್ರಮಗಳು ಇತ್ತೀಚೆಗೆ ಮೂಡಿಬರುತ್ತಿಲ್ಲ. ಸಂಸ್ಕೃತಿಯ ಪರಂಪರೆಗೆ ಅದರ ಉಳಿವಿಗೆ–ಬೆಳವಣಿಗೆಗೆ ಸಂಬಂಧಿಸಿದಂತೆ ಕೇವಲ ವೇದಿಕೆಗಳ ಮೇಲೆ ಭಾಷಣ ಮಾಡಿದರಾಗದು, ಗಮಕ ಎನ್ನುವುದು ಪ್ರಾಯೋಗಿಕ ಕಲೆ. ಅದಕ್ಕೆ ತಕ್ಕ ಪ್ರಾತಿನಿಧ್ಯ ದೊರಕಿಸಿಕೊಡುವ ಜವಾಬ್ದಾರಿ ಮಾಧ್ಯಮಗಳ ಮೇಲಿದೆ" ಎಂಬುದು ಜಿ. ನಾರಾಯಣ ಅವರ ಸ್ಪಷ್ಟ ಅಭಿಪ್ರಾಯ.

❑

ಯೋಚನೆ, ಯೋಜನೆ, ಕಾರ್ಯಾಚರಣೆ ನಾರಾಯಣ ಮಂತ್ರ!

■ ಕೋ. ವೆಂ. ರಾಮಕೃಷ್ಣಗೌಡ

ದೇಶೀಯ ಉಡುಪಾದ ಖಾದಿ ಜುಬ್ಬ, ಪಂಚೆ, ತಲೆಗೆ ಗಾಂಧಿಟೋಪಿ, ಖಾದಿಯದೇ ಕೋಟು ತೊಟ್ಟು ನಿಧಾನವಾಗಿ ನಡೆದು ಬರುವ, ಅಷ್ಟೇನೂ ಎತ್ತರವಲ್ಲದ, ತೀರಾ ಗಿಡ್ಡವೂ ಅಲ್ಲದ, ಎತ್ತರಕ್ಕೆ ತಕ್ಕ ಶರೀರದ, ನೋಡುತ್ತಿದ್ದರೆ ನಮಿಸಬೇಕೆಂಬ ಗೌರವಭಾವನೆ ಮೂಡಿಸುವವರು ಜಿ. ನಾರಾಯಣ ಅವರು. ಮಿತಭಾಷಿಯಾದರೂ ಭಾಷಣಕ್ಕೆ ನಿಂತರೆ ಹಾಸ್ಯವನ್ನೂ ಬೆರೆಸಿ ಮಾತನಾಡುತ್ತಲೇ ಇರುವವರು. ಹೇಳಬೇಕಾಗಿರುವ ಎಲ್ಲವನ್ನೂ ಮನೆಯಲ್ಲಿ ಕುಳಿತು ಟಿಪ್ಪಣಿ ಮಾಡಿಕೊಂಡು ಬಂದು ಸಕಾರಣವಾಗಿ ತಮ್ಮ ಅನುಭವದ ಉದಾಹರಣೆಗಳನ್ನು ನೀಡುತ್ತ ಕೇಳುಗರಿಗೆ ವಿಷಯದ ಆಳ ಅರಿವು ಮೂಡುವಂತೆ ಮಾಡುವಲ್ಲಿ ಯಶಸ್ವಿಯಾಗುವವರು.

ನಾರಾಯಣ ಅವರ ಮನಸ್ಸಿಗೆ 'ಇವರು ಒಳ್ಳೆಯ ಕೆಲಸ ಮಾಡುತ್ತಾರೆ' ಎಂದು ತಿಳಿದರೆ ಸಾಕು, ಅವರು ಪರಿಚಿತರಿರಲಿ, ಅಪರಿಚಿತರಿರಲಿ ಅವರ ಬಗ್ಗೆ ತಮ್ಮ ಹೃದಯದಲ್ಲಿ ಸ್ಥಾನವನ್ನು ಕೊಡುತ್ತಾರೆ. ಎಲ್ಲರ ಬಗೆಗೂ ಸಮಾನತಾ ಭಾವವನ್ನು ಹೊಂದಿರುವುದು ನಾರಾಯಣರ ಹೃದಯ ಶ್ರೀಮಂತಿಕೆಗೆ ಸಾಕ್ಷಿಯಾದುದು. ಪ್ರತಿಭಾವಂತರಿಗೆ ಪ್ರೋತ್ಸಾಹ ನೀಡುವಲ್ಲಿ, ಮಹಿಳೆಯರಲ್ಲಿ ಕ್ರಿಯಾಶೀಲರನ್ನು ಗುರುತಿಸುವಲ್ಲಿ, ಕಾರ್ಯಕರ್ತರನ್ನು ಗುರುತಿಸಿ, ಅವರೊಡನೆ ತಾವೂ ಕಾರ್ಯಕರ್ತರಾಗಿ ಬೆರೆಯುವಲ್ಲಿ, ಯೋಜನಾಬದ್ಧವಾಗಿ ಹಿಡಿದ ಕಾರ್ಯವನ್ನು ಸಾಧಿಸುವಲ್ಲಿ ನಾರಾಯಣ ಅವರ ಜೊತೆ ಸ್ಪರ್ಧಿಸುವವರು ವಿರಳರಲ್ಲಿ ವಿರಳ. ಸರಳತೆ ನಾರಾಯಣರಲ್ಲಿ ಎದ್ದುಕಾಣುವ

ಹಿರಿಯಗುಣ. ಹಿರಿಯರು-ಕಿರಿಯರು, ಅಧಿಕಾರಿ-ಸೇವಕ, ಶ್ರೀಮಂತ-ಬಡವ ಪ್ರತಿಭಾವಂತ-ಸಾಮಾನ್ಯ ಬುದ್ಧಿಯವ, ದೊಡ್ಡ ಸಂಘಟನೆ ಚಿಕ್ಕ ಸಂಘಟನೆ ಎಂಬ ಭೇದ ಮಾಡದೆ ಎಲ್ಲವನ್ನೂ, ಎಲ್ಲರನ್ನೂ ಸಮಾನವಾಗಿ ಕಾಣುವ ದೊಡ್ಡಗುಣ ಇತರರಿಗೆ ಮಾದರಿಯಾಗುವಂತಹುದು. ಪ್ರತಿಭಾವಂತರು ಎಷ್ಟೇ ಚಿಕ್ಕವರಿರಲಿ, ಅವರಿಗೆ ಮನದಾಳದಲ್ಲಿ ಸ್ಥಾನ ಕಲ್ಪಿಸುವಲ್ಲಿ ನಾರಾಯಣರ ಸಮ ನಿಲ್ಲುವವರು ಕೆಲವರಿರಬಹುದು ಅಷ್ಟೆ.

ನಾರಾಯಣ ಅವರು ಪ್ರತಿಭೆಗೆ ಗೌರವ ನೀಡುವ ಉದಾಹರಣೆಗಳು ಬಹಳ ಇವೆ. ಇತ್ತೀಚೆಗೆ ನಡೆದ ಒಂದು ಘಟನೆ ನನ್ನ ಕಣ್ಣಿಗೆ ಈಗಲೂ ಕಟ್ಟಿದಂತಿದೆ. ನಾಡಿನ ಹೆಸರಾಂತ ಸಾಹಿತಿ 'ಡಾ॥ ದೊಡ್ಡರಂಗೇಗೌಡರಿಗೆ ಅಭಿನಂದನಾ ಸಮಾರಂಭ' ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯುವುದರಲ್ಲಿತ್ತು (೦೭-೨-೨೦೦೬). ಉದ್ಘಾಟನಾ ಸಮಾರಂಭದಲ್ಲಿ ಜಿ. ನಾರಾಯಣ ಅವರೂ ಭಾಗವಹಿಸುತ್ತಿದ್ದುದರಿಂದ ನಿಗದಿತ ಸಮಯಕ್ಕೆ ಆಗಮಿಸಿದ್ದರು. ಶ್ರೀ ಎ.ಜೆ. ಸದಾಶಿವ, ಶ್ರೀ ರಾಮಲಿಂಗಾರೆಡ್ಡಿ, ಡಾ॥ ಮಲ್ಲೇಪುರಂ ಜಿ. ವೆಂಕಟೇಶ್ ಮುಂತಾದ ಗಣ್ಯರೂ ಆ ವೇಳೆಗಾಗಲೇ ಆಗಮಿಸಿದ್ದರು. ಅತಿಥಿಗಳು ಮಾಧ್ಯಮದವರೆಲ್ಲ ಆಗಮಿಸಿದ್ದರೂ ಸಭಿಕರಿಗಾಗಿ ಕಾಯುವ ಸ್ಥಿತಿ ನಿರ್ಮಾಣವಾಗಿತ್ತು! ಹತ್ತೂ ಮುಕ್ಕಾಲಾದರೂ ಇನ್ನೂ ಪ್ರಾರಂಭವಾಗಿರಲಿಲ್ಲ. ಆ ವೇಳೆಗಾಗಲೇ ಸಭಿಕರಾಗಿ ಪ್ರೊ॥ ಬರಗೂರು ರಾಮಚಂದ್ರಪ್ಪನವರು ಆಗಮಿಸಿ ಮುಂದಿನ ಸಾಲಿನಲ್ಲಿ ಆಸೀನರಾಗಿದ್ದರು. ಮತ್ತೊಂದು ಬದಿಯಲ್ಲಿ ಕುಳಿತಿದ್ದ ಜಿ. ನಾರಾಯಣರಿಗೆ ಅದು ಗೊತ್ತಾಯಿತು. ಅವರು ನಿಧಾನವಾಗಿ ಎದ್ದು ಬರಗೂರು ಅವರು ಕುಳಿತಿದ್ದಲ್ಲಿಗೆ ಹೋಗಿ ಬರಗೂರು ಅವರೊಡನೆ ಮಾತನಾಡತೊಡಗಿದರು. ಇದನ್ನು ನೋಡುತ್ತಿದ್ದ ನನಗೆ ಹೃದಯ ತುಂಬಿ ಬಂತು. 'ಇಂಥ ಸಜ್ಜನರೇ ಅಲ್ಲವೇ ನಮ್ಮ ನಾಡಿನ ಆಸ್ತಿ' ಎನಿಸಿತು. ನಾರಾಯಣರ ಬಗೆಗೆ ನಾನು ಮೊದಲಿನಿಂದಲೂ ಇಟ್ಟುಕೊಂಡಿರುವ ಗೌರವ ಭಾವನೆ ಅಂದು ಪೂಜನೀಯವಾಗಿ ಮಾರ್ಪಟ್ಟಿತು! ಇಂಥ ಹಲವಾರು ಘಟನೆಗಳು ನಡೆದಿವೆ ಎಂಬುದು ನಾರಾಯಣರ ವ್ಯಕ್ತಿತ್ವದ ರೀತಿ.

ನಡೆ ನುಡಿಯಲ್ಲಿ ಸಾಮ್ಯವಿಲ್ಲದವರಿಂದಲೇ ತುಂಬಿರುವ ವರ್ತಮಾನದ ಸಮಾಜ ಅತಂತ್ರತೆ, ಅಭದ್ರತೆ, ಅಶ್ರದ್ಧೆ, ಅವಿನಯ, ಅನಾಮಧೇಯತೆ, ಅಶಿಸ್ತು, ಅಪ್ರಾಮಾಣಿಕತೆ, ಅನಿಶ್ಚಿತತೆಗಳಿಂದ ಕೂಡಿ ಹೊಲಸಾಗಿದೆ ಎಂಬುದು ಸಾಮಾನ್ಯ ಮಾತು. ಆದರೆ ಜಿ. ನಾರಾಯಣ ಅವರು ಇವೆಲ್ಲಕ್ಕೂ ಅಪವಾದವಾಗಿದ್ದಾರೆ. ಮನೆಯಿಂದ ಮೊದಲುಗೊಂಡು ಅವರು ಸೇವೆ ಸಲ್ಲಿಸಿದ ಎಲ್ಲ ಸಂಸ್ಥೆಗಳಲ್ಲಿ ಅವರ ಅವಧಿಯಲ್ಲಿ ಶಿಸ್ತಿಗೆ, ಪ್ರಾಮಾಣಿಕತೆಗೆ, ವಿಧೇಯತೆಗೆ, ಶ್ರದ್ಧೆಗೆ, ವಿನಯವಂತಿಕೆಗೆ, ನಿಶ್ಚಿತ ಕಾರ್ಯಾರ್ಕ್ಕೆ ಮಹತ್ವ ನೀಡಿದ್ದಾರೆ. ಅವರ ಪ್ರಭಾವ ವಲಯಕ್ಕೆ ಬಿದ್ದವರಲ್ಲೂ ಇಂತಹ ಒಳ್ಳೆಯ ಗುಣಗಳು ಬೆಳೆಯಲು ಕಾರಣರಾಗಿದ್ದಾರೆ.

ನಾಡಿನ ಘನತೆವೆತ್ತ ಸಂಸ್ಥೆಗಳಲ್ಲಿ ನಾರಾಯಣ ಅವರು ದುಡಿದಿದ್ದಾರೆ. ಅವರು ವಹಿಸಿಕೊಂಡ ಯಾವ ಜವಾಬ್ದಾರಿಯೂ ವಿಫಲವಾಗಿಲ್ಲ ಎನ್ನುವುದೇ ಅವರ ಹೆಗ್ಗಳಿಕೆ. ನಾರಾಯಣ ಕಾರಣದಿಂದಾಗಿ ಆ ಸಂಸ್ಥೆಗಳಿಗೆ ಘನತೆ ಬಂತು ಎಂಬುದು ಉತ್ಪ್ರೇಕ್ಷೆಯ ಮಾತಲ್ಲ. ಕಳೆದ

ಐವತ್ತು ವರ್ಷಗಳಿಂದ ನಿಯತವಾಗಿ 'ವಿನೋದ' ಎಂಬ ಹಾಸ್ಯಪತ್ರಿಕೆಯನ್ನು ಪ್ರಕಟಿಸುತ್ತ, ಆ ಮೂಲಕವೂ ಹೊಸ ಪ್ರತಿಭೆಗಳು ಬೆಳೆಯಲು ಕಾರಣರಾಗಿದ್ದಾರೆ. ಬೆಂಗಳೂರಿನ ಮೇಯರ್ ಆಗಿದ್ದಾಗ ದಾಸ್ಯದ ಸಂಕೋಲೆಯನ್ನು ಕಿತ್ತೊಗೆದು ನಾಡಪ್ರಭುವನ್ನು ಸ್ಥಾಪಿಸಿದ್ದು ಸಾಮಾನ್ಯದ ಸಂಗತಿಯಲ್ಲ. ಸಾಮಾನ್ಯ ಜನರ ಕಷ್ಟ ಕಾರ್ಪಣ್ಯಗಳಿಗೆ ಸ್ಪಂದಿಸಿ, ಮೂಲಭೂತ ಅಗತ್ಯಗಳ ಪೂರೈಕೆಗೆ ಹೆಚ್ಚಿನ ಮಹತ್ವವನ್ನು ನಾರಾಯಣ ಅವರು ನೀಡಿದ್ದರೆನ್ನುವುದು ಈಗ ಇತಿಹಾಸ. ಸಮಸ್ತ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿಗೆ ಅಧ್ಯಕ್ಷರಾಗಿ ಅವರು ಮಾಡಿದ ಕಾರ್ಯವಂತೂ ಅವಿಸ್ಮರಣೀಯ. 'ಯೋಚನೆ, ಯೋಜನೆ, ಕಾರ್ಯಾಚರಣೆ' ಇದು ನಾರಾಯಣ ಮಂತ್ರ! ವಾರ್ಷಿಕ, ದ್ವೈವಾರ್ಷಿಕ, ತ್ರೈವಾರ್ಷಿಕ, ಪಂಚವಾರ್ಷಿಕ ಹೀಗೆ ಯೋಜನೆಗಳನ್ನು ಹಾಕಿಕೊಂಡು, ಸೈದ್ಧಾಂತಿಕ ತಳಹದಿಯ ಮೇಲೆ ಅವುಗಳ ಅನುಷ್ಠಾನಕ್ಕೆ ಅವಿರತವಾಗಿ ಶ್ರಮಿಸಿದ ನಿಷ್ಕಾಮಕರ್ಮಿ ನಾರಾಯಣ ಅವರು. ಸಿಬ್ಬಂದಿಯ ಹಿತ ಕಾಪಾಡುವಲ್ಲಿ, ಪ್ರಕಟಣೆಗಳು ಹೊರಬರುವಲ್ಲಿ, ಸಾಹಿತ್ಯಕ, ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆಯಲ್ಲಿ, ಕಟ್ಟಡದ ಸ್ವಚ್ಛತೆ, ಸುಣ್ಣ ಬಣ್ಣದ ವಿಷಯದಲ್ಲಿ ಅವರು ವಹಿಸುತ್ತಿದ್ದ ಕಾಳಜಿ, ಮುತುವರ್ಜಿ ಅನನ್ಯವಾದುದು. ತಮ್ಮ ಮನೆಯ ಕೆಲಸಕ್ಕೆ ಎಷ್ಟು ಮಹತ್ವ ಕೊಡುವರೋ, ಅದಕ್ಕಿಂತ ಒಂದು ಕೈ ಮಿಗಿಲಾಗಿ ಪರಿಷತ್ತಿನ ಕಾರ್ಯಗಳನ್ನು ಶ್ರದ್ಧೆಯಿಂದ ನಿರ್ವಹಿಸಿದ್ದರು. ಪುಟ್ಟ ಕಾರ್ಯಕ್ರಮವೂ, ದೊಡ್ಡ ಸಮ್ಮೇಳನವೂ ಒಂದೇ ಮಹತ್ವವನ್ನು ಹೊಂದಿವೆ ಎಂದು ಭಾವಿಸಿದ್ದ ನಾರಾಯಣ ಅವರು ಪೂರ್ವಸಿದ್ಧತಾ ಸಭೆಗಳನ್ನು ನಡೆಸಿ, ಎಲ್ಲರಿಂದ ಅಭಿಪ್ರಾಯ ಸಂಗ್ರಹಿಸಿ, ಯೋಗ್ಯವಾದದ್ದನ್ನು ಅಳವಡಿಸಿ, ಒಂದೊಂದು ಕಾರ್ಯಕ್ಕೂ ಒಂದೊಂದು ತಂಡವನ್ನು ಮಾಡಿ ಆ ತಂಡಕ್ಕೊಬ್ಬ ಮುಖ್ಯಸ್ಥರನ್ನು ನೇಮಿಸಿ, ಕಾರ್ಯಗಳು ನಿಗದಿತ ಸಮಯಕ್ಕೆ ಸಮರ್ಪಕವಾಗಿ ನೆರವೇರುವಂತೆ ಮಾಡುತ್ತಿದ್ದರು. ದಕ್ಷತೆಗೆ ಮತ್ತೊಂದು ಹೆಸರೇ ಜಿ. ನಾರಾಯಣ ಅವರು. ಅವರ ಅವಧಿಯಲ್ಲಿ ಪರಿಷತ್ತು ಕಾರ್ಯಕರ್ತರಿಂದ ಗಿಜಿಗುಡುತ್ತಿತ್ತು. ಗಣ್ಯರಿಂದ ತುಂಬಿರುತ್ತಿತ್ತು. (ಈಗಿನಂತೆ ಜನವಿಲ್ಲದೆ ಬಣಗುಡುತ್ತಿರಲಿಲ್ಲ!). ಜನಪದ ಮೇಳಗಳು, ಗಮಕವಾಚನಗಳು ಜಿಲ್ಲಾ ತಾಲ್ಲೂಕು ಮಟ್ಟಕ್ಕೂ ಹರಿದು ಇಡೀ ಕನ್ನಡ ನಾಡು ಸಾಂಸ್ಕೃತಿಕವಾಗಿ ಜಾಗೃತವಾಗುವಂತೆ ಮಾಡಿದ ಕೀರ್ತಿ ನಾರಾಯಣರಿಗೆ ಸಲ್ಲುತ್ತದೆ. ಕನ್ನಡ ಭಾಷಾ ಶ್ರೀಮಂತಿಕೆಯನ್ನು ರಾಷ್ಟ್ರಮಟ್ಟಕ್ಕೆ ಕೊಂಡೊಯ್ದು ಕನ್ನಡಿಗರ ಘನತೆಯನ್ನು ಹೆಚ್ಚುಮಾಡಿದವರು ನಾರಾಯಣ ಅವರು. ಅಸಾಹಿತಿಯಾದ ನಾರಾಯಣರು ಸಾಹಿತಿಗಳಿಂದ ಹೊಗಳಿಸಿಕೊಂಡಿದ್ದು ಅವರ ಶ್ಲಾಘನೀಯ ಕಾರ್ಯದಿಂದ. ನಾರಾಯಣರ ಕಾಲದಲ್ಲಿ ಅಮೂಲ್ಯ ಸಾಹಿತ್ಯ ಕೃತಿಗಳು ದಾಖಲೆ ಪ್ರಮಾಣದಲ್ಲಿ ಹೊರಬಂದವು. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಾರಾಯಣರಿದ್ದ ದಿನಗಳು ಸುವರ್ಣಾಕ್ಷರಗಳಿಂದ ಬರೆಯಬೇಕಾದಂತಹವು. ಅಷ್ಟು ಮಹತ್ವ ಆ ದಿನಗಳಿಗಿತ್ತು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾಗಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ, ಕರ್ನಾಟಕ ಪತ್ರಿಕಾ ಅಕಾಡೆಮಿಯ ಅಧ್ಯಕ್ಷರಾಗಿ, ಈಗ ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರಾಗಿ ಅವರು ಮಾಡಿರುವ, ಮಾಡುತ್ತಿರುವ ಸೇವೆ ಗುಣಾತ್ಮಕವಾದುದು.

ನಾರಾಯಣರ ಮಾರ್ಗದರ್ಶನದಲ್ಲಿ ನೂರಾರು ಸಂಘ ಸಂಸ್ಥೆಗಳು ಮುನ್ನಡೆಯುತ್ತಿವೆ. ಕರ್ನಾಟಕ ಲೇಖಕಿಯರ ಸಂಘ, ಕರ್ನಾಟಕ ಗಮಕಕಲಾ ಪರಿಷತ್ತು ಸ್ಥಾಪನೆಗೊಳ್ಳಲು ನಾರಾಯಣರೇ ಬೀಜಾಂಕುರ ಮಾಡಿದ್ದು ಎಂಬುದು ಬಹಳ ಮಂದಿಗೆ ತಿಳಿದಿರಲಿಕ್ಕಿಲ್ಲ. ಉದಯಭಾನು ಕಲಾಸಂಘ, ಬಿ.ಎಂ.ಶ್ರೀ. ಪ್ರತಿಷ್ಠಾನದಂಥ ಪ್ರತಿಷ್ಠಿತ ಸಂಸ್ಥೆಗಳೂ ನಾರಾಯಣರ ಸೇವೆಯನ್ನು ಪಡೆದುಕೊಂಡಿವೆ.

ಜಿ. ನಾರಾಯಣ ಅವರು ಒಬ್ಬ ವ್ಯಕ್ತಿಯಲ್ಲ. ಒಂದು ಬೃಹತ್ ವಿಶ್ವವಿದ್ಯಾಲಯ. ಅವರ ಕಾರಣದಿಂದಾಗಿ ಬೆಂಗಳೂರು ಸಾಂಸ್ಕೃತಿಕವಾಗಿ ಶ್ರೀಮಂತವಾಗಿದೆ. ಸಾಹಿತಿ ಕಲಾವಿದರು ಬೆಳಕಿಗೆ ಬಂದಿದ್ದಾರೆ, ಬೆಳೆದಿದ್ದಾರೆ, ನಾಡಿನ ಹಿರಿಮೆಯನ್ನು ಹೆಚ್ಚಿಸಿದ್ದಾರೆ. ನಾರಾಯಣ ಅವರ ದೂರದೃಷ್ಟಿತ್ವ, ಕರ್ತೃತ್ವ ಶಕ್ತಿ, ತೋರುವ ಪ್ರೀತಿವಿಶ್ವಾಸ, ಸಮಾನತಾ ಗುಣ ಇತರರಿಗೆ ಅನುಕರಣಯೋಗ್ಯ. ಅವರ ಆಶೀರ್ವಾದದಲ್ಲಿ ನಾನೂ ಭಾಗಿಯಾಗಿರುವೆ ಎಂಬ ತೃಪ್ತಿ ನನಗಿದೆ. ನನ್ನಂಥ ಹಲವು ಮಂದಿಗಿದೆ. ನಾರಾಯಣರು ಇರುವಷ್ಟು ದಿನ ಕನ್ನಡ ನಾಡು, ನುಡಿ, ಸಂಸ್ಕೃತಿ, ಕಲೆ, ಸಾಹಿತ್ಯ, ಸಂಗೀತಕ್ಕೆ ಒಳ್ಳೆಯದಾಗುತ್ತಲೇ ಇರುತ್ತದೆ. ಏಕೆಂದರೆ ನಾರಾಯಣರಿಗೆ ಅವುಗಳೆಂದರೆ ಉಸಿರು.

❑

ಜಿ. ನಾರಾಯಣ ಮತ್ತು ಬಿ.ಎಂ.ಶ್ರೀ. ಪ್ರತಿಷ್ಠಾನ

■ ಸಾ. ಗೀತಾಚಾರ್ಯ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನವನ್ನು ಕವಿ-ಸಾಹಿತಿ-ವಿದ್ವಾಂಸ ಎಂ.ವಿ. ಸೀತಾರಾಮಯ್ಯನವರು ಮೇ ೬, ೧೯೭೯ರಂದು ಸ್ಥಾಪನೆ ಮಾಡಿದಾಗ ನಾಡಿನ ಹಲವಾರು ಸಾಹಿತಿ-ವಿದ್ವಾಂಸರನ್ನು ಮೊದಲೇ ವಿನಂತಿಸಿಕೊಂಡು ಸ್ಥಾಪನೆಯ ಉದ್ದೇಶ ಆಶಯಗಳನ್ನು ತಿಳಿಸಿ "ಸ್ಥಾಪಕ ಸದಸ್ಯ"ರಾಗಬೇಕೆಂದು ಕೇಳಿಕೊಂಡಿದ್ದರು. ಹಾಗೆ ಅವರ ಮನವಿಯನ್ನು ಪುರಸ್ಕರಿಸಿ ಅವರ ಕಾರ್ಯಕ್ಕೆ ಬೆಂಬಲ ವ್ಯಕ್ತಪಡಿಸಿ ಜಿ. ನಾರಾಯಣ ಅವರು ಬಿ.ಎಂ.ಶ್ರೀ. ಪ್ರತಿಷ್ಠಾನಕ್ಕೆ ಸ್ಥಾಪಕ ಸದಸ್ಯರಾದರು. ಅಂದಿನಿಂದ ಇಂದಿನವರೆಗೆ ಪ್ರತಿಷ್ಠಾನದ ಜೊತೆಗೆ ಅವರ ಸಂಬಂಧ ನಿರಂತರವಾಗಿ ಬೆಳೆದು ಬಂದಿದೆ. ಪ್ರತಿಷ್ಠಾನದ ಪಕ್ಕದಲ್ಲೇ ಇದ್ದ ಗವಿಪುರ ವಿಸ್ತರಣದ ಅಂಚೆ ಕಚೇರಿಗೆ ಬಂದಾಗಲೆಲ್ಲ ಸೀತಾರಾಮಯ್ಯನವರನ್ನು ಮಾತನಾಡಿಸಿಕೊಂಡೇ ಹೋಗುತ್ತಿದ್ದರು. ಆಗೆಲ್ಲ ಪ್ರತಿಷ್ಠಾನದ ಬಗ್ಗೆ ಚರ್ಚಿಸುತ್ತಿದ್ದರು. ಮುಂದಿನ ಕಾರ್ಯಯೋಜನೆಗಳ ಬಗ್ಗೆ ಸೂಕ್ತ ಸಲಹೆ ಸೂಚನೆ-ಮಾರ್ಗದರ್ಶನ ನೀಡುತ್ತಿದ್ದರು. ತಮ್ಮ ಮುಖ್ಯ ಭಾಷಣ ಪ್ರತಿಗಳನ್ನು ಮತ್ತು ವಿಶೇಷವಾಗಿ 'ಚಿಂತನ'ಗಳನ್ನು ಸೀತಾರಾಮಯ್ಯನವರಿಗೊಮ್ಮೆ ತೋರಿಸಿ ಅವರಿಂದ ಒಪ್ಪಿಗೆ ಪಡೆಯದ ಹೊರತು ಜಿ. ನಾರಾಯಣರಿಗೆ ಸಮಾಧಾನವಾಗುತ್ತಿರಲಿಲ್ಲ.

ಭಾಷಣಗಳ ಭಂಡಾರ

ಜಿ. ನಾರಾಯಣರು ಯಾವುದೇ ಭಾಷಣಕ್ಕೆ ಒಪ್ಪಿಕೊಳ್ಳಲಿ ಅದರ ಪೂರ್ವಸಿದ್ಧತೆ ಮಾಡಿಕೊಂಡೇ

ಹೋಗುವುದು ರೂಢಿ. ಭಾಷಣವನ್ನು ಮೊದಲೇ ಬರೆದುಕೊಂಡು ಏನು ಹೇಳಬೇಕು? ಎಷ್ಟು ಹೇಳಬೇಕು? ಎಂಬುದನ್ನು ನಿರ್ಧರಿಸಿಕೊಂಡು ಸಮಯವನ್ನು ನಿಗದಿಮಾಡಿಕೊಂಡು ಭಾಷಣದಲ್ಲಿ ಅಷ್ಟನ್ನೂ ಅಚ್ಚುಕಟ್ಟಾಗಿ ಹೇಳುತ್ತಿದ್ದರು. ಅವರ ಪ್ರತಿಯೊಂದು ಭಾಷಣವೂ ಕನ್ನಡ ನಾಡು–ನುಡಿ–ಸಂಸ್ಕೃತಿ–ಸಾಹಿತ್ಯವನ್ನು ಕುರಿತ ಮೌಲಿಕ ಚಿಂತನೆಗಳ ಮುಕ್ತಾಫಲ ಗಳಂತಿರುತ್ತವೆ. ಇಂದಿಗೂ ಆ ಶಿಸ್ತನ್ನು ಪಾಲಿಸಿಕೊಂಡು ಬರುತ್ತಿದ್ದಾರೆ. ತಮ್ಮ ಎಲ್ಲ ಭಾಷಣದ ಪ್ರತಿಗಳನ್ನು ಅವರು ರಕ್ಷಿಸಿಕೊಂಡು ಬಂದಿದ್ದಾರೆ. ಅದನ್ನೆಲ್ಲ ಪ್ರಕಟಿಸಿದರೆ ಕನ್ನಡಕ್ಕೆ ಅಮೂಲ್ಯ ಆಸ್ತಿಯಾಗಬಲ್ಲದು. ಕೆಲವು ಮುಖ್ಯ ಭಾಷಣಗಳನ್ನು ಮತ್ತು ಆಕಾಶವಾಣಿಯ ಚಿಂತನ ಹಾಗೂ ಇತರ ಬರಹಗಳನ್ನು ಸೀತಾರಾಮಯ್ಯನವರ ಮನೆಗೇ ಬಂದು ಕೆಲವೊಮ್ಮೆ ತಾವೇ ಓದಿ ಅವರಿಂದ ಸಲಹೆ ಸೂಚನೆಗಳನ್ನು ಪಡೆಯುತ್ತಿದ್ದುದನ್ನು ನಾನು ಕಂಡಿದ್ದೇನೆ. ಸೀತಾರಾಮಯ್ಯನವರ ನಿಧನಾ ನಂತರ ಆಗಾಗ್ಗೆ ನನ್ನನ್ನು ಕರೆಸಿಕೊಂಡು ನನಗೆ ಆ ಅರ್ಹತೆ ಇಲ್ಲದಿದ್ದರೂ ಸೀತಾರಾಮಯ್ಯನವರ ಜೊತೆಯಲ್ಲಿದ್ದೆನೆಂಬ ಕಾರಣದಿಂದ ನನ್ನೆದುರಿಗೆ ಓದಿ ಸರಿಯಾಗಿದೆಯೆ ಎಂದು ಕೇಳುತ್ತಿದ್ದುದೂ ಉಂಟು.

ಸೀತಾರಾಮಯ್ಯನವರು ಇರುವವರೆಗೂ ಅವರ ಮನೆಯಲ್ಲಿಯೇ ಪ್ರತಿಷ್ಠಾನ ಇತ್ತು. ಮುಂದೆ ಮೂರು ಅಂಗಡಿಗಳನ್ನು ಕಟ್ಟಿಸಿ ಹಿಂಭಾಗದಲ್ಲಿ ಮನೆಯನ್ನು ಮಾಡಿಕೊಂಡಿದ್ದರು. ಒಂದು ಅಂಗಡಿಯನ್ನು ಪ್ರತಿಷ್ಠಾನಕ್ಕೆ ಬಿಟ್ಟುಕೊಟ್ಟಿದ್ದರು. ಮುಂದೆ ಆ ಅಂಗಡಿಯ ಹಿಂಭಾಗದ ಖಾಲಿಜಾಗವನ್ನು ಕಟ್ಟಿಸಿಕೊಟ್ಟಿದ್ದಲ್ಲದೆ ಇನ್ನೊಂದು ಅಂಗಡಿಯನ್ನು ಬಿಟ್ಟುಕೊಟ್ಟಿದ್ದರು. ಮಾಸ್ತಿಯವರು ಮತ್ತು ಜಿ. ನಾರಾಯಣರು ವಾರದಲ್ಲಿ ಕನಿಷ್ಠ ಎರಡು ಬಾರಿಯಾದರೂ ಪ್ರತಿಷ್ಠಾನಕ್ಕೆ ಭೇಟಿಕೊಟ್ಟು ಸೀತಾರಾಮಯ್ಯನವರನ್ನು ಮಾತಾಡಿಸಿಕೊಂಡು ಹೋಗುತ್ತಿದ್ದರು. ಕಚೇರಿ ತೆರೆದಿದ್ದಾಗಲೆಲ್ಲ ಎಂ.ವಿ.ಸೀ. ಅವರು ಪ್ರತಿಷ್ಠಾನದಲ್ಲೇ ಇರುತ್ತಿದ್ದುದರಿಂದ ಅಲ್ಲೇ, ಅವರ ಸ್ವಾರಸ್ಯಕರ ಮಾತುಕತೆಗಳು ನಡೆಯುತ್ತಿದ್ದವು. ನಡುವೆ ನನ್ನ ಬಗೆಗೂ ಮೆಚ್ಚುಗೆಯ ಮಾತುಗಳಿರುತ್ತಿದ್ದವು. ಬೆನ್ನು ತಟ್ಟಿ ಪ್ರೋತ್ಸಾಹಿಸುತ್ತಿದ್ದರು. ಹೀಗೆ ನಡೆಯುತ್ತಿದ್ದ ಎಂ.ವಿ.ಸೀ.ಯವರ ಮತ್ತು ಜಿ. ನಾರಾಯಣರ ಪ್ರತಿಷ್ಠಾನದ ಬಾಂಧವ್ಯ ಇನ್ನಷ್ಟು ಗಟ್ಟಿಯಾದದ್ದು ಬಿ.ಎಂ.ಶ್ರೀ. ಜನ್ಮಶತಮಾನೋತ್ಸವ ಸಂದರ್ಭದಲ್ಲಿ.

ಎಂ.ವಿ.ಸೀ.ಯವರು ಪ್ರತಿಷ್ಠಾನವನ್ನು ಪ್ರಾರಂಭಮಾಡಿದ ತರುಣದಲ್ಲೇ ಫ.ಗು. ಹಳಕಟ್ಟಿ ಯವರ ಜನ್ಮ ಶತಮಾನೋತ್ಸವವನ್ನು 'ಹಸ್ತಪ್ರತಿ ವರ್ಷ' ಎಂದು ಕರೆದು ನಾಡಿನ ಹಲವು ಕಡೆ ಆಚರಿಸಿ 'ಮಣಿಹ' ಎಂಬ ಅಮೂಲ್ಯ ಸಂಸ್ಮರಣ ಸಂಪುಟದ ಪ್ರಕಟನೆ ಹಾಗೂ 'ಹಸ್ತಪ್ರತಿಶಾಸ್ತ್ರ'ದ ಬಗ್ಗೆ ರಾಷ್ಟ್ರಮಟ್ಟದ ವಿಚಾರಗೋಷ್ಠಿ ನಡೆಸುತ್ತಿದ್ದುದನ್ನು ಜಿ. ನಾರಾಯಣರು ಮೆಚ್ಚುಗೆಯಿಂದಲೇ ಗಮನಿಸುತ್ತಿದ್ದರು. ಅದು ಮುಗಿಯುತ್ತಿದ್ದಂತೆಯೇ ಬಿ.ಎಂ.ಶ್ರೀ. ಶತಮಾನೋತ್ಸವವೂ ಬಂದದ್ದರಿಂದ ಸೀತಾರಾಮಯ್ಯನವರು ಅದನ್ನು ನಾಡಿನಾದ್ಯಂತ ಅರ್ಥಪೂರ್ಣವಾಗಿ ಆಚರಿಸಬೇಕೆಂಬ ಬಗ್ಗೆ ಜಿ. ನಾರಾಯಣರೊಂದಿಗೆ ಚರ್ಚಿಸುತ್ತಿದ್ದರು. ಆ ವೇಳೆಗೆ ಪರಿಷತ್ತಿನ ಅಧ್ಯಕ್ಷರಾಗಿ ಯಶಸ್ವಿ ಸಂಘಟಕರಾಗಿದ್ದುದನ್ನು, ಸರ್ಕಾರದ ಮೇಲೆ ಪ್ರಭಾವ ಬೀರಬಲ್ಲವರಾಗಿದ್ದುದನ್ನು ಗಮನಿಸಿದ್ದ ಸೀತಾರಾಮಯ್ಯನವರು ಈ ಶತಮಾನೋತ್ಸವ

ಆಚರಣೆಗೆ ಒಂದು ಪ್ರತ್ಯೇಕ ಸಮಿತಿಯನ್ನು ಮಾಡಿ ಒಂದೆರಡುಬಾರಿ ಸಮಾಲೋಚನ ಸಭೆಗಳನ್ನು ನಡೆಸಿ ಅದಕ್ಕೆ ಜಿ. ನಾರಾಯಣರನ್ನು ಬರಮಾಡಿಕೊಂಡು ಅವರ ಸಲಹೆ ಸೂಚನೆಗಳನ್ನು ಪಡೆಯುತ್ತ ನಾರಾಯಣರನ್ನೇ ಸಮಿತಿಯ ಅಧ್ಯಕ್ಷರಾಗಿರಲು ಕೇಳಿಕೊಂಡು ಒಪ್ಪಿಸಿದರು. ನಾರಾಯಣರು ಸೀತಾರಾಮಯ್ಯನವರ ಮೇಲಿನ ದಾಕ್ಷಿಣ್ಯ-ಗೌರವದಿಂದ ನಿರಾಕರಿಸಲಾಗಲಿಲ್ಲ. ಈ ಜವಾಬ್ದಾರಿಯನ್ನು ಒಪ್ಪಿಕೊಳ್ಳುವ ಮೂಲಕ ಬಿ.ಎಂ.ಶ್ರೀ. ಪ್ರತಿಷ್ಠಾನಕ್ಕಷ್ಟೇ ಅಲ್ಲ ನಾಡಿಗೇ ಉಪಕಾರ ಮಾಡಿದರೆಂದರೆ ತಪ್ಪಲಾರದು.

ಮಾದರಿ ಬಿ.ಎಂ.ಶ್ರೀ. ಶತಮಾನೋತ್ಸವ

ಜಿ. ನಾರಾಯಣರು ಶತಮಾನೋತ್ಸವ ಸಮಿತಿಯ ಕಾರ್ಯಾಧ್ಯಕ್ಷರಾಗಿ ಆ ಉತ್ಸವವನ್ನು ಮಾದರಿ ಉತ್ಸವವನ್ನಾಗಿ ಆಚರಿಸಿದರು. (ನಿಟ್ಟೂರು ಶ್ರೀನಿವಾಸರಾಯರು ಅಧ್ಯಕ್ಷರಾಗಿದ್ದರು. ಎಂ.ವಿ.ಸೀ. ಅವರು ಉಪಾಧ್ಯಕ್ಷರಾಗಿದ್ದರು. ನಾನು, ಜಿ.ಕೆ. ಗಂಡೂರಾವ್, ಆರ್.ಎಚ್. ರಾಜು, ಎಂ.ಪಿ. ಸತ್ಯನಾರಾಯಣ, ಕೆ.ಆರ್. ಗಣೇಶ್, ಡಾ॥ ಪಿ.ವಿ. ನಾರಾಯಣ ಕಾರ್ಯದರ್ಶಿಗಳಾಗಿದ್ದೆವು. ಬಿ.ಎಂ.ಶ್ರೀ. ಜನ್ಮಶತಮಾನೋತ್ಸವವನ್ನು ಇಡೀ ವರ್ಷ ಆಚರಿಸಲು ಶ್ರೀ ಜಿ. ನಾರಾಯಣರು ಯೋಜನೆ ರೂಪಿಸಿದರು. ಅದರ ಉದ್ಘಾಟನೆಯನ್ನು ಶ್ರೀಯವರ ಹುಟ್ಟೂರಾದ ನಾಗಮಂಗಲ ತಾ॥ ಬೆಳ್ಳೂರಿನಲ್ಲಿ ನಡೆಸಲು ತೀರ್ಮಾನಿಸಿ ಮೂರು ತಿಂಗಳು ಮೊದಲಿನಿಂದಲೇ ಅದಕ್ಕೆ ಸಿದ್ಧತೆಗಳನ್ನು ಮಾಡುತ್ತಿದ್ದರು. ಉದ್ಘಾಟನಾ ಸಮಾರಂಭಕ್ಕಾಗಿಯೇ ಬೆಳ್ಳೂರಿನಲ್ಲೊಂದು ಸ್ವಾಗತ ಸಮಿತಿ ರಚಿಸಿ ಅಲ್ಲಿಯ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರನ್ನು ಮಹಾಪೋಷಕರನ್ನಾಗಿ ಒಪ್ಪಿಸಿ ಜಿಲ್ಲಾ ಪಂಚಾಯತ್ ಅಧ್ಯಕ್ಷರಾಗಿದ್ದ ಶ್ರೀ ಸಿಂಗಾರಿಗೌಡರನ್ನು ಅಧ್ಯಕ್ಷರನ್ನಾಗಿ ಮಾಡಿ ಸ್ಥಳೀಯರನೇಕರನ್ನೊಳಗೊಂಡ ಸ್ವಾಗತ ಸಮಿತಿಯ ಹಲವು ಸಭೆಗಳನ್ನು ಬೆಳ್ಳೂರಿನಲ್ಲಿ, ಆದಿಚುಂಚನಗಿರಿಯಲ್ಲಿ ನಡೆಸಿದ್ದರು. ನಾಡಿನಾದ್ಯಂತ ಪ್ರಚಾರಮಾಡಿ ಬೆಳ್ಳೂರಿನ ಉತ್ಸವವನ್ನು ಒಂದು ಸಾಹಿತ್ಯ ಸಮ್ಮೇಳನದಂತೆಯೇ ವ್ಯವಸ್ಥಿತವಾಗಿ ನಡೆಸಿದರು. ಮಾಸ್ತಿ, ಪು.ತಿ.ನ. ಸಿದ್ಧಯ್ಯ ಪುರಾಣಿಕರಾದಿಯಾಗಿ ನಾಡಿನ ಎಲ್ಲ ಗಣ್ಯ ಸಾಹಿತಿ ವಿದ್ವಾಂಸರು ಕವಿಗಳು ಭಾಗವಹಿಸಿದ್ದ ಆ ಸಮಾರಂಭದಲ್ಲಿ ಶಂಕುಸ್ಥಾಪನೆಯಾಗಿ ಬಿ.ಎಂ.ಶ್ರೀ. ಶತಮಾನ ಭವನ ಸ್ಥಳೀಯರ ಸಹಕಾರದಿಂದ ೧೯೯೫ರಲ್ಲಿ ಉದ್ಘಾಟನೆಯಾಯಿತು. ಸರ್ಕಾರವೇ ಆ ಭವನವನ್ನು ನಿರ್ಮಿಸಿಕೊಟ್ಟಿತು. ಇದೀಗ ಅಲ್ಲಿ ಸ್ಥಳೀಯ ಸಮಿತಿಯ ಮೂಲಕ ಬಿ.ಎಂ.ಶ್ರೀ. ಪ್ರತಿಷ್ಠಾನದ ಶಾಖೆಯಾಗಿ ಚಟುವಟಿಕೆಯಲ್ಲಿದೆ. ಈ ಭವನದ ನಿರ್ಮಾಣದ ಹಿಂದೆಯೂ ನಾರಾಯಣರ ಪಾತ್ರವಿದೆ. ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು ಮತ್ತು ಆಗಿನ ಮಂಡ್ಯ ಜಿಲ್ಲಾ ಪರಿಷತ್ತಿನ ಅಧ್ಯಕ್ಷರಾಗಿದ್ದ ಶ್ರೀ ಸಿಂಗಾರಿಗೌಡರ ಸಹಕಾರದಿಂದ ಶ್ರೀ ಜಿ. ನಾರಾಯಣರೇ ಈ ಕಾರ್ಯದ ಪ್ರಗತಿಯ ಪರಿಶೀಲನೆಯನ್ನು ಮಾಡಿದ್ದಾರೆ. ಈಗಲೂ ಶ್ರೀ ಶ್ರೀಗಳು ಮಹಾಪೋಷಕರಾಗಿ ಮತ್ತು ಸಿಂಗಾರಿಗೌಡರು ಮತ್ತು ಜಿ. ನಾರಾಯಣರು ಪೋಷಕರಾಗಿ ಸ್ಥಾಪಕರ ಸಮಿತಿಯ ಸಭೆಗೆ ಕ್ರಿಯಾಶೀಲತೆಯನ್ನು ತಂದಿದ್ದಾರೆ.

ನಾಡಿನಾದ್ಯಂತ ಆಚರಣೆಯಾದ ಬಿ.ಎಂ.ಶ್ರೀ. ಶತಮಾನೋತ್ಸವ ದೆಹಲಿ, ಮುಂಬಯಿ, ಕಲ್ಕತ್ತ, ಹೈದರಾಬಾದ್, ಮದರಾಸು, ವಾರಣಾಸಿ, ನಾಗಪುರ, ಬರೋಡಗಳಲ್ಲೂ

ಬಿ.ಎಂ.ಶ್ರೀ.ಯವರನ್ನು ವಿಶೇಷವಾಗಿ ಅವರ ಕನ್ನಡಪರ ಜಾಗೃತಿಯನ್ನು ಜನತೆಗೆ ಮುಟ್ಟಿಸಲು ಹಲವಾರು ಜನಪರ ಕಾರ್ಯಕ್ರಮಗಳನ್ನು ಹಾಕಿ ಅದನ್ನು ಅರ್ಥಪೂರ್ಣಗೊಳಿಸಿದರು. "ಶ್ರೀ ಸೂಕ್ತಿಗಳು" ಶ್ರೀಯವರ ಜೀವನ ಚರಿತ್ರೆಗಳು (ದೊಡ್ಡವರಿಗೆ, ಮಕ್ಕಳಿಗೆ ಪ್ರತ್ಯೇಕವಾಗಿ) ಶ್ರೀಯವರ ಕವನಗಳ ಸಂಗ್ರಹ ಮುಂತಾದ ಕಿರು ಪುಸ್ತಕಗಳನ್ನು ಕೇವಲ ೧ ರೂ ೧.೫೦ ಮತ್ತು ೨.೦೦ ರೂಗಳಿಗೆ ಮುದ್ರಿಸಿ ಪ್ರತಿ ಉತ್ಸವ ಕಾರ್ಯಕ್ರಮಗಳಲ್ಲೂ ಜನರಿಗೆ ತಲುಪಿಸಿದರು. ಮಕ್ಕಳಿಗೆ ರಾಜ್ಯಮಟ್ಟದ ಸ್ಪರ್ಧೆಗಳನ್ನು ನಡೆಸಿ ಶಾಲಾಮಕ್ಕಳು-ಯುವಕರಲ್ಲಿ ಬಿ.ಎಂ.ಶ್ರೀ, ಯವರ ನೆನಪನ್ನು ಮೂಡಿಸಿದರು. ನಿಲ್ಲಿಸಿದರು. 'ಶ್ರೀನಿಧಿ' 'ಶ್ರೀಗಂಧ'ಗಳಂತಹ ಮೌಲಿಕ ಸಂಸ್ಮರಣ ಸಂಪುಟಗಳನ್ನು, ಇಂಗ್ಲೀಷ್‌ನಲ್ಲೂ ಮೌಲಿಕ ಗ್ರಂಥವನ್ನು ಪ್ರಕಟಿಸಿ ಕನ್ನಡಿಗರಿಗೆ ಕೊಟ್ಟರು.

ಡಿ.ವಿ.ಜಿ ಶತಮಾನೋತ್ಸವ

ಕೇಂದ್ರ ಸಾಹಿತ್ಯ ಅಕಾಡೆಮಿಯ ಮೂಲಕ ದೆಹಲಿಯಲ್ಲಿ ರಾಷ್ಟ್ರೀಯ ವಿಚಾರಗೋಷ್ಠಿಯೂ ನಡೆಯಿತು. ಇದು ನಾಡು-ಹೊರನಾಡುಗಳನ್ನೂ ಒಳಗೊಂಡಂತೆ ಒಂದು ಮಾದರಿ ಉತ್ಸವವಾಗಿ ಅತ್ಯಂತ ಯಶಸ್ವಿಯಾಗಿ ನಡೆಯಿತು. ಜಿ. ನಾರಾಯಣರು ಯಾವುದೇ ದೀರ್ಘಕಾಲಿಕ ಯೋಜನೆಗಳನ್ನು ಹಾಕಿಕೊಂಡರೆ ಅದರ ಉದ್ಘಾಟನೆಯನ್ನು ಎಷ್ಟು ಉತ್ಸಾಹದಿಂದ ಮಾಡುತ್ತಿದ್ದರೊ ಅದರ ಇಮ್ಮಡಿ ಉತ್ಸಾಹದಿಂದ ಸಮಾರೋಪವನ್ನು ಮಾಡುವುದನ್ನು ಮರೆಯುವುದಿಲ್ಲ. ಸಮಾರೋಪದ ಸಂದರ್ಭದಲ್ಲಿ ಇಡೀ ಯೋಜನೆಯ ಖರ್ಚು-ವೆಚ್ಚಗಳ ವಿವರಗಳನ್ನೂ ಸಭೆಗೆ ಒಪ್ಪಿಸುತ್ತಿದ್ದರು. ಯೋಜನೆಯಲ್ಲಿ ನಡೆಸಿದ ಕಾರ್ಯಚಟುವಟಿಕೆಗಳ ವಿವರವಾದ ವರದಿಯನ್ನು ತಯಾರಿಸುತ್ತಿದ್ದರು. ಅದರಲ್ಲಿ ಕಳುಹಿಸಿದ ಮತ್ತು ಬಂದ ಪತ್ರಗಳ ಸಂಖ್ಯೆಯಂತಹ ವಿವರಗಳೂ ಇರುತ್ತಿದ್ದವು ಎಂಬ ಒಂದು ನಿದರ್ಶನದಿಂದಲೇ ಆ ವರದಿ ಎಷ್ಟು ದಾಖಲೆಪೂರ್ಣವಾಗಿರುತ್ತಿತ್ತು ಎಂಬುದನ್ನು ಗಮನಿಸಬಹುದು.

ಬಿ.ಎಂ.ಶ್ರೀ. ಶತಮಾನೋತ್ಸವದ ತರುವಾಯ ೧೯೮೭-೮೮ರಲ್ಲಿ ಡಿ.ವಿ.ಜಿ. ಶತಮಾನೋತ್ಸವವು ಒದಗಿ ಬಂದಿತು. 'ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ' ಈ ಯೋಜನೆಯನ್ನು ರೂಪಿಸಿತು. ಸಂಸ್ಥೆಯ ಗೌ॥ ಕಾರ್ಯದರ್ಶಿಗಳಾಗಿದ್ದ ನಿಟ್ಟೂರು ಶ್ರೀನಿವಾಸರಾಯರು ಬಿ.ಎಂ.ಶ್ರೀ. ಪ್ರತಿಷ್ಠಾನದ ಕಾರ್ಯಕ್ರಮದಲ್ಲಿ ನಾರಾಯಣರ ಪಾತ್ರವನ್ನು ಹತ್ತಿರದಿಂದ ಬಲ್ಲವರಾಗಿದ್ದರು. ಡಿ.ವಿ.ಜಿ. ಶತಮಾನೋತ್ಸವಕ್ಕೂ ಇವರನ್ನೇ ಕಾರ್ಯಾಧ್ಯಕ್ಷರನ್ನಾಗಿ ಒಪ್ಪಿಸಿದರು. ಶ್ರೀ ಜಿ. ನಾರಾಯಣರು ಈ ಉತ್ಸವ ಸಮಿತಿಗೆ ನನ್ನನ್ನು ಕಾರ್ಯದರ್ಶಿಯಾಗಿ ಮತ್ತು ಬಿ.ಎಂ.ಶ್ರೀ. ಪ್ರತಿಷ್ಠಾನವನ್ನು ಕಾರ್ಯಾಲಯವನ್ನಾಗಿ ಮಾಡಿಕೊಳ್ಳುವ ಶರತ್ತಿನೊಂದಿಗೆ ಈ ಜವಾಬ್ದಾರಿಯನ್ನು ಒಪ್ಪಿಕೊಂಡು ಈ ಕಾರ್ಯವನ್ನು ಅತ್ಯಂತ ಯಶಸ್ವಿಯಾಗಿ ನಡೆಸಿದರು. ಮುಳಬಾಗಿಲಿನಲ್ಲಿ ೧೭-೩-೧೯೮೭ರಂದು ಡಿ.ವಿ.ಜಿ. ಶತಮಾನೋತ್ಸವ ಅದ್ದೂರಿಯಾಗಿ ನಡೆಯಿತು. ವರ್ಷಪೂರ್ತಿ ನಾಡಿನಾದ್ಯಂತ ಡಿ.ವಿ.ಜಿ. ಶತಮಾನೋತ್ಸವಾಚರಣೆ ನಡೆಯಿತು. ಶಾಲಾ-ಕಾಲೇಜು ವಿದ್ಯಾಲಯಗಳಿಗೆ ಡಿ.ವಿ.ಜಿ. ಸಾಹಿತ್ಯ ಸ್ಪರ್ಧೆಗಳು, ಡಿ.ವಿ.ಜಿ.ಯವರ ಹಲವು ಗ್ರಂಥಗಳ ಪ್ರಕಟಣೆ ಎಂ.ವಿ. ಸೀತಾರಾಮಯ್ಯನವರ ಸಂಪಾದಕತ್ವದಲ್ಲಿ 'ಧೀಮಂತ'

ಶತಮಾನೋತ್ಸವ ಸಂಪುಟ, ಡಿ.ವಿ.ಜಿ. ಅಂಚೆ ಚೀಟಿ ಬಿಡುಗಡೆ', ನಾಡಿನಾದ್ಯಂತ ಉತ್ಸವ ಕಾರ್ಯಕ್ರಮಗಳು 'ವನಸುಮ' ಸ್ಮರಣಸಂಚಿಕೆ ಪ್ರಕಟಣೆ ಇತ್ಯಾದಿ ಹಲವಾರು ವೈವಿಧ್ಯಮಯ ಕಾರ್ಯಕ್ರಮಗಳನ್ನೂ ಯೋಜನಾಬದ್ಧವಾಗಿ ಅಚ್ಚುಕಟ್ಟಾಗಿ ನಡೆಸಿದರು.

ಡಿ.ವಿ.ಜಿ. ಶತಮಾನೋತ್ಸವ ಸಂದರ್ಭದಲ್ಲಿ ಜಿ. ನಾರಾಯಣರು ನಡೆಸಿದ ವಿಶಿಷ್ಟ ಕಾರ್ಯಕ್ರಮವೆಂದರೆ 'ಕನ್ನಡ ಜಾಗೃತಿ ಶಿಬಿರ'ಗಳು. ತಿಂಗಳಿಗೊಂದರಂತೆ ಸು. ೧೦-೧೨ ಶಿಬಿರಗಳನ್ನು ಬೆಂಗಳೂರಿನ ಬೇರೆ ಬೇರೆ ಸಂಘ ಸಂಸ್ಥೆಗಳಲ್ಲಿ ನಡೆಸಲಾಯಿತು. ಡಿ.ವಿ.ಜಿ.ಯವರ 'ಸಾರ್ವಜನಿಕದಲ್ಲಿ ಸಾತ್ವಿಕ' ನಾದವನು ಹೇಗೆ ಜವಾಬ್ದಾರಿಯುತ ಪ್ರಜೆಯಾಗಬೇಕು ಎಂಬ ಚಿಂತನೆಗಳ ಹಿನ್ನೆಲೆಯಲ್ಲಿ ಕನ್ನಡ-ನಾಡು-ನುಡಿ ಪ್ರಜ್ಞೆಯನ್ನು ಜಾಗೃತಗೊಳಿಸುವಲ್ಲಿ ಈ ಶಿಬಿರಗಳು ಯಶಸ್ವಿಯಾಗಿದ್ದವು. ಅದರ ಯಾವುದೇ ಕಾರ್ಯಕ್ರಮಗಳು ಜನಪರವಾಗಿರುತ್ತಿದ್ದವು.

ಪ್ರವಾಸ ತಂಡಗಳ ಸಾರಥ್ಯ

ಜಿ. ನಾರಾಯಣರೊಂದಿಗೆ (ಮತ್ತು ನಿಟ್ಟೂರು ಶ್ರೀನಿವಾಸರಾಯರೊಂದಿಗೆ) ಪ್ರವಾಸ ಮಾಡುವುದೇ ಒಂದು ವಿಶಿಷ್ಟ ಅನುಭವ. ಎಷ್ಟೋ ದೀರ್ಘ ಪ್ರಯಾಣವಾಗಿದ್ದರೂ, ಎಷ್ಟೇ ಆಯಾಸವಾಗಿದ್ದರೂ ಬೇರೆಯವರೆಲ್ಲ ನಿದ್ದೆಯ ಕಡೆಗೆ ವಾಲುತ್ತಿದ್ದರೂ ಇವರಿಬ್ಬರೂ ಅಪ್ಪಿತಪ್ಪಿಯೂ ತೂಕಡಿಸದೆ ಅನೇಕ ರಸವತ್ತಾದ ಅನುಭವಗಳನ್ನು ನೆನಪು ಮಾಡಿಕೊಳ್ಳುತ್ತಿದ್ದರು. ಅವರುಗಳು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಗಳ ಕಾಲದಲ್ಲಿ ಸಾಹಿತಿಗಳೊಂದಿಗಿದ್ದಾಗ ನಡೆಯುತ್ತಿದ್ದ ಮಾತು ಕತೆಗಳನ್ನು ನೆನಪಿಸಿಕೊಳ್ಳುವ ಮೂಲಕ, ಅದನ್ನು ಸ್ವಾರಸ್ಯಕರವಾಗಿ ಹೇಳುವ ಮೂಲಕ ನಮ್ಮೆಲ್ಲರನ್ನೂ ಲವಲವಿಕೆಯಿಂದಿರಿಸುತ್ತಿದ್ದರು.

ಬಿ.ಎಂ.ಶ್ರೀ.ಶತಮಾನೋತ್ಸವ ಕಾರ್ಯಕ್ರಮಗಳಿಗಾಗಿ ೨೭-೭-೮೪ರಿಂದ ೧-೮-೮೪ರ ವರೆಗೆ ಬಿಜಾಪುರ, ಬೀದರ್, ಗುಲಬರ್ಗಾ, ಸುರಪುರ, ರಾಯಚೂರುಗಳ ಕಡೆ ಜಿ. ನಾರಾಯಣರೊಂದಿಗೆ ಎಂ.ವಿ.ಸೀತಾರಾಮಯ್ಯ, ಜಿ.ಎಸ್, ಶಿವರುದ್ರಪ್ಪ, ಎಸ್.ಆರ್. ಮಳಗಿ ಅವರುಗಳ ತಂಡ ಪ್ರವಾಸ ಕೈಗೊಂಡಿತ್ತು.

ಟಿ.ಎಸ್. ವೆಂಕಣ್ಣಯ್ಯ ಶತಮಾನೋತ್ಸವ ಕಾರ್ಯಕ್ರಮಗಳಿಗಾಗಿ ೧೩-೧೦-೯೮೫ರಿಂದ ೧೫-೧೦-೯೮೫ರ ವರೆಗೆ ಚಳ್ಳಕೆರೆ, ತಳುಕು, ಚಿತ್ರದುರ್ಗಗಳಲ್ಲಿ ಜಿ. ನಾರಾಯಣ, ವಿ. ಸೀತಾರಾಮಯ್ಯ, ನಿಟ್ಟೂರು ಶ್ರೀನಿವಾಸರಾವ್, ತ.ಸು. ಶಾಮರಾವ್, ಡಾ॥ ಎಂ. ಚಿದಾನಂದ ಮೂರ್ತಿ, ಡಾ॥ ರಾಮಚಂದ್ರಶರ್ಮ, ಡಾ॥ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ ಅವರುಗಳ ತಂಡ ಪ್ರವಾಸ ಮಾಡಿತ್ತು. ಮೈಸೂರಿನಿಂದ ಪ್ರೊ. ತ.ಸು. ಶಾಮರಾವ್, ಡಾ॥ ಎಚ್. ತಿಪ್ಪೇರುದ್ರ ಸ್ವಾಮಿ ಅವರುಗಳು ಬಂದಿದ್ದರು. ಬೆಳಗೆರೆ ಕೃಷ್ಣಶಾಸ್ತ್ರಿಗಳ ನೇತೃತ್ವದಲ್ಲಿ ಈ ಎಲ್ಲ ಕಾರ್ಯಕ್ರಮಗಳು ರೂಪುಗೊಂಡಿದ್ದವು.

ಡಿ.ವಿ.ಜಿ. ಶತಮಾನೋತ್ಸವ ಕಾರ್ಯಕ್ರಮಗಳಿಗಾಗಿ ಫೆಬ್ರವರಿ ೯೮೮ರಲ್ಲಿ ಮುಂಬಯಿ ಪ್ರವಾಸವನ್ನು ಮಾಡಲಾಗಿತ್ತು. ಜಿ. ನಾರಾಯಣರು, ಎಂ.ವಿ.ಸೀತಾರಾಮಯ್ಯ, ಎಲ್.ಎಸ್. ಶೇಷಗಿರಿರಾವ್ ಅವರುಗಳು ಈ ತಂಡದಲ್ಲಿದ್ದರು.

ಪ್ರೊ॥ ಅ.ರಾ. ಮಿತ್ರ, ಪ್ರೊ॥ ಎಂ.ಎಚ್. ಕೃಷ್ಣಯ್ಯ, ಡಾ॥ ಜಿ.ಎಸ್. ಸಿದ್ಧಲಿಂಗಯ್ಯ, ಡಾ॥ ಹಿ.ಚಿ. ನಾರಾಯಣ ಇನ್ನೂ ಮುಂತಾದ ಸಾಹಿತಿಗಳೊಂದಿಗೂ ಹಲವಾರು ಬಾರಿ ಈ ಉತ್ಸವ ಸಂದರ್ಭಗಳಲ್ಲಿ ಪ್ರವಾಸಗಳನ್ನು ಕೈಗೊಳ್ಳಲಾಗಿತ್ತು. ಈ ಎಲ್ಲ ಪ್ರವಾಸ ತಂಡಗಳಲ್ಲಿ ನಾನು ಕಾರ್ಯದರ್ಶಿಯಾಗಿ ಸಾರಥ್ಯವಹಿಸುವ ಅವಕಾಶವನ್ನು ಪಡೆದಿದ್ದೆ. ಅದೊಂದು ವಿಶಿಷ್ಟ ಅನುಭವಲೋಕ. ಅದು ಬಹುಪಾಲು ರಸವತ್ತಾಗಿರುತ್ತಿದ್ದುದು ಜಿ. ನಾರಾಯಣರಿಂದ. ಮತ್ತು ನಿಟ್ಟೂರು ಶ್ರೀನಿವಾಸರಾಯರಿಗಿಂತ ಜಿ. ನಾರಾಯಣರ ಅನುಭವದ ಮಾತುಗಳಂತೂ ರಸಘಳಿಗೆಗಳಾಗಿರುತ್ತಿದ್ದವು. ಅವರಲ್ಲಿ ಹಾಸ್ಯದ, ಪೇಚಿನ, ಗಂಭೀರ ಚಿಂತನೆಯ, ಕನ್ನಡ ನಾಡು ನುಡಿ ಕುರಿತ ಪ್ರಚಲಿತ ಸಂಗತಿಗಳ ಹಾಗೂ ರಾಜಕೀಯ ವಿದ್ಯಮಾನಗಳ ಏಳು-ಬೀಳುಗಳ ಸಂಗತಿಗಳಿರುತ್ತಿದ್ದವು. ಕರ್ನಾಟಕವನ್ನು ಕಟ್ಟುವ ನಿಟ್ಟಿನಲ್ಲಿ ಸಾಹಿತಿಗಳ ಸಾರ್ವಜನಿಕರ ಕರ್ತವ್ಯಗಳತ್ತ ಗಮನಹರಿಸುವ ಚರ್ಚೆಗಳಿರುತ್ತಿದ್ದವು. ಇವುಗಳ ನಡುನಡುವೆ ಸಾಹಿತಿಗಳ ಸಂಗಡ ಹಾಸ್ಯ ಪ್ರಸಂಗಗಳ ಹದವಾದ ತುಣುಕುಗಳಿಂದ ಇಡೀ ಪ್ರಯಾಣ ಲವಲವಿಕೆ ಉಂಟಾಗುವಂತೆ ಮಾಡುತ್ತಿದ್ದರು.

ಯೋಜನಾಬದ್ಧ ಕಾರ್ಯವೈಖರಿ

ಬಿ.ಎಂ.ಶ್ರೀ. ಮತ್ತು ಡಿ.ವಿ.ಜಿ. ಶತಮಾನೋತ್ಸವಗಳೆರಡು ನಾನು ಜಿ. ನಾರಾಯಣರೊಂದಿಗೆ ನೇರವಾಗಿ ಭಾಗವಹಿಸಿ ಪಡೆದ ಅನುಭವಗಳು. ಇಂತಹ ಇನ್ನು ಅನೇಕ ಯೋಜನೆಗಳನ್ನು ನಾರಾಯಣರು ನಡೆಸಿದ್ದಾರೆ. ಪುಸ್ತಕ ಪ್ರಾಧಿಕಾರದ ಮೂಲಕ ನಡೆಸಿದ ಜಾಗೃತಿ ಸಮ್ಮೇಳನಗಳು ಹಾಗೂ ಮನೆ ಮನೆಗೆ ಪುಸ್ತಕ ಮಾರಾಟ; ಗಮಕ ಕಲಾಪರಿಷತ್ತಿನ ಮೂಲಕ ನಡೆಸಿದ ಗಮಕ ಕಾರ್ಯಕ್ರಮಗಳು ಪರಿಷತ್ತಿನ ಸಮ್ಮೇಳನಗಳು ಪತ್ರಿಕಾ ಅಕಾಡೆಮಿಯ ೧೪೨೫ನೇ ವರ್ಷಾಚರಣೆ, ವಿನೋದ ವಿಶೇಷ ಸಂದರ್ಭಗಳ ಕಾರ್ಯಕ್ರಮಗಳು ಹೀಗೆ ಹಲವು ವೈವಿಧ್ಯ ಕಾರ್ಯಯೋಜನೆಗಳ ಮೂಲಕ ಜಿ. ನಾರಾಯಣರು ನಾಡಿನಾದ್ಯಂತ ಮನೆಮಾತಾಗಿದ್ದಾರೆ. ಯಾವುದೇ ಕಾರ್ಯಕ್ರಮವಾಗಲಿ ಯೋಜನಾಬದ್ಧವಾಗಿ ನಡೆಯುತ್ತಿತ್ತು. ಕಾರ್ಯಕ್ರಮದ ಪ್ರತಿಯೊಂದು ವಿವರಗಳನ್ನು ಪಟ್ಟಿಮಾಡಿಕೊಂಡು ಅವುಗಳನ್ನು ಹೇಗೆ ನಿರ್ವಹಿಸಬೇಕೆಂಬುದರ ಬಗ್ಗೆ ಖಚಿತವಾಗಿ ವಿರಣೆಗಳನ್ನು ಕಾರ್ಯಕರ್ತರಿಗೆ ನೀಡಿ ಹಾಗೇ ಆಗುವಂತೆ ನೋಡಿಕೊಳ್ಳುತ್ತಿದ್ದರು.

ಪ್ರತಿಯೊಂದು ಕಾರ್ಯಕ್ರಮವೂ ಕನ್ನಡ ನಾಡು ನುಡಿಯ ಪೋಷಣೆಗೆ ಪೂರಕವಾದ ಅತಿ ಮುಖ್ಯ ಕಾರ್ಯಕ್ರಮವನ್ನಾಗಿ ಕಾರ್ಯಕರ್ತರಲ್ಲಿ ಪ್ರೇರಣೆ ನೀಡುತ್ತಿದ್ದರು. ನಮ್ಮಗಳಲ್ಲಿ ಅಭಿಮಾನ ಮೂಡುವಂತೆ, ನಾವೆಲ್ಲ ಮಾಡಲೇಬೇಕಾದ ಕಾರ್ಯವೆನ್ನುವಂತೆ ಆತ್ಮೀಯತೆಯನ್ನೂ ಸ್ವಂತಿಕೆಯನ್ನೂ ಮೂಡಿಸುತ್ತಿದ್ದರು. ಪೂರ್ವಭಾವಿಯಾಗಿ ಮೂರುನಾಲ್ಕು ಸಭೆಗಳನ್ನು ನಡೆಸಿ ಕೆಲಸಗಳನ್ನು ಹಂಚಿ ಅವುಗಳ ಕಾಲಕಾಲದ ಪ್ರಗತಿಯನ್ನು ಪರಿಶೀಲಿಸುತ್ತ ಆಹ್ವಾನಪತ್ರಗಳನ್ನು ಯಾರುಯಾರಿಗೆ ಕಳುಹಿಸಬೇಕೆಂಬ ವಿಳಾಸ ಪಟ್ಟಿಗಳನ್ನು ಮೊದಲೇ ಸಿದ್ಧಮಾಡಿಟ್ಟುಕೊಂಡು ಅವುಗಳನ್ನು ನೀಟಾಗಿ ಕತ್ತರಿಸಿ ಕವರ್‌ಗಳಿಗೆ ಅಂಟಿಸುವ ಕಾರ್ಯದಲ್ಲಿ ಕಾರ್ಯಕರ್ತರ ಜೊತೆಯಲ್ಲಿ ತಾವೂ ಇರುತ್ತಿದ್ದರು. ಸ್ಟಾಂಪುಗಳನ್ನು ಅಂಟಿಸುವಾಗಲೂ ಸರಿಯಾದ ಸ್ಥಳದಲ್ಲಿ

ನೇರವಾಗಿ ಅಂಟಿಸುವ ಬಗ್ಗೆ ಕಾಳಜಿವಹಿಸುವುದನ್ನು ನಾನು ನಾರಾಯಣರಿಂದ ಕಲಿತಿದ್ದೇನೆ. ಪಿಳಾಸವನ್ನು ಸೊಟ್ಟ-ಪಟ್ಟವಿರದಂತೆ ಸರಿಯಾಗಿ ಕತ್ತರಿಸುವುದನ್ನು ಕವರ್‌ಗೆ ಅದನ್ನು ಮತ್ತು ಸ್ಟಾಂಪನ್ನು ಸೊಟ್ಟಪಟ್ಟ ಆಗದಂತೆ ನೇರವಾಗಿ ಮತ್ತು ಅದಕ್ಕೆ ಮೀಸಲಾದ ಸ್ಥಳದಲ್ಲಿಯೇ ನೀಟಾಗಿ ಅಂಟಿಸುವುದನ್ನು ಹಾಳೆಗಳಿಗೆ ಗುಂಡುಪಿನ್ನು ಹಾಕುವಾಗ ಅದರ ತುದಿ ಹೊರಗೆ ಕಾಣದಂತೆ, ಕೈಗೆ ತಾಗದಂತೆ ಮೇಲಿನ ಹಾಳೆಯಿಂದ ಮತ್ತೆ ಒಳಕ್ಕೆ ಚುಚ್ಚುವುದನ್ನು ನನಗೆ ಖುದ್ದು ತೋರಿಸಿಕೊಟ್ಟಿದ್ದಾರೆ.

ಕಾರ್ಯಕರ್ತರೊಂದಿಗೆ ಕಾರ್ಯಕರ್ತರಾಗಿರುವಂತೆಯೇ ಸಮಾರಂಭಗಳಲ್ಲಿ ಗಣ್ಯರೊಂದಿಗೆ ಗಣ್ಯರಾಗಿ ನುರಿತ ಭಾಷಣಕಾರರಾಗಿ ಕಾರ್ಯಕ್ರಮದ ಯಶಸ್ವಿಗೂ ಕಾರಣರಾಗುವ ಕಲೆ. ಜಿ. ನಾರಾಯಣರಿಗೆ ಮಾತ್ರ ಮೀಸಲಾದದ್ದು ಎಂದರೆ ತಪ್ಪಾಗದು. ಬರೆದುಕೊಂಡು ಅಭ್ಯಾಸಮಾಡಿಕೊಂಡು ಸಿದ್ಧವಾಗಿದ್ದ ಭಾಷಣವನ್ನು ಓದಿ ಅದರ ಮುಖ್ಯ ಭಾಗಗಳನ್ನೂ ವಿವರಿಸಿ ಸಭಿಕರಿಗೆ ಮನದಟ್ಟಾಗುವಂತೆ ಮೊದಲೇ ತಿಳಿಸಿದ್ದ ಸಮಯಕ್ಕೆ ಬದ್ಧರಾಗಿ ಭಾಷಣ ಮಾಡುವ ಶ್ರೀ ಜಿ. ನಾರಾಯಣರು ಈ ಕಾರಣಕ್ಕಾಗಿ ಕೆಲವು ವೇಳೆ ದೀರ್ಘಭಾಷಣಕಾರರು ಎನಿಸಿಕೊಂಡರೂ ವಿಷಯದ ಪ್ರತಿಪಾದನೆಯಲ್ಲಿ ಮತ್ತು ಸಭಿಕರಿಗೆ ಹಾಗೂ ಸಂಬಂಧಪಟ್ಟ ಮಂತ್ರಿ – ಗಣ್ಯರ ಗಮನಕ್ಕೆ ಅದನ್ನು ತಂದು ಮನ ಮುಟ್ಟುವಂತೆ ಹೇಳುವಲ್ಲಿ ಅವರು ಎಲ್ಲರಿಂದಲೂ ಮೆಚ್ಚುಗೆ ಪಡೆಯುತ್ತಾರೆ. ಸರಳವಾದ ಅವರ ವೇಷ ಉಡುಪು ಹೇಗೆ ಶಿಸ್ತುಬದ್ಧವೋ ಹಾಗೆಯೇ ಅವರ ನಡೆ-ನುಡಿಗಳೂ ಇರುತ್ತಿದ್ದವು. ನುಡಿದಂತೆ ನಡೆಯುವ ಗಾಂಧಿತತ್ವವನ್ನು ಚಾಚೂತಪ್ಪದಂತೆ ಅನುಕರಿಸುತ್ತಿರುವ ಕೆಲವೇ ಗಾಂಧೀವಾದಿಗಳಲ್ಲಿ ನಾರಾಯಣರು ಒಬ್ಬರಾಗಿ ಇಂದು ಎಲ್ಲರ ಗಮನ ಸೆಳೆಯುತ್ತಾರೆ.

ಕಾರ್ಯಕರ್ತರ ತಂಡ

ಕಾರ್ಯಕರ್ತರನ್ನು ಹುರಿದುಂಬಿಸುತ್ತ ಭವಿಷ್ಯದಲ್ಲಿ ಅವರು ಶ್ರದ್ಧಾಳುಗಳಾಗಿ ಸೇವಾಪರರಾಗಿ ಕಾರ್ಯನಿರ್ವಹಿಸುವಂತೆ ಪ್ರೇರೇಪಿಸುತ್ತಿದ್ದ ರೀತಿ ಅದ್ಭುತವಾದದ್ದು. ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ಕಟ್ಟಿದ್ದ ಕಾರ್ಯಕರ್ತರ ತಂಡ ಇಂದಿಗೂ ಅವಿಚ್ಛಿನ್ನವಾಗಿ ನಾಡು ನುಡಿಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಪರಿ ಅನನ್ಯವಾದದ್ದು. ಬಿ.ಎಂ.ಶ್ರೀ. ಶತಮಾನೋತ್ಸವ ಸಂದರ್ಭ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಸಂದರ್ಭ ಡಿ.ವಿ.ಜಿ. ಶತಮಾನೋತ್ಸವ ಸಂದರ್ಭಗಳಲ್ಲೆಲ್ಲ ಈ ತಂಡ ನಾರಾಯಣರ ಜೊತೆಯಲ್ಲಿ ಟೊಂಕಕಟ್ಟಿ ಕಾರ್ಯತತ್ಪರವಾಗುತ್ತಿದ್ದುದನ್ನು ನಾನು ಬಲ್ಲೆ. ನಾರಾಯಣರು ಕರೆದಾಗಲೆಲ್ಲ ಅವರು ಹೇಳುವ ಕೆಲಸಗಳನ್ನು ಯಶಸ್ವಿಯಾಗಿ ಮಾಡುವ ಕಲೆ ಈ ಕಾರ್ಯಕರ್ತರ ತಂಡಕ್ಕಿದೆ. ಮನೆಮನೆಗೆ ಪುಸ್ತಕ ಮಾರಾಟವಾಗಲಿ, ಕನ್ನಡ ಜಾಗೃತಿ ಸಮಾವೇಶವಾಗಲಿ, ಸಭೆ-ಸಮಾರಂಭಗಳಾಗಲಿ ಎಲ್ಲದರಲ್ಲೂ ನಾರಾಯಣರ ಅಚ್ಚುಕಟ್ಟುತನಕ್ಕೆ ಅನುಗುಣವಾಗಿ ಶಿಸ್ತುಬದ್ಧವಾಗಿ ಯೋಜಿತವಾಗಿ ಕಾರ್ಯನಿರ್ವಹಿಸುವ ಜಾಣ್ಮೆ ಈ ಕಾರ್ಯಕರ್ತರಿಗಿದೆ. ಇದು ನಾರಾಯಣರ ಯಾವುದೇ ಯೋಜನೆಯ ಯಶೋಗಾಥೆಯ ಹಿಂದಿರುವ ಶಕ್ತಿರೂಪ. ಇವರಲ್ಲಿ ಶ್ರೀ ಜಿ.ಕೆ ಗುಂಡೂರಾವ್ – ಜಿ.ಕೆ. ಅನಂತ್ ಸಹೋದರರು, ಶ್ರೀ ಚಂಪಪ್ಪ, ಶ್ರೀ ಗಂಗಾಧರ, ಶ್ರೀರಾಮೇಗೌಡ, ಶ್ರೀಮತಿ ರಮಾದೇವಿ ವಿಶ್ವೇಶ್ವರಯ್ಯ,

ಶೀ ನಂ. ನಂಜಪ್ಪ ಮುಂತಾದ ಅನೇಕರ ಹೆಸರುಗಳನ್ನು ಹೇಳಬಹುದಾಗಿದೆ. ಇವರುಗಳ ಯಶಸ್ವೀ ಕಾರ್ಯ ಸಾಧನೆಯ ಹಿಂದೆ ಜಿ. ನಾರಾಯಣರ ಮುದ್ರೆ ಇದ್ದೇ ಇರುತ್ತದೆ.

ಸಾಹಿತ್ಯ ಪರಿಚಾರಿಕೆ

ನಾನೂ ಅವರ ಕಾರ್ಯಕರ್ತರ ಗುಂಪಿನ ಒಬ್ಬ ಸದಸ್ಯ ಎಂದು ಹೇಳಿಕೊಳ್ಳಲು ನನಗೆ ಹೆಮ್ಮೆ ಎನಿಸುತ್ತದೆ. ಜಿ.ಎಂ.ಶ್ರೀ ಶತಮಾನೋತ್ಸವ ಮತ್ತು ಡಿ.ವಿ.ಜಿ. ಶತಮಾನೋತ್ಸವಗಳಲ್ಲಿ ಅವರ ಅಧ್ಯಕ್ಷತೆಯ ಸಮಿತಿಯಲ್ಲಿ ನಾನೂ ಒಬ್ಬ ಕಾರ್ಯದರ್ಶಿಯಾಗಿ ಅವರ ಶೀರಹತ್ತಿರದ ಕಾರ್ಯಕರ್ತನಾಗಿ ದುಡಿದ್ದೇನೆ. ನಾಡಿನ ದೇಶದ ವಿವಿಧ ಭಾಗಗಳಲ್ಲಿ ಈ ಉತ್ಸವ ಕಾರ್ಯಕ್ರಮಗಳನ್ನು ಹಾಕಿಕೊಂಡು ಕಾರಿನಲ್ಲಿ ಹೋಗುವ ಸೀತಾರಾಮಯ್ಯನವರ ಮತ್ತು ನಾರಾಯಣರ ನೇತೃತ್ವದ ಸಾಹಿತಿಗಳ ತಂಡಕ್ಕೆ ನಾನೇ ಸಾರಥಿಯಾಗಿದ್ದ ಹಲವು ಸಂದರ್ಭಗಳುಂಟು. ಸಾಹಿತಿಗಳನ್ನು ಅವರವರ ಮನೆಯಿಂದಲೇ ಕರೆತರುವ, ಬಿಡುವ, ಪ್ರಯಾಣಕಾಲದ ಊಟ-ತಿಂಡಿಯ ಅಗತ್ಯಗಳನ್ನು ನೋಡಿಕೊಳ್ಳುವ ಕಾರ್ಯಕ್ರಮಗಳ ಊರುಗಳಲ್ಲಿ ಉಳಿದುಕೊಳ್ಳುವ ವ್ಯವಸ್ಥೆಯನ್ನು ನೋಡುವ ಇತ್ಯಾದಿ ಸಾಹಿತ್ಯ ಪರಿಚಾರಿಕೆಯ ಕಾರ್ಯಗಳೊಂದಿಗೆ ಸಮಾರಂಭಗಳಲ್ಲಿ ಪುಸ್ತಕ ಮಾರಾಟಮಾಡುವ ಹಾಗೂ ಆಗೊಮ್ಮೆ ಈಗೊಮ್ಮೆ ವೇದಿಕೆಯನ್ನು ಹತ್ತಿ ಸ್ವಾಗತವನ್ನು ವಂದನಾರ್ಪಣೆಯನ್ನೂ ವಾಚನವನ್ನೂ ಮಾಡುವ ಅವಕಾಶವನ್ನು ಪಡೆಯುತ್ತಿದ್ದೆ. ನನ್ನ ಈ ನಿಷ್ಠಾವಂತ ಪರಿಚಾರಿಕೆಯನ್ನು ಮೆಚ್ಚುಗೆಯಿಂದ ಜಿ. ನಾರಾಯಣರು ಪ್ರೋತ್ಸಾಹಿಸುತ್ತಿದ್ದರು. ನಿಟ್ಟೂರು ಮತ್ತು ಎಂ.ವಿ.ಸೀ.ಯವರ ಊಟದ ಪಾಲನ್ನೂ ಪಡೆಯುತ್ತಾ ನನಗೆ ಕೊಡುತ್ತಿದ್ದರು. ನಾರಾಯಣರೂ ನನ್ನನ್ನೇ ಕರೆಯುತ್ತಿದ್ದರು. ಇವರೆಲ್ಲರ ಪಾಲಿನ ಊಟದ ಉಪಕಾರದ ಋಣಭಾರ ನನ್ನ ಮೇಲಿದೆ. ಅವರಿಬ್ಬರಿಗೂ ಉಪ್ಪು, ಸಕ್ಕರೆಯ ಯಾವ ಖಾಯಿಲೆಯೂ ಇರಲಿಲ್ಲ. ಎಲ್ಲವನ್ನು ರುಚಿ ನೋಡುತ್ತಿದ್ದರು. ಅವರ ಪ್ರಯಾಣ ಕಾಲದ ಯೋಗಕ್ಷೇಮವನ್ನು ನೋಡಿಕೊಳ್ಳುವವನೂ ಆಗಿದ್ದೆ. ಇವರುಗಳೊಂದಿಗೆ ಮತ್ತು ಜಿ. ನಾರಾಯಣರೊಂದಿಗೆ ಹಲವು ಸಂದರ್ಭಗಳಲ್ಲಿ ಒಂದೇ ಕೊಠಡಿಯಲ್ಲಿಯೂ ಇರುತ್ತಿದ್ದೆ. ಶತಮಾನೋತ್ಸವಕ್ಕಾಗಿ ಮುಂಬಯಿಯ ಕರ್ನಾಟಕ ಸಂಘದ ಕೊಠಡಿಯಲ್ಲಿ ನಾರಾಯಣರು ನಾನು ಒಂದು ಕೊಠಡಿಯಲ್ಲಿ ಸೀತಾರಾಮಯ್ಯನವರು ಶೇಷಗಿರಿರಾಯರು ಇನ್ನೊಂದು ಕೊಠಡಿಯಲ್ಲಿದ್ದೆವು. ನನಗೆ ಆಗ ನಾರಾಯಣರು ಹೇಳಿದ ಮಾತುಗಳನ್ನು ನನ್ನ ಬಗ್ಗೆ ಮತ್ತು ಪ್ರತಿಷ್ಠಾನದ ಬಗ್ಗೆ ಮಾತಾಡುವ ಸಂದರ್ಭದಲ್ಲೆಲ್ಲ ಈಗಲೂ ನೆನಪಿಸಿಕೊಳ್ಳುತ್ತಿರುತ್ತಾರೆ. "ಪ್ರತಿಷ್ಠಾನಕ್ಕೆ ಅಧ್ಯಕ್ಷರಾಗಿ ಕಾರ್ಯದರ್ಶಿಗಳಾಗಿ ಯಾರು ಬರಲಿ ಹೋಗಲಿ ಸೀತಾರಾಮಯ್ಯನವರ ನಂತರ ಅದನ್ನು ಮುನ್ನಡೆಸಿಕೊಂಡು ಹೋಗುವವರು ನೀವೇ. ನಿಮ್ಮಲ್ಲಿರುವ ಈ ನಿಷ್ಠಾವಂತ ಸೇವಾ ಮನೋಭಾವ ಹೀಗೇ ಇರಲಿ. ಯಾವ ಕಾರಣಕ್ಕೂ ಪ್ರತಿಷ್ಠಾನವನ್ನು ಬಿಡಬೇಡಿ. ಅದೇನಾದರೂ ಸೀತಾರಾಮಯ್ಯನವರ ಕನಸಿನಂತೆ ಮುನ್ನಡೆಯಬೇಕಾದರೆ ನಿಮ್ಮಿಂದಲೇ ಆ ಕೆಲಸ ಆಗಬೇಕು" ಎಂದು ಹಲವು ಬಾರಿ ಪ್ರತಿಷ್ಠಾನದ ಸಭೆಗಳಲ್ಲಿ ನಾರಾಯಣರೇ ನೆನಪಿಸಿಕೊಂಡು ಹೇಳಿದ್ದಾರೆ. ಗೀತಾಚಾರ್ಯರು ನನ್ನ ಮಾತನ್ನು ಪಾಲಿಸಿದ್ದಾರೆ. ಸೀತಾರಾಮಯ್ಯನವರ ನಂತರ ಅವರಷ್ಟೇ ಶ್ರದ್ಧೆ-ಉತ್ಸಾಹಗಳಿಂದ ಪ್ರತಿಷ್ಠಾನವನ್ನು ಕಟ್ಟಿದ್ದಾರೆ. ನಾನು ಅಂದಿನಿಂದಲೂ ಪ್ರತಿಷ್ಠಾನದ

ಜೊತೆಯಲ್ಲೇ ಇದ್ದು ಗಮನಿಸುತ್ತಾ ಬಂದಿದ್ದೇನೆ. ಅವರ ಮನೆಯ ಕೆಲಸದಲ್ಲಾದರೂ ಉದಾಸೀನ ತೋರಿದರು ಪ್ರತಿಷ್ಠಾನದ ಕೆಲಸದಲ್ಲಿ ತೋರಿಸಿಲ್ಲ, ಎಂದು ಅಭಿಮಾನದಿಂದ ಹೇಳುತ್ತಾರೆ. ಹಾಗೆ ಹೇಳುತ್ತಲೇ ನನ್ನನ್ನು ಮತ್ತೆ ಮತ್ತೆ ಪ್ರತಿಷ್ಠಾನದ ಸೇವೆಯಲ್ಲೇ ಕಟ್ಟಿ ಹಾಕುತ್ತಿದ್ದಾರೆ.

ಜಿ. ನಾರಾಯಣರು ಪ್ರತಿಷ್ಠಾನದಲ್ಲಿ ಪದಾಧಿಕಾರಿಗಳಾಗಿಲ್ಲದೇ ಹೋದರೂ ಪ್ರತಿಷ್ಠಾನದವರೇ ಆಗಿರುವವರು. ಸೀತಾರಾಮಯ್ಯನವರ ನಂತರ ಅವರ ಕನಸುಗಳನ್ನು ಸಾಕಾರಗೊಳಿಸುವಲ್ಲಿ ನಾರಾಯಣರ ಪಾತ್ರ ಬಹಳ ಪ್ರಮುಖವಾದುದು. ಸೀತಾರಾಮಯ್ಯನವರು ಇರುವಾಗಲೆ ಅವರನಂತರದ ಪ್ರತಿಷ್ಠಾನದ ಅಧ್ಯಕ್ಷರ ಬಗ್ಗೆ ಯೋಚಿಸಿದ್ದರು. ಅವರ ಮನಸ್ಸಿನಲ್ಲಿದ್ದುದು ಪ್ರೊ. ಜಿ. ವೆಂಕಟಸುಬ್ಬಯ್ಯನವರು, ಜಿ. ನಾರಾಯಣ, ಎಲ್.ಎಸ್. ಶೇಷಗಿರಿರಾಯರು ಮತ್ತು ಡಾ॥ ಎಂ. ಚಿದಾನಂದ ಮೂರ್ತಿಗಳು. ಈ ಬಗ್ಗೆ ಈ ನಾಲುವರೊಂದಿಗೂ ಪ್ರಸ್ತಾಪಿಸಿಯೂ ಇದ್ದರು. ಪ್ರತಿಷ್ಠಾನ ಸಾಹಿತ್ಯ ಸಂಶೋಧನ ಸಂಸ್ಥೆಯಾದರಿಂದ ಸಾಹಿತಿಗಳೇ ಆಗಬೇಕೆಂಬ ಕಾರಣ ಮುಂದಿಟ್ಟುಕೊಂಡು ಜಿ. ನಾರಾಯಣರು ಅಧ್ಯಕ್ಷ ಸ್ಥಾನವನ್ನು ನಿರಾಕರಿಸುತ್ತಲೇ ಬಂದಿದ್ದಾರೆ. ಅದರೂ ಸಮಿತಿಗಳಲ್ಲಿದ್ದುಕೊಂಡು ಸಹಕರಿಸುತ್ತ ಕಾಲಕಾಲಕ್ಕೆ ಪ್ರತಿಷ್ಠಾನಕ್ಕೆ ಆಗಬೇಕಾದ ಸರ್ಕಾರದ ಕೆಲಸಗಳನ್ನು ಮಾಡಿಸಿಕೊಡುವಲ್ಲಿ ನಮ್ಮೊಂದಿಗಿದ್ದಾರೆ. ಅನುದಾನಗಳನ್ನು ದೊರಕಿಸುವಲ್ಲಿ ನಿವೇಶನವನ್ನು ಕೊಡಿಸುವಲ್ಲಿ ಜಿ. ನಾರಾಯಣರ ನೆರವು ಬಹಳ ಅಮೂಲ್ಯವಾದುದಾಗಿದೆ. ಮುಖ್ಯ ಮಂತ್ರಿಗಳನ್ನು ಭೇಟಿಮಾಡುವ ನಿಯೋಗದಲ್ಲಿ ನಮ್ಮೊಂದಿಗೆ ಬಂದಿರುವುದಲ್ಲದೆ ಬೇರೆ ಬೇರೆ ಸಂದರ್ಭಗಳಲ್ಲೂ ಅವರುಗಳಿಗೆ ಪ್ರತಿಷ್ಠಾನದ ಬಗೆಗೆ ಮನವರಿಕೆ ಮಾಡಿಕೊಡುವ ಮೂಲಕ ಪ್ರತಿಷ್ಠಾನದ ನಿಜವಾದ ಪೋಷಕರಾಗಿದ್ದಾರೆ. ನಿಟ್ಟೂರು ಶ್ರೀನಿವಾಸರಾಯರ ನಂತರ ನಮ್ಮೆಲ್ಲರ ಒತ್ತಾಯಕ್ಕೆ ಒಲ್ಲದ ಮನಸ್ಸಿನಿಂದಲೇ ಗೌರವಾಧ್ಯಕ್ಷರಾಗಿ ಇರಲು ಒಪ್ಪಿ ಎಂದಿನಂತೆ ಪ್ರತಿಷ್ಠಾನವನ್ನು ಕೈಹಿಡಿದು ನಡೆಸುತ್ತಿದ್ದಾರೆ. ಇವರ ಸಹಾಯ-ಸಹಕಾರ ಪೋಷಣೆ ಇಲ್ಲದಿದ್ದರೆ ಪ್ರತಿಷ್ಠಾನ ಇಂದು ಈ ಸ್ಥಿತಿಯಲ್ಲಿರುತ್ತಿರಲಿಲ್ಲ ಎಂದರೆ ಉತ್ಪ್ರೇಕ್ಷೆಯಾಗುವುದಿಲ್ಲ.

❑

ಭಾಗ – ೨

ಸಂತೃಪ್ತಿಯ ಹಿನ್ನೋಟ

ಸಂತೃಪ್ತಿಯ ಹಿನ್ನೋಟ

ನಾನು ಹುಟ್ಟಿದ್ದು ೨-೯-೧೯೨೩ರಲ್ಲಿ.

ಪ್ರಾಥಮಿಕ ವಿದ್ಯಾಭ್ಯಾಸ ನನ್ನ ಹುಟ್ಟು ಊರಾದ ದೇಶಹಳ್ಳಿ (ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ)ಯಲ್ಲಿ, ಮಾಧ್ಯಮಿಕ ಶಿಕ್ಷಣ ಮದ್ದೂರಿನಲ್ಲಿ ಪ್ರೌಢಶಿಕ್ಷಣ ಚನ್ನಪಟ್ಟಣದಲ್ಲಿ (೧೯೩೭–೪೦) ನಡೆಯಿತು. ಆಗ ದೇಶದಲ್ಲಿ ರಾಜಕೀಯ, ವಾತಾವರಣ ತುಂಬಾ ಬಿಸಿಯಾಗಿತ್ತು. ಗಣೇಶೋತ್ಸವದ ನೆಪದಲ್ಲಿ ನಮ್ಮ ಊರಿನಲ್ಲಿ ಒಂದು ಸಭೆ ಏರ್ಪಡಿಸಿದ್ದೆ. ಅದಕ್ಕೆ ನನ್ನ ಸಹಪಾಠಿಗಳನ್ನೆಲ್ಲಾ ಆಹ್ವಾನಿಸಿದ್ದೆ. ಅಲ್ಲಿ ಮಾತನಾಡಿದವರೆಲ್ಲ ರಾಜಕೀಯ ಕುರಿತೇ ಮಾತನಾಡಿದರು. ಈ ವಿಷಯ ಪೊಲೀಸಿನವರ ಮೂಲಕ ನಮ್ಮ ಮುಖ್ಯೋಪಾಧ್ಯಾಯರ ಕಿವಿಗೆ ಬಿತ್ತು. ನಮ್ಮ ತಂದೆ ತಾಯಿಗಳಿಗೆ ಮುಖ್ಯೋಪಾಧ್ಯಾಯರಿಂದ ಎಚ್ಚರಿಕೆ ಪತ್ರ ಬಂತು. ನಮ್ಮ ಮನೆಯ ಜವಾಬ್ದಾರಿ ಹೊತ್ತಿದ್ದವರು ನಮ್ಮ ಸೋದರಮಾವಂದಿರಾದ ಶ್ರೀ ಪಿ. ತಮ್ಮಯ್ಯನವರು. ಊರಿನ ಪಟೇಲರು ತಮ್ಮಯ್ಯನವರನ್ನು ಕರೆಸಿಕೊಂಡು 'ನಿಮ್ಮ ಹುಡುಗನನ್ನು ಆದಷ್ಟು ಬೇಗ ಶಾಲೆ ಬಿಡಿಸುವುದು ವಾಸಿ. ಹೀಗೆ ಬಿಟ್ಟರೆ ರಾಜಕೀಯಕ್ಕೆ ತಿರುಗುತ್ತಾನೆ. ಮುಂದೆ ನಿಮಗೆ ಕಷ್ಟ ಪ್ರಾಪ್ತಿಯಾಗುತ್ತೆ' ಎಂದು ಎಚ್ಚರಿಸಿದರು. ಆ ವರ್ಷ ನಾನು ಎಸ್.ಎಸ್.ಎಲ್.ಸಿ.ಯಲ್ಲಿ ತೇರ್ಗಡೆ ಯಾಗಲಿಲ್ಲ. ಅದೇ ಕಾರಣ ಸಾಕಾಯಿತು ನಮ್ಮ ಸೋದರ ಮಾವನವರಿಗೆ. ಮುಂದೆ ಓದುವುದು ಬೇಡವೆಂದು ಹಠ ಹಿಡಿದರು. ನನ್ನ ವಿದ್ಯಾಭ್ಯಾಸ ಅಲ್ಲಿಗೇ ಮುಕ್ತಾಯ ವಾಯಿತು.

ನನ್ನ ಮನಸ್ಸು ದೇಶದಲ್ಲಿ ನಡೆಯುತ್ತಿದ್ದ ರಾಜಕೀಯದ

ಕಡೆಗೆ ತಿರುಗಿತ್ತು. ಈ ವೇಳೆಗೆ ಎಂದರೆ ೧೯೩೮ರಲ್ಲಿ ನಮ್ಮ ಊರಿಗೆ ಸಮೀಪದ ಶಿವಪುರದಲ್ಲಿ ಮೈಸೂರು ಕಾಂಗ್ರೆಸ್ ಅಧಿವೇಶನ ನಡೆಯಿತು. ಟಿ. ಸಿದ್ಧಲಿಂಗಯ್ಯನವರು ಅಧ್ಯಕ್ಷರು. ನಾನು ಮತ್ತು ನಮ್ಮ ಊರಿನಿಂದ ಇನ್ನೂ ಇಬ್ಬರು ಮೂವರು ಸ್ವಯಂ ಸೇವಕರಾಗಿ ಹೋಗಿ ಆ ಅಧಿವೇಶನದಲ್ಲಿ ಕೆಲಸ ಮಾಡಿದೆವು. ಅಲ್ಲಿ ವೀರಣ್ಣಗೌಡರ ಪರಿಚಯವಾಯಿತು. ವೀರಣ್ಣಗೌಡರು ಶಿವಪುರ ಕಾಂಗ್ರೆಸ್ ಅಧಿವೇಶನದ ಕಾರ್ಯದರ್ಶಿಗಳಾಗಿದ್ದರು. ಅವರು ವಾಸಿಸುತ್ತಿದ್ದ ತೋಟದ ಮನೆ ನಮ್ಮ ಊರಿನಿಂದ ಒಂದು ಮೈಲಿ ದೂರದಲ್ಲಿತ್ತು. ಕ್ರಮೇಣ ವೀರಣ್ಣಗೌಡರ ಬಳಿ ನಾನು ಹೋಗಿ ಬರುವುದು ಹೆಚ್ಚಾಯಿತು. ಕೆಲವು ತಿಂಗಳಾದ ಮೇಲೆ ಜಿಲ್ಲಾ ಬೋರ್ಡ್ ಚುನಾವಣೆಗಳು ನಡೆದವು. ಅದರಲ್ಲಿ ಕಾಂಗ್ರೆಸ್ ಪರ ಪ್ರಚಾರ ಕಾರ್ಯಕ್ಕೆ ನಾನೂ ಹೋಗುತ್ತಿದ್ದೆ. ನನ್ನ ಈ ಚಟುವಟಿಕೆಗಳನ್ನೆಲ್ಲಾ ಗಮನಿಸುತ್ತಿದ್ದ ನಮ್ಮ ಊರಿನ ಪಟೇಲರು ನಮ್ಮ ಸೋದರ ಮಾವಂದಿರಿಗೆ ಪುನಃ ಎಚ್ಚರಿಕೆ ನೀಡಿದರು. ನಮ್ಮ ಸೋದರ ಮಾವನವರಿಗೆ ಕ್ರಮೇಣ ಕಾಂಗ್ರೆಸ್ ಬಗ್ಗೆ ಅಭಿಮಾನ ಬೆಳೆಯಿತು. ಅಂದಿನಿಂದ ಖಾದಿಯನ್ನೇ ತೊಟ್ಟರು. ಆದರೂ ಪಟೇಲರ ಭಯ. ಈ ಹುಡುಗನಿಗೆ ಯಾವುದಾದರೂ ಒಂದು ಉದ್ಯೋಗ ಗಂಟು ಹಾಕಿದರೆ ಸರಿಹೋಗುವುದೆಂದು ಭಾವಿಸಿ ತಾವು ನಡೆಸುತ್ತಿದ್ದ ಜವಳಿ ಅಂಗಡಿ ಮತ್ತು ಕಿರಾಣಿ ಅಂಗಡಿಯನ್ನು ಕೆಲವು ತಿಂಗಳು ನನ್ನ ವಶಕ್ಕೆ ಬಿಟ್ಟುಕೊಟ್ಟರು. ನನಗೆ ಆ ಕೆಲಸದಲ್ಲಿ ಮನ ಹೋಗಲಿಲ್ಲ. ಅದರಿಂದ ಅವರ ಗುರಿಸಾಧನೆಯಾಗಲಿಲ್ಲ. ನನಗೂ ಏನೂ ಪ್ರಯೋಜನವಾಗಲಿಲ್ಲ. ನನ್ನ ವರ್ತನೆಯಿಂದ ಹುಡುಗ ಪೂರ್ಣವಾಗಿ ದಾರಿ ತಪ್ಪಿದ ಎಂಬ ಶಂಕೆ ನಮ್ಮ ಮನೆಯವರಿಗೂ ನಮ್ಮ ಬಂಧುಬಳಗದವರಿಗೂ ಉಂಟಾಯಿತು. ಯಾರಿಗೂ ಏನು ಮಾಡುವುದಕ್ಕೂ ತೋಚದೆ ಕೆಲವು ಕಾಲ ಸುಮ್ಮನಾದರು.

ಬೆಳಗಾಂ ಸಮೀಪದಲ್ಲಿರುವ ಹುದಲಿ ಗ್ರಾಮದಲ್ಲಿ ಜಮನಾಲಾಲ್ ಖಾದಿ ವಿದ್ಯಾಲಯವಿದೆ. ಅಲ್ಲಿ ಖಾದಿ ಬಟ್ಟೆ ತಯಾರಿಸಲು ಬೇಕಾದ ನೂಲುವ ಮತ್ತು ನೇಯುವ ಒಂದು ಶಿಕ್ಷಣ ಶಿಬಿರ ಏರ್ಪಡಿಸಿದ್ದರು. ಜೊತೆಗೆ ಗಾಂಧೀಜಿಯವರ ತತ್ವಗಳನ್ನು ಬೋಧಿಸುವ ಏರ್ಪಾಟು ಇತ್ತು. ಆ ಶಿಬಿರಕ್ಕೆ ಸೇರಲು ಅರ್ಜಿ ಸಲ್ಲಿಸಿದ್ದೆ. ವೀರಣ್ಣಗೌಡರ ಸಹಾಯದಿಂದ ಅಲ್ಲಿ ಪ್ರವೇಶ ದೊರೆಯಿತು. ಶ್ರೀ ಪುಂಡಲೀಕಜಿ ಕಾರ್ಥಡೆಯವರು ಬೆಳಗ್ಗೆ ಸಂಜೆ ಗೀತೆಯನ್ನು ಬೋಧಿಸುವುದರ ಜತೆಗೆ ಪ್ರತಿದಿನ 'ಗಾಂಧಿ ವಿಚಾರ ದೋಹನ' ಪುಸ್ತಕದಿಂದ ಕೆಲವು ಭಾಗಗಳನ್ನು ಆಯ್ದು ಗಾಂಧೀಜಿಯವರ ಆಚಾರ-ವಿಚಾರಗಳನ್ನು ಮನಮುಟ್ಟುವಂತೆ ವಿವರಿಸುತ್ತಿದ್ದರು. ಇದು ನನ್ನ ಮನಸ್ಸಿನ ಮೇಲೆ ಭಾರಿ ಪರಿಣಾಮವನ್ನುಂಟುಮಾಡಿತು. ಇವರ ವ್ಯಾಖ್ಯಾನದಿಂದ ನನಗೆ ಗಾಂಧೀಜಿ ತತ್ವಗಳಲ್ಲಿ ನಿಜವಾದ ನಂಬಿಕೆಯುಂಟಾಗಿ ನನ್ನ ಜೀವನದ ಗುರಿಯೆ ಬದಲಾಯಿತು.

ಶಿಬಿರದಲ್ಲಿ ಶಿಕ್ಷಣ ೨-೩ ತಿಂಗಳು ನಡೆದಿರಬೇಕು. ಅಷ್ಟರಲ್ಲಿ ಆಗಸ್ಟ್ ಎಂಟರಂದು ಮುಂಬಯಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸಭೆ ನಡೆದು ಮಹಾತ್ಮಾಗಾಂಧಿಯವರ ನೇತೃತ್ವದಲ್ಲಿ 'ಕ್ವಿಟ್ ಇಂಡಿಯಾ' (ಭಾರತ ಬಿಟ್ಟು ತೊಲಗಿ) ನಿರ್ಣಯ ಅಂಗೀಕಾರವಾಯಿತು. ಮಾರನೆಯ ದಿನವೇ ದೇಶದಲ್ಲಿ ಅನೇಕ ನಾಯಕರ ಬಂಧನವಾಯಿತು. ಗಾಂಧೀಜಿಯವರ

ಆದೇಶದಂತೆ ರಚನಾತ್ಮಕ ಕಾರ್ಯಕ್ರಮಗಳನ್ನು ನಡೆಸುತ್ತಿದ್ದ ಸಂಘ ಸಂಸ್ಥೆಗಳ ಮೇಲೆ ಸರ್ಕಾರದ ಕಣ್ಣು ಬಿತ್ತು. ಎಷ್ಟೋ ಜನ ರಚನಾತ್ಮಕ ಕಾರ್ಯಕರ್ತರು ಚಳವಳಿಯಲ್ಲಿ ಭಾಗವಹಿಸಿ ಸೆರೆಮನೆವಾಸ ಅನುಭವಿಸಿದರು. ಹುದಲಿ ಶಿಬಿರದಲ್ಲಿದ್ದ ಅಭ್ಯರ್ಥಿಗಳಲ್ಲಿ ಕೆಲವರು ತಮ್ಮ ತಮ್ಮ ಊರುಗಳಿಗೆ ಹೊರಟುಹೋದರು. ನಾವು ಮೂರು ನಾಲ್ಕು ಜನ ಅಲ್ಲೆ ತಂಗಿದ್ದು ೧೯೪೨ನೇ ಅಕ್ಟೋಬರ್ ೨ರಂದು ಗಾಂಧೀ ಜಯಂತಿ ಕಾರ್ಯಕ್ರಮವನ್ನು ಆಚರಿಸಿ ಒಂದು ಮೆರವಣಿಗೆ ಹೊರಟೆವು. ಕೂಡಲೇ ಪೊಲೀಸಿನವರು ನಮ್ಮನ್ನು ದಸ್ತಗಿರಿ ಮಾಡಿ ಬೆಳಗಾಂ ಸೆರೆಮನೆಗೆ ಕರೆದೊಯ್ದರು. ಕೆಲವು ದಿನಗಳು ಕಳೆದ ಮೇಲೆ ನಮ್ಮಗಳ ವಿಚಾರಣೆ ಪ್ರಾರಂಭವಾಯಿತು. ನ್ಯಾಯಾಧೀಶರು ಒಂದು ದಿನ ಜೈಲಿನ ಒಳಭಾಗದಲ್ಲಿದ್ದ ಒಂದು ಮರದ ಕೆಳಗೆ, ಇನ್ನೊಂದು ದಿನ ಜೈಲಿನ ಕಛೇರಿಯಲ್ಲಿ ನಮ್ಮ ವಿಚಾರಣೆ ನಡೆಸಿ ತೀರ್ಪನ್ನು ಮರುದಿನಕ್ಕೆ ಕಾದಿರಿಸಿದರು. ಮಾರನೆಯ ದಿನ ನಾವು ಪೊಲೀಸರ ಜತೆಯಲ್ಲಿ ಜೈಲು ಕಛೇರಿಗೆ ಹೋಗಿ ಅಲ್ಲಿ ನ್ಯಾಯಾಧೀಶರ ಮುಂದೆ ಹಾಜರಾದೆವು. ನ್ಯಾಯಾಧೀಶರು ನಮ್ಮಲ್ಲಿ ಒಬ್ಬೊಬ್ಬರ ಹೆಸರನ್ನು ಹಿಡಿದು ಕೂಗಿ ನಿಮ್ಮ ಅಪರಾಧ ಇಂಥಾದ್ದು ಅದಕ್ಕಾಗಿ ನಿಮಗೆ ಎರಡು ವರ್ಷ ಕಠಿಣ ಶಿಕ್ಷೆ ವಿಧಿಸಲಾಗಿದೆ ಎಂದು ತೀರ್ಪು ನೀಡುತ್ತಿದ್ದರು. ಅವರು ತೀರ್ಪು ನೀಡಿದ ಕೂಡಲೇ ಅಪರಾಧಿಯನ್ನು ಪೊಲೀಸರು ಜೈಲಿನ ಒಳಕ್ಕೆ ಕರೆದುಕೊಂಡು ಹೋಗಿ ಅವರನ್ನು ಜೈಲಿನ ಅಧಿಕಾರಿಗಳ ವಶಕ್ಕೆ ಒಪ್ಪಿಸುತ್ತಿದ್ದರು. ನನ್ನ ಹೆಸರು ಇನ್ನೇನು ಕೂಗಬೇಕು – ಅಷ್ಟರಲ್ಲಿ ನ್ಯಾಯಾಧೀಶರಿಗೆ ಟೆಲಿಫೋನ್ ಕರೆ ಬಂತು. ಈಗಲೇ ಬಂದೆ ಎಂದು ಎದ್ದು ಹೋಗಿ ಟೆಲಿಫೋನಿನಲ್ಲಿ ಮಾತನಾಡಿ ಬಂದವರು 'ಏನು ಮಾಡುವುದು ನಿಮ್ಮ ಸ್ನೇಹಿತರ ಅದೃಷ್ಟ ಚೆನ್ನಾಗಿಲ್ಲ. ಅವರಿಗೆ ಎರಡೆರಡು ವರ್ಷ ಕಠಿಣ ಶಿಕ್ಷೆ ವಿಧಿಸಲಾಗಿದೆ. ಈಗ ಎಲ್ಲ ಕಡೆಗಳಲ್ಲು ಜೈಲುಗಳು ಭರ್ತಿ ಆಗಿವೆ. ಖೈದಿಗಳನ್ನು ತುಂಬಲು ಜಾಗವಿಲ್ಲ. ಆದ್ದರಿಂದ ಸಭೆ, ಮೆರವಣಿಗೆ ಇಂಥ ಕಾರ್ಯಕ್ರಮ ನಡೆಸಿದವರಿಗೆ ಹೆಚ್ಚು ಕಾಲ ಶಿಕ್ಷೆ ವಿಧಿಸಬೇಡಿ, ೨-೩ ತಿಂಗಳು ಸಾಕು ಎಂದು ತಿಳಿಸಿ ಮೇಲಿನವರಿಂದ ಫೋನ್ ಬಂದಿದೆ. ನಿಮ್ಮ ಸ್ನೇಹಿತರ ಸರದಿ ಮುಗಿಯಿತು, ಈಗ ನಿಮ್ಮ ಸರದಿ. ಟೆಲಿಫೋನ್ ಮೂಲಕ ಬಂದ ಹುಕುಂನಂತೆ ತಮಗೆ ದೀರ್ಘಕಾಲ ಶಿಕ್ಷೆ ವಿಧಿಸುವ ಹಾಗಿಲ್ಲ. ಎರಡು ತಿಂಗಳು ಕಠಿಣ ಶಿಕ್ಷೆ ಒಂದು ನೂರು ರೂಪಾಯಿ ದಂಡ, ದಂಡ ಕೊಡದಿದ್ದರೆ ಮತ್ತೊಂದು ತಿಂಗಳು ಕಠಿಣ ಶಿಕ್ಷೆ' ಎಂದು ತೀರ್ಪಿತ್ತರು. ಈ ತೀರ್ಪಿನಿಂದ ನನಗೆ ನಿರಾಶೆಯಾಯಿತು. 'ನಾವೆಲ್ಲ ಒಂದೇ ಕಡೆಯಿಂದ ಒಂದೇ ಕಾರ್ಯ ಮಾಡಿ ಬಂದವರು. ಅವರಿಗೆ ಹೆಚ್ಚು ಶಿಕ್ಷೆ, ನನಗೆ ಕಡಿಮೆ ಶಿಕ್ಷೆ. ಇದರಿಂದ ನಮ್ಮ ನಮ್ಮಲ್ಲಿ ವಿರಸ ಬೆಳೆಯಲು ಕಾರಣವಾಗುತ್ತದೆ. ತಾವು ದಯವಿಟ್ಟು ಅವರ ಶಿಕ್ಷೆ ಅವಧಿಯನ್ನು ಎರಡು ತಿಂಗಳಿಗೆ ಇಳಿಸಿ ಅಥವಾ ನನಗೆ ಕೊಟ್ಟಿರುವ ಶಿಕ್ಷೆಯನ್ನು ಎರಡು ವರ್ಷಕ್ಕೆ ಏರಿಸಿ' ಎಂದು ಕೇಳಿಕೊಂಡೆ. ಅದಕ್ಕೆ ನ್ಯಾಯಾಧೀಶರು 'ಇದು ಕೋರ್ಟ್ ಆಜ್ಞೆ, ನೀವು ಪಾಲಿಸಲೇ ಬೇಕು' ಎಂದು ನಗುತ್ತಾ ಹೊರಟುಹೋದರು. ನಾನು ದಂಡ ಕೊಡಲು ಒಪ್ಪದಿದ್ದ ಕಾರಣ ಮೂರು ತಿಂಗಳು ಕಠಿಣ ಶಿಕ್ಷೆ ಅನುಭವಿಸಿ, ೧೯೪೩ನೇ ಜನವರಿ ೨೦ರಂದು ಜೈಲಿನಿಂದ ಬಿಡುಗಡೆ ಹೊಂದಿ ಊರಿಗೆ ಬಂದೆ.

ನಾನು ಸತ್ಯಾಗ್ರಹಿ, ಹೋರಾಟಗಾರ ಎಂಬ ಮನವರಿಕೆ ಸರ್ಕಾರದಲ್ಲಿ ದಾಖಲಾಗಿತ್ತು. ಅಲ್ಲದೆ, ಜೈಲಿನಿಂದ ಬಿಡುಗಡೆಹೊಂದಿ ನಾನು ಊರಿಗೆ ಬಂದ ವಿಷಯವನ್ನು ಮಂಡ್ಯ ಜಿಲ್ಲಾಧಿಕಾರಿಗಳಿಗೆ ಪತ್ರದ ಮೂಲಕ ತಿಳಿಸಿದ್ದೆ. ನಾನು ಬಂದು ಇನ್ನೂ ಒಂದು ವಾರವಾಗಿಲ್ಲ. ಆಗಲೆ ೪-೫ ಜನ ಪೋಲೀಸರು ನಮ್ಮ ಮನೆಗೆ ಬಂದು ಕೇಳಿಕೊಂಡು ಹೋದರಂತೆ. ಇದನ್ನು ನೋಡಿ ನಮ್ಮ ಮನೆಯವರಿಗೆ ಗಾಬರಿ. ಎರಡು ವಾರ ಕಳೆದ ಮೇಲೆ ಮದ್ದೂರು ತಾಲ್ಲೂಕು ಅಮಲ್ದಾರರು ನಮ್ಮ ಊರಿಗೆ ಬಂದು ನನ್ನನ್ನು ಕರೆಸಿ ಚಳವಳಿಯಲ್ಲಿ ಭಾಗವಹಿಸುವುದಿಲ್ಲವೆಂದು ಬರೆದುಕೊಡಬೇಕಾಗಿ ಒತ್ತಾಯಿಸಿದರು. ನಾನು ಒಪ್ಪಲಿಲ್ಲ. ಮುಂದೆ ಎರಡು ಮೂರು ವಾರ ಕಳೆದಮೇಲೆ ಅದೇ ಅಮಲ್ದಾರರು ಪುನಃ ನಮ್ಮೂರಿಗೆ ಬಂದು ನನ್ನನ್ನು ದೇಶಹಳ್ಳಿ ಗ್ರಾಮ ಪಂಚಾಯತಿ ಸದಸ್ಯನನ್ನಾಗಿ ನಾಮಕರಣ ಮಾಡಿರುವುದಾಗಿ ತಿಳಿಸಿಹೋದರು. ಒಂದೆರಡು ತಿಂಗಳಾದ ಮೇಲೆ ಪಂಚಾಯ್ತಿ ಛೇರ್ಮನ್ನರಿಂದ ಮೀಟಿಂಗ್ ನೋಟೀಸ್ ಬಂತು. ಅದರಲ್ಲಿ ಸಾಕಷ್ಟು ತಪ್ಪುಗಳಿದ್ದವು. ಆ ತಪ್ಪುಗಳನ್ನೆಲ್ಲಾ ಅದೇ ಮೀಟಿಂಗ್ ನೋಟೀಸ್ ಮೇಲೆ ಗುರುತು ಮಾಡಿ ವಾಪಸ್ ಛೇರ್ಮನ್ನರಿಗೆ ಕಳುಹಿಸಿ ಕೊಟ್ಟೆ. ಮುಂದೆ ಏನಾಯಿತೊ ಗೊತ್ತಿಲ್ಲ. ಪುನಃ ನನಗೆ ಯಾವ ಮೀಟಿಂಗ್ ನೋಟೀಸು ಬರಲಿಲ್ಲ. ನಾನು ಪಂಚಾಯ್ತಿ ಸದಸ್ಯ ಅಹುದೊ ಅಲ್ಲವೊ ಎಂಬುದೂ ಗೊತ್ತಾಗಲಿಲ್ಲ, ವಿದ್ಯಾಭ್ಯಾಸ ಮುಂದುವರಿಸುವ ಕಡೆ ನನ್ನ ಗಮನ ಹೋಗಲಿಲ್ಲ.

ನಾನು ಪ್ರೌಢಶಾಲೆ ಬಿಡುವ ಹೊತ್ತಿಗೆ ಮೈಸೂರಿನಲ್ಲಿ ಅಕ್ಷರ ಪ್ರಚಾರ ಸಮಿತಿಯವರು ವಯಸ್ಕರಿಗಾಗಿ ಒಂದು ಶಿಬಿರ ಏರ್ಪಾಡು ಮಾಡಿದ್ದರು. ಆಗ ಅಕ್ಷರ ಪ್ರಚಾರ ಸಮಿತಿ ಅಧ್ಯಕ್ಷರು ಶ್ರೀ ಈಗಲ್‌ಟನ್ ಎಂದು ನನ್ನ ಜ್ಞಾಪಕ. ಅಲ್ಲಿ ನಾನು ಒಂದು ವಾರ ಶಿಕ್ಷಣ ಪಡೆದು ಊರಿಗೆ ಬಂದು ನಮ್ಮ ಊರಿನಲ್ಲಿ ಒಂದು ವಯಸ್ಕರ ಶಿಕ್ಷಣ ತರಗತಿ ಆರಂಭಿಸಿದೆ. ಆಸಕ್ತಿಯುಳ್ಳ ಕೆಲವು ವಯಸ್ಕರಿಗೆ ನಾನೇ ಅಕ್ಷರ ಕಲಿಸಿ ಅವರಿಗೆ ತಕ್ಕಮಟ್ಟಿಗೆ ಓದು ಬರಹ ಬರುವಂತೆ ಮಾಡಿದೆ. ನಮ್ಮ ದೇಶ ಹಿಂದುಳಿದಿರುವುದಕ್ಕೆ ನಮ್ಮ ಜನರಲ್ಲಿರುವ ನಿರಕ್ಷರತೆಯೇ ಕಾರಣ ಎಂದು ಆಗಲೂ ನನಗೆ ಅನಿಸಿತ್ತು. ಈಗಲೂ ನನ್ನದು ಅದೇ ಅಭಿಪ್ರಾಯ. ಹಳ್ಳಿಯ ಜನರು ಅನಕ್ಷರಸ್ಥರು, ಓದು ಬರಹ ಬಾರದವರು, ಅವರ ಮನವೊಲಿಸಬೇಕು, ಅವರು ಆಡುವ ಭಾಷೆಯಲ್ಲೇ ಅವರ ಮನಮುಟ್ಟುವಂತೆ ತಿಳಿಸಬೇಕು. ಭಾಷಣಕ್ಕಿಂತ ಸಣ್ಣ ಸಣ್ಣ ಪದ್ಯಗಳನ್ನು ಬರೆದು ಅವರ ಮುಂದೆ ಹಾಡಿ ಅಕ್ಷರ ಕಲಿಕೆಯ ಕಡೆ ಅವರ ಗಮನ ಸೆಳೆಯಬೇಕು ಎನ್ನುವ ಆಕಾಂಕ್ಷೆಯಿಂದ ಎಲ್ಲರಿಗೂ ಗೊತ್ತಿದ್ದ 'ಗೋವಿನ ಕಥೆ' ಧಾಟಿಯಲ್ಲಿ 'ಅಕ್ಷರವ ನೀವ್ ಕಲಿಯಿರಿ' ಎಂಬ ವಿಷಯವನ್ನು ಕುರಿತು ನೂರು ಪದ್ಯಗಳನ್ನು ಬರೆದು ಅದನ್ನು ಅಕ್ಷರಪ್ರಚಾರ ಸಮಿತಿಯವರಿಗೆ ಕಳುಹಿಸಿಕೊಟ್ಟೆ. ಅದಕ್ಕೆ ಸಿದ್ದವ್ವನಹಳ್ಳಿ ಕೃಷ್ಣಶರ್ಮರು ಮುನ್ನುಡಿ ಬರೆದುಕೊಟ್ಟಿದ್ದರು. ಅಕ್ಷರ ಪ್ರಚಾರ ಸಮಿತಿಯವರು 'ಬೆಳಕು' ವಿಶೇಷ ಸಂಚಿಕೆ ಎಂದು ಹೇಳಿ ಆ ಪದ್ಯಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸಿ ನನಗೂ ಅದರ ಕೆಲವು ಪ್ರತಿಗಳನ್ನು ಕಳುಹಿಸಿಕೊಟ್ಟರು. ಈ ಪುಸ್ತಕಗಳನ್ನು ಕೈಲಿ ಹಿಡಿದುಕೊಂಡು ಯಾವ ಊರಿನಲ್ಲಿ ಯಾವ ದೊಡ್ಡ ಸಭೆಯೇ ಆಗಲಿ ಅದರ ವ್ಯವಸ್ಥಾಪಕರನ್ನು ಕಂಡು ಆ ಪದ್ಯಗಳನ್ನು ಹೇಳಲು

ಅವಕಾಶ ಪಡೆದುಕೊಳ್ಳುತ್ತಿದ್ದೆ. ಆ ನೂರು ಪದ್ಯಗಳಲ್ಲೂ ಕಡೆಯ ಸಾಲು 'ಅಕ್ಷರವ ನೀವ್ ಕಲಿಯಿರಿ' ಎಂದಿತ್ತು. ಮೊದಲನೆ ಮೂರು ಸಾಲನ್ನು ರಾಗವಾಗಿ ನಾನು ಹೇಳುತ್ತಿದ್ದೆ. ಕಡೆಯ ಸಾಲನ್ನು ಸಾಮೂಹಿಕವಾಗಿ ಸಭಿಕರೆಲ್ಲ ಹೇಳುತ್ತಿದ್ದರು. ಈ ಕ್ರಮ ಕೇಳುವವರಿಗೂ ಇಂಪಾಗಿತ್ತು. ಜನರ ಮೇಲೆ ತಕ್ಕ ಮಟ್ಟಿಗೆ ಪರಿಣಾಮವನ್ನು ಉಂಟುಮಾಡಿತು. ಅಕ್ಷರತೆಯ ಅವಶ್ಯಕತೆ ಕುರಿತು ಕಳೆದ ನಲವತ್ತು ವರ್ಷಗಳಲ್ಲಿ ಸಾವಿರಾರು ಸಭೆಗಳಲ್ಲಿ ಮಾತನಾಡಿದ್ದೇನೆ, ಅನೇಕ ಪತ್ರಿಕೆಗಳಲ್ಲಿ ಲೇಖನ ಬರೆದಿದ್ದೇನೆ. ಮುಂದೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾದಾಗಲೂ ಪರಿಷತ್ತಿನ ಆಶ್ರಯದಲ್ಲಿ ಅನೇಕ ಸಾಕ್ಷರತಾ ತರಗತಿಗಳನ್ನು ನಡೆಸಲು ಏರ್ಪಾಟು ಮಾಡಿದ್ದೆ. ೧೦-೧೨ ವರ್ಷಗಳ ಕಾಲ ರಾಜ್ಯ ಕೇಂದ್ರ ವಯಸ್ಕರ ಶಿಕ್ಷಣ ಸಮಿತಿ ಕಾರ್ಯ ಸಮಿತಿಯಲ್ಲಿಯೂ ಸದಸ್ಯನಾಗಿ ಕೆಲಸ ಮಾಡಿದೆ.

ಇರ್ವಿನ್‌ನಾಲಾ ರೈತರ ಚಳವಳಿ ೧೯೩೨ರಲ್ಲಿ ವೀರಣ್ಣಗೌಡರ ನೇತೃತ್ವದಲ್ಲಿ ನಡೆದದ್ದು. ಆಗ ವೀರಣ್ಣಗೌಡರ ಪರಿಚಯ ನನಗಿರಲಿಲ್ಲ. ಚಳವಳಿ ವಿಷಯವನ್ನು ನಾನು ವಿದ್ಯಾರ್ಥಿಯಾಗಿದ್ದಾಗ ಕೇಳಿದ್ದೆ. ಮಂಡ್ಯ ಜಿಲ್ಲೆಗೆ ಇರ್ವಿನ್ ನಾಲಾ ಪ್ರವೇಶವಾದ ಮೇಲೆ ಮಲೇರಿಯಾ ಪ್ರಾರಂಭವಾಯಿತು. ಅನೇಕ ಜನ ಮಲೇರಿಯಾ ಜ್ವರದಿಂದ ನರಳಿ ಹೊಟ್ಟೆ ಡುಬ್ಬಣ್ಣರಾಗಿ ಸಾಕಷ್ಟು ತೊಂದರೆಪಟ್ಟರು. ನಾನು ಮಾಧ್ಯಮಿಕ ಶಾಲೆಗೆ ಹೋಗುತ್ತಿದ್ದಾಗ ಮಲೇರಿಯಾದಿಂದ ಸಾಕಷ್ಟು ನರಳಿದ್ದೆ. ಮಂಡ್ಯ ಸಕ್ಕರೆ ಕಂಪನಿಯವರು ಕಬ್ಬು ಬೆಳೆಯುವ ರೈತರಿಗೆ ಸರಿಯಾದ ಸೌಲಭ್ಯ ಒದಗಿಸದೆ ರೈತರು ತುಂಬಾ ಕಷ್ಟ ನಷ್ಟಕ್ಕೊಳಗಾದರು. ಆಗ ಎಲ್ಲರ ಬಾಯಲ್ಲೂ ಸಕ್ಕರೆ ಕಂಪನಿ ಆಡಳಿತ ಅವ್ಯವಸ್ಥೆ ಕುರಿತು ಟೀಕೆಗಳು ಕೇಳಿಬರುತ್ತಿದ್ದವು. ಆಗ ನಾನು 'ಮಲೇರಿಯಾ ಹಾವಳಿ' 'ಕಬ್ಬಿನ ಲಾವಣಿ' ಮತ್ತು 'ಕಬ್ಬಿನ ಕಥಾಂತರ' ಎಂಬ ಮೂರು ಸಣ್ಣ ಪುಸ್ತಕಗಳನ್ನು ಬರೆದು ಅಚ್ಚುಮಾಡಿಸಿ ಜನಸಂದಣಿ ಸೇರುವ ಕಡೆಗಳಲ್ಲಿ, ಕೆಲವು ಸಂತೆಗಳಲ್ಲಿ ಹೋಗಿ ಲಾವಣಿ ಹಾಡಿ ರೈತರ ಗಮನ ಸೆಳೆದೆ. ಜನರು ಲಾವಣಿ ಪದ್ಯ ಪೂರೈಸುವವರೆಗೆ ಕಾದಿದ್ದು ಪುಸ್ತಕಗಳನ್ನು ಕೊಂಡು ಓದುತ್ತಿದ್ದರು. ಪುಸ್ತಕದ ಮೇಲೆ ಹಾಕಿದ್ದ ಬಂಡವಾಳದ ಎರಡು ಮೂರರಷ್ಟು ಲಾಭವು ನನಗೆ ಬಂತು. ಈ ಪ್ರಕಟಣೆಗಳ ದೆಸೆಯಿಂದ ಸಕ್ಕರೆ ಕಂಪನಿ ಅಧಿಕಾರಿಗಳ ವಕ್ರದೃಷ್ಟಿ ನನ್ನ ಮೇಲೆ ಬಿದ್ದರೂ ಅವರು ನನ್ನನ್ನು ಏನೂ ಮಾಡುವ ಹಾಗಿರಲಿಲ್ಲ.

ಮುಂಬಯಿಯಲ್ಲಿ ಒಮ್ಮೆ ಗಾಂಧೀಜಿಯವರನ್ನು ಹತ್ತಿರದಿಂದ ಕಾಣುವ ಅವಕಾಶ ಉಂಟಾಯಿತು. ಕ್ವಿಟ್ ಇಂಡಿಯ ಚಳವಳಿ ಆದ ಮೇಲೆ ೧೯೪೪ರಲ್ಲಿ ಮಹಾತ್ಮಗಾಂಧಿಯವರು ಬೊಂಬಾಯಿಗೆ ಬಂದು ಬಿರ್ಲಾ ಭವನದಲ್ಲಿ ತಂಗಿದ್ದರು. ಅವರನ್ನು ಭೇಟಿಮಾಡಿ ಕರ್ನಾಟಕದ ವಿಷಯ ತಿಳಿಸಲು ಕರ್ನಾಟಕದಿಂದ ಒಂದು ನಿಯೋಗ ಹೋಗುವುದರಲ್ಲಿತ್ತು. ಅದರಲ್ಲಿ ವೀರಣ್ಣಗೌಡರು ಇದ್ದರು. ನಾನು ಮುಂಚಿತವಾಗಿ ವೀರಣ್ಣಗೌಡರನ್ನು ಕಂಡು ಗಾಂಧೀಜಿಯನ್ನು ನೋಡಬೇಕೆಂಬ ನನ್ನ ಅಪೇಕ್ಷೆಯನ್ನು ಅವರ ಮುಂದಿಟ್ಟೆ. ಅವರು ತಮ್ಮ ಸಂಗಡ ಬರುವಂತೆ ತಿಳಿಸಿದರು. ನಿಯೋಗ ಹೋಗಿ ಗಾಂಧೀಜಿಯನ್ನು ಭೇಟಿಮಾಡಿತು. ಆ ದಿನ ಸಂಜೆ

ಪ್ರಾರ್ಥನಾ ಸಭೆಗೆ ನಾನೂ ಹೋಗಿ ತುಂಬ ಸಮೀಪದಿಂದ ಗಾಂಧಿಯವರನ್ನು ಕಾಣುವ ಅವಕಾಶ ದೊರೆಯಿತು.

ವೀರಣ್ಣಗೌಡರು ಮೈಸೂರು ಸಕ್ಕರೆ ಕಾರ್ಖಾನೆ ಕಾರ್ಮಿಕ ಸಂಘದ ಅಧ್ಯಕ್ಷರಾಗಿದ್ದಾಗ ಕೆಲವು ದಿನ ಕಾರ್ಮಿಕ ಸಂಘ ನೋಡಿಕೊಳ್ಳುವಂತೆ ನನಗೆ ಒಪ್ಪಿಸಿದ್ದರು. ಬೆಳಿಗ್ಗೆ ಮದ್ದೂರಿನಿಂದ ರೈಲಿನಲ್ಲಿ ಮಂಡ್ಯಕ್ಕೆ ಹೋಗುತ್ತಿದ್ದೆ. ಅಲ್ಲಿಗೆ ಹೋಗಿ ಆಫೀಸ್ ಬಾಗಿಲು ತೆರೆಯುವ ಹೊತ್ತಿಗೆ ಮಲೇರಿಯಾ ಚಳಿ ಜ್ವರ ಬರುತ್ತಿತ್ತು. ಪಕ್ಕದ ಮನೆಯವರಿಂದ ಒಂದು ಕಂಬಳಿ ಪಡೆದುಕೊಂಡು ಬೆಳಿಗ್ಗೆಯಿಂದ ಸಂಜೆಯವರೆಗೂ ಮಲಗಿದ್ದು ಸಂಜೆ ಆದ ಮೇಲೆ ರೈಲಿನಲ್ಲಿ ಮಂಡ್ಯದಿಂದ ಮದ್ದೂರಿಗೆ ವಾಪಸ್ಸು ಬಂದು ರಾತ್ರಿ ಊರು ತಲುಪುತ್ತಿದ್ದೆ. ಆ ಸಂಘಕ್ಕೆ ನನ್ನಿಂದ ಯಾವ ಪ್ರಯೋಜನವೂ ಆಗಲಿಲ್ಲ. ಕೆಲವು ದಿನಗಳ ತರುವಾಯ ವೀರಣ್ಣಗೌಡರು ಆ ಸಂಘವನ್ನು ಬಿಟ್ಟರು. ಅವರಿಗಿಂತ ಮೊದಲೇ ಬಿಟ್ಟ ಕೀರ್ತಿ ನನ್ನದಾಯಿತು.

ಬಹುಶಃ ೧೯೪೬ರ ಪ್ರಾರಂಭ ಇರಬಹುದು. ಆಗ ಶ್ರೀ ಎಸ್. ನಿಜಲಿಂಗಪ್ಪನವರು ಮೈಸೂರು ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ವೀರಣ್ಣಗೌಡರು ಪ್ರಧಾನ ಕಾರ್ಯದರ್ಶಿಯಾಗಿ, ಕೆ.ಆರ್. ಮಾಧವರಾವ್ ಅವರು ಸಹಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದರು. ಒಂದು ದಿನ ವೀರಣ್ಣಗೌಡರು ನನಗೆ ಹೇಳಿ ಕಳುಹಿಸಿ 'ಕಾಂಗ್ರೆಸ್ ಧ್ಯೇಯ ಉನ್ನತವಾದದ್ದು, ಸ್ವರಾಜ್ಯ ಸಂಪಾದನೆಯೇ ಅದರ ಗುರಿ, ದೇಶ ಸೇವೆ ಮಾಡಬೇಕೆನ್ನುವ ಆಶೆ ನಿನಗೂ ಇದೆ. ಬೆಂಗಳೂರಿನಲ್ಲಿರುವ ಕೇಂದ್ರ ಕಾಂಗ್ರೆಸ್ ಕಚೇರಿಯಲ್ಲಿ ಕೆಲವು ಕಾಲ ನನ್ನೊಡನೆ ಏಕೆ ಕೆಲಸ ಮಾಡಬಾರದು' ಎಂದು ಕೇಳಿದರು. ಅದಕ್ಕೆ ನಾನು ಒಪ್ಪಿ ಎರಡು ಮೂರು ದಿನಗಳಲ್ಲೇ ಬೆಂಗಳೂರು ನಗರದ ಅರಳೇಪೇಟೆಯಲ್ಲಿದ್ದ ಕಾಂಗ್ರೆಸ್ ಭವನಕ್ಕೆ ಪ್ರವೇಶ ಮಾಡಿದೆ. ಅಲ್ಲಿ ಎಂಟು ಹತ್ತು ತಿಂಗಳ ಕಾಲ ಇದ್ದೆ ಅಂತ ಕಾಣುತ್ತೆ. ಅಲ್ಲಿ ಜರುಗುತ್ತಿದ್ದ ರಾಜಕೀಯ ಸಭೆ ಸಮಾರಂಭಗಳಿಗೆ ದೇಶದ ನಾನಾ ಮೂಲೆಗಳಿಂದ ಅನೇಕ ಮುಖಂಡರು, ಕಾರ್ಯಕರ್ತರು ಬಂದು ಹೋಗುತ್ತಿದ್ದರು. ಅವರಲ್ಲಿ ಅನೇಕರ ಪರಿಚಯವಾಯಿತು. ಅವರ ಮಾತುಕತೆ, ನಡವಳಿಕೆ, ಅವರ ದೇಶಾಭಿಮಾನ, ಕಾರ್ಯ ಸಮಿತಿ ಸಭೆಯಲ್ಲಿ ಮುಖಂಡರು ನಡೆಸುತ್ತಿದ್ದ ಚರ್ಚೆ ಇವೆಲ್ಲ ನನ್ನ ಅನುಭವವನ್ನು ಹೆಚ್ಚಿಸಿದುವು. ಕಾಂಗ್ರೆಸ್ಸಿಗಾಗಿ ಏನು ಬೇಕಾದರೂ ತ್ಯಾಗ ಮಾಡಲು ಮನಸ್ಸು ಸಿದ್ಧವಾಗಿತ್ತು. ಈಗಿನಂತೆ ಆಗ ಕಾಂಗ್ರೆಸ್ ಕಚೇರಿಯಲ್ಲಿ ಹಣದ ಓಡಾಟವಿರಲಿಲ್ಲ. ಅಧಿಕಾರ ದರ್ಪ ಕಾಣುತ್ತಿರಲಿಲ್ಲ. ಅಧ್ಯಕ್ಷರಾಗಲಿ, ಕಾರ್ಯದರ್ಶಿಗಳಾಗಲಿ, ಸಾಮಾನ್ಯ ಸ್ವಯಂ ಸೇವಕರಾಗಲಿ ಎಲ್ಲರೂ ಒಂದೇ. ಈ ಕೆಲಸ ಚಿಕ್ಕದು, ಆ ಕೆಲಸ ದೊಡ್ಡದು, ಇದನ್ನು ಇಂಥವರೇ ಮಾಡಬೇಕೆಂಬ ನಿಯಮವೇನೂ ಇರಲಿಲ್ಲ. ಎಲ್ಲರೂ ಬಿಟ್ಟಿ ಚಾಕರಿ ಮಾಡಬೇಕು.

ಕಚೇರಿ ಮೇಲ್ವಿಚಾರಣೆ ನೋಡಿಕೊಳ್ಳುವುದು, ಕಾರ್ಯಕಾರಿ ಸಮಿತಿ ಸಭೆ ನಡೆಯಲು ವ್ಯವಸ್ಥೆ ಮಾಡುವುದು, ಅನಿವಾರ್ಯವಾದಾಗ ಕಾಗದ ಟೈಪು ಮಾಡಿ ಅಂಚೆಗೆ ಹಾಕುವುದು, ಜವಾನ ಬರದಿದ್ದಾಗ ಜವಾನನ ಕೆಲಸ ಮಾಡುವುದು ಇವೆಲ್ಲ ನನ್ನ ಪಾಲಿಗೆ ಬಂದಿದ್ದವು.

ಒಂದೊಂದು ವೇಳೆ ಈ ಕೆಲಸಗಳನ್ನು ಕಾರ್ಯದರ್ಶಿಗಳೂ ಮಾಡುತ್ತಿದ್ದರು. ತಕ್ಕ ಮಟ್ಟಿಗೆ ಅಡಿಗೆ ಮಾಡುವುದನ್ನೂ ಮಾಧವರಾಯರು ನನಗೆ ಕಲಿಸಿದ್ದರು. ಅಡಿಗೆಯವರು ಚಕ್ಕರ್ ಕೊಟ್ಟಾಗ ಆ ಕೆಲಸವನ್ನು ನಾನೇ ಮಾಡುತ್ತಿದ್ದೆ. ಹಣದ ಕೊರತೆಯಿಂದ ಕೆಲವು ಸಾರಿ ಬರೆದ ಕಾಗದಗಳನ್ನು ಅಂಚೆಗೆ ಹಾಕಬೇಕಾದರೆ ೨–೩ ದಿನ ಹಿಡಿಯುತ್ತಿತ್ತು. ಒಂದೊಂದು ಸಾರಿ ಊಟಕ್ಕೆ ತೊಂದರೆಯಾದಾಗ ರೈಲ್ವೆ ಸ್ಟೇಷನ್ನಿಗೆ ಹೋಗಿ ಎರಡಾಣೆಗೊಂದರಂತೆ ಎರಡು ಮೊಸರನ್ನ, ಎರಡು ಚಿತ್ರಾನ್ನದ ಪ್ಯಾಕೆಟು ತಂದು ಅದನ್ನು ಹಂಚಿಕೊಂಡು ಮೂವರು ಊಟ ಮಾಡುತ್ತಿದ್ದೆವು. ಇಷ್ಟೆಲ್ಲ ತೊಂದರೆಗಳಿದ್ದರೂ ನಮ್ಮಲ್ಲಿ ಯಾರಿಗೂ ಸ್ವಲ್ಪವೂ ಬೇಸರವಾಗುತ್ತಿರಲಿಲ್ಲ. ಕಾರಣ, ಇದು ಕಾಂಗ್ರೆಸ್ ಕೆಲಸ, ದೇಶದ ಕೆಲಸ ಎಂಬ ನಂಬಿಕೆ. ಅರಳೇಪೇಟೆಯ ಆಗಿನ ಕಾಂಗ್ರೆಸ್ ಭವನ ಕೆ.ಟಿ. ಭಾಷ್ಯಂ ಅವರ ಮನೆ ಮುಂಭಾಗದಲ್ಲಿತ್ತು. ಭವನ ಎಂದರೆ ಅದು ನಿಜವಾದ ಭವನವೆ. ಭಾರಿ ಕಟ್ಟಡ. ಮೇಲೆ ಕೆಳಗೆ ಸಾಕಷ್ಟು ಸ್ಥಳಾವಕಾಶ. ಬಾಡಿಗೆ ಒಂದು ಸೂರು ರೂಪಾಯಿ ಮಾತ್ರ. ಈಗಿನ ಕಾಲವಾಗಿದ್ದರೆ ಆ ಕಟ್ಟಡಕ್ಕೆ ಹಲವುಸಾವಿರ ರೂಪಾಯಿಯಾದರೂ ಬಾಡಿಗೆ ಕೊಡಬೇಕಾಗುತ್ತಿತ್ತು. ತಿಂಗಳಿಗೆ ನೂರು ರೂಪಾಯಿ ಬಾಡಿಗೆ ಕೊಡಲು ಹಣ ಇರುತ್ತಿರಲಿಲ್ಲ. ಆ ವೇಳೆಗೆ ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪಿಸಲು ಇಲ್ಲಿನ ಕಾಂಗ್ರೆಸ್ ಮುಖಂಡರು ನಾನಾ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರು. ದಿವಾನ ಮಾಧವರಾಯರ ಜಾಗಕ್ಕೆ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್‌ರವರು ಮೈಸೂರಿನ ದಿವಾನರಾಗಿ ನೇಮಕವಾದರು. ನಿಜಲಿಂಗಪ್ಪನವರ ತರುವಾಯ ಕೆ.ಸಿ. ರೆಡ್ಡಿಯವರು ಕಾಂಗ್ರೆಸ್ ಅಧ್ಯಕ್ಷರಾದರು. ಆ ವೇಳೆಗೆ ನಾನು ಕಾಂಗ್ರೆಸ್ ಭವನ ಬಿಟ್ಟು ಊರಿಗೆ ಹೊರಟು ಹೋಗಿದ್ದೆ.

ಕೆ.ಸಿ. ರೆಡ್ಡಿಯವರು ಕಾಂಗ್ರೆಸ್ ಅಧ್ಯಕ್ಷರಾದ ಮೇಲೆ ಜವಾಬ್ದಾರಿ ಸರ್ಕಾರದ ಹೋರಾಟಕ್ಕೆ ಹೆಚ್ಚು ಪ್ರೋತ್ಸಾಹ ದೊರೆಯಿತು. ಇದಕ್ಕೆ ಅಖಿಲ ಭಾರತ ಕಾಂಗ್ರೆಸ್‌ನವರ ಆಶೀರ್ವಾದವೂ ಇತ್ತು. ಇಲ್ಲಿನ ಕೆಲವು ಪತ್ರಿಕೆಗಳು ಸರ್ಕಾರಕ್ಕೆ ಬೆಂಬಲವಾಗಿದ್ದವು. ಕಾಂಗ್ರೆಸ್ ಪ್ರಚಾರ ಕಾರ್ಯಕ್ಕೆ ನಮ್ಮದೇ ಆದ ಒಂದು ಪತ್ರಿಕೆ ಇರಬೇಕೆಂದು ಆಗ ಮೈಸೂರು ಕಾಂಗ್ರೆಸ್ ಖಜಾಂಚಿಗಳಾಗಿದ್ದ ಸಾಹುಕಾರ್ ಚನ್ನಯ್ಯನವರು, ವೀರಣ್ಣಗೌಡರು, ಟಿ. ಮರಿಯಪ್ಪನವರು ಮತ್ತು ಬಿ. ಎಸ್. ಗುಪ್ತರು ಸಮಾಲೋಚಿಸಿ ವೀರಕೇಸರಿ ಸೀತಾರಾಮಶಾಸ್ತ್ರಿಗಳು ನಡೆಸುತ್ತಿದ್ದ 'ವಾರ್ತಾ' ಪತ್ರಿಕೆಯನ್ನು ಚನ್ನಯ್ಯನವರು ಕೊಂಡುಕೊಂಡರು. ಆ ಪತ್ರಿಕೆ ಮತ್ತು ಪ್ರೆಸ್ಸನ್ನು ನೋಡಿಕೊಳ್ಳಲು ಕೂಡಲೆ ಬರಬೇಕೆಂದು ವೀರಣ್ಣಗೌಡರು ಒಂದು ಕಾಗದ ಬರೆದು ಊರಿನಲ್ಲಿದ್ದ ನನಗೆ ಕಳುಹಿಸಿಕೊಟ್ಟರು. ಕೂಡಲೆ ನಾನು ಬೆಂಗಳೂರಿಗೆ ಬಂದು ವಾರ್ತಾ ಪತ್ರಿಕೆ ಮತ್ತು ಪ್ರೆಸ್ಸಿನ ವ್ಯವಸ್ಥಾಪಕನಾಗಿ ಅದರ ಹೊಣೆ ಹೊತ್ತುಕೊಂಡೆ. ಆ ಪತ್ರಿಕೆ ಮತ್ತು ಪ್ರೆಸ್ಸಿಗೆ ಚನ್ನಯ್ಯನವರು ಪ್ರೊಪ್ರೈಟರ್, ವೀರಣ್ಣಗೌಡರು ಸಂಪಾದಕರು, ನಾನು ವ್ಯವಸ್ಥಾಪಕ ನಾದಂತಾಯಿತು. ಜವಾಬ್ದಾರಿ ಸರ್ಕಾರದ ಹೋರಾಟಕ್ಕೆ 'ವಾರ್ತಾ' ಪತ್ರಿಕೆಯಿಂದ ತುಂಬಾ ಸಹಾಯವಾಯಿತು. ಕಾಂಗ್ರೆಸ್ ಪಕ್ಷದ ಮುಖವಾಣಿಯಾಗಿ 'ವಾರ್ತಾ' ಕೆಲಸ ಮಾಡಿತು. ನಾನು ಹಗಲು ರಾತ್ರಿ ಎನ್ನದೆ ಊಟ ತಿಂಡಿಯನ್ನು ಮರೆತು ಪತ್ರಿಕೆಗಾಗಿ ಕೆಲಸ ಮಾಡಿದೆ.

ಪತ್ರಿಕೆಯಿಂದ ಆರ್ಥಿಕವಾಗಿ ಲಾಭವಾಗುವುದರ ಬದಲು ನಷ್ಟವೇ ಹೆಚ್ಚಾಯಿತು. ಸಾಹುಕಾರ್ ಚನ್ನಯ್ಯನವರು ಹಣಕಾಸು ಖರ್ಚು ಮಾಡುವುದರಲ್ಲಿ ತುಂಬ ಬುದ್ಧಿವಂತರು. ಪತ್ರಿಕೆಯಿಂದ ನಷ್ಟವಾಗುತ್ತದೆ ಎಂದು ಗೊತ್ತಾದ ಕೂಡಲೆ ಕಾಸು ಬಿಚ್ಚುವುದನ್ನು ಬಿಗಿಮಾಡಿದರು. ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಟ ಜೋರಾದಂತೆ 'ವಾರ್ತಾ' ಪತ್ರಿಕೆಯ ಮೇಲೆ ಸರ್ಕಾರದ ಕ್ರೂರದೃಷ್ಟಿ ಬಿತ್ತು. ಸಂಪಾದಕರಾದ ವೀರಣ್ಣಗೌಡರನ್ನು ದಸ್ತಗಿರಿಮಾಡಿ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿಟ್ಟರು. ಮುಂದೆ ಕೆಲವು ವಾರ ಪತ್ರಿಕೆ ನಡೆಯಲಿಲ್ಲ. ಸ್ವಲ್ಪ ದಿನಗಳಲ್ಲೇ ಶ್ರೀಮನ್ಮಹಾರಾಜರಿಂದ ಜವಾಬ್ದಾರಿ ಸರ್ಕಾರ ಸ್ಥಾಪನೆಯ ಘೋಷಣೆಯಾಯಿತು. ಜೈಲಿನಲ್ಲಿದ್ದವರೆಲ್ಲ ಬಿಡುಗಡೆ ಆದರು. ಕೆ.ಸಿ. ರೆಡ್ಡಿಯವರು ಮುಖ್ಯಮಂತ್ರಿಗಳಾದರು. ತರುವಾಯ ವೀರಣ್ಣಗೌಡರು 'ವಾರ್ತಾ' ಪತ್ರಿಕೆಯನ್ನು ನಿಲ್ಲಿಸಿ ಅವರು ಹಿಂದೆ ನಡೆಸುತ್ತಿದ್ದ 'ಚಿತ್ರಗುಪ್ತ' ಹೆಸರಿನ ದಿನಪತ್ರಿಕೆ ನಡೆಸಲು ತೀರ್ಮಾನಿಸಿದರು. ಇದು ಕೆಲವು ತಿಂಗಳು ನಡೆಯಿತು. ಆರ್ಥಿಕ ಮುಗ್ಗಟ್ಟಿನಿಂದ ಪತ್ರಿಕೆ ನಡೆಸುವುದು ಕಷ್ಟವಾಯಿತು. ತರುವಾಯ ಅದನ್ನು ಒಂದು ಸಂಸ್ಥೆಯಾಗಿ ಮಾರ್ಪಡಿಸಿ ಅದರ ಆಶ್ರಯದಲ್ಲಿ ಚಿತ್ರಗುಪ್ತ ಪತ್ರಿಕೆ ನಡೆಸುವುದೆಂದು ತೀರ್ಮಾನವಾಯಿತು. ಆಗಲೂ ಒಂದೆರಡು ತಿಂಗಳು ಅದರ ವ್ಯವಸ್ಥಾಪಕನಾಗಿದ್ದೆ.

'ಚಿತ್ರುಗುಪ್ತ' ಕಚೇರಿ ಚಾಮರಾಜಪೇಟೆ ಮೂರನೆಯ ರಸ್ತೆಯಲ್ಲಿತ್ತು. ನಾನಿನ್ನೂ ಚಿತ್ರಗುಪ್ತದಲ್ಲಿಯೇ ಇದ್ದೆ. ಚಿತ್ರಗುಪ್ತ ಒಂದು ಸಂಸ್ಥೆಯ ಆಡಳಿತಕ್ಕೊಳಪಟ್ಟ ಮೇಲೆ ಅದಕ್ಕೆ ಬೇಕಾದ ಹಣ ಒದಗಿಸಿದವರು ಧರ್ಮಪ್ರಕಾಶ್ ಎಲ್.ಎಸ್. ವೆಂಕಾಜಿರಾಯರು. ಅವರು ಈ ಸಂಸ್ಥೆಯ ಮೇಲ್ವಿಚಾರಣೆ ನೋಡಿಕೊಳ್ಳಲು ಅವರ ಬಂಧುಗಳಾದ ಶ್ರೀ ಬಿ. ಕೃಷ್ಣ ಅವರನ್ನು ಜನರಲ್ ಮ್ಯಾನೇಜರನ್ನಾಗಿ ನೇಮಿಸಿದರು. ಅವರು ಜನರಲ್ ಮ್ಯಾನೇಜರ್, ನಾನು ಮ್ಯಾನೇಜರ್. ಕೃಷ್ಣ ಅವರು ಸಂಭಾವಿತರು, ಎಲ್ಲರನ್ನು ಗೌರವದಿಂದ ಕಾಣುತ್ತಿದ್ದರು. ಇವರು ಒಳ್ಳೆಯ ಕಲಾವಿದರೆಂದು, ನಾಟಕ ಸಂಗೀತ ಕಾರ್ಯಕ್ರಮಗಳಲ್ಲಿ ತುಂಬಾ ಆಸಕ್ತಿಯುಳ್ಳವರೆಂದು ಕೇಳಿ ನನ್ನ ಮನಸ್ಸಿಗೆ ಸಂತೋಷವಾಯಿತು. ಅಂದು ಬೆಂಗಳೂರು ಕರಗದ ಪ್ರಯುಕ್ತ ಪ್ರೆಸ್ಸಿಗೆ ರಜಾ ಇತ್ತು. ಸೈಕಲ್ ಏರಿ ಎಲ್ಲಿಗೋ ಹೊರಟಿದ್ದವನು ಯಾರಿಗೋ ಫೋನ್ ಮಾಡೋಣವೆಂದು ಪ್ರೆಸ್ಸಿಗೆ ಹೋದೆ. ಶ್ರೀ ಕೃಷ್ಣ ಅವರು ಚಿತ್ರುಗುಪ್ತ ಟೇಬಲಿನಲ್ಲಿ ಕುಳಿತಿದ್ದರು. ಫೋನ್ ಮಾಡಲಾಯಿತು. ನನ್ನನ್ನು ನೋಡಿ ಕೃಷ್ಣ ಅವರು ಯಾವುದೋ ಕೆಲಸ ಹೇಳಿದರು. 'ನಾನು ಎಲ್ಲಿಗೋ ಹೋಗಬೇಕಾಗಿದೆ, ಅಲ್ಲದೆ ಈ ದಿನ ಪ್ರೆಸ್ಸಿಗೆ ರಜಾ ಬೇರೆ. ನಾಳೆ ದಿನ ನೀವು ಹೇಳಿದ ಕೆಲಸ ಮಾಡುತ್ತೇನೆ' ಎಂದು ಹೇಳಿದೆ. ಎಂದೂ ಅವರಿಗೆ ಕೋಪ ಬಂದಿದ್ದನ್ನು ಕಾಣೆ. ನಾನು ಹಾಗೆಂದ ಕೂಡಲೆ ಅವರು ಥಟಕ್ಕನೆ 'ನಿಮಗೆ ರಜಾ ಅನ್ವಯಿಸುವುದಿಲ್ಲ. ಹೇಳಿದ ಕೆಲಸ ಮಾಡಿ' ಎಂದು ಮುಖ ಗಂಟು ಹಾಕಿಕೊಂಡರು. ಇದೆಲ್ಲ ವಿಧಿಯ ಆಟ. ನನ್ನ ಬದುಕಿನ ದಾರಿ ಬದಲಾಯಿಸಲು ಭಗವಂತನೇ ಅವರ ಬಾಯಲ್ಲಿ ಈ ರೀತಿ ನುಡಿಸಿರಬೇಕು ಅಂತ ಕಾಣುತ್ತೆ. ಕೂಡಲೆ ನಾನು 'ಅದು ಸಾಧ್ಯವಿಲ್ಲ, ಬೇಕಾದರೆ ನನ್ನ ರಾಜೀನಾಮೆ ತೆಗೆದುಕೊಳ್ಳಿ' ಎಂದು ವಿನಯವಾಗಿ ಹೇಳಿ ಅಲ್ಲಿಂದ ಹೊರಟು ಬಂದೆ.

ಸೈಕಲ್ ಹತ್ತಿ ಎಲ್ಲಿಗೂ ಹೊರಟಿದ್ದವನಿಗೆ ವಿಧಿ ಅದನ್ನು ತಪ್ಪಿಸಿ ಮತ್ತೆಲ್ಲಿಗೂ ಕರೆದುಕೊಂಡು ಹೋಯಿತು. ಶ್ರೀ ಕೃಷ್ಣ ಅವರು ಒಳ್ಳೆ ವ್ಯಕ್ತಿಗಳು. ಈ ಹೊತ್ತಿನವರೆಗೂ ವಿಶ್ವಾಸದಿಂದಲೆ ಇದ್ದೆವು. ಅವರ ಬಾಯಲ್ಲಿ ಈ ದಿನ ಇಂಥ ಮಾತು ಬಂತಲ್ಲ ಎಂದುಕೊಂಡು ಸೈಕಲ್ ಹತ್ತಿ ಸ್ವಲ್ಪ ದೂರ ಹೋದಮೇಲೆ 'ಏಕೆ ನಾನೇ ಒಂದು ಪ್ರೆಸ್ ಇಡಬಾರದು' ಎಂದು ನನ್ನ ಅಂತರಧ್ವನಿ ಹೇಳಿದಂತಾಯಿತು. ಆಗಲಿ ನೋಡೋಣ ಎಂದು ನೇರವಾಗಿ ಅಠಾರಾ ಕಛೇರಿಗೆ ಹೋದೆ (ಈಗಿನಂತೆಯೇ ಕರಗಕ್ಕೆ ಸರಕಾರಿ ರಜಾ ಇರಲಿಲ್ಲ). ಅಠಾರಾ ಕಛೇರಿಯಲ್ಲಿದ್ದ ಸಿವಿಲ್ ಸಪ್ಲೈಸ್ ಕಛೇರಿಗೆ ಹೋಗಿ 'ನಾನು ಒಂದು ಪ್ರೆಸ್ ಇಡಬೇಕೆಂದಿದ್ದೇನೆ. ಅದಕ್ಕೆ ಸರ್ಕಾರದ ಅನುಮತಿ ಬೇಕು' ಎಂದು ಕೇಳಿದೆ. ಅದಕ್ಕವರು ಅರ್ಜಿ ಎಲ್ಲಿ ಎಂದು ಕೇಳಿದರು. ನನಗೆ ಏನು ಹೇಳಬೇಕೋ ಗೊತ್ತಾಗಲಿಲ್ಲ. ಅವರೇ ಒಂದು ಬಿಳಿ ಹಾಳೆ ಕೊಟ್ಟು ಅರ್ಜಿ ಬರೆದುಕೊಡಿ ಎಂದರು. ಅರ್ಜಿ ಬರೆದುಕೊಟ್ಟೆ. ಅವರು ಅದನ್ನು ಓದಿ ನೋಡಿ 'ಎಲ್ಲಿ ಇದರಲ್ಲಿ ಪ್ರೆಸ್ ಹೆಸರೇ ಇಲ್ಲ' ಎಂದು ಕೇಳಿದರು. ಅದಕ್ಕೆ ನನ್ನ ಉತ್ತರವಿಲ್ಲ. ಯಾವುದನ್ನೂ ಯೋಚನೆ ಮಾಡದೆ ಯಾವುದೋ ಆವೇಶದಿಂದ ಅಲ್ಲಿಗೆ ಹೋಗಿದ್ದವನು. ಅವರು ನನ್ನ ಸ್ಥಿತಿಯನ್ನು ಕಂಡು ಮರುಗಿದರು. ಕೂಡಲೆ ನಾನು 'ಸ್ವತಂತ್ರ ಮುದ್ರಣಾಲಯ' ಎಂದು ಹೆಸರಿಡಬೇಕೆಂದಿದ್ದೇನೆ ಎಂದೆ. ಅವರು ಆ ರೀತಿ ಬರೆದುಕೊಂಡು 'ಸರಿ ಹೋಗಿ, ಪ್ರೆಸ್ ಪ್ರಾರಂಭಿಸಿ. ಒಂದು ವಾರದೊಳಗೆ ಸರ್ಕಾರದ ಅನುಮತಿ ಕಳುಹಿಸುತ್ತೇವೆ' ಎಂದರು.

ಸರಿ, ಅಲ್ಲಿಂದ ಸೈಕಲ್ ಹತ್ತಿ ಲಾಲ್‌ಬಾಗ್ ಮುಂದುಗಡೆಯಿಂದ ಹಾದು ಮಾವಳ್ಳಿ ಟಿಫಿನ್ ರೂಂ ಬಳಿ ಬಂದೆ. ಶ್ರೀರಾಮ ಟೈಪ್ ಫೌಂಡ್ರಿ ರಾಮಯ್ಯನವರು ಅಲ್ಲಿ ನಿಂತಿದ್ದವರು ನನ್ನನ್ನು ಕಂಡು 'ಯಾಕೆ ಸ್ವಾಮಿ ಮುಖ ಸಪ್ಪಗಿದೆ. ಬನ್ನಿ ಕಾಫಿ ಕುಡಿಯೋಣ' ಎಂದು ಮಾವಳ್ಳಿ ಟಿಫಿನ್ ರೂಂಗೆ ಕರೆದುಕೊಂಡು ಹೋದರು. ಅವರು ವಾರ್ತಾ ಪ್ರೆಸ್ಸಿಗೆ ಟೈಪ್ಸ್ ಸರಬರಾಜು ಮಾಡುತ್ತಿದ್ದರು. ಅತ್ಯಂತ ಪ್ರಾಮಾಣಿಕರು, ನನ್ನನ್ನು ಕಂಡರೆ ತುಂಬ ವಿಶ್ವಾಸ. ಕಾಫಿ ಕುಡಿಯುತ್ತಾ ಬೆಳಗ್ಗೆಯಿಂದ ನಡೆದ ವಿಷಯವನ್ನೆಲ್ಲಾ ಅವರಿಗೆ ಹೇಳಿದೆ. ಅದಕ್ಕೆ ಅವರು 'ಸ್ವಾಮಿ, ಇದೆಲ್ಲ ದೈವಲೀಲೆ. ನೀವು ಏನೂ ಯೋಚಿಸಬೇಡಿ. ನನ್ನಲ್ಲಿ ರೆಡಿಯಾದ ಸ್ವಲ್ಪ ಟೈಪ್ಸ್ ಇದೆ. ಹಣ ನಿಧಾನವಾಗಿ ಕೊಡಿ. ಈಗ ಟೈಪ್ಸ್ ತೆಗೆದುಕೊಂಡು ಹೋಗಿ, ಪ್ರೆಸ್ ಪ್ರಾರಂಭಿಸಿ' ಎಂದು ಹೇಳಿ ದಾರಿಯಲ್ಲಿ ಹೋಗುತ್ತಿದ್ದ ಒಂದು ಜಟಕಾ ಕರೆದು ಅದರಲ್ಲಿ ಟೈಪ್ಸ್ ಪ್ಯಾಕೆಟ್‌ಗಳನ್ನು ಇಟ್ಟು ನನ್ನ ಸಂಗಡ ಕಳುಹಿಸಿಯೇ ಬಿಟ್ಟರು. ಏನು ಗ್ರಹಚಾರ ಇದು ಎಂದು ಗೊಣಗುತ್ತಾ ಮನೆ ಬಳಿ ಬಂದೆ. ಆಗ ನಾನು ಚಾಮರಾಜಪೇಟೆ ಎರಡನೇ ರಸ್ತೆಯಲ್ಲಿ ಆರ್. ಸೀಬಯ್ಯನವರ ಏಳು ರೂಪಾಯಿ ಬಾಡಿಗೆ ಮನೆಯಲ್ಲಿದ್ದೆ. ಕರಗದ ಪ್ರಯುಕ್ತ ಊರಿನಿಂದ ಕೆಲವರು ಮನೆಗೆ ಬಂದಿದ್ದರು. ಬೆಳಗ್ಗೆಯಿಂದ ನಾನು ಮನೆಗೆ ಬರದಿರುವುದನ್ನು ನೋಡಿ ಅವರಿಗೆ ಕಾತುರ ಹೆಚ್ಚಾಗಿತ್ತು. ಮನೆಗೆ ಹೋದ ಕೂಡಲೆ ಟೈಪ್ಸ್ ಇಳಿಸಿಕೊಂಡು ಬೆಳಿಗ್ಗೆಯಿಂದ ನಡೆದ ಸಮಾಚಾರವನ್ನೆಲ್ಲ ಅವರಿಗೆ ವಿವರಿಸಿ ಹೇಳಿದೆ.

ಆ ದಿನ ನಿಜಕ್ಕೂ ನಾನು ಹುಚ್ಚನಂತಾಗಿದ್ದೆ. ಮಧ್ಯಾಹ್ನ ಊಟವಾದ ಕೂಡಲೆ ಅದೇ

ಸೈಕಲ್ ಹತ್ತಿ ಚಾಮರಾಜಪೇಟೆ ಮೂರನೇ ರಸ್ತೆಯಲ್ಲಿರುವ ಅಂಗಡಿ ಸಾಲಿನ ಬಳಿ ಹೋದೆ. ಎಸ್. ಕೃಷ್ಣರಾವ್ ಪವಾರ್ ಅವರು ನನಗೆ ಪರಿಚಯವಿದ್ದ ವ್ಯಕ್ತಿಗಳು (ಅವರು ಮುಂದೆ ಕಾರ್ಪೊರೇಷನ್ ಸದಸ್ಯರು, ತರುವಾಯ ಉಪಮೇಯರ್ ಆದರು). ಅವರ ಅಂಗಡಿ ಅಲ್ಲೆ ಇತ್ತು. ಅವರು ನನ್ನನ್ನು ಕಂಡ ಕೂಡಲೆ ನಮಸ್ಕಾರ ಹೇಳಿ, 'ಇದೇನು ಮಧ್ಯಾಹ್ನದ ಉರಿ ಬಿಸಿಲಿನಲ್ಲಿ ಹೊರಟಿದ್ದೀರಿ. ವಿಶ್ರಾಂತಿ ತೆಗೆದುಕೊಳ್ಳಬಾರದೆ' ಎಂದರು. ನಾನು ತುಂಬ ನಿರುತ್ಸಾಹದಿಂದ ಬೆಳಗಿನಿಂದ ನಡೆದ ಕಥೆಯನ್ನೆಲ್ಲಾ ಅವರಿಗೆ ಹೇಳಿದೆ. ಕೂಡಲೇ ಅವರು, 'ನೀವು ಪ್ರೆಸ್ ಇಡುವ ಹಾಗಿದ್ದರೆ ಎದುರುಗಡೆ–ಅಲ್ಲಿ ನೋಡಿ ಆ ಮೂರು ಅಂಗಡಿಗಳ ಪೈಕಿ ಒಂದು ಅಂಗಡಿ ಖಾಲಿ ಇದೆ. ಅದರ ಮಾಲೀಕರು ಗಂಗಾಧರಪ್ಪ ಎಂದು. ಅವರು ಅರಳೇಪೇಟೆಯಲ್ಲಿದ್ದಾರೆ. ಕೂಡಲೆ ಹೋಗಿ ನೋಡಿ. ಅವರಿಗೆ ನನ್ನ ಹೆಸರು ಹೇಳಿ ಎಂದರು. ತಕ್ಷಣ ಅಲ್ಲಿಂದ ಸೈಕಲ್ ಹತ್ತಿ ಅರಳೇಪೇಟೆಗೆ ಹೋಗಿ ಗಂಗಾಧರಪ್ಪನವರ ಮನೆ ಪತ್ತೆ ಮಾಡಿದೆ. ಅವರನ್ನು ಕಂಡು ನಮಸ್ಕಾರ ಹೇಳಿ ಕೃಷ್ಣರಾವ್ ಪವಾರ್ ಕಳುಹಿಸಿ ಕೊಟ್ಟಿದ್ದಾರೆಂದು ಮೊದಲೇ ತಿಳಿಸಿ ತರುವಾಯ ನನ್ನ ಕಥೆಯನ್ನೆಲ್ಲಾ ಬಿಚ್ಚಿ ಹೇಳಿದೆ. ಅವರು ಬಹಳ ಸಮಾಧಾನಚಿತ್ತರಾಗಿ ನಾನು ಹೇಳಿದ್ದನ್ನೆಲ್ಲಾ ಕೇಳಿ "ನೋಡಿ, ನಾವು ಏನು ಮಾಡಿದರೆ ತಾನೇ ಏನು ? ಎಲ್ಲವೂ ಭಗವಂತನ ಇಚ್ಛೆ. ಯಾರ್ಯಾರೋ ಬಂದು ಆ ಅಂಗಡಿ ಕೇಳಿದರು. ಎಲ್ಲರಿಗೂ ಕೊಡುವುದಿಲ್ಲ ಎಂದು ಉತ್ತರ ಹೇಳಿ ಕಳುಹಿಸಿದೆ. ನಿಮ್ಮ ಕಥೆಯನ್ನು ಕೇಳಿದ ಮೇಲೆ ಆ ಅಂಗಡಿಯನ್ನು ನಿಮಗೆ ಕೊಡಬೇಕೆಂದು ನನ್ನ ಮನಸ್ಸು ಹೇಳುತ್ತಿದೆ. ಬಾಡಿಗೆ ಹದಿನೈದು ರೂಪಾಯಿ. ಮೂರು ತಿಂಗಳ ಅಡ್ವಾನ್ಸ್ ಕೊಡಬೇಕು. ಇಗೊ ತಗೊಳ್ಳಿ ಬೀಗದ ಕೈ. ಮುಂಗಡ ಆಮೇಲೆ ಕೊಡುವಿರಂತೆ" ಎಂದು ಹೇಳಿ ಮುಂದೆ ನಾನು ಮಾತನಾಡಲು ಅವಕಾಶವನ್ನು ಕೊಡದೆ ಕೈಗೆ ಬೀಗದಕೈ ಕೊಟ್ಟು 'ಎಲ್ಲೊ ಕೆಲಸವಿದೆ, ಬರುತ್ತೇನೆ' ಎಂದು ಹೇಳಿ ಹೊರಟೇ ಹೋದರು.

ಗಂಗಾಧರಪ್ಪನವರು ಹೇಳಿದಂತೆ ಎಲ್ಲವೂ ಭಗವಂತನ ಇಚ್ಛೆ ಎಂದುಕೊಂಡು ಅವರ ಮನೆಯಿಂದ ಹೊರಟು ಅರಳೇಪೇಟೆ ಮೆಯಿನ್ ರಸ್ತೆಯಲ್ಲಿ ಸ್ವಲ್ಪ ದೂರ ಬಂದೆ. ಅಲ್ಲಿ ಎಸ್.ಜಿ.ಎನ್. ಪ್ರೆಸ್ ಮುಂದೆ ಮಿಷನ್ ಮನೆ ವೆಂಕಟಪ್ಪನವರು ನಿಂತಿದ್ದರು. ಅವರು ಮತ್ತು ಶ್ರೀರಾಮ ಟೈಪ್ ಫೌಂಡ್ರಿ ರಾಮಯ್ಯನವರು ಒಂದೇ ಮನೆಯಲ್ಲಿ ವಾಸವಾಗಿದ್ದರು. ಕೊನೆಯವರೆಗೂ ಅವರು ಅಣ್ಣ ತಮ್ಮಂದಿರಂತೆ, ಬಾಳಿದರು. ವೆಂಕಟಪ್ಪನವರನ್ನು ನೋಡಿದ ಕೂಡಲೆ ನಾನು ಸೈಕಲ್ ಇಳಿದೆ. 'ಏನು ಸ್ವಾಮಿ ಇಷ್ಟೊತ್ತಿನಲ್ಲಿ ? ಏಕೊ ದಣಿದವರಂತೆ ಕಾಣುತ್ತೀರಿ ! ಏನು ಸಮಾಚಾರ ?' ಎಂದು ಕೇಳಿದರು. ಯಥಾಪ್ರಕಾರ ಬೆಳಗ್ಗೆಯಿಂದ ಆವರೆಗೆ ನಡೆದ ವಿಚಾರವನ್ನೆಲ್ಲ ಅವರಿಗೆ ಹೇಳಿದೆ. 'ಅದೆಲ್ಲಾ ಸರಿ. ಪ್ರೆಸ್ ಎಂದರೆ ಪ್ರಿಂಟಿಂಗ್ ಮಿಷನ್ ಬೇಡವೇ ? ಅದಕ್ಕೆ ಏನು ಮಾಡುತ್ತೀರಿ' ಎಂದು ಕೇಳಿದರು. 'ನೋಡಿ ವೆಂಕಟಪ್ಪನವರೆ ಅದ್ಯಾವುದನ್ನು ಯೋಚಿಸುವುದಕ್ಕೂ ನನಗೆ ವಿರಾಮವಿಲ್ಲ. ಬೆಳಿಗ್ಗೆಯಿಂದ ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ಸುತ್ತಾಡುವುದೇ ಆಯಿತು. ಏನು ಮಾಡುವುದು ? ನನ್ನ ಗ್ರಹಚಾರ' ಎಂದೆ. ವಕ್ಕವರು ಹಾಗಾದರೆ ಒಂದು ಕೆಲಸಮಾಡಿ, ಸೈಕಲ್ಲನ್ನು ನಮ್ಮ ಪ್ರೆಸ್

ಗೋಡೆಗೆ ಒರಗಿಸಿ. ನಮ್ಮ ಪ್ರೆಸ್ಸಿನಲ್ಲಿ ಒಂದು ಹಳೆಯ ಟ್ರೆಡಲ್ ಮಿಷನ್ ಇದೆ. ಹುಬ್ಬಳ್ಳಿಯವರು ಬಂದು ಕೇಳಿ ಹೋಗಿದ್ದಾರೆ. ನಮ್ಮ ಯಜಮಾನರಿಗೆ ಹೇಳುತ್ತೇನೆ. ದಯವಿಟ್ಟು ಒಳಗೆ ಬನ್ನಿ' ಎಂದು ನನ್ನನ್ನು ಕರೆದುಕೊಂಡು ನೇರವಾಗಿ ಅವರ ಯಜಮಾನರ ಬಳಿ ಹೋದರು. ಎಸ್.ಜಿ.ಎಸ್. ಪ್ರೆಸ್ ಮಾಲೀಕರು ಶ್ರೀಮಾನ್ ಶಿವಪ್ಪನವರು. ತುಂಬ ಸುಸಂಸ್ಕೃತರು. ಯಾರ ಮನಸ್ಸನ್ನು ನೋಯಿಸಿದವರಲ್ಲ. ನನ್ನ ಕಥೆಯನ್ನೆಲ್ಲಾ ಕೇಳಿದರು. 'ಆಗಲಿ ನಿಮಗೇ ಮಿಷನ್ ಕೊಡುತ್ತೇನೆ. ನಾಳೆ ನಾಳಿದ್ದರಲ್ಲಿ ಸ್ವಲ್ಪ ಮುಂಗಡ ತಂದುಕೊಡಿ' ಎಂದು ಹೇಳಿ ಏನೋ ಕೆಲಸವಾಗಿ ಎದ್ದು ಹೋದರು. ಮೂರನೆಯ ದಿನ ಸ್ನೇಹಿತರಿಂದ ಇನ್ನೂರು ರೂಪಾಯಿ ಸಾಲ ಪಡೆದು ಅವರಿಗೆ ಮುಂಗಡ ಹಣ ಕೊಟ್ಟೆ. ಒಂದೇ ದಿನದಲ್ಲಿ ಅದೂ ಬೆಂಗಳೂರು ನಗರದಲ್ಲಿ ಇಷ್ಟೊಂದು ಕೆಲಸ ಆಗಬೇಕಾದರೆ ಅದು ದೈವೇಚ್ಛೆಯೇ ವಿನಾ ನನ್ನದೇನೂ ಇಲ್ಲ ಎಂದು ಪದೇ ಪದೇ ದೇವರನ್ನು ಸ್ಮರಿಸಿಕೊಳ್ಳುತ್ತಾ ರಾತ್ರಿ ಚೆನ್ನಾಗಿ ನಿದ್ದೆ ಹೋದೆ. ಮಾರನೆ ದಿನ ನಮ್ಮ ಊರಿಗೆ ಹೋಗಿ ನಮ್ಮ ಬಂಧುಗಳಿಂದ ಅಲ್ಲಿಷ್ಟು ಇಲ್ಲಿಷ್ಟು ಹಣ ಕಿತ್ತು ತಂದು ಮಿಷನ್ನವರಿಗೆ, ಟೈಪ್ಸ್‌ನವರಿಗೆ, ಅಂಗಡಿ ಮಾಲೀಕರಿಗೆ ಕೊಟ್ಟೆ. ಒಂದು ಒಳ್ಳೆಯ ದಿನ ನೋಡಿ ಆ ದಿನ ಪ್ರೆಸ್ ಪ್ರಾರಂಭ ಮಾಡುವುದೆಂದು ನಿಶ್ಚಯ ಮಾಡಿ ಆ ದಿನ ಖಂಡಿತ ಬಂದು ಆಶೀರ್ವದಿಸಬೇಕೆಂದು ಶ್ರೀ ಕೃಷ್ಣ ಅವರನ್ನು ಮುಂಚಿತವಾಗಿ ಕಂಡು ಕೇಳಿಕೊಂಡೆ. ಅವರು ಸಂತೋಷದಿಂದ ಬಂದು ಒಳ್ಳೆಯ ಮಾತನಾಡಿದರು. ಅಂದಿನಿಂದ 'ಸ್ವತಂತ್ರ ಮುದ್ರಣಾಲಯ' ಆರಂಭವಾಯಿತು.

ನಾನು ಪ್ರೆಸ್ ಆರಂಭಮಾಡಿದ್ದು ೧೯೫೦ರಲ್ಲಿ. ವಿನೋದ ಮಾಸಪತ್ರಿಕೆ ಪ್ರಾರಂಭವಾದದ್ದು ೧೯೫೧ನೇ ಜನವರಿ ೨೬ರಂದು. ವಾರ್ತಾ ಪತ್ರಿಕೆಯಲ್ಲಿ ಕೆಲಸ ಮಾಡಿದ್ದರಿಂದ ಆರ್ಥಿಕವಾಗಿ ಯಾವ ಲಾಭವಾಗದಿದ್ದರು ಪ್ರೆಸ್ ಅನುಭವ, ಪತ್ರಿಕೆ ನಡೆಸಲು ಬೇಕಾದ ತಿಳಿವಳಿಕೆ, ಲೇಖಕರ ಸಂಪರ್ಕ, ಪತ್ರಿಕೆ ಮಾರಾಟದಲ್ಲಿ ವ್ಯವಸ್ಥೆ ಇತ್ಯಾದಿ ವಿಷಯಗಳನ್ನು ತಿಳಿದುಕೊಳ್ಳಲು ಅವಕಾಶವಾಯಿತು. ಈ ಅನುಭವದ ಮೇಲೆ ನನ್ನ ಸ್ವಂತ ಪ್ರೆಸ್ಸಿನಲ್ಲಿ ಒಂದು ಮಾಸಪತ್ರಿಕೆ ನಡೆಸುವ ನಿರ್ಧಾರ ಮಾಡಿದೆ. ಪ್ರೆಸ್ಸಿಗಾಗಿ ನಾನು ಹೆಚ್ಚು ಬಂಡವಾಳ ಹಾಕಿರಲಿಲ್ಲ. ನಾನು ಹಾಕಿದ್ದ ಬಂಡವಾಳ ಆರುಸಾವಿರ ರೂಪಾಯಿ ಮಾತ್ರ. ಒಬ್ಬನೇ ಕೆಲಸಗಾರ. ಅವನೇ ಕಂಪ್ರೋಜಿಟರ್ ಮತ್ತು ಅವನೇ ಪ್ರಿಂಟರ್. ಅವನಿಗೆ ಆಗ ಕೊಡುತ್ತಿದ್ದ ಸಂಬಳ ತಿಂಗಳಿಗೆ ೫೦ ರೂಪಾಯಿ. ಹೆಚ್ಚು ಕೆಲಸವಿದ್ದಾಗ ಸಂಜೆ ವೇಳೆ ಬೇರೆ ಪ್ರೆಸ್ಸಿನ ಕೆಲಸಗಾರರು ಬಂದು ಕೆಲಸ ಮಾಡಿಕೊಡುತ್ತಿದ್ದರು. ನಮ್ಮಲ್ಲಿದ್ದ ಒಬ್ಬ ಕೆಲಸಗಾರನಿಗೂ ಎಷ್ಟೋ ವೇಳೆ ಕೆಲಸವಿರುತ್ತಿರಲಿಲ್ಲ. ಒಂದು ಮಾಸಪತ್ರಿಕೆಯನ್ನಾದರು ಪ್ರಾರಂಭಿಸಿದರೆ ಕೆಲಸಗಾರನಿಗೆ ಕೈತುಂಬ ಕೆಲಸ ಕೊಡಬಹುದು ಎನ್ನುವ ಉದ್ದೇಶದಿಂದ ಪ್ರೆಸ್ ಪ್ರಾರಂಭವಾದ ಆರು ತಿಂಗಳೊಳಗೆ ಪ[illegible] ಆರಂಭಿಸಿದೆ. ಪ್ರಾರಂಭದಲ್ಲಿ ನನ್ನಲ್ಲಿ ಬಂದು ಸೇರಿದ ಕೆಲಸಗಾರರೆಂದರೆ ಶ್ರೀ ರಂಗಯ್ಯ[illegible] ಅವರು ಹಿಂದೆ ವಾರ್ತಾಪ್ರೆಸ್ಸಿನಲ್ಲಿ ಕಂಪ್ರೋಜಿಟರ್ ಆಗಿ ಕೆಲಸ ಮಾಡುತ್ತಿದ್ದರು. [illegible] ಪ್ರಾಮಾಣಿಕ ವ್ಯಕ್ತಿ. ಸರಳ ಜೀವನ, ಯಾವ ಕೆಟ್ಟ ಹವ್ಯಾಸವೂ ಅವರಿಗಿಲ್ಲ. ಈಗಿನ ಕಾಲದಲ್ಲಿ ಇಂಥವರು ಸಿಕ್ಕುವುದು ದುರ್ಲಭ. ಮೊದಲಿನಿಂದಲು

ನನಗೆ ಹಾಸ್ಯ ಸಾಹಿತ್ಯ ಎಂದರೆ ತುಂಬ ಇಷ್ಟ. ನೋಡುವವರ ಕಣ್ಣಿಗೆ ನಾನು ಗಂಭೀರ ಸ್ವಭಾವದವನಂತೆ ಕಾಣುತ್ತೇನೆಂದು ಅನೇಕರು ಆಕ್ಷೇಪಿಸುತ್ತಾರೆ. ಆದರೆ ವಾಸ್ತವಿಕವಾಗಿ ನಾನು ಆ ರೀತಿ ಇಲ್ಲ. ನನ್ನೊಡನೆ ಮಾತುಕತೆಯಾಡಲು ಬಂದವರು, ನನ್ನೊಡನೆ ಕೆಲಸ ಮಾಡುವವರು ನನ್ನ ಹಾಸ್ಯ ಪ್ರವೃತ್ತಿಯನ್ನು ಕಂಡು ಸಂತೋಷಪಡುತ್ತಾರೆ. ಜೀವನದಲ್ಲಿ ಹಾಸ್ಯದ ಮಹತ್ವವನ್ನು ತಕ್ಕ ಮಟ್ಟಿಗೆ ಅರಿತಿದ್ದೇನೆ. ಈ ಎಲ್ಲ ಕಾರಣಗಳಿಂದ ನಾನು ಪ್ರಾರಂಭಮಾಡುವ ಪತ್ರಿಕೆ ಹಾಸ್ಯಕ್ಕೇ ಮೀಸಲಾಗಿರಬೇಕೆಂದು ಯೋಚಿಸಿ ಪತ್ರಿಕೆಗೆ 'ವಿನೋದ' ಎಂದು ಹೆಸರಿಟ್ಟೆ. ಆಗ ನಗುವನಂದ, ಕೊರವಂಜಿ ಮಾಸಪತ್ರಿಕೆಗಳು ನಡೆಯುತ್ತಿದ್ದವು. ಆ ಪತ್ರಿಕೆಗಳಿಗೆ ಬರೆಯುತ್ತಿದ್ದ ಎಷ್ಟೋ ಲೇಖಕರು ನಮ್ಮ ಪತ್ರಿಕೆಗೂ ಬರೆಯುತ್ತಿದ್ದರು. ಅನೇಕ ಹಿರಿಯ ಹಾಗೂ ಕಿರಿಯ ಲೇಖಕರು ವಿನೋದ ಪತ್ರಿಕೆಗೆ ಲೇಖನಗಳನ್ನು ಈಗಲೂ ಬರೆಯುತ್ತಿದ್ದಾರೆ.

ವಾರ್ತಾ ಪತ್ರಿಕೆಯಲ್ಲಿದ್ದಾಗ ತಿಂಗಳಿಗೆ ೧೫ ರೂಪಾಯಿ ಕೊಟ್ಟು ಊಟದ ಟಿಕೆಟ್ ಕೊಂಡು ಚಾಮರಾಜಪೇಟೆ ಮಲಬಾರ್ ಲಾಡ್ಜ್‌ನಲ್ಲಿ ಊಟ ಮಾಡುತ್ತಿದ್ದೆ. ಎಷ್ಟೋ ಸಾರಿ ಕೆಲಸದ ಒತ್ತಡದಿಂದ ಸಕಾಲಕ್ಕೆ ಊಟ ತಿಂಡಿ ತೆಗೆದುಕೊಳ್ಳುತ್ತಿರಲಿಲ್ಲ. ಸ್ವಂತ ಪ್ರೆಸ್ ಆರಂಭ ಮಾಡಿದ ಮೇಲೆ ಬಹಳ ಕಾಲ ನಾನೇ ಅಡಿಗೆ ಮಾಡಿಕೊಂಡು ಊಟಮಾಡುತ್ತಿದ್ದೆ. ಇದರಿಂದ ನನ್ನ ದೇಹಸ್ಥಿತಿ ತುಂಬ ಕೆಟ್ಟುಹೋಯಿತು. ಜ್ವರ ಕೆಮ್ಮು ಪ್ರಾರಂಭವಾಗಿ ಶ್ವಾಸಕೋಶದಲ್ಲಿ ತೊಂದರೆಯಾಗಿ ವಿಕ್ಟೋರಿಯ ಆಸ್ಪತ್ರೆಯಲ್ಲಿ ಮೂರು ತಿಂಗಳು ಚಿಕಿತ್ಸೆ ಪಡೆದು ಡಾ॥ ವೆಂಕಟಸುಬ್ಬರಾವ್ ಅವರ ಕರುಣೆಯಿಂದ ಬದುಕಿಬಂದೆ. ಈ ಸಂದರ್ಭದಲ್ಲಿ ೨-೩ ತಿಂಗಳ ಸಂಚಿಕೆಗಳು ಬರಲಿಲ್ಲ. ತರುವಾಯ ಚೇತರಿಸಿಕೊಂಡು ಪತ್ರಿಕೆ ಕೆಲಸ ಮುಂದುವರಿಸಿದೆ.

ಪ್ರತಿ ವರ್ಷ ಆಗಸ್ಟ್ ೧೫ರಂದು ವಿನೋದ ವಿಶೇಷ ಸಂಚಿಕೆ ಪ್ರಕಟವಾಗುತ್ತದೆ. ಪ್ರಾರಂಭದಲ್ಲಿ ಪತ್ರಿಕೆ ಬೆಲೆ ಎರಡಾಣೆ ಇತ್ತು. ಪತ್ರಿಕೆ ಓದುವ ಸಾಮಾನ್ಯನಿಗೆ ಹೆಚ್ಚು ಭಾರ ಆಗಬಾರದೆಂಬುದು ನನ್ನ ಉದ್ದೇಶ. ವಿನೋದದಿಂದ ಪ್ರತಿ ವರ್ಷ ನಷ್ಟವಾಗುತ್ತಿದ್ದರೂ ವಿಶೇಷ ಸಂಚಿಕೆ ಸಂದರ್ಭದಲ್ಲಿ ಕೆಲವು ಜಾಹೀರಾತುಗಳನ್ನು ಸಂಗ್ರಹಿಸಿ ಆ ವರ್ಷದ ನಷ್ಟವನ್ನು ಆ ವರ್ಷವೇ ಸರಿದೂಗಿಸುತ್ತೇನೆ. ಈ ಮಧ್ಯೆ ಪ್ರೌಢಶಾಲಾ ಶಿಕ್ಷಣಕ್ಕಾಗಿ ಊರಿಂದ ಬಂದ ನಮ್ಮ ಅಣ್ಣನವರ ಮಗ ಪಿ. ರಾಮಣ್ಣ ಅನೇಕ ವರ್ಷಗಳು ನನ್ನೊಡನಿದ್ದು ಪ್ರೆಸ್ ಕೆಲಸ ನೋಡಿಕೊಳ್ಳುತ್ತಿದ್ದುದರಿಂದ ನನ್ನ ಕೆಲಸ ಹಗುರವಾಯಿತು. ಲೇಖಕರಿಗೆ ನಾನು ಕೊಡುತ್ತಿರುವ ಸಂಭಾವನೆ ಅದು ಸಂಭಾವನೆಯೇ ಅಲ್ಲ. ಹೇಳಿಕೊಳ್ಳುವುದಕ್ಕೂ ಸಂಕೋಚ. ವಿನೋದ ವಾಚಕರ ಸಂಖ್ಯೆ ಹೆಚ್ಚಾಗಿದ್ದರೂ ಪತ್ರಿಕೆ ಬೆಲೆ ಕಡಿಮೆ ಇರುವುದರಿಂದ ಮತ್ತು ಹೆಚ್ಚು ಜಾಹೀರಾತುಗಳಿಲ್ಲದಿರುವುದರಿಂದ ಆಯವ್ಯಯ ಸರಿದೂಗಿಸುವುದು ಕಷ್ಟವಾಗಿದೆ. ಲೇಖಕರ ಪ್ರೋತ್ಸಾಹವೇ ವಿನೋದ ಇಷ್ಟು ವರ್ಷಕಾಲ ನಡೆದು ಬರಲು ಅವಕಾಶವಾಗಿದೆ. ವಿನೋದ ೧೫ನೇ ವರ್ಷದಲ್ಲಿ ಒಂದು ವಿಶೇಷ ಸಮಾರಂಭವನ್ನು ಏರ್ಪಡಿಸಿ ವಿನೋದದ ಬಳಗದವರನ್ನೆಲ್ಲ ಬರಮಾಡಿಕೊಳ್ಳಲಾಗಿತ್ತು. ೧೯೭೫ರಲ್ಲಿ ಡಾ. ಎಂ. ಶಿವರಾಂ ಅವರ ಅಧ್ಯಕ್ಷತೆಯಲ್ಲಿ ವಿನೋದದ ಬೆಳ್ಳಿ ಹಬ್ಬವನ್ನು ಆಚರಿಸಲಾಯಿತು. ಕರ್ನಾಟಕದಲ್ಲಿ ಇಂದು

ಹಾಸ್ಯ ಸಾಹಿತ್ಯಕ್ಕೆ ಮೀಸಲಾದ ಕಡಮೆ ಬೆಲೆಯ ಹಿರಿಯ ಮಾಸಪತ್ರಿಕೆ ಎಂದರೆ ವಿನೋದ ಒಂದೇ.

ನಾನು ಹಿಂದೆ ಕಾಂಗ್ರೆಸ್ ಕಚೇರಿಯನ್ನು ಸೇರುವ ಮೊದಲೆ ಕಾಂಗ್ರೆಸ್ಸಿನ ಪ್ರಾಥಮಿಕ ಸದಸ್ಯನಾಗಿದ್ದೆ. ತರುವಾಯ ಸಕ್ರಿಯ ಸದಸ್ಯನೂ ಆದೆ. ಚಾಮರಾಜಪೇಟೆಯಲ್ಲಿ ಆರ್. ಅನಂತರಾಮನ್‌ರವರು ಜನಸಂಪರ್ಕ ಇಟ್ಟುಕೊಂಡು ಕಾಂಗ್ರೆಸ್ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದರು. ಕ್ರಮೇಣ ನನಗೆ ಅವರ ಪರಿಚಯವಾಯಿತು. ನಾನೂ ಕಾಂಗ್ರೆಸ್ ಚಟುವಟಿಕೆಗಳಲ್ಲಿ ತುಂಬ ಆಸಕ್ತಿ ವಹಿಸುತ್ತಿದ್ದೆ. ತರುವಾಯ ಚಾಮರಾಜಪೇಟೆ ಕಾಂಗ್ರೆಸ್ ಸಮಿತಿಗೆ ನಾನೇ ಅಧ್ಯಕ್ಷನಾದೆ. ತಿಂಗಳಿಗೊಮ್ಮೆ ಸಭೆ ಕರೆಯುವುದು, ಚುನಾವಣೆಗಳು ಬಂದಾಗ ಕಾರ್ಯಕರ್ತರನ್ನು ಸಂಘಟಿಸಿ ಮನೆ ಮನೆಗೆ ಹೋಗಿ ಕಾಂಗ್ರೆಸ್‌ಪರ ಪ್ರಚಾರ ಕೈಗೊಳ್ಳುವುದು, ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ವಿಚಾರ ವಿನಿಮಯ ನಡೆಸಿ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಸರ್ಕಾರದ ಗಮನಕ್ಕೆ ತರುವುದು, ಗಾಂಧೀಜಯಂತಿ, ರಿಪಬ್ಲಿಕ್ ಡೇ, ಸ್ವಾತಂತ್ರ್ಯ ದಿನಾಚಾರಣೆ ಇತ್ಯಾದಿ ಉತ್ಸವಗಳನ್ನು ಆಚರಿಸುವುದು, ನೂಲುವ ತರಗತಿ ತೆರೆಯುವುದು, ಕನ್ನಡ ಪ್ರಚಾರ ಇತ್ಯಾದಿ ಕಾರ್ಯಕ್ರಮಗಳನ್ನು ನಡೆಸುತ್ತಿದ್ದೆ. ನಮ್ಮ ಸಮಿತಿ ಸದಸ್ಯರಲ್ಲಿ ಅನೇಕರು ನಿಷ್ಠಾವಂತ ಕಾರ್ಯಕರ್ತರಿದ್ದರು. ಶ್ರೀಗಳಾದ ಕೆ. ಚನ್ನಪ್ಪ, ಎನ್. ಸುಬ್ಬರಾವ್, ಎಂ. ಗೋವಿಂದಪ್ಪ, ಟಿ.ಎಸ್. ಲಕ್ಷ್ಮೀನಾರಾಯಣರಾವ್. ಎನ್. ತಿಮ್ಮಾರೆಡ್ಡಿ, ಎಸ್. ಕೃಷ್ಣರಾವ್ ಪವಾರ್, ಆರ್. ರಂಗಸ್ವಾಮಿ, ಆರ್. ಮುತ್ತಯ್ಯ ಮುಂತಾದವರು ಕಾಂಗ್ರೆಸ್ ಕೆಲಸ ಎಂದರೆ ತುಂಬಾ ಶ್ರದ್ಧೆಯಿಂದ ಮಾಡುತ್ತಿದ್ದರು. ಅದೇ ಮೊದಲನೆಯ ಬಾರಿಗೆ ದಿನಾಂಕ ೩೧–೭–೫೫ರಂದು ಚಾಮರಾಜಪೇಟೆ ಕಾಂಗ್ರೆಸ್ ಕಾರ್ಯಕರ್ತರ ಸಮ್ಮೇಳನ ಜರುಗಿತು. ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಸ್. ಚನ್ನಯ್ಯನವರು ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು.

ಆ ಸಮ್ಮೇಳನದಲ್ಲಿ ಕಾಂಗ್ರೆಸ್ಸಿಗೂ ಮತ್ತು ಸರ್ಕಾರಕ್ಕೂ ಇರಬೇಕಾದ ಬಾಂಧವ್ಯ, ಸರ್ಕಾರದ ಎಲ್ಲ ವ್ಯವಹಾರಗಳು ಕನ್ನಡದಲ್ಲೇ ನಡೆಯಬೇಕು, ಪ್ರತಿಯೊಬ್ಬ ತಾಲ್ಲೂಕ್ ಕಾಂಗ್ರೆಸ್ ಸಮಿತಿ ಸದಸ್ಯನೂ ಅವರವರ ಕ್ಷೇತ್ರದ ಜನರ ಕುಂದು ಕೊರತೆಗಳನ್ನು ಅರಿಯಲು ಎರಡು ವಾರಕ್ಕೊಮ್ಮೆಯಾದರೂ ತಮ್ಮ ಮೊಹಲ್ಲಾಗಳಿಗೆ ಭೇಟಿ ಕೊಡಬೇಕು ಇತ್ಯಾದಿ ನಿರ್ಣಯಗಳಾದುವು. ಆಗ ಕೆ. ಹನುಮಂತಯ್ಯನವರು ರಾಜ್ಯದ ಮುಖ್ಯ ಮಂತ್ರಿಗಳು. ಸಾಹುಕಾರ್ ಚನ್ನಯ್ಯನವರು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರು. 'ಹನುಮಂತಯ್ಯನವರು ದಕ್ಷರು, ಬುದ್ಧಿವಂತರು, ಧೈರ್ಯಶಾಲಿಗಳು, ಕಾಂಗ್ರೆಸ್‌ಗಾಗಿ ವಿಶೇಷವಾಗಿ ದುಡಿದವರು. ಹೆಚ್ಚು ಕಾಲ ಜೈಲುವಾಸ ಅನುಭವಿಸಿದವರು. ಅದೆಲ್ಲಾ ಸರಿ. ಆದರೆ ಮಹಾ ಗರ್ವಿಷ್ಠರು, ಸರ್ವಾಧಿಕಾರಿಯಂತೆ ವರ್ತಿಸುತ್ತಾರೆ. ಅವರನ್ನು ಮುಖ್ಯಮಂತ್ರಿ ಪದವಿಯಿಂದ ಇಳಿಸಬೇಕು' ಎನ್ನುವ ಶಾಸಕರು, ಕಾರ್ಯಕರ್ತರು. ಅನೇಕರಿದ್ದರು ಚನ್ನಯ್ಯನವರು ವ್ಯವಹಾರ ಚತುರರು, ಛಲಗಾರರು. ಗತ್ತು ಗಮ್ಮತ್ತು ಉಳ್ಳವರು. ಚನ್ನಯ್ಯನವರ ಮಾತೆಂದರೆ ಬಹು ಮಂದಿ ಶಾಸಕರು, ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರು, ಕಾರ್ಯಕರ್ತರು ಇವರಿಗೆಲ್ಲ ವೇದವಾಕ್ಯ.

ಅಸಮಾಧಾನವಾಗುವಂತೆ ನಡೆದುಕೊಂಡರೆ ಏನು ಮಾಡಿಬಿಡುತ್ತಾರೋ. ಪಾರ್ಲಿಮೆಂಟ್, ಅಸೆಂಬ್ಲಿ, ಕಾರ್ಪೊರೇಷನ್ ಚುನಾವಣೆಗಳು, ಬಂದಾಗ ಎಲ್ಲಿ ತಮಗೆ ಸೀಟು ಕೊಡದೆ ಹೋಗುವರೋ ಎಂಬ ಭಯ. ಆಗ ಮೈಸೂರು ಕಾಂಗ್ರೆಸ್ಸಿನಲ್ಲಿ ಎದ್ದು ಕಾಣುವಂಥ ಎರಡು ಗುಂಪುಗಳು. ಒಂದು ಹನುಮಂತಯ್ಯನವರ ಗುಂಪು, ಮತ್ತೊಂದು ಚನ್ನಯ್ಯನವರ ಗುಂಪು. ಹನುಮಂತಯ್ಯನವರನ್ನು ಹೇಗಾದರೂ ಮಾಡಿ ಅಧಿಕಾರದಿಂದ ಇಳಿಸಬೇಕೆಂದು ಕೇಂದ್ರದ ವರೆಗೂ ದೂರು ಹೋಗಿತ್ತು. ಚನ್ನಯ್ಯನವರು ಬಹು ಮಂದಿ ಶಾಸಕರನ್ನು ಗುಂಪು ಕಟ್ಟಿ ಹನುಮಂತಯ್ಯನವರ ಮೇಲೆ ಅವಿಶ್ವಾಸ ನಿರ್ಣಯ ತರಲು ತಕ್ಕ ಏರ್ಪಾಟು ಮಾಡಿದ್ದರು. ಆ ಸಂದರ್ಭದಲ್ಲಿ ಚಾಮರಾಜಪೇಟೆ ತಾಲ್ಲೂಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷನಾದ ನಾನು ಚನ್ನಯ್ಯನವರಿಗೆ ೨–೩ ಪತ್ರ ಬರೆದು ಒಬ್ಬ ಮುಖ್ಯಮಂತ್ರಿಯನ್ನು ಅಧಿಕಾರದಿಂದ ಇಳಿಸುವ ಅಧಿಕಾರ ಶಾಸಕರಿಗೆ ಸಂಬಂಧಪಟ್ಟದ್ದೇ ಆದರೂ ಇದು ಒಂದು ಪಕ್ಷದ ಸರ್ಕಾರವಾದ್ದರಿಂದ ಮುಖ್ಯಮಂತ್ರಿಗಳ ಮೇಲಿರುವ ಆರೋಪಣೆಗಳು ಎಂ.ಪಿ.ಸಿ.ಸಿ. ಸಭೆಯಲ್ಲಿ ಚರ್ಚೆ ಆಗಲಿ. ಕಾರ್ಯಕರ್ತರಿಗೂ ವಿಷಯ ತಿಳಿಯಲಿ. ಅಲ್ಲದೆ ಜವಾಬ್ದಾರಿ ಸ್ಥಾನದಲ್ಲಿರುವ ಯಾವುದೇ ವ್ಯಕ್ತಿಯ ಮೇಲೆ ಶಿಸ್ತಿನಕ್ರಮ ಕೈಗೊಳ್ಳುವಾಗ ಸಂಸ್ಥೆಯ ಅಂಗರಚನೆಯನ್ನು ಗಮನದಲ್ಲಿಟ್ಟುಕೊಂಡು ಮುಂದಿನ ಕ್ರಮ ಕೈಗೊಳ್ಳಬೇಕು ಎಂದು ಪತ್ರದಲ್ಲಿ ತಿಳಿಸಿದ್ದೆ. ಅದಕ್ಕೆ ಸರಿಯಾದ ಉತ್ತರ ಬರಲಿಲ್ಲ. ಅಧ್ಯಕ್ಷರು ಮತ್ತು ನನ್ನ ಮಧ್ಯೆ ನಡೆದ ಪತ್ರ ವ್ಯವಹಾರವನ್ನು ಅಚ್ಚು ಮಾಡಿಸಿ ರೇಸ್‌ಕೋರ್ಸ್ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದ ಮುಂದೆ ಪ್ರತಿಭಟನೆ ನಡೆಸುವುದಾಗಿ. ತಿಳಿಸಿದೆ. ಅದಕ್ಕೂ ಅವರು ಬಗ್ಗಲಿಲ್ಲ. ದಿನಾಂಕ ೧೫–೮–೧೯೫೬ರಂದು ನಾನು, ನನ್ನ ಸ್ನೇಹಿತರಾದ ಕೆ. ಚನ್ನಪ್ಪ, ಎಂ. ಗೋವಿಂದಪ್ಪ, ಎಸ್. ಸುಬ್ಬರಾವ್, ಪಿ.ಎಸ್. ಲಕ್ಷ್ಮೀನಾರಾಯಣ ರಾವ್ ಮುಂತಾದವರು ಕಾಂಗ್ರೆಸ್ ಭವನದ ಮುಂದೆ ಬೆಳಗ್ಗೆ ೯ರಿಂದ ಸಂಜೆ ೬ ಗಂಟೆಯವರೆಗೂ ಕುಳಿತು ನಮ್ಮ ಪ್ರತಿಭಟನೆ ಸೂಚಿಸಿದೆವು. ಬರಬರುತ್ತಾ ನೂರಿನ್ನೂರು ಜನ ಸೇರಿಕೊಂಡರು. ಸುಮಾರು ೧೧ ಘಂಟೆ ವೇಳೆಗೆ ಮುಖ್ಯಮಂತ್ರಿ ಕೆ. ಹನುಮಂತಯ್ಯನವರು ಆ ಜಾಗಕ್ಕೆ ಬಂದರು. ಅವರ ಕೈಗೆ ನನ್ನ ಮತ್ತು ಅಧ್ಯಕ್ಷರ ನಡುವೆ ನಡೆದ ಪತ್ರವ್ಯವಹಾರದ ಒಂದು ಪ್ರಕಟಣೆಯನ್ನು ಕೊಟ್ಟೆ. ಅವರು ಅದನ್ನು ನೋಡಿ ನಿಟ್ಟುಸಿರು ಬಿಟ್ಟರು. ಆಗ ಹನುಮಂತಯ್ಯನವರಿಗೂ ನನಗೂ ಯಾವ ಪರಿಚಯವೂ ಇರಲಿಲ್ಲ. 'ದೇಶಕ್ಕಾಗಿ ನಾನು ಸಾಕಷ್ಟು ತ್ಯಾಗ ಮಾಡಿದ್ದೇನೆ. ನನ್ನಿಂದ ಸಾವಿರಾರು ಜನ ಪ್ರಯೋಜನ ಪಡೆದಿದ್ದಾರೆ. ಈ ಸಂದರ್ಭದಲ್ಲಿ ಆ ಯಾರೊಬ್ಬರು ನೀವು ಮಾಡುವುದು ತಪ್ಪು ಎಂದು ಕಾಂಗ್ರೆಸ್ ಅಧ್ಯಕ್ಷರಿಗೆ ಹೇಳಲಿಲ್ಲ. ಆದರೂ ಚಿಂತೆಯಿಲ್ಲ. ನೀವೊಬ್ಬರಾದರು ಪ್ರತಿಭಟನೆ ಸೂಚಿಸಿದಿರಿ. ಇಂದೇ ನನ್ನ ಅಧಿಕಾರ ಹೋದರೂ ಚಿಂತೆ ಇಲ್ಲ. ನಿಮ್ಮ ಕಾರ್ಯ ನನ್ನ ಮನಸ್ಸಿಗೆ ಸಮಾಧಾನ ತಂದುಕೊಟ್ಟಿದೆ.' ಎಂದು ಹೇಳಿ ಕಾರು ಹತ್ತಿ ಬುರ್ ಅಂತ ಹೊರಟೇ ಹೋದರು. ಮಾರನೆಯ ದಿನವೆ ಕಾಂಗ್ರೆಸ್ ಪಕ್ಷದ ಶಾಸಕರ ಸಭೆಯಲ್ಲಿ ಅವಿಶ್ವಾಸ ನಿರ್ಣಯ ಬಂದು ಹನುಮಂತಯ್ಯನವರು ಮುಖ್ಯಮಂತ್ರಿ ಪದವಿ ಕಳೆದುಕೊಂಡರು. ಇದಾದ ಮೇಲೆ ಕೆಲವು ಹಿರಿಯ ಮುಖಂಡರ ವಕ್ರದೃಷ್ಟಿ ನನ್ನ ಮೇಲೆ ಬಿತ್ತು. ಇದರ ಪರಿಣಾಮವಾಗಿ ಕೆಲವು ತಿಂಗಳಾದ ಮೇಲೆ ಬೆಂಗಳೂರು ನಗರ ಕಾಂಗ್ರೆಸ್ ಸಮಿತಿ ಹಾಗು ಎಂ.ಪಿ.ಸಿ.ಸಿ.ಗೆ ಸ್ಪರ್ಧಿಸಿದ್ದ ನನಗೆ ಸೋಲಾಯಿತು.

ಚಾಮರಾಜಪೇಟೆ ಕಾಂಗ್ರೆಸ್ ಸಮಿತಿ ಅಧ್ಯಕ್ಷತೆ ಜತೆಗೆ ಪತ್ರಿಕೆ ಹಾಗೂ ಪ್ರೆಸ್ ಕೆಲಸವನ್ನು ನೋಡಿಕೊಳ್ಳುತ್ತಿದ್ದೆ.

ಇಷ್ಟೆಲ್ಲ ಕೆಲಸ ಕಾರ್ಯಗಳಿದ್ದರೂ ತಿಂಗಳಲ್ಲಿ ಒಂದೆರಡು ಸಾರಿ ಊರಿಗೆ ಹೋಗಿ ಬರುತ್ತಿದ್ದೆ. ಕೆಲಸದ ಹೊರೆ, ಸ್ವತಃ ಅಡಿಗೆ ಮಾಡಿಕೊಳ್ಳುವುದು, ಹೊತ್ತಿಗೆ ಸರಿಯಾಗಿ ಊಟ ಮಾಡದಿರುವುದು, ಇದರಿಂದ ಆಗಾಗ ಖಾಯಿಲೆ ಬೀಳಬೇಕಾಗುತ್ತದೆ. ಹೇಗೂ ಮದುವೆ ವಯಸ್ಸಾಗಿದೆ. ಸಂಪಾದನೆಗೆ ಯಾವುದೋ ಒಂದು ವೃತ್ತಿಯನ್ನು ಹಿಡಿದಿದ್ದಾಗಿದೆ. ಈಗ ಮದುವೆ ಮಾಡುವುದೆ ಸರಿ ಎಂದು ನಮ್ಮ ತಂದೆ ತಾಯಿಗಳು, ನಮ್ಮ ಸೋದರಮಾವನವರು ನಿಶ್ಚಯಮಾಡಿ ಸರಿಯಾದ ಮನೆತನದ ಹೆಣ್ಣಿಗಾಗಿ ಪ್ರಯತ್ನಪಟ್ಟರು. ಸ್ವಂತ ಬಂಧು ಬಳಗದಲ್ಲಿ ಇದ್ದ ಎರಡು ಮೂರು ಹೆಣ್ಣುಗಳನ್ನು ನಾನು ನಿರಾಕರಿಸಿದೆ. ಹೊಸ ಸಂಬಂಧದಲ್ಲಿ ಎರಡು ಮೂರು ಕಡೆ ನೋಡಿದರು. ಆ ಯಾವ ಹೆಣ್ಣನ್ನು ನಾನು ಒಪ್ಪಲಿಲ್ಲ. ನಾನು ಒಪ್ಪಲಿಲ್ಲ ಎನ್ನುವುದಕ್ಕಿಂತ ಅವರೇ ನನ್ನನ್ನು ಒಪ್ಪಲಿಲ್ಲ. ಬೆಂಗಳೂರಿಗೆ ಸೇರಿದಂತಿರುವ ಬ್ಯಾಟರಾಯನಪುರದಲ್ಲಿ ಜೇರ್ಮನ್ ನರಸಿಂಹಯ್ಯನವರದು ದೊಡ್ಡ ಕುಟುಂಬ. ಮನೆಯಲ್ಲಿ ೭೦-೮೦ ಜನ. ೭ ಮಂದಿ ತಮ್ಮಂದಿರು, ಅವರ ಮನೆಯವರು ಮಕ್ಕಳು ಎಲ್ಲರೂ ಒಟ್ಟಿಗೆ ಇದ್ದರು. 'ದೊಡ್ಡ ಮನೆ'ಯವರೆಂದೇ ಜನ ಅವರನ್ನು ಕರೆಯುತ್ತಿದ್ದರು. ನರಸಿಂಹಯ್ಯನವರ ಮೊದಲ ತಮ್ಮಂದಿರು ಶ್ರೀ ರಾಮಪ್ಪನವರು, ಎರಡನೆಯ ತಮ್ಮಂದಿರು ಶ್ರೀ ಲಕ್ಷ್ಮಣಪ್ಪನವರು, ಇವರಿಬ್ಬರೂ ಅವಳಿಜವಳಿ ಮಕ್ಕಳು. ರಾಮಪ್ಪ ಲಕ್ಷ್ಮಣಪ್ಪ ಇಬ್ಬರು ತುಂಬ ಸಾತ್ವಿಕರು, ದೈವ ಭಕ್ತರು, ಧರ್ಮಭೀರುಗಳು, ಕಷ್ಟಜೀವಿಗಳು. ಇವರಲ್ಲಿ ಹಿರಿಯರಾದ ರಾಮಪ್ಪನವರೆ ನನ್ನ ಮಾವಂದಿರು. ಇವರೂ ನಮ್ಮ ಸೋದರಮಾವಂದಿರಾದ ಪಿ. ತಮ್ಮಯ್ಯನವರೂ ಗುರುಪುತ್ರರು. ಸಾಧು ಸಂತರೆಂದರೆ ಬಹು ಪ್ರೀತಿ. 'ವರ್ಷದಲ್ಲಿ ಆಗಾಗ ಪ್ರವಚನ ಕಾರ್ಯಕ್ರಮಗಳನ್ನು ಏರ್ಪಡಿಸಿ ಜನರಲ್ಲಿ ಜ್ಞಾನ ಭಕ್ತಿಭಾವ ಬೆಳೆಯಲು ನಾನಾ ವಿಧವಾದ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾರೆ. ರಾಮಪ್ಪನವರಿಗೆ ಮದುವೆಯಾಗುವ ಮಗಳಿದ್ದಾಳೆ. ಅವಳನ್ನು ನಮ್ಮ ಹುಡುಗನಿಗೆ ಏಕೆ ತಂದುಕೊಳ್ಳಬಾರದು' ಎಂದು ನಮ್ಮ ಸೋದರಮಾವನವರು ಅವರಿವರ ಸಂಗಡ ಪ್ರಸ್ತಾಪ ಮಾಡಿದರು. ಒಂದು ದಿನ ಹೆಣ್ಣನ್ನು ನೋಡಿಕೊಂಡು ಬರಲು ರಾಮಪ್ಪನವರ ಮನೆಗೆ ಹೋಗಿ ಬರುವುದೆಂದು ನಿಶ್ಚಯವಾಯಿತು. ಯಾರ ಮನೆಗಾದರೂ ಹೆಣ್ಣು ನೋಡಲು ಹೋಗುವುದಕ್ಕೆ ನನಗೆ ತುಂಬ ಸಂಕೋಚ. ಹೋದ ಕಡೆ ತಲೆ ತಗ್ಗಿಸಿಕೊಂಡು ಕುಳಿತಿದ್ದು ಬರುವಾಗ ನನ್ನ ಜೊತೆಯಲ್ಲಿ ಬಂದವರನ್ನು ಹೆಣ್ಣು ಹೇಗಿದೆ ಎಂದು ಕೇಳುತ್ತಿದ್ದೆ. ರಾಮಪ್ಪನವರ ಮನೆಗೆ ಹೋದಾಗ ಈ ಭೂಪತಿ ಗಂಡನ್ನು ನೋಡಲು ಮನೆಯ ಹೆಂಗಸರು ಮಕ್ಕಳೆಲ್ಲ ತುಂಬಿಕೊಂಡುಬಿಟ್ಟರು. ನಾಚಿಕೆಯಾಗಿ ನಾನು ತಲೆ ಎತ್ತಲೇ ಇಲ್ಲ. ಜತೆಯಲ್ಲಿ ಬಂದಿದ್ದ ಕೆ. ಚನ್ನಪ್ಪನವರು 'ಹೆಣ್ಣು ಪರವಾಯಿಲ್ಲ. ಒಳ್ಳೆಯ ಮನೆತನ, ದೊಡ್ಡ ಮನೆ' ಎಂದು ಹೊಗಳಿದರು. ಹೆಣ್ಣಂತು ನನ್ನನ್ನು ಒಪ್ಪಲೇ ಇಲ್ಲವಂತೆ. ಅವರನ್ನು ಖಂಡಿತ ನಾನು ಮದುವೆಯಾಗುವುದಿಲ್ಲ ಎಂದು ಹಠ ಹಿಡಿದಳಂತೆ. ಕೊನೆಗೆ ಅವರ ತಂದೆ ತಾಯಿಗಳು ಬಂಧುಬಳಗದವರು 'ನಿನಗೆ ಅವರ ವಿಚಾರ ಗೊತ್ತಿಲ್ಲ. ತುಂಬ ಅನುಕೂಲಸ್ಥರು. ಯಾವಾಗಲು

ಕಾರಿನಲ್ಲಿಯೇ ತಿರುಗಾಡುತ್ತಾರೆ' ಎಂದು ಹೇಳಿದರಂತೆ. ಆಗ ಹೆಣ್ಣಿಗೆ ಪರವಾಯಿಲ್ಲ ಎನ್ನಿಸಿರಬೇಕು. ಹಾಗೋ ಹೀಗೋ ಮದುವೆ ನಮ್ಮ ಊರಿನಲ್ಲಿ ನಡೆದುಹೋಯಿತು. ಮದುವೆಗೆ ಬೆಂಗಳೂರಿನಿಂದ ಅನೇಕ ಜನ ಕಾಂಗ್ರೆಸ್ ಮಿತ್ರರು ಬಂದಿದ್ದರು.

ಎಷ್ಟೋ ದಿನಗಳಾದ ಮೇಲೆ ನನ್ನ ಶ್ರೀಮತಿ ಯಶೋದಮ್ಮನವರು ಒಂದು ದಿನ ನನ್ನನ್ನು ಕುರಿತು 'ನೀವು ತುಂಬ ಅನುಕೂಲಸ್ಥರಂತೆ, ಯಾವಾಗಲೂ ಕಾರಿನಲ್ಲೇ ತಿರುಗಾಡುವಿರಂತೆ, ಎಲ್ಲಿ ಒಂದು ದಿನವೂ ನಿಮ್ಮ ಕಾರನ್ನು ನೋಡಲಿಲ್ಲ' ಎಂದರು. ಅದಕ್ಕೆ ನಾನು, 'ಯಾರೋ ಹೇಳಿದ ಮಾತನ್ನು ನೀವು ಸರಿಯಾಗಿ ಕೇಳಿಸಿಕೊಂಡಿಲ್ಲ. ಅವರು ಯಾವಾಗಲು ಕಾಲಿನಲ್ಲೇ ತಿರುಗಾಡುತ್ತಾರೆ ಎಂದಿರಬೇಕು. ಕಾಲು ಎನ್ನುವುದು ನಿಮ್ಮ ಕಿವಿಗೆ ಕಾರು ಎಂದು ಕೇಳಿಸಿರಬೇಕು' ಎಂದು ಉತ್ತರ ಕೊಟ್ಟೆ. ಶುರುವಾಯಿತು ಅವರ ತಕರಾರು. 'ನಮ್ಮ ತಂದೆ ನನಗೆ ಮೋಸ ಮಾಡಿದರು. ನಿಮಗಿಂತ ಒಳ್ಳೆ ಗಂಡ ನನಗೆ ಸಿಗುತ್ತಿದ್ದ.....' ಇತ್ಯಾದಿ ಇತ್ಯಾದಿ. ಗಂಡ ಹೆಂಡಿರಲ್ಲಿ ಏನೇ ಭಿನ್ನಾಭಿಪ್ರಾಯ ಬಂದರು ಗಾದೆ ಮಾತಿದೆಯಲ್ಲ ಗಂಡ ಹೆಂಡಿರ ಜಗಳ ಉಂಡು ಮಲಗುವತನಕ ಎಂದು. ಹಾಗೇ ಸರಸ ವಿರಸ ಕೆಲವು ದಿನ ನಡೆಯಿತು. ಆಮೇಲೆ ಅನ್ಯೋನ್ಯತೆಯಿಂದ ಹೇಗೆ ನಡೆಯಬೇಕೆಂಬುದನ್ನು ಇಬ್ಬರೂ ಅರಿತುಕೊಂಡು ಈಗ ಆದರ್ಶ ದಂಪತಿಗಳಾಗಿದ್ದೇವೆ. ಈಗ ಇಬ್ಬರಿಗೂ ವಯಸ್ಸಾಗುತ್ತಾ ಬರುತ್ತಿರುವುದರಿಂದ ಇನ್ನು ಮುಂದೆ ನಮ್ಮ ಮಧ್ಯೆ ಯಾವ ತಂಟೆ ತಕರಾರುಗಳಿಗೂ ಆಸ್ಪದವಿಲ್ಲ. ಸಾಮಾನ್ಯ ವಿದ್ಯಾವಂತರಾದರೂ ಪತ್ರಿಕೆ ಪುಸ್ತಕ ಓದುವುದೆಂದರೆ ಅವರಿಗೆ ತುಂಬ ಇಷ್ಟ. ಸುಮಾರು ೨೦ ವರ್ಷದ ಹಿಂದೆ ಕಾಣಿಸಿಕೊಂಡ ಬೆನ್ನು ನೋವು ಇವರನ್ನು ಈ ಹೊತ್ತಿಗೂ ಕಾಡುತ್ತಿದೆ. ಇಷ್ಟೆಲ್ಲ ದೇಹಕ್ಕೆ ತೊಂದರೆ ಆದರೂ ಅತಿಥಿಗಳನ್ನು ಸತ್ಕರಿಸುವುದು, ಮನೆಗೆ ಬಂದವರನ್ನು ಗೌರವದಿಂದ ಕಾಣುವುದು, ಮಕ್ಕಳ ಯೋಗಕ್ಷೇಮ ನೋಡಿಕೊಳ್ಳುವುದು, ನನ್ನ ಮನಸ್ಸನ್ನು ಅರ್ಥಮಾಡಿಕೊಂಡು ನನ್ನ ಕೆಲಸ ಕಾರ್ಯಗಳಲ್ಲಿ ನೆರವಾಗುವುದು, ಈ ಆದರ್ಶ ನಡವಳಿಕೆಗಳು ನನಗೂ ನನ್ನ ಬಂಧು ಬಳಗದವರಿಗೂ ತುಂಬ ಸಂತೋಷವನ್ನು ತಂದುಕೊಟ್ಟಿದೆ.

ನಮ್ಮಿಬ್ಬರ ಸ್ವಯಾರ್ಜಿತ ಆಸ್ತಿ, ಮೂರು ಗಂಡು ಒಂದು ಹೆಣ್ಣು. ಮೊದಲನೆಯವನು ಎನ್. ರಾಘವೇಂದ್ರ, ಕನ್ನಡ ಎಂ.ಎ. ಪದವೀಧರ, ಪ್ರೆಸ್ ನೋಡಿಕೊಳ್ಳುತ್ತಿದ್ದಾನೆ. ಎರಡನೆಯವಳು ಮಗಳು ಎನ್. ಸುಜಾತ, ಬಿ.ಎ ಪದವೀಧರೆ, ಅಸಿಸ್ಟೆಂಟ್ ಇಂಜಿನಿಯರ್ ಶ್ರೀ ಎಂ.ವಿ. ಶ್ರೀಧರ್ ಅವರಿಗೆ ಕೊಟ್ಟು ಮದುವೆ ಆಗಿದೆ. ಮೂರನೆಯವನು ಎನ್. ಜಗದೀಶ್, ಎನ್.ಜಿ.ಇ.ಎಫ್.ನಲ್ಲಿ ಉದ್ಯೋಗ, ನಾಲ್ಕನೆಯವನು ಎನ್. ಗೋಪಾಲಕೃಷ್ಣ, ಬಿ.ಕಾಂ. ಹೀಗಾಗಿ ಎಲ್ಲಾ ಮಕ್ಕಳು ಅವರವರ ಖರ್ಚನ್ನು ಅವರೇ ಹುಟ್ಟಿಸಿಕೊಂಡು ಮನೆ ಖರ್ಚನ್ನು ಅವರೇ ವಹಿಸಿಕೊಂಡಿದ್ದಾರೆ.

ನಾನು ಮದುವೆಯಾದ ಮೇಲೂ ಊರಿನ ಸಂಪರ್ಕ ಕಡಿದುಕೊಳ್ಳಲಿಲ್ಲ. ಹಬ್ಬ ಹರಿದಿನಗಳಿಗೆ ನಂಟರಿಷ್ಟರ ಮದುವೆಗಳಿಗೆ ಏನೂ ಇಲ್ಲದಿದ್ದಾಗ ತಂದೆ ತಾಯಿಗಳನ್ನು ನೋಡುವ ಉದ್ದೇಶದಿಂದಾದರೂ ತಿಂಗಳಲ್ಲಿ ಒಂದೆರಡು ಬಾರಿ ಊರಿಗೆ ಹೋಗಿ ಬರುತ್ತಿದ್ದೆ.

ಒಮ್ಮೆ ನಾನು ಊರಿಗೆ ಹೋದಾಗ ಊರಿನ ಕೆಲವು ಯುವಕರು 'ಕುರುಕ್ಷೇತ್ರ' ಪೌರಾಣಿಕ ನಾಟಕ ಅಭ್ಯಾಸ ಮಾಡುತ್ತಿದ್ದರು. ಊರಿನಲ್ಲಿ ಪ್ರಾಥಮಿಕ ಶಾಲಾ ಕಟ್ಟಡವಿಲ್ಲ, ಟಿಕೆಟ್ ಇಟ್ಟು ನಾಟಕವಾಡಿ ಬಂದ ಹಣದಿಂದ ಊರಿಗೊಂದು ಪ್ರಾಥಮಿಕ ಶಾಲೆ ಕಟ್ಟಡ ಕಟ್ಟಿಸಬೇಕೆಂದೂ ಅದಕ್ಕೆ ನಾನು ನನ್ನ ಕೈಲಾದ ಪ್ರೋತ್ಸಾಹ ನೀಡುವೆನೆಂದು ನನ್ನ ಜನರಿಗೆ ತಿಳಿಸಿದೆ. ಅವರು ಆ ಸಲಹೆಯನ್ನು ಸಂತೋಷದಿಂದ ಒಪ್ಪಿದರು. ಮತ್ತು ನಾಟಕದಲ್ಲಿ ನಾನು ಮತ್ತು ನನ್ನ ಮಿತ್ರರಾದ ಎಂ. ಕೆಂಚಪ್ಪನವರೂ ಪಾತ್ರವಹಿಸಬೇಕೆಂದು ಹಠ ಹಿಡಿದರು. ಅವರ ಒತ್ತಾಯದ ಮೇಲೆ ನಾನು ವಿದುರನ ಪಾತ್ರವನ್ನು ಕೆಂಚಪ್ಪನವರು ಭೀಷ್ಮನ ಪಾತ್ರವನ್ನು ಒಪ್ಪಿಕೊಂಡು ನಾಟಕದ ಉಪಾಧ್ಯಾಯರಿಂದ ನಮ್ಮ ನಮ್ಮ ಪಾತ್ರಗಳಿಗೆ ಸಂಬಂಧಪಟ್ಟ ಹಾಡುಗಾರಿಕೆ ಮತ್ತು ಸಾಹಿತ್ಯವನ್ನು ಚೆನ್ನಾಗಿ ಅಭ್ಯಾಸ ಮಾಡಿದೆವು. ನಮ್ಮ ಊರಿನ ಇನ್ನೊಬ್ಬ ಹಿರಿಯರಾದ ಕೆ. ಚೌಡೇಗೌಡರು ಹಾರ್ಮೋನಿಯಂ ಅಭ್ಯಾಸ ಮಾಡಿದ್ದರು. ಯಾರ ಹಂಗಿಗೂ ಅವರು ತಲೆ ಬಾಗಿದವರಲ್ಲ. ಮಹಾ ಛಲಗಾರರು, ಅಷ್ಟೇ ಉದಾರಿಗಳು. ಹಿಂದೆ ಅನೇಕ ನಾಟಕಗಳಲ್ಲಿ ಪಾತ್ರ ವಹಿಸಿ ಜನ ಮೆಚ್ಚುಗೆ ಸಂಪಾದಿಸಿದ್ದರು. ಅವರು ಈ ಕುರುಕ್ಷೇತ್ರ ನಾಟಕದಲ್ಲಿ ದುರ್ಯೋಧನ ಪಾತ್ರ ವಹಿಸಲು ಮುಂದೆ ಬಂದದ್ದು ಊರಿನವರೆಲ್ಲರಿಗೂ ಸಂತೋಷವಾಯಿತು. ಊರಿನ ಇನ್ನೊಬ್ಬ ಮುಖಂಡರಾದ ಶ್ರೀ ಮುದ್ದೇಗೌಡರು ನಾಟಕ ಮಂಡಳಿಯ ವ್ಯವಸ್ಥಾಪಕನಾಗಲು ಒಪ್ಪಿದರು. ಕೆಲವು ದಿನ ನಾನು, ಕೆಂಚಪ್ಪನವರು, ಚೌಡೇಗೌಡರು ಮತ್ತು ಮುದ್ದೇಗೌಡರು ಅಕ್ಕಪಕ್ಕದ ಹಳ್ಳಿಗಳಿಗೆ ಹೋಗಿ ನಮ್ಮೂರಿನ ಪ್ರಾಥಮಿಕ ಶಾಲೆ ಕಟ್ಟಡಕ್ಕಾಗಿ ಹಣ ವಸೂಲು ಮಾಡಿದ್ದು ಉಂಟು. ಕುರುಕ್ಷೇತ್ರ ನಾಟಕ ತಕ್ಕಮಟ್ಟಿಗೆ ಚೆನ್ನಾಗಿಯೇ ನಡೆಯಿತು. ಈ ನಾಟಕದಿಂದ ಕೆಲವು ಸಾವಿರ ರೂಪಾಯಿಗಳ ಉಳಿತಾಯವು ಆಯಿತು. ಶಾಲೆ ಕಟ್ಟಲು ಜಾಗ ಬೇಕಲ್ಲ. ಎಲ್ಲರೂ ಸೇರಿ ಚೌಡೇಗೌಡರನ್ನು ಮತ್ತು ಇನ್ನೊಬ್ಬ ತರುಣ ಮಿತ್ರ ಲಿಂಗಯ್ಯನವರನ್ನು ಕಂಡು ಊರಿನ ಪಕ್ಕದ ಅವರ ಹೊಲದಲ್ಲಿ ಶಾಲೆ ಕಟ್ಟಲು ಉಚಿತವಾಗಿ ಜಾಗ ಕೊಡಬೇಕೆಂದು ಪ್ರಾರ್ಥಿಸಿದೆವು. ಅವರು ಸಂತೋಷದಿಂದ ಜಾಗ ಕೊಟ್ಟದ್ದಲ್ಲದೆ ಕಟ್ಟಡ ಕಟ್ಟಲು ಸಾಕಷ್ಟು ದೈಹಿಕ ಶ್ರಮ ವಹಿಸಿದರು. ಸರ್ಕಾರದ ದ್ರವ್ಯ ಸಹಾಯವು ಒದಗಿ ಬಂತು. ನಮ್ಮೂರಿಗೊಂದು ಪ್ರಾಥಮಿಕ ಶಾಲೆ ಕಟ್ಟಡವಾಯಿತು. ಆ ಊರಿನ ಈವೊತ್ತಿನ ಮಕ್ಕಳ ಸಂಖ್ಯೆಗೆ ಈ ಕಟ್ಟಡ ಚಿಕ್ಕದು. ಈ ಪ್ರಾಥಮಿಕ ಶಾಲೆಯು ೨-೩ ಬೇರೆ ಬೇರೆ ಕಟ್ಟಡಗಳಲ್ಲಿ ನಡೆಯುತ್ತಿದೆ.

ಇಷ್ಟರಿಂದಲೆ ನನ್ನ ಊರಿಗೆ ಭಾರಿ ಉಪಕಾರ ಮಾಡಿದೆನೆಂದು ನಾನು ಭಾವಿಸಿಲ್ಲ. ಪ್ರಾಥಮಿಕ ಶಾಲೆ ಜತೆಗೆ ಪ್ರೌಢಶಾಲೆಯೂ ಬೇಕು. ಅದಕ್ಕಾಗಿ ಪ್ರಯತ್ನ ನಡೆಯುತ್ತಿದೆ. ಈಗ ನನ್ನ ತಂದೆ ತಾಯಿಗಳು ತೀರಿಕೊಂಡಿದ್ದಾರೆ. ಅವರ ಹೆಸರಿನಲ್ಲಿ ಒಂದು ದತ್ತಿ ಇಟ್ಟು ಅದರ ಬಡ್ಡಿಯಿಂದ ಆ ಊರಿನ ಬಡ ವಿದ್ಯಾರ್ಥಿಗಳಿಗೆ ಯಾವುದಾದರೂ ರೀತಿಯಲ್ಲಿ ಸಹಾಯ ಮಾಡಬೇಕೆಂದೂ ಶಾಲೆಗೆ ಬೇಕಾದ ಕೆಲವು ಸಲಕರಣೆಗಳನ್ನು ಆಗಾಗ ಕೊಂಡು ಕೊಡಬೇಕೆಂದೂ ವರ್ಷದಲ್ಲಿ ಒಂದೆರಡು ಬಾರಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಮ್ಮ ಊರಿನಲ್ಲಿ ನಡೆಸಬೇಕೆಂದೂ ನನ್ನ ಅಪೇಕ್ಷೆಯಾಗಿದೆ.

ಶ್ರೀ ಆರ್. ಅನಂತರಾಮನ್‌ರವರು ನಾನು ಮೊದಲೇ ಹೇಳಿದಂತೆ ಕಾರ್ಪೊರೇಷನ್ ಕೌನ್ಸಿಲರ್ ಆಗಿದ್ದರು. ಒಂದು ದಿನ ಬೆಳಿಗ್ಗೆ ಅವರು ನನಗೆ ಸಿಕ್ಕಿ 'ನೀವು ಹೇಗಿದ್ದರೂ ಪತ್ರಿಕೋದ್ಯೋಗಿಗಳು, ವಿನೋದ ಪತ್ರಿಕೆ ಸಂಪಾದಕರಾಗಿದ್ದೀರಿ. ಕಾರ್ಪೊರೇಷನ್‌ನವರು ಭಾರತ್ ಟಾಕೀಸ್ ಸಮೀಪದಲ್ಲಿ ಪತ್ರಿಕೋದ್ಯೋಗಿಗಳಿಗಾಗಿ ಜರ್ನಲಿಸ್ಟ್ ಕಾಲೋನಿ ಮಾಡಿದ್ದಾರೆ. ನೀವು ಒಂದು ಅರ್ಜಿ ಸಲ್ಲಿಸಿದ್ದರೆ ನಿಮಗೂ ಒಂದು ಸೈಟು ಕೊಡಿಸುತ್ತೇನೆ, ಎಂದರು. ಅವರ ಮಾತಿನಂತೆ ಅರ್ಜಿ ಹಾಕಿದೆ. 60x30 ಅಡಿಯ ಒಂದು ಸೈಟು ಮಂಜೂರಾಯಿತು. ಅದರ ಬೆಲೆ 600-00 ರೂ ಮಾತ್ರ. ಅಷ್ಟು ಹಣ ಒಂದೇ ಸಾರಿಗೆ ಕಟ್ಟಲು ಸಾಧ್ಯವಿಲ್ಲದೆ ಒಂದು ವರ್ಷದ ನಂತರ ಹಣ ಕಟ್ಟಿ ನಿವೇಶನವನ್ನು ನನ್ನ ಹೆಸರಿಗೆ ರಿಜಿಸ್ಟರ್ ಮಾಡಿಸಿಕೊಂಡೆ.

ನಾನು ಕಾರ್ಪೊರೇಷನ್ ಸದಸ್ಯನಾಗಿದ್ದುದು ಎರಡು ಅವಧಿಗೆ. ಮೊದಲನೆ ಸಾರಿ ಆರಿಸಿ ಬಂದದ್ದು ೧೯೫೭ರಲ್ಲಿ. ಹನುಮಂತಯ್ಯನವರ ವಿರುದ್ಧ ಕಾಂಗ್ರೆಸ್ ಶಾಸಕರು ಅವಿಶ್ವಾಸ ನಿರ್ಣಯ ಮಂಡಿಸಿದ್ದ ಸಂದರ್ಭದಲ್ಲಿ ಎಂ.ಪಿ.ಸಿ.ಸಿ. ಅಧ್ಯಕ್ಷರ ವಿರುದ್ಧ ನಾನು ಪ್ರತಿಭಟನೆ ಸಲ್ಲಿಸಿದ್ದುದು ಸರಿಯಷ್ಟೆ. ಅಂದಿನಿಂದ ಅನೇಕ ಕಾರ್ಯಕರ್ತರು ಹಾಗೂ ನಗರದಲ್ಲಿದ್ದ ಕೆಲವು ಹಿರಿಯ ಕಾಂಗ್ರೆಸ್ ಮುಖಂಡರು ನನಗೆ ವಿರುದ್ಧವಾದರು. ನಾನು ಅಧ್ಯಕ್ಷನಾಗಿದ್ದ ಚಾಮರಾಜಪೇಟೆ ಕಾಂಗ್ರೆಸ್ ಸಮಿತಿ ಸದಸ್ಯರಲ್ಲೂ ಇಬ್ಭಾಗವಾಯಿತು. ಕೆಲವು ಸದಸ್ಯರ ಒತ್ತಾಯದ ಮೇಲೆ ಕಾರ್ಪೊರೇಷನ್ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಲು ಬಿ.ಸಿ.ಡಿ.ಸಿ.ಸಿ. ಮೂಲಕ ಪ್ರದೇಶ ಕಾಂಗ್ರೆಸ್ ಸಮಿತಿಗೆ ಅರ್ಜಿ ಸಲ್ಲಿಸಿದೆ. ಬೆಂಗಳೂರು ನಗರ ಕಾಂಗ್ರೆಸ್ ಸಮಿತಿಯವರು ನನಗೆ ಸೀಟು ಕೊಡಬಹುದೆಂದು ಶಿಫಾರ್ಸು ಮಾಡಿದರು. ಇದು ಗೊತ್ತಾಗಿ ಚಾಮರಾಜಪೇಟೆಯಿಂದ ನನಗೆ ವಿರುದ್ಧವಾಗಿದ್ದ ಕೆಲವು ಕಾಂಗ್ರೆಸ್ ಸದಸ್ಯರು ಗುಂಪು ಕಟ್ಟಿಕೊಂಡು ಎಂ.ಪಿ.ಸಿ.ಸಿ. ಅಧ್ಯಕ್ಷರ ಬಳಿ ನಿಯೋಗ ಹೋಗಿ ನನಗೆ ಖಂಡಿತ ಸೀಟು ಕೊಡಕೂಡದೆಂದೂ ಅಕಸ್ಮಾತ್ ಕೊಟ್ಟರೆ ಕಾಂಗ್ರೆಸ್ ಪರವಾಗಿ ತಾವುಗಳು ಯಾರೂ ಕೆಲಸಮಾಡುವುದಿಲ್ಲವೆಂದೂ ಹಠ ಹಿಡಿದರು. ಎಂ.ಪಿ.ಸಿಸಿ. ಮಟ್ಟದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಆಯ್ಕೆಮಾಡಲು ಒಂದು ಅಡ್‌ಹಾಕ್ ಕಮಿಟಿ ರಚನೆ ಆಗಿತ್ತು. ಎಂ.ಪಿ.ಸಿ.ಸಿ. ಅಧ್ಯಕ್ಷರೇ ಆ ಸಮಿತಿಗೆ ಅಧ್ಯಕ್ಷರು. ಟಿ. ಸುಬ್ರಹ್ಮಣ್ಯಂ ಮತ್ತು ಭೀಮಪ್ಪನಾಯಕರು ಸದಸ್ಯರು. ಅರ್ಜಿ ಸಲ್ಲಿಸಿದ್ದ ಎಲ್ಲ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆದಿದ್ದರು. ನನ್ನ ಸರದಿ ಬಂದಾಗ ಸಮಿತಿ ಮುಂದೆ ನಾನೂ ಹೋದೆ. ಕುಳಿತಿದ್ದ ಮೂವರಲ್ಲಿ ಯಾರೊಬ್ಬರು ನೀವು ಯಾರು, ನಿಮ್ಮ ಹೆಸರೇನು ಎಂಬ ಯಾವ ಪ್ರಶ್ನೆಯನ್ನೂ ಕೇಳಲಿಲ್ಲ. ಎರಡು ನಿಮಿಷ ನಿಂತಿದ್ದೆ. ಹೋಗಬಹುದೇ ಎಂದು ಕೇಳಿದೆ. ಹೋಗಬಹುದು ಎಂದು ಟಿ. ಸುಬ್ರಹ್ಮಣ್ಯಂ ಹೇಳಿದರು. ಚನ್ನಯ್ಯನವರಿಗೆ ನನ್ನ ಮೇಲಿನ ಕೋಪ ಇನ್ನೂ ಇಳಿದಿಲ್ಲ ಎಂದುಕೊಂಡು ಅಲ್ಲಿ ನಿಲ್ಲದೆ ಮನೆಗೆ ಬಂದುಬಿಟ್ಟೆ. ಎರಡು ದಿನ ಕಳೆದಮೇಲೆ ಕಾಂಗ್ರೆಸ್ ಅಭ್ಯರ್ಥಿಗಳ ಪಟ್ಟಿ ಪತ್ರಿಕೆಯಲ್ಲಿ ಪ್ರಕಟವಾಯಿತು. ಅದರಲ್ಲಿ ನನ್ನ ಹೆಸರಿತ್ತು. ನನ್ನ ವಿರುದ್ಧ ನಿಯೋಗ ಹೋಗಿದ್ದ ಯಾರ ಮಾತನ್ನು ಜನ ಕೇಳಿರಲಿಲ್ಲ. ಆರ್. ಅನಂತರಾಮನ್‌ರವರು, ಕೆ. ಚನ್ನಪ್ಪನವರು, ಎನ್. ಸುಬ್ಬರಾಯರು, ಗೋವಿಂದಪ್ಪನವರು, ಟಿ. ಎಸ್. ಲಕ್ಷ್ಮೀನಾರಾಯಣರಾಯರು,

ನನ್ನ ಕೆಲವು ಮಿತ್ರರೂ ನಮ್ಮ ಕಡೆಯ ಎಲ್ಲ ಬಂಧುಬಳಗದವರೂ ನನ್ನ ಗೆಲುವಿಗೆ ಬಹುವಾಗಿ ಶ್ರಮಿಸಿದರು. ಅಧಿಕ ಮತ ಗಳಿಸಿ ಆರಿಸಿ ಬಂದೆ. ಈ ಚುನಾವಣೆಯಲ್ಲಿ ನನಗೆ ಸುಮಾರು ೬೦೦ ರೂಪಾಯಿ ಖರ್ಚಾಗಿರಬಹುದು.

ನಾನು ಕಾರ್ಪೊರೇಷನ್ನಿಗೆ ಆರಿಸಿ ಹೋಗಿದ್ದುದು ಚಾಮರಾಜಪೇಟೆ ಪಶ್ಚಿಮ ಭಾಗದಿಂದ. ಈ ಡಿವಿಜನ್ನಿನಲ್ಲಿ ಸ್ವಲ್ಪ ಭಾಗ ಬಿಟ್ಟು ಉಳಿದೆಲ್ಲ ಭಾಗ ತುಂಬ ಹಿಂದುಳಿದ ಪ್ರದೇಶವಾಗಿತ್ತು. ಸರಿಯಾದ ರಸ್ತೆಗಳಾಗಲಿ, ದೀಪಗಳಾಗಲಿ, ನಲ್ಲಿಗಳಾಗಲಿ ಇರಲಿಲ್ಲ. ನಗರದ ಈ ಭಾಗದ ಚರಂಡಿ ನೀರೆಲ್ಲ ತೆರೆದ ದೊಡ್ಡ ಮೋರಿಯ ಮೂಲಕ ಆಜಾದ್ ನಗರದ ಪಕ್ಕದಲ್ಲಿ ಹರಿದು ಹೋಗುತ್ತಿತ್ತು. ಖಾಲಿ ಜಾಗಗಳಲ್ಲಿ ಸಿಕ್ಕಾಪಟ್ಟೆ ಅನಧಿಕೃತ ಮನೆಗಳು ಬಂದಿದ್ದುವು. ಸಾಲದ್ದಕ್ಕೆ ಎರಡು ಭಾರಿ ಸ್ಮಶಾನಗಳು ಈ ಡಿವಿಜನ್ನಿಗೆ ಸೇರಿದ್ದವು. ಒಟ್ಟಿನಲ್ಲಿ ನಾಗರಿಕ ಸೌಲಭ್ಯಗಳು ಡಿವಿಜನ್ನಿನಲ್ಲಿ ಅಷ್ಟಾಗಿರಲಿಲ್ಲ. ತುಂಬ ಹಿಂದುಳಿದ ಡಿವಿಜನ್ ಆಗಿತ್ತು. ಈ ಭಾಗಕ್ಕೆ ಇಬ್ಬರು ಕೌನ್ಸಿಲರು, ಒಬ್ಬ ನಾನು, ಇನ್ನೊಬ್ಬ ಹರಿಜನ ಕೌನ್ಸಿಲರ್. ಇಬ್ಬರೂ ಸೇರಿ ಕೆಲಸ ಮಾಡಬೇಕಾಗಿತ್ತು. ನಾನು ಕೌನ್ಸಿಲರಾಗಿ ಆರಿಸಿ ಬಂದ ಕೂಡಲೆ ಆ ಕಡೆಯವರು ಈ ಕಡೆಯವರು ಆ ಪಕ್ಷದವರು ಈ ಪಕ್ಷದವರು, ಓಟು ಕೊಟ್ಟವರು, ಕೊಡದಿದ್ದವರು ಎಂಬ ಭೇದ ಭಾವನೆ ಮಾಡದೆ ಡಿವಿಜನ್‌ನಲ್ಲಿ ಮುಖ್ಯರಾದವರನ್ನೆಲ್ಲ ಸಭೆ ಸೇರಿಸಿ ಅವರಿಗೆ ಡಿವಿಜನ್ ಪರಿಸ್ಥಿತಿಯನ್ನು ವಿವರಿಸಿ ಹೇಳಿ 'ಎಲ್ಲರೂ ಡಿವಿಜನ್ ಅಭಿವೃದ್ಧಿಗೆ ಒಗ್ಗಟ್ಟಿನಿಂದ ದುಡಿಯಬೇಕು. ಡಿವಿಜನ್ ಕೆಲಸ ಕಾರ್ಯಗಳಲ್ಲಿ ಎಲ್ಲ ಸಹಕಾರವು ಬೇಕು' ಎಂದು ವಿನಂತಿ ಮಾಡಿಕೊಂಡೆ. ವಾರದಲ್ಲಿ ಮೂರುದಿನ ಬಿಟ್ಟು ಉಳಿದ ದಿನಗಳಲ್ಲಿ ಇಂಥ ದಿನ ಇಂಥ ಭಾಗಗಳಿಗೆ ಭೇಟಿ ಕೊಡುತ್ತೇನೆ. ಆಗ ಅಲ್ಲಿಯ ಜನರು ತಮ್ಮ ಕಷ್ಟ ಸುಖ ಹೇಳಿ ಕೊಂಡು ತಮ್ಮ ಕೆಲಸ ಮಾಡಿಸಿಕೊಳ್ಳಬೇಕು ಎಂದು ಗೊತ್ತುಮಾಡಿದೆ. ಅದರಂತೆ ಆಯಾ ದಿನ ಬೆಳಿಗ್ಗೆ ಎದ್ದು ಡಿವಿಜನ್ ಕಡೆ ಹೋಗುತ್ತಿದ್ದೆ. ಸಂಘ ಸಂಸ್ಥೆಗಳ ಪ್ರತಿನಿಧಿಗಳನ್ನು ಭೇಟಿಮಾಡಿ ಅವರ ಸಹಕಾರ ಪಡೆಯುತ್ತಿದ್ದೆ. ಮೂರು ತಿಂಗಳಿಗೊಮ್ಮೆ ತ್ರೈಮಾಸಿಕ ಸಭೆ ಏರ್ಪಡಿಸಿ ಆ ಸಭೆಗೆ ಡಿವಿಜನ್ ಮುಖ್ಯಸ್ಥರನ್ನು ಆ ಭಾಗಕ್ಕೆ ಸೇರಿದ ಕಾರ್ಪೊರೇಷನ್ ಅಧಿಕಾರಿಗಳನ್ನು ಬರಮಾಡಿಕೊಳ್ಳುತ್ತಿದ್ದೆ. ಆ ಸಭೆಗೆ ಯಾರು ಬೇಕಾದರೂ ಬಂದು ಅಧಿಕಾರಿಗಳ ಮುಂದೆ ತಮ್ಮ ಕುಂದು ಕೊರತೆಗಳನ್ನು ಹೇಳಬಹುದಾಗಿತ್ತು. ಬಂದ ಸಲಹೆಗಳನ್ನೆಲ್ಲ ಗುರ್ತು ಮಾಡಿಕೊಂಡು ಆದ್ಯತೆ ಮೇಲೆ ಅಧಿಕಾರಿಗಳು ಅವನ್ನು ಕಾರ್ಯಗತ ಮಾಡುತ್ತಿದ್ದರು. ಜನ ಸಂಪರ್ಕ ಇಟ್ಟುಕೊಳ್ಳಲು ಈ ತ್ರೈಮಾಸಿಕ ಸಭೆ, ಡಿವಿಜನ್‌ಗೆ ಭೇಟಿ ಕೊಡುವುದು ಈ ಕಾರ್ಯಕ್ರಮ ತುಂಬ ಸಹಾಯಕವಾದುವು. ಹಿಂದೆ ಹತ್ತು ವರ್ಷಗಳಲ್ಲಿ ಆಗದಿದ್ದ ಕೆಲಸವನ್ನು ಮೂರೇ ವರ್ಷಗಳಲ್ಲಿ ಮಾಡಿ ತೋರಿಸಿದ್ದಾಯಿತು. ಈ ಕೆಲಸ ಕಾರ್ಯಗಳು ಸಮರ್ಪಕವಾಗಿ ನಡೆಯಲು ಆಗ ಆ ಡಿವಿಜನ್ ಓವರ್‌ಸಿಯರ್ ಆಗಿದ್ದ ಶ್ರೀ ವಿ.ಕೆ. ವೀರಪ್ಪನವರು ತುಂಬ ಶ್ರಮಿಸಿದರು.

ಪುನಃ ಎರಡನೇ ಅವಧಿಗೂ ಚಾಮರಾಜಪೇಟೆ ಪಶ್ಚಿಮ ಭಾಗದಿಂದ ಕಾರ್ಪೊರೇಷನ್‌ಗೆ ನಾನೇ ಆರಿಸಿಬಂದೆ. ಹಿಂದಿನ ಮೂರು ವರ್ಷಗಳಲ್ಲಿ ಯಾವ ಯಾವ ಭಾಗದಲ್ಲಿ ಏನೇನು

ಕೆಲಸ ಮಾಡಿಸಿದ್ದೆ ಎಂಬುದನ್ನು ಒಂದು ಸಣ್ಣ ಪುಸ್ತಿಕೆ ರೂಪದಲ್ಲಿ ಪ್ರಕಟಿಸಿ, ಈ ಕೆಲಸ ಕಾರ್ಯಗಳು ನಿಮಗೆ ತೃಪ್ತಿ ತಂದುಕೊಟ್ಟಿದ್ದರೆ ಎರಡನೇ ಸಾರಿಯೂ ನನಗೆ ನಿಮ್ಮ ಮತ ಕೊಡಿ ಎಂದು ಜನರಿಗೆ ವಿನಂತಿಮಾಡಿಕೊಂಡು ಆ ಪುಸ್ತಿಕೆಗಳನ್ನು ಪ್ರತಿಯೊಂದು ಮನೆಗೂ ಕಳುಹಿಸಿಕೊಟ್ಟೆ. ಚಾಮರಾಜಪೇಟೆ ಜನರು ತುಂಬ ಪ್ರೀತಿ ವಿಶ್ವಾಸದಿಂದ ಎರಡನೇ ಬಾರಿಗೂ ಬಹುಮತದಿಂದ ನನ್ನನ್ನು ಆರಿಸಿದರು.

ನಮ್ಮ ಚಿಕ್ಕಮಾವನವರಾದ ಶ್ರೀ ಲಕ್ಷ್ಮಣಪ್ಪನವರು ಮನೆ ಕಟ್ಟುವುದರಲ್ಲಿ ಒಳ್ಳೆಯ ಅನುಭವಸ್ಥರು. ಒಂದು ದಿನ ಅವರನ್ನು ಕರೆದುಕೊಂಡು ಹೋಗಿ ಜರ್ನಲಿಸ್ಟ್ ಕಾಲೋನಿಯಲ್ಲಿದ್ದ ನನ್ನ ಸೈಟು ತೋರಿಸಿದೆ. ಪಕ್ಕದಲ್ಲಿ ದೊಡ್ಡ ಮೋರಿ, ಅಕ್ಕ ಪಕ್ಕ ಗುಡಿಸಲುಗಳು ಎಲ್ಲೆಲ್ಲೂ ಕೊಳಕು. ಕೆಟ್ಟ ವಾಸನೆ, ಎಲ್ಲೆಲ್ಲೂ ಹಂದಿಗಳ ಕಾಟ. ಅಕ್ಕ ಪಕ್ಕದ ವಾತಾವರಣವು ಚೆನ್ನಾಗಿರಲಿಲ್ಲ. ಅದನ್ನು ನೋಡಿದ ನಮ್ಮ ಮಾವನವರು ಈ ಜಾಗ ವಾಸಕ್ಕೆ ಸರಿಯಾಗಿಲ್ಲ ಇದನ್ನು ಮೊದಲು ಮಾರಿಬಿಟ್ಟು ಬೇರೆ ಎಲ್ಲಿಯಾದರೂ ಸೈಟು ತೆಗೆದುಕೊಳ್ಳಿ. ಅಲ್ಲಿ ಮನೆ ಕಟ್ಟುವಿರಂತೆ ಎಂದು ಸಲಹೆ ಮಾಡಿದರು. ಸರಿ, ಅವರ ಮಾತಿನಂತೆ ಒಬ್ಬ ಗಿರಾಕಿ ಹಿಡಿದು ಆ ನಿವೇಶನ ಮಾರಿ ಬಂದ ಹಣವನ್ನು ನಮ್ಮ ಮಾವನವರ ವಶಕ್ಕೆ ಕೊಟ್ಟೆ.

ಅಷ್ಟು ಹೊತ್ತಿಗೆ ವಿಧಾನ ಸಭಾ ಚುನಾವಣೆ ಸಮೀಪಿಸಿತು. ಚಾಮರಾಜಪೇಟೆ ಅಸೆಂಬ್ಲಿ ಕ್ಷೇತ್ರದಿಂದ ಆರ್. ಅನಂತರಾಮನ್‌ರವರು ಕಾಂಗ್ರೆಸ್ ಪರವಾಗಿಯೂ, ಬಿ.ವಿ. ಲಂಕಪ್ಪನವರು ಸ್ವತಂತ್ರವಾಗಿಯೂ ಸ್ಪರ್ಧಿಸಿದ್ದರು. ನಾನು ಮತ್ತು ನನ್ನ ಸ್ನೇಹಿತರು ಅನಂತರಾಮನ್‌ರವರಿಗೆ ಹಗಲಿರುಳು ದುಡಿದೆವು. ಅನಂತರಾಮನ್ ಗೆದ್ದರು. ಲಂಕಪ್ಪನವರು ಸೋತರು. ಲಂಕಪ್ಪನವರ ಬಗ್ಗೆ ಕಾಂಗ್ರೆಸ್ ಮುಖಂಡರಲ್ಲಿ ಅನೇಕರಿಗೆ ಸಹಾನುಭೂತಿಯಿತ್ತು. ಅವರ ಸೇವೆಯನ್ನು ಬಳಸಿಕೊಳ್ಳಬೇಕೆಂದು ಯೋಚಿಸಿ ಸರ್ಕಾರ ಅವರನ್ನು ಬೆಂಗಳೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಅಧ್ಯಕ್ಷರನ್ನಾಗಿ ನೇಮಕ ಮಾಡಿತು. ಈಗ ನನಗೆ ಬೇಕಾದ ಸೈಟು ಕೊಳ್ಳಲು ನಾನು ಲಂಕಪ್ಪನವರ ಬಳಿಯೇ ಹೋಗಬೇಕಾಗಿತ್ತು. ಚುನಾವಣೆಯಲ್ಲಿ ಅವರ ವಿರುದ್ಧ ಕೆಲಸ ಮಾಡಿದ್ದೇನೆ. ಅದೆಲ್ಲ ಅವರಿಗೆ ಚೆನ್ನಾಗಿ ಗೊತ್ತಿದೆ. ಸೈಟು ಕೇಳಿದರೆ ಏನೆನ್ನುವರೊ ಎಂಬ ಅಂಜಿಕೆಯಿಂದ ಒಂದು ದಿನ ಮಧ್ಯಾಹ್ನ ಟ್ರಸ್ಟ್ ಬೋರ್ಡ್ ಕಚೇರಿಗೆ ಹೋಗಿ ಲಂಕಪ್ಪನವರನ್ನು ಕಂಡೆ. ಕಚೇರಿಯಲ್ಲಿ ಒಬ್ಬರೇ ಕುಳಿತಿದ್ದರು. ನಾನು ಅವರ ಕೊಠಡಿಗೆ ಹೋದ ಕೂಡಲೆ ವಿಶ್ವಾಸದಿಂದ ನನ್ನನ್ನು ಬರಮಾಡಿಕೊಂಡು ಬಂದ ಉದ್ದೇಶವನ್ನು ಕೇಳಿದರು. ವಾಸಕ್ಕೆ ಒಂದು ಮನೆಕಟ್ಟಿಕೊಳ್ಳಲು ಚಾಮರಾಜಪೇಟೆಗೆ ಸಮೀಪದ ಲೇಔಟಿನಲ್ಲಿ ಒಂದು ಸೈಟು ಕೊಡಬೇಕೆಂದು ಕೇಳಿಕೊಂಡೆ. ಅವರು ಸ್ವಲ್ಪ ಹೊತ್ತು ಮೌನತಾಳಿ ಅಸೆಂಬ್ಲಿ ಚುನಾವಣೆಯಲ್ಲಿ ತಾವು ನನ್ನ ವಿರುದ್ಧ ಕೆಲಸ ಮಾಡಿರಲಿಲ್ಲವೆ ? ನನಗೆ ಸೋಲು ಗೆಲುವು ಮುಖ್ಯವಲ್ಲ. ನೀವು ಚುನಾವಣೆಯಲ್ಲಿ ಕೆಲಸಗಾರರನ್ನು ಸಂಘಟಿಸಿ ಮನೆ ಮನೆಗೆ ಹೋಗಿ ಮತದಾರರನ್ನು ಕಂಡು ಸರಿಯಾದ ರೀತಿಯಲ್ಲಿ ಪ್ರಚಾರ ಕಾರ್ಯ ನಡೆಸಿ ಕೆಲಸ ಮಾಡಿದ್ದು ನನ್ನ ಕಣ್ಣ ಮುಂದೆ ಈಗಲೂ ಕಟ್ಟಿದಂತಿದೆ. ನನ್ನ ವಿರುದ್ಧ ತಾವು ಕೆಲಸ ಮಾಡಿದರೂ ಪರವಾಯಿಲ್ಲ. ನಿಮ್ಮಂಥ ಒಳ್ಳೆಯ ಕಾರ್ಯಕರ್ತರು ನಮಗೆ ಬೇಕು. ಆದಷ್ಟು ಸಮೀಪದಲ್ಲಿ

ನಿಮಗೆ ಒಂದು ಸೈಟು ಕೊಡುತ್ತೇನೆ. ಎರಡು ವಾರ ಬಿಟ್ಟು ಪುನಃ ಬನ್ನಿ ಎಂದರು. ಸದ್ಯ ಮಹಾರಾಯ ಕೇಡು ತೀರಿಸಿಕೊಳ್ಳಲಿಲ್ಲವಲ್ಲ ಎಂದು ಸಂತೋಷಪಟ್ಟು ಎರಡು ವಾರ ಬಿಟ್ಟು ಪುನಃ ಅವರ ಕಚೇರಿಗೆ ಹೋದೆ. 'ಓಹೋ ! ನೀವು ಸೈಟು ಕೇಳಿದ್ದಿರಲ್ಲವೆ ? ಕುಳಿತುಕೊಳ್ಳಿ' ಎಂದು ಹೇಳಿ ಗಂಟೆ ಬಾರಿಸಿ ಸಂಬಂಧಪಟ್ಟ ಗುಮಾಸ್ತೆ ಕರೆಸಿ ಸುಂಕೇನಹಳ್ಳಿ ಲೇಔಟ್ ಫೈಲ್ ತರಿಸಿಕೊಂಡು ಖಾಲಿ ಇದ್ದ ಸೈಟುಗಳನ್ನು ಗುರುತಿಸಿ 'ಎರಡೂ ಕಡೆ ರಸ್ತೆ ಬರುವಂಥ 80x50 ಅಡಿ ಕಾರ್ನರ್ ಸೈಟು ಕೊಡುತ್ತೇನೆ. ಎಲ್ಲಿ ಒಂದು ಅರ್ಜಿ ಕೊಡಿ' ಎಂದು ಹೇಳಿ ಅರ್ಜಿ ಫಾರಂ ತರುವಂತೆ ಆ ಗುಮಾಸ್ತನಿಗೆ ತಿಳಿಸಿದರು. ಅರ್ಜಿ ಫಾರಂಗೆ ಕೊಡಬೇಕಾದ ಒಂದು ರೂಪಾಯಿಯನ್ನೂ ಅವರೇ ಕೊಟ್ಟರು. ಸೈಟು ಬೆಲೆ ೪ ಸಾವಿರ ರೂಪಾಯಿ. ಎರಡು ವಾರದಲ್ಲಿ ಕಾಲು ಭಾಗ ಮುಂಗಡ ಕಟ್ಟಿ ಉಳಿದ ಹಣವನ್ನು ಆದಷ್ಟು ಜಾಗ್ರತೆ ಪಾವತಿ ಮಾಡುವಂತೆ ಹೇಳಿದರು. ಜರ್ನಲಿಸ್ಟ್ ಕಾಲೋನಿ ಸೈಟ್ ಮಾರಿ ನಮ್ಮ ಮಾವನವರ ಕೈಲಿ ಕೊಟ್ಟಿದ್ದ ಹಣವನ್ನು ಈ ಸೈಟಿಗೆ ಮುಂಗಡ ಕಟ್ಟಿ ಉಳಿಕೆ ಹಣವನ್ನು ಆಮೇಲೆ ಕೊಡುವುದಾಗಿ ಹೇಳಿದೆ. ಟ್ರಸ್ಟ್ ಬೋರ್ಡಿನಿಂದ ೨-೩ ನೋಟೀಸು ಬಂದರೂ ಹಣ ಕಟ್ಟಲು ನನ್ನ ಬಳಿ ಹಣವಿರಲಿಲ್ಲ. ನಾನು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಜೈಲಿಗೆ ಹೋಗಿದ್ದ ವಿಷಯ ಟ್ರಸ್ಟ್ ಬೋರ್ಡ್ ಸದಸ್ಯರಲ್ಲಿ ಕೆಲವರಿಗೆ ಗೊತ್ತಿತ್ತು. ರಾಜಕೀಯ ಸಂತ್ರಸ್ಥ ಎಂಬ ಕಾರಣ ಕೊಟ್ಟು ಅರ್ಜಿ ಸಲ್ಲಿಸಿದರೆ ಸೈಟು ಬೆಲೆಯನ್ನು ಅರ್ಧದಷ್ಟು ಮಾಫಿ ಮಾಡುವುದಾಗಿ ಲಂಕಪ್ಪನವರು ಹೇಳಿಕಳುಹಿಸಿದರು. ಅದಕ್ಕೆ ನಾನು ಒಪ್ಪಲಿಲ್ಲ. 'ಸ್ವಾತಂತ್ರ್ಯಕ್ಕಾಗಿ ಅಂಥ ಹೋರಾಟವನ್ನೇನೂ ನಾನು ಮಾಡಿಲ್ಲ, ಮಾಡಿದ್ದರು ಮುಂದೆ ಇಂಥ ಲಾಭ ಪಡೆಯುತ್ತೇನೆಂಬ ಉದ್ದೇಶದಿಂದ ಮಾಡಿಲ್ಲ, ಆದ್ದರಿಂದ ಅರ್ಧ ಬೆಲೆಗೆ ಸೈಟು ಪಡೆಯಲು ನನಗೆ ಇಷ್ಟವಿಲ್ಲ. ಅದರ ಬದಲು ಉಳಿದ ಹಣ ಕಟ್ಟಲು ಇನ್ನಷ್ಟು ಕಾಲಾವಕಾಶ ನೀಡಬೇಕೆಂದು ಕೇಳಿಕೊಂಡೆ. ಅವರು ಅದಕ್ಕೆ ಒಪ್ಪಿದರು. ಕೆಲವು ತಿಂಗಳಾದ ಮೇಲೆ ಪೂರ್ತ ಹಣ ಕಟ್ಟಿ ಸೈಟ್ ರಿಜಿಸ್ಟರ್ ಮಾಡಿಕೊಂಡೆ.

ಸೈಟು ಕೊಳ್ಳುವುದಕ್ಕೆ ಹಣವಿಲ್ಲ. ಇನ್ನು ಮನೆ ಕಟ್ಟುವುದಕ್ಕೆ ಹಣ ಎಲ್ಲಿಂದ ಬರಬೇಕು. ಸ್ನೇಹಿತರ ಸಲಹೆಯಂತೆ ಬೆಂಗಳೂರು ಸಿಟಿ ಬ್ಯಾಂಕಿಗೆ ಮನೆ ಕಟ್ಟಲು ಸಾಲಕ್ಕಾಗಿ ಅರ್ಜಿ ಸಲ್ಲಿಸಲು ಹೋದೆ. ಆ ದಿನ ನನ್ನ ಜತೆಯಲ್ಲಿ ಶ್ರೀ ವಿ.ಎಸ್. ಕೃಷ್ಣಯ್ಯರ್ ಅವರೂ, ಶ್ರೀ ಪಿ. ವೀರಪ್ಪನವರೂ ಬಂದಿದ್ದರು. ಬ್ಯಾಂಕ್ ಅಧಿಕಾರಿ ಶ್ರೀ ನರಹರಿಚಾರ್ ಎಂಬುವರು ಅರ್ಜಿ ಫಾರಂ ತಂದುಕೊಟ್ಟು ಅದನ್ನು ಭರ್ತಿ ಮಾಡುವಂತೆ ಹೇಳಿದರು. ಅಲ್ಲೆ ಕುಳಿತುಕೊಂಡು ಅರ್ಜಿಯ ಕೆಲವು ಕಾಲಂಗಳನ್ನು ಭರ್ತಿಮಾಡಿದೆ. ಒಂದು ಕಾಲಂನಲ್ಲಿ ನಿಮಗೆ ಎಷ್ಟು ಜನ ಮಕ್ಕಳು,, ಅವರ ಹೆಸರೇನು, ವಯಸ್ಸೆಷ್ಟು ಎಂದು ಕೇಳಲಾಗಿತ್ತು. ನನ್ನ ನಾಲ್ಕು ಜನ ಮಕ್ಕಳಲ್ಲಿ ಮೂವರ ಹೆಸರು ಬರೆದೆ. ಎರಡನೇ ಮಗನ ಹೆಸರು ಎಷ್ಟು ಜ್ಞಾಪಿಸಿಕೊಂಡರೂ ಮರೆತೇಹೋಯಿತು. ಕೃಷ್ಣಯ್ಯರ್ ಆ ಅಧಿಕಾರಿಯ ಎದುರಿನಲ್ಲೇ ಪರವಾಯಿಲ್ಲ ಜ್ಞಾಪಿಸಿಕೊಳ್ಳಿ, ಇನ್ನೂ ಹತ್ತು ನಿಮಿಷವಾದರೂ ಚಿಂತೆಯಿಲ್ಲ ಎಂದು ಸಮಾಧಾನ ಹೇಳಿದರು. ಹತ್ತಲ್ಲ ಹದಿನೈದು ನಿಮಿಷವಾದರೂ ಜ್ಞಾಪಕಕ್ಕೆ ಬರಲೇ ಇಲ್ಲ. ನಾಳೆ ಹೆಸರು ತಂದುಕೊಡುತ್ತೇನೆ

ಎಂದು ಹೇಳಿ ಹೊರಟು ಬಂದೆ. ಮಾರನೆಯ ದಿನ ನನ್ನ ಎರಡನೆಯ ಮಗನ ಹೆಸರು ಎನ್. ಜಗದೀಶ್ ಎಂದು ಬರೆದುಕೊಟ್ಟು ಬಂದೆ. ಈ ವಿಷಯ ಕೇಳಿ ಬ್ಯಾಂಕಿನ ನೌಕರರೆಲ್ಲ ಗೊಳ್ ಎಂದು ನಕ್ಕುಬಿಟ್ಟರು. ಅವರಲ್ಲಿ ಒಬ್ಬ 'ಏನು ಸ್ವಾಮಿ ಮಗನ ಹೆಸರೇ ಜ್ಞಾಪಕವಿಲ್ಲ ಇನ್ನು ಬ್ಯಾಂಕಿನ ಸಾಲ ನಿಮಗೆ ಜ್ಞಾಪಕವಿರುತ್ತದೆಯೇ' ಎಂದು ಕೇಳಿಯೇಬಿಟ್ಟ. ತಲೆ ಎತ್ತದೆ ಹಾಗೇ ಬಂದುಬಿಟ್ಟೆ. ಬ್ಯಾಂಕಿನ ಹಣದ ಜತೆಗೆ ಶ್ರೀ ಕೆ. ಎಂ. ನಂಜಪ್ಪನವರಿಂದ ಎಂಟು ಸಾವಿರ ರೂಪಾಯಿ ಸಾಲ ಪಡೆದೆ. ಸುಮಾರು ನಾಲ್ಕುಸಾವಿರ ರೂಪಾಯಿ ಬೆಲೆ ಬಾಳುವ ಇಟ್ಟಿಗೆ ಕಲ್ಲು ಮುಂತಾದ ಸಾಮಾನುಗಳನ್ನು ನಮ್ಮ ಚಿಕ್ಕಮಾವನವರು ಕೊಟ್ಟರು. ಒಟ್ಟು ೧೩ ಚದರದ ಮನೆಗೆ ೧೯೬೨ರಲ್ಲಿ ೨೧ ಸಾವಿರ ರೂಪಾಯಿ ತಗುಲಿತು. ಕಂಟ್ರಾಕ್ಟರ್ ನಾರಾಯಣಸ್ವಾಮಿ ಮುತುವರ್ಜಿ ವಹಿಸಿ ಮನೆ ಕಟ್ಟಿಕೊಟ್ಟರು. ಮನೆ ಕಟ್ಟಿ ಇಷ್ಟು ವರ್ಷವಾದರೂ ಈವರೆಗೆ ಯಾವ ರಿಪೇರಿಯ ಅಗತ್ಯವು ಕಂಡಿಲ್ಲ. ಕಂತಿನ ಪ್ರಕಾರ ಬ್ಯಾಂಕಿನ ಸಾಲ ತೀರಿಸಿದೆ. ನಂಜಪ್ಪನವರ ಎಂಟುಸಾವಿರ ರೂಪಾಯಿ ಸಾಲವನ್ನು ಕೆಲವು ತಿಂಗಳು ನೂರು ನೂರೈವತ್ತರಂತೆ ಕೊಟ್ಟೆ. ಉಳಿದ ಮೊಬಲಗನ್ನು ಈಚೆಗೆ ತೀರಿಸಿದೆ. ಎಂಟು ಸಾವಿರ ಹಣಕ್ಕೆ ಬಡ್ಡಿ ಕೊಟ್ಟಿದ್ದರೆ ಅಸಲಿನ ಎರಡರಷ್ಟೇ ಆಗುತ್ತಿತ್ತು. ನಂಜಪ್ಪನವರು ದೊಡ್ಡ ಮನುಷ್ಯರು. ಒಂದು ಪೈಸೆ ಬಡ್ಡಿಯನ್ನು ತೆಗೆದುಕೊಳ್ಳದೆ ನಾನು ಕೊಟ್ಟು ಕೊಟ್ಟಂತೆ ಅಸಲು ತೆಗೆದುಕೊಂಡು ನನ್ನನ್ನು ಋಣಮುಕ್ತನನ್ನಾಗಿ ಮಾಡಿದರು.

ನಾನು ಕಾರ್ಪೊರೇಷನ್ ಕೌನ್ಸಿಲರ್ ಆದ ಕೆಲವು ತಿಂಗಳಲ್ಲೆ ಕೆಲವು ಯುವ ಕಲಾವಿದರ ಒತ್ತಾಯದ ಮೇಲೆ ರಶಿಕಲಾವಿದರು ಸಂಸ್ಥೆಯ ಅಧ್ಯಕ್ಷನಾದೆ. ಇಂದಿಗೂ ಆ ಸಂಸ್ಥೆಗೆ ನಾನೇ ಅಧ್ಯಕ್ಷ. ಹೆಸರಿಗೆ ಅಧ್ಯಕ್ಷನಾದರೂ ಸಂಸ್ಥೆಯ ಕೆಲಸ ಕಾರ್ಯ ನಡೆಸುವವರು ಮಾತ್ರ ಕಲಾವಿದರಾದ ಶ್ರೀ ಜಿ.ಕೆ. ಗುಂಡೂರಾವ್, ಶ್ರೀ ಆರ್. ಹೆಚ್. ರಾಜು, ಶ್ರೀ ರಾಜಶೇಖರಯ್ಯ ಮುಂತಾದವರು. ರಶಿಕಲಾವಿದರ ಸಂಸ್ಥೆ ತುಂಬ ಒಳ್ಳೆ ಕೆಲಸ ಮಾಡುತ್ತಿದೆ. ಪ್ರತಿ ವರ್ಷ ರಾಜ್ಯಮಟ್ಟದಲ್ಲಿ ಅಖಿಲ ಕರ್ನಾಟಕ ನಾಟಕ ಸ್ಪರ್ಧೆ ಏರ್ಪಡಿಸುತ್ತಿದೆ. ವಿಚಾರ ಸಂಕಿರಣಗಳನ್ನು ನಡೆಸುತ್ತಿದೆ. ಪ್ರತಿ ವರ್ಷ ಹಿರಿಯ ಕಲಾವಿದರನ್ನು ಆಹ್ವಾನಿಸಿ ಅವರನ್ನು ಗೌರವಿಸುತ್ತಿದೆ. ಇಂದು ಕರ್ನಾಟಕದ ಪ್ರಮುಖ ಕಲಾ ಸಂಸ್ಥೆಗಳಲ್ಲಿ 'ರಶಿಕಲಾವಿದರು' ಸಂಸ್ಥೆ ಹಿರಿಯ ಸ್ಥಾನ ಪಡೆದಿದೆ.

ಕಾರ್ಪೊರೇಟರ್ ಆದ ೨-೩ ವರ್ಷಗಳಲ್ಲೇ ಇನ್ನೊಂದು ಸಂಸ್ಥೆ ನನಗೆ ಗಂಟುಬಿತ್ತು. ಆರ್. ಅನಂತರಾಮನ್‌ರವರು ಮೈಸೂರು ಹಿಂದಿ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದರು. 'ಅಲ್ಲಿಯ ವ್ಯವಹಾರ ಹದಗೆಟ್ಟು ಹೋಗಿದೆ. ಇರುವ ಕಾರ್ಯದರ್ಶಿಗಳನ್ನು ತೆಗೆದು ಬೇರೆ ಕಾರ್ಯದರ್ಶಿಗಳನ್ನು ಗೊತ್ತುಮಾಡಬೇಕೆಂದು ಪರಿಷತ್ತಿನ ಕಾರ್ಯಕಾರಿ ಸಮಿತಿಯಲ್ಲಿ ನಿರ್ಣಯ ಮಾಡಿದ್ದೇವೆ. ನೀವು ಅದರ ಕಾರ್ಯದರ್ಶಿಯಾಗಬೇಕೆಂ'ದು ಹಠ ಹಿಡಿದರು. ನನಗೆ ಹಿಂದಿ ಬಾರದು. ಅದು ಹಿಂದಿ ಸಂಸ್ಥೆ. ಅಲ್ಲದೆ ಅಲ್ಲಿಯ ವ್ಯವಹಾರಗಳೇ ಬೇರೆ. ಈಗಾಗಲೆ ನನಗೆ ಸಾಕಷ್ಟು ಕೆಲಸವಿದೆ. ನಾನು ಖಂಡಿತ ಕಾರ್ಯದರ್ಶಿಯಾಗುವುದಿಲ್ಲ ಎಂದು ಎಷ್ಟೋ ಪಟ್ಟು ಹಿಡಿದರು ಅನಂತರಾಮನ್‌ರವರು ಬಿಡಲಿಲ್ಲ. ವಿಧಿಯಿಲ್ಲದೆ ಅವರ

ಬಿತ್ತಾಯಕ್ಕೆ ಮಣಿಯಬೇಕಾಯಿತು. ಅವರು ಹೇಳಿದಂತೆ ಅಲ್ಲಿಯ ವ್ಯವಹಾರಗಳು ಸಾಕಷ್ಟು ಕೆಟ್ಟಿತ್ತು. ಸರ್ಕಾರದವರಿಗೂ ಏನು ಮಾಡಬೇಕೆಂಬುದು ಸಮಸ್ಯೆಯಾಗಿತ್ತು. ನಾನು ಕಾರ್ಯದರ್ಶಿಯಾಗಿ ಬಂದಿದ್ದ ತಡ ಅಲ್ಲಿದ್ದ ಹಿಂದಿ ಪಂಡಿತರು, ಶಿಕ್ಷಕರು, ಹಿಂದಿನ ಕಾರ್ಯದರ್ಶಿಗಳು ನನ್ನ ಮೇಲೆ ತಿರುಗಿ ಬಿದ್ದರು. ಕೆಲವು ಪತ್ರಿಕೆಗಳಲ್ಲಿ ನನ್ನ ವಿರುದ್ಧ ಬರೆಯಲು ಪ್ರಯತ್ನಿಸಿದರು. ಒಂದು ದಿನ ಕಚೇರಿ ಕೆಲಸ ಮುಗಿದ ಮೇಲೆ ಬಾಗಿಲಿಗೆ ಬೀಗ ಹಾಕಿಕೊಂಡು ಹೋಗಿದ್ದಾಗ ಈ ಹಿಂದಿ ಮಿತ್ರರು ನಾವು ಹಾಕಿದ್ದ ಬೀಗದ ಮೇಲೆ ಇನ್ನೊಂದು ಬೀಗ ಹಾಕಿಕೊಂಡು ಬಾಗಿಲು ತೆಗೆಯದಂತೆ ಮಾಡಿದರು. ಇದನ್ನು ನೋಡಿ ಇವರಿಗೆ ಸರಿಯಾದ ಬುದ್ಧಿ ಕಲಿಸಬೇಕೆಂದು ಯೋಚಿಸಿ ಪೊಲೀಸರಿಗೆ ದೂರು ಕೊಟ್ಟು ಮಾರನೆಯ ದಿನ ಬೆಳಗ್ಗೆ ಅವರು ಹಾಕಿದ್ದ ಬೀಗ ಒಡೆದು ಬಾಗಿಲು ತೆಗೆದು ಕಛೇರಿ ವೇಳೆಯಲ್ಲಿ ಬಂದು ಯಾರೂ ಗಲಾಟೆ ಮಾಡದಂತೆ ಒಬ್ಬ ಘೂರ್ಕನನ್ನು ಕಾವಲಿಗಿಟ್ಟೆ. ತರುವಾಯ ಆ ಗಲಾಟೆಕೋರರಾರೂ ಹತ್ತಿರಕ್ಕೆ ಬರಲಿಲ್ಲ. ಅವರಲ್ಲೆ ಕೆಲವರು ತಮ್ಮ ತಪ್ಪಿಗೆ ವಿಷಾದ ಆರಂಭಿಸಿದರು. ಅಂಥವರ ಸಹಾಯ ಪಡೆದು ಕಾಲ ಕಾಲಕ್ಕೆ ಹಿಂದಿ ತರಗತಿಗಳನ್ನು ನಡೆಸುವುದು, ಸಕಾಲದಲ್ಲಿ ಪರೀಕ್ಷೆ ನಡೆಸುವುದು, ಇತ್ಯಾದಿ ಪರಿಷತ್ತಿನ ಕಾರ್ಯಗಳು ವ್ಯವಸ್ಥಿತವಾಗಿ ನಡೆಯುವಂತೆ ಮಾಡಿ ಮೊದಲೇ ಒಪ್ಪಿಕೊಂಡಿದ್ದಂತೆ ಒಂದು ವರ್ಷಕಾಲ ಮೈಸೂರು ಹಿಂದಿ ಪರಿಷತ್ತಿನ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿ ಅನಂತರ ಅಲ್ಲಿಂದ ದೂರವಾದೆ.

ನಾನು ಕಾರ್ಪೊರೇಷನ್ನಿಗೆ ಹೋದ ಮೊದಲನೆಯ ವರ್ಷ ಆರೋಗ್ಯ ಸಮಿತಿ ಸದಸ್ಯನಾಗಿದ್ದೆ. ತರುವಾಯ ಒಂದೇ ಸಮನೆ ನಾಲ್ಕು ವರ್ಷ ಕಾಮಗಾರಿ ಸಮಿತಿ (ವರ್ಕ್ಸ್ ಕಮಿಟಿ) ಅಧ್ಯಕ್ಷನಾಗಿದ್ದೆ. ಮರುವರ್ಷ ಕಾರ್ಪೊರೇಷನ್ ಕಾಂಗ್ರೆಸ್ ಪಕ್ಷದ ನಾಯಕ. ಕೊನೆಯ ವರ್ಷ ೧೯೬೪ರಲ್ಲಿ ಬೆಂಗಳೂರು ನಗರದ ಮೇಯರ್ ಆಗಿ ಕೆಲಸ ಮಾಡಿದೆ. ಆರೋಗ್ಯ ಸಮಿತಿಯಲ್ಲಿ ನನ್ನ ಪಾತ್ರವೇನೂ ಇರಲಿಲ್ಲ. ನಾಲ್ಕು ವರ್ಷ ಕಾಮಗಾರಿ ಸಮಿತಿ ಅಧ್ಯಕ್ಷನಾಗಿದ್ದಾಗ ಅನೇಕ ಯೋಜನೆಗಳನ್ನು ತಯಾರಿಸಿ ಕಾರ್ಯರೂಪಕ್ಕೆ ತಂದೆ. ಮುಖ್ಯವಾದ ಕೆಲವನ್ನು ಹೇಳಬಹು ದಾದರೆ ಬೆಂಗಳೂರು ನಗರದ ಎಷ್ಟೋ ರಸ್ತೆಗಳಿವೆ, ಯಾವ ಯಾವ ರಸ್ತೆಗಳು ಎಷ್ಟು ಅಗಲ ಇವೆ, ಒಟ್ಟು ರಸ್ತೆಗಳ ಉದ್ದವೆಷ್ಟು, ಅದರಲ್ಲಿ ಟಾರ್ ರಸ್ತೆ ಎಷ್ಟು, ಸಿಮೆಂಟ್ ರಸ್ತೆ ಎಷ್ಟು, ಮಣ್ಣಿನ ರಸ್ತೆ ಎಷ್ಟು ಎಂಬುದನ್ನು ಸರ್ವೆ ಮಾಡಿಸಿದೆ. ಸರಿಯಾಗಿ ರಸ್ತೆ ರಿಪೇರಿ ಕೆಲಸ ಮಾಡದೆ ಹಣ ಪೋಲಾಗುವುದನ್ನು ಕೌನ್ಸಿಲರ್ ಮತ್ತು ಅಧಿಕಾರಿಗಳ ಗಮನಕ್ಕೆ ತಂದೆ. ಪ್ರಮುಖ ರಸ್ತೆಗಳು ಸೇರಿದಂತೆ ೧೧೦ ಮೈಲಿ ರಸ್ತೆಗೆ ಷೆಲ್‌ಕ್ರೀಟ್ ಮಾಡಲು 'ಉತ್ತಮ ರಸ್ತೆ ಯೋಜನೆ' (ಬೆಟರ್ ರೋಡ್ ಸ್ಕೀಮ್) ತಯಾರಿಸಿ ಕಾರ್ಪೊರೇಷನ್ ಒಪ್ಪಿಗೆ ಪಡೆದೆ. ಈ ಕಾರ್ಯ ತಡವಾಗಿ ಆರಂಭವಾಯಿತು. ಪ್ರತಿ ವರ್ಷ ಪ್ರತಿಯೊಂದು ಡಿವಿಜನ್ನಿನ ರಸ್ತೆ ರಿಪೇರಿ, ಚರಂಡಿ ಕಾರ್ಯ, ಹೊಸ ರಸ್ತೆಗಳ ನಿರ್ಮಾಣಕ್ಕಾಗಿ ಸಿಕ್ಕಾಪಟ್ಟೆ ಹಣ ಖರ್ಚು ಮಾಡುತ್ತಿದ್ದರು, ಅದಕ್ಕೊಂದು ವ್ಯವಸ್ಥಿತವಾದ ಯೋಜನೆ ಇರಲಿಲ್ಲ. ನಾನು ಅದನ್ನು ತಪ್ಪಿಸಿ ವರ್ಷದ ಆರಂಭದಲ್ಲಿ ಪ್ರತಿಯೊಂದು ಡಿವಿಜನ್ನಿನ ಕೌನ್ಸಿಲರ್ ಮತ್ತು ಓವರ್‌ಸೀಯರ್‌ಗೆ

ಪತ್ರ ಬರೆದು ತಮ್ಮ ತಮ್ಮ ಡಿವಿಜನ್‌ನಲ್ಲಿ ಕಳೆದ ವರ್ಷ ಯಾವ ಕೆಲಸವಾಗಿದೆ, ಈ ವರ್ಷ ಯಾವ ಕೆಲಸವಾಗಬೇಕು, ಅದಕ್ಕೆ ಅಂದಾಜು ಎಷ್ಟು ಹಣ ಬೇಕು ಎಂಬುದನ್ನು ಎರಡು ವಾರದೊಳಗೆ ತಿಳಿಸಬೇಕೆಂದು ಸೂಚನೆ ಕೊಡುತ್ತಿದ್ದೆ. ಓವರ್‌ಸಿಯರ್‌ಗಳ ಸಭೆ ಕರೆದು ಎಂಥ ಕೆಲಸಗಳಿಗೆ ಆದ್ಯತೆ ನೀಡಬೇಕೆಂದು ವಿವರಿಸುತ್ತಿದ್ದೆ. ಎರಡು ವಾರದೊಳಗೆ ಆಯಾ ಕೌನ್ಸಿಲರ್ ಮತ್ತು ಓವರ್‌ಸೀಯರಿಂದ ಆ ಡಿವಿಜನ್ನಿನಲ್ಲಿ ಆಗಬೇಕಾದ ಕೆಲಸ ಕಾರ್ಯಗಳ ಪಟ್ಟಿ ಸಿದ್ಧವಾಗಿ ಬರುತ್ತಿತ್ತು. ಈ ಪಟ್ಟಿಗಳನ್ನು ಇಟ್ಟುಕೊಂಡು ವರ್ಕ್ಸ್ ಸಮಿತಿ ಸದಸ್ಯರೂ, ಆಯಾ ಡಿವಿಜನ್ನಿನ ಕೌನ್ಸಿಲರು ಮತ್ತು ಆಯಾ ಡಿವಿಜನ್ನಿನ ಓವರ್‌ಸೀಯರ್ ಅವರುಗಳನ್ನು ವ್ಯಾನಿನಲ್ಲಿ ಕೂರಿಸಿಕೊಂಡು ಅವರು ಕೊಟ್ಟ ಪಟ್ಟಿಯಲ್ಲಿರುವ ಕೆಲಸ ಕಾರ್ಯಗಳು ಅಗತ್ಯವೆ, ಯಾವ ಕೆಲಸಗಳಿಗೆ ಈ ವರ್ಷ ಆದ್ಯತೆ ನೀಡಬೇಕು, ಕಳೆದ ವರ್ಷ ಮಾಡಿರುವ ಕೆಲಸಗಳು ಸರಿಯಾಗಿ ಆಗಿವೆಯೋ ಇಲ್ಲವೆ ಎಂಬುದನ್ನು ಪರಿಶೀಲಿಸುತ್ತಿದ್ದೆ. ಈ ರೀತಿ ಒಂದು ದಿನದಲ್ಲಿ ೬–೭ ಡಿವಿಜನ್‌ಗಳಂತೆ ಸುತ್ತಿ ಆ ವರ್ಷ ಆಗಲೇಬೇಕಾದ ಕೆಲಸಗಳನ್ನು ಗುರ್ತು ಮಾಡಿಕೊಳ್ಳುತ್ತಿದ್ದೆವು. ಎಲ್ಲ ಡಿವಿಜನ್‌ಗಳನ್ನು ಸುತ್ತಿ ಪರಿಶೀಲಿಸಿದ ಮೇಲೆ ವರ್ಕ್ಸ್ ಕಮಿಟಿ ಮೂರು ನಾಲ್ಕು ದಿನ ಸಭೆ ಸೇರಿ, ಆ ಸಭೆಗೆ ಸಂಬಂಧಪಟ್ಟ ವಿಭಾಗದ ಅಧಿಕಾರಿಗಳನ್ನು ಬರಮಾಡಿಕೊಂಡು ಯಾವ ಯಾವ ಡಿವಿಜನ್ನಿನಲ್ಲಿ ಆ ವರ್ಷ ಯಾವ ಯಾವ ಕೆಲಸಗಳಾಗಬೇಕು, ಅದಕ್ಕೆ ಅಂದಾಜು ಎಷ್ಟು ಹಣ ಬೇಕು ಎಂಬುದನ್ನು ಚರ್ಚಿಸಿ ಅಂತಿಮವಾಗಿ ಎಲ್ಲ ಡಿವಿಜನ್ ಕೆಲಸ ಕಾರ್ಯಗಳ ಒಂದು ಪಟ್ಟಿಯನ್ನು ತಯಾರಿಸಿ, ಅದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿ ಅದರ ಒಂದು ಪ್ರತಿಯನ್ನು ಆಯಾ ಡಿವಿಜನ್ ಕೌನ್ಸಿಲರಿಗೂ ಇನ್ನೊಂದು ಪ್ರತಿಯನ್ನು ಆಯಾ ಡಿವಿಜನ್ ಓವರ್‌ಸೀಯರ್‌ಗೂ ಕೊಡುತ್ತಿದ್ದೆವು. ಈ ಕ್ರಮವನ್ನು 'ಪ್ರೋಗ್ರಾಂ ಆಫ್ ವರ್ಕ್ಸ್' ಎಂದು ಕರೆಯಲಾಯಿತು. ಈ ಪ್ರೋಗ್ರಾಂ ಆಫ್ ವರ್ಕ್ಸ್ ಪ್ರತಿಯನ್ನು ಸಾರ್ವಜನಿಕರು ಯಾವಾಗ ಬೇಕಾದರು ಪಡೆದು ಇಡೀ ಬೆಂಗಳೂರು ನಗರದಲ್ಲಿ ಎಲ್ಲಿ ಯಾವ ಕೆಲಸ ನಡೆಯುತ್ತಿದೆ ಎಂಬುದನ್ನು ನೋಡಿ ಅದರ ಮೇಲೆ ತಮ್ಮ ಸಲಹೆ ಅಥವಾ ಟೀಕೆ ಮಾಡಬಹುದಾಗಿತ್ತು. ಈ 'ಪ್ರೋಗ್ರಾಂ ಆಫ್ ವರ್ಕ್ಸ್' ವಿಧಾನದಿಂದ ಕಾರ್ಪೊರೇಷನ್ ಕಾಮಗಾರಿ ಕೆಲಸ ಕಾರ್ಯಗಳು ಒಂದು ಯೋಜನೆ ಸ್ವರೂಪವನ್ನು ಪಡೆದು ನಡೆಯುವಂತಾದುವು. ಈ ಕ್ರಮವನ್ನು ಅನೇಕ ಕಾರ್ಪೊರೇಷನ್‌ಗಳು ಮೆಚ್ಚಿದವು. ಲಕ್ನೋ ಮುನಿಸಿಪಲ್ ಬುಲೆಟಿನ್‌ನಲ್ಲಿ ಈ ವಿಷಯ ಪ್ರಸ್ತಾಪವಾಯಿತೆಂದು ಕೇಳಲ್ಪಟ್ಟೆ. ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯವರು ಕರೆದಿದ್ದ ಸಂಘ ಸಂಸ್ಥೆಗಳ ಸಭೆಯಲ್ಲಿ ಡಿ.ವಿ. ಗುಂಡಪ್ಪನವರು ಇದಕ್ಕಿಂತ ಉತ್ತಮವಾದ ಬೇರೆ ರೀತಿಯ ಕಾರ್ಯಕ್ರಮ ಕಂಡುಹಿಡಿಯಲು ಸಾಧ್ಯವಿಲ್ಲ ಎಂದು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಬೆಂಗಳೂರು ನಗರಕ್ಕೆ ಬೇಕಾದ ನೀರು ಸರಬರಾಜು ವಿಷಯದಲ್ಲಿ ಹಕ್ಕಿಮಾಲಾ ಯೋಜನೆ ಪ್ರಾಮುಖ್ಯತೆ ಪಡೆದಿತ್ತು. ಅದು ಕೂಡದು, ಕಾವೇರಿ ನೀರನ್ನೇ ಬೆಂಗಳೂರಿಗೆ ತರಬೇಕು. ಕಾವೇರಿ ಯೋಜನೆಯೇ ಆಗಬೇಕು ಎಂದು ಕಾರ್ಪೊರೇಷನ್ ಸಭೆಗಳಲ್ಲಿ, ಸತ್ಕಾರ ಕೂಟಗಳಲ್ಲಿ, ಬಹಿರಂಗ ಸಭೆಗಳಲ್ಲಿ, ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಎಲ್ಲೆಂದರಲ್ಲಿ

ಸಾರಿ ಹೇಳಿ ಸರ್ಕಾರ ಮತ್ತು ಸಾರ್ವಜನಿಕ ಗಮನವನ್ನು ಕಾವೇರಿ ಯೋಜನೆ ಕಡೆ ಸೆಳೆಯಲಾಯಿತು. ಶ್ರೀ ವಿ.ಎಸ್. ಕೃಷ್ಣಯ್ಯರ್ ಮತ್ತು ಶ್ರೀ ಟಿ.ಆರ್. ಶಾಮಣ್ಣನವರು ಈ ವಿಷಯದಲ್ಲಿ ತುಂಬ ಶ್ರಮ ವಹಿಸಿದರು. ಒಂದು ದಿನ ಕೆ. ಹನುಮಂತಯ್ಯನವರು ಕಾರ್ಪೊರೇಷನ್ ಸಭೆಗೆ ಬಂದಿದ್ದು ಕಾವೇರಿ ಯೋಜನೆ ಪರವಾದ ನನ್ನ ಹೇಳಿಕೆಯನ್ನು ಗಮನವಿಟ್ಟು ಕೇಳಿದರು. ಕಡೆಗೆ ಕಾವೇರಿ ಯೋಜನೆ ಪ್ರಥಮ ಹಂತದ ಶಂಕುಸ್ಥಾಪನೆ ಕಾರ್ಯವನ್ನು ನಾನು ಮೇಯರ್ ಆಗಿದ್ದಾಗ ಕೇಂದ್ರ ಸರ್ಕಾರದ ಸಚಿವರಾದ ಲಾಲ್‌ಬಹದೂರ್ ಶಾಸ್ತ್ರಿಯವರು ನೆರವೇರಿಸಿದರು. ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಕಾಮರಾಜ್ ನಾಡಾರ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ನಗರಕ್ಕೆ ಕಾವೇರಿ ನೀರು ತರುವ ಪೈಪಿನ ಪಕ್ಕದಲ್ಲಿ ಮತ್ತೊಂದು ಸಣ್ಣ ಪೈಪ್ ಹಾಕಿ ಅದರಲ್ಲು ನೀರು ಬರುವಂತೆ ಮಾಡಿ ದಾರಿಯಲ್ಲಿ ಸಿಕ್ಕುವ ಅನೇಕ ಹಳ್ಳಿಗಳಿಗೂ ಕುಡಿಯಲು ಕಾವೇರಿ ನೀರು ಒದಗಿಸಬಹುದೆಂದು ವಾದಿಸುತ್ತಿದ್ದೆ. ಅದು ಆಗ ಯಾರ ಕಿವಿಗೂ ಬೀಳಲಿಲ್ಲ. ಈಗ ಆ ದಿಕ್ಕಿನಲ್ಲಿ ಯೋಜನೆ ನಡೆಯುತ್ತಿದೆ ಎಂದು ಕೇಳಲ್ಪಟ್ಟೆ. ನಗರದ ಅನೇಕ ಕಡೆಗಳಲ್ಲಿ ನೀರು ಸರಬರಾಜು ವ್ಯವಸ್ಥೆ ಉತ್ತಮಪಡಿಸಲು ಓವರ್ ಹೆಡ್ ಟ್ಯಾಂಕ್‌ಗಳನ್ನು ಕಟ್ಟಲಾಯಿತು.

ಬೇರೆ ಬೇರೆ ಬಡಾವಣೆಗಳಲ್ಲಿ ಇದ್ದ ಕೆಲವು ಖಾಲಿ ಜಾಗಗಳಲ್ಲಿ ಮಕ್ಕಳ ಆಟದ ಮೈದಾನಗಳನ್ನು ನಿರ್ಮಿಸಲಾಯಿತು. ಕಾರ್ಪೊರೇಷನ್ ಶಾಲೆಗಳನ್ನು ದುರಸ್ತಿ ಮಾಡಿಸಿದುದಲ್ಲದೆ ಕೆಲವು ಕಡೆ ಹೊಸ ಶಾಲೆಗಳನ್ನು ಕಟ್ಟಿಸುವ ತೀರ್ಮಾನ ಕೈಗೊಳ್ಳಲಾಯಿತು. ಪ್ರತಿಯೊಂದು ಡಿವಿಜನ್ನಿನಲ್ಲಿಯು ಒಂದು ನರ್ಸರಿ ಶಾಲೆ ಆರಂಭಿಸಬೇಕೆಂಬ ನಿರ್ಣಯವನ್ನು ಕಾರ್ಪೊರೇಷನ್ ಸಭೆಯಲ್ಲಿ ತೆಗೆದುಕೊಂಡು ಆದಷ್ಟುಮಟ್ಟಿಗೆ ಎಲ್ಲ ಡಿವಿಜನ್‌ಗಳಲ್ಲಿ ನರ್ಸರಿ ಶಾಲೆಗಳನ್ನು ತೆರೆಯಲಾಯಿತು. ಕೆಲವು ಹೆರಿಗೆ ಆಸ್ಪತ್ರೆಗಳನ್ನೂ ಪ್ರತಿ ಡಿವಿಜನ್ನಿನಲ್ಲಿ ಕಾರ್ಪೊರೇಷನ್ ವಾರ್ಡ್ ಆಫೀಸ್‌ಗಳನ್ನೂ ಕಟ್ಟಬೇಕೆಂದು ನಿರ್ಣಯ ತೆಗೆದುಕೊಂಡು ಆ ಕಾರ್ಯ ಆರಂಭಿಸಲಾಯಿತು. ಈ ಎಷ್ಟೋ ಕೆಲಸಗಳು ನಾನು 'ವರ್ಕ್ಸ್ ಕಮಿಟಿ' ಅಧ್ಯಕ್ಷನಾಗಿದ್ದಾಗ ಪ್ರಾರಂಭವಾಗಿ ನಾನು ಮೇಯರ್ ಆದಾಗ ಅವುಗಳನ್ನು ಉದ್ಘಾಟನೆ ಮಾಡುವ ಸೌಭಾಗ್ಯ ನನ್ನದಾಯಿತು. ವರ್ಕ್ಸ್ ಕಮಿಟಿ ಅಧ್ಯಕ್ಷನಾಗಿದ್ದ ನಾಲ್ಕು ವರ್ಷಗಳ ಕಾಲ ಕಾರ್ಪೊರೇಷನ್ ಸಭೆಯಲ್ಲಿ ವರ್ಕ್ಸ್ ಕಮಿಟಿಗೆ ಸಂಬಂಧಪಟ್ಟ ಯಾವುದೇ ವಿಷಯಗಳು ಅಜೆಂಡದಲ್ಲಿ ಬಂದರೂ ವಿರೋಧ ಪಕ್ಷದ ಸದಸ್ಯರು ಮೊದಲುಗೊಂಡು ಎಲ್ಲ ಸದಸ್ಯರು ಆ ವಿಷಯಗಳನ್ನು ಆರಿಸಿಕೊಂಡು ಅವಕ್ಕೆ ಮೊದಲು ಒಪ್ಪಿಗೆ ನೀಡುತ್ತಿದ್ದರು.

ಬೆಂಗಳೂರು ಮೆಟ್ರೋಪಾಲಿಟನ್ ಡೆವಲಪ್‌ಮೆಂಟ್ ಬೋರ್ಡಿಗೆ ಮಾಜಿ ದಿವಾನರಾದ ಎನ್. ಮಾಧವರಾಯರು ಅಧ್ಯಕ್ಷರು. ಆ ಬೋರ್ಡಿನ ಉಪ ಸಮಿತಿಯಲ್ಲೂ ನಾನು ಸದಸ್ಯನಾಗಿದ್ದು ಅನೇಕ ಹೊಸ ಅನುಭವಗಳನ್ನು ಪಡೆಯುವಂತಾಯಿತು. ಇತರ ಕಾರ್ಪೊರೇಷನ್‌ಗಳಲ್ಲಿ ಅಭಿವೃದ್ಧಿ ಕಾರ್ಯಗಳು ಯಾವ ರೀತಿ ನಡೆಯುತ್ತವೆ ಎಂಬುದನ್ನು ನೋಡಿಕೊಂಡು ಬರಲು ವರ್ಕ್ಸ್ ಕಮಿಟಿ ಸದಸ್ಯರೆಲ್ಲ ಮೇಯರ್ ಇಂದಿರಮ್ಮನವರ ನೇತೃತ್ವದಲ್ಲಿ ಬೊಂಬಾಯಿಗೆ ಹೋಗಿದ್ದೆವು. ಭೂಪಾಲಿನಲ್ಲಿ ನಡೆದ ಅಖಿಲ ಭಾರತ ಟೌನ್ ಪ್ಲಾನಿಂಗ್ ಸೆಮಿನಾರಿಗೂ

ನಾನು ಹೋಗಿದ್ದೆ. ಶ್ರೀ ಪಿ. ಎಸ್. ಕೃಷ್ಣಯ್ಯರ್ ಅವರು ೧೯೬೨ರಲ್ಲಿ ಮೇಯರ್ ಆಗಿದ್ದರು. ಕಾರ್ಪೊರೇಷನ್ ಆಡಳಿತ ವ್ಯವಹಾರವೆಲ್ಲ ಕನ್ನಡದಲ್ಲೇ ನಡೆಯಬೇಕೆಂದು ನಾನು ನಿರ್ಣಯ ಮಂಡಿಸಿದೆ. ಅದು ಸರ್ವಾನುಮತದಿಂದ ಅಂಗೀಕಾರವಾಯಿತು. ಕೃಷ್ಣಯ್ಯರ್ ಅವರೂ ಕನ್ನಡವನ್ನು ಜಾರಿಗೆ ತರಲು ಶ್ರಮಿಸಿದರು. ೧೯೬೩ರಲ್ಲಿ ಶ್ರೀ ಕೆ. ಎಂ. ನಂಜಪ್ಪನವರು ಮೇಯರ್, ನಾನು ಕಾರ್ಪೊರೇಷನ್ ಕಾಂಗ್ರೆಸ್ ಪಕ್ಷದ ನಾಯಕ. ಕಾರ್ಪೊರೇಷನ್ ಸಭೆಗಳಲ್ಲಿ ಕೆಲವು ನಿರ್ಣಯಗಳ ಬಗ್ಗೆ ಮತ್ತು ಸಭೆಯ ನಡವಳಿಕೆಯ ಬಗ್ಗೆ ವಿರೋಧ ಪಕ್ಷದವರು ತಮ್ಮ ಪ್ರತಿಭಟನೆ ಸೂಚಿಸಿದರೂ ಅಂತಿಮದಲ್ಲಿ ಒಮ್ಮತಕ್ಕೆ ಬಂದು ನಿರ್ಣಯಗಳನ್ನು ಅಂಗೀಕರಿಸುತ್ತಿದ್ದರು. ನಂಜಪ್ಪನವರು ತುಂಬ ಘನತೆ ಗೌರವದಿಂದ ಮೇಯರ್ ಪದವಿ ನಿರ್ವಹಿಸಿದರು.

ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿದ್ದ ಆರ್. ಸುಬ್ಬಣ್ಣನವರು ೧೯೬೧ರಲ್ಲೇ ನನ್ನನ್ನು ಮೇಯರಾಗಿ ಮಾಡಬೇಕೆಂಬ ಆಶಯವನ್ನು ವೀರಣ್ಣಗೌಡರ ಬಳಿ ವ್ಯಕ್ತಪಡಿಸಿದ್ದರಂತೆ. ಆ ವಿಷಯವನ್ನು ವೀರಣ್ಣಗೌಡರು ನನಗೆ ತಿಳಿಸಿದರು. ಅದಕ್ಕೆ ನಾನು ಮೇಯರ್ ಆಗಲು ನನಗೆ ಇನ್ನೂ ಸಾಕಷ್ಟು ಅನುಭವ ಬೇಕು. ಈಗ ಅದು ಬೇಡ. ಮುಂದೆ ನೋಡೋಣ ಎಂದು ಹೇಳಿದ್ದೆ. ರಾಜಕೀಯದಲ್ಲಿ ಪಟ್ಟು ಸ್ವಲ್ಪ ಸಡಿಲವಾದರೂ ಅದು ಜಾರಿಕೊಂಡು ಹೋಗಿಬಿಡುತ್ತದೆ. ಆ ವರ್ಷ ಶ್ರೀ ಜಿ. ನಂಜಪ್ಪನವರು ಮೇಯರ್ ಆದರು. ೧೯೬೨ರಲ್ಲಿ ಶ್ರೀ ವಿ. ಎಸ್. ಕೃಷ್ಣಯ್ಯರ್ ಅವರಿಗೂ ಶ್ರೀ ಕೆ.ಎಂ. ನಂಜಪ್ಪನವರಿಗೂ ಸ್ಪರ್ಧೆ ಶುರುವಾಯಿತು. ಆ ವರ್ಷ ಕೃಷ್ಣಯ್ಯರ್ ಮೇಯರ್ ಆದರು. ೧೯೬೩ರಲ್ಲಿ ನನಗೂ ಕೆ.ಎಂ. ನಂಜಪ್ಪನವರಿಗೂ ಸ್ಪರ್ಧೆ ಆರಂಭವಾಯಿತು. ನಾನೂ ನಂಜಪ್ಪನವರೂ ಮೊದಲಿನಿಂದಲೂ ತುಂಬ ವಿಶ್ವಾಸಿಗಳು. ಒಂದು ದಿನ ನಂಜಪ್ಪನವರು ನಮ್ಮ ಮನೆಗೆ ಬಂದು 'ನೀವು ಅಡ್ಡ ಬರದಿದ್ದರೆ ಈ ವರ್ಷ ನಾನು ಮೇಯರ್ ಆಗುತ್ತೇನೆ. ಮುಂದಿನ ವರ್ಷ ನೀವು ಮೇಯರ್ ಆಗಲು ನಾನು ಶ್ರಮಿಸುತ್ತೇನೆ' ಎಂದರು. ಅದಕ್ಕೆ ನಾನು 'ನಂಜಪ್ಪನವರೆ, ಈ ವರ್ಷ ಮೇಯರ್ ಆಗುವವರು ನೀವೇ. ಇದು ರಾಜಕೀಯ. ನಾನು ಈ ಸ್ಪರ್ಧೆಯಲ್ಲೇ ಇರಲಿಲ್ಲ ಎಂದರೆ ಮುಂದಿನ ವರ್ಷ ನನ್ನನ್ನು ಕೈಬಿಡುತ್ತಾರೆ. ಆದ್ದರಿಂದ ನೀವೇ ಮೇಯರ್ ಎಂದು ತಿಳಿದುಕೊಂಡು ನಿಮ್ಮ ಕೆಲಸ ನೀವು ಮಾಡಿ, ನನ್ನ ಕೆಲಸ ನಾನು ಮಾಡುತ್ತೇನೆ' ಎಂದು ಹೇಳಿ ವಿಶ್ವಾಸದಿಂದ ಕಳುಹಿಸಿಕೊಟ್ಟೆ. ಆ ವರ್ಷ ಅವರೇ ಮೇಯರ್ ಆದರು. ೧೯೬೩ನೇ ಜನವರಿ ೨೪ರಂದು ವಿಧಾನ ಸೌಧದ ಬ್ಯಾಂಕ್ವೆಟ್ ಹಾಲಿನಲ್ಲಿ ರಿಪಬ್ಲಿಕ್ ದಿನಾಚರಣೆ ಪ್ರಯುಕ್ತ ಗವರ್ನರ್ ಜಯಚಾಮರಾಜೇಂದ್ರ ಒಡೆಯರವರು ಸತ್ಕಾರ ಕೂಟ ಏರ್ಪಡಿಸಿದ್ದರು. ಮುಖ್ಯ ಮಂತ್ರಿ ನಿಜಲಿಂಗಪ್ಪನವರು ಬಂದಿದ್ದ ಅತಿಥಿಗಳನ್ನು ಜಯಚಾಮರಾಜೇಂದ್ರ ಒಡೆಯರಿಗೆ ಪರಿಚಯ ಮಾಡಿಕೊಡುತ್ತಿದ್ದರು. ನನ್ನ ಬಳಿ ಬಂದಾಗ 'ಇವರ ಹೆಸರು ಶ್ರೀ ಜಿ. ನಾರಾಯಣ್, ಕಾರ್ಪೊರೇಷನ್ ಕೌನ್ಸಿಲರ್, ಫ್ಯೂಚರ್ ಮೇಯರ್' ಎಂದು ಪರಿಚಯಿಸಿದರು. ಮಹಾರಾಜರು ನಕ್ಕರು. ನಾನು ನಮಸ್ಕಾರ ಹೇಳಿ ತಪ್ಪಿಸಿಕೊಂಡೆ. ೧೯೬೩ರಲ್ಲಿ ವಿಧಾನ ಪರಿಷತ್ತಿನ ಅಧ್ಯಕ್ಷರಾದ ಗುದ್ದೆಪ್ಪ ಹಳ್ಳಿಕೇರಿಯವರು ಕಾರ್ಪೊರೇಷನ್ ಆಲ್ಡರ್‌ಮನ್ ಆಗಿದ್ದ ಮುಸ್ಲಿಂ ಅಭ್ಯರ್ಥಿಯನ್ನು

ಮೇಯರ್ ಮಾಡಲು ಮುಖ್ಯರಾದವರಿಗೆಲ್ಲ ಹೇಳುತ್ತಿದ್ದರು. ನಾನೂ ಕೃಷ್ಣಯ್ಯರ್ ಹೇಳಲಿರುವವರನ್ನೇ ನೋಡೋಣವೆಂದು ಹೋದೆವು. ಈ ವರ್ಷ ನನಗೆ ಮೇಯರ್‌ಗಿರಿ ಕೊಡುವುದಾಗಿ ಮುಖಂಡರು ಹೇಳಿದ್ದರು ಎಂದು ನಾನು ಬಾಯಿಬಿಟ್ಟೆ. 'ಅವರು ಹೇಳಿದ್ದ ಮಾತ್ರಕ್ಕೆ ಕೊಡಬೇಕೇನು ಅಂತ ಏನು' ಎಂದು ರಾಗ ಎಳೆದರು. ಇನ್ನು ಇವರ ಬಳಿ ಪ್ರಯೋಜನವಿಲ್ಲ ಎಂದು ಬಂದುಬಿಟ್ಟೆವು. ಈ ತಕರಾರುಗಳೆಲ್ಲ ಪ್ರಾರಂಭವಾದ ಮೇಲೆ ವೀರಣ್ಣಗೌಡರು ನನ್ನ ಪರವಾಗಿ ನಿಜಲಿಂಗಪ್ಪನವರಿಗೆ ಹೇಳಿದರು. ನಿಜಲಿಂಗಪ್ಪನವರು ಜಯಚಾಮರಾಜೇಂದ್ರ ಒಡೆಯರಿಗೆ ನನ್ನನ್ನು ಪರಿಚಯ ಮಾಡಿಕೊಡುತ್ತ 'ವುಡ್‌ಬಿ ಮೇಯರ್' ಎಂದು ಹೇಳಿದ್ದರು. ದೇವರ ಇಚ್ಛೆಯಿದ್ದಂತಾಗಲಿ ಎಂದು ಸುಮ್ಮನಿದ್ದೆ. ಕೃಷ್ಣಯ್ಯರ್ ಮತ್ತು ರಾಮಣ್ಣನವರು ನನಗಾಗಿ ತುಂಬ ಶ್ರಮಿಸಿದರು. ಅಡ್‌ಹಾಕ್ ಕಮಿಟಿ ಸಭೆಯಲ್ಲಿ ಬಿ.ಸಿ.ಡಿ.ಸಿ.ಸಿ. ಅಧ್ಯಕ್ಷರೂ, ಹಿಂದಿನ ಮೇಯರೂ ಆಗಿದ್ದ ಶ್ರೀ ಎಂ. ಕೃಷ್ಣಪ್ಪನವರು ನನಗೆ ಮೇಯರ್ ಪದವಿ ಕೊಡಕೂಡದೆಂದು ತುಂಬ ಹಠ ಹಿಡಿದರಂತೆ. ಅದಕ್ಕೆ ಕಾರಣ ಗೊತ್ತಾಗಲಿಲ್ಲ. ಕೃಷ್ಣಯ್ಯರ್ ಮತ್ತು ರಾಮಣ್ಣನವರನ್ನು ಕಂಡರೆ ಅವರಿಗೆ ಆಗುತ್ತಿರಲಿಲ್ಲವಂತೆ. 'ಇವರುಗಳಿಗೆ ಬುದ್ಧಿ ಕಲಿಸಬೇಕಾದರೆ ನಾರಾಯಣ್‌ಗೆ ಮೇಯರ್‌ಗಿರಿ ಕೊಡಕೂಡದು, ಅವರ ಜತೆ ಬಿಟ್ಟು ನಾರಾಯಣ ಹೊರಗೆ ಬರಬೇಕು' ಎಂಬುದು ಅವರ ಅಪೇಕ್ಷೆಯಾಗಿತ್ತೆಂದು ಕೃಷ್ಣಪ್ಪನವರ ಒಬ್ಬಿಬ್ಬ ಸ್ನೇಹಿತರು ಆಮೇಲೆ ನನಗೆ ಹೇಳಿದರು. ಅವರದು ಯಾವ ಲೆಕ್ಕಾಚಾರವೊ ಏನೋ ನನಗೆ ತಿಳಿಯದು. ಕೃಷ್ಣಪ್ಪನವರು ನನ್ನನ್ನು ಮೇಯರ್ ಮಾಡಬಾರದೆಂದು ಹಠ ಹಿಡಿದಾಗ ಆ ಸಮಿತಿಯ ಸದಸ್ಯರಾಗಿದ್ದ ಶ್ರೀ ಕೆ.ವಿ. ಶಂಕರಗೌಡರು, ಕೃಷ್ಣಪ್ಪನವರನ್ನು ಸಮಾಧಾನಪಡಿಸಿ ಅವರು ವಿರೋಧಿಸದಂತೆ ಮಾಡಿ, ತರುವಾಯ ಶಂಕರಗೌಡರು ನನ್ನನ್ನು ಕಂಡು ಬೆಳಿಗ್ಗೆಯೇ ಹೋಗಿ ಕೃಷ್ಣಪ್ಪನವರನ್ನು ಕಾಣು ಎಂದರು. ಅವರು ಹೇಳಿದಂತೆ ಬೆಳಿಗ್ಗೆಯೇ ಲಾಲ್‌ಬಾಗ್ ರಸ್ತೆಯಲ್ಲಿದ್ದ ಕೃಷ್ಣಪ್ಪನವರ ಮನೆಗೆ ಹೋದೆ. 'ಮೇಯರ್ ಸ್ಥಾನಕ್ಕೆ ನಿಮ್ಮ ಹೆಸರನ್ನು ಸೂಚಿಸುವಂತೆ ಕಾರ್ಪೊರೇಷನ್ ಕಾಂಗ್ರೆಸ್ ಪಕ್ಷದ ನಾಯಕರಿಗೆ ಕಳುಹಿಸಿಕೊಡುತ್ತೇನೆ. ಒಳ್ಳೆಯದಾಗಲಿ, ಹೋಗಿ ಬನ್ನಿ' ಎಂದು ಹೇಳಿ ಕುಡಿಯಲು ಒಂದು ಲೋಟ ಹಾಲು ಕೊಟ್ಟರು. 'ನೋಡಿ ಹಾಲು ಕೊಟ್ಟಿದ್ದೀರಿ, ಜ್ಞಾಪಕವಿರಲಿ' ಎಂದು ಹೇಳಿ ಮನೆಗೆ ಬಂದೆ. ಅಂದಿನ ಸಾಯಂಕಾಲವೆ (೨೩-೧-೬೪) ಮೇಯರ್ ಚುನಾವಣೆ. ವಿರೋಧ ಪಕ್ಷದವರು ಶ್ರೀ ಪಿ.ಎಸ್.ಕೆ. ನಾಯ್ಡು ಅವರನ್ನು ತಮ್ಮ ಪಕ್ಷದ ಪರವಾಗಿ ನಿಲ್ಲಿಸಿದ್ದರು. ಆದರೂ ನಮ್ಮ ಪಕ್ಷದ ಸದಸ್ಯರು ಕೊಟ್ಟ ಓಟುಗಳ ಜತೆಗೆ ವಿರೋಧ ಪಕ್ಷದ ಸದಸ್ಯರ ಓಟುಗಳ ಪೈಕಿ ೧೩ ಓಟುಗಳು ನನಗೆ ಬಂದವು. ನನ್ನ ಸಂಗಡ ಶ್ರೀ ಎಸ್. ಸುಂದರ್‌ರಾಜ್ ಅವರು ಬಹುಮತದಿಂದ ಉಪಮೇಯರಾಗಿ ಆಯ್ಕೆಯಾದರು.

ನನಗೂ ಪಿ.ಎಸ್. ಕೃಷ್ಣಯ್ಯರ್ ಅವರಿಗೂ ಅನೇಕ ವರ್ಷಗಳ ಪರಿಚಯ. ಕಾಂಗ್ರೆಸ್ ವಸ್ತು ಪ್ರದರ್ಶನ ಉಪ ಸಮಿತಿಯಲ್ಲಿ ನಾನು ಕೆಲವು ವರ್ಷ ಸದಸ್ಯನಾಗಿದ್ದೆ. ನಾನು ಚಾಮರಾಜಪೇಟೆ ಕಾಂಗ್ರೆಸ್ ಸಮಿತಿ ಅಧ್ಯಕ್ಷನಾದ ಮೇಲೆ ಅವರ ನನ್ನ ಪರಿಚಯ ನಿಕಟವಾಯಿತು. ಕಾರ್ಪೊರೇಷನಲ್ಲಂತೂ ಪ್ರತಿದಿನ ಭೇಟಿಯಾಗಿ ಸಮಾಲೋಚಿಸುತ್ತಿದ್ದೆವು.

ಕಾರ್ಪೊರೇಷನ್ನಿಗೆ ಹೋಗುವ ಮೊದಲು ನನಗೆ ಶಾಮಣ್ಣನವರ ಪರಿಚಯವಿರಲಿಲ್ಲ. ಅನಂತರ ಯಾವುದೇ ಮುಖ್ಯವಾದ ಕಾರ್ಯಕ್ರಮಗಳಲ್ಲಿ ನಾವು ಒಟ್ಟಾಗಿ ಕೆಲಸ ಮಾಡುತ್ತಿದ್ದೆವು. ಇದು ನಮ್ಮ ಪಕ್ಷದಲ್ಲೆ ಕೆಲವರಿಗೆ ಸಹನೆಯಿರಲಿಲ್ಲ. ನಾವು ಮೂವರಲ್ಲಿ ಇಬ್ಬರು ಕಣ್ಣಿಗೆ ಬಿದ್ದರೆ 'ಇನ್ನೊಬ್ಬರೆಲ್ಲಿ ? ಅವರನ್ನು ಯಾಕೆ ಬಿಟ್ಟು ಬಂದಿರಿ ? ನೀವು ಮೂವರೂ ಒಂದೇ. ಸ್ಮಶಾನಕ್ಕೆ ಹೋಗುವಾಗಲೂ ನೀವು ಒಟ್ಟಾಗಿಯೇ ಹೋಗುತ್ತೀರಿ' ಎಂದು ಗೇಲಿ ಮಾಡುತ್ತಿದ್ದರು. ಕಾರ್ಪೊರೇಷನ್ ಸಭೆಯಲ್ಲಾಗಲಿ, ಪಾರ್ಟಿ ಮೀಟಿಂಗಿನಲ್ಲಾಗಲಿ ನಮ್ಮ ಮೂವರಲ್ಲಿ ಭಿನ್ನಾಭಿಪ್ರಾಯ ಬಂದದ್ದು ನನಗೆ ಜ್ಞಾಪಕವಿಲ್ಲ.

ಮೇಯರ್ ಆಯ್ಕೆ ಆದ ಮರುದಿನವೆ ಮುಖ್ಯಮಂತ್ರಿ ನಿಜಲಿಂಗಪ್ಪನವರು ಕಾಂಗ್ರೆಸ್ ಕಚೇರಿಯಲ್ಲಿ ಮೇಯರ್ ಮತ್ತು ಉಪಮೇಯರ್ ಗೌರವಾರ್ಥ ಒಂದು ಸತ್ಕಾರ ಕೂಟ ಏರ್ಪಡಿಸಿದ್ದರು. ಕಾರ್ಪೊರೇಷನ್ ವಿರೋಧ ಪಕ್ಷದ ಸದಸ್ಯರು ಮೇಯೊ ಹಾಲಿನಲ್ಲಿಯೇ ಏರ್ಪಡಿಸಿ ನಮ್ಮನ್ನು ಗೌರವಿಸಿದರು. ಮೇಯರ್ ಆದವನಿಗೆ ಸಾರ್ವಜನಿಕ ಸಭೆ ಸಮಾರಂಭಗಳಿಗೂ ಸತ್ಕಾರ ಕೂಟಗಳಿಗೂ ಕೊರತೆಯಿಲ್ಲ. ಸಾಧಾರಣವಾಗಿ ಬೆಂಗಳೂರು ನಾಗರೀಕರು, ಸಾರ್ವಜನಿಕ ಕಾರ್ಯಕ್ರಮಗಳಿಗೆ ಮಂತ್ರಿಗಳಿಗಿಂತಲೂ ಹೆಚ್ಚಾಗಿ ಮೇಯರ್ ಅವರನ್ನೇ ಆಹ್ವಾನಿಸುತ್ತಾರೆ. ಇದಲ್ಲದೆ ಕಾರ್ಪೊರೇಷನ್ ಸಭೆಗಳ ಉಪಸಮಿತಿ ಸಭೆಗಳೂ ಹೊರಗಡೆಯಿಂದ ಬಂದ ಅತಿಥಿಗಳನ್ನು ಸ್ವಾಗತಿಸುವುದು, ಸರ್ಕಾರದಿಂದ ನೇಮಕವಾದ ಎಷ್ಟೋ ಸಮಿತಿಗಳು ಮಂತ್ರಿಗಳೊಡನೆ ಭೇಟಿ, ಮದುವೆ ಆರತಕ್ಷತೆಗಳು, ಗೃಹಪ್ರವೇಶಗಳು, ಅಧಿಕಾರಿಗಳ ಸಭೆಗಳು, ಗಣೇಶೋತ್ಸವ, ಗಾಂಧಿಜಯಂತಿ, ಸ್ವತಂತ್ರ ದಿನಾಚರಣೆ, ರಿಪಬ್ಲಿಕ್ ಡೇ, ಸತ್ಕಾರ ಕೂಟಗಳು, ನಾಟಕೋತ್ಸವಗಳು, ಇವಕ್ಕೆಲ್ಲಾ ಮೇಯರ್ ಹೋಗಬೇಕು. ಹೋಗದಿದ್ದರೆ ಆ ಡಿವಿಜನ್ ಕೌನ್ಸಿಲರಿಗೆ, ಗೊತ್ತಿರುವ ಜನಗಳಿಗೆ ತುಂಬ ಅಸಮಾಧಾನ. ಈ ಕಾರ್ಯಕ್ರಮಗಳಲ್ಲೆ ಮೇಯರ್ ಅವರ ಅರ್ಧಕಾಲ ಕಳೆದುಹೋಗುತ್ತದೆ. ಮೇಯರ್ ಎಂದರೆ ಏನೋ ಒಂದು ಬಗೆಯ ಗೌರವ. ಈಚೆಗೆ ಎಲ್ಲ ಸ್ಥಾನಗಳ ಗೌರವವು ಕಡಿಮೆ ಆಗುತ್ತಿರುವಂತೆ ಮೇಯರ್ ಸ್ಥಾನದ ಗೌರವವು ಕಡಿಮೆ ಆಗುತ್ತಿದೆ. ಮೇಯರ್ ತನ್ನ ಅವಧಿಯಲ್ಲಿ ಏನು ಒಳ್ಳೆ ಕೆಲಸ ಮಾಡಿದ ಎಂದು ಒರೆ ಹಚ್ಚುವವರಿಗಿಂತ ಅವನು ಯಾವ ರೀತಿ ದರ್ಬಾರು ಮಾಡುತ್ತಾನೆ, ಅವನು ಎಷ್ಟು ಮನೆ ಕಟ್ಟಿಕೊಂಡ, ಮೊದಲಿಗಿಂತ ಈಗ ಐಶ್ವರ್ಯವಂತನಾಗಿ ಕಾಣಬೇಕಾದರೆ ಅವನಿಗೆ ಹಣ ಎಲ್ಲಿ ಬಂತು? ಈ ರೀತಿ ತಪ್ಪು ಹುಡುಕುವವರೆ ಹೆಚ್ಚು. ಆದ್ದರಿಂದ ಮೇಯರ್ ಆದವನು ಮೇಯರ್‌ಗಿರಿ ಬಿಟ್ಟ ಮೇಲೂ ಮರ್ಯಾದೆಯಿಂದ ಬಾಳಬೇಕಾದರೆ ಅಧಿಕಾರದಲ್ಲಿದ್ದಾಗ ಬಹಳ ಎಚ್ಚರಿಕೆಯಿಂದ ನಡೆಯಬೇಕು. ಗೌರವ ಸ್ಥಾನಗಳು ಹರಿತವಾದ ಕತ್ತಿ ಇದ್ದ ಹಾಗೆ. ಸ್ವಲ್ಪ ಹೆಚ್ಚು ಕಡಿಮೆ ಆದರೆ ಕಾಲು ಕೈ ಕತ್ತರಿಸಿ ಹೋಗುತ್ತವೆ.

ನಾನು ಮೇಯರ್ ಆಗಿ ಆರಿಸಿ ಬಂದದ್ದು ೧೯೬೪ನೇ ಜನವರಿ ೨೩. ಮೇಯರ್ ಸ್ಥಾನ ಬಿಟ್ಟದ್ದು ೧೯೬೪ನೇ ಡಿಸೆಂಬರ್ ೩೧. ಅಂದರೆ ೧೧ ತಿಂಗಳು ೮ ದಿವಸ ಆ ಸ್ಥಾನದಲ್ಲಿದ್ದೆ. ಈ ಅವಧಿಯಲ್ಲಿ ಭಾಗವಹಿಸಿದ್ದ ಸಭೆಗಳು, ಸಮಿತಿಗಳು ಮತ್ತು ಇತರ ಕಾರ್ಯಕ್ರಮಗಳ ಸಂಖ್ಯೆ ನನ್ನ ಡೈರಿಯ ಪ್ರಕಾರ ೧೨೧೧. ಎಷ್ಟೋ ಸಂದರ್ಭದಲ್ಲಿ

ಆಫೀಸಿನಲ್ಲಿ ಕೂತು ಕೆಲಸ ಮಾಡುವುದೇ ಕಷ್ಟ. ಒಂದಲ್ಲೊಂದು ಟೆಲಿಫೋನ್ ಕರೆಗಳು. ಎಷ್ಟೋ ಸಾರಿ ನನ್ನನ್ನು ನೋಡಿ ತಮ್ಮ ಕಷ್ಟ ಸುಖ ತೋಡಿಕೊಳ್ಳಲು ಬರುವ ನಾಗರೀಕರ ಅಹವಾಲನ್ನು ತಾಳ್ಮೆಯಿಂದ ಕೇಳುವುದಕ್ಕೂ ಆಗುತ್ತಿರಲಿಲ್ಲ. ಮೇಯರ್ ಚೇಂಬರಿನಲ್ಲಿ ಬಂದು ಕುಳಿತವರು ತಮ್ಮ ಕೆಲಸ ಮುಗಿದ ಮೇಲೂ ಎದ್ದು ಹೋಗುತ್ತಿರಲಿಲ್ಲ. ಆಫೀಸ್ ಹೊರಗಡೆ ನನ್ನನ್ನು ಕಾಣಲು ಜನ ಕಾದಿರುತ್ತಿದ್ದರು. ಅಂಥ ಸಂದರ್ಭದಲ್ಲಿ ನಾನೇ ಹೊರಗಡೆ ಹೋಗಿ ಅವರ ಕಷ್ಟ ಸುಖ ವಿಚಾರಿಸಿ ಬರುತ್ತಿದ್ದೆ. ಅನೇಕ ವರ್ಷಗಳಿಂದ ಇತ್ಯರ್ಥವಾಗದೆ ಉಳಿದಿರುವ ವಿಷಯಗಳ ಬಗ್ಗೆ ಎಷ್ಟೋ ಜನರು 'ನಿಮ್ಮ ಕಾಲದಲ್ಲಾದರೂ ಇತ್ಯರ್ಥಪಡಿಸಿ ಎಂದು ಗೋಳಾಡುತ್ತಿದ್ದರು. ಅಂಥ ಸಮಸ್ಯೆಗಳನ್ನು ಇತ್ಯರ್ಥಗೊಳಿಸಲು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳ ಸಭೆಯನ್ನು ಆಗಾಗ ಕರೆದು ಇಂಥ ವಿಷಯ ಅನೇಕ ವರ್ಷದಿಂದ ನಿಂತಿದೆ. ಮುಂದಿನ ಸಾರಿ ಅಧಿಕಾರಿಗಳ ಸಭೆ ಸೇರುವ ಹೊತ್ತಿಗ ಇದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ಹುಡುಕಿ ಸಮಸ್ಯೆ ಇತ್ಯರ್ಥಪಡಿಸಬೇಕೆಂದು ಪಟ್ಟು ಹಿಡಿಯುತ್ತಿದ್ದೆ. ಎಷ್ಟೋ ವರ್ಷಗಳಿಂದ ನಿಂತಿದ್ದ ಕೆಲವು ಸಮಸ್ಯೆಗಳು ೧೫–೨೦ ದಿನಗಳಲ್ಲಿ ಇತ್ಯರ್ಥವಾಗುತ್ತಿದ್ದವು. ಇದರಿಂದ ಸಂಬಂಧಪಟ್ಟ ಜನರಿಗೆ ತುಂಬಾ ಸಂತೋಷವಾಗುತ್ತಿತ್ತು.

ನಿಜಸ್ಥಿತಿ ತಿಳಿಸಬೇಕಾದರೆ ನಾನು ವರ್ಕ್ಸ್ ಕಮಿಟಿ ಅಧ್ಯಕ್ಷನಾಗಿದ್ದಾಗ ಆರಂಭ ಮಾಡಿದ್ದ ಎಷ್ಟೋ ಕಾರ್ಯಗಳು ನಾನು ಮೇಯರ್ ಆಗಿ ಬರುವ ಹೊತ್ತಿಗೆ ಮುಗಿದಿದ್ದವು. ಅಕ್ಕಿಪೇಟೆ ಕಾರ್ಪೊರೇಷನ್ ಮಾರ್ಕೆಟ್ ಆರಂಭ, ಮಲ್ಲೇಶ್ವರಂ ಸಂಪಿಗೆ ರಸ್ತೆಯಲ್ಲಿ ಕಾರ್ಪೊರೇಷನ್ ಅಂಗಡಿ ಕಟ್ಟಲು ಶಂಕುಸ್ಥಾಪನೆ, ಅಲ್ಲಿ ಕಾರ್ಪೊರೇಷನ್ ಸಬ್ ಆಫೀಸ್ ಉದ್ಘಾಟನೆ, ಗವೀಪುರ ಗುಟ್ಟಹಳ್ಳಿ ವಾರ್ಡ್ ಆಫೀಸ್ ಆರಂಭ, ಬನಪ್ಪ ಪಾರ್ಕ್ ಓವರ್‌ಹೆಡ್ ಟ್ಯಾಂಕ್ ಪ್ರಾರಂಭ, ಭಕ್ಷಿಗಾರ್ಡನ್ ಕಮ್ಯೂನಿಟಿ ಹಾಲ್ ಉದ್ಘಾಟನೆ, ಕಾಕ್ಸ್‌ಟೌನ್‌ನಲ್ಲಿ ಕಾರ್ಪೊರೇಷನ್ ಹೈಸ್ಕೂಲ್ ಪ್ರಾರಂಭ, ಗವೀಪುರ ಕಾರ್ಪೊರೇಷನ್ ಹೈಸ್ಕೂಲ್ ಶಂಕುಸ್ಥಾಪನೆ, ಪಿಳ್ಳಣ್ಣ ಗಾರ್ಡನ್ ಕಾರ್ಪೊರೇಷನ್ ಹೈಸ್ಕೂಲ್ ಆರಂಭ, ಶ್ರೀರಾಮಪುರದ ಕಾರ್ಪೊರೇಷನ್ ರೀಡಿಂಗ್ ರೂಂ. ಉದ್ಘಾಟನೆ, ಶಾಂತಿನಗರ ಹೆರಿಗೆ ಆಸ್ಪತ್ರೆ ಶಂಕುಸ್ಥಾಪನೆ, ಶ್ರೀರಾಮಪುರದಲ್ಲಿ ಸ್ವೀಪರ್ಸ್ ಕ್ವಾರ್ಟರ್ಸ್ ಶಂಕುಸ್ಥಾಪನೆ, ಬೈರಸಂದ್ರದಲ್ಲಿ ನೀರು ಸರಬರಾಜು ಕಾರ್‍ಯದ ಉದ್ಘಾಟನೆ, ಜೋಗು ಪಾಳ್ಯದಲ್ಲಿ ಕಾರ್ಪೊರೇಷನ್ ಬಾಲಕಿಯರ ಪ್ರೌಢಶಾಲೆ ಶಂಕುಸ್ಥಾಪನೆ, ೪೨ನೇ ಡಿವಿಜನ್ ವಾರ್ಡ್ ಆಫೀಸ್ ಶಂಕುಸ್ಥಾಪನೆ, ಚಾಮರಾಜಪೇಟೆ ಕಾರ್ಪೊರೇಷನ್ ಹೈಸ್ಕೂಲ್ ಮೊದಲ ಹಂತದ ಕಟ್ಟಡ ಉದ್ಘಾಟನೆ, ೨೫ನೇ ಡಿವಿಜನ್ನಿನಲ್ಲಿ ನರ್ಸರಿ ಶಾಲೆ ಶಂಕುಸ್ಥಾಪನೆ, ಕೆ. ಆರ್. ರಸ್ತೆಯಲ್ಲಿ ಓವರ್‌ಹೆಡ್ ಟ್ಯಾಂಕ್ ಉದ್ಘಾಟನೆ, ಸಿಟಿ ಮಾರ್ಕೆಟ್ ಬಳಿ ಸಬ್‌ವೇ ಶಂಕುಸ್ಥಾಪನೆ, ವಸಂತನಗರ ಮಾರುಕಟ್ಟೆ ಉದ್ಘಾಟನೆ, ಜಾನ್‌ಸನ್ ಮಾರ್ಕೆಟ್ ಬಳಿ ಓವರ್‌ಹೆಡ್ ಟ್ಯಾಂಕ್ ಮತ್ತು ರೀಡಿಂಗ್ ರೂಂ ಶಂಕುಸ್ಥಾಪನೆ, ಮುನಿರೆಡ್ಡಿ ಪಾಳ್ಯ ಕಾರ್ಪೊರೇಷನ್ ಹೆರಿಗೆ ಆಸ್ಪತ್ರೆ ಶಂಕುಸ್ಥಾಪನೆ, ಬಸವನಗುಡಿ ಕಾರ್ಪೊರೇಷನ್ ಸಬ್ ಆಫೀಸ್ ಶಂಕುಸ್ಥಾಪನೆ, ಪ್ಯಾಲೇಸ್ ಗುಟ್ಟಹಳ್ಳಿ ಹೆರಿಗೆ ಆಸ್ಪತ್ರೆ ಉದ್ಘಾಟನೆ, ಭಾಷ್ಯಂ ಪಾರ್ಕ್ ಸಬ್ ಆಫೀಸ್ ಶಂಕುಸ್ಥಾಪನೆ, ಮಲ್ಲೇಶ್ವರಂ ಮಾರ್ಕೆಟ್ ಆರಂಭೋತ್ಸವ, ಡಿಸ್ಪೆನ್ಸರಿ ರಸ್ತೆ ಬಾಲಕಿಯರ ಪ್ರೌಢಶಾಲೆ ಉದ್ಘಾಟನೆ, ಗೌತಮಪುರದ

ನರ್ಸರಿ ಶಾಲೆ ಶಂಕುಸ್ಥಾಪನೆ, ಕಾರ್ಕ್‌ಟೌನ್ ಕಾರ್ಪೊರೇಷನ್ ಹೈಸ್ಕೂಲ್ ಶಂಕುಸ್ಥಾಪನೆ, ನಾಗಪ್ಪ ಪಾರ್ಕ್ ಓಪನ್ ಏರ್ ಥಿಯೇಟರ್ ಉದ್ಘಾಟನೆ, ಮುಂತಾದ ಕಾರ್ಯಗಳು ನನ್ನ ಅವಧಿಯಲ್ಲಾಗಿವೆ.

ಇವಲ್ಲದೆ ಕಾವೇರಿ ಯೋಜನೆ ಪ್ರಥಮ ಹಂತದ ಶಂಕಸ್ಥಾಪನಾ ಕಾರ್ಯ, ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಬೋರ್ಡ್ ಸ್ಥಾಪನೆ. ಕಾರ್ಪೊರೇಷನ್ನಿನಿಂದ ಸರ್ಕಾರಕ್ಕೆ ನೀರು ಸರಬರಾಜು ವರ್ಗಾವಣೆ, ಗಾಂಧಿ ಜಯಂತಿಯಿಂದ ಒಂದು ವಾರಕಾಲ ನಗರ ನಿರ್ಮಲೀಕರಣ ಸಪ್ತಾಹ. ನಗರದ ನಾಲ್ಕನೇ ದರ್ಜೆ ನೌಕರರ ಸಮ್ಮೇಳನ ಮುಂತಾದ ಕಾರ್ಯಗಳು ನನ್ನ ಅವಧಿಯಲ್ಲೇ ನಡೆದವು. ಜನರಲ್ ಕಾರ್ಯಪ್ಪನವರ ಸಹಕಾರದಿಂದ ಕಾರ್ಪೊರೇಷನ್ನಿನಲ್ಲಿ ಒಂದು ಹೋಂಗಾರ್ಡ್‌ದಳವನ್ನು ಸ್ಥಾಪಿಸಲಾಯಿತು. ಆ ವರ್ಷ ಹೈದರಾಬಾದಿನಲ್ಲಿ 'ಅಖಿಲ ಭಾರತ ಮೇಯರ್ ಸಮ್ಮೇಳನ' ನಡೆಯಿತು. ಆ ಸಮ್ಮೇಳನಕ್ಕೆ ನಾನು ಮತ್ತು ಕಮಿಷನರ್ ರೂಪ್ಲಾನಾಯಕ್ ಹೋಗಿದ್ದೆವು.

ಸೆನೆಟಾಫ್ ತೆಗೆಯಬೇಕೆಂದು ಬಹಳ ಜನರ ಒತ್ತಾಯವಿತ್ತು. ಅದಕ್ಕಾಗಿ ಕೆಲವು ಯುವಕರು ಚಳವಳಿಯನ್ನು ನಡೆಸಿದರು. ಕಾರ್ಪೊರೇಷನ್ ಸಭೆಯಲ್ಲೂ ಆ ಬಗ್ಗೆ ನಿರ್ಣಯ ವಾಯಿತು. ಅದನ್ನು ತೆಗೆಯಲು ಸರ್ಕಾರ ಪೋಲೀಸ್ ಕಾವಲನ್ನು ಒದಗಿಸಿತು. ನೂರಾರು ಜನ ಕಾರ್ಪೊರೇಷನ್ ಸಿಬ್ಬಂದಿ ರಾತ್ರಿ ೧೧ ಗಂಟೆಯಿಂದ ಬೆಳಗಿನ ಜಾವ ಐದು ಗಂಟೆ ವರೆಗೂ ಹಾರೆ ಪಿಕಾಸಿ ಇಟ್ಟು ಒಡೆದರೂ ಕಾಲು ಭಾಗವನ್ನೂ ತೆಗಯಲಾಗಲಿಲ್ಲ. ಆ ಮೇಲೆ ಅದನ್ನು ಪೂರ್ತಿ ನೆಲಸಮ ಮಾಡಬೇಕಾದರೆ ಮೂರು ದಿನ ಹಿಡಿಯಿತು.

ದಿನಾಂಕ ೧-೧೧-೧೯೬೪ರಂದು ಕೆಂಪೇಗೌಡ ಪ್ರತಿಮೆಯನ್ನು ಕಾರ್ಪೊರೇಷನ್ ಮುಂಭಾಗದ ಓವಲ್‌ನಲ್ಲಿ ಅನಾವರಣ ಮಾಡಲಾಯಿತು. ಮದರಾಸಿನ ಗವರ್ನರ್ ಆಗಿದ್ದ ಶ್ರೀ ಜಯಚಾಮರಾಜೇಂದ್ರ ಒಡೆಯರವರು ಪ್ರತಿಮೆ ಅನಾವರಣ ಮಾಡಿದರು. ಆ ಸಂದರ್ಭದಲ್ಲಿ 'ಬೆಂಗಳೂರು ಕೆಂಪೇಗೌಡ' ಪುಸ್ತಕವನ್ನು ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪನವರು ಬಿಡುಗಡೆ ಮಾಡಿದರು. ಮೈಸೂರು ಗವರ್ನರ್ ಶ್ರೀ ನಾಗೇಶ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸಮಾರಂಭ ಸರ್ ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ ನಡೆಯಿತು. ಈ ಸಮಾರಂಭಕ್ಕೆ ಅನೇಕ ಗಣ್ಯರು, ಅಧಿಕಾರಿಗಳು ಅಧಿಕ ಸಂಖ್ಯೆಯಲ್ಲಿ ಆಗಮಿಸಿದ್ದರು.

ಜಯಪ್ರಕಾಶ್ ನಾರಾಯಣ್, ಕೇಂದ್ರದ ವಿದ್ಯಾ ಸಚಿವರಾದ ಚಾಗ್ಲಾ, ಕೇಂದ್ರದ ಗೃಹ ಸಚಿವರಾದ ಗುಲ್ಜಾರಿಲಾಲ್ ನಂದಾ, ಅಶೋಕ ಮೆಹತಾ, ಲಾಲ್ ಬಹದ್ದೂರ್ ಶಾಸ್ತ್ರಿ, ಕಾಮರಾಜ್ ನಾಡಾರ್, ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಡಾ॥ ರಂ. ಶ್ರೀ ಮುಗಳಿ. ಆ ವರ್ಷ ಅಖಿಲ ಭಾರತ ಮಟ್ಟದ ವಿವಿಧ ಸಂಸ್ಥೆಗಳ ತಂಡಗಳು ಬೆಂಗಳೂರಿಗೆ ಬಂದಿದ್ದಾಗ ಅವರಿಗೆಲ್ಲ ಕಾರ್ಪೊರೇಷನ್ ಸತ್ಕಾರ ಕೂಟಗಳನ್ನು ಏರ್ಪಡಿಸಿತ್ತು. ವಿದೇಶದಿಂದ ಆಗ ಬೆಂಗಳೂರಿಗೆ ಇರಾಕಿನ ಅಧ್ಯಕ್ಷ ಫೀಲ್ಡ್ ಮಾರ್ಷಲ್ ಅಬ್ದುಲ್ ಸಲಾಂ ಮಹಮದ್, ಲಂಡನ್ ಮಾಜಿ ಮೇಯರ್ ಮುಂತಾದವರು ಬಂದಿದ್ದರು.

ಅದೇ ವರ್ಷ ಭಾರತದ ಪ್ರಧಾನಿ ಪಂಡಿತ ಜವಾಹರಲಾಲ್ ನೆಹ್ರೂ ತೀರಿಕೊಂಡರು. ಅವರ ಚಿತಾಭಸ್ಮವನ್ನು ೩-೬-೬೪ರಂದು ವಿಮಾನದಲ್ಲಿ ಬೆಂಗಳೂರಿಗೆ ತರಲಾಯಿತು. ಮಾರನೆ ದಿನ ಕಾವೇರಿಯಲ್ಲಿ ಅದನ್ನು ವಿಸರ್ಜಿಸಲಾಯಿತು.

ದೇವರ ದಯೆಯಿಂದ ಹೇಳಿಕೊಳ್ಳುವಂಥ ಯಾವ ಅಡಚಣೆಗಳು ಬರಲಿಲ್ಲ. ಯಾವ ಸ್ಥಾನದಲ್ಲೇ ಇರಲಿ ಸಣ್ಣಪುಟ್ಟ ತೊಂದರೆಗಳು ಬಂದೇ ಬರುತ್ತವೆ. ಅಂಥವನ್ನು ತಾಳ್ಮೆಯಿಂದ ಧೈರ್ಯದಿಂದ ಬುದ್ಧಿವಂತಿಕೆಯಿಂದ ಬಗೆಹರಿಸಿಕೊಳ್ಳಬೇಕು. ನಮ್ಮ ಪಕ್ಷದ ಸದಸ್ಯರ ಜತೆಗೆ ವಿರೋಧ ಪಕ್ಷದ ಸದಸ್ಯರ ಪೂರ್ಣ ಬೆಂಬಲ ದೊರೆಯಿತು. ಆದ್ದರಿಂದ ಕಾರ್ಪೊರೇಷನ್ ಸಭೆಗಳನ್ನು ಸುಲಭವಾಗಿ ನಡೆಸಲು ಸಾಧ್ಯವಾಯಿತು. ಅಧಿಕಾರಿಗಳ ಸಹಕಾರವು ತುಂಬ ಚೆನ್ನಾಗಿತ್ತು. ಸರ್ಕಾರ ಮತ್ತು ಸಾರ್ವಜನಿಕರು ನನ್ನ ಕೆಲಸ ಕಾರ್ಯವನ್ನು ಮೆಚ್ಚಿದರೆಂದು ನನಗೆ ತೋರಿತು. ಒಬ್ಬ ಮೇಯರ್ ಅವಧಿ ಕಾರ್ಪೊರೇಷನ್ ಆಕ್ಟ್ ಪ್ರಕಾರ ಒಂದು ವರ್ಷ. ಮತ್ತೊಬ್ಬ ಮೇಯರ್ ಆಯ್ಕೆಯಾಗಿ ಬರುವವರೆಗೆ ಹಿಂದಿನ ಮೇಯರ್ ಇರುವುದು ಪದ್ಧತಿ. ಆದರೆ ೧೯೬೪ರ ಡಿಸೆಂಬರ್‌ನಲ್ಲಿ ಕಾರ್ಪೊರೇಷನ್ ಚುನಾವಣೆ ನಡೆಯಿತು. ಆಕ್ಟ್ ಪ್ರಕಾರ ಡಿಸೆಂಬರ್ ಕೊನೆಗೆ ನನ್ನ ಅಧಿಕಾರ ಮುಗಿಯಿತು. ಆದರೂ ಮುಂದಿನ ಮೇಯರ್ ಬರುವವರೆಗೆ ಇರಬಹುದೆಂದು ಅಧಿಕಾರಿಗಳು ಸಂಬಂಧಪಟ್ಟ ಸಚಿವರು ತಿಳಿಸಿದರು. ನಾನು ಅದಕ್ಕೆ ಒಪ್ಪಲಿಲ್ಲ. ಡಿಸೆಂಬರ್ ೩೧ಕ್ಕೆ ನನ್ನ ಅಧಿಕಾರ ಮುಕ್ತಾಯ. ಅದಾದ ಮೇಲೆ ಒಂದು ದಿನವೂ ಇರುವುದಿಲ್ಲವೆಂದು ಸ್ಪಷ್ಟಪಡಿಸಿದೆ.

ಕೊನೆಯ ದಿನ ಬೆಳಿಗ್ಗೆ ಸ್ಥಾಯಿ ಸಮಿತಿಗಳ ಅಧ್ಯಕ್ಷರ ಸಭೆ, ನೌಕರರ ಸಭೆ ಕರೆದು ಅವರುಗಳು ನೀಡಿದ ಸಹಕಾರಕ್ಕೆ ಕೃತಜ್ಞತೆ ಸಲ್ಲಿಸಿ ಮಹಡಿ ಮೇಲಿದ್ದ ಮೇಯರ್ ಕಛೇರಿಯಿಂದ ಕೆಳಗೆ ಇಳಿದು ಬಂದೆ. ಡ್ರೈವರ್ ಕಾರು ತಂದು ನಿಲ್ಲಿಸಿದ. ಸಹಾಯಕ ಗಂಗಯ್ಯ ಕಾರ್ ಬಾಗಿಲು ತೆಗೆದ. ಆ ದಿನ ನನ್ನ ಜತೆಯಲ್ಲಿದ್ದ ನನ್ನ ಸ್ನೇಹಿತರಾದ ಗುಂಡೂರಾಯರಿಗೆ ಒಂದು ಆಟೋರಿಕ್ಷಾ ತರುವಂತೆ ಮೊದಲೇ ಹೇಳಿದ್ದೆ. ಅದು ಬಂದ ಕೂಡಲೆ ಎಲ್ಲರಿಗೂ ನಮಸ್ಕಾರ ಹೇಳಿ ಅದರಲ್ಲಿ ಹತ್ತಿ ಕುಳಿತೆ. ಕಾರಿನ ಡ್ರೈವರ್ ಹಕ್, ಸಹಾಯಕ ಗಂಗಯ್ಯ ಮೊದಲುಗೊಂಡು ಅನೇಕ ಅಧಿಕಾರಿಗಳಿಗೆ, ನೌಕರರಿಗೆ, ಅಲ್ಲಿ ನೆರೆದಿದ್ದ ಸಾರ್ವಜನಿಕರಿಗೆ ಆ ದಿನ ಮೇಯರ್ ಸ್ಥಾನ ಬಿಟ್ಟು ಹೋಗುತ್ತೇನೆಂದು ಯಾರಿಗೂ ಗೊತ್ತಿರಲಿಲ್ಲ. ಕೆಲವು ಅಧಿಕಾರಿಗಳು ಕಣ್ಣು ನೀರು ಹಾಕಿಕೊಂಡರು. ಕೆಲವರು ಸಣ್ಣಪುಟ್ಟ ನೌಕರರು ಹೋಗಬೇಡಿ ಹೋಗಬೇಡಿ ಎಂದು ಬಟ್ಟೆ ಹಿಡಿದು ಎಳೆಯಲು ಪ್ರಾರಂಭಿಸಿದರು. ಆ ದೃಶ್ಯ ಕೆಲವರಿಗೆ ದುಃಖವನ್ನು ಕೆಲವರಿಗೆ ಮನರಂಜನೆಯನ್ನು ಒದಗಿಸಿತು. ಗುಂಡೂರಾಯರು ರಿಕ್ಷಾದವನಿಗೆ ಕಣ್ ಸನ್ನೆ ಮಾಡಿದರು. ಅವನು ಹತ್ತೇ ನಿಮಿಷದಲ್ಲಿ ನನ್ನನ್ನು ಮನೆಗೆ ತಂದು ಬಿಟ್ಟು ಕೊಟ್ಟ. ಕಾರ್ಪೊರೇಷನ್ ಬಿಟ್ಟು ಬರುವಾಗ, ಹೊತ್ತಿದ್ದ ಯಾವುದೋ ಭಾರಿ ಹೊರೆ ಕೆಳಗೆ ಇಳಿದಂತಾಯಿತು. ನಗು ನಗುತ್ತಾ ಸಂತೋಷವಾಗಿಯೇ ಮನೆಗೆ ಬಂದೆ. ಮನೆಯವರೆಲ್ಲರಿಗೂ ಆಶ್ಚರ್ಯ. ಅಲ್ಲಿಂದ ಈಚಿನ ವರುಷಗಳ ಅವಧಿಯಲ್ಲಿ ಕಾರ್ಪೊರೇಷನ್ ಮೆಟ್ಟಿಲು ಹತ್ತಿರುವುದು ಕೇವಲ ಕೆಲವು ಸಾರಿ ಮಾತ್ರ.

ಇಂಥ ಜವಾಬ್ದಾರಿ ಕೆಲಸದ ಹೊಣೆ ಹೊತ್ತಾಗ ಕೆಲವು ಕಾಲ ಮನೆ ಮಠ ಮರೆಯ ಬೇಕಾಗುತ್ತದೆ. ಕಾಲದ ಪ್ರಶ್ನೆಯೇ ದೊಡ್ಡದು. ಆಗ ನನಗೆ ಗೋಪಿ (ಗೋಪಾಲಕೃಷ್ಣ) ಎಂಬ ಚಿಕ್ಕ ಮಗು ಇತ್ತು. ಆ ಮಗುವನ್ನು ವಾರದಲ್ಲಿ ಒಂದೋ ಎರಡೂ ಬಾರಿ ಮಾತನಾಡಿಸಿದ್ದರೆ ಹೆಚ್ಚು. ಬೆಳಿಗ್ಗೆ ನಾನು ಹೊರಡುವ ವೇಳೆಗೆ ಗೋಪಿ ಇನ್ನೂ ಮಲಗಿರುತ್ತಿದ್ದ. ಮಧ್ಯಾಹ್ನ ಮನೆಗೆ ಬಂದಾಗಲು ಅಷ್ಟೆ. ರಾತ್ರಿ ತಡವಾಗಿ ನಾನು ಮನೆಗೆ ಬರುತ್ತಿದ್ದುದರಿಂದ ಆಗಲೂ ಗೋಪಿ ನಿದ್ದೆ ಹೊಡೆಯುತ್ತಿದ್ದ. ನನ್ನ ಶ್ರೀಮತಿ ಯಶೋದಮ್ಮನವರು ನಾನು ಮೇಯರಾಗಿದ್ದ ಅವಧಿಯಲ್ಲಿ ಯಾವ ಅಸಹಕಾರವನ್ನು ನನಗೆ ತೋರಲಿಲ್ಲ. ಅದರಿಂದ ಬಹುಮಟ್ಟಿಗೆ ಮನೆ ಮಠ ಮರೆತು ಕಾರ್ಪೊರೇಷನ್ ಕೆಲಸ ಮಾಡುವಂತಾಯಿತು.

ಮೇಯರ್ ಸ್ಥಾನ ಬಿಟ್ಟು ಬಂದ ಒಂದು ವಾರದೊಳಗೆ ಕೆಲವು ನಾಗರೀಕರು ಮತ್ತು ಶಶಿಕಲಾವಿದರು ನನಗಾಗಿ ಒಂದು ಗೌರವ ಸಮಾರಂಭವನ್ನು ಏರ್ಪಡಿಸಿ ಒಂದು ಸನ್ಮಾನ ಪತ್ರವನ್ನು ಅರ್ಪಿಸಿದರು. ಆ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮುಖ್ಯಮಂತ್ರಿ ನಿಜಲಿಂಗಪ್ಪ ನವರು ನನ್ನ ಬಗ್ಗೆ ಮೆಚ್ಚುಗೆ ಸೂಚಿಸಿ ಮಾತನಾಡಿದರು. ಅಭಿನಂದನಾ ಭಾಷಣ ಮಾಡಿದ ಗುಬ್ಬಿ ವೀರಣ್ಣನವರು 'ನಾರಾಯಣರು ನಾಟಕ ಕಂಪನಿ ಸೇರಿದ್ದರೆ ಒಳ್ಳೆ ನಟರಾಗುತ್ತಿದ್ದರು' ಎಂದು ತಮ್ಮ ಅಭಿಮಾನ ವ್ಯಕ್ತ ಪಡಿಸಿದರು.

'ಆಕಾಶ ನೋಡಲು ನೂಕು ನುಗ್ಗಲೇಕೆ' ? ಎಂಬ ಗಾದೆ ಮಾತಿನಂತೆ ನಿಜವಾದ ಸೇವೆ ಮಾಡುವವನಿಗೆ ಸೇವಾಕಾರ್ಯಗಳ ಕೊರತೆಯೆ ? ನಾನು ಮೇಯರಾಗುವ ಮೊದಲು ೫-೬ ವರ್ಷಗಳಿಂದ ಡಿ.ವಿ.ಜಿ. ಯವರನ್ನು ಕಂಡು ಮಾತನಾಡಲು ಆಗಾಗ ಅವರ ಮನೆಗೆ ಹೋಗುತ್ತಿದ್ದೆ. ಕಾರಣಾಂತರದಿಂದ ನಾನು ಹೋಗುವುದು ಕೆಲವು ದಿನಗಳು ತಡವಾದ ಕೂಡಲೆ ಅವರು ಒಂದು ಕಾರ್ಡು ಬರೆದು ಬಂದು ಕಾಣುವಂತೆ ತಿಳಿಸುತ್ತಿದ್ದರು. ಮೇಯರಾಗಿದ್ದ ಒಂದೆರಡು ತಿಂಗಳಲ್ಲೆ ಎಂದಿನಂತೆ ಅವರನ್ನು ಕಾಣಲು ಹೋದಾಗ ರಾಮಾಯಣ ಮಹಾಭಾರತದ ವಿಷಯ ಪ್ರಸ್ತಾಪಕ್ಕೆ ಬಂತು. ಅರಮನೆ ಪ್ರಕಟಣೆಗಳಾದ ಚಾಮರಾಜೋಕ್ತಿ ವಿಲಾಸ ಕನ್ನಡ ರಾಮಾಯಣ, ವಾಣಿವಿಲಾಸ ಮಹಾಭಾರತ ಇವುಗಳು ಪುನರ್ ಮುದ್ರಣವಾದಲ್ಲಿ ಮಹಾಜನರಿಗೆ ತುಂಬ ಉಪಕಾರವಾಗುತ್ತದೆ ಎಂದು ತಿಳಿಸಿದೆ. ಅದನ್ನು ಅವರು ಒಪ್ಪಿ ಅವನ್ನು ಪುನರ್‌ಮುದ್ರಿಸುವ ಹೊಣೆಯನ್ನು ನನಗೇ ಒಪ್ಪಿಸಿದರು. ಅವರ ಸೂಚನೆಯಂತೆ 'ಶ್ರೀಮದ್ರಾಮಾಯಣ ಮಹಾಭಾರತಾದಿ ಪ್ರಕಟಣಾ ಸಮಿತಿ' ಎಂದು ಒಂದು ಸಮಿತಿಯನ್ನು ರಚಿಸಲಾಯಿತು. ರಾಜ್ಯದ ಶಿಕ್ಷಣ ಸಚಿವರಾಗಿದ್ದ ವಿ. ವೆಂಕಟಪ್ಪನವರು ಸಮಿತಿಯ ಅಧ್ಯಕ್ಷರು. ನಾನು ಮತ್ತು ಶ್ರೀ ವಿ. ಎಸ್. ಕೃಷ್ಣಯ್ಯರ್ ಅವರು ಕಾರ್ಯದರ್ಶಿಗಳು. ಯಾದಾಳಂ ಗಂಗಾಧರ ಶೆಟ್ಟಿಯವರು ಖಜಾಂಚಿಗಳು. ಶ್ರೀಗಳಾದ ಡಿ.ವಿ. ಗುಂಡಪ್ಪನವರು, ಪಾಮಡಿ ಸುಬ್ಬರಾಮಶೆಟ್ಟಿ, ಎಸ್.ಎಲ್.ಮನ್ನಾಜಿರಾವ್, ಎಚ್.ಕೆ. ವೀರಣ್ಣಗೌಡ, ಕೆ. ಪುಟ್ಟಸ್ವಾಮಿ ಮುಂತಾದವರು ಸದಸ್ಯರು. ಶ್ರೀ ಮನ್ಮಹಾರಾಜ ಜಯಚಾಮರಾಜ ಒಡೆಯರವರು ಮಹಾ ಪೋಷಕರು. ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಪೋಷಕರು. ವಿದ್ವಾನ್ ಎನ್. ರಂಗನಾಥ ಶರ್ಮ ಅವರು ಪ್ರಧಾನ ಸಂಪಾದಕರು. ಅವರ ನೇತೃತ್ವದಲ್ಲಿ ಒಂದು ಸಂಪಾದಕ ಮಂಡಲಿ. ಇದೊಂದು

ಭಾರಿ ಯೋಜನೆ. ನಾನು ಶ್ರೀ ಪಿ.ಎಸ್. ಕೃಷ್ಣಯ್ಯರ್ ಅವರು ಕೆಲವು ಜನಗಳನ್ನು ಕಂಡು ಸ್ವಲ್ಪ ಹಣ ಕೂಡಿಸಿ ಕೆಲಸ ಆರಂಭಿಸಿದೆವು. ಶಂಕರ ಮಠದ ಛತ್ರದಲ್ಲಿ ಇದರ ಕಚೇರಿ. ಈ ಕೆಲಸ ೨-೩ ವರ್ಷ ನಡೆದು 'ಚಾಮರಾಜೋಕ್ತಿ ವಿಲಾಸ' ಕನ್ನಡ ರಾಮಾಯಣ ಮೊದಲ ಮತ್ತು ಎರಡನೆಯ ಸಂಪುಟ ಪ್ರಕಟವಾದುವು. ಇದೊಂದು ಮುಖ್ಯವಾದ ಕಾರ್‍ಯ ಆದಂತಾಯಿತು. ಮುಂದಕ್ಕೆ ಆ ಕೆಲಸ ಕುಂಠಿತವಾಯಿತು. ಈಗಲೂ ಆ ರಾಮಾಯಣ ಗ್ರಂಥದ ಮಾರಾಟದಿಂದ ಬಂದ ಹಣ ಬ್ಯಾಂಕಿನಲ್ಲಿ ಸಮಿತಿಯ ಹೆಸರಿನಲ್ಲಿದೆ. ಸಮಿತಿಯ ಉದ್ದೇಶದಂತೆ ಮುಂದಿನ ಕೆಲಸ ನಡೆಸುವುದು ಮುಂಬರುವ ಸದಸ್ಯರನ್ನು ಅವಲಂಬಿಸಿದೆ.

ನನ್ನ ಮೇಯರ್ ಅವಧಿಯಲ್ಲಿ ಹೊಸದಾಗಿ ೩೬ ಹಳ್ಳಿಗಳನ್ನು ಕಾರ್ಪೊರೇಷನ್ನಿಗೆ ಸೇರಿಸಿಕೊಳ್ಳಲಾಗಿತ್ತು. ಆ ಪೈಕಿ ಮೈಸೂರು ರಸ್ತೆ, ಬ್ಯಾಟರಾಯನಪುರವು ಒಂದು. ಅಲ್ಲಿಗೆ ಸಮೀಪದಲ್ಲಿ ಅನೇಕ ಕಾರ್ಖಾನೆಗಳು. ಆ ಭಾಗದ ಮಕ್ಕಳಿಗೆ ಹೈಸ್ಕೂಲ್ ಸೌಲಭ್ಯವಿರಲಿಲ್ಲ. ಅಲ್ಲಿಯ ಜನರನ್ನು ಒಂದೆಡೆ ಸೇರಿಸಿ ಮೊದಲು ಹೆಣ್ಣುಮಕ್ಕಳಿಗಾಗಿ ಒಂದು ಪ್ರೌಢಶಾಲೆಯನ್ನು ತೆರೆಯಬೇಕೆಂದು ನಿಶ್ಚಯಿಸಿ ಶಾರದಾ ವಿದ್ಯಾಪೀಠ ಎಂಬ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಪ್ರಾರಂಭದಲ್ಲಿ ನಾನೇ ಅದರ ಅಧ್ಯಕ್ಷ. ಚೇರ್ಮನ್ ನರಸಿಂಹಯ್ಯನವರು, ಆವಲಹಳ್ಳಿ ಪಟೇಲ್ ಚಿಕ್ಕಹನುಮಯ್ಯನವರು, ರಂಗಸ್ವಾಮಪ್ಪನವರು, ಲಕ್ಷ್ಮೀನರಸಿಂಹಯ್ಯನವರು, ಅರ್ಚಕರಾದ ಕಣ್ಣುಭಟ್ಟರು, ಕಂಟ್ರ್ಯಾಕ್ಟರ್ ತಿಮ್ಮಯ್ಯನವರು ಮುಂತಾದವರ ಸಹಾಯದಿಂದ ಕೆಲವು ತಿಂಗಳಲ್ಲಿ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಶಾರದ ಬಾಲಕಿಯರ ಪ್ರೌಢಶಾಲೆ ಆರಂಭವಾಯಿತು. ಕಾರ್ಪೊರೇಷನ್ ಸಹ ೨೫ ಸಾವಿರ ರೂಪಾಯಿ ಸಹಾಯ ಧನ ನೀಡಿತು. ಮುಂದೆ ನಾನು ಪರಿಷತ್ತಿನ ಅಧ್ಯಕ್ಷನಾದಾಗ ಕೆಲಸ ಕಾರ್ಯಗಳ ಒತ್ತಡ ಹೆಚ್ಚಾದ್ದರಿಂದ ಶಾರದಾ ವಿದ್ಯಾಪೀಠಕ್ಕೆ ರಾಜೀನಾಮೆ ಸಲ್ಲಿಸಿದೆ. ಈಗ ಶಾರದಾ ವಿದ್ಯಾಪೀಠದ ಆಶ್ರಯದಲ್ಲಿ ನರ್ಸರಿ ಶಾಲೆ, ಪ್ರಾಥಮಿಕ ಶಾಲೆ, ಪ್ರೌಢಶಾಲೆ ಕಾಲೇಜುಗಳು ನಡೆಯುತ್ತಿರುವುದು ನನಗೆ ಸಂತೋಷವನ್ನುಂಟುಮಾಡಿದೆ.

ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿ ಜೈಲುವಾಸ ಅನುಭವಿಸಿದ ಎಷ್ಟೋ ಮಂದಿ ರಾಜಕೀಯ ಸಂತ್ರಸ್ಥರನ್ನು ಸರ್ಕಾರ ಸಂರಕ್ಷಿಸಿತ್ತು. ಅವರನ್ನೆಲ್ಲ ಸಂಘಟಿಸಿ ಗಾಂಧಿ ಭವನದಲ್ಲಿ ಒಂದು ಸಭೆ ಕರೆದು, ಆ ಸಭೆಗೆ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರನ್ನು ಆಹ್ವಾನಿಸಿ, ಅವರ ಮುಂದೆ ಈ ಸಂತ್ರಸ್ಥರ ಕಷ್ಟ ಸುಖಗಳನ್ನು ನಿವೇದಿಸಲಾಯಿತು. ಇದರಿಂದ ಸ್ವಾತಂತ್ರ್ಯ ಹೋರಾಟಗಾರರ ವಿಷಯದಲ್ಲಿ ಸರಕಾರದ ಗಮನ ಹೆಚ್ಚಾಯಿತು.

೧೯೬೭ರ ನವೆಂಬರ್ ಒಂದರಂದು ನಡೆಸಬೇಕಾದ ಕನ್ನಡ ರಾಜ್ಯೋತ್ಸವದ ಕಾರ್ಯಕ್ರಮವನ್ನು ಮಾಮೂಲು ರೀತಿ ಸಭೆ ಮಾಡಿ ಮುಕ್ತಾಯಗೊಳಿಸುವುದರ ಬದಲು ಯಾವುದಾದರೂ ರಚನಾತ್ಮಕ ರೀತ್ಯ ನಡೆಸಬೇಕೆಂದು ನಿಶ್ಚಯಿಸಿ ಮೊದಲು ಕೆಲವು ಹಿರಿಯ ಸಾಹಿತಿಗಳ ಸಲಹೆ ಪಡೆಯಲಾಯಿತು. ತರುವಾಯ ನೂರಾರು ಕನ್ನಡ ಕಾರ್ಯಕರ್ತರನ್ನು ಬರಮಾಡಿಕೊಂಡು ಅವರೊಡನೆ ಚರ್ಚಿಸಿ, ಆ ವರ್ಷದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಸಾಹಿತ್ಯ

ಪ್ರಸಾರಕ್ಕೇ ಮೀಸಲಿಡಬೇಕೆಂದು ತೀರ್ಮಾನಿಸಲಾಯಿತು. ಅದಕ್ಕಾಗಿ ಒಂದು ಸಮಿತಿಯೇ ರಚನೆಯಾಯಿತು. ಆ ಸಮಿತಿಯೇ 'ಕನ್ನಡ ರಾಜ್ಯೋತ್ಸವ ಸಾಹಿತ್ಯ ಪ್ರಚಾರ ಸಮಿತಿ'. ಈ ಸಮಿತಿಗೆ ಡಾ॥ ರಂ. ಶ್ರೀ. ಮುಗಳಿ ಅವರು ಅಧ್ಯಕ್ಷರು. ನಾನು ಕಾರ್ಯಾಧ್ಯಕ್ಷ. ಶ್ರೀ ಆರ್. ಹೆಚ್. ರಾಜು ಮತ್ತು ಶ್ರೀ ಗುಂಡೂರಾಯರು ಕಾರ್ಯದರ್ಶಿಗಳು. ಶ್ರೀ ಓ. ಜೀ. ಶಾಂತವೀರಯ್ಯನವರು ಖಜಾಂಚಿಗಳು. ಕನ್ನಡ ನಾಡಿನಲ್ಲಿರುವ ಎಲ್ಲ ಪ್ರಕಾಶನ ಸಂಸ್ಥೆಗಳಿಗೂ ಖಾಸಗಿ ಪ್ರಕಾಶಕರಿಗೂ ಪತ್ರ ಬರೆದು ಕನ್ನಡ ಪುಸ್ತಕಗಳನ್ನು ತರಿಸಿಕೊಳ್ಳುವುದು, ಒಂದು ವಾರಕಾಲ ನಗರದ ಬೇರೆ ಬೇರೆ ಬಡಾವಣೆಗಳಲ್ಲಿ ಪುಸ್ತಕ ಪ್ರದರ್ಶನ ಏರ್ಪಡಿಸುವುದು, ಪುಸ್ತಕ ಕೊಳ್ಳುವವರಿಗೆ ಶೇಕಡ ೧೦ರಷ್ಟು ರಿಯಾಯಿತಿ ಕೊಡುವುದು. ಕಡೆಯ ದಿನ ಕೆಲವು ಮುಖ್ಯ ಬಡಾವಣೆಗಳಲ್ಲಿ ಕಾರ್ಯಕರ್ತರು ಮನೆಯಿಂದ ಮನೆಗೆ ಪಾದಯಾತ್ರೆ ಹೋಗಿ ಪುಸ್ತಕ ಮಾರಾಟ ಮಾಡುವುದು. ಮಾರಾಟವಾದ ಪುಸ್ತಕಗಳ ಮೇಲೆ ಪ್ರಕಾಶಕರು ಕನಿಷ್ಠ ಶೇಕಡ ೨೫ರಂತೆ ಕಮಿಷನ್ ಕೊಡುವುದು. ಕಾರ್ಯಕ್ರಮ ಮುಗಿದ ಎರಡು ವಾರದೊಳಗೆ ಪ್ರಕಾಶನ ಸಂಸ್ಥೆಗಳಿಗೆ ಮಾರಾಟವಾಗದ ಪುಸ್ತಕ ಮತ್ತು ಮಾರಾಟವಾದ ಪುಸ್ತಕಗಳ ಬೆಲೆ, ಕಮಿಷನ್ ಹಿಡಿದುಕೊಂಡು ಕೊಡುವುದು. ಈ ರೀತಿ ಕೆಲವು ನಿಯಮಗಳನ್ನು ಮೊದಲೇ ಗೊತ್ತುಮಾಡಿ ಪ್ರಕಾಶನ ಸಂಸ್ಥೆಗಳಿಗೆ ಮತ್ತು ಖಾಸಗಿ ಪ್ರಕಾಶಕರಿಗೆ ಪತ್ರ ಕಳುಹಿಸಿಕೊಡಲಾಯಿತು. ಪತ್ರ ಹೋದ ೧೦-೧೨ ದಿನಗಳಲ್ಲೇ ಸಾವಿರಾರು ಪುಸ್ತಕಗಳು ಸಮಿತಿ ಹೆಸರಿಗೆ ಲಾರಿ ಪಾರ್ಸಲ್, ರೈಲ್ವೆ ಪಾರ್ಸಲ್ ಮತ್ತು ಅಂಚೆ ಮೂಲಕ ಬಂದು ಬಿದ್ದವು. ಅವುಗಳನ್ನು ವಿಂಗಡಿಸುವುದೇ ಒಂದು ದೊಡ್ಡ ಕೆಲಸ. ಪುಸ್ತಕಗಳು ಕೊಳೆಯಾಗದಂತೆ ಇಡಲು ಕೆಲವು ಮರದ ಬೀರುಗಳನ್ನು ಬಾಡಿಗೆಗೆ ತರಲಾಯಿತು. ಪುಸ್ತಕಗಳು ಬಂದಂತೆ ಅವುಗಳನ್ನು ರಿಜಿಸ್ಟರಿನಲ್ಲಿ ಬರೆದು ವಿಂಗಡಿಸಲಾಯಿತು. ಬೇರೆಲ್ಲೂ ಜಾಗ ಸಿಗದಿದ್ದ ಕಾರಣ ವಿನೋದ ಕಾರ್ಯಾಲಯವೆ ಕನ್ನಡ ರಾಜ್ಯೋತ್ಸವ ಸಾಹಿತ್ಯ ಪ್ರಚಾರ ಸಮಿತಿಯ ಕಚೇರಿಯಾಯಿತು. ಆ ಎರಡು ಮೂರು ವಾರ ಪ್ರೆಸ್ ಕೆಲಸ ನಿಂತುಹೋಯಿತು. ಬಂದವರಿಗೆಲ್ಲ, ಪುಸ್ತಕದ ಬಂಡಲ್ ಬಿಚ್ಚುವುದು, ಪುಸ್ತಕ ಜೋಡಿಸುವುದೇ ಕೆಲಸವಾಯಿತು. ಈ ಕೆಲಸ ಮಾಡಲು ಹಗಲು ಸಾಕಾಗದೆ ರಾತ್ರಿ ೧೦-೧೧ ಗಂಟೆಯವರೆಗೂ ವಿಶೇಷ ವಿದ್ಯುತ್ ದೀಪಗಳನ್ನು ಹಾಕಿಕೊಂಡು ಪುಸ್ತಕ ಜೋಡಿಸಲಾಯಿತು. ಕಾರ್ಯಕರ್ತರಿಗೆ ಈ ಕೆಲಸ ತುಂಬ ಪ್ರಿಯವಾದ ಕೆಲಸವಾಗಿತ್ತು. ತಾವು ನೋಡದಿದ್ದ ಎಷ್ಟೋ ಪುಸ್ತಕಗಳನ್ನು ಕಣ್ಣಾರೆ ಕಾಣುವಂತಾಯಿತು. ಒಂದು ರೀತಿಯಲ್ಲಿ ಮದುವೆ ಮನೆ ವಾತಾವರಣ. ಎಷ್ಟೋ ಜನ ಕಾರ್ಯಕರ್ತರು ತಮ್ಮ ತಮ್ಮ ಕೆಲಸಗಳಿಗೆ ರಜಾಹಾಕಿ ಬಂದಿದ್ದರು. ಈ ಬಗೆಯ ಕೆಲಸ ಹಿಂದೆಂದೂ ನಡೆದಿರಲಿಲ್ಲ. ಎಲ್ಲರಿಗೂ ಏನೋ ಉತ್ಸಾಹ. ಪತ್ರಿಕಾ ಪ್ರಚಾರ ಬೇರೆ. ಹೀಗಾಗಿ ನಗರದ ಬೇರೆ ಬೇರೆ ಭಾಗಗಳಲ್ಲಿ ಏರ್ಪಡಿಸಿದ್ದ ಎಲ್ಲ ಪುಸ್ತಕಗಳ ಪ್ರದರ್ಶನಗಳಿಗೂ ನೂರಾರು ಜನರು ಕ್ಯೂ ಕಟ್ಟಿ ನಿಲ್ಲುತ್ತಿದ್ದರು. ನಿರೀಕ್ಷೆಗೆ ಮೀರಿ ಪುಸ್ತಕ ಕೊಳ್ಳುತ್ತಿದ್ದರು. ಅನೇಕ ಸಾವಿರ ರೂಪಾಯಿಗಳ ಪುಸ್ತಕ ಖರ್ಚಾದವು. ಕಡೆಯ ದಿನ ಮಲ್ಲೇಶ್ವರಂ ಪ್ರದೇಶದಲ್ಲಿ ಮನೆಯಿಂದ ಮನೆಗೆ ಹೋಗಿ ಪುಸ್ತಕ ಮಾರಾಟ ಮಾಡುವ ಕಾರ್ಯಕ್ರಮ ಬಹು ಅದ್ಭುತವಾಗಿ ನಡೆಯಿತು. ಒಂದೊಂದು

ತಂಡಕ್ಕೆ ಒಬ್ಬೊಬ್ಬ ನಾಯಕ. ಒಂದೊಂದು ತಂಡದಲ್ಲೂ ೧೦-೧೨ ಜನ ಕಾರ್ಯಕರ್ತರು. ಪ್ರತಿಯೊಬ್ಬ ಕಾರ್ಯಕರ್ತನ ಹೆಗಲ ಮೇಲೂ ಪುಸ್ತಕ ತುಂಬಿದ ಒಂದೊಂದು ಚೀಲ. ಡಾ॥ ರಂ. ಶ್ರೀ. ಮುಗಳಿ, ಶ್ರೀ ಪಿ.ಎಸ್. ನಾರಾಯಣರಾವ್ ಶ್ರೀಮತಿ ಚಿ. ನಾ. ಮಂಗಳಾ, ಶ್ರೀ ಮಂಗಳವೇಡೆ ಶ್ರೀನಿವಾಸರಾವ್ ಮುಂತಾದ ಹಿರಿಯರು, ಸಾಹಿತಿಗಳು, ತಂಡದ ನಾಯಕರಾಗಿದ್ದುದು ಕಾಯಕರ್ತರಿಗೆ ಒಂದು ವಿಶೇಷ ಉತ್ಸಾಹ ತಂದುಕೊಟ್ಟಿತು. ಎಂದಿನಂತೆ ಮಂಡಿಪೇಟೆ ಶ್ರೀ ಎಸ್. ರಾಜಶೇಖರಯ್ಯನವರು ಮಧ್ಯಾಹ್ನ ಊಟದ ವ್ಯವಸ್ಥೆ ಸಂಚಾಲಕರು. ಈ ಕಾರ್ಯಕ್ರಮದಿಂದ ಸಾಹಿತಿ, ಪ್ರಕಾಶಕರಿಗೆ ಪುಸ್ತಕ ಮಾರಾಟದಿಂದ ಆರ್ಥಿಕವಾಗಿ ತಕ್ಕಮಟ್ಟಿಗೆ ಸಹಾಯವಾದರೂ ಜನರು ಕನ್ನಡ ಪುಸ್ತಕಗಳನ್ನು ಕಣ್ಣೆತ್ತಿ ನೋಡುವಂತಾಯಿತು. ಎಲ್ಲಕ್ಕೂ ಮಿಗಿಲಾದ ಲಾಭವೆಂದರೆ ಕಾರ್ಯಕರ್ತರಲ್ಲಿ ಆದ ಸಂಘಟನೆ. ಎಲ್ಲೆಲ್ಲೋ ಕೆಲಸ ಮಾಡುತ್ತಿದ್ದವರು, ಪರಸ್ಪರ ಪರಿಚಯುವಿಲ್ಲದಿದ್ದವರು ಪರಿಚಯ ಮಾಡಿಕೊಂಡರು. ಈ ಸಾಹಿತ್ಯ ಪ್ರಸಾರಕಾರ್ಯದಲ್ಲಿ ತೊಡಗಿದ ಕಾರ್ಯಕರ್ತರಿಗೂ ಸಾಹಿತ್ಯ ಪ್ರೇಮ ಬೆಳೆಯಿತು. ಅವರುಗಳೆ ಸಾವಿರಾರು ರೂಪಾಯಿ ಪುಸ್ತಕ ಕೊಂಡರು. ಸಾಹಿತ್ಯ ಪ್ರಸಾರ ಯೋಜನೆ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಪ್ರಕಾಶಕರು ತುಂಬ ಸಂತೋಷಪಟ್ಟರು. ಕಡೆಯಲ್ಲಿ ಜಮಾ-ಖರ್ಚು ಪಟ್ಟಿಯೊಡನೆ ವರದಿ ಮಂಡನೆಗೆ ಎಲ್ಲರಿಂದಲೂ ಒಪ್ಪಿಗೆ.

ಬೆಂಗಳೂರಿನಲ್ಲಿ ಇದೇ ಪ್ರಥಮವಾಗಿ ನಡೆದ ಸಾಹಿತ್ಯ ಪ್ರಸಾರ ಕಾರ್ಯಕ್ರಮ ಪತ್ರಿಕೆಗಳ ಮೂಲಕ ಸಾಕಷ್ಟು ಪ್ರಚಾರ ಪಡೆಯಿತು. ಬೆಂಗಳೂರಿನಲ್ಲಿ ನಡೆದ ಈ ಕಾರ್ಯಕ್ರಮದ ಯಶಸ್ಸನ್ನು ಕಂಡು ರಾಜ್ಯದ ಕೆಲವು ಕಡೆಗಳಲ್ಲಿಯೂ ಇಂಥ ಕಾರ್ಯ ಕ್ರಮಗಳು ನಡೆದವು. ಬೆಂಗಳೂರಿನಲ್ಲಿ ಆಗ ಸಂಘಟಿತರಾದ ಕಾರ್ಯಕರ್ತರ ಗುಂಪು ಇಂದಿಗೂ ಕನ್ನಡದ ಯಾವ ಕೆಲಸ ಮಾಡಲೂ ಸಿದ್ಧವಾಗಿದೆ. ಆದರೆ ಕೆಲಸ ಮಾಡಿಸುವ ಅಣ್ಣಗಳೆ ಇಲ್ಲವಾಗಿದ್ದಾರೆ.

ಸಾಹಿತ್ಯ ಪರಿಷತ್ತಿಗೆ ಕೆಲವು ವರ್ಷಗಳ ಹಿಂದಿನಿಂದ ನಾನು ಸದಸ್ಯನಾಗಿದ್ದೆ. ಪರಿಷತ್ತಿನ ಅಂಗರಚನೆಯ ತಿದ್ದುಪಡಿ ವಿಷಯ ಪ್ರೊ॥ ಜಿ. ವೆಂಕಟಸುಬ್ಬಯ್ಯನವರು ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ಸರ್ವಸದಸ್ಯರ ಸಭೆ ಮುಂದೆ ಬಂತು. ಆ ಸಭೆಯಲ್ಲಿ ನಾನು ಹಾಜರಿದ್ದು ನನಗೆ ತೋಚಿದ ಕೆಲವು ಸಲಹೆಗಳನ್ನು ಸೂಚಿಸಿದೆ. ನನ್ನ ಅನೇಕ ಸಲಹೆಗಳನ್ನು ಸಭೆ ಒಪ್ಪಿತು ಮತ್ತು ಅದೇ ರೀತಿ ಅಂಗರಚನೆ ತಿದ್ದುಪಡಿಯಾಯಿತು.

೧೯೭೯ರ ಜನವರಿಯಲ್ಲಿ ಒಂದು ಸಂಜೆ ಡಾ॥ ರಂ. ಶ್ರೀ. ಮುಗಳಿಯವರು ನಮ್ಮ ಷಾಪಿಗೆ ಬಂದು "ಇಷ್ಟರಲ್ಲೇ ಪರಿಷತ್ತಿನ ಚುನಾವಣೆ ನಡೆಯುತ್ತದೆ. ನಿಜವಾದ ಅರ್ಥದಲ್ಲಿ ಪರಿಷತ್ತು ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯಾಗಿ ಬೆಳೆಯಬೇಕಾಗಿದೆ. ನಿಮ್ಮಂಥವರು ಅಧ್ಯಕ್ಷರಾಗಿ ಬಂದರೆ ಅದನ್ನು ಬೆಳೆಸಬಹುದು" ಎಂದು ಹೇಳಿದರು. ಅದಕ್ಕೆ ನಾನು "ನನ್ನ ಸೇವಾ ಕ್ಷೇತ್ರವೇ ಬೇರೆ. ಪರಿಷತ್ತಿನ ಜವಾಬ್ದಾರಿ ನನಗೆ ಬೇಡಿ" ಎಂದು ಸ್ಪಷ್ಟವಾಗಿ ತಿಳಿಸಿದೆ. ಇನ್ನೊಂದು ದಿನ ಅಂದಿನ ಅಧ್ಯಕ್ಷರಾಗಿದ್ದ ಪ್ರೊ॥ ಜಿ. ವೆಂಕಟಸುಬ್ಬಯ್ಯನವರನ್ನೂ ನನ್ನನ್ನೂ ತಮ್ಮ ಕಚೇರಿಗೆ ಬರಮಾಡಿಕೊಂಡು. ಇನ್ನೊಮ್ಮೆ ನೀವೇ ಏಕೆ ಅಧ್ಯಕ್ಷರಾಗಬಾರದು" ಎಂದು

ಶ್ರೀ ವೆಂಕಟಸುಬ್ಬಯ್ಯನವರನ್ನು ಕೇಳಿದರು. ಅದಕ್ಕವರು "ನನಗೆ ಸಾಕಾಗಿದೆ. ನಾರಾಯಣರು ಸ್ಪರ್ಧಿಸಲಿ; ನಾವೆಲ್ಲ ಬೆಂಬಲ ನೀಡೋಣ" ಎಂದರು. ಮುಗಳಿಯವರು ನನ್ನ ಕಡೆ ತಿರುಗಿದರು. ನಾನು ಸಾಧ್ಯವಿಲ್ಲ ಎಂಬ ಹಿಂದಿನ ಉತ್ತರವನ್ನೇ ಕೊಟ್ಟೆ. "ಆಗಲಿ ನೋಡೋಣ ಕಾರ್ಯಕರ್ತರನ್ನು ವಿಚಾರಿಸುತ್ತೇನೆ. ಅವರು ಯಾರ ಹೆಸರು ಹೇಳುವರೋ ನೋಡೋಣ, ನೀವು ಹೋಗಿ" ಎಂದು ನಮ್ಮಿಬ್ಬರನ್ನು ಕಳುಹಿಸಿಕೊಟ್ಟರು. ಕೆಲವು ದಿನಗಳಾದ ಮೇಲೆ "ಕಾರ್ಯಕರ್ತರು ಮತ್ತು ಅನೇಕ ಸಾಹಿತಿಗಳು, ನಿಮ್ಮ ಹೆಸರನ್ನೇ ಹೇಳುತ್ತಾರೆ. ದಯವಿಟ್ಟು ನೀವೇ ಸ್ಪರ್ಧಿಸಬೇಕು" ಎಂದು ಒತ್ತಾಯ ಪಡಿಸಿದರು. ಅದಕ್ಕೂ ನಾನು ಹಿಂದಿನ ಉತ್ತರವನ್ನೇ ಹೇಳಿದೆ. ಸ್ಪರ್ಧಿಸಲು ಅರ್ಜಿ ಸಲ್ಲಿಸುವ ಕಾಲ ಬಂತು. ನಾನಿನ್ನೂ ಮೀನಾ ಮೇಷ ಎಣಿಸುತ್ತಿದ್ದೆ. ಎಲ್ಲ ಕಡೆಯಿಂದಲೂ ಒತ್ತಾಯ ಶುರುವಾಯಿತು. ಮನಸ್ಸಿಲ್ಲದ ಮನಸ್ಸಿನಿಂದ ಸ್ಪರ್ಧಿಸಲು ಅರ್ಜಿಗೆ ರುಜು ಹಾಕಿಕೊಟ್ಟೆ. ಒಂದಲ್ಲ ಮೂರು ಅರ್ಜಿಗೆ ನನ್ನಿಂದ ರುಜು ಮಾಡಿಸಿಕೊಂಡರು. ಒಂದು ಅರ್ಜಿಯಲ್ಲಿ ನನ್ನ ಹೆಸರನ್ನು ಸೂಚಿಸಿದ್ದವರು ಶ್ರೀ ಅ.ನ. ಕೃಷ್ಣರಾಯರು. ಉಳಿದವರ ಹೆಸರು ಜ್ಞಾಪಕವಿಲ್ಲ. ಹಿಂದಿನ ಅಧ್ಯಕ್ಷರಾಗಿದ್ದ ಜಿ. ಶಿವಮೂರ್ತಿ ಶಾಸ್ತ್ರಿಗಳು, ಟಿ.ಟಿ. ಶರ್ಮರು, ಪ.ಸು. ಭಟ್ಟರು ಹಾಗೂ ಇನ್ನೂ ಯಾರೋ ಒಬ್ಬಿಬ್ಬರು ಅರ್ಜಿ ಸಲ್ಲಿಸಿದ್ದಾರೆಂದು ಗೊತ್ತಾಯಿತು. ಜಿ. ಶಿವಮೂರ್ತಿ ಶಾಸ್ತ್ರಿಯವರು ಮತ್ತು ಟಿ.ಟಿ. ಶರ್ಮರ ಹೆಸರನ್ನು ಕೇಳಿದ ಕೂಡಲೆ ನನ್ನ ಜಂಘಾಬಲವೆ ಅಡಗಿ ಹೋಯಿತು. "ಈ ಅಧ್ಯಕ್ಷ ಚುನಾವಣೆಯಲ್ಲಿ ಯಾರಾದರೂ ಗೆಲ್ಲಲಿ, ಶಿವಮೂರ್ತಿ ಶಾಸ್ತ್ರಿಗಳು ಮಾತ್ರ ಗೆಲ್ಲಕೂಡದು' ಎಂಬುದು ಅನೇಕರ ಸಂಕಲ್ಪವಾಗಿದ್ದಂತೆ ನನಗೆ ಕಂಡುಬಂತು. ಈ ಒಳ ರಾಜಕೀಯ ನನಗೆ ತಿಳಿಯದು. ಶ್ರೀ ಹಂಪ: ನಾಗರಾಜಯ್ಯನವರು ಆಗ ಪರಿಷತ್ತಿನ ಕಾರ್ಯದರ್ಶಿಯಾಗಿದ್ದರು. ಒಂದು ದಿನ ಅವರು ಟಿ. ಟಿ. ಶರ್ಮರ ಮನೆಗೆ ಹೋಗಿ ಎಲ್ಲರೂ ಸೇರಿ ನಾರಾಯಣರನ್ನು ಅವಿರೋಧವಾಗಿ ಆಯ್ಕೆ ಮಾಡಬೇಕೆಂದಿದ್ದೇವೆ ಎಂದು ತಿಳಿಸಿದರಂತೆ. ಶರ್ಮರು ಒಂದು ದಿನ ಮಧ್ಯಾಹ್ನ ಚಾಮರಾಜಪೇಟೆಯಲ್ಲಿದ್ದ ನಮ್ಮ ಮನೆಗೆ ಬಂದರು. ನಾನು ಅವರನ್ನು ಸತ್ಕರಿಸಿ ಮೊದಲಿನಿಂದ ನಡೆದ ವಿದ್ಯಮಾನವನ್ನೆಲ್ಲ ತಿಳಿಸಿದೆ. "ಎಲ್ಲರ ಒತ್ತಾಯದಿಂದ ನಾನು ಅರ್ಜಿ ಸಲ್ಲಿಸಿದ್ದೇನೆ. ಚುನಾವಣೆ ಫಲಿತಾಂಶ ಏನಾದರೂ ಆಗಲಿ. ವಾಪಸ್ಸು ತೆಗೆದುಕೊಳ್ಳುವುದಿಲ್ಲ" ಎಂದು ಖಚಿತವಾಗಿ ತಿಳಿಸಿದೆ. ಅವರು ನನ್ನ ಉತ್ತರ ಕೇಳಿ ನಿರಾಶರಾಗಿ ಹೊರಟು ಹೋದರು. ನಾನು ಸ್ಪರ್ಧಿಸುವಂತೆ ಪ್ರಯತ್ನ ನಡೆಯುತ್ತಿದೆ ಎನ್ನುವಾಗಲೆ ನೂರಾರು ಜನ ಪರಿಷತ್ತಿನ ಸದಸ್ಯರಾದರು. ಕೆಲವರು ಅವರೇ ಹಣಕೊಟ್ಟು ೧೫-೨೦ ಜನ ಸದಸ್ಯರನ್ನು ಮಾಡಿ ತಂದುಕೊಡುತ್ತಿದ್ದರು. ಬೆಂಗಳೂರು ನಗರದಲ್ಲಿಯೇ ಅನೇಕ ಜನ ಆ ಅವಧಿಯಲ್ಲಿ ಹೊಸದಾಗಿ ಸದಸ್ಯರಾದರು. ಸ್ಪರ್ಧಿಸಿದ್ದವರಲ್ಲಿ ಕೆಲವರು ವಾಪಸ್ಸು ತೆಗೆದುಕೊಂಡರು. ಕೊನೆಗೆ ಉಳಿದವರು ನಾನು ಮತ್ತು ಶಿವಮೂರ್ತಿ ಶಾಸ್ತ್ರಿಗಳು. ಅವರ ವಿಷಯದಲ್ಲಿ ನನಗೆ ಮೊದಲಿನಿಂದಲೂ ಗೌರವ. ಅವರು ಅನೇಕ ಬಾರಿ ಕರ್ನಾಟಕವನ್ನು ಸುತ್ತಿ ನಾಡಿನ ವಿಷಯ ಚೆನ್ನಾಗಿ ತಿಳಿದುಕೊಂಡಿದ್ದರು. ಒಳ್ಳೆಯ ಭಾಷಣಕಾರರು. ಅವರ ಉದ್ದ ಕೋಟು, ಪೇಟ, ಶಲ್ಯ, ವಿಭೂತಿಕಟ್ಟು ಇವರನ್ನು ನೋಡಿದ ಯಾರಿಗಾದರೂ ಅವರ

ಬಗ್ಗೆ ಗೌರವ ಮೂಡುತ್ತಿತ್ತು. ಕರ್ನಾಟಕದಲ್ಲಿ ಅನೇಕ ಕಡೆ ಅವರ ಹೆಸರು ಮನೆ ಮಾತಾಗಿತ್ತು. ಇಂಥವರ ವಿರುದ್ಧ, ನಾನು ಸ್ಪರ್ಧಿಸಬೇಕಾಗಿ ಬಂತಲ್ಲ ಎಂದು ನನ್ನ ಮನಸ್ಸು ಆಗಾಗ ತಳಮಳಗೊಳ್ಳುತ್ತಿತ್ತು. ಈ ಚುನಾವಣೆ ತಡೆ ಹಿಡಿಯಲು ಆ ಕಡೆಯವರು ಕೋರ್ಟಿಗೂ ಹೋದರು. ಕೋರ್ಟಿನ ತಡೆಯಾಜ್ಞೆ ಸಿಗಲಿಲ್ಲ. ಚುನಾವಣೆ ಖಚಿತ ಎಂದಾಯಿತು. ಶಿವಮೂರ್ತಿ ಶಾಸ್ತ್ರಿಗಳು ಹಿಂದೆ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ಶ್ರೀ ಎಚ್. ಎಸ್. ಸೀತಾರಾಂ ಅವರು ಪರಿಷತ್ತಿನ ಕೋಶಾಧಿಕಾರಿಗಳಾಗಿದ್ದರು. ಅವರು ಮತ್ತು ಶ್ರೀ ಪ. ಸು. ಭಟ್ಟರು ಏನಾದರೂ ಮಾಡಿ ನನ್ನನ್ನು ಸೋಲಿಸಬೇಕೆಂದು ಹಠಮಾಡಿದಂತೆ ಕಂಡಿತು. ಅವರಿಗೂ ನನಗೂ ಎಂದೂ ವಿರಸ ಉಂಟಾಗಿರಲಿಲ್ಲ. ಇವರೇಕೆ ನನ್ನ ವಿರುದ್ಧ ಹೀಗೆ ಮಾಡುತ್ತಿದ್ದಾರೆ ಎಂದು ನನಗೆ ಆಶ್ಚರ್ಯವಾಯಿತು. ನನ್ನ ಪರವಾಗಿ ಪ್ರಚಾರದಲ್ಲಿ ತೊಡಗಿದ್ದವರು ಬಹು ಮಂದಿ ಸಾಹಿತಿಗಳು, ಕನ್ನಡ ಕಾರ್ಯಕರ್ತರು, ಬೇರೆ ಕ್ಷೇತ್ರಗಳಲ್ಲಿ ನನಗೆ ಪರಿಚಯವಿದ್ದವರು ಮತ್ತು ಅನೇಕ ವರ್ಷಗಳಿಂದ ಸ್ನೇಹಿತರಾಗಿದ್ದ ಶ್ರೀ ಪಿ.ಎಸ್. ಕೃಷ್ಣಯ್ಯರ್‌ರವರು. ಕೃಷ್ಣಯ್ಯರ್ ನನ್ನ ಜತೆಗೆ ಬಂದ ಕೂಡಲೇ ಎಚ್.ಎಸ್. ಸೀತಾರಾಂ ಮತ್ತು ಪ. ಸು. ಭಟ್ಟರು ನನ್ನ ವಿರುದ್ಧ ಜೋರಾಗಿ ಕೆಲಸ ಮಾಡತೊಡಗಿದರು. ಇದಕ್ಕೆ ಕಾರಣ ಕಂಡುಹಿಡಿಯಲು ನನಗೆ ಬಹಳ ಕಾಲ ಬೇಕಾಗಲಿಲ್ಲ. ಶ್ರೀ ಎಚ್. ಎಸ್. ಸೀತಾರಾಂ, ಮೈಸೂರು ಕೋ–ಆಪರೇಟಿವ್ ಕನ್ಸೂಮರ್ಸ್ ಫೆಡರೇಷನ್‌ನ ಅಧ್ಯಕ್ಷರಾಗಿದ್ದರು. ಅವರ ಅವಧಿ ಮುಗಿಯಿತು. ಅವರ ಜಾಗಕ್ಕೆ ನನ್ನನ್ನು ತರಬೇಕೆಂದು ಮುಖ್ಯಮಂತ್ರಿ ನಿಜಲಿಂಗಪ್ಪನವರು ಆಗಿನ ಸಹಕಾರ ಮಂತ್ರಿ ಕೆ. ಪುಟ್ಟಸ್ವಾಮಿಯವರಿಗೆ ತಿಳಿಸಿದ್ದರಂತೆ. ಆ ವಿಷಯವನ್ನು ಸಚಿವರು ನನಗೆ ಹೇಳಿದ್ದರು. ನಾನು ನನ್ನ ಬದಲು ಪಿ. ಎಸ್. ಕೃಷ್ಣಯ್ಯರ್ ಅವರನ್ನು ತನ್ನಿ ಅವರಿಗೆ ಸಹಕಾರ ಕ್ಷೇತ್ರ ಸಾಕಷ್ಟು ಪರಿಚಯವಿದೆ ಎಂದು ಹೇಳಿದೆ. ಅದಕ್ಕವರು “ನೋಡೋಣ. ನೀವೂ ಕೃಷ್ಣಯ್ಯರ್ ಮಧ್ಯಾಹ್ನ ವಿಧಾನಸೌಧಕ್ಕೆ ಬನ್ನಿ. ನಿಜಲಿಂಗಪ್ಪನವರ ಹತ್ತಿರ ಮಾತನಾಡೋಣ” ಎಂದರು. ಕೃಷ್ಣಯ್ಯನವರನ್ನು ಕರೆದುಕೊಂಡು ವಿಧಾನಸೌಧಕ್ಕೆ ಹೋದೆ. ಆ ವೇಳೆಗೆ ಎಚ್.ಎಸ್. ಸೀತಾರಾಂ ಅವರು ವಿಧಾನ ಸೌಧಕ್ಕೆ ಬಂದಿದ್ದರು. ಸಹಕಾರ ಸಚಿವರ ಮತ್ತು ನನ್ನ ಮಾತುಕತೆ ಹೇಗೋ ಅವರಿಗೆ ತಿಳಿದಿರಬೇಕು. ನನ್ನ ವಿರುದ್ಧ ಕೃಷ್ಣಯ್ಯರ್ ಅವರನ್ನು ನಿಲ್ಲಿಸಲು ನಾರಾಯಣ ಪ್ರಯತ್ನ ನಡೆಸುತ್ತಿದ್ದಾರೆಂದು ಅವರು ಭಾವಿಸಿ ಪರಿಷತ್ ಅಧ್ಯಕ್ಷರ ಚುನಾವಣೆಯಲ್ಲಿ ನನ್ನನ್ನು ಸೋಲಿಸಲು ಸಂಕಲ್ಪ ಮಾಡಿದ್ದರು. ಮೈಸೂರು ಕೋ–ಆಪರೇಟಿವ್ ಹೌಸಿಂಗ್ ಕಾರ್ಪೊರೇಷನ್ನಿಗೆ ಪ. ಸು. ಭಟ್ಟರು ಮತ್ತು ಕೃಷ್ಣಯ್ಯರ್ ಸ್ಪರ್ಧಿಗಳಾಗಿದ್ದರು. ನಾನು ಯಾವಾಗಲೂ ಕೃಷ್ಣಯ್ಯರ್ ಪರ. ಈಗ ನಾರಾಯಣ್ ಪರ ಕೃಷ್ಣಯ್ಯರ್ ಹೋರಟಿರುವುದರಿಂದ ಶಿವಮೂರ್ತಿ ಶಾಸ್ತ್ರಿಗಳ ಪರ ವಹಿಸಿ ನಾರಾಯಣರನ್ನು ಸೋಲಿಸಬೇಕೆಂದು ಭಟ್ಟರ ಸಂಕಲ್ಪ.

ಕಡೆಗೆ ಪರಿಷತ್ತಿನ ಅಧ್ಯಕ್ಷರ ಚುನಾವಣೆ ನಡೆದು ನನಗೆ ೧,೭೫೦ ಮತಗಳು. ಶಿವಮೂರ್ತಿ ಶಾಸ್ತ್ರಿಗಳಿಗೆ ೧,೦೭೮ ಮತಗಳು ಬಂದು ನಾನು ವಿಜಯಿಯಾದೆ. ಈ ಜಯ ನನಗೆ ಸಂತೋಷವನ್ನುಂಟುಮಾಡಲಿಲ್ಲ. ನನ್ನ ವಿರುದ್ಧ ಶಾಸ್ತ್ರಿಗಳಲ್ಲದೆ, ಬೇರೆ ಯಾರಾದರೂ

ನಿಂತಿದ್ದರೆ ನನಗೆ ಸಂತೋಷವಾಗುತ್ತಿತ್ತೊ ಏನೋ. ಕರ್ನಾಟಕ ಮತ್ತು ಕನ್ನಡಕ್ಕಾಗಿ ಅಪಾರ ಸೇವೆ ಸಲ್ಲಿಸಿರುವ ಒಬ್ಬ ಹಿರಿಯ ವ್ಯಕ್ತಿಯನ್ನು ಈ ರೀತಿ ಸೋಲಿಸಿದೆನಲ್ಲ ಎಂದು ನನ್ನ ಮನಸ್ಸಿಗೆ ತುಂಬ ವ್ಯಥೆಯಾಯಿತು. "ಚುನಾವಣೆಯಲ್ಲಿ ಗೆದ್ದು ಬಂದರೆ ನಾನು ಏನು ಕೆಲಸ ಮಾಡಬಲ್ಲೆ" ಎಂಬ ವಿವರಗಳನ್ನು ಕೊಟ್ಟು ಶಾಸ್ತ್ರಿಗಳು ಒಂದು ಹಸ್ತಪ್ರತಿಯನ್ನು ಹೊರಡಿಸಿದ್ದರು. ಅದರ ಒಂದು ಪ್ರತಿ ನನ್ನ ಬಳಿ ಇತ್ತು. ಮಾರನೆ ದಿನ ಬೆಳಗ್ಗೆಯೇ ಅವರು ಪ್ರಕಟಿಸಿದ್ದ ಹಸ್ತಪ್ರತಿಯನ್ನು ಜೇಬಿನಲ್ಲಿಟ್ಟುಕೊಂಡು ಅವರ ಮನೆಗೆ ಹೋದೆ. ಅವರು ನನ್ನನ್ನು ಕಂಡಕೂಡಲೇ "ಶಿವಾ ಶಿವಾ! ಎಲ್ಲಾ ಶಿವನ ಇಚ್ಛೆ" ಎನ್ನುತ್ತಾ, "ನಾರಾಯಣರೆ, ನಿಮ್ಮ ವಿರುದ್ಧ ನಿಲ್ಲುವ ಇಚ್ಛೆ ನನಗಿರಲಿಲ್ಲ. ಎಚ್. ಎಸ್. ಸೀತಾರಾಂ ಮತ್ತು ಪ. ಸು. ಭಟ್ಟ ನನಗೆ ಕೈಕೊಟ್ಟರು" ಎಂದು ಅವರನ್ನು ದೂರಿದರು. "ಆಯ್ತು ಬಿಡಿ, ನಿಮ್ಮ ನನ್ನ ಸ್ನೇಹ ಹಿಂದಿನಂತೆಯೇ ಇರಬೇಕೆಂಬ ಉದ್ದೇಶದಿಂದ ಬೆಳಗ್ಗೆಯೇ ಎದ್ದು ನಿಮ್ಮ ಮನೆಗೆ ಬಂದಿದ್ದೇನೆ. ಈಗ ಗೆದ್ದವರು ನೀವೇ ಎಂದು ತಿಳಿದುಕೊಳ್ಳಿ. ಇಲ್ಲಿ ನೋಡಿ, ನೀವು ಹೊರಡಿಸಿರುವ ಹಸ್ತಪ್ರತಿ. ಇದರಲ್ಲಿ ಮತದಾರರಿಗೆ ನೀವು ಕೊಟ್ಟಿರುವ ಭರವಸೆಗಳೆಲ್ಲಾ ಇವೆ. ಅವನ್ನೆಲ್ಲಾ ನಿಮಗೆ ಶ್ರಮವಾಗದಂತೆ ನಾನೇ ಮಾಡುತ್ತೇನೆ. ಈ ಕ್ಷೇತ್ರಕ್ಕೆ ನಾನು ಹೊಸಬ. ನನಗೆ ನಿಮ್ಮ ಸಹಕಾರ ಬೇಕು", ಎಂದು ವಿನಂತಿಸಿಕೊಂಡೆ. ಅವರು ಸಂತೋಷದಿಂದ ಒಪ್ಪಿದರು. ಅವರು ಬದುಕಿರುವವರೆಗೂ ನನ್ನೊಡನೆ ವಿಶ್ವಾಸದಿಂದ ಸಹಕರಿಸಿದರು. ತರುವಾಯ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರನ್ನೂ, ಅರ್ಥ ಸಚಿವ ಶ್ರೀ ರಾಮಕೃಷ್ಣ ಹೆಗ್ಗಡೆಯವರನ್ನೂ, ಶಿಕ್ಷಣ ಸಚಿವ ಶ್ರೀ ಕೆ. ವಿ. ಶಂಕರಗೌಡರನ್ನೂ ಕಂಡು ಪರಿಷತ್ತಿಗೆ ಸರ್ಕಾರದ ಪೂರ್ಣ ಸಹಕಾರ ಬೇಕೆಂದು ಪ್ರಾರ್ಥಿಸಿಕೊಂಡೆ. ಸರ್ಕಾರ ಪೂರ್ಣ ಬೆಂಬಲ ನೀಡುವುದಾಗಿ ಮೂವರೂ ಭರವಸೆ ನೀಡಿದರು. ನಾನು ಪರಿಷತ್ತಿನ ಅಧ್ಯಕ್ಷನಾದುದಕ್ಕಾಗಿ ವಿವಿಧ ಕ್ಷೇತ್ರದ ಜನರಿಂದ ನೂರಾರು ಅಭಿನಂದನಾ ಪತ್ರಗಳು ಬಂದವು. ಅವರಿಗೆ ಪ್ರತಿವಂದನೆ ಸಲ್ಲಿಸಿ ಅವರ ಸಹಕಾರಕ್ಕಾಗಿ ಎಲ್ಲರಿಗೂ ಪತ್ರ ಬರೆದೆ.

❑

ಭಾಗ – ೩

ಸಂಸ್ಕೃತಿ ಚಿಂತನೆ

ಕಣ್ಮರೆಯಾದ ಕಂನಡ

ಶಂ.ಬಾ. ಜೋಶಿ

ಇದು ದಿಗ್ಭ್ರಮೆಯೆ ?

ನನ್ನ ಕಣ್ಣುಗಳನ್ನು ನಾನು ನಂಬಬಹುದೆ, ಎಂಬ ಸಂದೇಹಕ್ಕೆ ಒಳಗಾದೆ. ಬಲ್ಲವರನ್ನು ಕೇಳಿ, ತಿಳಿಯಬೇಕು, ಎಂಬ ಹಂಬಲದಿಂದ ಇದನ್ನು ಬರೆಯಬೇಕೆಂದೆನಿಸಿತು. ಕಳೆದ ಮೂರು ವರುಷಗಳಿಂದ, ಇದು ನಿಜವಿರಬಹುದೆ, ಎಂಬೀ ಪ್ರಶ್ನೆ ಪೀಡಿಸುತ್ತಲಿದೆ. ಪುನರ್ವಿಮರ್ಶೆಯಲ್ಲಿ ಒಂದಕ್ಕಿಂತ ಹೆಚ್ಚು ಬಗೆಗಳಿಂದ ಇದರಲ್ಲಿ ಸತ್ಯಾಂಶವಿಲ್ಲದಿಲ್ಲ ಎಂದು ಕಂಡುಬರತೊಡಗಿತು. ಹಲವರ ಮುಂದೆ ಈ ವಿಚಾರಗಳನ್ನು ನಿವೇದಿಸಬೇಕೆಂಬ ಆಸೆಯಾಯಿತು. ಮಹಾರಾಷ್ಟ್ರದ ವಿಚಾರವಂತರ ಇದಿರು ಇದರೊಳಗಿನ ಮುಖ್ಯಾಂಶಗಳನ್ನು ಇರಿಸಿದ್ದಾಗಿದೆ. मराटी संस्कृती कोहि समस्या ಎಂಬ ಪ್ರಕಟನೆಯಲ್ಲಿ ಇದರೊಳಗಿನ ಕೆಲಸಂಗತಿಗಳು ಬಂದಿವೆ (ಕ್ರಿ. ಶ. ೧೯೫೨). ಆ ಬಳಿಕಿನ ಚರ್ಚೆ–ವಿವಾದ–ವಿಮರ್ಶೆಗಳಲ್ಲಿ ಗಮನಕ್ಕೆ ಬಂದ ಹೊಸ ಮಾತುಗಳನ್ನು नवभारत ಎಂಬ (ಇಂತಹ ಸಾಂಸ್ಕೃತಿಕ ಲೇಖನಗಳ ಪ್ರಕಟನೆಯ ಉದ್ದೇಶದಿಂದ ಹೊರಟ) ಮಾಸಪತ್ರಿಕೆಯಲ್ಲಿ ವಿವರಿಸಿದ್ದಾಯಿತು. 'नारः आप' ಮತ್ತು 'आपोदेवी' ऋग्वेदांतील वरुण' ಲೇಖನಗಳಲ್ಲಿ ಬಂದ ವಿಚಾರಗಳನ್ನು ಯಾರ ಎದುರೂ, ಒಮ್ಮೆಲೆ ಹೇಳಲು ಧೈರ್ಯಸಾಲದೆ, ಆ ಮೊದಲು ಎರಡು ವರುಷ ಹೋದುವು. ನನಗೆ ತೋಚಿದ ಆ ಸಂಗತಿಗಳು ನನ್ನನ್ನು ಸುಮ್ಮನೆ ಇರಗೊಡಲೊಲ್ಲವು. ಕೆಲವು ಚಿಕಿತ್ಸಕ ಮಿತ್ರರೊಡನೆ ಚರ್ಚಿಸಿದ್ದಾಯಿತು. 'ನಿಷ್ಕರ್ಷಕ್ಕಾಗಿ ಈ ಸಂಗತಿಗಳನ್ನು ವಿಮರ್ಶಕ ವಿದ್ವಾಂಸರ ಎದುರು ಇಡಲು ಅಡ್ಡಿಯಿಲ್ಲ',

ಎಂದು ಅವರು ಅಭಿಪ್ರಾಯಪಟ್ಟರು. ಆಗ ಅದರೊಳಗಿನ ಕೆಲವು ವಿಚಾರಗಳನ್ನು ಮರಾಠಿಯಲ್ಲಿ ಪ್ರಕಟಿಸಿದಂತೆ ಕಂನಾಡ ವಿದ್ವಾಂಸರಲ್ಲಿ ಇನ್ನೂ ಕೆಲವು ಸಂಗತಿಗಳನ್ನು ನಿವೇದಿಸುವುದೂ ಯುಕ್ತವೆನಿಸಿ ಈ ಸಾಹಸದ ಸೆಳವಿನಲ್ಲಿ ಸಿಕ್ಕುಬಿದ್ದುದಾಗಿದೆ.

'ನಮ್ಮ ನಾಡು' 'ನಮ್ಮ ನುಡಿ' 'ನಮ್ಮ ಸಂಸ್ಕೃತಿ' ಎಂಬ ಭಾವನಾಪೂರ್ಣ ಆವೇಶದ ಮಾತುಗಳನ್ನು ಆಡುತ್ತೇವೆ, ಕೇಳುತ್ತೇವೆ. ನಮ್ಮ ನುಡಿ, ಕಂನಡ ಸರಿ ; 'ಕಂನಡ' ಎಂದರೆ ದೇಶವೋ ? ಭಾಷೆಯೋ ? ಇದನ್ನು ಎರಡೂ ಅರ್ಥದಲ್ಲಿ ಬಳಸುವುದುಂಟು। ಆದರೆ, ಇದರಲ್ಲಿ 'ಕಂನಡ'ದ ಮೂಲಾರ್ಥವು ಆವುದು ? ಮೊದಲು ಭಾಷಾವಾಚಕಪದವಿದ್ದು, ಬಳಿಕ ಪ್ರದೇಶವಾಚಕವಾಯಿತೆ ? ಅಥವಾ ಪ್ರದೇಶವಾಚಕಪದವು ಭಾಷಾಸೂಚಕವಾಯಿತೆ ? 'ಸಂಸ್ಕೃತಿ' ಎಂದರೇನು ? ಕರ್ಣಾಟ–ಸಂಸ್ಕೃತಿ, ಭಾರತೀಯ–ಸಂಸ್ಕೃತಿ, ಆರ್ಯ–ಸಂಸ್ಕೃತಿ, ದ್ರಾವಿಡ–ಸಂಸ್ಕೃತಿ, ಹೀಗೆ ಸಂಸ್ಕೃತಿಗಳಲ್ಲಿರುವ ಭಿನ್ನ ಭೇದಗಳ ವಿಚಾರವು ಆಗಾಗ ತಲೆ ಎತ್ತುತ್ತದೆ. ಆರ್ಯರು ಉಂಟೆ? ದ್ರಾವಿಡರು ಯಾರು? ಎಂಬ ಮಾತುಗಳು ನಿಶ್ಚಿತಾರ್ಥವು ತಿಳಿಯದೆ ಅವನ್ನು ನಿರಾತಂಕವಾಗಿ ಬಳಸುತ್ತಿರುವುದನ್ನು ಕಂಡು ನನಗೇ ನಾಚಿಕೆಯಾಯಿತು.

ಈ ಪ್ರಯತ್ನದಲ್ಲಿ 'ಕಂನಡ'ದ ಇತ್ಯರ್ಥವು ಮೊದಲು ಅವಶ್ಯವೆನಿಸಿತು. ಕಂನಡದಲ್ಲಿ ನವ್ಯ ಚೈತನ್ಯವನ್ನುಂಟುಮಾಡುವ ಸುತ್ತಲಿನ ಆ ಹುಮ್ಮಸದ ವಾತಾವರಣದಲ್ಲಿ 'ಕಂನಡ' ಎಂದರೇನು? ಎಂಬುದೆ ಮೊದಲ ಯಕ್ಷಪ್ರಶ್ನೆಯಾಗಿ ನನ್ನನ್ನು ಎದುರಿಸಿತು. 'ಕಂನಡ' ಎಂದರೇನು? ಎಲ್ಲಿದೆ? ಇದೂ ತಿಳಿಯದೆ ಅದರ ಉದ್ಧಾರವಾಗಬೇಕೆಂಬ ಮಾತಿನ ಅರ್ಥವೇನು? ಪ್ರಸ್ತುತ ಪ್ರಕಟನೆಯ ಮುಖ್ಯ ವಿಷಯವಾಗಿರುವ ಹಾಲುಮತದವರ ವಿಚಾರವು 'ಕಂನಡ'ದ ಸಮಸ್ಯೆಯಲ್ಲಿ ಅಳವಟ್ಟಿದೆ, ಎಂಬುದರ ಸಂದೇಶವೂ ಕೂಡ ಆಗ ಸೋಂಕಿದ್ದಿಲ್ಲ. 'ಕಂನಡ' ಎಂದರೇನು? ಕರ್ಣಾ(ರ್ನಾ)ಟ ಉಂಟು; ಅಲ್ಲ ಇತ್ತು. 'ಕಂನಡ' ಎಲ್ಲಿದೆ? (ನೂತನ ಅವಸ್ಥಾಂತರದಲ್ಲಿ ಈಗಂತೂ, ಭಾರತದ ಭೂಪಟದಿಂದಲೂ ಅದು ಬಹಿಷ್ಕೃತವಾಯಿತು!) ಇಂತಿವೆಲ್ಲ ಅವಸ್ಥಾಂತರಗಳಿಗೆ ಇದು ಒಳಗಾದುದು ಎಂತು ? ಎಂಬೀ ಕೊರೆಯೇ ಆಗ ಮುಖ್ಯವಾಗಿತ್ತು. ಈ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಂಡ ಹಾಗೆ ಎನಿಸಿ, ಕ್ಷಣಕಾಲ ಸಮಾಧಾನ ಪಟ್ಟುಕೊಂಡುದಾಯಿತು. ಆದರೆ, ನನಗೆ ದೊರೆತ ಆ ಉತ್ತರವು ಸರಿಯಾಗಿದೆಯೆ? ಎಂಬುದನ್ನು ಇನ್ನೂ ಬೇರೆ ಬಗೆಯಿಂದ ಒರೆಗೆ ಹಚ್ಚಿ ನೋಡದೆ ಆ ಸಮಾಧಾನವು ಕೇವಲ ಕ್ಷಣಿಕವೇ ಸರಿ, ಎಂದು ಕಂಡುಬಂದಿತು! ಆದುದರಿಂದ ನಮ್ಮ ಸಮಸ್ಯಾಪರಿಹಾರದ ಸತ್ಯಾಸತ್ಯತೆಯನ್ನು ಕಂಡುಕೊಳ್ಳುವುದಕ್ಕಾಗಿ, ಮತ್ತೆ ಮುಂದಿನ ಪ್ರವಾಸಕ್ಕೆ ಅಣಿಯಾಗದೆ ಗತ್ಯಂತರವಿರಲಿಲ್ಲ! ಹೀಗೆಯೆ ಮುಂದೆ ಒಂದರೊಳಗಿಂದ ಒಂದು ಹೊಸ ಪ್ರಶ್ನೆಯು ತಲೆಯೆತ್ತಿ, ಅದು ನನ್ನನ್ನು ಎಲ್ಲಿಂದಲ್ಲಿಗೊ ತಳ್ಳಿಕೊಂಡು ಹೊರಟಿತು! ಈ ಮೊದಲ ಪಯಣ–ಬೆಳೆಸಿದ ಸಮೀಕ್ಷಕರ ವೃತ್ತಾಂತಗಳಿಂದ, ನನಗೆ ಅಲ್ಲಿ ಕಾಣುತ್ತಿರುವುದು ಸಂಪೂರ್ಣ ದಿಗ್ಭ್ರಮೆಯಲ್ಲ ಎಂದೂ ಎನಿಸುತ್ತದೆ. ನೈಜವನ್ನರಿಯಬೇಕೆಂಬ ಈ ಪ್ರಯತ್ನದಲ್ಲಿ ಏನಾದರೂ ತಪ್ಪುಂಟೆ, ಎಂಬುದನ್ನು ನಿರ್ಧರಿಸುವ ಅಧಿಕಾರ ವಿಚಾರವಂತ ವಿದ್ವಾಂಸರಿಗೆ ಸೇರಿದ್ದು. ಆದರೆ, ಇಲ್ಲಿ ನಿವೇದಿಸಲಿರುವ

'ಹಾಲುಮತ'ದ ಅರ್ಥವಾಗಲು, ಅಲ್ಲಿಯವರೆಗಿನ ಇದರ ಹಿನ್ನೆಲೆಯು ತಿಳಿಯುವುದು ಅವಶ್ಯವಾಗಿದೆ. ಒಂದು ಸಮಸ್ಯೆಯು ಇನ್ನೊಂದರಲ್ಲಿ ಹೆಣೆದುಕೊಂಡಿದೆ. ಒಟ್ಟಿನಲ್ಲಿ ಈ ಎಲ್ಲ ಸಮಸ್ಯೆಗಳಲ್ಲೂ ಹಾಲುಮತಕ್ಕೆ ಸಂಬಂಧಪಟ್ಟ ವಿಚಾರಧಾರೆಯು ಹುದುಗಿಕೊಂಡು ಹರಿದುಬಂದಿದೆ. ಕೊನೆಯ ಹಂತದ ವೈಚಾರಿಕ ಭೂಮಿಕೆಯು ಆ ಕ್ಷಿತಿಜದಲ್ಲಿ ಹಾಲುಮತದ ದರ್ಶನವು ಆದಂತೆ ಎನಿಸುತ್ತಿದೆ. ಆದುದರಿಂದ ಅಲ್ಲಿಯವರೆಗೆ ನೂಕಿಕೊಂಡು ಒಯ್ದು ಮೊದಲ ಪ್ರಶ್ನೆಯಿಂದ ಈ ನಿವೇದನೆಯನ್ನು ಪ್ರಾರಂಭಿಸಬೇಕಾಗಿದೆ.

ಕಂನಡ ಎಂದರೇನು ?

ಕವಿರಾಜ ಮಾರ್ಗದಲ್ಲಿ ದೇಶ ಮತ್ತು ಭಾಷೆ ಈ ಎರಡೂ ಅರ್ಥಗಳಲ್ಲಿ 'ಕಂನಡ' ಎಂಬ ಪದವನ್ನು ಬಳಸಿದ್ದಾಗಿದೆ (೯ನೆ ಶತಕ). 'ಕಾವೇರಿಯಿಂದ ಗೋದಾವರಿ ವರಂ ಇರ್ದನಾಡದು ಕಂನಡ', ಇದು ದೇಶವಾಚಕ ಪ್ರಯೋಗ; 'ಪಳಗನ್ನಡಮಂ ಪೊಲಗೆಡಿಸಿ ನುಡಿವರ್'; 'ಕನ್ನಡಂಗಳೊಳ್ ದೋಸಂ ಇನಿತೆಂದು ವಾಸುಗಿಯುಂ ಅರಿಯಲಾರ'; ಈ ಎರಡರಲ್ಲೂ ಇದು ಭಾಷಾ ಸೂಚಕವಾಗಿದೆ. ಈಗ ಹಲವು ಶತಮಾನಗಳ ಹಿಂದೆಯೇ, ಕಂನಡದ ದೇಶವಾಚಕ ಅರ್ಥವು ಸಂಪೂರ್ಣ ಮರೆತು ಹೋಗಿದೆ. ಆಂಡಯ್ಯನು, 'ಕಂನಡಂ ಎನಿಪ್ಪ ನಾಡದು' ಎಂದು ಹೇಳುತ್ತಾನೆ. ಕಂನಡ ಎಂಬುದಕ್ಕೆ ಒಂದು ಭಾಷೆ ಎಂಬ ಅರ್ಥವು ಮಾತ್ರ ಉಳಿದಿದೆ!

ಕಂ–ನಡ–ನಾಡು ಏಕೆ ?

ಕಂ–ನಡವು ಮೊತ್ತಮೊದಲಲ್ಲಿ ದೇಶವಾಚಕವಾಗಿಯೇ ರೂಢಿಯಲ್ಲಿರಬೇಕು. 'ಕಂ–ನಡ' ಇವರೊಳಗಿನ 'ನಡ' ಇದು ನಾಡು ಎಂಬರ್ಥದ ಪದವಿರಬೇಕು. 'ಕಂ' ಎಂದರೇನು, ಎಂಬ ಬಗೆಗೆ ಎಷ್ಟೋ ಭಿನ್ನಾಭಿಪ್ರಾಯಗಳು ಒಮ್ಮೆ ತಲೆಯೆತ್ತಿದ್ದರೂ, ಇದರ ಉತ್ತರಪದವಾಗಿರುವ 'ನಡ' ಇದಕ್ಕೆ 'ನಾಡು' ಎಂಬ ಅರ್ಥವಿರುವಲ್ಲಿ ಮತಭೇದಗಳು ಇದ್ದಿಲ್ಲ. ಹಾಗಾದರೆ ದೇಶವಾಚಕ 'ನಡ'ವನ್ನೇ ಬಳಸಲು, ಉಳಿಸಲು ಅಡ್ಡಿಯೇನು? ಆದರೆ 'ನಾಡು' ಎಂಬರ್ಥದಲ್ಲಿ 'ನಡ' ಪದದ ಪ್ರಯೋಗಗಳು ಬೆಳಕಿಗೆ ಬಂದಿಲ್ಲ! 'ನಾಡು' ಎಂಬ ಮೂಲ ಶಬ್ದವು ಮಾತಿನ ಓಟದಲ್ಲಿ 'ನಡು' ಎಂಬ ರೂಪ ತಾಳಿರಬೇಕು. ಆದ್ದರಿಂದ 'ಕಂ–ನಾಡು' ಇದುವೆ ಮೂಲ ಪದವಿರಬೇಕೆಂಬುದು ನಿಶ್ಚಿತವಾಗಿದೆ. ನಮ್ಮ ನಾಡಿನ ಶಾಸನಗಳಲ್ಲಿ ಕಂ–ನಾಡು ಎಂಬ ಪದವೂ ದೊರೆತಿದೆ.

ಶಬ್ದ ಸ್ವರೂಪದಲ್ಲಿ ಆಗುವ ವ್ಯತ್ಯಾಸಗಳು, ಆ ಸುಮಾರಿಗೆ ಆದ (ಆಗಿದ್ದ) ಕೆಲವು ರಾಜಕೀಯ ಅಥವಾ ಸಾಮಾಜಿಕ ಪಲ್ಲಟದ ಸೂಚನೆಯನ್ನು ಕೊಡುತ್ತವೆ. ಭಿನ್ನ ಉಚ್ಚಾರದ ಅಥವಾ ಭಿನ್ನ ಭಾಷೆಯ ಜನಗಳ ಸಂಬಂಧ–ಸಂಪರ್ಕಗಳು ಹೆಚ್ಚಿದಂತೆ, ಇಬ್ಬರ ಉಚ್ಚಾರದ ರೀತಿಯಲ್ಲಿಯೂ ಕೆಲವೊಂದು ಬದಲಾವಣೆಗಳು ಆಗುವುದು ಅನಿವಾರ್ಯವಾಗಿದೆ. 'ಬ್ಯಾಂಗಲೋರ್' 'ಹಿಂಡು' (ಹಿಂದೂ ಪತ್ರಿಕೆ) ಇಂತಹ ಆಧುನಿಕ ಉದಾಹರಣೆಗಳನ್ನು ನೆನೆದುಕೊಳ್ಳಬಹುದು. 'ನಾಡು' ಇದರ 'ನಡ' ಎಂಬ ಮಾರ್ಪಾಟಕ್ಕೆ ಈ ಬಗೆಯಲ್ಲಿ ಭಿನ್ನ

ಉಚ್ಚಾರ ಪದ್ಧತಿಯ ಜನಗಳ ಸಂಪರ್ಕವು ಕಾರಣವಾಗಿರಬೇಕು. ಹೀಗೆ ಸಂಪರ್ಕದಲ್ಲಿ ಬಂದ ಜನಗಳಲ್ಲಿ ತಮ್ಮ ನಾಡು ನುಡಿಗಳ ಬಗೆಗೆ, ಅಸ್ಮಿತಾ ಭಾವನೆಯು ಕಡಿಮೆ ಇರುವವರ ಮಾತುಗಳಲ್ಲಿ ಈ ಬಗೆಯ ವಿಕೃತಿಯು ಹೆಚ್ಚು ಪ್ರಮಾಣದಲ್ಲಿ ಕಾಣಿಸಿಕೊಳ್ಳುತ್ತದೆ.

'ಕಂನಡ' ಇದರ ಮೂಲಾರ್ಥವು ಒಂದು ದೇಶ ಎಂದಿದ್ದರೂ ಅದು ಒಂದು ಭಾಷೆಯ ಹೆಸರು ಎಂಬ ಭಾವನೆಯೇ ಬೆಳೆದು ಬರಲು ಕಾರಣವೇನಿರಬಹುದು ? ಕಂನಡದೊಳಗಿನ 'ನಾಡು' ಎಂಬ ಪದವು, ಅರ್ಥವನ್ನು ಕಳೆದುಕೊಂಡಿರಬೇಕು; ಹಾಗಿಲ್ಲದಿದ್ದರೆ ಪ್ರದೇಶವಾಚಕ ಮುಖ್ಯಾರ್ಥವು ಮರೆತುದೇಕೆ ? ಭಾವವಾಚಕ (ಆನುಷಂಗಿಕ) ಗೌಣ ಅರ್ಥವೇ ಪ್ರಾಮುಖ್ಯತೆ ಪಡೆದುದೇಕೆ ? ಉಚ್ಚಾರದಲ್ಲಿ ವ್ಯತ್ಯಾಸಗಳು ತಲೆದೋರಿ 'ನಾಡು' 'ನಡು' ಆಗಿ, ಬಳಿಕ 'ನಡ' ಆಗುತ್ತದೆ. ಆಮೇಲೆ ದೇಶವಾಚಕಪದವು ಕೇವಲ ಭಾಷಾಸೂಚಕವಾಗುವುದು. ಕಂನಾಡು ಎಂಬ ರೂಪವೇ ಬಳಕೆಯಲ್ಲಿ ಉಳಿದಿದ್ದರೆ 'ಕಂನಾಡು' ಇದನ್ನು ಭಾಷಾವಾಚಕವಾಗಿ ಬಳಸಲು ಜನಕ್ಕೆ ಸಂಕೋಚವುಂಟಾಗದೆ ಇರಲು ಸಾಧ್ಯವಿಲ್ಲ. ರೂಪಪಲ್ಲಟ ಮತ್ತು ಅರ್ಥವ್ಯತ್ಯಾಸ ಈ ಎರಡೂ ಪರಿವರ್ತನೆಗಳು ನಿಷ್ಕಾರಣವಾಗಿ ಸಂಭವಿಸಿರಲಾರವು. ಗೀತೆಯಲ್ಲಿ 'ಯಜ್ಞ' ಪದಕ್ಕೆ ಇರುವ ಅರ್ಥವು, ಆ ಮೊದಲು ಯಜ್ಞ - ಸಂಪ್ರದಾಯದಲ್ಲಾದ ಕ್ರಾಂತಿಯ ಸೂಚಕವಾಗಿದೆ. ಹಾಗೆ 'ಕಂನಾಡು' 'ಕಂನಡ' ಎಂದು ಮಾರ್ಪಟ್ಟರೂ ಮತ್ತು ದೇಶವಾಚಕ ಮುಖ್ಯಾರ್ಥವನ್ನು ಕಳೆದುಕೊಂಡು ಕೇವಲ ಭಾಷಾವಾಚಕವಾಗಿ ರೂಢವಾದುದೂ, ಇದು ಆ ಕಾಲದಲ್ಲಾದ ಕೆಲವೊಂದು ಸಾಮಾಜಿಕ ಕ್ರಾಂತಿಯ ನಿಶ್ಚಿತ ಕುರುಹಾಗಿದೆ. ಮತ್ತು ಆ ಕಾಲದಲ್ಲಿ ದೇಶಿಕರ ಅಸ್ಮಿತಭಾವವು ಬಹುಮಟ್ಟಿಗೆ ದುರ್ಬಲವಾಗಿದ್ದಿತೆಂಬುದರ ಸೂಚಕವಾಗಿದೆ.

ಕವಿರಾಜಮಾರ್ಗದಲ್ಲಿ ಧ್ವನಿತವಾಗುವ ಸಂಗತಿಗಳಿಂದ ಅದಕ್ಕೂ ಮೊದಲೆ ಕೆಲವು ಶತಮಾನ ಆ ಕ್ರಾಂತಿಯು ಸಂಭವಿಸಿರಬೇಕು. ದೇಶವಾಚಕವಾದ 'ಕಂನಡ'ಕ್ಕೆ 'ಭಾಷೆ' ಎಂಬ ಅರ್ಥವು ಬಳಕೆಗೆ ಬಂದ ಬಳಿಕ 'ಕಂನಡ-ನಾಡು' ಎಂದು ಹೇಳುವ ಹೊತ್ತು ಬಂದಿತು ! 'ನಡ-ನಾಡು' ಎಂಬಲ್ಲಿ ದ್ವಿರುಕ್ತಿ ದೋಷವುಂಟು, ಎಂಬುದರ ಅರಿವೂ ಮಾಸಿತು! 'ಕಂನಾಡು' ಎಂಬ ಸ್ಪಷ್ಟಾರ್ಥದ ಮೂಲಪದವನ್ನು ಬಳಸುವದಕ್ಕೆ ಸಂಕೋಚವುಂಟಾಯ್ತು! 'ಶಾಸ್ತ್ರಾತ್ ರೂಢಿರ್ಬಲೀಯಸೀ' ಅಲ್ಲವೆ? ರೂಢಿಯು ಒಂದು ವಜ್ರಪಂಜರವಾಗಿದೆ, ಎಂಬ ಮಾತು ಇಲ್ಲಿ ನಿದರ್ಶನಕ್ಕೆ ಬರುತ್ತಿದೆ. ಇದು ಅಸ್ಮಿತಾಭಾವದ ಅಭಾವದ, ಹಾಗೂ ಕುಂದುಗಳನ್ನರಿತು ತಿದ್ದಿಕೊಂಡು ಮಾಡಬೇಕಾದ ನವನಿರ್ಮಿತಿಯ ಉತ್ಸಾಹ-ಶಕ್ತಿಯು ದುರ್ಬಲವಾದ, ನಿಶ್ಚಿತ ಕುರುಹು.

"ಕಂ-ನಡ, ಇದು ಪ್ರದೇಶವಾಚಕ ಪದ" ಎಂಬುದನ್ನು ಎಲ್ಲರೂ ಒಪ್ಪಿದ್ದಾಗಿದೆ. ಭಾಷೆಗೂ 'ಕಂನಡ' ಎಂದೇ ಹೇಳುವಲ್ಲಿ ವೈಚಾರಿಕ ಸಂದಿಗ್ಧತೆಗೆ ಇಂಬು ದೊರೆಯುತ್ತದೆ. ಆದುದರಿಂದ 'ಕಂನಾಡ ನುಡಿ' ಎನ್ನುವುದು, ಹೆಚ್ಚು ಲೇಸು. ಮರಹಟ್ಟಿ ನಾಡಿನ ನುಡಿ ಮರ್ಹಾಟಿ. ಮರ್ಹಾಟಿಗರು (ಕಂನಾಡಿ-) ಕಾನಡಿ ಎಂಬುದು ಒಂದು ರೀತಿಯಲ್ಲಿ ಸರಿಯಾಗಿದೆ. ತರ್ಕ, ಶುದ್ಧವಾಗಿದೆ. ಷಷ್ಠ್ಯಂತ ಪದವನ್ನು ಬಳಸಿ 'ಕಂನಡದ ನುಡಿ' ಎಂದರೂ ತಪ್ಪಲ್ಲ; ಕಂನಾಡಿನ

ಭಾಷೆ ಎಂದಂತಾಗುವದು. ಹಾಗಲ್ಲದಿದ್ದರೆ ಭಾಷೆಗೆ 'ಕನ್ನಡ' ಎಂಬಲ್ಲಿ ಅನೌಚಿತ್ಯ ದೋಷಕ್ಕೆ ಇಂಬು ದೊರೆಯುವುದು. 'ಕಂನಡ' ಎಂಬ ಪ್ರಯೋಗದಲ್ಲಿ ಅರ್ಥ ನಿಶ್ಚಿತ ಇಲ್ಲದೆ ವೈಜ್ಞಾನಿಕ ಅಸ್ಪಷ್ಟತೆಗೆ ಇಂಬು ದೊರೆಯುವುದು. ಈ ಕಾರಣದಿಂದ ಈ ಬರವಣಿಗೆಯಲ್ಲಿ ಕಂ–ನಾಡ–ನುಡಿ ಅಥವಾ (ಸಂಕ್ಷಿಪ್ತವಾಗಿ) 'ಕಂ–ನುಡಿ' ಎಂಬ ಪದವನ್ನು ಬಳಸಲಾಗಿದೆ.

'ಕಂನಾಡು' ಎಂಬ ಮೊದಲಿನ ರೂಪದಲ್ಲಿ ಆದ ಸ್ಥಿತ್ಯಂತರದ ಕಾರಣಗಳು ಹೀಗಿರಬೇಕು: ಕಂನಡ ಈ ಪದದ ಮೂಲ ರೂಪವೇನು, ಎಂಬುದರ ವಿಸ್ಮೃತಿಯು ಆವರಿಸಿತು. ಸಂಸ್ಕೃತದ ತುಲನೆಯಿಂದ, ವಿದ್ವಾಂಸರಿಗೆ ತಮ್ಮ ನುಡಿಯಲ್ಲಿ ಸತ್ವ–ಸೌಂದರ್ಯ ಕಡಿಮೆ ಎನಿಸಿತು. 'ಕಂನಡ'ದ ಭಾಷೆಯಲ್ಲಿ ದೋಷಗಳು ಇಷ್ಟೇ ಇವೆ, ಎಂದು ಹೇಳಲು ವಾಸುಕಿಗೂ ಅಶಕ್ಯ, ಎಂದು ಆ ಕಾಲದ ಮಹಾ ಪಂಡಿತರೇ ಅಡಿಕೊಂಡಿದ್ದುಂಟು. ಕಂನಾಡವರ ನುಡಿ 'ಜರದ್ವಧು!' ಎಂದು ಕವಿರಾಜಮಾರ್ಗದಿಂದಲೇ ಗೊತ್ತಾಗುತ್ತದೆ. ಚೈತನ್ಯವು ಕುಂದಿ, ದೇಹವು ನವೆಯುತ್ತ ಕುಗ್ಗುತ್ತ ನಡೆದ ಮುದಿತನದಲ್ಲಿ ಮುರುಟಿ–ಸುರುಟಿ ಉಡಗುತ್ತ ನಡೆದ ನಾಡಿಗರ ಆ ಕಾಲದ ಭಾಷೆಯದು. ನುಡಿಯ ಉನ್ನತ ಅಥವಾ ಅವನತ ಸ್ಥಿತಿಯು ಆ ಕಾಲದ ನಾಡಿಗರ ಅವಸ್ಥಾಸೂಚಕವಾಗಿರುತ್ತದೆ. ಕವಿರಾಜಮಾರ್ಗದ ಆ ಕಾಲದ ನುಡಿಯಂತೆ, ಆಗಿನ ನಾಡೂ, ಸೊರಗಿ ಸಣ್ಣದಾಗತೊಡಗಿರಲು ಸಾಕು. ಈ ನಾಡಿನ ಭಾಷೆಯಲ್ಲಿ ಒಂದುತನವಿಲ್ಲ. 'ಕನ್ನಡಂಗಳೊಳ್' 'ದೋಸಂ' ಅಗಣಿತವಾಗಿವೆ – ಎಂಬಲ್ಲಿಯ ಮಾತು ಆಗಿನ ಈ ನಾಡಿನ ಅವಸ್ಥಾಸೂಚಕವಾಗಿದೆ.

ಗೋದಾವರಿಯವರಂ ಇರ್ದ ನಾಡು !

೯ನೆಯ ಶತಮಾನದಲ್ಲಿ ಕಾವೇರಿಯಿಂದ ಗೋದೆಯವರೆಗೆ ಕಂನಾಡು ಇದ್ದಿತೆಂದು ಕವಿರಾಜಮಾರ್ಗದಿಂದ ಗೊತ್ತಾಗುತ್ತದೆ. ಇಂದು ಕೃಷ್ಣಾಮಲಾಪಹಾರಿಗಳ ನಡುವೆ ಅದರ ಮರ್ಯಾದೆಯು ಹೊಯ್ದಾಡುತ್ತಿದೆ! ಆದುದರಿಂದ ಆಗ ಗೋದೆಯು, ಕಂನಾಡಿನ ಉತ್ತರದ ಗಡಿಯಾಗಿತ್ತೆಂಬುದು ಅತಿಶಯೋಕ್ತಿ ಆಗಿರಲಾರದೆ ? ಅತಿಶಯೋಕ್ತಿಯು ನಮ್ಮ ಕವಿಗಳ ಅಚ್ಚುಮೆಚ್ಚಿನ ಅಲಂಕಾರ. ಆದಕಾರಣ ಗೋದೆಯು ತಮ್ಮ ನಾಡಿನ ಉತ್ತರದ ಮೇರೆ ಎಂಬುದು, ಒಣ ಹೆಮ್ಮೆಯ ಮಾತು ಆಗಿರುವುದೂ ಅಶಕ್ಯವಲ್ಲ. ಆದರೆ, ಈ ತೀರ್ಪನ್ನು ಒಪ್ಪಲು ಕೆಲ ಸಂಗತಿಗಳು ಅಡ್ಡಬರುತ್ತಿವೆ. ೯ನೆ ಶತಮಾನದ ಆರಂಭದಲ್ಲಿ ಕಂನಾಡ ನುಡಿ ಕ್ಷೀಣಾವಸ್ಥೆಯಲ್ಲಿದ್ದಿತು. ಈ ಕ್ಷೀಣ ಸ್ಥಿತಿಯು ನಾಡಿನ ಕ್ಷೀಣತೆಯ ಪರಿಣಾಮವೆ ಆಗಿರಲಾರದೇ? ಇಂತಹ ಇನ್ನೂ ಕೆಲಕಾರಣಗಳಿವೆ. ಅವುಗಳ ನಿವಾರಣೆಯಾಗದೆ, ಕವಿರಾಜಮಾರ್ಗದ ಉಲ್ಲೇಖವನ್ನು ಕಡೆಗಣಿಸಿ ತಿರಸ್ಕರಿಸುವುದು ಅನ್ಯಾಯದ್ದಾದೀತು.

(೧) ಕಂನಾಡ ನುಡಿಯನ್ನು ಸಂಸ್ಕೃತ ಭಾಷೆ ಹಾಗೂ ಸಾಹಿತ್ಯದ ಮೇಲ್ಮಟ್ಟಕ್ಕೆ ಒಯ್ಯಬೇಕು. 'ಕಂನಡ'ದಲ್ಲಿ ನವಚೈತನ್ಯವನ್ನು ಉಂಟುಮಾಡಬೇಕು, ಎಂಬ ಉದ್ದೇಶದಿಂದ 'ಕವಿರಾಜಮಾರ್ಗ'ವು ರಚಿತವಾಗಿದೆ. ಆಗ ಈ ಭಾಷೆಯು, ಸಂಸ್ಕೃತ ಭಾಷೆಯ ಪ್ರಭಾವಕ್ಕೆ

ಒಳಗಾಗಿತ್ತು – ಎಂಬಲ್ಲಿ ಭಿನ್ನಾಭಿಪ್ರಾಯಗಳಿಲ್ಲ. ಸಂಸ್ಕೃತವು ನರ್ಮದೆಯನ್ನು ದಾಟಿ, ದಕ್ಷಿಣಕ್ಕೆ ಬಿಜಯಂಗೆಯ್ದಿದ ಭಾಷೆ, ಎಂಬುದೂ ಸರ್ವಮಾನ್ಯವಾಗಿದೆ. ಆರ್ಯಾವರ್ತದ ದಕ್ಷಿಣದ ಗಡಿ ನರ್ಮದೆ (ವಿಂಧ್ಯ), ಎಂಬುದು ಮನುಸ್ಮೃತಿ ಮೊದಲಾದ ಗ್ರಂಥಗಳಿಂದ ನಿಶ್ಚಿತವಾಗಿದೆ. ಹಾಗಾದರೆ ಸಂಸ್ಕೃತ (ಮತ್ತು ತಜ್ಜನ್ಯ) ಭಾಷೆ ನರ್ಮದೆಯ ದಕ್ಷಿಣದಲ್ಲಿ ಬಂದು ಬೇರೂರುವ ಮೊದಲು, ಅಲ್ಲಿಯ ಜನವು ಆಡುತ್ತಿದ್ದ ಸೊಲ್ಲು ಯಾವುದು? ಆರ್ಯಾವರ್ತದ ಹೊರಗಿನ ದಕ್ಷಿಣಾಪಥವು 'ಅಯಜ್ಞೀಯರ ಭೂಮಿ' ಎಂದು ಬಗೆಯಲಾಗಿತ್ತು. ಆದುದರಿಂದ ಈ ಭಾಗದಲ್ಲಿ ಆಗ ಆರ್ಯವರ್ಗದ ಭಾಷೆಯು, ಸಾಮಾನ್ಯ ಜನರ ಬಳಕೆಯಮಾತು ಆಗಿರಲಾರದು. ಇಲ್ಲಿಯ ಅಂದಿನ ಆ ಜನರ ದೇಶಿಯೆ ಅವರ ದಿನಬಳಕೆಯ ಮಾತು ಆಗಿರಬೇಕು. ವೈಯಾಕರಣಿಗಳು, ಭಾಷೆಯ ಪದಗಳಲ್ಲಿ ಸಂಸ್ಕೃತ ಪ್ರಾಕೃತ, ದೇಶ್ಯ ಎಂದು ತಾರತಮ್ಯವನ್ನು ಕಲ್ಪಿಸುತ್ತಾರೆ. ಈ ತಾರತಮ್ಯದಿಂದ ಮೊದಲಿನ ಎರಡಕ್ಕಿಂತಲೂ ದೇಶ್ಯವು ಒಂದು ಭಿನ್ನವಾದ ಭಾಷೆ ಎಂದು ಬಯಲಿಗೆ ಬರುತ್ತಿದೆ! 'ದೇಶ್ಯ' ಎಂದರೆ, ತದ್ದೇಶೀಯರ ಭಾಷೆ. ಸಂಸ್ಕೃತ-ಪ್ರಾಕೃತ ಇವು ಬಳಿಕ ಸ್ವೀಕರಿಸಿದ ಭಾಷೆಗಳು ಎಂದು ಇದರ ಅರ್ಥವಾಗುತ್ತದೆ. ಸಂಸ್ಕೃತ ಹಾಗೂ ಸಂಸ್ಕೃತ ಜನ್ಯಭಾಷೆಯು ನರ್ಮದೆಯಿಂದ ದಕ್ಷಿಣಕ್ಕೆ ಗೋದೆಯ ವರೆಗೆ ಪ್ರಸಾರಗೊಳ್ಳುವ ವರೆಗೆ ಅಲ್ಲಿ ಪ್ರಚಲಿತವಿದ್ದ ಅಂದಿನ ಆ ದೇಶಿಯು ಯಾವುದು? ಅಲ್ಲಿ ನೆಲೆಸಿರಬಹುದಾದ ದೇಶೀಯರಾರು? ಅಥವಾ ಅದು ನಿರ್ಮಾನುಷ ಪ್ರದೇಶವಾಗಿದ್ದಿತೆ? ಗೋದೆಯ ವರೆಗೆ ಇದ್ದರೆಂದು ಕವಿರಾಜಮಾರ್ಗದಲ್ಲಿ ಹೇಳಲಾದ ಕಂನಾಡವರ ಮೂಲಿಗರು, ಗೋದೆಯ ಉತ್ತರಕ್ಕೆ ನರ್ಮದೆಯ ವರೆಗೂ ಹಬ್ಬಿ ನೆಲೆಸಿರಲಾರರೆ ? ಗೋದೆಯನ್ನು ದಾಟಕೂಡದೆಂಬ ವಿಧಿಯಿದ್ದಿತೆ?

(೨) ನರ್ಮದೆ (ವಿಂಧ್ಯ) ಆರ್ಯಾವರ್ತದ ದಕ್ಷಿಣದ ಗಡಿಯಾಗಿದ್ದ ಕಾಲದಲ್ಲಿ 'ಗೋದಾವರ್ಯಾಃ ದಕ್ಷಿಣೇತಿರೇ' ಎಂಬ ಸಂಕಲ್ಪಮಂತ್ರವು ಬಳಕೆಗೆ ಬರಲು ಕಾರಣವಿದ್ದಿಲ್ಲ. ಈ ಸಂಕಲ್ಪ ಮಂತ್ರದಿಂದ 'ಆರ್ಯಾವರ್ತವು' ಗೋದೆಯವರೆಗೂ ವಿಸ್ತೃತವಾದುದು ಧ್ವನಿತವಾಗುತ್ತಿದೆ. ೧೩ನೆಯ ಶತಮಾನದ ಸುಮಾರಿಗೆ ಆಗಿಹೋದ ಹರದತ್ತನೆಂಬವನು ಆಪಸ್ತಂಭ–ಧರ್ಮಸೂತ್ರಕ್ಕೆ ಬರೆದ ಟೀಕೆಯಲ್ಲಿ, ಆರ್ಯಾವರ್ತವು ಶರಾವತಿಯವರೆಗೆ ವ್ಯಾಪಿಸಿದ್ದುದಾಗಿ ಹೇಳಿದ್ದಾನೆ. ಮೊದಲು ಪಂಚನದದೇಶವು ಆರ್ಯರ ನೆಲೆವೀಡು; ಬಳಿಕ ಗಂಗಾ ತಟಾಕ; ಇಂತಿವ ವಿಸ್ತೃತವಾಗುತ್ತ ನಡೆದ ಆರ್ಯಾವರ್ತವು. ಇದು ಮನುಸ್ಮೃತಿ ರಚನಾಕಾಲಕ್ಕೆ ನರ್ಮದೆಯ ವರೆಗೆ ಬಂದಿದ್ದಿತು ಬಳಿಕ ೯ನೆ ಶತಕದ ಸುಮಾರಿಗೆ ಗೋದೆಯ ತನಕ ಬಂದು ತಾಗಿದ್ದಿತೆಂದು 'ಗೋದಾವರ್ಯಾಃ ದಕ್ಷಿಣೇತೀರೇ' ಎಂಬ ಮಂತ್ರದಿಂದ ಸ್ಪಷ್ಟವಾಗಿ ಗೊತ್ತಾಗುತ್ತಿದೆ. ಆರ್ಯಾವರ್ತವು ಗೋದೆಯ ವರೆಗೆ ವ್ಯಾಪಿಸಿ, ಸುಪ್ರತಿಷ್ಠಿತವಾಗುವ ವರೆಗಿನ ಆ ಅವಧಿಯಲ್ಲಿ, ಆ ಪ್ರದೇಶದ ಯಾವುದೊಂದು 'ದೇಶಿ'ಯು, ಅಲ್ಲಿ ಬಳಕೆಯಲ್ಲಿ ಇರಲೇಬೇಕಷ್ಟೆ? ಕಂನಾಡವರು, (ಇಂದಿನ ಕಂನಾಡ ಭಾಗದಿಂದ) ಗೋದೆಯ ವರೆಗೆ ದಂಡಯಾತ್ರೆಗೆಯ್ದು, ತಮ್ಮ ಭಾಷೆಯನ್ನು ಅಲ್ಲಿ ನೆಲೆಗೊಳಿಸಿದರೆಂದು ಬಗೆಯಲು ಆ ಬಗೆಯ ಯಾವ ಐತಿಹಾಸಿಕ ಆಧಾರಗಳೂ ಬೆಳಕಿಗೆ ಇನ್ನೂ ಬಂದಿಲ್ಲ. ಆದುದರಿಂದ ಕವಿರಾಜಮಾರ್ಗದಲ್ಲಿ ಹೇಳಿದ ಕಂನಾಡ ಉತ್ತರದ

ಗೋದೆಯ ಗಡಿಯು ಹೊಸತಾಗಿ ನಿರ್ಮಾಣವಾದುದಲ್ಲವೆಂದೇ ಬಗೆಯಬೇಕಾಗುತ್ತದೆ. ಹೀಗೆ ಮೊದಲು ಅಲ್ಲಿ ಗೋದೆಯ ವರೆಗೆ ಇರಬೇಕಾಗಿ ಕಂಡುಬರುವ ಕಂನಾಡವರು, ಉತ್ತರಕ್ಕೆ ನರ್ಮದೆಯ ವರೆಗೂ ನೆಲೆಸಿರುವುದು ಅಸಾಧ್ಯವೆ?

ನರ್ಮದಾತೀರದ ಕಂನಾಡು

(೧) ಪುರಾತನ ಕಾಲದಲ್ಲಿ ದಕ್ಷಿಣಾಪಥವನ್ನು ದಂಡಕಾರಣ್ಯವು ವ್ಯಾಪಿಸಿದ್ದಿತೆಂದು ಪ್ರಸಿದ್ಧಿಯಿದೆ. ಈ ಕಾಡಿನಲ್ಲಿ ಜನವಸತಿ ಇದ್ದಿಲ್ಲವೆಂಬ ಗ್ರಹಿಕೆ ನಿರಾಧಾರವಾದುದಾಗಿದೆ. ನರ್ಮದಾ-ಗೋದಾ ತೀರದ ಉತ್ಖನನದಲ್ಲಿ ಅಶ್ಮಯುಗದ ವರೆಗಿನ ಅವಶೇಷಗಳು ಸಿಕ್ಕಿವೆ. ರಾಮನು ವನವಾಸಕ್ಕಾಗಿ ಬಂದಾಗ ದಂಡಕಾರಣ್ಯದಲ್ಲಿ ಕೆಲವು ಋಷಿಗಳ ಆಶ್ರಮಗಳಿದ್ದ ವರ್ಣನೆಗಳಿವೆ. ರಾಮನು ಬರುವ ಮುನ್ನ ಕೆಲಕಾಲ, ಸಂಸ್ಕೃತ ಭಾಷಿಕರ ಪ್ರದೇಶವು ಅಲ್ಲಿ ಆಗಿದ್ದಿತೆಂಬುದು ಇಲ್ಲಿ ಸ್ಪಷ್ಟವಾಗುವುದು. ಹೊಸದಾಗಿ ಬಂದು ನೆಲೆಸತೊಡಗಿದ್ದ ಸಂಸ್ಕೃತ ಭಾಷಿಕರಿಗೆ ದೇಶಿಯರ ಹಲರು, ವಿರೋಧಿಗಳಾಗಿದ್ದರೆಂದು ರಾಮಾಯಣಾದಿ ಉಲ್ಲೇಖಗಳಿಂದ ಗೊತ್ತಾಗುತ್ತದೆ. ಯಾಜಕ ಸಂಪ್ರದಾಯದವರಿಗೆ ಅಲ್ಲಿ ಪೀಡಾಕರರಾಗಿದ್ದವರು ಯಾರಾದರೂ ವಾಸವಾಗಿರಲೇಬೇಕಲ್ಲವೆ?

ಈ ಕಾಡಿಗೆ 'ದಂಡಕ-ಅರಣ್ಯ' ಎಂದಿರುವ ಹೆಸರಿನಲ್ಲೂ ಈ ಸೂಚನೆ ಅಡಕವಾಗಿರುವ ಸಂದೇಹವುಂಟಾಗುತ್ತದೆ. 'ದಂಡ' ಶಬ್ದವು ಆರ್ಯಭಾಷಾ ವರ್ಗಕ್ಕೆ ಸೇರಿದ್ದಲ್ಲ. ಆಕ್ಸಫರ್ಡ ವಿಶ್ವವಿದ್ಯಾಲಯದ ಟಿ. ಬರೋ ಅವರು, ಸಂಸ್ಕೃತ ಸಾಹಿತ್ಯದಲ್ಲಿ ಸೇರಿರುವ ಇಂತಹ ಅನೇಕ ದೇಶೀಯ ಪದಗಳನ್ನು ಎತ್ತಿ ಸಾಧಾರವಾಗಿ ವಿವರಿಸಿದ್ದಾರೆ. ತಂಡ (ದಂಡ) – ದಂಡು ಎಂಬ ಸಮೂಹಾರ್ಥದ ದೇಶೀಯ ಶಬ್ದವುಂಟು. ಪುರಾತನ ಕಾಲವು ದಂಡುಗಳ ಯುಗ. ತಂಡುಗಳ ಯುಗ. ಬೇಟೆಯಿಂದ ಜೀವಿಸುತ್ತಿದ್ದಾಗ ಗುಂಪುಗೂಡಿಯೆ ಅಲೆಯ ಬೇಕಿತ್ತು. ತಂಡುಗಳ ಅಂದಿನ ಜೀವನ ವೃತ್ತಿಯಲ್ಲಿ ಹೋರಟೇಗೇ ಪ್ರಾಧಾನ್ಯವಿತ್ತು. ತಂಡು-ದಂಡು ಎಂಬ ಸಮೂಹಾರ್ಥಕ ಮಾತಿಗೆ, ಬಳಿಕ 'ಹೋರಾಟದ ಜನ' ಎಂಬ ಲಾಕ್ಷಣಿಕ ಅರ್ಥ, ಆ ಜನರ ನಡೆವಳಿಯಿಂದಾಗಿ, ಹೊಸದಾಗಿ ಕಾಣಿಸಿಕೊಂಡಿರಬೇಕು. ದಕ್ಷಿಣಾಪಥದ ಆ ಪುರಾತನ ಕಾಡಿನಲ್ಲಿ ಆಗ ವಾಸಿಸುತ್ತಿದ್ದ, ಆ ತಂಡು-ದಂಡುಗಳ ಮೇಲಿಂದ ಅದಕ್ಕೆ ದಂಡಕರ ಅರಣ್ಯ-ದಂಡಕಾರಣ್ಯ ಎಂಬ ಹೆಸರು ಬಂದಿರುವ ಶಕ್ಯತೆಯಿದೆ. ಇಲ್ಲಿ ನೆಲೆಸಬಂದ ಋಷಿಗಳು ಶಸ್ತ್ರಪಾಣೀಗಳಾಗಿ, ದಕ್ಷಿಣಾಪಥಕ್ಕೆ ವಲಸೆ ಬಂದರೆಂದು ಯಾರೂ ಹೇಳಲಾರರು. ಹೇಳಲು ಆಧಾರಗಳೂ ಇಲ್ಲ. ಅವರು ತಮ್ಮ ನಡೆನುಡಿಗಳಿಂದ ಕೆಲ ಜನವನ್ನಾದರೂ ಮೆಚ್ಚಿಸಿರಬೇಕು. ಎಲ್ಲರೂ ತುಂಟ ದಂಡಕರೇ ಆಗಿದ್ದ ಪಕ್ಷದಲ್ಲಿ ಇಲ್ಲಿ ಹೊಸದಾಗಿ ನೆಲಸಬಂದ ಅವರ ಜೀವನವೇ ಅಶಕ್ಯವಿತ್ತು. ಆರ್ಯಾವರ್ತವು, ದಕ್ಷಿಣಕ್ಕೆ ವಿಸ್ತಾರಗೊಳ್ಳುತ್ತ ನಡೆದುದು ಪ್ರತ್ಯಕ್ಷ ಘಟನೆ; ನೈಜ ಸಂಗತಿ. ಕಾಲಕ್ರಮದಲ್ಲಿ ಅನುಕೂಲಸ್ಥರ ಪ್ರಮಾಣವು ಹೆಚ್ಚುತ್ತ ಹೋದುದಕ್ಕೆ ಇದಕ್ಕಿಂತ ಬಲವಾದ ಬೇರೆ ಯಾವ ಪ್ರಮಾಣವೂ ಬೇಕಿಲ್ಲ.

(೨) ಸಿಂಧೂತೀರದ ಉತ್ಖನನದಲ್ಲಿ ಪುರಾತನ ಪಟ್ಟಣಗಳು ಹೊರಬಂದಿವೆ. ಇವು ಋಗ್ವೇದಕ್ಕಿಂತ ಮುಂಚಿನ ಕಾಲದುವು ಎಂದು ನಿಶ್ಚಿತವಾಗಿದೆ. ಅಲ್ಲಿ ಬಂಗಾರದ ಅಲಂಕಾರಗಳು ದೊರೆತಿವೆ. ಈ ಬಂಗಾರವು ದಕ್ಷಿಣ ಭಾರತದಿಂದ ಬಂದಿರಬೇಕು; ಎಂದು ಸರ್ ಜೋನ್ ಮಾರ್ಶಲ ಪ್ರಭೃತಿ ಸಂಶೋಧಕರ ಮತವಿದೆ. ಆದುದರಿಂದ ದಕ್ಷಿಣಾಪಥವು ನಿರ್ಜನಪ್ರದೇಶ ವಿತ್ತೆಂದು ಗ್ರಹಿಸಲಿಕ್ಕಾಗುವುದಿಲ್ಲ.

(೩) ಅಗಸ್ತ್ಯನೆಂಬೊರ್ವನು ವಿಂಧ್ಯವನ್ನು ಮೆಚ್ಚಿಸಿ ಒಲಿಸಿ, ಆರ್ಯರಿಗೆ ತೆಂಕಣಕ್ಕೆ ಬರಲು ಇದ್ದ ಆತಂಕವನ್ನು ನಿವಾರಿಸಿದನೆಂಬ ಕಥೆಯಿದೆ. ವಿಂಧ್ಯ ಎಂಬುದು ಅಲ್ಲಿ ನೆಲೆಸಿದ ಜನವಾಚಕ ಸಾಂಕೇತಿಕ ಪದವಾಗಿದೆ. ಗೊಂಡಾರಣ್ಯವೆಂಬುದು ಈ ಭಾಗದ ಒಂದು ಕಾಡು, 'ಗೊಂಡರು' ಎಂಬ ಕಾಡಾಡಿಗಳು ಅಲ್ಲಿ ಈಗಲೂ ಇದ್ದಾರೆ. 'ಗೊಂಡ' ಎಂಬುದು ಸಂಸ್ಕೃತ ಭಾಷೆಯ ಪದವಲ್ಲ. ಗೊಂಡ-ಕೊಂಡ-ಕುಂಡ-ಕುಂದ-ಕುಂತ ಎಂಬವು ಅಂಕುಡೊಂಕಾದ, ತಗ್ಗುಮಿಟ್ಟೆಯ ಪ್ರದೇಶ ಸೂಚಕ ಪದಗಳು; ಇವೆಲ್ಲವುಗಳು 'ಕುಡು' ಶಬ್ದಮೂಲದಿಂದ ಮೊಳೆತಿವೆ. ಕೊಂಕಣ ಪಟ್ಟಿಯಲ್ಲಿ 'ಕುಡಾಳ' ಎಂಬ ಸ್ಥಳ ನಾಮವುಂಟು. ಕುಟಕಾದ್ರಿಗಳು ನಮ್ಮ ನಾಡಿನಲ್ಲಿವೆ. ಕುಟಕಾದ್ರಿ ಸಹ್ಯಾದ್ರಿ ಪರ್ವತ ಎಂಬಂತೆ ದ್ವಿರುಕ್ತಿ ಕುಟ (ಜ) ಅದ್ರಿ ; ಈ ಸ್ಥಲನಾಮದೊಳಗಿನ 'ಕುಟ' ಎಂಬುದು ಕುಡದ ಇನ್ನೊಂದು ರೂಪ; (ಕುಡ-ಕುಡ) ಕುಟವಾಗಿ ಸಂಸ್ಕೃತದಲ್ಲಿ ಸೇರಿದೆ. ಕುಟ-ಕೂಟ ಎಂಬವು ಪರ್ವತ ಪ್ರದೇಶಕ್ಕೆ ಸಂಬಂಧಿಸಿದ ಮಾತುಗಳು: ಸಂಸ್ಕೃತ ಸಾಹಿತ್ಯದಲ್ಲಿವೆ. ಅವು ಆರ್ಯೇತರ ಭಾಷೆಯವು; ಆಸ್ಟ್ರೋ-ಏಶಿಯಾಟಿಕ್ ಭಾಷೆಯವರಿಗೆ ಸಂಬಂಧಪಟ್ಟವರೆಂಬ 'ಗೊಂಡ' ಜನರ ಮಾತುಗಳು ಅಲ್ಲ; ಕಂದಮಿಳ ವರ್ಗದ ನುಡಿಗಳು, ಎಂದು ತಜ್ಞರ ಅಭಿಪ್ರಾಯವಿದೆ. 'ಕೊಡಗು' ಇದೂ 'ಕುಡು' ನಾಡು; ಎಂದರೆ ಏರು ಇಳುಕಲನಾಡು; ಸಮಪಾತಳಿಯ ಪ್ರದೇಶವಲ್ಲ; ಇದು ಮಾಲಾ-ಪ್ರಸ್ಥ = ತಪ್ಪಲುಭೂಮಿ.

ಯಾವುದೊಂದು ಭಾಷೆಯ ಸ್ಥಲನಾಮಗಳಿಂದ ಆ ಹೆಸರುಗಳ ಮೊದಲು ಯಾರಿಂದ ಬಳಕೆಗೆ ಬಂದುವು, ಅವರು ಯಾವ ಭಾಷಿಕಜನ, ಎಂಬುದು ತಿಳಿಯಬಲ್ಲದು. ಕೊಂಡ, ಗೊಂಡ, ಕುಡು ಅಣ=ಕೊಂಕಣ, ಇಂತಹ ಸ್ಥಳನಾಮಗಳಿಂದ ಮೊತ್ತ ಮೊದಲಿನ ಆ ದೇಶಿಕರು ಯಾವ ಭಾಷೆಯವರಾಗಿರಬೇಕೆಂಬುದನ್ನು ಬೇರೆಯಾಗಿ ಹೇಳುವ ಅವಶ್ಯಕತೆ ತೋರದು. 'ಕುಡು' ಎಂಬುದು ಕಂದಮಿಳ ಭಾಷಾವರ್ಗಕ್ಕೆ ಸೇರಿದ್ದು. ಆದಕಾರಣ ಕುಡ, ಕೋಡು-ಗೋಡು, ಗೊಂದಿ, ಕುಂದ-ಗುಂದ ಎಂಬೀಬಗೆಯ ಎಡೆಯ ಹೆಸರಿನ ನಾಡಿನಲ್ಲಿ, ಮೊದಲು ನೆಲೆಸಿದವರು, ಅಥವಾ ಅಲ್ಲಿ ಪ್ರಭಾವಶಾಲಿಗಳಾಗಿದ್ದವರು ಕಂದಮಿಳ ಭಾಷಿಕರೆ ಆಗಿರಬೇಕು. ಶ್ರೀ ಪಿ.ಟಿ. ಶ್ರೀನಿವಾಸ ಅಯ್ಯಂಗಾರ್, ಡಾ॥ ಕೃಷ್ಣಸ್ವಾಮಿ ಅಯ್ಯಂಗಾರ್, ಪ್ರೊ. ದೀಕ್ಷಿತರ್ ಇವರು ತಮಿಳರ ಇತಿಹಾಸ ಬರೆದಿದ್ದಾರಷ್ಟೆ. ಗೋದಾ-ನರ್ಮದಾ ತೀರದ ವರೆಗೆ ತಮಿಳರು ಹಬ್ಬಿದ್ದಾಗಿ ಅವರಲ್ಲಿ ಒಬ್ಬರೂ ಹೇಳಿಲ್ಲ. ಗಂಗವಾಡಿಯನ್ನು ಆಗಾಗ ಅವರು ಆಕ್ರಮಿಸಿದ್ದುಂಟು; ಅಲ್ಲಿ ತಮಿಳರ ಪ್ರಭಾವವು ಉಂಟು. ವಿನಯ ಪುಲಿಕೇಶಿಯನ್ನು ಎದುರಿಸಲು ಬಾದಾಮಿಯ ವರೆಗೆ ಬಂದುದರ ಉಲ್ಲೇಖಗಳಿವೆ. ಆದರೆ

ಈ ಭಾಗದಲ್ಲಿ ಅವರು ತಮ್ಮ ಪ್ರಭಾವವನ್ನು ಹೆಚ್ಚುಕಾಲ ಉಳಿಸಿಕೊಳ್ಳಲು ಸಮರ್ಥರಾಗಲಿಲ್ಲ. ದಕ್ಷಿಣಾಪಥದ ಈ ಪಶ್ಚಿಮ ಭೂ-ಪ್ರದೇಶದಲ್ಲಿ ತೆಲುಗರು ಇದ್ದರೆಂದು ಸಿದ್ಧವಾಗಿಲ್ಲ.*

ಆದುದರಿಂದ ಆಗ ದಂಡಕಾರಣ್ಯದಲ್ಲಿ ವಾಸವಾಗಿದ್ದ ಕಂನಾಡ ಮೂಲಿಗರ ಬಳಗಕ್ಕೆ ಸೇರಿದ ಕೆಲವು ಪಂಗಡಗಳು ಆಗ ಇಲ್ಲಿ ನೆಲಸಬಂದ ಸಂಸ್ಕೃತ ಸಂಪ್ರದಾಯದವರಿಗೆ ಅನುಕೂಲವಾಗಿದ್ದ ಕೆಲವು ಪಂಗಡಗಳು ಇರಲಿಕ್ಕೆ ಸಾಕು. ಗೊಂಡಕಾರಣ್ಯದಲ್ಲಿ ಈಗ ಕೋಲ-ಮುಂಡ ವರ್ಗಕ್ಕೆ ಸೇರಿದ ಜನವು ಉಳಿದಿದೆ. ಆಸ್ಟ್ರೋ-ಏಶಿಯಾಟಿಕ್ ಬಳಗದವರು

---

* ಕೃತಣದಲ್ಲಿ ಆಳಿದ ಸಾತವಾಹನರನ್ನು ಆಂಧ್ರರು-ಆಂಧ್ರಭೃತ್ಯರು ಎಂದು ಪುರಾಣಗಳಲ್ಲಿ ಸಂಬೋಧಿಸಲಾಗಿದೆ. ಇವರ ೩ನೆಯ ಶತಮಾನದ ವಾತ್ಸ್ಯಾಯನನು ಅವರನ್ನು ಕುಂತಲ ಸಾತಕರ್ಣಿ ಎಂದು ಉಲ್ಲೇಖಿಸಿದ್ದಾನೆ! ಆ ರಾಜರ ಹಲವು ನಾಣ್ಯಗಳು ದೊರೆತಿವೆ; ಅವುಗಳಲ್ಲಿ ಒಂದರಲ್ಲೂ ಅವರು ತಮಗೆ ಆಂಧ್ರರೆಂದು ಅಂದುಕೊಂಡಿಲ್ಲ! ಇವರನ್ನು ಪುರಾಣಗಳು ಆಂಧ್ರರೆಂದುದು ತಪ್ಪು. ಎಂಬುದಾಗಿ ಡಾ. ಸುಖಟನಕರು. ಭಾಂಡಾರಕರ ಸಂಶೋಧನ ಪತ್ರಿಕೆಯಲ್ಲಿ ಬರೆದಿದ್ದಾರೆ. ಸೈಂಧವ ಸಂಸ್ಕೃತಿಯ ಸಂಶೋಧಕರಾದ ಡಾ. ರಾಖಲದಾಸ ಬ್ಯಾನರ್ಜಿಯವರು ತಮ್ಮ ಗ್ರಂಥದಲ್ಲಿ ಶಾತವಾಹನರನ್ನು ಕರ್ಣಾಟ ಮನೆತನದವರೆಂದು ಹೇಳಿದ್ದಾರೆ. ಶ್ರೀ ಗೋವಿಂದ ಪೈಗಳ ಅಭಿಪ್ರಾಯವೂ ಇದೇ ಆಗಿದೆ. ಒಂದು ಪುರಾಣದಲ್ಲಿ ಕರ್ಣಾಟ ರಾಕ್ಷಸನನ್ನು ಅರಣ್ಯಕ್ಕೆ ಓಡಿಸಿದ ವರ್ಣನೆ ಇದೆ. ಸಂಸ್ಕೃತ ಸಂಪ್ರದಾಯವಂತರಲ್ಲಿ ತೆಲುಗು, ತಮಿಳು ಶ್ಲೋಕಗಳು ಮಡಿಯಲ್ಲಿ ದೇವರ ಪೂಜೆಗೆ ನಡೆಯುವುವು. ತೆಲುಗು, ತಮಿಳು ಋಷಿ ಪ್ರಣೀತ ಭಾಷೆಗಳೆಂಬ ಶ್ರದ್ಧೆಯನ್ನುಂಟುಮಾಡುವ ಪುರಾಣಗಳು ಇವೆ. ಪೂಜಾದಿಗಳಲ್ಲಿ ಕಂನುಡಿಯಲ್ಲಿ ಬಳಸದಿರುವ ಮಡಿವಂತರು ಕಂನಾಡಿನಲ್ಲಿಯೇ ಉಂಟು! ೧೬ನೆಯ ಶತಮಾನದಲ್ಲಿ ಒದಗಿದ ಘಟನೆ: ಪವಿತ್ರ ಸಂಸ್ಕೃತ ಗ್ರಂಥಗಳೊಡನೆ ಪೂಜೆಗೆ ಇಟ್ಟ ದಾಸರ ಹಾಡುಗಳನ್ನು ಪೂಜಾಪೀಠದಿಂದ ಕೆಳಗೆ ಎಸೆದ ಆ ಕಥೆಯ ಮೂಲಕ ಕಂನಾಡ ನುಡಿಯ ವಿಚಾರದಲ್ಲಿ ಬೇರೂರಿದ್ದ ಭಾವನೆಯ ನೈಜಸ್ವರೂಪವು ಬಯಲಿಗೆ ಬರುತ್ತಿದೆ.

ಶೈವ-ವೀರಶೈವರು ೧೦ನೆಯ ಶತಮಾನಕ್ಕೆ ಮೊದಲು ಸಲ್ಲಿಸಿದ ಕಾಣಿಕೆಯಾದರೂ ಎಷ್ಟು ? ಇದೂ ವಿಚಾರಿಸತಕ್ಕ ವಿಷಯವಾಗಿದೆ. ಕಂನುಡಿಯವರಿಗೆ ಜೈನರು ಎಂದು ಅವರ ಭಾಷೆಯ ಮೇಲಿಂದ ಊಹಿಸುವ ವಾಡಿಕೆ ಕೊಲ್ಹಾಪುರದ ಕಡೆಗೆ ಇನ್ನೂ ಕೆಲವೆಡೆಗೆ ಉಂಟು. ಜೈನರು (ಬೌದ್ಧರು)ಗಳ ವಿಷಯಕ್ಕೆ ಸಂಸ್ಕೃತ ಸಂಪ್ರದಾಯವಂತರ ಅಸಡ್ಡೆ ಸರ್ವಶ್ರುತವಿದೆ. ಶೈವ-ವೈಷ್ಣವ ಪಂಥದ ಪುರಾಣಗಳು ಸಂಸ್ಕೃತ ಸಂಪ್ರದಾಯವಂತರಿಂದ ಪರಿಷ್ಕಾರ ಹೊಂದಿದ ಗ್ರಂಥಗಳು ಅವು ಸಂಸ್ಕೃತ ಸಂಪ್ರದಾಯವಂತರ ಪೂಜ್ಯ ಗ್ರಂಥಗಳಾಗಿವೆ. ಜೈನ-ಧರ್ಮವು ಅರಿಯರ ನಾಡಿನಲ್ಲಿ (ಮಹಾರಾಷ್ಟ್ರದಲ್ಲಿ) ಎಂದಾದರೂ ಇದ್ದಿತೆ ಎನ್ನುವಷ್ಟು, ಆ ಭಾಗದ ಇತಿಹಾಸದಲ್ಲಿ ಈ ಧರ್ಮದ ಅನುಲ್ಲೇಖಗಳುಂಟು. ನಡುವೆ ಮಹಾರಾಷ್ಟ್ರದಲ್ಲಿ ಮಾತ್ರ ಗುಪ್ತವಾಗಿ ಉತ್ತರದ ಜೈನ ಸಂಪ್ರದಾಯವು ಕಂನಾಡಿನಲ್ಲಿ ಮಾತ್ರ ಉಳಿದಿರುವ ಸಂಗತಿ ವಿಚಾರಾರ್ಹವಾಗಿದೆ ಸಂಸ್ಕೃತಿ ಸಂಪ್ರದಾಯದ ಪುನರುತ್ಥಾನಕ್ಕೆ ಪ್ರಯತ್ನಪಟ್ಟ ವಾಕಾಟಕರ ಕಾಲದಿಂದ ಮಹಾರಾಷ್ಟ್ರದಲ್ಲಿ ಜೈನಧರ್ಮವು ಹಿಮ್ಮೆಟ್ಟತೊಡಗಿತು. ನನ್ನಯಭಟ್ಟನಿಗೆ ತೆಲುಗುಭಾರತ ಬರೆಯಲು ಪ್ರೋತ್ಸಾಹಿಸಿದ ನಾರಾಯಣಭಟ್ಟನೆಂಬ ವಿದ್ವಾಂಸನು ಕಂನಾಡಿನವನು; ಕಂನಾಡಿನ ರಾಯಭಾರಿಯಾಗಿ ರಾಜಮಹೇಂದ್ರಿಯಲ್ಲಿ ಇದ್ದವನು. 'ಜೈನರಿಂದ ಸಂಸ್ಕೃತ ಸಂಪ್ರದಾಯದ ಮಹಾಭಾರತವು ವಿಕೃತವಾಗಿದೆ; ನೀನು ತೆಲುಗಿನಲ್ಲಿ ಆ ಮೂಲ ಭಾರತ ಭಾಷಾಂತರಿಸಿ ಆ ಸಂಪ್ರದಾಯ ಉಳಿಸು'. ಎಂದು ನಾರಾಯಣಭಟ್ಟನು ಸಲಹೆ ಇತ್ತನೆಂದು ಐತಿಹ್ಯವಿದೆ. ಇಂತಿದೆಲ್ಲ ಹಿನ್ನೆಲೆಯನ್ನು ಗಮನಿಸಿದಲ್ಲಿ ಸಂಸ್ಕೃತ ಸಂಪ್ರದಾಯವಂತರಲ್ಲಿ ಕಂನಾಡು-ನುಡಿಗಳ ಬಗೆಗೆ ಯಾವ ಭಾವನೆ ಇದ್ದಿತೆಂಬುದು ಸ್ಪಷ್ಟವಾಗುತ್ತವೆ. ಈ ಭಾವನೆಯು ಮುಂದೆ ಮಾರ್ಪಟ್ಟಿತು. ಈ ಮಾತು ಬೇರೆ. ಮೊದಲು ಪುರಾಣಾದಿಗಳಲ್ಲಿ ಕಂನಾಡಿನ ಬಗೆಯ ಉಲ್ಲೇಖಗಳು ಕಡಿಮೆ ಇರಲು ಒಂದು ಕಾಲದ ಈ ಬಗೆಯ ಭಾವನೆ ಕಾರಣವೆಂದು ತೋರುತ್ತದೆ.

ಇವರು. ಆರ್ಯರು ಬರುವ ಮುನ್ನವೆ ಭಾರತದಲ್ಲಿ ನೆಲೆಸಿದ್ದವರು. ಇದರಂತೆಯೇ ಕಂದಮಿಳ ಸೊಲ್ಲಿನ ಜನವೂ ಭಾರತದಲ್ಲಿ ಆರ್ಯರಿಗಿಂತ ಮೊದಲು ನೆಲೆಸಿತ್ತು. ಭಾರತದಲ್ಲಿ ಆರ್ಯರು ಪ್ರವೇಶಿಸುವ ಸುಮಾರಿಗೆ ಪಂಜಾಬ ಸಿಂಧಗಳಲ್ಲಿ ಕಂದಮಿಳ ಭಾಷಿಕರು ವರ್ಚಸ್ವಿಗಳಾಗಿದ್ದರು. ಕೋಲ-ಮುಂಡರು ಸಾಂಸ್ಕೃತಿಕ ದೃಷ್ಟಿಯಿಂದ ಹಿಂದುಳಿದವರಾಗಿದ್ದು, ಕಂದಮಿಳ ಭಾಷಿಕರ ಪ್ರಭಾವಕ್ಕೆ ಎಂದೋ ಒಳಗಾಗಿದ್ದರು. ಭಾರತಕ್ಕೆ ಆರ್ಯರು ಬಂದಾಗ ಸಿಂಧ-ಪಂಜಾಬ ಭಾಗದಲ್ಲಿ ಕಂದಮಿಳ ಸೊಲ್ಲಿನವರ ನೇತೃತ್ವದಲ್ಲಿ ಎದುರಿಸಿ ಬಂದ ವಿರೋಧಿಗಳೊಡನೆಯ ಆರ್ಯಭಾಷಿಕರ ಮೊದಲ ಹೋರಾಟ - ಒಡನಾಟಗಳು ಒದಗಿರಬೇಕು.

'ಗೊಂಡಾರಣ್ಯ' ಈ ಪದದಲ್ಲಿ ಭಿನ್ನಭಾಷೆಯ ಎರಡು ಶಬ್ದಗಳಿವೆ. ಗೊಂಡ+ಅರಣ್ಯ. ಒಂದು ದೇಶೀಯ ನುಡಿ, ಇನ್ನೊಂದು ಸಂಸ್ಕೃತ ಪದ. 'ಗೊಂಡಾರಣ್ಯ' ಎಂಬೀ ಬಗೆಯ ಪದಪ್ರಯೋಗವು ಇವೆರಡೂ ಜನ ಒಗ್ಗಿಕೊಂಡು ಒಡಗೂಡಿ ಬಾಳತೊಡಗಿದುದರ ಎಂದರೆ, ಸಂಸ್ಕೃತಿಸಂಗಮದ ಬಾವುಟವಾಗಿದೆ.

(೪) ಸಿಂಧ-ಪಂಜಾಬಿನಲ್ಲಿ ಆರ್ಯಭಾಷಿಕರೊಡನೆ ಬಂದ ಸಂಪರ್ಕ-ಸಂಬಂಧಗಳಿಂದ, ಮೂಲ ಕಂದಮಿಗಳ ವರ್ಗದ ಭಾಷಿಕರಲ್ಲಿ ಸಂಪ್ರದಾಯವಾದಿಗಳು, ಮತ್ತು ಸುಧಾರಣೆಗೆ ಅನುಕೂಲವಿದ್ದವರು ಎಂಬೀ ಬಗೆಯಲ್ಲಿ ಹಲಕೆಲವು ಒಳಪಂಗಡಗಳು ಆ ಭಾಗದಲ್ಲಿರುವಾಗಲೆ ತಲೆ ಎತ್ತಿರಲೇ ಬೇಕು. ತಮಿಳಿನಲ್ಲಿ ಸಂಸ್ಕೃತ ಭಾಷೆಯು ಬೆರೆತುಕೊಂಡುದುಂಟು. ಆದರೆ ತಮಿಳರು ತಮ್ಮ ಉಚ್ಚಾರ ವೈಶಿಷ್ಟ್ಯವನ್ನು ಬಿಟ್ಟುಕೊಡಲಿಲ್ಲ. ತಮಿಳು ವರ್ಣಮಾಲೆಯನ್ನು ಶಕ್ಯವಿದ್ದಷ್ಟು ಮೂಲಸ್ವರೂಪದಲ್ಲಿಯೇ ಕಾಯ್ದುಕೊಂಡರು. ತಮಿಳಿನಲ್ಲಿ ಅಳವಟ್ಟ ಅಥವಾ ಅಳವಡುವ ಸಂಸ್ಕೃತ ಪದಗಳು ; ತಮಿಳು ಸೊಲ್ಲಿನ ರೂಪ ಆಕಾರ ತಾಳದೆ ಗತಿಯಿದ್ದಿಲ್ಲ. ಅದರಿಂದ ಮೂಲ ತಮಿಳ ಪದವು ಯಾವುದು, ಸಂಸ್ಕೃತದಿಂದ ಬಂದ ಮಾತು ಯಾವುದು ಎಂಬುದನ್ನು ಬೇರ್ಪಡಿಸಿ ನಿರ್ಧರಿಸುವುದು ದುಸ್ತರವಾಗಿದೆ. ಕಂನಾಡವರು ಮತ್ತು ಕಮ್ಮನಾಡವರು (ಆಂಧ್ರರು) ಸಂಸ್ಕೃತವನ್ನು ಹೆಚ್ಚಿನ ಆತ್ಮೀಯತೆಯಿಂದ ಸ್ವಾಗತಿಸಿದ್ದುಂಟು. ಇವೆರಡು ಸೊಲ್ಲಿನಲ್ಲಿ ಸಂಸ್ಕೃತಕ್ಕೆ ದೊರೆತ ಪ್ರಾಶಸ್ತ್ಯವು ಇದಕ್ಕೆ ಸಾಕ್ಷಿ. ಆರ್ಯರು ನರ್ಮದಾ ತೀರಕ್ಕೆ ಬರುವ ಸುಮಾರಿಗೆ, ಕಂನಾಡ ಮೊದಲಿಗರು ತಮ್ಮ ನಡೆನುಡಿಗಳ ವೈಶಿಷ್ಟ್ಯದಿಂದ ಉಳಿದವರಿಂದ ಬೇರೆಯಾಗಿರಬೇಕೆಂದು ತೋರುತ್ತದೆ. ನರ್ಮದಾ-ಗೋದಾ ತೀರದಲ್ಲಿ ಹಟ್ಟಿ, ಬೀಡು ಇಂತಹ ಹಲವು ಸ್ಥಲನಾಮಗಳಿವೆ. ಈ ಭಾಗದಲ್ಲಿ ಕಂನಾಡ ಮೊದಲಿಗರು ನೆಲೆಸಿದ್ದರೆಂದು ಈ ಗ್ರಾಮನಾಮಗಳಿಂದ ಊಹಿಸಲು ಅವಕಾಶವಿದೆ. ಔರಂಗಾಬಾದ ಜಿಲ್ಹೆಯಲ್ಲಿ 'ಕಂನಡ' ಎಂಬ ಊರಿದೆ. ತಾಲ್ಲೂಕು ಇದೆ. ನರ್ಮದೆಯ ಉತ್ತರದಲ್ಲಿ ಇಂದೂರು ಸಂಸ್ಥಾನ ! ಮತ್ತೆ ಆ ಸಂಸ್ಥಾನದಲ್ಲಿ 'ಕಂನಡ' ಎಂಬ ಹೆಸರಿನ ೪-೫ ಸ್ಥಲನಾಮಗಳು ಬೇರೆ ! (ಈ ಭಾಗದಲ್ಲಿ ಇರುವ ಇಂತಹ ಹಲವು ಊರುಗಳ ಹೆಸರುಗಳನ್ನು ಇದೇ ಲೇಖಕನ ಕಂನಾಡ ಕತೆಯಲ್ಲಿ ಸಂಗ್ರಹಿಸಿ ಕೊಡಲಾಗಿದೆ.)

(೫) ಸ್ಥಲನಾಮಗಳಿಗೆ ಆ ಹೆಸರು ಯಾರಿಂದ ಬಂದುವು ಎಂಬುದು ಗೊತ್ತಾಗುತ್ತದೆ.

ಕಂನಾಡವರ ಸೊಲ್ಲಿನ ಎಡೆಯ ಹೆಸರುಗಳು ಅಲ್ಲಿವೆ. ಅಲ್ಲಿ ಒಂದು ಕಾಲಕ್ಕೆ ಈ ಜನ ಪ್ರಭಾವಶಾಲಿಗಳಾಗಿದ್ದರೆಂಬುದನ್ನು ಅವು ಸಾರುತ್ತವೆ. ಆ ಭಾಗದಲ್ಲಿ ಸಂಸ್ಕೃತ ಭಾಷೆಯು ಸುಪ್ರತಿಷ್ಠಿತವಾಗುವ ಮೊದಲು ಈ ಹೆಸರುಗಳು ಅಲ್ಲಿ ತಲೆಯೆತ್ತಿರಲಿಕ್ಕೆ ಬೇಕು. ಸಂಸ್ಕೃತ ಭಾಷಿಕರ ವರ್ಚಸ್ಸಿನಲ್ಲಿ ಅಲ್ಲಿಯ ದೇಶೀಯ ಭಾಷೆಯ ಸ್ಥಲನಾಮಗಳು ಮಾರ್ಪಟ್ಟುದೇ ಕಂಡುಬರುತ್ತವೆ. ತೊರನಾಡುಗಳಿಗೆ ಸಾಗಿಹೋಗಿ ಕಂನಾಡವರು ಅಲ್ಲಿ ತಮ್ಮ ನಡೆವಳಿ–ನುಡಿವಳಿಯ ಪ್ರಭಾವ ಬೀರುವ ಪ್ರಯತ್ನ ಮಾಡಿದ್ದನ್ನು ಸೂಚಿಸುವ ಪ್ರಮಾಣಗಳು ಇತಿಹಾಸದಲ್ಲಿ ಈಗಂತೂ ಬೆಳಕಿಗೆ ಬಂದಿಲ್ಲ. ನರ್ಮದಾ–ಗೋದೆಯ ಪರಿಸರದಲ್ಲಿರುವ ನಾಡು, ಬೀಡು, ಹಟ್ಟಿ, ಊರು, ಕುಂಡ>ಗುಂಡ, ಕೊಂಡ>ಗೊಂಡ, ಕೊಪ್ಪ, ಕೊಳ್ಳ ಎಂಬೀ ಬಗೆಯ ಹೆಸರುಗಳು ಈಗ ಮಹಾರಾಷ್ಟ್ರವೆನಿಸುವ ಆ ಪ್ರದೇಶದಲ್ಲಿವೆ. ಸಂಸ್ಕೃತ ಭಾಷಿಕರ ಮೇಲ್ಮೆಯ ಕಾಲದಲ್ಲಿ ಇಲ್ಲಿ ಬಂದು, ಕಂದಮಿಳ ಭಾಷೆಯವರು ಅವರಿಗಿಂತ ಪ್ರಭಾವಶಾಲಿಗಳಾಗಿ ಮೆರೆಯುತ್ತಿದ್ದಾಗ ಅವರ ಭಾಷೆಯ ಸ್ಥಲನಾಮಗಳು ಪ್ರಚಾರದಲ್ಲಿ ಬಂದುವು ಎಂದು ಊಹಿಸುವುದಕ್ಕೆ ಅಂತಹ ಪ್ರಮಾಣಗಳು ದೊರೆಯುವುದಿಲ್ಲ. ಆದುದರಿಂದ ಇದು ಸಬಲವಾದ ಅನುಮಾನವೆನಿಸದು. ಕ್ರಿಸ್ತಾಬ್ದದ ಪ್ರಾರಂಭಕ್ಕೆ ಮೊದಲೇ, ಕೆಲ ಶತಮಾನ, ಸಂಸ್ಕೃತವು ದಕ್ಷಿಣಾಪಥದಲ್ಲಿ ಗೌರವಾದರಗಳಿಗೆ ಪಾತ್ರವಾದ ಭಾಷೆಯಾಗಿತ್ತು.

ಆದುದರಿಂದ ೯ನೆಯ ಶತಮಾನದ ಸುಮಾರಿಗೇ ಗೋದೆಯು ಉತ್ತರದ ಮೇರೆಯಾಗಿ ಉಳಿದಿದ್ದ ಕಂನಾಡು, ಆ ಮೊದಲು ಕೆಲ ಶತಮಾನಗಳ ವರೆಗೆ ನರ್ಮದೆಯವರೆಗೂ ವ್ಯಾಪಿಸಿಕೊಂಡಿದ್ದಿತೆಂದು ಊಹಿಸಬೇಕಾಗುತ್ತದೆ. ನವೋತ್ಸಾಹದ ಸಂಸ್ಕೃತವಾಣಿಯ ಎದುರು, ಕಂನಾಡ 'ಜರದ್ವಧುವು' ಹತಪ್ರಭಳಾಗಿ ಕಂದಿದಳು; ಕುಂದಿದಳು, ಗೋದೆಯ ವರೆಗೆ ಹಿಂದೆ ಸರಿದಳು, ಎಂದು ಒಟ್ಟಿನಲ್ಲಿ ಅನುಮಾನವು ಹೊರಡುತ್ತದೆ.

ಗೋದಾ : ಗೋವಳರಿಗೆ ಜೀವನಾದಾತೆ : ಮಾತೆ

ಮಹಾರಾಷ್ಟ್ರದಲ್ಲಿ 'ಕಾನಡ ಗೌಳಿಗಳು' ಹೇಗೆ? ಅಹಮ್ಮದನಗರ–ನಾಸಿಕ–ಖಾನದೇಶ ಗ್ಯಾಝಿಟಿಯರುಗಳಲ್ಲಿ ಈ ಗೋವಳರ ವರ್ಣನೆ ಬಂದಿದೆ. ಸುಮಾರು ನಾಲ್ಕಾರುನೂರು ದನಗಳ ಹಿಂಡು ಸಾಕಿಕೊಂಡು ಜೀವನವನ್ನು ಸಾಗಿಸುತ್ತಿದ್ದ ಹಲವು ತಂಡಗಳು ಈ ಭಾಗದಲ್ಲಿ ಅಲೆಯುತ್ತಿದ್ದುವು; ಅಲೆಯುತ್ತಲೂ ಇವೆ. ಕಾಡಿನಲ್ಲಿ ಗುಡ್ಡಗಳ ಓರೆಗುಂಟ ದನ–ಕುರಿ ಮೇಯಿಸಿಕೊಂಡು ಉಪಜೀವಿಸುತ್ತಿದ್ದ ಈ ಜನಕ್ಕೆ 'ಕಾನಡೇ' ಎಂದು ಹೆಸರು ಬಂದುದರ ಕಾರಣವೇನಿರಬಹುದು? ಸಮಾಜಶಾಸ್ತ್ರದ ಸಂಶೋಧಕರಾದ ಡಾ. ವಿಕ್ಟರ ಡಿಸೂಝ ಅವರು ಈ ಕಾನಡ ಗೌಳಿಗರನ್ನು ಪ್ರತ್ಯಕ್ಷ ಸಂದರ್ಶಿಸಿ ಒಂದು ಲೇಖನವನ್ನು ಪ್ರಕಟಿಸಿದ್ದಾರೆ. ಅವರಲ್ಲಿ ಇಂದಿಗೂ ಉಳಿದಿರುವ ಕಂನಾಡವರ ನಡೆವಳಿ–ನುಡಿವಳಿಗೆ ಹೋಲುವ ಅಂಶಗಳನ್ನು ಉದಾಹರಿಸಿ ಅವರು ಬರೆದ ಲೇಖನವು ಕರ್ನಾಟ ವಿಶ್ವವಿದ್ಯಾಲಯ ಪತ್ರಿಕೆಯಲ್ಲಿ ಪ್ರಕಟವಾಗಿದೆ (೧೯೫೮).

ಈ ಪರಿಸರದೊಳಗಿನ ಮುಖ್ಯನದಿ ಗೋದಾ; ಇಲ್ಲಿಯೆ ಗೋ–ವರ್ಧನ ಗಿರಿಯುಂಟು!

ಈ ಭಾಗಕ್ಕೆ ಪ್ರಾಚೀನಕಾಲದಲ್ಲಿ ‘ಗೋಪರಾಷ್ಟ್ರ’ ಎಂಬ ಹೆಸರಿತ್ತು! ಖಾನದೇಶದ ಸ್ಥಳಪುರಾಣಗಳಿಂದ ಅಲ್ಲಿ ಹಿಂದಕ್ಕೆ ‘ಗೌಳೀರಾಜೇ’ ಆಗಿಹೋದುದು ತಿಳಿಯುತ್ತದೆ. ಖಾನದೇಶ ಜಿಲ್ಲೆಯ ಸ್ಥಳಪುರಾಣಗಳಲ್ಲಿ ಮತ್ತು ವಿಜಾಪೂರ ಜಿಲ್ಲೆಯ ಸ್ಥಳಪುರಾಣಗಳಲ್ಲಿ ಅವು ಹೋಲಿಕೆಯುಳ್ಳುದಾಗಿ ಗ್ಯಾಝೆಟಿಯರು ಹೇಳುತ್ತವೆ. ಸ್ಥಳನಾಮಗಳಲ್ಲಿ ಇರುವ ಈ ಸಾಮ್ಯವನ್ನು ‘ಕಣ್ಮರೆಯಾದ ಕಂನಡ’ ಪುಸ್ತಕದಲ್ಲಿ ಈ ಮೊದಲು ವಿವರಿಸಿದ್ದಾಗಿದೆ (೧೯೩೩).

ಖಾನದೇಶ ಈ ಹೆಸರು, ಮಹಮ್ಮದೀಯರಿಂದ ಬಂದುದಲ್ಲ. ಖಾನದೇಶದ ಮೂಲ ಹೆಸರು ‘ಕನ್ನದೇಶ’ ಎಂದಿದ್ದಿತು, ಎಂದು ಅಲ್ಲಿಯ ಗ್ಯಾಝೆಟಿಯರಿನಲ್ಲಿ ನಮೂದಿಸಲಾಗಿದೆ. (ಕನ್ನ–ಕಣ್ಣ–ಕಣ್ಣ, ಕರ್ಣದ ಚರ್ಚೆ ಮುಂದೆ ಬಂದಿದೆ). ‘ಕಾನಡ’ ಗೋವಳರ ಬೀಡಾದ ಕನ್ನ (ಖಾನ)ದೇಶವು ಪ್ರಾಚೀನ ‘ಕನ್ನ’ ಜನರ ಎಂದರೆ ಕಂನಾಡಿನ ಮೊದಲಿಗರ ನೆಲೆವೀಡು ಆಗಿರಬೇಕೆಂದು ಅಲ್ಲಿಯ ಬೇರೆ ಅನೇಕ ಸ್ಥಾನಿಕ ಸಂಗತಿಗಳಿಂದಲೂ ಅನುಮಾನವಾಗುತ್ತದೆ. ಆದುದರಿಂದ ಈ ಗೋವಳಿಯ ಕಂನಾಡ ತುರುಕಾರ–ದನಗಾರರೆಂದು ಹೇಳಬೇಕಾಗುತ್ತದೆ.

ಈ ಜಿಲ್ಲೆಗೆ ಹೊಂದಿಯೆ ವರ್ಹಾಟ–ನಾಗಪುರ ಪ್ರಾಂತವುಂಟು. ಅಲ್ಲಿ ಚಂದಾ–ಭಂಡಾರಾ ಜಿಲ್ಲೆಗಳಲ್ಲಿ ಕಂನುಡಿಯನ್ನಾಡುವ ಆದಿವಾಸಿ (ಹರಿಜನ)ಗಳುಂಟು! ಗೋದೆಯ ಉತ್ತರಕ್ಕೆ ಈ ಜನ ಹೇಗೆ? ಈ ಜನಗಳ ಸೋಲ್ಲು, ಕಂನಾಡನವರಂತೆ ಇರುವುದರಿಂದ, ಇವರು ಕರ್ಣಾಟದತ್ತಣಿಂದ ಬಂದರೆಂದು ಹಲವರ ಊಹೆ. ರಾಜಕೀಯ ಹೋರಾಟದಲ್ಲಿ ತೊಡಗಿದ ಅರಸುಮನೆತನಗಳು, ಹೀಗೆ ಒಂದು ನಾಡಿನಿಂದ ಇನ್ನೊಂದು ಕಡೆಗೆ ಹೋಗುವುದುಂಟು ಅಥವಾ ವಿದ್ವಾಂಸರು, ವರ್ತಕರು, ಧರ್ಮಪ್ರಚಾರಕರ ವರ್ಗಕ್ಕೆ ಸೇರಿದ ಜನವೂ ಇವರಲ್ಲ. ಇವರು ‘ಕುರುಬರು’ ನಾಗಪುರ ಭಾಗದಲ್ಲಿ ‘ಕುರುಂಬ’ರು ಎಂದು ಕರೆಯಿಸಿಕೊಂಬ ಜನವಿದೆ. ಕೊರಬ (ಕುರುಬ) ಮರ್ಹಾಟದ ಹಳ್ಳಿಯ ಹಳಬರು. ಇವರು ಕೋಲಕಾರರು; ಅಲ್ಲಿ ಊರೂರಿಗೆ ಇದ್ದಾರೆ ! ಇವರು ಈಗ ಆರೆ ಮಾತಿನವರು; ಎಂದರೆ ಆರೆಕುರುಬರು ಆದಂತಾಯಿತು. ಪಶುಪಾಲನ ವೃತ್ತಿಯಿಂದ ಜೀವಿಸುವ ‘ಕುರುಬ’ ಮನೆತನಗಳು ಆಯಾ ನಾಡಿನ ಬಹು ಪುರಾತನ ಮೂಲಿಗರಾಗಿರಬೇಕೆಂದು ಊಹಿಸಲಾಗುತ್ತದೆ, ಸಮಾಜಶಾಸ್ತ್ರಜ್ಞರಿಂದ. ನಾಡಿನ ನೆಲಗಟ್ಟು ಇವರು. ಕಂನಾಡ ನೆಲಗಟ್ಟಿನ (ಕುರುಬರ, ಕುರುಬರು ಮೊದಲಾದ) ಜನ ಗೋದಾ ನರ್ಮದಾ ತೀರದಲ್ಲಿ ಇನ್ನೂ ಉಳಿದಿದ್ದಾರೆ! ಇದನ್ನು ಹೇಗೆ ಅರ್ಥಮಾಡಿ ಕೊಳ್ಳಬಹುದು?

ಡಾ. ಗ್ರಿಯರ್ಸನ್ ಹೀಗೆ ಹೇಳುತ್ತಾರೆ

When an Aryan tongue comes into contact with an uncivilized aboriginal one, it is invariably the latter which goes to the wall. The Aryan doesnot attempt to speak it, and the necessities of intercourse compell the aboriginal to use broken pigeon form of language of a superior civilization. As generations pass, this mixed jargon more

and more approximates to its model: and in process of time the old aboriginal language is forgotten: and dies a natural death...... we can watch it in all its stages of its progress.

ಭರತ ಖಂಡದೊಳಗಿನ ಪ್ರತಿಯೊಂದು ಭಾಷೆಯನ್ನು ಆಧುನಿಕ ಭಾಷಾಶಾಸ್ತ್ರದ ದೃಷ್ಟಿಯಿಂದ ವಿಮರ್ಶಿಸಿ, ಅವುಗಳ ಹುಟ್ಟು ಬೆಳವಿಯ ಕುರಿತ ಸಮೀಕ್ಷೆ ನಡೆಸಲು, ಒಂದು ಅಭ್ಯಾಸಮಂಡಳವು ಹಿಂದಿನ ಬ್ರಿಟಿಷರ ಆಡಳಿತದಲ್ಲಿ ಸರಕಾರದಿಂದ ನಿಯೋಜಿತವಾಗಿತ್ತು. ಹಲವು ವಿದ್ವಾಂಸರ ಅಭ್ಯಾಸದ ಫಲವಾಗಿ ಭಾರತೀಯ ಎಲ್ಲ ಭಾಷೆಗಳ ವಿಚಾರವು ಹಲವು ಸಂಪುಟಗಳಲ್ಲಿ ಪ್ರಕಟವಾಗಿದೆ. ಹಲವೆಡೆಗೆ ಆರ್ಯವರ್ಗದ ಭಾಷೆಗಳ ವರ್ಚಸ್ಸು ಹೆಚ್ಚಾದಂತೆ, ಅಲ್ಲಿಯ ದೇಶಿಯು ಮಾರ್ಪಡುತ್ತ ಹೋದುದು ಆ ಸಮೀಕ್ಷೆಯಲ್ಲಿ ಕಂಡುಬಂದಿದೆ. ಹಲವೆಡೆಗೆ ಆ ದೇಶಿಯು, ಪ್ರಾಕೃತವೆಂಬ ಸಂಸ್ಕೃತಜನ್ಯ ಭಾಷೆಯಲ್ಲಿ ಬೆರೆತು ಹೋಗಿ ಅದರ ಕೆಲ ಅವಶೇಷಗಳು ಮಾತ್ರ ಉಳಿದುಕೊಂಡಿವೆ. ಸಂಸ್ಕೃತ ಪ್ರಾಕೃತಗಳಿಂದ ನಿಷ್ಪನ್ನವಾದುವು ಎಂದು ಬಗೆಯಲಾದ ಹಿಂದೀ, ಬಂಗಾಲಿ, ಗುಜರಾತಿ, ಮರಾಠಿ ಮೊದಲಾದ ಭಾಷೆಗಳಲ್ಲಿ ಆರ್ಯೇತರ ಭಾಷೆಯ ಹಲವಾರು ಪದಪ್ರಯೋಗಗಳುಂಟು; ಪ್ರತ್ಯಯಾದಿಗಳುಂಟು. ಆ ಭಾಷೆಗಳ ಶೈಲಿ ಮತ್ತು ಉಚ್ಚಾರದಲ್ಲಿ ಆ ಪ್ರಭಾವವು ಈಗಲೂ ಇದ್ದುದಾಗಿ ಆಯಾ ಭಾಷೆಯ ತಜ್ಞ ವಿದ್ವಾಂಸರೆ ನಿರ್ಧರಿಸಿದ್ದಾರೆ. ಈ ಬಗೆಯ ಅವಶಿಷ್ಟಭಾಗವು ಮುಖ್ಯವಾಗಿ ಕಂದಮಿಳ ಭಾಷಾವರ್ಗಕ್ಕೆ ಸೇರಿದ್ದಾಗಿದೆ.

ಮೇಲೆ ಕಾಣಿಸಿದ, ಜಾ. ಗ್ರಿಯರಸನ್ ಅವರ ಅಭಿಪ್ರಾಯವು, ಈಗ ಸರ್ವಮಾನ್ಯವಾಗಿದೆ. ಅವರು ಬಳಸಿದ aboriginal ಮತ್ತು uncivilized ಎಂಬ ಮಾತುಗಳಲ್ಲಿ ಮಾತ್ರ ಔಚಿತ್ಯವು ಕಡಿಮೆ ಇದೆ. ಮಾನವನಲ್ಲಿ ಅಸ್ಮಿತಾ ಭಾವವು ತಲೆದೋರಿ ಎರಡು ಲಕ್ಷ ವರುಷಗಳು ಮಿಕ್ಕಿದುವು. ಸುತ್ತಲಿನ ಪರಿಸ್ಥಿತಿಯೊಡನೆ ಹೋರಾಡುತ್ತ ಆತನು ಅನೇಕಾನೇಕ ಅನುಭಾವಗಳನ್ನು ಪಡೆದಿದ್ದಾನೆ. ಹಿಂದಿನ ಪೀಳಿಗೆಯವರ ಅನುಭವಗಳ ಜ್ಞಾನವು ಮುಂದಿನವರಿಗೆ ನಿಧಿನಿಕ್ಷೇಪವಾಗಿ ದೊರೆಯುತ್ತದೆ. ಬೇಟೆಗಾರಿಕೆ, ದನಗಾರಿಕೆ, ಒಕ್ಕಲುತನ, ವ್ಯಾಪಾರೋದ್ಯೋಗ, ರಾಜಕೀಯ ವ್ಯವಹಾರ ಈ ಬಗೆಯ ವಿಕಾಸಕ್ರಮದಲ್ಲಿ ಮಾನವನೊಡನೆಯೆ ಧಾರ್ಮಿಕ (ತಾತ್ವಿಕ) ಜಿಜ್ಞಾಸೆಯೂ ಮೊದಲಿನಿಂದ ಮೊಳೆತು ಬೆಳೆಯುತ್ತ ಬಂದುದುಂಟು. ಈ ಲಕ್ಷಾವಧಿ ವರ್ಷಗಳಲ್ಲಿ ಪಡೆದ ಅನುಭವ, ಮತ್ತು ಸಂಸ್ಕಾರಗಳಿಂದ ಪಾಠ ಕಲಿತು ಮಾನವಕುಲದಲ್ಲಿ ಕೆಲವರು ಹೆಚ್ಚು ಪ್ರಗತಿಯನ್ನು ಹೊಂದಿದರು. ಸಂಪ್ರದಾಯಶರಣರಾಗಿ, 'ಭೂತಕಾಲದಲ್ಲಿಯೇ ಪರಿಪೂರ್ಣತೆ ಇತ್ತು' ಎಂಬ ಶ್ರದ್ಧೆಯನ್ನು ತಳೆದವರು, ಮೇಲೆ ಉಲ್ಲೇಖಿಸಿದವರಿಗಿಂತ ಹಿಂದುಳಿದವರಾದರು. ಸುತ್ತಲಿನ (ಜಾಗತಿಕ) ಪರಿಸ್ಥಿತಿಯನ್ನು ಗಮನಿಸಿ, ಕಾಲಕಾಲಕ್ಕೆ ಅವಶ್ಯಕವಾದ ಕೆಲವು ಮಾರ್ಪಾಟುಗಳನ್ನಾದರೂ ಮಾಡಿಕೊಳ್ಳದೆ ಯಾವ ಜನಾಂಗವೂ ಬದುಕಿ ಬಾಳಲಾರದು. ಆದುದರಿಂದ aboriginal ಎಂಬುವರು ಉಳಿದಿಲ್ಲ. ಯಾರಿಗೆ ಆಗಲಿ, uncivilized (ಅಸಂಸ್ಕೃತರು) ಎಂಬುವುದು ಅಸಮರ್ಪಕವಾಗಿದೆ. (೧) ಹೆಚ್ಚು

ಸಂಸ್ಕಾರವಂತರು ಮತ್ತು (೨) ಕಾಲಕಾಲಕ್ಕೆ ಅವಶ್ಯಕವಾದ ಸಂಸ್ಕರಣವನ್ನು ಮಾಡಿಕೊಳ್ಳಲು ಒಲ್ಲದ ಸಂಪ್ರದಾಯವಂತರು, ಎಂದು ತಾರತಮ್ಯದಿಂದ ಹೇಳುವುದು ಹೆಚ್ಚು ಸಯುಕ್ತಿಕವಾಗಿದೆ.

ಉತ್ತರ ಹಿಂದೂಸ್ತಾನದ ಬಿಹಾರದ ಗುಡ್ಡಕಾಡುಗಳಲ್ಲಿ ಮಾಲ್ತೋ (ಮಾಲರು-ಮಲವರು), ಕುರ್ಖ (ಕುರುಬರು) ಎಂಬ ಹೆಸರಿನ ವನವಾಸಿಗಳಿದ್ದಾರೆ. ಇವರ ಭಾಷೆ ಕಂನುಡಿಗೆ ಹತ್ತಿರದ್ದೆಂದು ತಜ್ಞರ ಅಭಿಪ್ರಾಯವಿದೆ. ವಿಂಧ್ಯದ ಪರಿಸರದಲ್ಲಿ ಕಂನಾಡ ನುಡಿ ಬಳಗದ ಈ ಅವಶೇಷಗಳು ಎಲ್ಲಿಂದ ಬಂದುವು? ಕಂನಾಡಿನಲ್ಲಿ ವಾಸವಾಗಿರಲು ಅವರಿಗೆ ಕಾಡುಗಳು ಕಡಿಮೆ, ಎಂದು ಇತ್ತ ಗುಳೇ ಕಟ್ಟಿಕೊಂಡು ಎದ್ದು ಬಂದರೆ ?

ಬ್ರಾಹೂಯಿ ಉದಾಹರಣೆ

ಬಲೂಚಿಸ್ತಾನದ ಭಾಗದಲ್ಲಿ 'ಬ್ರಾಹೂಯಿ' ಎಂಬ ಒಂದು ವಿಶಿಷ್ಟ ಭಾಷೆ ಉಂಟಷ್ಟೆ. ಇದು ಕಂದಮಿಳ ಭಾಷೆಗೆ ಸೇರಿದ ಭಾಷೆ; ಕಂನುಡಿಗೆ ಹತ್ತಿರದ ಭಾಷೆ ಎಂದು ಶಾಸ್ತ್ರಜ್ಞರು ಹೇಳುತ್ತಾರೆ. ಕಂದಮಿಳ ವರ್ಗದ ಭಾಷೆಗಳು ದಕ್ಷಿಣ ಹಿಂದೂಸ್ತಾನದಲ್ಲಿಯೇ ಜೀವಂತ ಉಂಟು. ಉತ್ತರ ದೇಶದಲ್ಲಿ ಆ ಬಳಗಕ್ಕೆ ಸಂಬಂಧಪಟ್ಟ. ಈ 'ಬ್ರಾಹೂಯಿ' ಎಲ್ಲಿಂದ ಚಿಗುರಿಕೊಂಡಿತು, ಎಂಬ ಪ್ರಶ್ನೆ ಉಂಟಾಗುತ್ತದೆ. ಡಾ. ಗ್ರಿಯರ್ಸನ್ ಇವರು ಹೇಳಿದ ಸೂತ್ರದಂತೆ ಬ್ರಾಹೂಯಿ ಸಮಸ್ಯೆಯ ಉತ್ತರವನ್ನು ಕಂಡುಹಿಡಿಯಲಾಗಿದೆ. ಈ ಮೀಮಾಂಸೆಯು ಬಹುಜನ ವಿದ್ವಾಂಸರಿಂದ ಮನ್ನಣೆಯನ್ನೂ ಪಡೆದಿದೆ. ಸಂಸ್ಕೃತ-ಪ್ರಾಕೃತ ವರ್ಗದ ಭಾಷೆಗಳು ಪ್ರಭಾವಶಾಲಿಗಳಾಗಿ ಆ ಭಾಗದಲ್ಲೆಲ್ಲ ಹಬ್ಬಿದಂತೆ ಆಗ ಅಲ್ಲಿ ಇದ್ದ ಮೊದಲಿನ ದೇಶಿಯು ಆ ಹೊಸ ಭಾಷೆಯಲ್ಲಿ ಬಹುತರ ವಿಲೀನವಾಯಿತು. ಪೂರ್ಣ ವಿಲೀನವಾಗದೆ ಅಂತೂ ಇಂತೂ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡ ಅವಶೇಷಗಳು ಬ್ರಾಹೂಯಿ ಯಂತೆ ಅಲ್ಲಲ್ಲಿ ಉಳಿದಿವೆ, ಸಾಗರದಲ್ಲಿ ಅಲ್ಲಲ್ಲಿ ಉಳಿದುಕೊಂಡ ಸಣ್ಣಪುಟ್ಟ ದ್ವೀಪಗಳ ಭೂಭಾಗದಂತೆ. ಬಲೂಚಿಸ್ತಾನದತ್ತ ಬ್ರಾಹೂಯಿಯು ಉಳಿದುಕೊಂಡುದು ಹೀಗೆ. ಹಾಗಾದರೆ ಇದೇ ಬಗೆಯಲ್ಲಿ ನರ್ಮದಾ-ಪರಿಸರದ ಚಂದಾ ಭಂಡಾರ ಭಾಗದಲ್ಲಿ ಅವಶಿಷ್ಟ ಕಂನಾಡವರ ಅಸ್ತಿತ್ವದ ಅರ್ಥವೂ ಆಗಲಾರದೆ?

ನರ್ಮದಾ ತೀರದಲ್ಲಿ ಕಂನಾಡವರ ಬಳಗದ ಈ ಅವಶೇಷಗಳಿವೆ. ೯ನೆಯ ಶತಮಾನದಲ್ಲಿ 'ಕಂನಾಡ ಉತ್ತರದ ಗಡಿ ಗೋದಾವರಿಯಾಗಿದ್ದಿತೆಂದು' ಕವಿರಾಜಮಾರ್ಗವು ಹೇಳುತ್ತಿದೆ. ಅದಕ್ಕೂ ಪೂರ್ವಕಾಲದಲ್ಲಿ ಈ ಗಡಿಯು ನರ್ಮದೆಯವರೆಗೂ ಇರುವ ಶಕ್ಯತೆಯನ್ನು ಸೂಚಿಸುವ ಕೆಲವು ಕಾರಣಗಳನ್ನು ಮೇಲೆ ವಿವರಿಸಿದ್ದಾಗಿದೆ. ಇಂತಿವೆಲ್ಲ ಸಂಗತಿಗಳನ್ನು ಸಮಾಲೋಚಿಸಿದಲ್ಲಿ ಈ ಕಾರಣಮೀಮಾಂಸೆ ನಿರಾಧಾರವೆಂದು ಸಿದ್ಧವಾಗುವವರೆಗೆ, ನರ್ಮದಾ ತೀರದ 'ಕಣ್ಮರೆಯಾದ ಕಂನಡ'ದ ಅಸ್ತಿತ್ವವನ್ನು ಅನುಮಾನಿತ-ಸತ್ಯವೆಂದು (Hypothesis) ಗ್ರಹಿಸಲು ಆತಂಕವೇನು?

❑

ಪ್ರಾಚೀನ ಕರ್ನಾಟಕದ ಭಾಷೆ-ಸಾಹಿತ್ಯ

(ಮೌರ್ಯ-ಸಾತವಾಹನ-ಗಂಗ-ಕದಂಬರ ಕಾಲ)

■ ಎಂ.ಬಿ. ನೇಗಿನಹಾಳ

ಮೂಲ ದ್ರಾವಿಡ ಭಾಷೆ ಪ್ರಾದೇಶಿಕ ಗುಂಪುಗಳಾಗಿ ಒಡೆಯತ್ತ ಬಂದು ಅದರಲ್ಲಿ ದಕ್ಷಿಣದ್ರಾವಿಡವೆಂಬ ಪ್ರಧಾನ ಶಾಖೆ ಮೊದಲು ಪ್ರತ್ಯೇಕಗೊಂಡಿತು. ಕಾಲಾಂತರದಲ್ಲಿ ಈ ಮೂಲ ದಕ್ಷಿಣ ದ್ರಾವಿಡ ಭಾಷೆ ಕೂಡ ಸ್ಥಿತ್ಯಂತರ ಹೊಂದಿ ಅದರಿಂದ ತಮಿಳು-ಕನ್ನಡ ಶಾಖೆಗಳು ಪ್ರತ್ಯೇಕ ಗೊಂಡವು. ಹೀಗೆ ಕನ್ನಡವು ತನ್ನ ಸ್ವತಂತ್ರ ಅಸ್ತಿತ್ವ ಪಡೆದು ಕೊಂಡದ್ದು ಕ್ರಿ.ಶ. ಪೂ. ಸು. ೫ನೆಯ ಶತಮಾನವೆಂದು ವಿದ್ವಾಂಸರು ಊಹಿಸುತ್ತಾರೆ.[೧]

ದಕ್ಷಿಣ ದ್ರಾವಿಡದಿಂದ ಕನ್ನಡವು ಪ್ರತ್ಯೇಕಗೊಂಡು ತನ್ನ ಸ್ವತಂತ್ರ ಸ್ವರೂಪ ಪಡೆಯುವಲ್ಲಿ ಪ್ರಾದೇಶಿಕತೆಯ ಜೊತೆಗೆ ಆರ್ಯಮೂಲದ ಬೌದ್ಧ ಜೈನಧರ್ಮಗಳ ಪ್ರಭಾವ ಮತ್ತು ನಂದ-ಮೌರ್ಯರ ಆಳ್ವಿಕೆಗಳು ಕೂಡ ಕಾರಣೀ ಭೂತವಾಗಿವೆ. ಮೌರ್ಯರು ಇಡೀ ಉತ್ತರ ಕರ್ನಾಟಕ ವನ್ನು ತಮ್ಮ ಅಧೀನಕ್ಕೆ ಒಳಪಡಿಸಿ ಆಡಳಿತಾತ್ಮಕವಾಗಿ ಅಷ್ಟೇ ಅಲ್ಲದೆ ಧಾರ್ಮಿಕವಾಗಿ ಕೂಡ ಪ್ರಭಾವ ಬೀರಿದರು. ಈವರೆಗೆ ಅಶೋಕ ಚಕ್ರವರ್ತಿಯ ಹದಿನಾಲ್ಕು ಶಾಸನಗಳು ಕರ್ನಾಟಕದಲ್ಲಿ ಸಿಕ್ಕಿವೆ. ಇತ್ತೀಚೆಗೆ ಸನ್ನತಿಯಲ್ಲಿ ದೊರೆತ ನಾಲ್ಕು ಅಶೋಕ ಲಿಪಿಗಳಲ್ಲಿ ಎರಡು ಓಡಿಸಾದ ಧೌಲಿ-ಜೌಗಡಾ ಹೊರತು ಇತರತ್ರ ದೊರೆಯದ ಪ್ರತ್ಯೇಕ ಪಾಠವುಳ್ಳ ವಾಗಿವೆ. ಎಂದರೆ ಅಶೋಕ ಈ ಭಾಗದ ಜನತೆಯ ಸಾಮಾಜಿಕ- ಧಾರ್ಮಿಕ ವಿಚಾರಗಳ ಬಗ್ಗೆ ಸಾಕಷ್ಟು ಆಸ್ಥೆ

---

೧. ಹಿಂದಿನ ೪ನೆಯ ಲೇಖನ ನೋಡಿ.

ವಹಿಸಿದ್ದನೆಂಬುದು ಅವುಗಳಿಂದ ಸ್ಪಷ್ಟವಾಗುತ್ತದೆ.[2] ಸುವರ್ಣಗಿರಿ ಮತ್ತು ಇಸಿಲ ಎಂಬ ಆಡಳಿತ ಕೇಂದ್ರಗಳ ಮೂಲಕ ಅವನು ಕರ್ನಾಟಕದ ರಾಜಕೀಯ ಧಾರ್ಮಿಕ ಮತ್ತು ಆಡಳಿತ ವಿಷಯಗಳನ್ನು ನಿಯಂತ್ರಿಸುತ್ತಿದ್ದನೆಂದು ತಿಳಿಯಬಹುದು. ಇದರಿಂದ ಕನ್ನಡವು ಸಾವಕಾಶವಾಗಿ ಪ್ರತ್ಯೇಕಗೊಳ್ಳತೊಡಗಿ ಕ್ರಿ.ಶ.ದ ಪ್ರಾರಂಭದ ಹೊತ್ತಿಗೆ ಎಂದರೆ ಸಾತವಾಹನರ ಆಳ್ವಿಕೆಯಲ್ಲಿ ಅದೊಂದು, ಪ್ರತ್ಯೇಕ ಹಾಗೂ ವಿಸ್ತೃತ, ಜನಪದವಾಗಿ ರೂಪುಗೊಳ್ಳ ತೊಡಗಿತು. ಈ ಊಹೆಯನ್ನು ಸಿದ್ಧಪಡಿಸುವಲ್ಲಿ ಕರ್ನಾಟಕದಲ್ಲಿ ದೊರೆಯುವ ಪ್ರಾಕೃತ ಶಾಸನಗಳು, ಸಂಸ್ಕೃತ ಪ್ರಾಕೃತ ಕೃತಿಗಳಲ್ಲಿನ ಉಲ್ಲೇಖಗಳು ಮತ್ತು ವಿದೇಶಿ ಪ್ರವಾಸಿಗರ ಬರಹಗಳು ಮುಖ್ಯ ಆಧಾರಗಳಾಗಿವೆ.

ದ್ರಾವಿಡ ಭಾಷೆಗಳು ದಕ್ಷಿಣದಲ್ಲಿ ಬಹುಹಿಂದಿನಿಂದಲೇ ಪ್ರಚಲಿತವಾಗಿದ್ದರೂ ಅವುಗಳು ಬರಹ ರೂಪಕ್ಕೆ ಇಳಿದದ್ದು ಕ್ರಿ.ಶ.ದ ತರುವಾಯವೇ. ಈ ಮೊದಲು ಹೇಳಿದಂತೆ ಪ್ರಾಕೃತ ಶಾಸನಗಳೇ ಈ ಭಾಗದಲ್ಲಿ ಕಂಡುಬರುವ ಮೊದಲ ದಾಖಲೆಗಳು. ಈಗಾಗಲೆ ಹೇಳಿರುವಂತೆ ರಾಯಚೂರು ಜಿಲ್ಲೆಯ ಮಸ್ಕಿ, ಕೊಪ್ಪಳದ ಗವಿಮಠ ಮತ್ತು ಪಾಲ್ಕಿಗುಂಡು, ಚಿತ್ರದುರ್ಗ ಜಿಲ್ಲೆಯ ಸಿದ್ದಾಪುರ, ಬ್ರಹ್ಮಗಿರಿ ಮತ್ತು ಜಟಿಂಗರಾಮೇಶ್ವರ, ನಿಟ್ಟೂರು ಮತ್ತು ಉದಗೊಳ (ಬಳ್ಳಾರಿ ಜಿಲ್ಲೆ) ಗುಲಬರ್ಗಾ ಜಿಲ್ಲೆಯ ಸನ್ನತಿ, ಈ ಊರುಗಳಲ್ಲಿ ಒಟ್ಟು ಹದಿನಾಲ್ಕು ಅಶೋಕನ ಶಾಸನಗಳು ದೊರತಿವೆ. ಅನಂತರ ಕ್ರಿ.ಶ.ಪೂ. ಸು. ಒಂದನೆಯ ಶತಮಾನಕ್ಕೆ ಸೇರುವ (ಬೆಳಗಾವಿಯ ಮಾಧವಪೂರ-ವಡಗಾವಿ ಪ್ರದೇಶದಲ್ಲಿ) ಒಂದು ಶಾಸನ ಸಿಕ್ಕಿದೆ. ಮಳವಳ್ಳಿಯಲ್ಲಿ ಚುಟು ಶಾಸನ ದೊರೆತಿದೆ. ಬನವಾಸಿ ಮ್ಯಾಕದೋಣಿ, ಸನ್ನತಿಗಳಲ್ಲಿ ಹಲವಾರು ಸಾತವಾಹನ ಶಾಸನಗಳು ಲಭ್ಯವಾಗಿವೆ. ಹಿರೇಹಡಗಲಿಯ ಪಲ್ಲವರ ತಾಮ್ರಪಟ ಅನಂತರಕಾಲದ್ದು. ಇದಲ್ಲದೆ, ಬೆಳವಾಡಗಿ, ಹುಮನಾಬಾದ, ಚಿಕ್ಕಸಿಂದಗಿ, ವಾಸನ (ಧಾರವಾಡ ಜಿ.) ಹಂಪಿ. ಚಿತ್ರದುರ್ಗ (ಚಂದ್ರವಳ್ಳಿ) ಹುರುಸುಗುಂದಿ, ಹಿರೇಮುಗಳೂರು, ಮಳವಳ್ಳಿ ಮೊದಲಾದ ಊರುಗಳಲ್ಲಿ ದೊರೆತಿರುವ ಶಾಸನಗಳನ್ನು ಒಟ್ಟಾಗಿ ಸೇರಿಸಿದರೆ ಸು. ಒಂದು ನೂರು ಅಯ್ವತ್ತರಷ್ಟು ಸಣ್ಣ-ದೊಡ್ಡ ಪ್ರಾಕೃತ ಬರಹಗಳು ನಮ್ಮ ಅಧ್ಯಯನಕ್ಕೆ ಲಭ್ಯವಾಗಿವೆ. ಇವೆಲ್ಲ ಶಾಸನಗಳನ್ನು ಬನವಾಸಿ-ಮಳವಳ್ಳಿ, ಸನ್ನತಿ ಕೊಪ್ಪಳ, ಮತ್ತು ಚಿತ್ರದುರ್ಗ ಪ್ರದೇಶವೆಂದು ನಾಲ್ಕು ಗುಂಪುಗಳಲ್ಲಿ ಸಾಧಾರಣವಾಗಿ ವಿಂಗಡಿಸಿಕೊಳ್ಳಬಹುದು.

ಭಾಷಿಕವಾಗಿ ಈ ಪ್ರಾಕೃತ ಬರಹಗಳನ್ನು ಸಮಗ್ರವಾಗಿ ಅಧ್ಯಯನ ಮಾಡಲು ಮೊದಲು ಪ್ರಯತ್ನಿಸಿದವರು ಡಾ. ಎಂ.ಎ. ಮೆಹಂದಳೆ. ಅವರು ತಮ್ಮ ಪ್ರಬಂಧದಲ್ಲಿ ಇವುಗಳನ್ನು ಪಶ್ಚಿಮಗುಂಪು, ದಕ್ಷಿಣಗುಂಪು, ಮಧ್ಯ ಪೂರ್ವಗುಂಪು ಇತ್ಯಾದಿಯಾಗಿ ವರ್ಗೀಕರಿಸಿಕೊಂಡು ಅದರಲ್ಲಿ ಕರ್ನಾಟಕದಲ್ಲಿನ ಬನವಾಸಿಯ ಶಾಸನಗಳನ್ನು ಪಶ್ಚಿಮಗುಂಪಿನಲ್ಲೂ ಪೂರ್ವದ ಶಾಸನಗಳನ್ನು (ಮ್ಯಾಕದೋಣಿಯು.) ದಕ್ಷಿಣ ಗುಂಪುಗಳಲ್ಲೂ ಸೇರಿಸಿದರು. ಆದರೆ ಅವರು

---

೨. ಐ.ಕೆ. ಶರ್ಮಾ ಮತ್ತು ಜೆ. ವರಪ್ರಸಾದರಾವ್" "Early Brahmi Inscriptions from Sannathi "Harman Publishing House-New Delhi-1933.

ತಮ್ಮ ಪ್ರಬಂಧದಲ್ಲಿ ಅಧ್ಯಯನಕ್ಕೆ ಒಳಪಡಿಸಿದ ಕರ್ನಾಟಕದ (ಅನಂತರದ) ಪ್ರಾಕೃತ ಶಾಸನಗಳು ಆರು ಮಾತ್ರ. ಇಂಡೋ-ಯುರೋಪಿಯನ್ ಮತ್ತು ಇಂಡೋ - ಆರ್ಯನ್ ಭಾಷಾವಿಜ್ಞಾನದ ದೃಷ್ಟಿಯಿಂದ ಈ ಶಾಸನಗಳಿಗೆ ಇರುವ ಮಹತ್ವ ಅಷ್ಟಿಷ್ಟಲ್ಲ.

ಇಂಡೋ-ಆರ್ಯನ್ ಭಾಷೆಗಳ ಚರಿತ್ರೆಯನ್ನು ವೇದ ಸಂಹಿತೆಗಳ ಘಟ್ಟ, ರಾಮಾಯಣ-ಮಹಾಭಾರತ ಕಾವ್ಯಗಳ ಘಟ್ಟ, ಬೌದ್ಧ ಧರ್ಮಗ್ರಂಥಗಳ ಪಾಲಿ ಭಾಷೆಯ ಘಟ್ಟ, ತರುವಾಯದ ಅಶೋಕನ ಶಾಸನಗಳು ಮತ್ತು ಕ್ರಿ.ಶ.ದ ಆರಂಭದ ಶಾಸನಗಳ ಘಟ್ಟ ಎಂದು ವಿಂಗಡಿಸಿ ಕೊಳ್ಳಬಹುದು. ಅಶೋಕನ ಶಾಸನಗಳ ಪೂರ್ವ ಮತ್ತು ವೇದಸಾಹಿತ್ಯದ ಅನಂತರದ ಕಾಲಾವಧಿಯಲ್ಲಿ ಜೈನ ಧರ್ಮದ ಆರ್ಷ ಸಾಹಿತ್ಯ ಎಂದರೆ ಮಹಾವೀರನ ಉಪದೇಶಗಳು ಕೂಡ ವಿಭಿನ್ನ ಭಾಷೆಯ ಹಂತವನ್ನು ತೋರ್ಪಡಿಸುತ್ತವೆಂದು ವಿದ್ವಾಂಸರು ಹೇಳುವರು. ಆದರೂ ಒಟ್ಟಾರೆಯಾಗಿ ಬುದ್ಧ-ಮಹಾವೀರರ ಉಪದೇಶಗಳ ಭಾಷೆ ಮತ್ತು ಪಾಳಿಗಳು ವೈದಿಕ ಸಂಸ್ಕೃತಕ್ಕೆ ಹೆಚ್ಚು ನಿಕಟವಾಗಿರುವುದರಿಂದ ಪ್ರಸ್ತುತ ಕಾಲಾವಧಿಯಲ್ಲಿ ಒಂದೇ ಘಟ್ಟವೆಂದು ತಿಳಿಯಬೇಕು.

ಅಶೋಕನ ಶಾಸನಗಳ ಭಾಷೆಯಲ್ಲಿಯೇ ಹಲವಾರು ಪ್ರಾಂತಭೇದಗಳು ಗೋಚರಿಸುತ್ತವೆ. ಭಾರತದ ಉತ್ತರ-ಪಶ್ಚಿಮ ಮತ್ತು ಆಫಘಾನಿಸ್ತಾನದ ಶಾಸನಗಳು, ಗಿರಿನಾರ ಪ್ರದೇಶದ ಶಾಸನಗಳು, ದಕ್ಷಿಣದ ಶಾಸನಗಳು ಇತ್ಯಾದಿಯಾಗಿ ಅವುಗಳ ಭೇದಗಳನ್ನು ವಿದ್ವಾಂಸರು ಈಗಾಗಲೇ ಸೂಚಿಸಿದ್ದಾರೆ.[೩] ಅಷ್ಟೇ ಏಕೆ ಕರ್ನಾಟಕದಲ್ಲಿನ ಅವನ ಶಾಸನಗಳಲ್ಲಿಯೇ ಭೇದಗಳನ್ನು ತೋರಿಸಬಹುದು. ಕೊಪ್ಪಳ, ಗವಿಮಠ ಶಾಸನದಲ್ಲಿ 'ದೇವಾಣಂ ಪಯೇಆಹ', 'ಮಾಣುಸೇ ಓ' ಎಂದಿದ್ದರೆ. ಉದಗೊಳ ಮತ್ತು ಮಸ್ಕಿಯ ಶಾಸನಗಳಲ್ಲಿ ಕ್ರಮವಾಗಿ 'ರಾಜ ಅಸೋಕೋ ದೇವಾನಂ ಪಿಯೇ,' ಮತ್ತು 'ದೇವಾನಂ ಪಿಯಸ, ಅಸೋಕಸ' ಎಂಬ ಪಾಠಾಂತರಗಳು ಕಂಡುಬರುತ್ತವೆ. ಕೊಪ್ಪಳ-ಗವಿಮಠ ಶಾಸನದಲ್ಲಿ ನಕಾರ ಮೂರ್ಧನ್ಯವಾಗಿದ್ದರೆ ಉದಗೊಳ ಮತ್ತು ಮಸ್ಕಿಯ ಶಾಸನಗಳಲ್ಲಿ ಅದು ತಾಲವ್ಯವಾಗಿಯೇ ಇದೆ. ಇಂಥ ತೊಡಕುಗಳು ಕರ್ನಾಟಕದ ಇನ್ನಿತರ ಪ್ರಾಕೃತ ಶಾಸನ ಭಾಷೆಯಲ್ಲಿಯೂ ಕಂಡುಬರುತ್ತವೆ. ಅದಲ್ಲದೆ ಈ ಶಾಸನಗಳ ಭಾಷೆಯನ್ನು ಗ್ರಾಂಥಿಕ ಪ್ರಾಕೃತಗಳಾದ ಮಹಾರಾಷ್ಟ್ರೀ, ಶೌರಸೇನಿ, ಅರ್ಧಮಾಗಧಿ, ಪೈಶಾಚಿ ಇತ್ಯಾದಿಯಾಗಿ ನೋಡುವುದೂ ಶಕ್ಯವಿಲ್ಲ. 'ಗುಹಾ ಶಾಸನಗಳ ಉಪಭಾಷೆ' (Lena Dialect) ಎಂದು ವಿದ್ವಾಂಸರು ಇದನ್ನು ಒಟ್ಟಾರೆಯಾಗಿ ಹೆಸರಿಸುತ್ತಾರೆ. ಇಲ್ಲಿ ಅವುಗಳನ್ನು ಕುರಿತು ಸ್ಥೂಲವಾದ ಕೆಲವು ಸಂಗತಿಗಳನ್ನು ಮಾತ್ರ ನೋಡಬಹುದು.

ಸ್ವರಗಳಲ್ಲಿ ಋ. ೠ. ಌ ಐ ಔ ಗಳು ಕಂಡುಬರುವುದಿಲ್ಲ. ಶ ಷ ಸ ಗಳಲ್ಲಿ ಸಕಾರ ವೊಂದೇ ಕಂಡುಬರುತ್ತದೆ. (ಉದಾ ; ವಸಾನಿ) ಮಹಾಪ್ರಾಣಗಳು ಅನೇಕ ವೇಳೆ ಅಲ್ಪಪ್ರಾಣ ಗಳಾಗಿ ಪರಿವರ್ತಿತವಾಗುತ್ತವೆ. (ಭಕ್ತಿ>ಪಕಿತಿ) ಹಕಾರ ಶೂನ್ಯಗೊಳ್ಳುತ್ತದೆ. ವಿಸರ್ಗ- ಈ ಶಾಸನಗಳಲ್ಲಿ ಲೋಪಿಸಿದ್ದು ಸಾಮಾನ್ಯ. ಅನೇಕವೇಳೆ ಅನುಸ್ವಾರವು ಲೋಪಿಸುವುದು

---

೩ Curpus Inscriptionum Indicarum Dr. Hulsch - ನೋಡಿ.

ಅಥವಾ ವರ್ಗ ಪಂಚಮವಾಗಿ ಬದಲಾಯಿಸುವುದು ಕಂಡುಬರುತ್ತದೆ. ಶಬ್ದಾದಿ ದ್ವಿತ್ವಗಳು ಲೋಪಿಸುವುದೂ ಶಾಸನಗಳಲ್ಲಿ ವಿಫುಲವಾಗಿದೆ. ಕೆಲವೆಡೆ ಶಬ್ದಾದಿ ಮತ್ತು ಮಧ್ಯದಲ್ಲಿ 'ಘೋಷ ವ್ಯಂಜನಗಳು ಅಘೋಷವಾಗಿ ಮಾರ್ಪಡುತ್ತವೆ. ಅಶೋಕನ ಶಾಸನಗಳಲ್ಲಿಯೇ 'ಪೋರಾಣ ಪಕಿತಿ' (ಪೌರಾಣ ಭಕ್ತಿ) ಎಂಬ ಪ್ರಯೋಗವಿದೆ. ತ್ಯ, ತ್ಸ್, ಗಳು ಚ್, ಛ್ ಎಂದೂ ದ್ಯ್, ದ್ಯ್‌ಗಳು ಜ್, ರಝ್, ಎಂದೂ ಬದಲಾಗುತ್ತವೆ. ಮೂರು–ನಾಲ್ಕನೆಯ ಶತಮಾನದ ಶಾಸನಗಳಲ್ಲಿ ಪದಮಧ್ಯ ಸ್ಪರ್ಶ ವ್ಯಂಜನಗಳು ಶೂನ್ಯಗೊಳ್ಳುತ್ತವೆ. 'ಛಾ ಅಿ ಪಡಿಮ'(ಬನವಾಸಿ) ಎಂಬಂಥ ಪ್ರಯೋಗಗಳನ್ನು ಈ ಮಾತಿಗೆ ಉದಾಹರಣೆಯಾಗಿ ನೋಡಬಹುದು. ದ್ವಿವಚನ ಶಾಸನಗಳಲ್ಲಿ ಕಂಡುಬರುವುದಿಲ್ಲ. ಅನೇಕವೇಳೆ ಷಷ್ಠಿಯ ಬದಲು ಚತುರ್ಥಿ ಪ್ರಯೋಗ ಕಂಡುಬರುತ್ತದೆ. ಭೂತಕಾಲದ ಒಂದೆರಡು ರೂಪಗಳು ಮಾತ್ರ ಕ್ವಚಿತ್ತಾಗಿ ಶಾಸನಗಳಲ್ಲಿ ತೋರುತ್ತವೆ.

ಮೇಲೆ ವಿವರಿಸಿದಂತೆ – ಪ್ರಾಕೃತ ಲಿಪಿಗಳಲ್ಲಿ ಕಂಡುಬರುವ ಭಾಷಾ ವೈಲಕ್ಷಣ್ಯಗಳಿಂದಾಗಿ ಸಂಸ್ಕೃತದಿಂದ ಪ್ರಾಕೃತವು ಅದಾಗಲೇ ಬಹುದೂರ ಸರಿದಿದ್ದುದು ವ್ಯಕ್ತವಾಗುತ್ತದೆ. ಪ್ರಸ್ತುತ ವೈಲಕ್ಷಣ್ಯಗಳು ಕರ್ನಾಟಕದ ಶಾಸನಗಳಲ್ಲಿಯೂ ಗೋಚರಿಸಿವೆ. ಇಲ್ಲಿ ಎತ್ತಿ ಹೇಳಬೇಕಾದ ಸಂಗತಿ ಎಂದರೆ ಮೇಲೆ ತೋರಿಸಿದ ವೈಶಿಷ್ಟ್ಯಗಳು ದ್ರಾವಿಡ ಭಾಷೆಯ ಲಕ್ಷಣಗಳಿಗೆ ತೀರಹತ್ತಿರವಾಗಿರುವುದು.

ಭಕ್ತಿ ಪಕಿತಿ ಎಂದಾಗಿರುವಲ್ಲಿ ಮೂಲಪದಾದಿಯ ಘೋಷ ಭ. ಅಘೋಷ ಪಕಾರವಾಗಿರುವುದಂತೂ ಶುದ್ಧ ದ್ರಾವಿಡ ಪ್ರಕ್ರಿಯೆ. ಪೈಶಾಚಿ ಪ್ರಾಕೃತದಲ್ಲಿ ಇಂದೊಂದು ಪ್ರಮುಖ ಲಕ್ಷಣವೆನಿಸಿದೆ.* ಮಹಾಪ್ರಾಣಗಳು ಮೂಲತಃ ದ್ರಾವಿಡ ಭಾಷೆಯಲ್ಲಿ ಇರಲಿಲ್ಲವಾದರೂ ಕನ್ನಡ, ತೆಲುಗು, ಮಲೆಯಾಳಿ ಮತ್ತು ಉತ್ತರ ದ್ರಾವಿಡದ ಬ್ರಾಹೂಯಿ ಕುಡುಖ್ ಮತ್ತು ಮಲ್ತೋ ಭಾಷೆಗಳಲ್ಲಿ ಮಹಾಪ್ರಾಣಗಳು ಸೇರಿಕೊಳ್ಳಲು ಪ್ರಾಕೃತಭಾಷೆಗಳೇ ಕಾರಣ. ಮೂಲ ಸಂಸ್ಕೃತ ಬದಲಾಯಿಸಿ ಪ್ರಾಕೃತಭಾಷೆಯಾಗುವಲ್ಲಿ ದ್ರಾವಿಡ ಭಾಷೆಗಳ ಪ್ರಭಾವ ಇರುವಂತೆ ದ್ರಾವಿಡ ಭಾಷೆಗಳಲ್ಲಿ ಪ್ರಾಂತ–ಪ್ರದೇಶ ಭೇದಗಳುಂಟಾಗಲು ಪ್ರಾಕೃತ ಪ್ರಭೇದಗಳು ತಕ್ಕಷ್ಟು ಪ್ರಭಾವ ಬೀರಿವೆ. ಕೆಲವೊಮ್ಮೆ ದ್ರಾವಿಡ ಭಾಷೆಗಳೆಂದರೆ ಅವೂ ಪ್ರಾಕೃತದ ಭೇದಗಳೇ ಎಂಬ ಭ್ರಮೆ ಕೂಡ ಕೆಲವರಿಗೆ ಉಂಟಾಗಿದೆ. ಬಾದಾಮಿಯ ಶಾಸನವೊಂದು ಮೇರೆಗಳನ್ನು ಹೇಳುವಾಗ ಬಳಸುವ ಕನ್ನಡ ಭಾಷೆಯನ್ನು ಪ್ರಾಕೃತವೆಂದು ಕರೆದಿದೆ.[೪]

ಇಂಥ ಪರಿಸ್ಥಿತಿಯ ನಿರ್ಮಾಣದ ಹಿನ್ನೆಲೆಯಲ್ಲಿ ಜನಾಂಗಿಕ, ಆಡಳಿತಾತ್ಮಕ ಮತ್ತು ಸಾಂಸ್ಕೃತಿಕ ಸಮ್ಮಿಲನವು ಒಂದು ದೊಡ್ಡ ಕಾರಣ. ಬರುಬರುತ್ತ ವೈದಿಕರು ಕೂಡ ಪ್ರಾಕೃತ ಮತ್ತು ದ್ರಾವಿಡ ಭಾಷೆಗಳನ್ನು ಬಳಸತೊಡಗಿದರು. ಹಿರೇ ಹಡಗಲಿಯ ಪಲ್ಲವ ತಾಮ್ರಪಟ ಮತ್ತು ಹಲ್ಮಿಡಿ ಶಾಸನಗಳಂಥ ಪ್ರಾಚೀನ ಬರಹಗಳನ್ನು ನಾವು ಲಕ್ಷಿಸಬಹುದು.

* ಧರ್ಮ : > ಥಮ್ಮೋ, ವ್ಯಾಘ್ರ > ವಕ್ಖೋ ಮುಂತಾದವನ್ನು ಗಮನಿಸಬಹುದು.

೪. Karnatak Inscriptions Vol-I P. 3

ಜೈನರು ಪ್ರಾಕೃತಕ್ಕಿಂತ ಹೆಚ್ಚಾಗಿ ಕನ್ನಡವನ್ನು ತಮ್ಮ ಧಾರ್ಮಿಕ ಕೃತಿಗಳಿಗೆ ಬಳಸಿದರು. ಪ್ರಾಕೃತ ಭಾಷೆಯಂತೆ ಸಂಸ್ಕೃತವನ್ನೂ ಅವರು ಮರೆಯಲಿಲ್ಲ. ಬೌದ್ಧರು ಕನ್ನಡದಲ್ಲಿ ಕೃತಿರಚಿಸಿದ್ದು ಕಂಡುಬಂದಿಲ್ಲವಾದರೂ ಸನ್ನತಿಯ ವಿಹಾರಗಳಲ್ಲಿಯೂ ಇತರತ್ರವೂ ಅವರು ಪ್ರಾಕೃತ ಬಳಸಿದ್ದಾರೆ. ಡಂಬಳದ ಬೌದ್ಧ ಶಾಸನ ಕನ್ನಡದಲ್ಲಿದೆ.

ಇನ್ನು ಮೌರ್ಯರ ತರುವಾಯ ಕರ್ನಾಟಕದ ಭಾಗಗಳಲ್ಲಿ ಅಧಿಕಾರಕ್ಕೆ ಬಂದ ಸಾತವಾಹನರು ಹಿಂದೂ ಮತ್ತು ಬೌದ್ಧ ಮತಗಳಿಗೆ ಆಶ್ರಯವೀಯುವುದರ ಜೊತೆಗೆ ಪ್ರಾಕೃತ ವನ್ನೇ ಅವರು ತಮ್ಮ ರಾಜಭಾಷೆ ಮಾಡಿಕೊಂಡರು; ಅವರ ಅನುವರ್ತಿಗಳಾದ ಚುಟುಗಳು ಅದನ್ನೇ ಮುಂದುವರೆಸಿದರು. ತರುವಾಯ ಬಂದ ಕದಂಬ, ಗಂಗ, ಚಾಳುಕ್ಯ, ರಾಷ್ಟ್ರಕೂಟ ಮನೆತನಗಳವರೂ ಸೇಂದ್ರಕ, ಸಾಂತರ, ಸೇನವಾರ, ಪುನ್ನಾಟ, ಬಾಣ ಮೊದಲಾದ ಸಾಮಂತ ವರ್ಗದವರೂ ಪ್ರಾಕೃತದಿಂದ ಬದಲಾಯಿಸಿ ಕನ್ನಡ ಮತ್ತು ಸಂಸ್ಕೃತಗಳನ್ನು ತಮ್ಮ ಆಡಳಿತದಲ್ಲಿ ಬಳಸಿದರು. ಮೊದಮೊದಲು ಕದಂಬರು ಪ್ರಾಕೃತವನ್ನು ಬಳಸಿದರೂ ತರುವಾಯ ಅದನ್ನು ದೂರಮಾಡಿ ಕನ್ನಡ ಮತ್ತು ಸಂಸ್ಕೃತಗಳನ್ನು ವಿಶೇಷವಾಗಿ ಪ್ರೋತ್ಸಾಹಿಸಿದರು. ಅವರ ಕಾಲಾವಧಿಯಲ್ಲಿ ಕನಿಷ್ಠ ನಾಲ್ಕು ಕನ್ನಡ ಶಾಸನಗಳು ಹುಟ್ಟಿವೆ. ಕಾಕುಸ್ಥವರ್ಮನ ಹಲ್ಮಿಡಿಶಾಸನ, ರವಿವರ್ಮನ ಕೆಲಗುಂದ್ಲಿಶಾಸನ. ಅಜವರ್ಮನ (ಇಮ್ಮಡಿ ಕೃಷ್ಣವರ್ಮನ ಮಗ)ನ ಕಂಪ್ಲಿಶಾಸನ[೭] ಮತ್ತು ಭೋಗಿವರ್ಮನ ತಗರೆಯ ತಾಮ್ರಪಟದ ಅಂತ್ಯದ ಆಯ್ದು ಸಾಲುಗಳ ಬರಹ. ಇವು ಕನ್ನಡದಲ್ಲಿವೆ. ಕನ್ನಡವನ್ನು ದ್ವಿತೀಯ ರಾಜ್ಯಭಾಷೆಯಾಗಿ ಬಳಕೆಗೆ ತಂದದ್ದು ಕದಂಬ ಮನೆತನದ ಹೆಮ್ಮೆಯ ವಿಷಯ, ಹೀಗೆ ಕುಂತಲೇಶ್ವರರೆಂದು ಅವರನ್ನು ಕರೆದುದನ್ನು ಸಾರ್ಥಕಗೊಳಿಸಿದ ಮನೆತನ ಕದಂಬರದು.[೮] ಇವರು ಅಚ್ಚ ಕನ್ನಡಿಗರಾಗಿದ್ದು ಇದೇ ನೆಲದಲ್ಲಿ ಹುಟ್ಟಿ ಬೆಳೆದವರು ತರುವಾಯ ಬಾದಾಮಿ ಚಾಲುಕ್ಯರು ಮತ್ತು ರಾಷ್ಟ್ರಕೂಟರು ಕನ್ನಡದ ಶ್ರೇಯೋಭಿವೃದ್ಧಿಗಾಗಿ ಶ್ರಮಿಸಿದರು. ಆಡಳಿತದ ಎಲ್ಲ ಹಂತಗಳಲ್ಲಿ ಕನ್ನಡವನ್ನು ಪ್ರಯೋಗಿಸಿದರು. ರಾಷ್ಟ್ರಕೂಟರು ತಾಮ್ರಪಟಕ್ಕೂ ಕನ್ನಡವನ್ನು ಬಳಸಿದ್ದೊಂದು ವಿಶೇಷ ಸಂಗತಿಯೇ ಸೈ, ಗುಜರಾತದಲ್ಲಿ ದೊರೆತ ತಾಮ್ರಪಟಗಳಲ್ಲಿ ರಾಷ್ಟ್ರಕೂಟರು ಅಂದಿನ ಕನ್ನಡ ಲಿಪಿಯಲ್ಲಿ ತಮ್ಮ ಅಂಕಿತ ಹಾಕುತ್ತಿದ್ದ ಸಂಗತಿಯನ್ನು ಡಾ. ಅಳ್ತೇಕರ ಎತ್ತಿತೋರಿಸಿದ್ದಾರೆ.

ಹೀಗೆ ರಾಜಕೀಯವು ಕನ್ನಡ ಭಾಷೆ, ಕರ್ನಾಟಕತ್ವದ ಬೆಳವಣಿಗೆಗೆ ಪ್ರಧಾನ ಶಕ್ತಿಯಾಗಿ ವರ್ತಿಸಿರುವಂತೆ ಧರ್ಮಗಳು ಈ ದಿಸೆಯಲ್ಲಿ ತಮ್ಮ ಅಚ್ಚಳಿಯದ ಪ್ರಭಾವ ಬೀರಿವೆ ಎಂಬುದನ್ನು ಈಗಾಗಲೇ ಹೇಳಿದೆ. ಮೌರ್ಯ–ಸಾತವಾಹನರ ಕಾಲದ ಬೌದ್ಧಧರ್ಮ ಕರ್ನಾಟಕದಲ್ಲಿ ಹಲವು ನೆಲೆಗಳನ್ನು ಸ್ಥಾಪಿಸಿತ್ತು. ಅವುಗಳಲ್ಲಿ ಸನ್ನತಿ ತುಂಬ ಮುಖ್ಯವಾದುದು. ಸನ್ನತಿ ಮತ್ತು ಅದರ ಪರಿಸರದಲ್ಲಿ ಈಗ ಸು. ೭೭ರಷ್ಟು ಪ್ರಾಕೃತ ಶಾಸನಗಳು ಸಿಕ್ಕಿವೆ. ಬೌದ್ಧರಿಗಿಂತ ಜೈನರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹಲವಾರು ರಾಜಮನೆತನಗಳನ್ನು

---

೭. ಡಾ. ಬಿ.ಆರ್. ಗೋಪಾಲ : Corpus of Kadamba Inscriptions

೮. ಕದಂಬರು ಕರ್ನಾಟಕದ ಇತರ ರಾಜ ಮನೆತನಗಳಂತೆ ತಾವು ಉತ್ತರದಿಂದ ಬಂದವರೆಂದು ಹೇಳಿಕೊಂಡಿಲ್ಲ. ಇದು ಗಮನಾರ್ಹ ಸಂಗತಿ.

ಮತಾಂತರಿಸಿದರು. ಹಾಗೂ ಕೊಪ್ಪಳ, ಹಲಸಿಗೆ, ಬನವಾಸಿ, ಶ್ರವಣಬೆಳ್ಗೊಳ, ಲಕ್ಷ್ಮೇಶ್ವರ, ಬಸ್ತಿಪೂರ ಮೊದಲಾದಡೆಗಳಲ್ಲಿ ತಮ್ಮ ನೆಲೆಗಳನ್ನು ಸ್ಥಾಪಿಸಿದರು. ಹಲವು ಜನ ಜೈನಾಚಾರ್ಯರು ಕನ್ನಡ, ಪ್ರಾಕೃತ ಮತ್ತು ಸಂಸ್ಕೃತಗಳಲ್ಲಿ ಕೃತಿ ರಚನೆ ಮಾಡಿದರು. ಇದರಿಂದಾಗಿ ಕನ್ನಡ ಭಾಷೆ–ಸಾಹಿತ್ಯಗಳು ವಿಕಾಸಗೊಳ್ಳಲು ಅಪಾರ ಸಹಾಯವುಂಟಾಯಿತು. ಇಂತು ನಮ್ಮ ನಾಡಿಗೆ ಮಹತ್ತರವಾದ ಸಂಸ್ಕೃತಿ ಸಂಪದವನ್ನು ತಂದ ಹಿರಿಮೆ ಪ್ರಾಕೃತದ್ದೆ. ಈ ದೃಷ್ಟಿಯಿಂದ ಪ್ರಾಕೃತ ಸಾಹಿತ್ಯ ಮತ್ತು ಶಾಸನಗಳನ್ನು ಅಧ್ಯಯನ ಮಾಡಬೇಕಾದುದು ಬಹಳಷ್ಟು ಇದೆ. ಕರ್ನಾಟಕತ್ವದ ವಿಕಾಸದಲ್ಲಿ ಪ್ರಾಕೃತವು ನೀಡಿದ ಕೊಡುಗೆಯನ್ನು ನಿಖರವಾಗಿ ಗುರುತಿಸುವಲ್ಲಿ ನಮ್ಮ ವಿದ್ವಾಂಸರು ಇನ್ನೂ ಕಾರ್ಯಪ್ರವರ್ತಗೊಳ್ಳಬೇಕಿದೆ.

ಮೇಲೆ ವಿವರಿಸಿದಂತೆ ರಾಜಕೀಯ ಮತ್ತು ಧಾರ್ಮಿಕ ಚಟುವಟಿಕೆಗಳ ಹಿನ್ನೆಲೆಯಲ್ಲಿ ಕನ್ನಡ ಸಂಸ್ಕೃತಿ ವಿಕಾಸಗೊಂಡ ಬಗೆಯನ್ನು ಗುರುತಿಸಿಕೊಳ್ಳಲು ಶಾಸನ ಮತ್ತು ಸಾಹಿತ್ಯಗಳ ಜತೆಗೆ ಕೊಂಚ ವಿದೇಶೀ ಬರಹಗಳೂ ಸಹಾಯ ನೀಡುತ್ತವೆ. ಇವೆಲ್ಲವನ್ನಿಲ್ಲಿ ಒಂದಿಷ್ಟು ವಿವರವಾಗಿ ಪರಿಶೀಲಿಸಬಹುದು:

ಅಶೋಕನ ಬ್ರಹ್ಮಗಿರಿ ಮತ್ತು ಸಿದ್ಧಾಪುರ........... ಶಾಸನಗಳಲ್ಲಿ 'ಇಸಿಲ' ಎಂಬ ಸ್ಥಳವಾಚಕವಿದ್ದು ಅದು ಕನ್ನಡ ಮೂಲದ ಪದವೆಂದು ಡಾ. ಡಿ.ಎಲ್. ನರಸಿಂಹಾಚಾರರು ಹೇಳಿದ್ದಾರೆ.[೭] ಇದರಲ್ಲಿನ ಇಲ್ । ಇಲ ಎಂಬುದು ಸ್ಥಳವಾಚಕಗಳಲ್ಲಿ ಕಂಡುಬರುವ ಒಂದು ವಾರ್ಗಿಕ ರೂಪ. ಆದರೆ ಇಸ್ ಎಂದರೆ ಏನೆಂದು ಹೇಳುವುದು ಕಷ್ಟ. ಅವರೇ ಹೇಳುವಂತೆ ಇದು ಎಯಿಲ್, ಎಸಿಲ್ ಎಂಬ ಮೂಲರೂಪದಲ್ಲಿದ್ದಿರಬಹುದು.

ತರುವಾಯದ ಮಾಧವಪುರ ವಡಗಾವಿ (ಬೆಳಗಾವಿ) ಶಾಸನದಲ್ಲಿ ಕಂಡುಬರುವ '(ಸ) ಣಾಟಪತಿಸ' ಎಂಬ ಪ್ರಯೋಗ ಕಂಡುಬರುತ್ತದೆ. ಇಲ್ಲಿ 'ಣಾಟ ಪತಿ' ಎಂಬ ಪ್ರಾತಿಪದಿಕಕ್ಕೆ 'ಸ' ಎಂಬ ಷಷ್ಠಿ ವಿಭಕ್ತಿ ಪ್ರತ್ಯಯ ಸೇರಿದೆ. ಪ್ರಾಕೃತ ಶಾಸನಗಳಲ್ಲಿ ನಕಾರಕ್ಕೆ ಬದಲು ಣಕಾರ ಬರುವುದು ಅಪರೂಪವೇನಲ್ಲ. ಆದುದರಿಂದ ಇದು 'ನಾಟಪತಿ' ಎಂಬ ಅರಿಸಮಾಸ. 'ನಾಟ' ಎಂದರೆ 'ನಾಡು' ಎಂಬುದರ ಪ್ರಾಚೀನ ರೂಪ. ಪುನ್ನಾಟ, ಕರ್ನಾಟ ಎಂಬ ರೂಪಗಳಲ್ಲಿಯೂ 'ನಾಟ' ಎಂಬುದು ಉತ್ತರಪದವಾಗಿರುವುದನ್ನು ನೋಡಬಹುದು. ಆದುದರಿಂದ ಕನ್ನಡ ಭಾಷೆಯ ನಿರ್ದಿಷ್ಟಪದವೆಂದು ಇದನ್ನು ಸ್ವೀಕರಿಸಬಹುದು.

ಸಾತವಾಹನ ರಾಜರುಗಳಲ್ಲಿ ಪುಳುಮಾಯಿ ಮತ್ತು ವಿಳಿವಾಯಕುರ ಎಂಬೆರಡು ಹೆಸರುಗಳು ಕಂಡುಬರುತ್ತವೆ. ಇವುಗಳಿಗೆ ಪ್ರಾಕೃತದಿಂದ ವ್ಯುತ್ಪತ್ತಿ ಹೇಳುವುದು ಸಾಧ್ಯವಿಲ್ಲ. ಇವುಗಳಲ್ಲಿ ಪುಳುಮಾಯಿಬಿ ಎಂಬುದರ ಪೂರ್ವಪದ ಪುಳುಮ ಎಂದೂ ಉತ್ತರ ಪದ ಅಯ್ : ಅಯಿ / ಆಯ್ : ಆಯಿ ಎಂದಿರುವಂತಿದೆ. ಪುಳುಮ/ಪುಡುಮ ಎಂದರೆ 'ಕಿರಿಯ' ಎಂದು ಹೇಳ

೭. Karnataka Through ages-pp-109-110

ಬಹುದು. ಪಿಕೆವಾಯ್ ಎಂದರೆ ಪಿಕೆ ವಾಯ್ (ಶ್ವೇತಮುಖಿ) ಎಂಬ ಪೂರ್ವಪದ ವಿರುವಂತೆ ತೋರುತ್ತದೆ 'ಕುರ' ಎಂಬ ಇದರ ಉತ್ತರ ಪದವನ್ನು ವಿವರಿಸುವುದು ಕಠಿಣ.

ಸನ್ನತಿಯ ಶಾಸನಗಳಲ್ಲಿ ಮೂಡಾಣ ಮುನಾಳಿ ಬಲಿವದಾರ ಎಂಬ ಸ್ಥಳವಾಚಕಗಳು ಕಂಡುಬರುತ್ತವೆ. ಮೂಡಾಣ ಎಂಬುದು 'ಮೂಡಣ' ಎಂದಿರುವ ದಿಗ್ವಾಚಿಯ ಪೂರ್ವರೂಪ. ಅದೇ ರೀತಿ ಮುನಾಳಿ ಎಂಬುದು ಮುನ್+ಪಳ್ಳಿ ಎಂಬುದರಿಂದ ರೂಪಗೊಂಡುದು. 'ಬಲಿವದಾರ' ಎಂಬುದು ಕನ್ನಡ ಮೂಲದ್ದೆಂದು ಹೇಳಬಹುದಾದರೂ ನಿರುಕ್ತಿ ಹೇಳುವುದು ಕಷ್ಟ. ಅದೇ ಶಾಸನಗಳಲ್ಲಿ ಕಂಡುಬರುವ ಸೇನಣ್ಣ ನಗಿಪ ಮತ್ತು ಸಂಕಪ ಎಂಬ ವ್ಯಕ್ತಿವಾಚಕಗಳೂ ಕನ್ನಡ ಮೂಲದವಾಗಿರುವ ಸಾಧ್ಯತೆಯಿದೆ.[೮]

ಮಳವಳ್ಳಿಯ ಶಾಸನಗಳಲ್ಲಿ ಆ ಊರನ್ನು ಮಟ್ಟಪಟ್ಟಿ ಎಂದು ಕರೆಯಲಾಗಿದೆ. ಕ್ರಿ.ಶ. ಎರಡನೆಯ ಶತಮಾನದ ಚುಟುಶಾಸನದಲ್ಲಿಯೇ ಮಟ್ಟಪಟ್ಟಿಯ ಉಲ್ಲೇಖ ಬಂದಿದೆ. ಪಟ್ಟಿ ಈಗಲೂ ಕರ್ನಾಟಕದ ಸ್ಥಳವಾಚಕಗಳಲ್ಲಿ ಕಂಡುಬರುವ ಹೆಚ್ಚು ಪ್ರಸಾರದಲ್ಲಿರುವ ವಾರ್ಗಿಕ ರೂಪ ಪಡು ಧಾತುವಿನಿಂದ ನಿಷ್ಪನ್ನವಾದುದು. ಮಟ್ಟ ಎಂದರೆ ಸಮತಟ್ಟಾದ ಎಂದು ಈಗಿರುವ ಅರ್ಥವನ್ನೇ ಹೊಂದಿರುವಂಥದು. ಅದೇ ರೀತಿ ಈ ಶಾಸನದಲ್ಲಿ ಕಂಡುಬರುವ "ಕೊಂಡಮಾನ" ಎಂಬ ವ್ಯಕ್ತಿಯ ಹೆಸರೂ ಕನ್ನಡ ಮೂಲದ್ದು. ಕೊಂಡ-ಅಮ್ಮನ್ (ಅಮ್ಮಾನ್) ಎಂದು ಇದನ್ನು ಬಿಡಿಸಬಹುದು. ಈ ಚುಟುಶಾಸನದ ಕೆಳಗಡೆ ಬರೆಯಲ್ಪಟ್ಟ ಕದಂಬ ಶಾಸನದಲ್ಲೂ ಮಟ್ಟಪಟ್ಟಿ, ಕೊಂಡಮಾನ ಎಂಬ ಪದಗಳ ಉಲ್ಲೇಖವಿರುವುದರ ಜೊತೆಗೆ ಬೇರೆ ಹನ್ನೆರಡು ಸ್ಥಳವಾಚಕಗಳು ಕಂಡುಬರುತ್ತವೆ. ವೆಟ್ಟಕ್ಕಿ, ವೇಗೂರಂ, ಮರಿಯಸಾ (ಸೆ) ಕೊಂಗಿನಗರ ಸೋಮಪಟ್ಟಿ ಎಕ್ಕಟಾ(ದ್ಧಾ)ಹಾರ, ಕುಂದತಪುಕಂ, ಕೋಣತ ಪುಕ ಕುನ್ದ ಮುಚ್ಚುಂಡಿ ಅಪರ ಮುಚ್ಚುಂಡಿ ಕಪ್ಪೆನ್ನಲಾ ಕರಿಪೆಂದೂಲ ಈ ಗ್ರಾಮನಾಮಗಳಲ್ಲಿ ವೇಗೂರವೆಂಬುದರ ಅರ್ಥ ವಿವರಿಸಲು ಕಷ್ಟ ಪಡಬೇಕಿಲ್ಲ. ಕುಂದತಪುಕ, ಕೋಣತಪುಕ ಇವೆರಡು ಹೆಸರುಗಳಲ್ಲಿ 'ಪುಕುವು ಪುರ' ಎಂಬುದನ್ನು ಬರೆಯುವಲ್ಲಿ ಆಗಿರುವ ತಪ್ಪೆಂದು ಕಾಣುತ್ತದೆ. ಕುಂದ ಎಂದರೆ ಗುಡ್ಡವೆಂದು ಅರ್ಥ, ಕೋಣ ಎಂಬುದು ಈಗಲೂ ಬಳಕೆಯಲ್ಲಿರುವ ಪದ. ಇನ್ನುಳಿದ ಹೆಸರುಗಳಲ್ಲಿ ಸೋಮಪಟ್ಟ ಎಂಬುದು ಅರಿಸಮಾಸವಾಗಿದ್ದು ಏಕದ್ಧಾಹಾರ ಎಂಬುದು ಸ್ವೀಕೃತಪದ. ಉಳಿದವುಗಳೂ ಕನ್ನಡ ಮೂಲದವಾದರೂ ಅರ್ಥ ವಿವರಣೆಗೆ ಹೆಚ್ಚಿನ ಶ್ರಮ ಪಡಬೇಕಾಗುತ್ತದೆ. ಒಟ್ಟಿನಲ್ಲಿ ವೆಟ್ಟ, ಊರ, ಮಟ್ಟ-ಪಟ್ಟಿ, ಕುನ್ದ(+ಕುನ್ಜು) ಕೋಣ ಕರಿ ಇವಿಷ್ಟು ಕನ್ನಡ ಪ್ರಕೃತಿಗಳು ಇಲ್ಲಿರುವುದು ಸ್ಪಷ್ಟ. ಹಿರೇಹಡಗಲಿಯ ಪಲ್ಲವ ಶಾಸನದಲ್ಲಿ ಆಪಿಟ್ಟಿ ಎಂದು ಗ್ರಾಮನಾಮವಿದೆ. ಚಂದ್ರವಳ್ಳಿ ಶಾಸನದಲ್ಲಿ 'ಪುನ್ನಾಟ' ರಾಜ್ಯದ ಉಲ್ಲೇಖವಿದೆ. ಬೆಳ್ವಾಡಗಿ, ಶಾಸನದಲ್ಲಿನ 'ಕಲಕ' ಎಂಬ ವ್ಯಕ್ತಿವಾಚಕದಲ್ಲಿ ಕನ್ನಡದ ಪ್ರಕೃತಿ 'ಕಲ್' ಎಂಬುದಿದೆ. 'ವೇಗೂರ' ಪದದಲ್ಲಿನ ಮಧ್ಯ-ಗ-ಕುನ್ದ ದಲ್ಲಿನ ದಂತ್ಯ-ದ-ಮೂಡಾಣದಲ್ಲಿನ-ಡ-ಇಂಥ ಘೋಷ ಸ್ಪರ್ಶಗಳಿಗೆ ತಮಿಳಿನಲ್ಲಿ ಪ್ರತ್ಯೇಕವಾದ ಲಿಪಿ

---

೮. ನೋಡಿ Early Brahrninscriptions from Sannati pp 87,97,98

ಸಂಕೇತಗಳಿಲ್ಲ. ಆದ್ದರಿಂದ ಇವೆಲ್ಲ ಕನ್ನಡದ ಅಸ್ತಿತ್ವವನ್ನು ಸಿದ್ಧಪಡಿಸುವ ನಿಸ್ಸಂದಿಗ್ಧ ಪುರಾವೆಗಳು.

ಕ್ರಿ.ಶ. ಸು. ೨ನೆಯ ಶತಮಾನದ ಅವಧಿಯಲ್ಲಿಯೇ ಕರ್ನಾಟಕದ ವಾಣಿಜ್ಯ-ವ್ಯಾಪಾರ ಸಂಬಂಧಗಳು ಪ್ರಾಚೀನ ಗ್ರೀಸಿನೊಂದಿಗೆ ಸಂಬಂಧ ಪಡೆದಿದ್ದವು. ಆದ್ದರಿಂದ ವಿದೇಶಿಯವರು ಅಂದಿನ ಕರ್ನಾಟಕದ ಹಲವು ಪ್ರದೇಶಗಳನ್ನು ಅರಿತವರಾಗಿದ್ದರು. ಎಂತಲೆ ಗ್ರೀಕ ಭೂಗೋಲಜ್ಞನಾದ ಟಾಲೆಮಿ 'ನೆಲ್ಕುಂದ' ಹಿಪ್ಪೋಕುರ, ಬಲ್ತಿ ಪಟ್ಟಣ, ಬೈಜಂತಿಯನ್, ನಿತ್ರಾ, ತಗರ ಬೈಥನ, ನಗರೂರಿಸ್, ಇಂಡೆ, ಸಿರಿಮಲಗ, ಕಲ್ಲಿಗೇರಿಸ್ ಮೊದೊಗಲ, ಪೆತಿರ್ಗಲ, ಬನೌಸಿ, ಒಲೊ ಖೊಯಿರ, ಪಸಗೆ ಮಾಸ್ತನೂರ, ಕೊರೆಲ್ಲೂರ ಪೊನ್ನಟ, ಕರೂರ, ಅರೆಂಬೂರ ಬೆದರಿಸ್ ಮೊದಲಾದ ಪ್ರಾಚೀನ ಕರ್ನಾಟಕದ ಊರು / ಪ್ರದೇಶಗಳ ಹೆಸರು ಹೇಳಿದ್ದಾನೆ. ಇವುಗಳಲ್ಲಿ ಬಲ್ತಿ ಪಟ್ಣ=ಬಲದೇವ ಪಟ್ಟಣ. ಬೈಜಂತಿಯನ್= ವೈಜಯಂತಿ, ನಿತ್ರಾ=ನೇತ್ರಾ(ವತಿ) ನದಿ ಪ್ರದೇಶ. ತಗರ = ಪ್ರಾಚೀನ ಶಿಲಾಹಾರರ ಮೂಲ ಪಟ್ಟಣ) ತೇರ. ಭೈಥನ=ಪೈಠಣ, ಇಂಡೇ=ಇಂಡಿ (ವಿಜಾಪುರ ಜಿ.) ಸಿರಿಮಲಗ=ಚಿಮ್ಮಲಗಿ, ಮೊದೊಗಲ=ಮುದುಗಲ್ಲು, ಪೆತಿರ್ಗಲ=ಪಟ್ಟದಕಲ್ಲು, ಬನೌಸಿ=ಬನವಾಸಿ, ಒಲೋಖೊಯಿರ= ಆಳುವಖೇಡ, ಪಸಗೆ=ಪಲಸಿಗೆ, ಪೊನ್ನಟ=ಪುನ್ನಾಟ ಎಂದು ವಿದ್ವಾಂಸರು ಕರ್ನಾಟಕದಲ್ಲಿನ ಇಂದಿನ ಪರಿಚಯದ ಊರು / ಪ್ರದೇಶಗಳನ್ನು ಗುರುತಿಸಿದ್ದಾರೆ. ಪಟ್ಟದಕಲ್ಲು ಮತ್ತು ಬಲದೇವ ಪಟ್ಟಣಗಳ ಹೊರತು ಇತರ ಸಮೀಕರಣಗಳನ್ನು ಸುಲಭವಾಗಿ ಒಪ್ಪಬಹುದು. ಹಿಪ್ಪೊ ಕುರವು ಯಾವ ಪ್ರದೇಶವೆಂದು ಇನ್ನೂ ನಿರ್ಧಾರವಾಗಿಲ್ಲ. ಕೊರೆಲ್ಲೂರ, ಕರೂರ, ಅರೆಂಬೂರ ಇವುಗಳನ್ನು ನಿರ್ದಿಷ್ಟವಾಗಿ ಸೂಚಿಸದಿದ್ದರೂ ಇವೆಲ್ಲ ಕನ್ನಡ ಮೂಲದ ಊರ ಹೆಸರುಗಳೆಂದು ಧಾರಾಳವಾಗಿ ಹೇಳಬಹುದು. ಬೆದರಿಸ್ ಎಂದರೆ ಬಿದರೆ ಎಂದು. ಈ ಹೆಸರಿನ ಹಲವು ಊರುಗಳು ಉತ್ತರ ಕರ್ನಾಟಕದಲ್ಲಿವೆ. ಸುಮಾರು ಇದೇ ಅವಧಿಯ ಎರಿಥ್ರಿಯನ್ ಸಮುದ್ರ ಪ್ರವಾಸಿಯ ದಿನಚರಿ ಪೆರಿಪ್ಲಸ್ ಎಂಬುದರಲ್ಲಿ ಮಸಾಲೆ ಸಾಮಾನುಗಳಿಗೆ ಪ್ರಸಿದ್ಧಿ ಹೊಂದಿದ್ದ ಬರಕೆ ಸಮೀಪದ ನೆಲ್ಕುಂದ ಎಂಬ ಬಂದರು ಪಟ್ಟಣ ಉಲ್ಲೇಖಗೊಂಡಿದೆ. ಬರಕೆ ಎಂದರೆ ಇಂದಿನ ಬಾರಕೂರ ಆಗಿದ್ದು ಅದರ ಸಮೀಪದಲ್ಲಿದ್ದ ಬಂದರು ಪಟ್ಟಣ ನೆಲ್ಕುಂದವಾಗಿರಬಹುದು.

ಅಕ್ಸಿರಿಯಾಂಕಿಸದಲ್ಲಿ ದೊರೆತ ಗ್ರೀಕ ಪ್ರಹಸನದಲ್ಲಿ ಕನ್ನಡ ಮಾತುಗಳಿವೆಯೆಂದು ಹಲವು ಜನ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಈ ಮಾತುಗಳು ಧ್ವನಿಮಾ ಆಕೃತಿಮಾತ್ಮಕವಾಗಿ ಕನ್ನಡ ಭಾಷೆಯವೆಂದು ಹೇಳುವುದು ಕಷ್ಟ. ಆದರೆ 'ಮಲ್ಪಿನಾಯಕ' ಎಂದಿರುವ ಪ್ರಯೋಗದಲ್ಲಿ ಮಲ್ಪಿ ಮಲ್ಪೆ ಬಂದರಿನ ಉಲ್ಲೇಖ ಇರುವುದನ್ನು ಗುರುತಿಸಬಹುದು. ಅಂತೂ ಈ ಮೂವರು ವಿದೇಶ ಬರಹಗಾರರಿಂದ ವಿಶೇಷವಾಗಿ ಟಾಲೆಮಿಯಿಂದ ಕರ್ನಾಟಕದ ಹಲವು ಸ್ಥಳವಾಚಕಗಳ ಪರಿಚಯ ನಮಗಾಗುತ್ತದೆ.

ಟಾಲೆಮಿ ಹೇಳಿರುವ ಸ್ಥಳ, ಪ್ರದೇಶಗಳಲ್ಲಿ ಆಳುವ ಖೇಡ, ಪುನ್ನಾಟ, ಹಿಪ್ಪೊಕುರ, ತಗರ ಇವು ಅಂದಿನ ಚಿಕ್ಕ ದೊಡ್ಡ ರಾಜ್ಯಗಳು ಪೈಠಣ, ಬನವಾಸಿ, ವೈಜಯಂತಿ, ಬಾದಾಮಿಗಳು

ಪ್ರಾಂತೀಯ ಆಡಳಿತ ಕೇಂದ್ರಗಳು, ಬಹುಶಃ ಇಂಡಿ, ಮುದಗಲ್, ಮಲ್ಖೆ ಮೊದಲಾದ ಊರುಗಳು ಆಂದಿನ ತುಂಡರಸರ ಕೇಂದ್ರ ಪಟ್ಟಣಗಳು.[೧೦]

ಮಹಾಭಾರತದಲ್ಲಿ ವನವಾಸಿಕಾ ಮಹಿಷಿಕ ಮತ್ತು ಕರ್ನಾಟಕಕ್ಕೆ ಪರ್ಯಾಯವಾಗಿ 'ಕುಂತಲ' ಶಬ್ದಗಳ ಪ್ರಯೋಗವಿದೆ.[೧೧] ವಿದ್ವಾಂಸರು ಇವನ್ನು ಕುರಿತಂತೆ ಸಾಕಷ್ಟು ಚರ್ಚೆ ನಡೆಸಿದ್ದಾರೆ. ಮಹಾಭಾರತದ ಪರಿಷ್ಕೃತ ಆವೃತ್ತಿಯಲ್ಲಿ ಪುಣೆಯ ಭಂಡಾರಕರ ಪ್ರಾಚ್ಯ ವಿದ್ಯಾಸಂಸ್ಥೆಯ ಪಂಡಿತರು 'ಕರ್ನಾಟಕ'ವೆಂಬುದರ ಬದಲು 'ಕುಂತಲ'ವೆಂದು ಪಾಠಾಂತರವನ್ನಿಟ್ಟುಕೊಂಡಿದ್ದಾರೆ. ಆದರೆ ಈ ಮಹಾಕಾವ್ಯದ ಹಲವು ಪಾಠಗಳಲ್ಲಿ ಕರ್ನಾಟಕ ಕರ್ಣಾಟಕ ಪದ ಪ್ರಯೋಗವಿದೆ. ಅದರ ಮುಂಬೈ ಆವೃತ್ತಿಯಲ್ಲಿ 'ಕರ್ಣಾಟ್ಟ' ಎಂಬ ಟಕಾರದಿತ್ವವುಳ್ಳ ಪ್ರಯೋಗವಿದೆ ಎಂದು ಸೊರೆನಸನ್ ತಿಳಿಸುತ್ತಾರೆ.[೧೨] ನಮ್ಮ ನಾಡಿನ ಹೆಸರಾಗಿ 'ಕರ್ಣಾಟ್ಟ' ಎಂಬ ರೂಪ ಬೇರಾವ ಗ್ರಂಥದಲ್ಲಾಗಲಿ ಶಾಸನಗಳಲ್ಲಾಗಲಿ ಎಲ್ಲಿಯೂ ಕಂಡುಬರುವುದಿಲ್ಲ. ಅಷ್ಟೆ ಅಲ್ಲ, ಕನ್ನಡ ವಿದ್ವಾಂಸರೇ ಈ ಶಬ್ದವನ್ನು ಕಂಡು ಕೇಳಿ ಅರಿಯರು. ದೀರ್ಘಸ್ವರಕ್ಕೆ ಪರದ ಸಜಾತೀಯ ದ್ವಿತ್ವಗಳಿರುವುದು ಕ್ರಿ.ಶ. ೧ನೆಯ ಶತಮಾನದ ಕನ್ನಡದ ವೈಶಿಷ್ಟ್ಯ.

೩ನೆಯ ಶತಮಾನದ ವಾತ್ಸ್ಯಾಯನನ ಕಾಮಸೂತ್ರಗಳಲ್ಲಿ ವನವಾಸಿಕಾ ಮತ್ತು ಕುಂತಲದ ಸಾತಕರ್ಣಿಗಳ ಉಲ್ಲೇಖ ಬಂದಿದೆ. ಕ್ರಿ.ಶ. ಸು. ೬ನೆಯ ಶತಮಾನದ ಬೃಹತ್ ಸಂಹಿತೆಯಲ್ಲಿ ವರಾಹಮಿಹಿರ, ಕಂಕಣ, ತೆಂಕಣ, ವನವಾಸಿ, ಫಣಿಕಾರ, ಕೊಂಕಣ, ಕರ್ಣಾಟ, ಮಹಾಟವಿ, ಕೊಲ್ಲಗಿರಿ, ಕಾವೇರ್ಯ, ಋಷ್ಯಮೂಕ, ವೆಲ್ಲೂರ ಪಿಶಿಕ, ಋಷಿಕ, ಆರ್ಯಕ, ಬಲದೇವಪಟ್ಟಣ, ದಂಡಕಾವನ, ಕುಂತಲ, ಕುಂಜರದಾರಿ, ಇಷ್ಟಿಕ, ಗೋಮತಿ ಮೊದಲ ಪ್ರದೇಶಗಳ ಹೆಸರು ಹೇಳಿದ್ದಾನೆ. ವನವಾಸಿ, ಕೊಂಕಣ, (ಕರ್ಣಾಟ) ಕಾವೇರ್ಯ ಬಲದೇವ ಪಟ್ಟಣ ಮತ್ತು ಕುಂತಲಗಳು ಕರ್ನಾಟಕದ ಬೇರೆ ಬೇರೆ ಪ್ರದೇಶಗಳು. ಪ್ರಾಚೀನ ತಮಿಳು ಕೃತಿಯಾದ ಅಹನಾನೂರಿನಲ್ಲಿ ನೆಡುಂಚೆಳಿಯನ್ ಎಂಬ ರಾಜ ಉರುಮೈಯೂರು (ಮೈಸೂರು) ಒಡೆಯನನ್ನು ಸೋಲಿಸಿದನೆಂದಿದೆ.[೧೪] ತರುವಾಯದ ಶಿಲಪ್ಪದಿಗಾರಂ ಮಹಾಕಾವ್ಯದಲ್ಲಿ ಗಂಗರು, ಕದಂಬರು ಮತ್ತು ಕೊಡುಂಕರುನಾಡುಗರ್ (ದುಷ್ಟ ಕರ್ನಾಟಕರು)ಗಳನ್ನು ಹೆಸರಿಸಿದೆ.[೧೫] ಇಲ್ಲಿ ತಮಿಳರಿಗೆ ಬದ್ಧ ದ್ವೇಷಿಗಳಾಗಿದ್ದ ವಾತಾಪಿ ಚಾಲುಕ್ಯರನ್ನೇ

---

೧೦. ಇತ್ತೀಚೆ ದೊರೆತ ಸನ್ನತಿಯ ಶಾಸನವೊಂದರಲ್ಲಿ ರಟುರಟ್ಟರಾಜ್ಯದ ಉಲ್ಲೇಖ ಬಂದಿದೆ.
ನೋಡಿ : Early Brahmi Inscriptions from Sannathi P-65 .

೧೧. ಹೆಚ್ಚಿನ ವಿವರಗಳಿಗೆ ನೋಡಿ : ಎಸ್. ಶ್ರೀಕಂಠಶಾಸ್ತ್ರಿ ಅವರ Sources of Karnataka Histroy-Part-I

೧೨. ಮಹಾಭಾರತ ಇಂಡೆಕ್ಸ್ – III ಕರ್ಣಪರ್ವ – ೧೬೩೫೨

೧೩. ೭ನೆಯ ಶ. ಕ್ಕೆ ಹಿಂದಿನ ಕನ್ನಡದಲ್ಲಿ ತೋಟ್ಟ ಚಾರಾಕ್ಕಿ. ಸಾಟ್ಟರು. ಕೋಟ್ಟೆ ಮೇಪ್ಪು. ಆಕ್ಕು (>ಆಗು) ಮೊದಲಾದ ದೀರ್ಘಸ್ವರಕ್ಕೆ ಪರವಲ್ಲಿದ್ದ ದ್ವಿತ್ವ ರೂಪಗಳು ದೊರೆಯುತ್ತವೆ.

೧೪. ಎಸ್. ಶ್ರೀಕಂಠ ಶಾಸ್ತ್ರಿ (ಅ. ಟಿ. ೧೦ ರಂತೆ)

೧೫. ಈ ವಿಷಯದಲ್ಲಿ ನನ್ನೊಂದಿಗೆ ಚರ್ಚಿಸುವಾಗ ಗಮನ ಸೆಳೆದವರು ಡಾ. ಕೆ. ಅನ್ವನ್ ಭಾಷಾವಿಜ್ಞಾನ ಪ್ರವಾಚಕರು–ಕನ್ನಡ ಅಧ್ಯಯನ ಪೀಠ ಕ.ವಿ.ವಿ. ಧಾರವಾಡ ಅವರು.

ಕೊಡುಂಕರುನಾಡುಗರ್ ಎಂದು ಹೆಸರಿಸಿದೆ. ಪಾಂಡ್ಯದೊರೆ ಶೆಡ್ಯೆಯನ್ ಪರಾಂತಕನ ವೇಳ್ವಿಕುಡಿ ಶಾಸನ (ಕ್ರಿ.ಶ ೭೭೦) ಶಾಸನ 'ಮಧುರ ಕರುನಾಡುಗನ್' ಎಂಬ ಕನ್ನಡ ದೊರೆಯೊಬ್ಬನನ್ನು ಹೆಸರಿಸಿದೆ. ಶೂದ್ರಕನ ಮೃಚ್ಛಕಟಿಕದಲ್ಲಿ 'ಕಣ್ಣಾಡಲಿಹ ಪ್ರಯೋಗ'ದ ಉಲ್ಲೇಖವಿದೆ. ಮೃಚ್ಛಕಟಿಕದ ಕಾಲ ಕ್ರಿ.ಶ. ೩-೪ನೆಯ ಶತಮಾನ.

ಕ್ರಿ.ಶ. ಸು.೧-೨ನೆಯ ಶತಮಾನ (ನಾಲ್ಕನೆಯ ಶತಮಾನ) ದವನಾದ ಸಾತವಾಹದೊರೆ ಹಾಲನು ತನ್ನ ಗಾಥಾ ಸಪ್ತಶತಿಯಲ್ಲಿ ಪೊಟ್ಟ, ತುಪ್ಪ ತೀರ್, ಪೆಟ್ಟು ಮೊದಲಾದ ಕನ್ನಡ ಶಬ್ದಗಳನ್ನು ಪ್ರಯೋಗಿಸಿದ್ದಾನೆಂದು ಗೋವಿಂದ ಪೈ ತೋರಿಸಿಕೊಟ್ಟಿದ್ದಾರೆ. ಹೀಗೆ ಯಾವ ನಿಟ್ಟಿನಿಂದ ನೋಡಿದರೂ ಕ್ರಿ.ಶ. ೨ನೆಯ ಶತಮಾನದ ಹೊತ್ತಿಗೆ ಕನ್ನಡ ಭಾಷೆ ಮತ್ತು ಕರ್ನಾಟಕಗಳು ಸ್ವತಂತ್ರ ಅಸ್ತಿತ್ವ ಪಡೆದಿದ್ದವೆಂದು ಧಾರಾಳವಾಗಿ ಹೇಳಬಹುದಾಗಿದೆ.

ಬನವಾಸಿಯೇ ಬಹುಶಃ ಪ್ರಾಚೀನ ಕನ್ನಡ ಸಂಸ್ಕೃತಿಯ ಕೇಂದ್ರ ಪಟ್ಟಣ. ಆರ್ಯಭಾಷೆಗಳ ಪ್ರಾಬಲ್ಯದಿಂದಾಗಿ ಪೈಠಣವು ಸಾವಕಾಶವಾಗಿ ತನ್ನ ಕನ್ನಡತನವನ್ನು ಕಳೆದುಕೊಳ್ಳುತ್ತ ನಡೆಯಿತು. ಅದರ ಸ್ಥಾನವನ್ನು ಸಾತವಾಹನ ಸಾಮ್ರಾಜ್ಯದ ಪ್ರಾಂತೀಯ ರಾಜಧಾನಿಯಾಗಿ ಬನವಾಸಿ ವಿಕಾಸ ಹೊಂದತೊಡಗಿತು. ಬನವಾಸಿಯಲ್ಲಿ ಈಗ ಚುಟುಪೂರ್ವದ ಎಂದರೆ ಸಾತವಾಹನಕಾಲದ ಪ್ರಾಕೃತಬರಹವೊಂದು ದೊರೆತಿದ್ದು ಅದರಲ್ಲಿ ಆ ಮನೆತನದ ರಾಣಿಯೊಬ್ಬಳ ಸಮಾಧಿಯನ್ನು (ಛಾಯಾಪ್ರತಿಮೆ) ಉಲ್ಲೇಖಿಸಿದೆ. ನಾಗಾರ್ಜುನಕೊಂಡದ ಇನ್ನೊಂದು ಪ್ರಾಕೃತ ಬರಹ ವೈಜಯಂತಿಯ ದೊರೆ (ಚುಟು । ಸಾತವಾಹನ)ಯ ರಾಣಿಯಾದ 'ಕೊದಬಾಲಸಿರಿ' ಎಂಬವಳು ಬೌದ್ಧ ಚೈತ್ಯವೊಂದನ್ನು ಕಟ್ಟಿಸಿದಳೆಂದು ಹೇಳುತ್ತದೆ. ಬನವಾಸಿಯ ವ್ಯಾಪಾರಿ ಭೂತಪಾಲನು ಕಾರ್ಲೆಯ ಚೈತ್ಯವನ್ನು ನಿರ್ಮಿಸಿದ. ಬೌದ್ಧಧರ್ಮವನ್ನು ಪ್ರಚುರ ಪಡಿಸಿ ಈ ಭಾಗದಲ್ಲಿ ಹಲವಾರು ಸಂಘಾರಾಮಗಳನ್ನು ನಿರ್ಮಿಸಿದ ತೇರ ರಕ್ಖಿತನೆಂಬ ಭಿಕ್ಷು ಬನವಾಸಿಯನ್ನು ತನ್ನ ಕೇಂದ್ರವಾಗಿ ಮಾಡಿಕೊಂಡಿದ್ದನು. ಇವೆಲ್ಲ ಸಾಕ್ಷ್ಯಾಧಾರಗಳಿಂದ ಟಾಲೆಮಿ ಉಲ್ಲೇಖಿಸಿರುವಂತೆ ಬನವಾಸಿ ಅಶೋಕನ ಕಾಲದಿಂದಲೂ ಕರ್ನಾಟಕದ ದೊಡ್ಡ ಸಾಂಸ್ಕೃತಿಕ ಕೇಂದ್ರವಾಗಿದ್ದುದು ಸ್ಪಷ್ಟಪಡುತ್ತದೆ. ಕ್ರಿ.ಶ.ದ ಪ್ರಾರಂಭಕ್ಕಾಗಲೇ ಈ ಪಟ್ಟಣ ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿವೆತ್ತಿದ್ದು ಬೆರಗುಗೊಳಿಸುವ ಸಂಗತಿ.

ಸನ್ನತಿಯ ಶಾಸನಗಳನ್ನು ಕುರಿತು ಈಗಾಗಲೇ ಉಲ್ಲೇಖಿಸಿದೆ. ಸು. ೭೭ರಷ್ಟು ಪ್ರಾಕೃತ ಬರಹಗಳು (ಅವುಗಳಲ್ಲಿ ನಾಲ್ಕು ಅಶೋಕನ ಶಾಸನಗಳು.) ಅಲ್ಲಿ ದೊರೆತ ಎರಡು ಮೂರು ಬೌದ್ಧ ವಿಹಾರಾವಶೇಷಗಳು ಮೊದಲಾದ ಪ್ರಾಕ್ತನ ವಾಸ್ತುಗಳಿಂದ ಸನ್ನತಿಯು ಪ್ರಸಿದ್ಧ ಕೇಂದ್ರವಾಗಿದ್ದರೂ ಅಲ್ಲಿ ಕನ್ನಡ ವಿಕಾಸಗೊಳ್ಳಲಿಲ್ಲವೆಂದು ಕಾಣುತ್ತದೆ.

ಸುವರ್ಣಗಿರಿ । ಇಸಿಲ ಮತ್ತು ಬಾದಾಮಿ । ಐಹೊಳೆಗಳು ಪ್ರಾಚೀನ ಬೌದ್ಧ ಕೇಂದ್ರಗಳಾಗಿದ್ದಂತೆ ಹಲಸಿಗೆ, ಕೊಪ್ಪಳ, ಶ್ರವಣಬೆಳ್ಗೊಳ ನರಸಿಂಹರಾಜಪುರ, ಮೈಸೂರು ಜಿಲ್ಲೆಯ ಬಸ್ತಿಪುರ, ಪುಲಿಗೆರೆ ಮೊದಲಾದವು ಜೈನಕೇಂದ್ರಗಳಾಗಿದ್ದುವು. ಹಲಸಿಗೆಯ ತಾಮ್ರಪಟಗಳಲ್ಲಿ ನಿರ್ಗ್ರಂಥ -ದಿಗಂಬರ ಶ್ವೇತಪಟ (ಶ್ವೇತಾಂಬರ) ಆಹಲಿಷ್ಟ ಕೂರ್ಚಕ,

ಮತ್ತು ಯಾಪನೀಯ ಜೈನ ಸಂಗಡಗಳ ಉಲ್ಲೇಖ ಬಂದಿದೆ. ಇದರಿಂದ ಹಲಸಿಗೆ ಕ್ರಿ.ಶ. ಐದನೆಯ ಶತಮಾನದಷ್ಟೊತ್ತಿಗೆ ಪ್ರಸಿದ್ಧ ಜೈನಕೇಂದ್ರವಾಗಿದ್ದು ಸ್ಪಷ್ಟಪಡುತ್ತದೆ. (ಕರ್ನಾಟಕ ಮೂಲದ ?) ಯಾಪನೀಯರು ಕ್ರಿ.ಶ. ಆರಂಭಕ್ಕಾಗಲೇ ಶೌರಸೇನಿಯಲ್ಲಿ ಗ್ರಂಥಗಳನ್ನು ರಚಿಸಿ ದಿಗಂಬರರಿಗೂ ಅನುಕರಣೀಯರಾಗಿದ್ದರು. ಕೊಪ್ಪಳದಲ್ಲಿನ ಜೈನಾವಶೇಷಗಳು ಇಂದು ಬಹಳಷ್ಟು ಹಾಳಾಗಿದ್ದರೂ ಜೈನ ಪರಂಪರೆಯಲ್ಲಿಯೇ ಅದನ್ನು ಆದಿತೀರ್ಥವೆಂದು ಕರೆಯಲಾಗಿದೆ. ಬಹುಶಃ ಇದು ಯಾಪನೀಯ ಕೇಂದ್ರವಾಗಿರುವಂತೆ ಕಾಣುತ್ತದೆ. ಶ್ರವಣಬೆಳ್ಗೊಳವೂ ಕ್ರಿ.ಶ. ಐದನೆಯ ಶತಮಾನಕ್ಕಾಗಲೇ ಅಸ್ತಿತ್ವದಲ್ಲಿತ್ತು. ಪರಂಪರೆಯಂತೆ ಮೌರ್ಯ ಸಮ್ರಾಟ ಚಂದ್ರಗುಪ್ತ ಮತ್ತು ಅವನ ಗುರು ಭದ್ರಬಾಹು ಅದರ ಅಸ್ತಿಭಾರ ಹಾಕಿದರು. ಆರನೆಯ ಶತಮಾನದಲ್ಲಿ ಅಯ್‌ಹೊಳೆ-ಬಾದಾಮಿಗಳು, ಏಳನೆಯ ಶತಮಾನಕ್ಕೆ ಪುಲಿಗೆರೆ, ಬಸ್ತಿಪುರ (ಕೊಳ್ಳೆಗಾಲ) ನರಸಿಂಹರಾಜಪುರ ಮೊದಲಾದುವು ಪ್ರಖ್ಯಾತ ಜೈನ ಕೇಂದ್ರಗಳಾಗಿ ಅದರ ಬೆಳವಣಿಗೆಯನ್ನು ಮುಂದುವರಿಸಿದವು. ಈ ಸಾಲಿಗೆ ಮೈಸೂರು ಜಿಲ್ಲೆಯ ಪುನ್ನಾಟ, ಅದರ ರಾಜಧಾನಿ ಕೀರ್ತಿಪುರಗಳನ್ನು ಸೇರಿಸಬೇಕು. ಪುನ್ನಾಟ ಸಂಘವೆಂಬ ದಿಗಂಬರ ಜೈನ ಸಂಘವೇ ಪ್ರತ್ಯೇಕವಾಗಿ ಅಸ್ತಿತ್ವದಲ್ಲಿದ್ದುದು ಗಮನಾರ್ಹ. ಬನವಾಸಿಯಲ್ಲಿ ಕೂಡ ಕದಂಬ ರವಿವರ್ಮನ ಕಾಲದಲ್ಲಿ ಜೈನ ಧರ್ಮ ತುಂಬ ಜನಪ್ರಿಯವಾಗಿತ್ತು. ಇವುಗಳ ಪೈಕಿ ಶ್ರವಣಬೆಳ್ಗೊಳದಲ್ಲಿ ಕ್ರಿ.ಶ. ಏಳನೆಯ ಶತಮಾನದಷ್ಟೊತ್ತಿಗೆ ಕನ್ನಡವು ಪದ್ಯ ರಚನೆಗೆ ಹದಗೊಂಡಿತ್ತು. ಅಲ್ಲಿನ ಹಲವಾರು ಉತ್ತಮ ಪದ್ಯ ಶಾಸನಗಳು ಆಧುನಿಕ ವಿದ್ವಾಂಸರ ಮೆಚ್ಚುಗೆಗೆ ಪಾತ್ರವಾಗಿವೆ. ಇಲ್ಲಿ ಹಲವು ಜನ ಕವಿಗಳು ಆಗಿಹೋಗಿದ್ದಾರೆ. ಬಸ್ತಿಪುರದ ಶಾಸನದಲ್ಲಿ ಉಲ್ಲೇಖಿಸಲ್ಪಟ್ಟ ಅಕಳಂಕನು ಯಾಪನೀಯನಾಗಿರುವ ಸಾಧ್ಯತೆಯಿದೆ. ಕವಿ ಚಕ್ರವರ್ತಿ ರನ್ನನಿಗೆ ಕೊಪ್ಪಳ, ಶ್ರವಣಬೆಳ್ಗೊಳವೆರಡೂ ಪಾವನ ಕ್ಷೇತ್ರಗಳಾಗಿದ್ದವು.

ಕನ್ನಡ ಶಾಸನಗಳು :

ಕನ್ನಡದ ಪ್ರಥಮ ದಾಖಲೆ ಹಲ್ಮಿಡಿ ಶಾಸನದಲ್ಲಿ ಸು. ೨೭ರಷ್ಟು ಕನ್ನಡ ಪ್ರಕೃತಿಗಳು, ಒಟ್ಟಾರೆ ೫೮ರಷ್ಟು ಕನ್ನಡ ಭಾಷೆಯ ಅಂಶಗಳು ಕಂಡುಬಂದಿರುವ ಸಂಗತಿಯನ್ನು ಈಗಾಗಲೇ ಹೇಳಿದೆ. ಅದೇ ರೀತಿ ತಗರೆಯ ಭೋಗವರ್ಮ ಶಾಸನ, ಅವಿನೀತನ, ಮಲ್ಲೋಹಳ್ಳಿ ಶಾಸನ, ಪೊಲವೀರನ ಬಿಸನಳ್ಳಿ ಶಾಸನ ಮೊದಲಾದವುಗಳಲ್ಲಿ ಕೆಲವು ಕನ್ನಡ ವಾಕ್ಯಗಳು ಬರೆಯಲ್ಪಟ್ಟಿವೆ. ಮುಂದಿನ ಅವಧಿಯಲ್ಲಿ ಕಂಡುಬರುವ ಕನ್ನಡ ಶಾಸನವನ್ನು ಇಲ್ಲಿ ನೋಡಬಹುದು.

ತಮಟ ಕಲ್ಲು ಶಾಸನ

ಫಣಮಣಿ ಅನ್ತುಭೋಗಿ ಫಣದುಳ್ಳಣಿ ಪಿಲ್ಲಿನದೋನ್
ರಣಮುಖದುಳ್ಳೆ ಕೊಲ್ಲಿನೆರೆಯುರ್ಕ್ಕುಮನನ್ತ ಗುಣನ್
ಪ್ರಣಯ ಜನಕ್ಕೆ ಕಾಮನಸತೋತ್ತಲವರ್ಣ್ಣನವನ್
ಗುಣಮಧುರಾಂಕ ದಿವ್ಯಪುರುಷನ್ ಪುರುಷ ಪ್ರವರನ್

ಸಿರಿಗುಂದ ಶಾಸನ

ಸ್ವಸ್ತಿ ಶ್ರೀ ಸಿವ್ವನೀತರಾ ಕಿಜೆಯಾ ಮಗನ್ಬಿರ್-ಕದು ವಟ್ಟಿಯರಿನ್ಬಮ್
ಪಲ್ಲವರಸರಿನ್ಬಕೊಗೊಣ್ಡಿಪದ ಸೂದಿ (ಡಿ) ದೊ
ರಾ ಅನುಜೊ ಇನ್ದು ಕನಲ್ಗೊಳಿ ನನ್ದಿಯಾಲರಾ ವಿ
ಟ್ಬದು ಪಡೆವ್ಯೆಲಾಮು ಅಸಮಪಾಲುಮ್
ಇದಾನಟಿದೋನ್ಸಾಡನಟಿದೋನ್, ಪಞ್ಜ ಮಹಾಪತಗಮಕ್ಕುಂ
ಸ್ವಸ್ತಿ ಶ್ರೀ ಅವ್ವೊರಯ್ಬದಿಪರ್ಕ್ಗ (ಅಯ್ಬದಿಂಬಗರ್ಗ೦) ಪದಿರ್ಕಣ್ಬಗ ಸಾಲ್ವತ್ತಪಿ
......ದಮರಸುಕೆಯ
ಇಉರಾ ಸುಕಂದ್ಯೆವತು.

ಕೊಪ್ಪಳ ಶಾಸನ

ಆಪ್ಪರಸನ್ ಆಜನ್ನಾ.........

ಭೋಗಿವರ್ಮನ ತಗರೆಯ ಶಾಸನ

ಕಿಜು ಕೂಡಲೂರ ಮೂವತ್ತಾ ಎರಡು ಸರ್ವ್ವ ಪರಿಹಾರಂ
ಓಂ ತಗರೆಯಾ । ಪೆರ್ಗ್ಗಪೆಯಾ ಮೊದಲ್ಗ್ರಜ್ ಮೂವತ್ತಾ
ಎರಡುಂ ಸರ್ವ್ವ ಪರಿಹಾರಂ ವಡಗ್ಯೆಗೇರಿ ಮನೆ ಭನಂ
ಭೂಮಿ ದಾನಂ । ಕೊಟ್ಟಂ .... ಇದಾನ್
ಕಾದೊಂಗೆ । ಕಿಟ್ಟ್ವೂರಲ್ ಪಿಣ್ಣಗ್ಗ ಕೊಟ್ಟೋ(ನ) ಪೆರಿಯ
ಡಿಗಳ್ ಕಿಜು ಕೂಡಲೂರಂ ಕೆಜಿಯ ಕೆಟಿಗು ಸಮಭಗ
ಸಕ್ಷಿ ಮಣಿಯ ಭಳ್ಳವಿಯಂ ಅಮೂಲ

ಸಿರಗುಪ್ಪಿ (ತಾ। ಹುಬ್ಬಳ್ಳಿ)ಯ ತುರುಗೋಳ್ ಶಾಸನ

ಸ್ವಸ್ತಿ ಶ್ರೀ ವಾಣಸತ್ತಿ ಅರಸರಾ
(ಮೂ)ಳು ಜ್ಬ (ನ್ಬಾ)ಳೆ ಅಸ್ತವರ್ಮ್ಮಕ್ಕಳಾ ಸಿರಿ (ಗು) ಪ್ಪೆ ಆ
ಳೆ ಕುನ್ದಸತ್ತಿ ಅರಸ..... ಗೊಳೆ ಕವ್ವೊಡರಾ ಸಿರಿಗು
ಪ್ಪನುಂ ಸಿರಿ ವಾಕ್ಕ (ಟ) ಕ ಣದೇವಿ........

ರವಿವರ್ಮನ ಕೆಲಗುಂದ್ಲಿ ಶಾಸನ ; [೧೬]

(ಸ್ವಸ್ತಿ ಶ್ರೀ) ರವಿವರ್ಮರ್)
ನಾಡಾಳೆ ಮಲ್ಲಿಗೆ ಆ
ಅರಸರಾ ಪೆರಿಯಾ ಅರಸಿ ಆ (ಯಾ)
ಕೆಟಿಗುಜ್ಜೇನಿ ಯಾ ಪಡುಗ (ಲ್)
ಇನ್ನಿದಾನ್ನಟಿವೋರ್ಪ (ಇಪಾ)
ವಗ ಸಂಯುತ್ತರಪ್ಪಾ (ರ್)

ಅಜವರ್ಮನ ಕಂಪ್ಲಿ ಶಾಸನ; [೧೬]

(ಪ್ರಾರಂಭದ ಭಾಗ ನಷ್ಟ)

(ಇ) ವ (ರ್ಗ್ಗ)...... ಮುಬಿಲಿಯರ
ಧರ್ಮ್ಮ ಸೇನಾವರನ್ ಮೋರಿಯವಳ್ಳಿ
ಯನ್ಸರ್ವ್ವವಾದ (ಧಾ) ಪರಿಹಾರಂ ಕೊಟ್ಟ
ಕಂಪಿಲ್ಲಿಯಾ ದೇವಭೋಗಂ ಪಾಯ್ವೆ
ಯಿರ ವತ್ತಿ ಕೊಟ್ಟದ (ದಾ)ನ್ ಮಹಾರಾಜನ
ಮಗನಜವರ್ಮನಿಜೆಸಿದಾನ್
ಧರ್ಮ್ಮ ಸೇನಾವರನ್ಕಾದನ್ ಇದನ್ ಕಾದೋ
ನ್ಗ ಸವಮೇಧದ ಫಲಮಕ್ಕು
ಇದನ್ಕೆಡಿಸಿದೋನ್ ವಾರಣಾಸಿಯ
ನಟಿದ ಪಾಪಮಕ್ಕು.

ಮಂಗಲೇಶನ ಬಾದಾಮಿ ಶಾಸನ :

ಸ್ವಸ್ತಿ ಶ್ರೀಮತ್ ಪ್ರಿಥಿವೀವಲ್ಲಭ ಮಂಗಲೀಸನಾ ಕಲ್ಮನೆಗೆ
ಇತ್ತೊಂದು ಲಂಜಿಗೇಸರಂ. ದೇವರ್ಕೆ ಪೂನಿಜುವ ಮಾಲ
ಕಾರನ್ಗೆ ಅರ್ಧ ವಿಸದಿ ಇತ್ತುದಾನಟಿವೊನ್ ಪಞ್ಚಮಹಾ
ಪಾತಕನಕುಂ‖ ಏಟನೆಯಾ ನರಕದಾ ಪುಟು ಅಕ್ಕು‖

ಆರನೆಯ ಶತಮಾನದಲ್ಲಿ ಕಂಡುಬರುವ ಈ ಏಳೆಂಟು ಬರಹಗಳನ್ನು ಕನ್ನಡವು! ಪ್ರಸ್ತುತ ಅವಧಿಯಲ್ಲಿ ಆಡಳಿತಭಾಷೆಯಾಗಿ ಪರಿವರ್ತನಗೊಳ್ಳುತ್ತಿದ್ದುದರ ದಿಕ್ಸೂಚಿಯಾಗಿವೆ.

ಸಾಹಿತ್ಯ ಚಟುವಟಿಕೆಗಳು :

ಕ್ರಿ. ಶ. ಸುಮಾರು ಒಂದನೆಯ ಶತಮಾನದಲ್ಲಿದ್ದ ಗುಣಾಢ್ಯ ಪೈಶಾಚಿ ಪ್ರಾಕೃತದಲ್ಲಿ ಬೃಹತ್ಕಥೆ ಅಥವಾ ವಡ್ಡಕಥೆಯನ್ನು ರಚಿಸಿದ. ವ್ಯಾಸ ವಾಲ್ಮೀಕಿಗಳಂತೆ ಅಸಾಮಾನ್ಯ ಪ್ರತಿಭೆಯ ಕವಿಯೀತ. ಮೂಲ ಬೃಹತ್ಕಥೆ ಕಳೆದು ಹೋಗಿದೆ. ಸಾತವಾಹನರೊಡನೆ ಈತನಿಗಿದ್ದ ಸಂಬಂಧವನ್ನು ಬಹುಶಃ ಒಪ್ಪಿಕೊಳ್ಳಲಾಗಿದೆ. ಸಾತವಾಹನ ಸಾಮ್ರಾಜ್ಯದಲ್ಲಿ ಅಂದಿನ ಕರ್ನಾಟಕದ ಬಹುಭಾಗ ಸಮಾವಿಷ್ಟವಾಗಿದ್ದುದರಿಂದ ಬೃಹತ್ಕಥೆಯ ಪ್ರಭಾವ ಕರ್ನಾಟಕವ ಜನತೆಯ ಮೇಲೆ ಅಂದು ತೀವ್ರ ಪ್ರಭಾವ ಬೀರಿತು. ೬ನೆಯ ಶತಮಾನದಲ್ಲಿದ್ದ ಗಂಗದೊರೆ ದುರ್ವಿನೀತ ಅದನ್ನು ಸಂಸ್ಕೃತಕ್ಕೆ ಅನುವಾದಿಸಿದ್ದನೆಂದು ಗಂಗರ ಉತ್ತನೂರು ಮೊದಲಾದ ತಾಮ್ರ ಪಟಗಳಲ್ಲಿ ಹೇಳಿದೆ.[೧೭]

---

೧೬. Corpus of Kadamba Inscription : ಕೆಲಗುಂಡ್ಲಿ ಶಾಸನ ಪ್ರಕಟಿಸಿದ ಡಾ. ರಘುನಾಥ ಭಟ್ಟದ ಪಾಠಕ್ಕೆ ಪ್ರೊ. ಬಿ. ರಾಜಶೇಖರಪ್ಪ ಕೆಲವು ತಿದ್ದುಪಡಿ ಸೂಚಿಸಿದ್ದಾರೆ. ಪ್ರಜಾವಾಣಿ ೧೬-೨-೧೯೮೩ ನಾನೂ ಚಿಕ್ಕ ಮಾರ್ಪಾಟು ಮಾಡಿಕೊಂಡಿದ್ದೇನೆ.

೧೭. ಐ ಪಿ ಕ ೧೭ ಮು. ಜಾ. ೩೬೫

ದುರ್ವಿನೀತ ಕನ್ನಡದಲ್ಲಿ ಗದ್ಯ ಕೃತಿ ರಚಿಸಿದ ಪ್ರಸಿದ್ಧ ಲೇಖಕ. ಈತ ಕಿರಾತಾರ್ಜುನೀಯ ಟೀಕೆ, ಶಬ್ದಾವತಾರ ವ್ಯಾಕರಣ ಮತ್ತು ವಡ್ಡ ಕಥೆಗಳನ್ನು ಬರೆದನೆಂಬುದನ್ನು ಮೇಲೆ ತಿಳಿಸಿದ ಶಾಸನದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿದೆ. ಬಹುಶಃ ವಡ್ಡಕಥೆಯನ್ನು ಆತ ಸಂಸ್ಕೃತ (ದೇವ ಭಾರತೀನಿಬದ್ಧ)ದಲ್ಲಿ ಅನುವಾದಿಸಿದಂತೆ ಕನ್ನಡದಲ್ಲೂ ಅನುವಾದಿಸಿರಬಹುದು.

ಬೃಹತ್ಕಥೆ ಕೇವಲ ಅನುವಾದವಷ್ಟೆ ಅಲ್ಲದೆ, ವಿವಿಧ ಆಕಾರ–ರೂಪ ತಳೆಯಿತು. ಸಂಸ್ಕೃತದ ಬುಧಸ್ವಾಮಿ ಕ್ಷೇಮೇಂದ್ರ ಸೋಮದೇವರ ಅನುವಾದಗಳಲ್ಲದೆ ಹಿತೋಪದೇಶ, ಪಂಚತಂತ್ರಗಳಾಗಿ ವಿಷ್ಣುಶರ್ಮ ಮತ್ತು ವಸುಭಾಗಭಟ್ಟ ಮೊದಲಾದವರಿಂದ ಅದು ಬಹುವ್ಯಾಪಕವಾಗಿ ಪ್ರಸಾರಗೊಂಡಿತು. ಕನ್ನಡದ ಆದಿಗುಣವರ್ಮ (ಕ್ರಿ.ಶ. ಸು. ೯ನೆಯ ಶ.) 'ಶೂದ್ರಕ'ವೆಂಬ ಚಂಪೂ ಕಾವ್ಯ ರಚಿಸಿದ್ದು ಅದಕ್ಕೆ ಬೃಹತ್ಕಥೆಯೇ ಆಧಾರ. ಅದೇ ರೀತಿ ೧೧ನೆಯ ಶತಮಾನದ ದುರ್ಗಸಿಂಹ ವಸುಭಾಗಭಟ್ಟನ ಪಂಚತಂತ್ರವನ್ನು ಕನ್ನಡಕ್ಕೆ ಅನುವಾದಿಸಿದ.

ಗುಣಾಢ್ಯನ ತರುವಾಯ ಹೆಸರಿಸಬೇಕಾದ ಇನ್ನೊಬ್ಬ ಪ್ರಸಿದ್ಧ ಜೈನ ಲೇಖಕನೆಂದರೆ ಸಿವಜ್ಜ ಅಥವಾ ಶಿವಾರ್ಯ. ಯಾಪನೀಯವಾದ ಈತ ಗಿರಿ ನಗರದಲ್ಲಿ ಜಿನನಂದಿ ಗಣಿ, ಸರ್ವ ಗುಪ್ತಗಣಿ ಮತ್ತು ಆರ್ಯ ಮಿತ್ರನಂದಿ ಇವರ ಪಾದ ಮೂಲದಲ್ಲಿ ಮೂಲ ಸೂತ್ರರ್ಥ ಗಳನ್ನು ಓದಿ ಕಲಿತು ಮೂಲಾರಾಧನೆ ಅಥವಾ ಭಗವತೀ ಆರಾಧನಾ ಎಂಬ ಜೈನ ಆಚಾರ ಸಂಹಿತೆಯ ಒಂದು ದೊಡ್ಡಭಾಗವನ್ನು ಶೌರಸೇನಿಯಲ್ಲಿ ಸೂತ್ರೀಕರಿಸಿದ. ಯಾಪನೀಯ ನಾದುದರಿಂದ ಕರ್ನಾಟಕದ ಸಂಬಂಧ ಈತನಿಗೆ ಇದ್ದುದು ಸಹಜ. ಯಾಪನೀಯ ಜೈನ ಪಂಥ ಕರ್ನಾಟಕ ಮೂಲದ್ದು. ಭಗವತೀ ಆರಾಧನೆಯ ಮೇಲೆ ಹುಟ್ಟಿದ ಟೀಕಾಗ್ರಂಥಗಳ ಪರಂಪರೆಯೊಂದು ಕನ್ನಡದಲ್ಲಿಯೇ ಬೆಳೆದು ಬಂದಿದೆ. ಈಗ ನಮಗೆ ತಿಳಿದುಬಂದಿರುವಂತೆ ಭ್ರಾಜಿಷ್ಣು ಎಂಬವನು 'ಆರಾಧನಾ ಕರ್ನಾಟಟೀಕೆ' ಎಂಬ ಹೆಸರಿನ ಕಥಾ ರೂಪದ ಟೀಕೆಯನ್ನು ಕ್ರಿ. ಶ. ಹತ್ತನೆಯ ಶತಮಾನದ ಹಿಂದೆ, ಬಹುಶಃ ಒಂಬತ್ತನೆಯ ಶತಮಾನದಲ್ಲಿ ರಚಿಸಿದ. ಇದು ಇಂದು ನಮಗೆ ಉಪಲಬ್ಧವಾದ 'ವಡ್ಡಾರಾಧನೆ' ಎಂಬ ಕೃತಿಯೇ ಎಂದು. ಡಾ. ಎಂ.ಎಂ. ಕಲಬುರ್ಗಿ ಮತ್ತು ಡಾ. ಹಂಪ. ನಾಗರಾಜಯ್ಯನವರು ಹೇಳುವರಾದರೂ ಇವೆರಡೂ ಒಂದೇ ಎಂಬ ಸಂಗತಿಯನ್ನು ಒಪ್ಪಲು ಹೆಚ್ಚಿನ ಆಧಾರಗಳು ಬೇಕು. ವಡ್ಡಾರಾಧನೆಯನ್ನು ಕಥಾರೂಪದ ಟೀಕೆಯನ್ನಾಗಿ ಶಿವಕೋಟಿಯೆಂಬವನು ಕನ್ನಡದಲ್ಲಿ ರಚಿಸಿದನೆಂದು ಡಾ. 'ದೊಲನ'ರು ಹೇಳಿದ್ದಾರೆ. ೧೧ನೆಯ ಶತಮಾನದ ಶಾಂತಿನಾಥ ಕವಿಯ ಸುಕುಮಾರ ಚರಿತೆಯು ಮೂಲತಃ ಒಂದು ಆರಾಧನಾ ಕಥೆಗಳ[೧೮] ಪ್ರಭಾವದಿಂದಲೇ ಕನ್ನಡದಲ್ಲಿ ಹುಟ್ಟಿದ ಇನ್ನೊಂದು ಕಥಾ ಸಂಗ್ರಹ.

ಕ್ರಿ.ಶ.ಸು. ಆಯ್ದನೆಯ ಶತಮಾನದಲ್ಲಿದ್ದ ಯಾಪನೀಯಮುನಿ ಕರ್ನಾಟಕದ ಕೊಡಗಿನ ಪ್ರದೇಶದವನೆಂದು ಡಾ. ವರದರಾಜ ಉಮರ್ಜಿ ಹೇಳಿದ್ದಾರೆ.[೧೯] ಈತ ತನ್ನ 'ಲೋಕ

---

೧೮. ಇದನ್ನು ಡಾ. ಬಿ.ವ್ಹಿ. ಶಿರೂರ ಕರ್ನಾಟಕ ವಿಶ್ವ ವಿದ್ಯಾಲಯದಿಂದ ಪ್ರಕಟಿಸಿದ್ದಾರೆ.

೧೯. ಕರ್ನಾಟಕ ಭಾರತ ೬–೪ ಪು. ೧೧೧.

ವಿಭಾಗ' ಕೃತಿಯನ್ನು ಕರ್ನಾಟಕದಲ್ಲಿಯೇ ರಚಿಸಿದ್ದಾನೆಂದು ಡಾ. ಎ. ಎನ್. ಉಪಾಧ್ಯೆ ಹೇಳುತ್ತಾರೆ.[20] ಇದರಂತೆ ಯತಿ ವೃಷಭನ ತಿಲೋಯ ಪಣ್ಣತ್ತಿ ಕೂಡ ಕರ್ನಾಟಕದಲ್ಲಿಯೇ ರಚಿತವಾದ ಕೃತಿ. ಇದೇ ಅವಧಿಯಲ್ಲಿದ್ದ ವಟ್ಟಕೇರನೆಂಬ ಮುನಿ ಕರ್ನಾಟಕದವನಾಗಿದ್ದು ಇವನ ಊರು ಬೆಟಗೇರಿ ಅಥವಾ ವಳಕೇರಿ ಎಂದು ಅಭಿಪ್ರಾಯ ಪಡಲಾಗಿದೆ. ಮೂಲಾಚಾರ ಇವನ ಕೃತಿ. ಯಾಪನೀಯ ಸಂಘದ ಇನ್ನೊಬ್ಬ ದೊಡ್ಡ ಕವಿ ಸ್ವಯಂಭು. ಇವನ ಸಂಬಂಧಿಗಳ ಹೆಸರುಗಳಲ್ಲಿ ಪಂದಇಯ, ಧವಲಇಯ (ಪಂಪಯ್ಯ, ಧವಲಯ್ಯ) ಅಮಇವ 'ಅಇಚ್ಚಂವ' ಸುಅವ' ಎಂಬ ಅಪ್ಪ ಪದಾಂತರೂಪಗಳು ಬಂದಿರುವುದರಿಂದ ಈತ ಕರ್ನಾಟಕದವನೆಂದು ಎಲ್ಲ ವಿದ್ವಾಂಸರು ತಿಳಿದಿದ್ದಾರೆ. ಇವನ ಕೃತಿಗಳಾದ ಪಉಮಚರಿಉ (ರಾಮಾಯಣ) ರಿಟ್ಠ ಣೇಮಿ ಚರಿಉ(ಹರಿವಂಶ ಪುರಾಣ) ಮೊದಲಾದವು ಅಪಭ್ರಂಶ ಸಾಹಿತ್ಯದ ಪ್ರಸಿದ್ಧ ಕೃತಿಗಳು. ಗುಜರಾತಿ, ಅವಧಿ ವ್ರಜ ಮೊದಲಾದ ಭಾಷಾ ಸಾಹಿತ್ಯಗಳ ಮೇಲೆ ಇವನ ಕೃತಿಗಳ ಪ್ರಭಾವವಿರುವದರಿಂದ ಅಖಿಲ ಭಾರತ ಮಟ್ಟದ ಮನ್ನಣೆಯ ಕವಿಯೀತ. ತರುವಾಯದ ಹತ್ತನೆಯ ಶತಮಾನಾವಧಿಯಲ್ಲಿ ರಾಷ್ಟ್ರಕೂಟ ದೊರೆ, ಮುಮ್ಮಡಿ ಕೃಷ್ಣನ ಆಸ್ಥಾನದಲ್ಲಿದ್ದು ಅಪಭ್ರಂಶ ಮಹಾಕಾವ್ಯ ತಿಸಟ ಮಹಾಪುರಿಸ ಗುಣಾಲಂಕಾರ ಚರಿಉ' ಬರೆದವನು ಪುಷ್ಪದಂತ.

ಇವರಲ್ಲದೆ ಸಮಂತ ಭದ್ರ, ಪೂಜ್ಯಪಾದ ಕವಿ ಪರಮೇಷ್ಠಿ ಮೊದಲಾದವರೂ ಕನ್ನಡದಲ್ಲಿ ಬರೆದಿರಬಹುದೆಂಬ ಊಹೆಗಳಿವೆಯಾದರೂ ಆಧಾರಗಳ ಲಭ್ಯವಿಲ್ಲ. ಕ್ರಿ.ಶ.ದ ಆದಿಭಾಗದಲ್ಲಿದ್ದು ಷಟ್ಖಂಡಾಗಮಟೀಕಾ. ಸಮಯಸಾರ, ಪಂಚಾಸ್ತಿಕಾಯ ಮೊದಲಾದ ಮಹತ್ವಪೂರ್ಣ ಗ್ರಂಥಗಳನ್ನು ಬರೆದ ಕುಂದಕುಂದಾಚಾರ್ಯರು ಕನ್ನಡಿಗರೆಂಬ ವಿಷಯ ಈಗ ದೃಢಪಟ್ಟಿದೆ. ತರುವಾಯದ ಕನ್ನಡ ಸಾಹಿತ್ಯ ಮೇಲೆ ಇವರ ಪ್ರಭಾವವೂ ಇದೆ. ಇವರ ಪರಂಪರೆಯಲ್ಲಿ ಬಂದ ಶ್ಯಾಮಕುಂದಾಚಾರ್ಯನು ೬ನೆಯ ಖಂಡವನ್ನು ಹೊರತುಪಡಿಸಿ ಷಟ್ಖಂಡಾಗಮ ಮತ್ತು ಕಷಾಯ. ಪ್ರಾಭೃತಗಳಿಗೆ ೧೨ ಸಾವಿರ ಗ್ರಂಥ (ಪದ್ಯ) ಪ್ರಮಾಣದ ವ್ಯಾಖ್ಯಾನ ಬರೆದಿದ್ದು. ಇದರಲ್ಲಿ ಸಂಸ್ಕೃತ ಪ್ರಾಕೃತ ಮತ್ತು ಕನ್ನಡ ಭಾಷೆಗಳ ಮಿಶ್ರಣವಿತ್ತೆಂದೂ ಇಂದ್ರ ನಂದಿಯ ಶ್ರುತಾವತಾರದಲ್ಲಿ ಹೇಳಿದೆ. ಅದೇ ರೀತಿ ತುಂಬಳೂರಾಚಾರ್ಯನನು ೮೪೦೦೦ ಗ್ರಂಥ ಪ್ರಮಾಣದ ಪ್ರಾಕೃತ-ಕನ್ನಡ ವ್ಯಾಖ್ಯಾನವನ್ನು ಅದೇ ಷಟ್ಖಂಡಾಗಮ ಮತ್ತು ಕಷಾಯ ಪ್ರಾಭೃತಗಳಿಗೆ ಬರೆದನೆಂದು ಇಂದ್ರನಂದಿ ಕನ್ನಡದ ಭಟ್ಟಾಕಳಂಕ; ಮತ್ತು ದೇವಚಂದ್ರರು ಹೇಳಿದ್ದಾರೆ. ಈ ವಿಷಯಗಳನ್ನು ಆಧುನಿಕ ಜೈನ ಸಾಹಿತ್ಯ ವಿಶಾರದರೆಲ್ಲ ಸಮರ್ಥಿಸುತ್ತಾರೆ.[21] ಚೂಡಾಮಣಿ ವ್ಯಾಖ್ಯಾನಿ ಭಟ್ಟಾಕಳಂಕ (೧೬-೧೭ನೆಯ ಶತಮಾನ)ದ ಕಾಲದವರೆಗೂ ಉಳಿದು ಬಂದಿದ್ದು ದುರ್ದೈವವಶಾತ್ ತರುವಾಯದಲ್ಲಿ ನಷ್ಟಗೊಂಡಿದೆ. ಇವರಲ್ಲದೆ ಶ್ರೀ ವರ್ಧದೇವನೂ ಒಂದು 'ಚೂಡಾಮಣಿ' ಬರೆದಿರುವುದಾಗಿ ವಿದ್ವಾಂಸರು ಹೇಳುತ್ತಾರೆ.

---

೨೦. ಕರ್ನಾಟಕ ದೂ ವಜೆಸ್ ಪು. ೪೭೫

೨೧. ನೋಡಿ. ಡಾ. ಎಂ.ಎಂ. ಕಲಬುರ್ಗಿ, ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ.

ಕವಿರಾಜಮಾರ್ಗಕಾರನು ಶ್ರೀವಿಜಯ, ಕವೀಶ್ವರ ಪಂಡಿತ ಚಂದ್ರ ಮತ್ತು ಲೋಕಪಾಲರೆಂಬ ಪದ್ಯಕವಿಗಳೂ ವಿಮಳೋದಯ. ನಾಗಾರ್ಜುನ, ಜಯಬಂಧು, ದುರ್ವಿನೀತರೆಂಬ ಗದ್ಯಕವಿಗಳೂ ಕನ್ನಡದಲ್ಲಿ ಆಗಿಹೋದರೆಂದು ಹೇಳಿದ್ದಾನೆ. ಇವರೆಲ್ಲ ಕ್ರಿ.ಶ. ೮೫೦ಕ್ಕೆ ಹಿಂದಿನವರು. ದುರ್ವಿನೀತ ಆರನೆಯ ಶತಮಾನದಲ್ಲಿದ್ದ ಗಂಗ ದೊರೆ ಎಂಬುದನ್ನು ಈಗಾಗಲೆ ನೋಡಿದ್ದೇವೆ. ಕವಿರಾಜಮಾರ್ಗಕಾರನ ತನಗಿಂತ ಹಿಂದಿದ್ದ 'ಕನ್ನಡವನ್ನು ಪಟಿಗನ್ನಡ' ಎಂದು ಹೆಸರಿಸಿ ಅದನ್ನು ಸರಿಯಾಗಿ ತಿಳಿಯಲಾರದವರು ಅದರ ಘನತೆಗೆ ಕುಂದು ತರುತ್ತಿದ್ದಾರೆ ಎಂದು ಆಕ್ಷೇಪಿಸಿದ್ದಾನೆ. ಅಂದಿನ ಪಟ ಗನ್ನಡವೆಂದರೆ ಅದು ಪೂರ್ವದ ಹಳಗನ್ನಡವೆ. ಶ್ಯಾಮಕುಂದ, ತುಂಬಳೂರಾಚಾರ್ಯ, ದುರ್ವಿನೀತ ಮೊದಲಾದವರು ಕಾವ್ಯಕ್ಕೆ, ಶಾಸ್ತ್ರಕ್ಕೆ ಅಳವಡಿಸಿದ ಭಾಷೆ. ಕ್ರಿ.ಶ.ದ ಆರು ಮತ್ತು ಅದಕ್ಕಿಂತ ಸ್ವಲ್ಪಾದರು ಹಿಂದಿನ ಶತಮಾನಗಳಿಗೆ ಸೇರಿದ್ದು.

೫ನೆಯ ಶತಮಾನದಿಂದ ೯ನೆಯ ಶತಮಾನದ (ಕ್ರಿ.ಶ. ೮೫೦ರ) ಅವಧಿಯ ವರೆಗೆ ಸು. ೬೪ ಕನ್ನಡ ಪದ್ಯಗಳು ಕಂಡುಬಂದಿವೆ. ಇವುಗಳಲ್ಲಿ ನಾನಾ ರೀತಿಯ ಪ್ರಾಸಗಳು. ಸಂಸ್ಕೃತದ ಚಂಪಕಮಾಲೆ, ಉತ್ಪಲಮಾಲೆ ಇತ್ಯಾದಿ ಆರು ಖ್ಯಾತ ಕರ್ನಾಟಕಗಳು, ಕನಕಾಬ್ಜಿನಿ ಮಲ್ಲಿಕಾಮಾಲೆ, ರಥೋದ್ಧತ ವಂಶಸ್ಥ, ಶ್ಲೋಕಗಳು, ಆರ್ಯಾಗೀತಿಯಿಂದ ಬೆಳೆದು ಬಂದ ಕಂದ ಪದ್ಯಗಳು, ಅಚ್ಚಗನ್ನಡದ ತ್ರಿಪದಿ, ಪಿರಿಯಕ್ಕರ ಮತ್ತು ೯ ಗಣ ಸಂಖ್ಯೆಯುಳ್ಳ ಅಂಶಗಣದ ಪದ್ಯ. ಕ್ರಿ.ಶ. ೭೫೮ರ ಗುಂಡ್ಲಹಳ್ಳಿ ಶಾಸನದಲ್ಲಿ ಮಿಶ್ರ ಛಂದಸ್ಸಿನ ಲಯ ವೃತ್ತ ಹಾಗೂ ಚಿಕ್ಕಬಳ್ಳಾಪುರ ಶಾಸನ (ಕ್ರಿ.ಶ. ೮೧೦)ದಲ್ಲಿ ಸಂಕೀರ್ಣ ಯೋಜನೆಯ ಎರಡು ಸಂಸ್ಕೃತ ಮಿಶ್ರ ಕನ್ನಡವಲ್ಲಿರುವ ಮಣಿ ಪ್ರವಾಳ ಶೈಲಿಯ ಪದ್ಯಗಳು ಈ ಅವಧಿಯಲ್ಲಿ ಕಂಡು ಬಂದಿವೆ. ತ್ಹಾಳಗುಂದ ಕುಬ್ಜನ ಕದಂಬ ಶಾಸನದಲ್ಲೂ ಅಯ್‌ಹೊಳೆಯ ರವಿಕೀರ್ತಿ ಶಾಸನದಲ್ಲೂ ಮೇಲೆ ನೋಡಿದ ಸಂಸ್ಕೃತ ವೃತ್ತಗಳೇ ಇವೆ. ಕುಬ್ಜ ರವಿಕೀರ್ತಿಗಳ ತರುವಾಯ ಕ್ರಿ.ಶ.ಸು ೭೬೦ರಲ್ಲಿದ್ದ ದಿವ್ಯಭಾಷಾಕಲನ್' ಎಂಬ ಕನ್ನಡ ಕವಿ ಗುಂಡ್ಲಹಳ್ಳಿ ಶಾಸನದಲ್ಲಿ ತೋರಿ ಬಂದಿದ್ದಾನೆ. ಈ ಕಾಲಾವಧಿಯಲ್ಲಿಯೇ ಸ್ವತಃ ಕರ್ನಾಟಕರಾಜ ಪ್ರಿಯೆಯಾಗಿದ್ದ ವಿಜ್ಜಿಕೆ (ವಿಜಯಾಂಬಿಕೆ) ಸಂಸ್ಕೃತದಲ್ಲಿ 'ಕೌಮುದೀ ಮಹೋತ್ಸವ' ಎಂಬ ನಾಟಕ ರಚಿಸಿದ್ದಾಳೆ. ಗಂಗ, ಕದಂಬ, ಬಾದಾಮಿ, ಚಾಲುಕ್ಯ ಮತ್ತು ರಾಷ್ಟ್ರಕೂಟರು ಉದಾರಾಶ್ರಯವಿತ್ತುದರಿಂದ ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಗಳು ಅನೂಚಾನವಾಗಿ ಬೆಳೆದು ಬಂದವು. ಈ ಮನೆತನಗಳ ಪೈಕಿ ಬನವಾಸಿ ಕದಂಬರ ಆಶ್ರಯದಲ್ಲಿ ಕನ್ನಡ ಕಾವ್ಯ ಹುಟ್ಟಿದ ಬಗ್ಗೆ ಮಾತ್ರ ನೇರ ಪುರಾವೆಯಿಲ್ಲ. ಇತರೆಲ್ಲ ಮನೆತನಗಳ ಆಶ್ರಯದಲ್ಲಿ ಒಂದಿಲ್ಲೊಂದು ಕೃತಿ ಅಥವಾ ಪದ್ಯ ಶಾಸನ ರಚನೆಗೊಂಡಿದೆ. ಒಂದೇ ಕೊರಗೆಂದರೆ ಈ ಅವಧಿಯ ಕವಿ ಕೃತಿಗಳು ನಮ್ಮವರೆಗೆ ಉಳಿದು ಬರಲಿಲ್ಲ.

❑

ಶ್ರವಣಬೆಳ್ಗೊಳ : ಒಂದು ಸಾಂಸ್ಕೃತಿಕ ಕೇಂದ್ರವಾಗಿ

■ ಡಾ. ಎಂ. ಚಿದಾನಂದಮೂರ್ತಿ

–೧–

ನನ್ನ ಸಂಪ್ರಬಂದದ ವಿಷಯಕ್ಕೆ ಪರೋಕ್ಷವಾಗಿ ಸಂಬಂಧಿಸಿರುವ ಒಂದು ಸಮಸ್ಯೆಯನ್ನು, ಅದೇ ಎಲ್ಲಿ ಚರ್ಚೆಯ ಮುಖ್ಯ ವಿಷಯವಾಗುವುದೋ ಎಂಬ ಭಯವಿದ್ದರೂ ಇಲ್ಲಿ ಪ್ರಸ್ತಾಪಿಸಬಯಸುತ್ತೇನೆ. ಶ್ರವಣಬೆಳ್ಗೊಳ ಈ ದಿನ ಚಿಕ್ಕ ಬೆಟ್ಟ ದೊಡ್ಡ ಬೆಟ್ಟಗಳ ಮಧ್ಯೆ ಇರುವ ದೊಡ್ಡ ಕೊಳಕ್ಕೆ ಹೊಂದಿಕೊಂಡಂತೆ, ಜೈನಮಠದ ಸುತ್ತ ಬೆಳೆದು ನಿಂತಿರುವ ಊರು. "ಬೆಳ್ಗೊಳ" ಎನ್ನುವ ಹೆಸರು ಬೆಳ್+ಕೊಳ ಎಂಬ ಎರಡು ಭಾಗಗಳನ್ನು ಹೊಂದಿದ್ದು ಶುಭ್ರಜಲದ ಕೊಳವೊಂದರಿಂದ ಬಂದಿರುವ ಹೆಸರೆಂದೂ, "ಶ್ರವಣ" ಎನ್ನುವ ಪೂರ್ವಭಾಗವು ಇತರ ಬೆಳ್ಗೊಳಗಳಿಂದ ಆ ಊರನ್ನು ಪ್ರತ್ಯೇಕಿಸಲು ಸೇರಿಸಿದ ಭಾಗವೆಂದೂ ಸ್ಪಷ್ಟವಾಗಿದೆ. ಆದರೆ, ಸಮಸ್ಯೆಯೆಂದರೆ ಆ ಬಿಳಿಯ ಕೊಳ ಯಾವುದು? ಶ್ರವಣಬೆಳ್ಗೊಳ ಹೆಸರಿಗೆ ಮೂಲವಾದ ಬೆಳ್ಗೊಳ ಎನ್ನುವ ಊರು ಈಗ ಶ್ರವಣಬೆಳ್ಗೊಳ ಊರು ಇರುವ ಕಡೆಯೇ ಇದ್ದಿತೇ? ಈ ಸಮಸ್ಯೆಗಳನ್ನು ಇದುವರೆಗೆ ಯಾರೂ ಎತ್ತಿದಂತಿಲ್ಲ. ಆರ್.ನರಸಿಂಹಾಚಾರ್ಯರೇನೋ ಎಪಿಗ್ರಾಫಿಯ ಕರ್ನಾಟಕದ ಎರಡನೆಯ ಸಂಪುಟದಲ್ಲಿ (೧೯೨೩) ಈಗ ದೊಡ್ಡ ಬೆಟ್ಟದ ಬುಡದಲ್ಲಿ ಎದ್ದು ಕಾಣುವ ದೊಡ್ಡ ಕಲ್ಯಾಣಿಯೇ ಬೆಳ್ಗೊಳ ಎಂಬ ಹೆಸರು ಬರಲು ಕಾರಣವೆಂಬ ಸಾಮಾನ್ಯ ನಂಬಿಕೆಯನ್ನು ಸ್ವಲ್ಪ ಸಂದೇಹದಿಂದಲೇ ನೋಡಿದ್ದಾರೆ. ಅವರ ಮಾತುಗಳು ಹೀಗಿವೆ–

"It was stated before that the name

Belgola was from this pond, but if the pond came into existence at the period noted above[1] it could not be the source of the name Belgola which occurs in inscriptions of the seventh century. We have therefore to conclude that either this pond which had been in existence in a dilapidated condition was renovated by order of Chikkadevaraya or that the pond which gave the name to the village was one Quite different from this."

ಕೊನೆಯ ವಾಕ್ಯ ಗಮನಾರ್ಹ. ಶ್ರವಣಬೆಳ್ಗೊಳದ ಈಗಿನ ಕೊಳ ಚಿಕ್ಕದೇವರಾಜ ಒಡೆಯರು ಕಟ್ಟಿಸಿದ್ದು. ಸು. ೧೭೦೦ರ ಶಾಸನದಲ್ಲಿ (ಸಂ. ೫೦೧)[೨] "ಶ್ರೀ ಚಿಕ್ಕದೇವರಾಜೇಂದ್ರ ಮಹಾಸ್ವಾಮಿಯವರ ಕಲ್ಯಾಣಿ" ಎಂದು ಸ್ಪಷ್ಟವಾಗಿದೆ. ಮತ್ತು ಅನಂತಕವಿಯ ಗೊಮ್ಮಟೇಶ್ವರ ಚರಿತೆಯೂ ಇದನ್ನೇ ಘೋಷಿಸುತ್ತದೆ. ಬೆಳ್ಗೊಳ ಅಥವಾ ವೆಳ್ಗೊಳ ಎಂಬ ಹೆಸರು ಏಳನೇ ಶತಮಾನದಷ್ಟು ಹಳೆಯದು, ಅಥವಾ ಇನ್ನೂ ಹಿಂದಿನದು. ಈಗಿನ ಕೊಳದಿಂದ ಆಗಿನ ಬೆಳ್ಗೊಳ ಹೆಸರು ಬಂದಿಲ್ಲವೆಂಬುದು ಸ್ಪಷ್ಟ. (ಚಿಕ್ಕದೇವರಾಯನ ಹಳೆಯ ಕೊಳವೊಂದನ್ನು ವಿಸ್ತರಿಸಿ ದೊಡ್ಡದಾಗಿ ಮಾಡಿಸಿದರು ಎಂಬ ವಾದಕ್ಕೆ ಅವಕಾಶವಿಲ್ಲ).

ಈಗಿನ ಶ್ರವಣಬೆಳ್ಗೊಳ ಊರೊಳಗಿನ ಯಾವುದೇ ಶಾಸನ ಕ್ರಿ.ಶ. ೧೧೧೯ಕ್ಕಿಂತ ಹಿಂದಿನದು ಅಲ್ಲ. ಜೈನಮಠದ ಉತ್ತರಕ್ಕೆ, ಶ್ರೀಮತಿಗಂತಿ ಎಂಬಾಕೆಯ ಸಮಾಧಿ ಮರಣವನ್ನು ಹೇಳುವ ಶಾಸನವೇ ತೀರ ಪ್ರಾಚೀನವಾದುದು. ಅಕ್ಕನ ಬಸದಿ, ನಗರ ಜಿನಾಲಯ, ಮಂಗಾಯಿ ಬಸದಿ, ಭಂಡಾರ ಬಸದಿ ಇವೆಲ್ಲವೂ ಹನ್ನೆರಡನೆಯ ಶತಮಾನದ ಮತ್ತು ಈಚಿನ ಕಟ್ಟಡಗಳು. ಅದಕ್ಕೆ ಮುಂಚೆ ಈಗಿನ ಶ್ರವಣಬೆಳ್ಗೊಳ ಜಾಗದಲ್ಲಿ ಊರು ಇದ್ದಿತೇ ಎಂಬ ಬಗ್ಗೆಯೇ ಅನುಮಾನಗಳಿವೆ. ಆದರೆ ಶ್ರವಣಬೆಳಗೊಳಕ್ಕೆ ಮೂರುಮೈಲಿ ದೂರದಲ್ಲಿರುವ, ಹಳೆಯ ಬೆಳ್ಗೊಳ ಎಂಬ ಹೆಸರಿನ ಊರಿನ ಕಡೆ ಯಾರೂ ಗಮನವನ್ನು ಹರಿಸಿದಂತೆ ತೋರುವುದಿಲ್ಲ. ಅಲ್ಲಿ ಕ್ರಿ.ಶ. ೧೦೯೪ರಲ್ಲಿ ಕಟ್ಟಿದ ಒಂದು ಬಸದಿ ಇದೆ. ಅಲ್ಲಿಯ ಶಾಸನದಲ್ಲಿ "ಬೆಳ್ಗೊಳದ ಕಬ್ಬಪ್ಪುತೀರ್ಥದ ಬಸದಿಗಳ ಜೀರ್ಣೋದ್ಧಾರಕ್ಕಂ ದೇವಪೂಜೆಗಮಾಹಾರದಾನಕ್ಕಂ ಪಾತ್ರ ಪಾವುಳ್ಳಕ್ಕಂ ರಾಚನ ಹಳ್ಳಿಯುಮಂ ಬೆಳ್ಗೊಳ ಪನ್ನೆರಡುಮಂ ಧಾರಾಪೂರ್ವಕಂ ಮಾಡಿ ಬಿಟ್ಟ ದತ್ತಿ" ಎಂದಿದೆ. ಇಲ್ಲಿಯ ಬೆಳ್ಗೊಳ ಈಗಿನ ಹಳೆಯ ಬೆಳ್ಗೊಳ ಎಂಬಲ್ಲಿ ಅನುಮಾನವಿಲ್ಲ. ಬೆಕ್ಕ ಊರಿನ ಕ್ರಿ.ಶ. ೧೧೭೩ರ ಶಾಸನದಲ್ಲಿ "ಬೆಕ್ಕ ಮೂಡಣ ಸೀಮೆ ಬೆಳ್ಗೊಳದಿಂ ಜಿನನಾಥಪುರಕ್ಕೆ ಬಂದ ಹೆಬ್ಬಟ್ಟೆ" ಎಂದಿದೆ. ಬೆಕ್ಕದ ಪಕ್ಕದ ಊರು ಹಳೆಯಬೆಳ್ಗೊಳ. ಹಳೆಯಬೆಳ್ಗೊಳದ ಊರು ಮಧ್ಯೆ ದೊಡ್ಡ ಕೊಳ ಇದೆ, ಮತ್ತು ಅದರ ಸಮೀಪ ಹಲವಾರು ಜೈನ ವಿಗ್ರಹಗಳಿವೆ. ಇಂತಹ ಇನ್ನೂ ಹಲವಾರು ಸಾಕ್ಷ್ಯಾಧಾರಗಳಿಂದ ಊಹಿಸುವುದಾದರೆ

---

೧. ಎಂದರೆ, ಚಿಕ್ಕದೇವರಾಜ ಒಡೆಯರ ಕಾಲದಲ್ಲಿ.

೨. ಶಾಸನ ಸಂಖ್ಯೆಗಳು ಎಪಿಗ್ರಾಫಿಯ ಕರ್ನಾಟಕದ ಸಂಪುಟ II (1973 ಮೈಸೂರು ಆವೃತ್ತಿ) ಈ ಗ್ರಂಥದಿಂದ

ಈ ಹಳೆಯ ಬೆಳ್ಗೊಳವೇ ಮೂಲ ಬೆಳ್ಗೊಳವಾಗಿದ್ದು, ಮುಂದೆ ಹತ್ತನೇ ಶತಮಾನದ ಅಂತ್ಯದಲ್ಲಿ ದೊಡ್ಡ ಬೆಟ್ಟದ ಮೇಲೆ ಗೊಮ್ಮಟನ ವಿಗ್ರಹ ನಿರ್ಮಾಣವಾಗಿ, ಆ ಬಳಿಕ ಆ ಬೆಟ್ಟದ ಬುಡದಲ್ಲಿ ಈಗಿನ ಶ್ರವಣಬೆಳ್ಗೊಳ ಆಯಿತು. ಗೊಮ್ಮಟ ವಿಗ್ರಹ ನಿರ್ಮಾಣವಾದಾಗ ಈಗಿನ ಶ್ರವಣಬೆಳ್ಗೊಳ ಇರಲಿಲ್ಲ. ಹಳೆಯ ಬೆಳ್ಗೊಳ ಖಂಡಿತ ಇತ್ತು. ಶ್ರವಣಬೆಳ್ಗೊಳವನ್ನು ಸಾಂಸ್ಕೃತಿಕ ಕೇಂದ್ರವೆಂದು ಭಾವಿಸುವಾಗ ಈಗಿನ ಶ್ರವಣಬೆಳ್ಗೊಳ ಊರು, ದೊಡ್ಡ ಬೆಟ್ಟ, ಚಿಕ್ಕ ಬೆಟ್ಟಗಳ ಜೊತೆ ಕೊನೆಯ ಪಕ್ಷ ಹನ್ನೆರಡನೆಯ ಶತಮಾನದವರೆಗೆ ಹಳೆಯ ಬೆಳ್ಗೊಳವನ್ನೂ ಸೇರಿಸಿಕೊಳ್ಳಬೇಕಾಗುತ್ತದೆ.

-೨-

ಸಾಂಸ್ಕೃತಿಕ ಕೇಂದ್ರವೆಂದು ಒಂದು ಊರನ್ನು ಕರೆದಾಗ ನಮ್ಮ ಮನಸ್ಸಿನಲ್ಲಿ ಒಂದು ನಿರ್ದಿಷ್ಟ ಭಾವನೆಯಿರುತ್ತದೆಯೆಂದು ನಾನು ಭಾವಿಸಿಲ್ಲ. (ಈ ಅನಿರ್ದಿಷ್ಟತೆ ಸಂಸ್ಕೃತಿ ಎಂಬ ಮಾತಿನಲ್ಲೇ ಇದೆ.) ಬನವಾಸಿ, ಬಾದಾಮಿ, ಲಕ್ಕುಂಡಿ, ಬಸವ ಕಲ್ಯಾಣ, ಬಳ್ಳಿಗಾವೆ, ಹಂಪೆ, ಕುಪ್ಪಟೂರು, ಲಕ್ಕುಂಡಿ, ಲಕ್ಷ್ಮೇಶ್ವರ, ಹರಿಹರ, ನಾಗಾವಿ, ಬಿಜಾಪುರ, ಕೆಳದಿ, ಬೀದರ್, ಬೇಲೂರು, ಮೇಲ್ಕೋಟೆ, ಉಡುಪಿ ಇವನ್ನು, ಹಾಗೆಯೇ ಇನ್ನೆಷ್ಟೋ ಊರುಗಳನ್ನು ಸಾಂಸ್ಕೃತಿಕ ಕೇಂದ್ರಗಳೆಂದು ಕರೆಯುತ್ತೇವೆ. ಇಲ್ಲಿ ಉಳಿದ ಕಡೆಗಿಂತ ಹೆಚ್ಚಿನ ಶಾಸನಗಳು ಸಿಕ್ಕಿರುವುದು, ಗಮನಾರ್ಹ ಶಿಲ್ಪ ವಾಸ್ತುಗಳಿರುವುದು, ವಿದ್ಯಾಕೇಂದ್ರಗಳಾಗಿದ್ದುದು ಹಾಗೆ ಕರೆಯಲು ಕಾರಣಗಳಲ್ಲಿ ಕೆಲವು. ಇವುಗಳಲ್ಲಿ ರಾಜಧಾನಿಗಳು ಹಲವು, ವ್ಯಾಪಾರ ಕೇಂದ್ರಗಳು ಕೆಲವು. ಈ ಎಲ್ಲ ಊರು ಅಥವಾ ನಗರಗಳು ಒಂದಕ್ಕಿಂತ ಹೆಚ್ಚಿನ ಕಾರಣಗಳಿಂದಾಗಿ ಪ್ರಸಿದ್ಧಿಯನ್ನು ಹೊಂದಿ ಹತ್ತಿರದ ಮತ್ತು ದೂರದ ಊರುಗಳಿಂದ ಜನರನ್ನು ತಮ್ಮತ್ತ ಸೆಳೆಯುತ್ತಿದ್ದುವು. ಅವು ಆಯಾ ಪ್ರದೇಶದ ಜೀವನ ವಿಧಾನದ ಅತ್ಯುತ್ತಮ ಪ್ರತಿನಿಧಿಗಳಾಗಿ ನಿಂತು ಎಲ್ಲ ಜನರಿಗೆ ಮಾದರಿಯಾಗುತ್ತಿದ್ದುವು. ಮತ್ತು ಆ ಜೀವನವಿಧಾನ ಆ ಸುತ್ತಮುತ್ತಣ ಪ್ರದೇಶದ ಜನರ ಜೀವನವಿಧಾನಕ್ಕೆ ಮಾದರಿಯಾಗಿ ನಿಂತು ಅದನ್ನು ರೂಪಿಸುತ್ತಿದ್ದಿತು. ಅವು ಮತದ ಪ್ರಬಲ ಕೇಂದ್ರಗಳಾಗಿದ್ದುದರಿಂದ ಮತೀಯ ಕಾರಣದಿಂದಲೋ ಪ್ರವಾಸಾಕರ್ಷಣೆಯಿಂದಲೋ ಅಲ್ಲಿಗೆ ಬಹುಸಂಖ್ಯೆಯ ಜನರು ಬಂದುಹೋಗುತ್ತಿದ್ದರು. ರಾಜರು ಆ ಊರುಗಳನ್ನು ಪ್ರಯತ್ನಪೂರ್ವಕವಾಗಿ ಬೆಳೆಸುತ್ತಿದ್ದರು. ವ್ಯಾಪಾರ ವೃದ್ಧಿಯಾಗುತ್ತಿತ್ತು. ಉಳಿದ ಕಡೆಗಿಂತ ಅಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳು, ಜ್ಞಾನಕ್ಕೆ ಕಲೆಗೆ ಪ್ರೋತ್ಸಾಹ, ದೈಹಿಕ ಶಕ್ತಿ ಉತ್ಸಾಹಗಳಿಗೆ ಮಾನ್ಯತೆ ದೊರೆಯುತ್ತವೆಯೆಂಬ ಕಾರಣಗಳಿಂದಾಗಿ ಶ್ರೇಷ್ಠವಿದ್ವಾಂಸರು, ಕವಿಗಳು, ಶಿಲ್ಪಿಗಳು, ವಿದ್ಯಾರ್ಥಿಗಳು, ಧಾರ್ಮಿಕ ಜಿಜ್ಞಾಸುಗಳು, ವರ್ತಕರು, ಸೈನಿಕರು ಹೀಗೆ ಬಗೆ ಬಗೆಯ ಜನ ಬಂದು ಹೋಗುತ್ತಿದ್ದರು; ಅನುಕೂಲವಾದರೆ ನೆಲೆಸುತ್ತಿದ್ದರು. ಆ ಊರುಗಳಿಗೆ ದೇಶದ ಬೌದ್ಧಿಕ, ಆಧ್ಯಾತ್ಮಿಕ, ಕಲಾತ್ಮಕ, ಲೌಕಿಕಸಂಪತ್ತನ್ನು ಬೆಳೆಸುವಲ್ಲಿ ತಮ್ಮದೇ ಪಾತ್ರವಿದ್ದಿತು. ಆಧುನಿಕ ಕಾಲದಲ್ಲಿ ನಿಂತು ನಾವು ಹಿಂದಕ್ಕೆ ಕಣ್ಣು ಹಾಯಿಸಿದಾಗ ಆ ಪ್ರದೇಶದ ಉಳಿದೆಲ್ಲ ಭಾಗ ಕತ್ತಲಲ್ಲಿ ಮುಳುಗಿದ್ದು ಆ ಊರು ಇರುವ ಜಾಗ ಮಾತ್ರ ಅಲ್ಲಿದ್ದ ಶಾಸನಗಳೋ ಮಂದಿರಗಳೋ ಬೀರಿದ ಬಿಡುದೀಪದ ಬೆಳಕಿನಿಂದ ಉಜ್ವಲಿತವಾಗಿರುತ್ತದೆ. ದೇಶದ

ಉಳಿದೆಲ್ಲ ಭಾಗಕ್ಕಿಂತ ಆ ಭಾಗ ಹೆಚ್ಚು ಜಾಗೃತವಾಗಿರುವಂತೆ, ಚಟುವಟಿಕೆಯಿಂದ ಕೂಡಿರುವಂತೆ ಕಾಣಿಸುತ್ತದೆ. ದೂರದ ಬೇರೆ ಬೇರೆ ಸಂಸ್ಕೃತಿಗಳ, ವಿದ್ಯೆಗಳ ಸಂಗಮ ಸ್ಥಾನವಾಗಿ ಅವೆಲ್ಲವನ್ನೂ ತನ್ನ ಮೂಲ ದ್ರವ್ಯದೊಡನೆ ಅರಗಿಸಿಕೊಂಡು ತನ್ನದೇ ಸಂಸ್ಕೃತಿಯನ್ನು ತನ್ನ ಸುತ್ತ ಮುತ್ತಣ ಪ್ರದೇಶಗಳಿಗೆ ಪ್ರಸರಿಸುವ ಕಾರ್ಯವನ್ನು ಒಂದು ಸಂಸ್ಕೃತಿ ಕೇಂದ್ರ ಮಾಡುತ್ತದೆ.

–೩–

ಈ ಹಿನ್ನೆಲೆಯಲ್ಲಿ ನೋಡಿದಾಗ ಶ್ರವಣಬೆಳಗೊಳವು ಪ್ರಾಚೀನ ಕರ್ನಾಟಕದ ಒಂದು ಸಂಸ್ಕೃತಿ ಕೇಂದ್ರವಾಗಿ ಕಾಣಿಸುವುದು ಮಾತ್ರವಲ್ಲದೆ ಕರ್ನಾಟಕದ ನಿರಂತರ ಇತಿಹಾಸವಿರುವ ಏಕೈಕ ಸಾಂಸ್ಕೃತಿಕ ಕೇಂದ್ರವಾಗಿಯೂ ನಮ್ಮ ಮುಂದೆ ನಿಲ್ಲುತ್ತದೆ. ಕರ್ನಾಟಕದ ಅತ್ಯಂತ ಪ್ರಾಚೀನ ಸಾಂಸ್ಕೃತಿಕ ಕೇಂದ್ರಗಳಲ್ಲಿ ಎರಡೇ ಗಮನಾರ್ಹವಾದುವು–ಕ್ರಿಸ್ತ ಪೂರ್ವ ಮೂರನೆ ಶತಮಾನದಿಂದಲೂ ಬೌದ್ಧ ಕೇಂದ್ರವಾಗಿದ್ದ ಬನವಾಸಿ, ಆ ಕಾಲಕ್ಕೋ ಅಥವಾ ಒಂದು ಶತಮಾನದ ಈಚೆಗೋ ಜೈನಕೇಂದ್ರವಾದ ಶ್ರವಣಬೆಳ್ಗೊಳ. ಉಳಿದುವೆಲ್ಲ ಕಾಲದ ದೃಷ್ಟಿಯಿಂದ ಈಚಿನವು. ಅವುಗಳಲ್ಲಿ ಎಷ್ಟೋ ಬಹು ಹಿಂದೆಯೇ ತಮ್ಮ ಮಹತ್ವವನ್ನು ಕಳೆದುಕೊಂಡುವು. ಬನವಾಸಿಯೂ ಕೂಡ ಅಷ್ಟೇ. ಆದರೆ ಕಳೆದ ಎರಡು ಸಾವಿರದ ಇನ್ನೂರು ವರ್ಷಗಳಿಂದ ನಿರಂತರವಾಗಿ ಚೈತನ್ಯಪೂರ್ಣ ಕ್ರಿಯಾತ್ಮಕತೆಯನ್ನು ಉಳಿಸಿಕೊಂಡು ಬಂದಿರುವುದು ಶ್ರವಣಬೆಳಗೊಳದ ವೈಶಿಷ್ಟ್ಯವಾಗಿದೆ. ಈ ಪ್ರಶಸ್ತಿ ಕರ್ನಾಟಕದ ಇನ್ನು ಯಾವುದೇ ಸಾಂಸ್ಕೃತಿಕ ಕೇಂದ್ರಕ್ಕೂ ಇರುವಂತೆ ಕಾಣುವುದಿಲ್ಲ. ರಾಜಧಾನಿಗಳೆಂದು ಪ್ರಖ್ಯಾತವಾಗಿದ್ದ ವಿಜಯನಗರ, ಬಾದಾಮಿ, ಕಲ್ಯಾಣ, ಬೇಲೂರು, ಬನವಾಸಿಗಳು ಆಯಾ ಮನೆತನದ ಅಸ್ತಮದೊಂದಿಗೆ ನಿಸ್ತೇಜವಾದುವು; ಕೇವಲ ಪ್ರೇಕ್ಷಣೀಯ ಸ್ಥಳಗಳಾದವು. ಉತ್ತಮ ಕಲೆಯ ಜೊತೆ ಪ್ರಬಲ ಧರ್ಮವೊಂದರ ಸಂಗಮವಾದಾಗ ಒಂದು ಸಾಂಸ್ಕೃತಿಕ ಕೇಂದ್ರ ತನ್ನ ಪರಂಪರೆಯನ್ನು ಜೀವಂತವಾಗಿ ಉಳಿಸಿಕೊಂಡು ಬರಲು ಸಾಧ್ಯ, ಭಾರತೀಯ ಪರಿಸರದಲ್ಲಿ. ಕೊಪ್ಪಣ ಒಂದು ದೊಡ್ಡ ಜೈನ ಕೇಂದ್ರವಾದರೂ ಅದಕ್ಕೆ ಕಲೆಯ ಬೆಂಬಲ ದೊರಕಲಿಲ್ಲ. ಹರಿಹರ, ಬಳ್ಳಿಗಾವೆಗಳಿಗೆ ಕಲೆಯ ಬೆಂಬಲವಿದ್ದರೂ ಧರ್ಮದ ಬೆಂಬಲ ಇಲ್ಲ. ಹೀಗಾಗಿ ಅವೆರಡೂ ತೇಜೋಹೀನವಾದುವು. ಅಲ್ಲಿ ಪ್ರಬಲವಾಗಿದ್ದ ಕಾಳಾಮುಖ ಸಂಪ್ರದಾಯ ಹದಿಮೂರನೇ ಶತಮಾನದಿಂದ ಈಚೆಗೆ ಕಳೆಗುಂದಿತು. ಉಡುಪಿ, ಮೇಲ್ಕೋಟೆಗಳಿಗೆ ಕಲೆಯ ಬೆಂಬಲ ಅಷ್ಟಾಗಿ ಇಲ್ಲವಾದ್ದರಿಂದ ಅವು ಉದ್ದಕ್ಕೂ ಮುಖ್ಯವಾಗಿ ಆಯಾ ಮತದ, ಆನುಷಂಗಿಕವಾಗಿ ಸಂಸ್ಕೃತಿಯ ದೊಡ್ಡ ಕೇಂದ್ರವಾಗಿ ಉಳಿದುವು. ರಾಜಕೀಯ ಬೆಂಬಲ ಪ್ರಾಚೀನ ಭಾರತದಲ್ಲಂತೂ ಧರ್ಮ ಸಂವರ್ಧನೆಗೆ ಅಗತ್ಯವಾದರೂ ಅದು ನಿರಂತರವಾಗಿ ಒಂದು ಕೇಂದ್ರವನ್ನು ಜೀವಂತವಾಗಿಡುವುದರಲ್ಲಿ ಅಸಮರ್ಥವಾಗುತ್ತದೆ. ಶ್ರವಣಬೆಳಗೊಳ ಏಕೆ ಎರಡು ಸಾವಿರ ವರ್ಷಕ್ಕೂ ಮೀರಿದ ದೀರ್ಘಾವಧಿಯಲ್ಲಿ ಚೈತನ್ಯಪೂರ್ಣವಾಗಿ ಉಳಿದಿದೆ ಯೆಂಬುದಕ್ಕೆ ಉತ್ತರ ಇಲ್ಲಿದೆ. ಶ್ರೇಷ್ಠ ಕಲೆ, ಧರ್ಮಗಳೆರಡೂ ಎಲ್ಲ ಬಗೆಯ ಜನರನ್ನು ತಮ್ಮತ್ತ ಸೆಳೆಯುವುದರಿಂದ ಅಲ್ಲಿ ಒಂದು ಸಮೃದ್ಧ ಸಂಸ್ಕೃತಿ ರೂಪುಗೊಳ್ಳಲು ಕಾರಣವಾಗುತ್ತದೆ.

ಶ್ರವಣಬೆಳಗೊಳದ ಇತಿಹಾಸವೇ ಇದಕ್ಕೆ ಪೋಷಕ ಸಾಮಗ್ರಿಯನ್ನು ಒದಗಿಸುತ್ತದೆ. ಭದ್ರಬಾಹುವಿನ ಕಾಲದಲ್ಲಿ ಜೈನಧರ್ಮ ಬಂದು ಕಳ್ವಪ್ಪುವನ್ನು ಆಶ್ರಯಿಸಿತು. ಆ ಚಿಕ್ಕ ಬೆಟ್ಟ ಜೈನಧರ್ಮಕ್ಕೆ ದೊಡ್ಡ ಕೇಂದ್ರವಾಯಿತು. ಅಂದರೆ ಮೊದಲ ಸಾವಿರ ವರ್ಷ ಅದರ ಮೇಲೆ ಅನೇಕ ಮುನಿಗಳು ವಾಸವಾಗಿದ್ದು ತಪಸ್ಸನ್ನು ಮಾಡಿದರು ; ಅನೇಕರು ಪಾಂಡಿತ್ಯವನ್ನು ಗಳಿಸಿದರು ; ಸಲ್ಲೇಖನ ವ್ರತದಿಂದ ಹಲವರು ಮಡಿದರು. ಆದರೆ, ದೊಡ್ಡ ಬೆಟ್ಟ ಆಗ ಸಾಂಸ್ಕೃತಿಕವಾಗಿ ಇರಲಿಲ್ಲ, ಈಗಿನ ಶ್ರವಣಬೆಳಗೊಳ ಊರು ಭೌತಿಕವಾಗಿಯೂ ಇರಲಿಲ್ಲ. ಚಿಕ್ಕಬೆಟ್ಟದ ಮೇಲಿನ ಬಸದಿಗಳಲ್ಲಿ ಕಲೆಯ ದೃಷ್ಟಿಯಿಂದ ಗಮನಾರ್ಹವಾದವೂ ಆ ಕಾಲಕ್ಕೆ ಬಹಳ ಇರಲಿಲ್ಲ. ದೊಡ್ಡ ಬೆಟ್ಟದ ಮೇಲಕ್ಕೆ ಹೋದ ಕೆಲವರು ತಮ್ಮ ಹೆಸರುಗಳನ್ನು ಕೆತ್ತಿರುವುದನ್ನು ಬಿಟ್ಟರೆ (ಉದಾ : ರೂವಾರಿ ಬಿದಿಗ, ಜೆಡ್ಡುಗ) ಅಲ್ಲಿ ಏನೂ ಸ್ಮಾರಕವೇ ಕಾಣಿಸದು. ೯೮೦ರವರೆಗೆ ಶ್ರವಣಬೆಳಗೊಳ ಮುಖ್ಯವಾಗಿ ಧಾರ್ಮಿಕ ಕೇಂದ್ರ. ಆದರೆ ೯೮೧ರ ಸುಮಾರಿನಲ್ಲಿ, ಗೊಮ್ಮಟವಿಗ್ರಹ ನಿರ್ಮಾಣವಾದುದು ಇಡೀ ಪ್ರದೇಶಕ್ಕೆ ವಿದ್ಯುತ್ ಪ್ರವಾಹವನ್ನೇ ಹರಿಸಿತು. ಗೊಮ್ಮಟವಿಗ್ರಹಕ್ಕೆ ಅದ್ಭುತ ಸುತ್ತಾಲಯ ಬಂದಿತು; ಬೇರೆ ಬೇರೆ ಬಸದಿಗಳು ನಿರ್ಮಾಣವಾದುವು. ಬುಡದಲ್ಲಿ 'ಗೊಮ್ಮಟಪುರ' ಎಂಬ ಪರ್ಯಾಯ ಹೆಸರಿನ ಊರು–ಈಗಿನ ಶ್ರವಣಬೆಳಗೊಳ–ಬೆಳೆಯಿತು; ಚಿಕ್ಕ ಬೆಟ್ಟದ ಮೇಲೆ ಪಾರ್ಶ್ವನಾಥ ಬಸ್ತಿ, ಕತ್ತಲೆ ಬಸ್ತಿ, ಸವತಿಗಂಧವಾರಣ ಬಸ್ತಿ ಇತ್ಯಾದಿ ವಾಸ್ತುಶಿಲ್ಪದ ದೃಷ್ಟಿಯಿಂದ ಗಮನಾರ್ಹವಾದುವು ನಿರ್ಮಾಣವಾದುವು. ಚಂದ್ರಗುಪ್ತ ಬಸದಿಯ ಚಿತ್ರಪಟ್ಟಿಕೆಗಳೂ ಹನ್ನೆರಡನೆಯ ಶತಮಾನದಲ್ಲಿ ನಿರ್ಮಾಣವಾದಾಗ, ಚಿಕ್ಕ ಬೆಟ್ಟ ಮುಖ್ಯವಾಗಿ ಧರ್ಮಕ್ಕೆ, ದೊಡ್ಡ ಬೆಟ್ಟ ಮುಖ್ಯವಾಗಿ ಕಲೆಗೆ ಆಕರಗಳಾಗಿ, ಅವೆರಡೂ ಸೇರಿ ಶ್ರವಣಬೆಳ್ಗೊಳ ಸಾಂಸ್ಕೃತಿಕ ಕೇಂದ್ರವಾಗಿ ಬೆಳೆದುದರ ಒಂದು ರೋಮಾಂಚಕ ಕಥೆ ನಮ್ಮ ಮುಂದೆ ಸುರುಳಿ ಬಿಚ್ಚಿಕೊಳ್ಳುತ್ತದೆ.

ಶ್ರವಣಬೆಳಗೊಳ ಕರ್ನಾಟಕ ಸಂಸ್ಕೃತಿಯ ಸಂಕ್ಷಿಪ್ತಾಕೃತಿ. ಕರ್ನಾಟಕ ಸಂಸ್ಕೃತಿಯ ಉತ್ತಮಾಂಶಗಳನ್ನು ಒಂದೆಡೆ ಕಾಣಬೇಕೆಂದು ಬಯಸುವವರಿಗೆ ಶ್ರವಣಬೆಳಗೊಳದಂತಹ ಮತ್ತೊಂದು ಸ್ಥಳ ದೊರಕಲಾರದು. ಕ್ರಿ.ಶ. ೬ನೇ ಶತಮಾನದಿಂದ ಇಲ್ಲಿಯವರೆಗೆ ಕನ್ನಡ ಲಿಪಿ, ಭಾಷೆಗಳ ನಿರಂತರ ಬೆಳವಣಿಗೆ ನೋಡದೊರಕುವ ಏಕೈಕ ಪ್ರದೇಶ ಇದು. ಕ್ರಿ.ಶ. ಸುಮಾರು ೫೫೦ರ ತಮಟುಕಲ್ಲು ಶಾಸನ ಬಿಟ್ಟರೆ, ಮೊತ್ತಮೊದಲ ಉತ್ಕೃಷ್ಟ ಕಾವ್ಯವಾಗಲಿ ಪದ್ಯಗಳಾಗಲಿ ದೊರಕುವುದು ಇಲ್ಲಿ. ಉದ್ದಕ್ಕೂ ಶ್ರವಣಬೆಳಗೊಳ ಶಿವಕೋಟ್ಯಾಚಾರ್ಯ (?), ಪಂಪ, ರನ್ನ, ಚಾವುಂಡರಾಯ, ಬೊಪ್ಪಣರಂತಹ ಶ್ರೇಷ್ಠ ಕವಿಗಳ ಜೊತೆ ನೇರ ಸಂಪರ್ಕವನ್ನು ಪಡೆದಿದ್ದಿತು. ಮತ್ತು ನೂರಾರು ಕನ್ನಡ ಕವಿಗಳಿಗೆ ಅದು ಸ್ಫೂರ್ತಿ ಸ್ಥಾನವೂ ಆಗಿತ್ತು. ಕನ್ನಡ ಭಾಷೆ ಮತ್ತು ಸಾಹಿತ್ಯಕ ಪರಂಪರೆಗಳ ಜೊತೆ ಅದಕ್ಕಿದ್ದ ಸಂಬಂಧ ಗಮನಾರ್ಹ. ರಾಷ್ಟ್ರಕೂಟ, ಗಂಗ, ಹೊಯ್ಸಳ, ವಿಜಯನಗರ, ಮೈಸೂರುಗಳಂತಹ ಕರ್ನಾಟಕದ ಬಹುತೇಕ ಎಲ್ಲ ರಾಜವಂಶಗಳವರು ಶ್ರವಣಬೆಳಗೊಳವನ್ನು ಬೆಳೆಸಲು ಯತ್ನಿಸಿದ್ದಾರೆ. ಎಂದರೆ ಕರ್ನಾಟಕದ ರಾಜಕೀಯ ಆಗುಹೋಗುಗಳ ಜೊತೆ ಅದು ಸಂಬಂಧಿಸಿದ್ದಿತು. ಅದು ದೊಡ್ಡ ವಿದ್ಯಾಕೇಂದ್ರ; ಶಿಲ್ಪ, ವಾಸ್ತುಶಿಲ್ಪ, ಚಿತ್ರಕಲೆಗಳ ಬೀಡು. ಇಂದ್ರರಾಜ, ಚಾವುಂಡರಾಯ,

ಅತ್ತಿಮಬ್ಬೆ, ಗಂಗರಾಜ, ಹುಳ್ಳ, ವಿಷ್ಣುವರ್ಧನ, ಶಾಂತಲೆಯರಂತಹ ವ್ಯಕ್ತಿಗಳು ಅದರ ಆಶ್ರಯದಲ್ಲಿ ತಮ್ಮ ಜೀವನದ ಸಾಫಲ್ಯವನ್ನು ಕಂಡರು. ತೀರ್ಥಂಕರನಲ್ಲದಿದ್ದರೂ, ಮನುಷ್ಯನ ಅಸೀಮವಾದ ತ್ಯಾಗಕ್ಕೆ ಸಂಕೇತವಾಗಿರುವ ಗೊಮ್ಮಟನನ್ನು ತನ್ನ ತಲೆಯಲ್ಲಿ ಮುಡಿಯಿತು. ಪ್ರಮುಖವಾಗಿ ಜೈನಕೇಂದ್ರವಾದರೂ, ಬೇರೆ ಬೇರೆ ಧರ್ಮಗಳಿಗೆ ಭೇದವಿಲ್ಲ ಎಂದು ಘೋಷಿಸಿದ ಬುಕ್ಕ ಚಕ್ರವರ್ತಿಯ ಶಾಸನ ಇರುವುದೂ ಅಲ್ಲಿಯೇ. ಇದೆಲ್ಲದರ ಜೊತೆಗೆ ಅಲ್ಲಿಯ ಪ್ರಕೃತಿ ಸೌಂದರ್ಯ ಅನುಪಮ. ಸುತ್ತಮುತ್ತಣ ನೂರಾರು ಕೆರೆಗಳು, ಒಳ್ಳೆಯ ಮಳೆಯಿಂದಾಗಿ ಜನರ ಆರ್ಥಿಕ ಪರಿಸ್ಥಿತಿ ಉತ್ತಮ. ಈ ಎಲ್ಲ ಅನುಕೂಲಗಳು ಕರ್ನಾಟಕದ ಇನ್ನಾವುದೇ ಸಾಂಸ್ಕೃತಿಕ ಕೇಂದ್ರಕ್ಕೂ ಒದಗಿಲ್ಲವೆಂಬುದನ್ನು ನೆನೆದರೆ, ಕರ್ನಾಟಕ ಯಾವ ಮೌಲ್ಯಾದರ್ಶಗಳಿಗೆ ಮೊದಲಿನಿಂದ ತುಡಿದಿದೆಯೋ ಅವೆಲ್ಲವುಗಳ ಐಕ್ಯಕ ಸಾಕಾರ ರೂಪ ಶ್ರವಣಬೆಳಗೊಳವೆಂದು ಹೇಳುವ ಮನಸ್ಸಾಗುತ್ತದೆ. ಅದು ಕರ್ನಾಟಕದ ಅತ್ಯಂತ ಹೆಮ್ಮೆಯ ಸಾಂಸ್ಕೃತಿಕ ಕೇಂದ್ರ.

-೨-

ಈ ಹಿಂದಿನ ಮಾತುಗಳಿಗೆ ಪೋಷಕವಾಗಿ ಸಾಕ್ಷ್ಯಾಧಾರಗಳನ್ನು ಈ ಭಾಗದಲ್ಲಿ ಕೊಡಲಾಗುತ್ತದೆ. ಇಲ್ಲಿಯ ಸಾಮಗ್ರಿಗೆ ಶ್ರವಣಬೆಳ್ಗೊಳದ ಶಾಸನ ಸಂಪುಟದಿಂದ ಹೆಕ್ಕಿ ತೆಗೆದು ಕ್ರಮಬದ್ಧವಾಗಿ ಜೋಡಿಸಿ ಕೊಟ್ಟಿರುವ ಡಾ. ಬಿ.ವಿ. ಶಿರೂರ್ ಅವರ "ಶ್ರವಣಬೆಳ್ಗೊಳ-ರಾಜಕೀಯ, ಸಾಹಿತ್ಯಕ, ಸಾಂಸ್ಕೃತಿಕ ಮಹತ್ವ" ಎಂಬ ಉತ್ತಮ ಕೃತಿಗೆ (ಧಾರವಾಡ. ೧೯೭೬) ಬಹುಮಟ್ಟಿಗೆ ನಾನು ಋಣಿಯಾಗಿದ್ದೇನೆ.

೧. ಹಿಂದಿನ ಜನರ ಕಣ್ಣಲ್ಲಿ ಶ್ರವಣಬೆಳ್ಗೊಳ

ಅಲ್ಲಿಯ ಶಾಸನಗಳು ಅದು "ತೀರ್ಥಗಿರಿ", "ಋಷಿಗಿರಿ ಶಿಲೆ"ಯನ್ನು ಪಡೆದ ಜಾಗವೆಂದು ಬಣ್ಣಿಸಿವೆ. ಅದೊಂದು "ಉಪಮಾತೀತ ಪವಿತ್ರ ಕ್ಷೇತ್ರ", "ಧರೆಗತಿಶಯ"; ಅದು "ಪಟ್ಟಣ ಶ್ರೇಷ್ಠವಾದ ದಕ್ಷಿಣ ಕಾಶಿ". ದೇವತೆಗಳು, ಮುನಿವರರು ಅದನ್ನು ಬಾಯಿತುಂಬ ಹೊಗಳಿದ್ದಾರೆ. ("ಸುರವಿದ್ಯಾವಲ್ಲಭೇಂದ್ರೈಸ್ಸುರ ವರಮುನಿಭಿಸ್ಸ್ತೂತ್ಯ ಕಟ್ವಪ್ರ") ಕ್ರಿ.ಶ. ೯೭೨ರ ಕೋಗಳಿ ಶಾಸನವು ಕಟ್ವಪ್ರ ಬೆಟ್ಟವನ್ನು ಪಾವಿತ್ರ್ಯದಲ್ಲಿ ಪ್ರಯಾಗ, ಕುರುಕ್ಷೇತ್ರ, ವಾರಣಾಸಿಗಳಿಗೆ ಸಮಾನವೆಂದು ಭಾವಿಸಿದೆ. "ಇದನಟೆದೋಂ ಪ್ರಯಾಗೆಯುಂ ಕುರುಕ್ಷೇತ್ರವುಂ ಬಾಣಾರಸಿಯುಂ ಕಟ್ವಪ್ರವಂ ಸಾಸಿರ ಕಪಿಲೆಯುಮಂ......". ಇದನ್ನು "ಅಭಿನವ ಪೌದನಪುರ"ವೆಂದು ಭುಜಬಲಿ ಚರಿತೆ ಕರೆದಿದೆ. (ಪೌದನಪುರವು ಪುರಾಣಗಳ ಬಾಹುಬಲಿಯ ರಾಜಧಾನಿ)

೨. ರಾಜಕೀಯ ಸಂಪರ್ಕಗಳು

ಕ್ರಿಸ್ತಪೂರ್ವ ಮೂರು ಅಥವಾ ಎರಡನೇ ಶತಮಾನದಲ್ಲಿ ಉತ್ತರದ ಚಂದ್ರಗುಪ್ತ ಚಕ್ರವರ್ತಿ ತನ್ನ ಗುರು ಭದ್ರಬಾಹುವಿನೊಡನೆ ಚಿಕ್ಕ ಬೆಟ್ಟದಲ್ಲಿ ನೆಲೆಸಿದ್ದು ಅದು ಜೈನಧರ್ಮದ ಪ್ರಬಲ ಕೇಂದ್ರವಾಗಿ ಬೆಳೆಯಲು ಅಂಕುರಾರ್ಪಣವಾಯಿತು. ಚಕ್ರವರ್ತಿಯು ಮುನಿಗಳೊಡನೆ ಏಕಾಂಗಿಯಾಗಿ ಬಂದಿರಲಾರ, ಅವನ ಜೊತೆ ಅವನ ಪರಿವಾರದವರೂ ಬಂದಿರಬಹುದು.

ಅವರ ಮುನಿಗಳಂತೂ ತಮ್ಮ ಜೊತೆ ಗ್ರಂಥಗಳನ್ನೂ ತಂದು ಅದೊಂದು ತಪಸ್ವಿನ, ಅಧ್ಯಯನದ ಜಾಗವಾಗಲು ಕಾರಣರಾದರು. ಉತ್ತರದ ಸಂಸ್ಕೃತಿ, ಪ್ರಾಕೃತ ಭಾಷೆ ಇಲ್ಲಿನ ದೇಶೀಯ ಸಂಸ್ಕೃತಿ, ಕನ್ನಡ ಭಾಷೆಗಳ ಮೇಲೆ ಅಂದು ಬೀರಿದ ಪ್ರಭಾವವೇನು ಎಂಬುದನ್ನು ನಾವು ಗುರುತಿಸಲು ಸಾಧ್ಯವಿಲ್ಲದಿದ್ದರೂ ಆ ಪ್ರಭಾವವನ್ನು ಮಾತ್ರ ಅಲ್ಲಗಳೆಯಲಾಗುವುದಿಲ್ಲ. ಗಂಗ ದೊರೆಗಳಲ್ಲಿ ಶಿವಮಾರ, ಇಮ್ಮಡಿ ಮಾರಸಿಂಹ, ನಾಲ್ಕನೆಯ ರಾಚಮಲ್ಲರಲ್ಲದೆ, ಗಂಗರ ಮಂತ್ರಿ ಚಾವುಂಡರಾಯ ಶ್ರವಣಬೆಳಗೊಳದ ಜೊತೆ ನಿಕಟ ಅಥವಾ ತೀರ ನಿಕಟಸಂಪರ್ಕವನ್ನು ಪಡೆದವರು. ಗೊಮ್ಮಟ ವಿಗ್ರಹದ ನಿರ್ಮಾತೃನಾದ ಚಾವುಂಡರಾಯನಿಂದ ಶ್ರವಣಬೆಳ್ಗೊಳ ತನ್ನ ಸಾಂಸ್ಕೃತಿಕ ಇತಿಹಾಸದಲ್ಲಿ ಒಂದು ಹೊಸ ತಿರುವನ್ನು ಪಡೆಯಿತು. ರಾಷ್ಟ್ರಕೂಟರ ಚಕ್ರವರ್ತಿ ನಾಲ್ಕನೆಯ ಇಂದ್ರರಾಜ ಕ್ರಿ.ಶ. ೯೮೨ರಲ್ಲಿ ಶ್ರವಣಬೆಳ್ಗೊಳದಲ್ಲಿ ಸಲ್ಲೇಖನ ವ್ರತವನ್ನು ಧರಿಸಿ ಮಡಿದ. ಅವನ ಸಲ್ಲೇಖನ ವ್ರತ ಮತ್ತು ಸಮಾಧಿ ಮರಣದ ವಿಷಯವನ್ನು ಹೇಳುವ ಶಾಸನ ಅವನ ಕಂದುಕ ಕ್ರೀಡೆಯ ಕೌಶಲವನ್ನೂ ವಿಸ್ತಾರವಾಗಿ ಬಣ್ಣಿಸುತ್ತದೆ. ಕಲ್ಯಾಣ ಚಾಲುಕ್ಯರ ಆಶ್ರಯದಲ್ಲಿದ್ದ ಕವಿ ರನ್ನನ ಎರಡು ಹಸ್ತಾಕ್ಷರಗಳು ಚಿಕ್ಕ ಬೆಟ್ಟದ ಮೇಲೆ ಉತ್ಕೀರ್ಣವಾಗಿವೆ. ಶ್ರವಣಬೆಳ್ಗೊಳದಲ್ಲಿ ದೊರಕಿರುವ ೫೭೩ ಶಾಸನಗಳಲ್ಲಿ ಒಟ್ಟು ೮೦ ಹೊಯ್ಸಳ ಶಾಸನಗಳೇ ಆಗಿವೆ. ಗಂಗರಂತೆ ಹೊಯ್ಸಳರು ಶ್ರವಣಬೆಳ್ಗೊಳದ ಸಾಂಸ್ಕೃತಿಕ ಶ್ರೀಮಂತಿಕೆಗೆ ಶ್ರಮಿಸಿದ್ದಾರೆ. ಅದರಲ್ಲೂ ಹೊಯ್ಸಳರ ವಿಷ್ಣುವರ್ಧನನ ಪತ್ನಿ ಶಾಂತಲೆ, ಮಂತ್ರಿ ಗಂಗರಾಜ "ಕಟ್ಟಿಸಿದ ಕಟ್ಟಡಗಳಿಗಾಗಲೀ ನಿಲ್ಲಿಸಿದ ಶಾಸನಗಳಿಗಾಗಲೀ ಲೆಕ್ಕವಿಲ್ಲ" (–ಶಿರೂರ್). ಶಾಂತಲೆ ತನ್ನ ಹೆಸರಿನಲ್ಲಿ ಚಿಕ್ಕ ಬೆಟ್ಟದ ಮೇಲೆ ಸವತಿ ಗಂಧವಾರಣ ಬಸದಿಯನ್ನು ಕಟ್ಟಿಸಿದರೆ ಗಂಗರಾಜ ದೊಡ್ಡ ಬೆಟ್ಟದ ಮೇಲೆ ಗೊಮ್ಮಟ ವಿಗ್ರಹದ ಸುತ್ತ "ಸುತ್ತಾಲಯ"ವನ್ನು ಮಾಡಿಸುತ್ತಾನೆ. ಶಾಂತಲೆ ಶಿವಗಂಗೆಯಲ್ಲಿ ಸಲ್ಲೇಖನ ವ್ರತದಿಂದ ಮರಣ ಹೊಂದಿದರೆ ಅದರಿಂದ ತೀವ್ರ ದುಃಖಿತಳಾದ ಅವಳ ತಾಯಿ ಮಾಚಿಕಬ್ಬೆ ಶ್ರವಣಬೆಳ್ಗೊಳದಲ್ಲಿ ಅದೇ ವ್ರತವನ್ನು ತಾನೂ ಧರಿಸಿ ಮರಣವನ್ನು ಪಡೆಯುತ್ತಾಳೆ. ವಿಷ್ಣುವರ್ಧನನ ಅದೇ ಅಧಿಕಾರಿ ಗಂಗಪಯ್ಯ ಅಥವಾ ಗಂಗರಾಜನು ಶ್ರವಣಬೆಳ್ಗೊಳದ ಪಕ್ಕದಲ್ಲಿನ ಜಿನನಾಥಪುರವನ್ನು ಮಾಡಿಸುತ್ತಾನೆ. ಗಂಗರಾಜ ಹಲವು ದೇವಾಲಯಗಳನ್ನು ಕಟ್ಟಿಸಿ, ಇನ್ನೂ ಹಲವನ್ನು ಪುನರುಜ್ಜೀವನಗೊಳಿಸಿದ್ದರಿಂದ ಜೈನಧರ್ಮ ಹಿಂದಿನಂತೆ, ಬಹುಶಃ ಗಂಗ ದೊರೆಗಳ ಕಾಲದಲ್ಲಿನಂತೆ, ತಲೆಯೆತ್ತಿ ಬೆಳಗಿತು ("ಪಳೆಯ ಮಾಳ್ಕೆ ವೊಲಾದುದು") ಎಂದು ಒಂದು ಶಾಸನ ಹೇಳುತ್ತದೆ. ವಿಷ್ಣುವರ್ಧನ ರಾಜನ ಮಗ ವೀರನಾರಸಿಂಹನ ಮಂತ್ರಿ ಹುಳ್ಳರಾಜನು ತನಗಿಂತ ಸ್ವಲ್ಪ ಹಿಂದಿನ ಗಂಗ ರಾಜನ ಕೆಲಸಗಳನ್ನು ಮುಂದುವರೆಸಿದನು. ಜೈನಧರ್ಮವನ್ನು ಮೇಲೆತ್ತಿದ ಮೂವರು ಮಂತ್ರಿಗಳಲ್ಲಿ (ಚಾವುಂಡರಾಯ, ಗಂಗರಾಜ ಮತ್ತು ಹುಳ್ಳ) ಅವನೂ ಒಬ್ಬ ಎಂದು ಒಂದು ಶಾಸನ ಹೊಗಳುತ್ತದೆ. ಇವನಂತೆಯೇ ಇವನ ಹೆಂಡತಿ ಪದ್ಮಾವತಿ ಜಿನಭಕ್ತೆ. ಹುಳ್ಳ ಶ್ರವಣಬೆಳ್ಗೊಳದಲ್ಲಿ ಚತುರ್ವಿಂಶತಿ ತೀರ್ಥಂಕರ ಬಸದಿಯನ್ನು ಮಾಡಿಸಿದ. (ಇದೇ ಈಗಿನ ಭಂಡಾರ ಬಸದಿ.) ವಿಜಯನಗರ ಸ್ಥಾಪಿತವಾದ (ಕ್ರಿ.ಶ. ೧೩೩೬) ಕೆಲವು ದಶಕಗಳಲ್ಲೇ ಶ್ರವಣಬೆಳ್ಗೊಳ ಪ್ರದೇಶದಲ್ಲಿ ನಡೆದ ಜೈನ ವೈಷ್ಣವರ ತಿಕ್ಕಾಟದ ಮಧ್ಯೆ ಪ್ರವೇಶಿಸಿ

ಇಬ್ಬರಿಗೂ ಸ್ನೇಹವನ್ನು ಏರ್ಪಡಿಸಿದ ವಿಜಯನಗರ ದೊರೆ ಬುಕ್ಕರಾಯನ ಶಾಸನ (ಕ್ರಿ.ಶ. ೧೩೬೮) ಶ್ರವಣಬೆಳ್ಗೊಳದಲ್ಲಿದೆ. ಎರಡನೆಯ ಹರಿಹರನ ಮಂತ್ರಿ ಇರುಗಪ್ಪ ಗೊಮ್ಮಟನಿಗೆ ಉಪವನವೊಂದನ್ನೂ ಕೆರೆಯನ್ನೂ ಕಟ್ಟಿಸಿದ ವಿಷಯ ಶಾಸನವೊಂದರಲ್ಲಿದೆ. ಮೈಸೂರರಸರು ಶ್ರವಣಬೆಳ್ಗೊಳದ ಜೊತೆ ನಿಕಟ ಸಂಪರ್ಕವನ್ನು ಪಡೆದಿದ್ದ ಇನ್ನೊಂದು ರಾಜವಂಶ. ಅಲ್ಲಿಯ ಮಠವು ಸಾಲಗಳ ತಾಪತ್ರಯಕ್ಕೆ ಈಡಾಗಿ ದುಸ್ಥಿತಿಯಲ್ಲಿದ್ದ ಸಮಯದಲ್ಲಿ ಚಾಮರಾಜ ಒಡೆಯರು (೧೭ನೇ ಶ.) ಅದನ್ನು ತಪ್ಪಿಸಿದ ವಿಷಯ ಒಂದು ಶಾಸನದಿಂದ ಗೊತ್ತಾಗುತ್ತದೆ. ಚಿಕ್ಕದೇವರಾಜ ಒಡೆಯರು ಈಗಿನ ದೊಡ್ಡ ಕಲ್ಯಾಣಿಯನ್ನು ಕಟ್ಟಿಸಿದರು. ಒಂದನೆಯ ಕೃಷ್ಣದೇವರಾಜ ಒಡೆಯರು ಗೊಮ್ಮಟನಿಗೆ ಮಹಾಮಸ್ತಕಾಭಿಷೇಕ ಮಾಡಿಸಿದ ಸಂಗತಿಯನ್ನು ದೇವಚಂದ್ರ ನಿರೂಪಿಸಿದ್ದಾನೆ.

ಇವರಲ್ಲದೆ ಅನೇಕ ಚಿಕ್ಕ ರಾಜಮನೆತನಗಳ ರಾಜರೂ ಅವರ ಮಂತ್ರಿಗಳೂ ಶ್ರವಣಬೆಳ್ಗೊಳ ವನ್ನು ದರ್ಶಿಸಿ ಧನ್ಯತಾಭಾವದಿಂದ ಅಲ್ಲಿ ಕಟ್ಟಡ ನಿರ್ಮಾಣ, ಜೀರ್ಣೋದ್ಧಾರ, ದಾನಾದಿಗಳಿಂದ ಆ ಕ್ಷೇತ್ರವನ್ನು ಬೆಳೆಸಿದರು. ಹಾಗೆಯೇ, ಆ ಕ್ಷೇತ್ರವು ಅವರ ಬದುಕಿಗೆ ಅರ್ಥವಂತಿಕೆ ಸಮಾಧಾನಗಳನ್ನು ತಂದು ಕೊಟ್ಟಿತು.

೩. ಸಾಹಿತ್ಯದ, ಜ್ಞಾನದ ಕೇಂದ್ರ

ಕರ್ನಾಟಕದ ಯಾವುದೇ ಒಂದು ಊರಿನ ಬಗ್ಗೆ ಅತಿ ಹೆಚ್ಚು ಸಂಖ್ಯೆಯ ಸಾಹಿತ್ಯದ ಕೃತಿಗಳು ನಿರ್ಮಾಣವಾಗಿರುವುದು ಶ್ರವಣಬೆಳ್ಗೊಳದ ಬಗ್ಗೆಯೇ. ಪಂಚಬಾಣದ ಭುಜಬಲಿ ಚರಿತೆ, ಅನಂತಕವಿಯ ಗೊಮ್ಮಟೇಶ್ವರ ಚರಿತೆ, ಚಿದಾನಂದ ಕವಿಯ ಮುನಿವಂಶಾಭ್ಯುದಯ, ಪಾಯಣವರ್ಣಿಯ ಜ್ಞಾನಚಂದ್ರಚರಿತೆ, ಹೀಗೆ ನಾಲ್ಕು ಕೃತಿಗಳಲ್ಲದೆ ಒಂದು ಸ್ಥಲಪುರಾಣವೂ ಯಕ್ಷಗಾನವೂ ನಿರ್ಮಾಣವಾಗಿವೆ. ಕನ್ನಡದಲ್ಲಿ ಮೊತ್ತಮೊದಲ ಅತಿ ಸುಂದರ ವೃತ್ತ ಪದ್ಯಗಳು ದೊರಕುವುದು ಶ್ರವಣಬೆಳ್ಗೊಳದಲ್ಲಿ. ಬೊಪ್ಪಣನಂತಹ ಭಾವುಕ ಕವಿ ಗೊಮ್ಮಟನನ್ನು ಸ್ತೋತ್ರ ಮಾಡಿದ ಕಾವ್ಯವು ಕನ್ನಡದ ಶ್ರೇಷ್ಠ ಶಾಸನ ಕಾವ್ಯಗಳಲ್ಲಿ ಒಂದಾಗಿದೆ. ಅಲ್ಲಿಯ ಮಠಾಧಿಪತಿಗಳಾದ ಚಾರುಕೀರ್ತಿ ಪಂಡಿತಾಚಾರ್ಯರು ಕ್ರಿ.ಶ. ೧೮೧೩ರಲ್ಲಿ ಭವ್ಯಜನ ಚಿಂತಾಮಣಿ ಎನ್ನುವ ಚಂಪೂಕಾವ್ಯವನ್ನು ಬರೆದರು. ಆ ಕ್ಷೇತ್ರವನ್ನು ಕುರಿತಂತೆ ಸ್ಥಳಪುರಾಣವಲ್ಲದೆ ಯಕ್ಷಗಾನವೊಂದೂ ರಚಿತವಾಗಿದೆ. ರಾಜಶ್ರೀ ದೇವರಾಜನು (ಕ್ರಿ.ಶ. ೧೮೨೭) ಆತ್ಮತತ್ವ ನಿರೀಕ್ಷಣ ಎಂಬ ಪುಟ್ಟ ಗದ್ಯ ಸಂಸ್ಕೃತ ಕೃತಿಯನ್ನೂ, ಚಾರುಕೀರ್ತಿಪಂಡಿತ ಯತಿ (ಕ್ರಿ.ಶ. ೧೮೪೪) ಸಂಸ್ಕೃತ ಗೀತವೀತರಾಗವನ್ನೂ ಬರೆದಿದ್ದಾರೆ. ಇಬ್ಬರೂ ಅದೇ ಊರಿನವರು. ಗೀತವೀತರಾಗವು ಜಯದೇವ ಕವಿಯ ಗೀತಗೋವಿಂದ ಶೈಲಿಯಲ್ಲಿ ರಚಿತವಾಗಿದ್ದು "ಅಷ್ಟಪದಿ" ಎಂಬ ಹೆಸರನ್ನೇ ಪಡೆದಿದೆ. ಅದೇ ಊರಿನ ಅಜ್ಞಾತವ್ಯಕ್ತಿಯೊಬ್ಬ ಅಸಗನ ವರ್ಧಮಾನ ಪುರಾಣಕ್ಕೆ ಕನ್ನಡ ವ್ಯಾಖ್ಯಾನವನ್ನು ರಚಿಸಿದ್ದಾನೆ. ಇವರಲ್ಲದೆ ಪಂಪರಾಜ, ಶಬ್ದಸಾಗರದೇವ ಮೊದಲಾದ ಶಾಸನಕವಿಗಳೂ ಅದೇ ಊರಿನವರು.

ಶ್ರವಣಬೆಳ್ಗೊಳ ನಿವಾಸಿಗಳಲ್ಲದಿದ್ದರೂ ಕನ್ನಡದ ಕವಿಗಳಾದ ಪಂಪ, ಚಾವುಂಡರಾಯ,

ರನ್ನ, ಒಂದನೆಯ ನಾಗವರ್ಮ(?), ಅಗ್ಗಳ ಕೋಟೀಶ್ವರ, ಸಾಳ್ವ ಕವಿ, ಭಟ್ಟಾಕಳಂಕ ಇತ್ಯಾದಿ ಎಷ್ಟೋ ಜೈನಕವಿಗಳು ಶ್ರವಣಬೆಳ್ಗೊಳಕ್ಕೆ ಒಂದಲ್ಲ ಒಂದು ರೀತಿ ಸಂಬಂಧಿಸಿದ್ದಾರೆ. ಕನ್ನಡದ ಬಹುತೇಕ ಎಲ್ಲ ಜೈನಕವಿಗಳೂ ತಮ್ಮ ಜೀವಿತದ ಅವಧಿಯಲ್ಲಿ ಶ್ರವಣಬೆಳ್ಗೊಳವನ್ನು ದರ್ಶಿಸಿ ಅಲ್ಲಿಂದ ಸ್ಫೂರ್ತಿಯನ್ನು ಪಡೆದಿರಬೇಕು. ಅಲ್ಲಿನ ಶಾಸನಗಳು ಅಪೂರ್ವ ಸಾಹಿತ್ಯಕ ಮೌಲ್ಯವನ್ನು ಮೆರೆದಿವೆ. ಇದಕ್ಕೆ ಅವನ್ನು ರಚಿಸಿದ ಕವಿಗಳ ಪ್ರತಿಭೆಯಂತೆಯೇ ಆ ಪ್ರದೇಶ ಕೊಟ್ಟ ಸ್ಫೂರ್ತಿಯೂ ಕಾರಣವಾಗಿದೆ.

ಜೊತೆಗೆ, ಶ್ರವಣಬೆಳ್ಗೊಳ ಪಾಂಡಿತ್ಯದ, ಅದರಲ್ಲೂ ಜೈನಪಾಂಡಿತ್ಯದ ಕೇಂದ್ರವಾಗಿ ಬಹು ಹಿಂದಿನಿಂದ ಮೆರೆದಿದೆ. ಅಲ್ಲಿನ ಗುಹೆಗಳು ಬಂಡೆಗಳು ಜೈನ ಮುನಿಗಳ ತಪಸ್ಸನ್ನು ಕಂಡಿರುವಂತೆ ಚರ್ಚೆಯನ್ನೂ ಕೇಳಿವೆ. ಅಲ್ಲಿನ ಶಾಸನಗಳಲ್ಲಿ ಉಲ್ಲೇಖಗೊಂಡಿರುವ ಜೈನ ವಿದ್ವಾಂಸರ ಚರಿತ್ರೆ ಒಟ್ಟು ಭಾರತೀಯ ಜೈನ ಪಾಂಡಿತ್ಯದ ಚರಿತ್ರೆಯೂ ಸಾರಾಂಶವೂ ಆಗುತ್ತದೆ. ಕುಂದಕುಂದ, ಉಮಾಸ್ವಾತಿ, ಶಿವಕೋಟಿಸೂರಿ, ಸಮಂತಭದ್ರ, ವಕ್ರಗ್ರೀವ, ಪೂಜ್ಯಪಾದ, ವಜ್ರನಂದಿ, ಪಾತ್ರ ಕೇಸರಿ, ಸುಮತಿದೇವ, ಭಟ್ಟಾಕಳಂಕ, ಚಿಂತಾಮಣಿ, ಶ್ರೀವರ್ಧದೇವ, ಅಕಲಂಕ, ಮಹೇಶ್ವರ, ಶಾಕಟಾಯನ, ವೀರಸೇನ, ಜಿನಸೇನ, ಗುಣಭದ್ರ ಇತ್ಯಾದಿ ಎಷ್ಟೋ ವಿದ್ವಾಂಸರ ಕವಿಗಳ ಹೆಸರುಗಳು ಶಾಸನಗಳಲ್ಲಿ ಬಂದಿವೆ. ಆ ಎಲ್ಲ ವಿದ್ವಾಂಸರ ಕೃತಿಗಳ ಅಧ್ಯಯನ ಶ್ರವಣಬೆಳ್ಗೊಳದಲ್ಲಿ ನಡೆಯುತ್ತಿತ್ತು. ಗುಣನಂದಿ ಪಂಡಿತನಂತಹ ಗುರುವಿಗೆ ಮುನ್ನೂರು ಜನ ಶಿಷ್ಯರಿದ್ದರೆಂದೂ, ಅವರಲ್ಲಿ ತರ್ಕ, ವ್ಯಾಕರಣ, ಸಾಹಿತ್ಯ ಆಗಮ ವಾದ ಇವುಗಳಲ್ಲಿ ಪರಿಣತರಾದ ಎಪ್ಪತ್ತು ಜನರಿದ್ದರೆಂದೂ ಒಂದು ಶಾಸನ ಹೇಳುತ್ತದೆ. ಅಲ್ಲಿನ ಮುನಿಗಳ ಪಾಂಡಿತ್ಯ ಶಾಸನಗಳಲ್ಲಿ ಮೇಲಿಂದ ಮೇಲೆ ಕೀರ್ತಿತವಾಗಿದೆ. "ತ್ರೈವಿದ್ಯ ಚೂಡಾಮಣಿ"ಯಾದ ಮೇಘಚಂದ್ರ (ತ್ರೈವಿದ್ಯ–ವ್ಯಾಕರಣ, ತರ್ಕ, ಜೈನಸಿದ್ಧಾಂತ), "ಪರಮಾಪ್ತಾಖಿಳ ಶಾಸ್ತ್ರ ತತ್ವ ನಿಳಯ"ನಾಗಿದ್ದ ದಿವಾಕರ–ಣಂದಿ, "ಸಾಹಿತ್ಯ ವಿದ್ಯಾನಿಧಿ'ಯಾದ ಗುಣನಂದಿ ಪಂಡಿತ ಇವರ ಹೆಸರುಗಳನ್ನು ಉದಾಹರಣೆಯಾಗಿ ಕೊಡಬಹುದು. ಅಲ್ಲಿನ ಬಸದಿಗಳು, ಶಿಲ್ಪಗಳು, ಮಾನಸ್ತಂಭಗಳೂ ಇವುಗಳ ಸಂಖ್ಯೆ ಮತ್ತು ಗುಣಗಳು ಅದು ಶಿಲ್ಪಶಾಸ್ತ್ರ ಪರಿಣತರ ಕೇಂದ್ರವೂ ಆಗಿತ್ತೆಂಬುದನ್ನು ಸಮರ್ಥಿಸುತ್ತದೆ.

ಸ್ತ್ರೀಯರು ಮತ್ತು ಶ್ರವಣಬೆಳ್ಗೊಳ

ಹಲವಾರು ಕಂತಿಯರು ಶ್ರವಣಬೆಳ್ಗೊಳದಲ್ಲಿ ಸಲ್ಲೇಖನವ್ರತವನ್ನು ಧರಿಸಿ ಮರಣ ಹೊಂದಿದರು. ಅವರಲ್ಲಿ ಕೆಲವರಾದರೂ ವಿದ್ಯಾವತಿಯರಾಗಿದ್ದರು. ಕೆಲವು ಪ್ರತಿಷ್ಠಿತ ಸ್ತ್ರೀಯರು ತಮ್ಮ ಐಶ್ವರ್ಯವನ್ನು ಧಾರೆಯೆರೆದು ಅಲ್ಲಿ ಮಂದಿರಗಳನ್ನು ಕಟ್ಟಿಸಿದರು. ಶಾಂತಲೆಯು ಸವತಿಗಂಧವಾರಣ ಬಸದಿಯನ್ನು, ಬೆಳ್ಗೊಳದ ದೇವದಾಸಿ ಮಂಗಾಯಿಯು ತ್ರಿಭುವನ ಚೂಡಾಮಣಿ ಬಸದಿಯನ್ನು ಕಟ್ಟಿಸಿದರು. ಇದಲ್ಲದೆ, ಪೋಚಾಂಬಿಕೆ, ಲಕ್ಷ್ಮೀದೇವಿ, ಜಕ್ಕಿಮವ್ವೆ, ಮಾಚಬ್ಬೆ, ಅಚಲೆ, ನೇಮಿಯಕ್ಕ ಇವರೇ ಮೊದಲಾದವರು ಬಸದಿಗಳನ್ನು ಕಟ್ಟಿಸಿದ್ದಲ್ಲದೆ ದತ್ತಿಗಳನ್ನು ಬಿಟ್ಟುಕೊಟ್ಟರು.

ಬೇರೆ ಬೇರೆ ಜಾತಿಗಳು

ಮತದ ದೃಷ್ಟಿಯಿಂದ ಜೈನರು ಅಲ್ಲಿ ಮೊದಲಿಂದ ಪ್ರಮುಖರು. ಅದು ಪುಣ್ಯಕ್ಷೇತ್ರವಾಗಿ ಸಾಂಸ್ಕೃತಿಕ ಕೇಂದ್ರವಾಗಿ ಅರಳಿ ನಿಂತಿದ್ದರಿಂದ ಸಾವಿರಾರು ಜನ ಬಂದು ಹೋಗುವ ದೊಡ್ಡ ಊರಾಗಿ ಬೆಳೆಯಿತು. ವ್ಯಾಪಾರಿಗಳಂತೆಯೇ, ಕಮ್ಮಾರರು, ಶಿಲ್ಪಿಗಳು, ಕಲ್ಲುಕುಟಿಗ, ಕುಂಬಾರ, ಗಾಣಿಗ, ಕುಂಚುಗಾರ, ಮಾಲೆಗಾರ, ಅಕ್ಕಸಾಲಿ ಇತ್ಯಾದಿ ಬೇರೆ ಬೇರೆ ವೃತ್ತಿಯ ಜನ ಅಲ್ಲಿಗೆ ಬಂದು ನೆಲೆಸಿದರು. ಉದ್ಯೋಗಗಳನ್ನು ಹುಡುಕಿಕೊಂಡು ಬರುವವರಿಗೆ ಅದು ಒಂದು ನೆಲೆಯನ್ನು ಒದಗಿಸುವ ಸ್ಥಾನವಾಗಿದ್ದಿತು. ಬ್ರಾಹ್ಮಣರ ಅನ್ನಸತ್ರದ ಉಲ್ಲೇಖ ಒಂದು ಕಡೆ ಬಂದಿದೆ. ಅಷ್ಟೇ ಅಲ್ಲ, ಯಾತ್ರಾರ್ಥಿಗಳಿಗಾಗಿ ಹಲವು ಸತ್ರಗಳೂ ದಾನ ಶಾಲೆಗಳೂ ಅಲ್ಲಿದ್ದುವು. ಪ್ರವಾಸಿಗರಿಗೆ ಕುಡಿಯಲು ನೀರು ಒದಗಿಸುತ್ತಿದ್ದ ಅರವಟ್ಟಿಗೆಗಳು ಅಲ್ಲಿದ್ದುವು.

ವ್ಯಾಪಾರ ಕೇಂದ್ರ

ಶ್ರವಣಬೆಳ್ಗೊಳದ ವರ್ತಕರನ್ನು ಮಾಣಿಕ್ಯ ನಕರಗಳೆಂದು ಕರೆಯಲಾಗಿದೆ. ಅವರು ಈ ಊರಲ್ಲಿ ಮಾತ್ರವಲ್ಲದೆ ದೂರದ ಊರುಗಳ ಜೊತೆಯೂ ಸಮುದ್ರದಾಚೆಗೂ ವ್ಯಾಪಾರ ಮಾಡುತ್ತಿದ್ದರು. ಅವರು ಕಟ್ಟಿಸಿದ ಹಲವಾರು ಬಸದಿ, ಶಿಲ್ಪಗಳು ಬೆಳ್ಗೊಳವನ್ನು ಬೆಳಗಿವೆ. ಆ ಊರಿನ ವರ್ತಕರಿಗೆ ಮುಖ್ಯನಾಗಿದ್ದ 'ಪಟ್ಟಣಶೆಟ್ಟಿ'ಯ ನೇತೃತ್ವದಲ್ಲಿ ಹಲವಾರು ದಾನ ನಿಬಂಧನೆಗಳು ದಾನಕಾರ್ಯಗಳು ನಡೆದಿವೆ. ಅಂತಹ ಪಟ್ಟಣಶೆಟ್ಟಿಯರಲ್ಲಿ ಹನ್ನೆರಡನೇ ಶತಮಾನದ ಮಲ್ಲಸೆಟ್ಟಿ ಎಂಬಾತ ಒಬ್ಬ. ಶ್ರವಣಬೆಳ್ಗೊಳದಲ್ಲಿ ನಾಣ್ಯಗಳನ್ನು ಟಂಕಿಸುತ್ತಿದ್ದ 'ಕಮ್ಮಟ'ವಿದ್ದಿರಬೇಕು. 'ಕಮ್ಮಟದ ರಾಮಶೆಟ್ಟಿ' ಎಂಬುವನ ಉಲ್ಲೇಖ ಒಂದು ಕಡೆ ಇದೆ. ಚಿನ್ನ, ಬೆಳ್ಳಿ, ಅರಿಸಿನ, ಅಡಕೆ, ಮೆಣಸು, ಹತ್ತಿ, ಉಪ್ಪು, ಗೋದಿ, ಕಡಲೆ, ಸುಗಂಧ ದ್ರವ್ಯಗಳು ಕಬ್ಬು, ಹೂವು, ಬಟ್ಟೆ ಇತ್ಯಾದಿ ಎಷ್ಟೋ ಬಗೆಯ ವ್ಯಾಪಾರ ಸಾಮಗ್ರಿಗಳ ಹೆಸರುಗಳನ್ನು ನಾವು ಹಿಂದಿನ ದಾಖಲೆಗಳಲ್ಲಿ ಕಾಣುತ್ತೇವೆ. ವ್ಯಾಪಾರಿಗಳೇ ಸೇರಿ ನಕರ ಜಿನಾಲಯವನ್ನು ಕಟ್ಟಿಸಿದರು. ಅಲ್ಲಿಯ ಶಾಸನಗಳಲ್ಲಿ ಹಲವಾರು ನಾಣ್ಯಗಳ, ಅಳತೆಗೋಲುಗಳ, ತೂಕಗಳ ಮಾತುಗಳು ಬಂದಿವೆ. ಅಲ್ಲಿಯ ಶ್ರೀಮಂತರು ಬಡ್ಡಿ ವ್ಯಾಪಾರವನ್ನು ಇಟ್ಟುಕೊಂಡಿದ್ದಕ್ಕೆ ಸೂಚನೆಗಳಿವೆ. ಶ್ರವಣಬೆಳ್ಗೊಳದ ಸುತ್ತಮುತ್ತಣ ಊರುಗಳ ಪ್ರಧಾನ ವೃತ್ತಿಯಾಗಿದ್ದ ವ್ಯವಸಾಯಕ್ಕೆ ಸಂಬಂಧಿಸಿದ ವಿಷಯ ಅಲ್ಲಿಯ ಶಾಸನಗಳಲ್ಲಿದೆ. ನೂರಾರು ಕೆರೆಗಳಿಂದ ತುಂಬಿದ್ದ ಆ ಪ್ರದೇಶ ಮಲೆನಾಡಿಗೆ ಸಮೀಪವೂ ಇರುವುದರಿಂದ ಬರಗಾಲಕ್ಕೆ ಈಡಾಗುತ್ತಿದ್ದುದು ಕಡಿಮೆಯೆಂದೇ ಹೇಳಬೇಕು. ಅಲ್ಲಿಯ ರೈತರ ಬೆಳೆಗೆ ಇದು ವ್ಯಾಪಾರ, ವಿನಿಮಯ ಕೇಂದ್ರವೂ ಆಗಿದ್ದಿತು. ಅಲ್ಲಿಯ ಶಾಸನಗಳಲ್ಲಿ ಕಾಣುವ ನೂರಾರು ತೆರಿಗೆಗಳು ರಾಜ್ಯಾದಾಯದ ಒಂದು ಪ್ರಮುಖ ಭಾಗವೂ ಆಗಿದ್ದುವು.

ಬೇರೆ ಬೇರೆ ಊರುಗಳ ಜೊತೆ ಸಂಪರ್ಕ

ಶ್ರವಣಬೆಳ್ಗೊಳದಲ್ಲಿ ತಮ್ಮ ಕೊನೆಯ ದಿನಗಳನ್ನು ಕಳೆಯಬೇಕೆಂದು ಬಯಸಿ ಅಲ್ಲಿಗೆ ಬಂದು ಪ್ರಾಣ ಬಿಟ್ಟವರು ಹಲವರು. ಶ್ರೀತೀರ್ಥ, ಅಗಟಿ, ತರಕಾಡು, ನವಿಲೂರು,

ಕಳಂತೂರು, ಮದುರೆ ಇಂತಹ ಹಲವಾರು ಊರುಗಳಿಂದ ಬಂದು ಸಲ್ಲೇಖನದ ಮೂಲಕ ಮಡಿದ ಜೈನರ ಹೆಸರುಗಳು ಅಲ್ಲಿ ದೊರಕುತ್ತವೆ. ಆ ಊರಿನ ಬೇರೆ ಬೇರೆ ದೈವಗಳಿಗೆ ಕೊಡಲಾದ ದತ್ತಿಗಳು ಹಲವು. ಪರಮ, ಬೆಕ್ಕ, ಸವಣೇರ ಮೊದಲಾದ ಸುತ್ತಮುತ್ತಣ ಹಳ್ಳಿಗಳ ಆದಾಯದ ಒಂದು ಭಾಗವು ಶ್ರವಣಬೆಳ್ಗೊಳಕ್ಕೆ ಸೇರುತ್ತಿದ್ದಿತು. ಆ ಆದಾಯ ಬಸದಿಗಳ ಜೀರ್ಣೋದ್ಧಾರಕ್ಕೆ, ದೇವತಾ ಪೂಜೆಗೆ, ರಂಗಭೋಗಕ್ಕೆ (ನರ್ತನ ಇತ್ಯಾದಿಗಳಿಗೆ), ಗೊಮ್ಮಟನ ನಿತ್ಯಾಭಿಷೇಕಕ್ಕೆ, ಗೊಮ್ಮಟನ ಅಷ್ಟವಿಧಾರ್ಚನೆಗೆ, ಹೂವಿನ ಪಡಿಗೆ, ತೀರ್ಥಂಕರರ ಅಷ್ಟವಿಧಾರ್ಚನೆ, ರಥೋತ್ಸವ, ಮಹಾಮಸ್ತಕಾಭಿಷೇಕ ಇತ್ಯಾದಿ ಕಾರ್ಯಗಳಿಗೆ ವಿನಿಯೋಗ ವಾಗುತ್ತಿದ್ದಿತು. ದೂರದ ಊರಿನಿಂದ ಬಂದು ಹಲವರು ದಾನಕೊಟ್ಟ ಸಂಗತಿ ಅಲ್ಲಿದೆ. ಗೋವಿನ ಪಾಡಿ, ಮೊಸಳೆ, ಹಲಸೂರು, ಬಾರಕನೂರು, ಗೇರಸೊಪ್ಪೆ, ಹುಲಿಗೆರೆ (ಲಕ್ಷ್ಮೇಶ್ವರ), ಗಂಗಾವತಿ, ಇತ್ಯಾದಿ ಊರುಗಳ ಹೆಸರು ಅಲ್ಲಿವೆ, ಉತ್ತರಭಾರತದಿಂದ ಯಾತ್ರಾರ್ಥಿಗಳ ಹಲವು ಉಲ್ಲೇಖನಗಳೂ ಅಲ್ಲಿವೆ.

ಮಹಾಮಸ್ತಕಾಭಿಷೇಕ

ಈಗ ಹನ್ನೆರಡು ವರ್ಷಗಳಿಗೊಮ್ಮೆ ನಡೆಯುವ ಗೊಮ್ಮಟನ ಮಹಾಮಸ್ತಕಾಭಿಷೇಕ ಲಕ್ಷಾಂತರ ಜನರನ್ನು ತನ್ನತ್ತ ಸೆಳೆಯುತ್ತದೆ. ಚಾವುಂಡರಾಯನಿಂದಲೇ ಈ ಪೂಜಾ ಪದ್ಧತಿ ಆರಂಭವಾಗಿರಬಹುದು. ಕ್ರಿ.ಶ. ೧೩೯೮ರ ಒಂದು ಶಾಸನ, ಕ್ರಿ.ಶ. ೧೫೦೦ರ ಒಂದು ಶಾಸನ, ಪಂಚಬಾಣ ಕವಿಯ "ಭುಜಬಲಿ ಚರಿತೆ" ಇತ್ಯಾದಿ ಕಾವ್ಯಗಳು ಮಸ್ತಕಾಭಿಷೇಕೋತ್ಸವ ವನ್ನು ಉಲ್ಲೇಖಿಸಿವೆ. ಕ್ರಿ.ಶ. ೧೮೨೫, ೧೮೨೭, ೧೮೭೧, ೧೯೦೯, ೧೯೨೫, ೧೯೪೦, ೧೯೬೭ ಇವು ಮಸ್ತಕಾಭಿಷೇಕ ನಡೆದ ಹಿಂದಿನ ಕೆಲವು ತೇದಿಗಳು, ಇಷ್ಟು ದೊಡ್ಡ ಪ್ರಮಾಣದ ಉತ್ಸವಗಳಿಗೆ ಸೇರುವ ಭಿನ್ನ ಭಾಷೆಗಳ ಹಿನ್ನೆಲೆಗಳ ಜನರಿಂದ ಒಂದು ಸ್ಥಳದ ಆರ್ಥಿಕ, ಸಮಾಜೋಸಾಂಸ್ಕೃತಿಕ ಜೀವನದ ಮೇಲೆ ಆಗುವ ಪರಿಣಾಮ ಅಗಾಧವಾದುದು.

ಕಲೆಗಳು

ಶ್ರವಣಬೆಳ್ಗೊಳವು ಲಲಿತ ಕಲೆಗಳಿಗೆ ತೌರುಮನೆ ಆಗಿತ್ತು. ಅಲ್ಲಿಯ ಬಸದಿಗಳಲ್ಲಿ ನರ್ತನವು ದೇವಪೂಜೆಯ ಭಾಗವಾಗಿ ನಡೆಯುತ್ತಿತ್ತು. ಬಸದಿಗಳ 'ರಂಗಭೋಗ'ಕ್ಕೆ ಎಂದರೆ ಬಸದಿಗಳಲ್ಲಿ ಗಾನ, ನರ್ತನಾದಿಗಳು ನಡೆಯಲು ದತ್ತಿಗಳನ್ನು ಹಲವರು ಕೊಟ್ಟರು. ಮಂಗಾಯಿ ಬಸದಿ ಕಟ್ಟಿಸಿದ ಮಂಗಾಯಿಯು ಹಾಗೆ ಬಸದಿಗಳಲ್ಲಿ ನರ್ತಿಸುತ್ತಿದ್ದ ದೇವದಾಸಿ. ಅಲ್ಲಿನ ಮುನಿಗಳು ಸಂಗೀತ, ನರ್ತನಾದಿ ಕಲೆಗಳನ್ನು ಬಲ್ಲವರಾಗಿದ್ದರು. ಹಲವು ಬಸದಿಗಳು ವರ್ಣಭಿತ್ತಿ ಚಿತ್ರಗಳಿಂದ ರಂಜಿತವಾಗಿದ್ದುವು. (ಅಂತಹ ಚಿತ್ರಗಳು ಇಂದಿಗೂ ಅಲ್ಲಿಯ ಮಠವಲ್ಲಿ ನೋಡಲು ದೊರಕುತ್ತವೆ.) ಧವಲ, ಜಯಧವಲ, ಮಹಾಧವಲ ಹಸ್ತಪ್ರತಿಗಳ ಹಾಳೆಗಳ ಮೇಲೆ ಸುಂದರವಾದ ಚಿತ್ರಗಳಿದ್ದು ಅವು ಪ್ರಾಚೀನ ಕರ್ನಾಟಕದ "ಚಿಕಣಿ" ಚಿತ್ರಗಳಿಗೆ ನಿದರ್ಶನಗಳಾಗಿವೆ. ಈ ಹಸ್ತಪ್ರತಿಗಳು ಮೂಲತಃ ಶ್ರವಣಬೆಳ್ಗೊಳಕ್ಕೆ ಸೇರಿದ್ದು ಇತಿಹಾಸದಲ್ಲಿ ಯಾವಾಗಲೋ ಮೂಡಬಿದರೆಗೆ ವರ್ಗಾವಣೆಯಾದುವೆಂದು ಹೇಳಲಾಗಿದೆ.

ಶ್ರವಣಬೆಳ್ಗೊಳ ಪ್ರಸಿದ್ಧವಾಗಿರುವುದೇ ಶಿಲ್ಪ ಮತ್ತು ವಾಸ್ತುಶಿಲ್ಪಗಳಿಗೆ, ಗೊಮ್ಮಟನ ವಿಗ್ರಹ ಅಲ್ಲಿಯ ಶಿಲ್ಪ ಪರಿಣತಿಯ ಪರಾಕಾಷ್ಠೆ. ಆ ವಿಗ್ರಹವಲ್ಲದೆ, ಅಲ್ಲಿನ ಬೇರೆ ಬೇರೆ ಬಸದಿಗಳಲ್ಲಿರುವ ತೀರ್ಥಂಕರ ವಿಗ್ರಹಗಳಾಗಲಿ, ಚಾವುಂಡರಾಯ ಬಸದಿಯಾಗಲಿ ಕರ್ನಾಟಕದ ಶಿಲ್ಪ ವಾಸ್ತುಶಿಲ್ಪಕ್ಕೆ ಅಪೂರ್ವ ಕೊಡುಗೆಗಳು. ಚಿಕ್ಕ ಬೆಟ್ಟದ ಮೇಲೆ ಹನ್ನೆರಡಕ್ಕಿಂತ ಹೆಚ್ಚು ಬಸದಿಗಳು ಶಾಸನಗಳಿರುವ ಸುಂದರ ಮಂಟಪಗಳು ಮಾನಸ್ತಂಭಗಳು ಇವೆ. ದೊಡ್ಡ ಬೆಟ್ಟದ ಮೇಲಿನ ನಾಲ್ಕು ಬಸದಿಗಳೂ 'ಅಖಂಡ ಬಾಗಿಲೂ' ಸುತ್ತಾಲಯವೂ ಶ್ರೇಷ್ಠ ರಚನೆಗಳು. ಊರೊಳಗಿನ ಭಂಡಾರ ಬಸದಿ ಶ್ರವಣಬೆಳ್ಗೊಳದಲ್ಲಿಯೇ ಬಹು ದೊಡ್ಡದಾದ ಮಂದಿರ. ಚಿಕ್ಕದೇವರಾಜ ಒಡೆಯರು ನಿರ್ಮಿಸಿದ ಕಲ್ಯಾಣಿಯೂ ವಾಸ್ತುಶಿಲ್ಪದ ದೃಷ್ಟಿಯಿಂದ ಗಮನಾರ್ಹ. ಶ್ರವಣಬೆಳ್ಗೊಳಕ್ಕೆ ಸಮೀಪದಲ್ಲಿರುವ ಜಿನನಾಥಪುರದ ಹೊಯ್ಸಳ ಶೈಲಿಯ ಬಸದಿಯಾಗಲಿ ಹಳೇ ಬೆಳ್ಗೊಳದ ಗಂಗರ ಕಾಲದ ಬಸದಿಯಾಗಲಿ ಸುಂದರ ರಚನೆಗಳು. ಚಂದ್ರಗುಪ್ತ ಬಸದಿಯ ಕಲ್ಲಿನ ಜಾಲರಿ ಮತ್ತೊಂದು ಕುಸುರಿಗೆಲಸದ ರಚನೆ.

ಧರ್ಮ

ಶ್ರವಣಬೆಳ್ಗೊಳದ ಸತ್ವ ಮುಖ್ಯವಾಗಿ ಧರ್ಮ, ಅದರಲ್ಲೂ ಜೈನಧರ್ಮ. ಕ್ರಿ.ಪೂ. ೩-೨ನೇ ಶತಮಾನಗಳಲ್ಲಿ ಉತ್ತರದಿಂದ ದಕ್ಷಿಣಕ್ಕೆ ಬಂದ ಜೈನಧರ್ಮ ತನ್ನ ಮೊದಲ ಕೇಂದ್ರವನ್ನಾಗಿ ಶ್ರವಣಬೆಳ್ಗೊಳವನ್ನು ಆರಿಸಿಕೊಂಡಿತು. ಅಂದಿನಿಂದ ಇಲ್ಲಿಯವರೆಗೆ ಅಲ್ಲಿ ಜೀವಂತವಾಗಿರುವುದು ಅದೇ ಧರ್ಮ. ಈ ಎರಡುಸಾವಿರ ವರ್ಷಗಳಿಗೆ ಮೇಲ್ಪಟ್ಟ ಅವಧಿಯಲ್ಲಿ ಶ್ರವಣಬೆಳ್ಗೊಳವು ರಾಜಕೀಯ ಏರಿಳಿತಗಳನ್ನು ಕಂಡಿತು. ಜೈನಧರ್ಮದ ಏರಿಳಿತಗಳನ್ನೂ ಕಂಡಿತು. ಆದರೆ ಆ ಏರಿಳಿತಗಳು ಕೇಂದ್ರದ ಮಹತ್ವವನ್ನು ಎಂದೂ ಕಡಿಮೆ ಮಾಡಲಿಲ್ಲ. ದಕ್ಷಿಣ ಭಾರತದ ಜೈನ ಧರ್ಮದ ಕೇಂದ್ರಬಿಂದುವಾಗಿ ಊರೆಗೋಲಾಗಿ ಅದು ಬೆಳೆದುಬಂದಿದೆ. ಅಲ್ಲಿಗೆ ಭೇಟಿ ನೀಡಿದ ಜೈನ ಶ್ರದ್ಧಾವಂತರ, ಮುನಿಗಳ, ಮೋಕ್ಷಾರ್ಥಿಗಳ, ಕುತೂಹಲಿಗಳ ಸಂಖ್ಯೆ ಅಪರಿಮಿತ. ಅಲ್ಲಿಗೆ ಬಂದು ಧನ್ಯತೆಯನ್ನು ಅನುಭವಿಸಿದವರು ಎಷ್ಟೋ. ಬಸದಿಗಳಲ್ಲಿ ಪೂಜೆ, ಮುನಿಗಳ ತಪಸ್ಸು ಮತ್ತು ಅಧ್ಯಯನ, ಅವರ ಸಲ್ಲೇಖನ ವಿಧಿ, ಯಾತ್ರಾರ್ಥಿಗಳ ನಿರಂತರ ಪ್ರವಾಹ, ಉದ್ದಕ್ಕೂ ನಡೆಯುತ್ತಿದ್ದ ಶಿಲ್ಪ ಮತ್ತು ಮಂದಿರಗಳ ನಿರ್ಮಾಣ, ಉತ್ಸವಗಳು, ವಿದ್ವದ್ಗೋಷ್ಠಿಗಳಲ್ಲಿ ಚರ್ಚೆ ಮತ್ತು ವಾದವಿವಾದಗಳು, ಪ್ರವಚನಗಳು ಇವುಗಳಿಂದಾಗಿ ಶ್ರವಣಬೆಳ್ಗೊಳ ಒಂದು ಜೈನೀಯ ವಾತಾವರಣವನ್ನು ಉದ್ದಕ್ಕೂ ಜೀವಂತವಾಗಿ ಉಳಿಸಿಕೊಂಡು ಬಂದಿತು.

ಶ್ರವಣಬೆಳ್ಗೊಳ ಎಂತಹ ಪ್ರಭಾವಶಾಲೀ ಸಾಂಸ್ಕೃತಿಕ ಕೇಂದ್ರವಾಗಿತ್ತೆಂದರೆ, ಆ ಪ್ರಭಾವ ಅದರ ಸುತ್ತಮುತ್ತಣ ಹತ್ತಾರು ಗ್ರಾಮಗಳನ್ನು ಆವರಿಸಿ ಅವನ್ನೂ ಬೆಳಗಿಸಿದೆ. ಜಿನನಾಥಪುರ, ಜಿನ್ನೇನಹಳ್ಳಿ, ಕಂಠೀರಾಯಪುರ, ಸಾಣೇನಹಳ್ಳಿ, ಸುಂದರಹಳ್ಳಿ, ಹರಮ, ಬಸ್ತಿಹಳ್ಳಿ, ಜಕ್ಕ, ಹಳೇಬೆಳ್ಗೊಳ, ಚಲ್ಯ, ಬೊಮ್ಮೇನಹಳ್ಳಿ, ಕುಂಬೇನಹಳ್ಳಿ, ಕಾಂತರಾಜಪುರ, ಇಲ್ಲೆಲ್ಲ ಈಗಲೂ ಉಳಿದಿರುವ ಬಸದಿಗಳು, ಶಿಲ್ಪಗಳು, ಶಾಸನಗಳು, ಎಲ್ಲವೂ ಶ್ರವಣಬೆಳ್ಗೊಳದ ಜೈನ ಕಾಂತಿಯನ್ನು ಹಂಚಿಕೊಂಡಂತಿವೆ. ಒಂದು ದೀಪದ ಸುತ್ತಣ ಪ್ರಭಾವಲಯದಂತೆ ಅವು ಕಾಣಿಸಿಕೊಳ್ಳುತ್ತವೆ. ಆ ಊರುಗಳು ಶ್ರವಣಬೆಳ್ಗೊಳದ ಸಾಂಸ್ಕೃತಿಕ ಉಪಗ್ರಹಗಳೆಂದರೂ ತಪ್ಪಾಗಲಾರದು.

-೫-

ಈ ಹಿಂದಿನ ಭಾಗದಲ್ಲಿ ಬಂದಿರುವ ಸಾಮಗ್ರಿಯೆಲ್ಲ ಎರಡು ಮತ್ತು ಮೂರನೆಯ ಭಾಗಗಳಲ್ಲಿ ಪ್ರತಿಪಾದಿಸಿರುವ ವಿಷಯಕ್ಕೆ ಸಾಕ್ಷ್ಯಾಧಾರವಾಗಿ ಬಂದಿದೆ. ಕರ್ನಾಟಕ ಸಂಸ್ಕೃತಿಯ ಅತಿ ಶ್ರೇಷ್ಠವಾದ ಎಲ್ಲದರ ಸಂಕೇತ ಶ್ರವಣಬೆಳ್ಗೊಳ. ಶ್ರೇಷ್ಠ ಶಿಲ್ಪ, ವಾಸ್ತುಶಿಲ್ಪ, ಚಿತ್ರ, ಸಾಹಿತ್ಯ, ಭಾಷೆ, ಶಾಸನಗಳು, ಸುದೀರ್ಘಪರಂಪರೆ, ಧಾರ್ಮಿಕ ಶ್ರದ್ಧೆ ಮತ್ತು ಸಹನೆ, ಅಸೀಮವಾದ ತ್ಯಾಗ, ಅದ್ಭುತವಾದ ಆದರ್ಶಪ್ರಿಯತೆ, ಪಾಂಡಿತ್ಯ, ಕೊನೆಗೆ ಪ್ರಕೃತಿ ಸೌಂದರ್ಯ ಇವೆಲ್ಲ ಒಂದೆಡೆ ಏಕೀಭವಿಸಿ ಕಾಣಿಸಿಕೊಳ್ಳುವ ಏಕೈಕ ಪ್ರದೇಶವೆಂದರೆ ಅದೇ. ಕರ್ನಾಟಕದ ಉಳಿದ ಸಾಂಸ್ಕೃತಿಕ ಕೇಂದ್ರಗಳು ಮೇಲಿನ ಎಲ್ಲ ಗುಣಗಳನ್ನೂ ಸಮಪ್ರಮಾಣದಲ್ಲಿ ಪಡೆದಿರುವುದು ವಿರಳ ಅಥವಾ ಇಲ್ಲವೇ ಇಲ್ಲ. ಶ್ರವಣಬೆಳ್ಗೊಳದ ಹೆಗ್ಗಳಿಕೆ ಇರುವುದು ಅದರಲ್ಲೇ. ಎರಡುಸಾವಿರ ವರ್ಷಗಳ ಹಿಂದಿನಂತೆಯೇ ಈ ದಿನವೂ ಸಾಂಸ್ಕೃತಿಕವಾಗಿ ಅದು ಜೀವಂತವಾಗಿದೆ; ಅಷ್ಟೇ ಅಲ್ಲ, ವೃದ್ಧಿಗೊಳ್ಳುತ್ತಿದೆ.

ಅನುಬಂಧ – ೧

ಪ್ರಾಚೀನ ಕರ್ನಾಟಕದ ಸಾಂಸ್ಕೃತಿಕ ಕೇಂದ್ರಗಳು[೩]

ಇಲ್ಲಿ (ಕೆಳಗಿನ ಟಿಪ್ಪಣಿ ನೋಡಿ) ಮಂಡಿಸಿರುವ ಸಂಪ್ರಬಂಧಗಳಲ್ಲಿ ಬಂದಿರುವುದನ್ನು ನಾನು ಆವರ್ತನಗೊಳಿಸದೆ, ಎಲ್ಲಕ್ಕೂ ಅನ್ವಯಿಸಬಹುದಾದ ಕೆಲವು ಸಾಮಾನ್ಯ ಸಂಗತಿಗಳನ್ನು ಪ್ರಸ್ತಾಪಿಸುತ್ತೇನೆ. ಈ ಒಟ್ಟು ಐದು ಸಂಪ್ರಬಂಧಗಳಲ್ಲಿ ಮುಖ್ಯವಾಗಿ ಪ್ರಸ್ತಾಪಿತವಾಗಿರುವ ಸ್ಥಳಗಳು ಐದು : ಈ ಐದು ಜಾಗಗಳಲ್ಲಿ ಒಂದು ದಕ್ಷಿಣ ಕರ್ನಾಟಕಕ್ಕೆ (ಶ್ರವಣಬೆಳಗೊಳ), ಎರಡು ಮಧ್ಯಕರ್ನಾಟಕಕ್ಕೆ (ಬಳಿಗಾವೆ, ಹಂಪೆ) ಎರಡು (ಲಕ್ಕುಂಡಿ, ಪಟ್ಟದಕಲ್ಲು) ಉತ್ತರ ಕರ್ನಾಟಕಕ್ಕೆ ಸೇರಿವೆ. ಕಾಲದ ದೃಷ್ಟಿಯಿಂದ ಶ್ರವಣಬೆಳಗೊಳ (ಕ್ರಿ.ಪೂ. ೨–೧ನೇ ಶ.) ಈಚಿನದು. ಉಳಿದವು ೭–೮ನೇ ಶತಮಾನಗಳಿಗೆ ೧೧–೧೨ನೇ ಶತಮಾನಗಳಿಗೆ ಸೇರಿವೆ. ಎಂದರೆ, ಈ ಐದು ಕೇಂದ್ರಗಳು ಪ್ರಾದೇಶಿಕ ಮತ್ತು ಕಾಲದ ವ್ಯಾಪ್ತಿಯನ್ನು ಹೊಂದಿವೆ. ಪ್ರಾಚೀನ ಕರ್ನಾಟಕದ ಕೇಂದ್ರಗಳಲ್ಲಿ ಇವು ಪ್ರಾತಿನಿಧಿಕವೆಂದು ತೆಗೆದುಕೊಳ್ಳಬೇಕೇ ಹೊರತು, ಇದೇ ಮುಖ್ಯ ಎಂದು ಭಾವಿಸಬಾರದು. ಬನವಾಸಿ, ತಲಕಾಡು, ಬಸವಕಲ್ಯಾಣ ಶೃಂಗೇರಿ, ಕುರುಗೋಡು, ಮಾಳ್‌ಖೇಡ್, ಲಕ್ಷ್ಮೇಶ್ವರ, ಕೊಪ್ಪಳ, ಡಂಬಳ, ಕುಪ್ಪಟೂರ, ಉಡುಪಿ, ಮೇಲ್ಕೋಟೆ, ಬೀದರ್, ಬಿಜಾಪುರ, ಬೇಲೂರು ಇತ್ಯಾದಿ ಅನೇಕ ಸಾಂಸ್ಕೃತಿಕ ಕೇಂದ್ರಗಳು ತಮ್ಮದೇ ಆದ ವೈಶಿಷ್ಟ್ಯವನ್ನು ಮೆರೆದಿವೆಯೆಂಬುದನ್ನು ಕರ್ನಾಟಕ ಇತಿಹಾಸದ ವಿದ್ಯಾರ್ಥಿಗಳು ಬಲ್ಲರು.

'ಸಂಸ್ಕೃತಿ' 'ಸಂಸ್ಕೃತಿಯ ಕೇಂದ್ರ' ಎಂಬ ಮಾತುಗಳನ್ನು ಇಲ್ಲಿಯೂ ಬಳಸಿದ್ದೇವೆ. ಆಗಾಗ್ಗೆ ಧಾರಾಳವಾಗಿ ಅವನ್ನು ಉಪನ್ಯಾಸಗಳಲ್ಲಿ ಮತ್ತು ಬರಹಗಳಲ್ಲಿ ಬಳಸುತ್ತಿದ್ದೇವೆ. ಸಂಸ್ಕೃತಿ ಎಂದರೆ ಏನೆಂದು ಮೊದಲು ನೋಡೋಣ. ಸಂಸ್ಕೃತಿ ಪದವನ್ನು ಮುಖ್ಯವಾಗಿ ಎರಡು ಅರ್ಥಗಳಲ್ಲಿ ಬಳಸುತ್ತೇವೆ. ವ್ಯಕ್ತಿಗೆ ಸಂಬಂಧಿಸಿದಂತೆ ಮಾತನಾಡುವಾಗ ಸಾಮಾನ್ಯವಾಗಿ ನಾವು ಮೆಚ್ಚಿಕೊಂಡ ಉತ್ತಮ ಗುಣ, ಆದರ್ಶ, ನಡತೆಗಳನ್ನು ಗಮನದಲ್ಲಿಟ್ಟುಕೊಂಡು ಸಂಸ್ಕೃತಿ ಪದವನ್ನು ಬಳಸುತ್ತೇವೆ. ಆಗ, 'ಸುಸಂಸ್ಕೃತ' ಎನ್ನುವ ಮಾತು ಇಂಗ್ಲಿಷಿನ Gentleman ಪದಕ್ಕೆ ಸಮಾನವಾದುದಾಗುತ್ತದೆ. ಆದರೆ, ಇತಿಹಾಸಜ್ಞರು ಮತ್ತು ಮಾನವಶಾಸ್ತ್ರಜ್ಞರು ಸಂಸ್ಕೃತಿ ಪದವನ್ನು ಬಳಸುವ ಪರಿಸರವೇ ಬೇರೆ. ಮನುಷ್ಯ ಆನುವಂಶಿಕವಾಗಿ ಏನನ್ನು ಪಡೆಯುತ್ತಾನೋ ಅದನ್ನು ಬಿಟ್ಟು ಉಳಿದಂತೆ, ತನ್ನ ಬದುಕಿಗೆ ಸಂಬಂಧಿಸಿದ ಹಾಗೆ ಅವನು ಕಲ್ಪಿಸಿಕೊಂಡ ಅಥವಾ ರೂಪಿಸಿಕೊಂಡ

---

೩. 1976 ಡಿಸೆಂಬರ್ ೧೧–೧೩ ರಂದು ಶಿವಮೊಗ್ಗೆಯಲ್ಲಿ ನಡೆದ ೪೯ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ "ಪ್ರಾಚೀನ ಕರ್ನಾಟಕದ ಸಾಂಸ್ಕೃತಿಕ ಕೇಂದ್ರಗಳು" ಎಂಬ ಗೋಷ್ಠಿಯ ಅಧ್ಯಕ್ಷ ಭಾಷಣ.

ಎಲ್ಲವನ್ನೂ ಸಂಸ್ಕೃತಿ ಪದ ಒಳಗೊಳ್ಳುತ್ತದೆ. ಇದರ ವಿವರಣೆಗಾಗಿ ಎರಡು ಉದಾಹರಣೆಗಳನ್ನು ತೆಗೆದುಕೊಳ್ಳುತ್ತೇನೆ. ಗಂಡು ಹೆಣ್ಣುಗಳ ಮಧ್ಯದ ಲೈಂಗಿಕ ಆಕರ್ಷಣೆ ಮನುಷ್ಯನಿಗೆ ಸ್ವಾಭಾವಿಕವಾದುದು. ಮನುಷ್ಯನಿಗೆ ಅದನ್ನು ಯಾರೂ ಕಲಿಸಬೇಕಾಗಿಲ್ಲ ಎಂದರೆ ಆ ಗುಣ ಆನುವಂಶಿಕ. ಆದರೆ ಮನುಷ್ಯ ಲೈಂಗಿಕ ಆಕರ್ಷಣೆಯನ್ನು ಕೆಲವು ರೀತಿಗಳಲ್ಲಿ ನಿಯಂತ್ರಿಸುತ್ತಾನೆ ಮತ್ತು ಮಾರ್ಪಡಿಸುತ್ತಾನೆ. ವಿವಾಹ, ಕುಟುಂಬ, ಯಾವ ಗಂಡು ಯಾವ ಹೆಣ್ಣನ್ನು ಮದುವೆಯಾಗಬಹುದು ಇತ್ಯಾದಿ ವಿಧಿ ನಿಷೇಧ ವ್ಯವಸ್ಥೆಗಳು ಅವನು ಸ್ವತಃ ಏರ್ಪಡಿಸಿಕೊಂಡದ್ದು. ಇದು 'ಸಂಸ್ಕೃತಿ' ಎಂದು ಕರೆಯಿಸಿಕೊಳ್ಳುತ್ತದೆ. ಸದ್ದು ಮಾಡುವುದು ಮನುಷ್ಯನಿಗೆ ಸ್ವಾಭಾವಿಕವಾದುದು. ಆದರೆ ಸದ್ದನ್ನು ಭಾಷೆಯಾಗಿ ಪರಿವರ್ತಿಸಿ ಅಭಿಪ್ರಾಯಗಳ ವಿನಿಮಯಕ್ಕೆ ಅದನ್ನು ಸಾಧನವಾಗಿ ಮಾಡಿಕೊಳ್ಳುವುದು ಅವನೇ ಮಾಡಿಕೊಂಡ ಏರ್ಪಾಟು. ಎಂದರೆ ಹುಟ್ಟಿನ ಜೊತೆ ಮನುಷ್ಯನಿಗೆ ಸದ್ದು ಮಾಡುವ ಶಕ್ತಿಯೂ ಬಂದಿರುತ್ತದೆ; ಮಾತನಾಡುವುದನ್ನು ಸಮಾಜ ಜೀವಿಯಾಗಿಯೇ, ಇನ್ನೊಬ್ಬರನ್ನು ನೋಡಿ ಅನುಕರಿಸಿಯೇ ಕಲಿಯಬೇಕಾಗುತ್ತದೆ. ವಿವಾಹ ಪದ್ಧತಿ ಮತ್ತು ಭಾಷೆಗಳು ಸಂಸ್ಕೃತಿಯ ಭಾಗವೆಂದು ಕರೆಯುವುದು ಅದಕ್ಕಾಗಿಯೇ.

ಎಂದರೆ ಸಂಸ್ಕೃತಿ ಎಂಬುದು ಮನುಷ್ಯ ತನ್ನ ಅನುಕೂಲಕ್ಕಾಗಿ ಏನೇನನ್ನು ಸೃಷ್ಟಿಸಿಕೊಂಡಿದ್ದಾನೆಯೋ ಅದೆಲ್ಲವನ್ನು ಒಳಗೊಳ್ಳುತ್ತದೆ. ಒಟ್ಟು ಅವನ ಜೀವನ ವಿಧಾನವನ್ನು ಅದು ಒಳಗೊಳ್ಳುತ್ತದೆ. ಅವನ ಭಾಷೆ, ಉಡುಪು, ಆಹಾರ, ಮನೆ, ಉಪಕರಣ, ಮತ, ನಂಬಿಕೆ, ಬಳಸುವ ಸಾಮಗ್ರಿಗಳು, ಸಾಮಾಜಿಕ ಸಂಬಂಧಗಳು, ಆಡಳಿತ ಆರ್ಥಿಕ ವಿಧಾನಗಳು ಇವೆಲ್ಲವನ್ನೂ ಸಂಸ್ಕೃತಿ ಪದ ಒಳಗೊಳ್ಳುತ್ತದೆ. ಈ ವಿಶಾಲಾರ್ಥವನ್ನು ನಾವು ಭಾರತೀಯ ಸಂಸ್ಕೃತಿ, ಈಜಿಪ್ಟ್ ಸಂಸ್ಕೃತಿ, ಚೀನಾ ಸಂಸ್ಕೃತಿ ಹೀಗೆ ದೇಶ ಅಥವಾ ಜನರಿಗೆ ಸಂಬಂಧಿಸಿದಂತೆ ಬಳಸುವ ಪದಗಳಲ್ಲಿ ಕಾಣುತ್ತೇವೆ. ಒಂದು ಜನರ ಜೀವನ ವಿಧಾನದ ಉತ್ತಮಾಂಶಗಳನ್ನು ಮಾತ್ರ ಸಂಸ್ಕೃತಿ ಹೇಳುವುದಿಲ್ಲ, ಒಟ್ಟು ಅವರ ಜೀವನ ವಿಧಾನವನ್ನೇ ಹೇಳುತ್ತದೆ.

ಈ ಹಿನ್ನೆಲೆಯಲ್ಲಿ ನೋಡಿದಾಗ, ಒಂದೊಂದು ಊರು ಮನೆಯೂ ಸಂಸ್ಕೃತಿಯ ಕೇಂದ್ರವಾಗುತ್ತದೆ. ಸೈದ್ಧಾಂತಿಕವಾಗಿ ಈ ಮಾತು ನಿಜ. ಆದರೆ, ಸಮಾಜದ ನಡಾವಳಿಗಳನ್ನೂ ನಂಬಿಕೆಗಳನ್ನೂ ಮೌಲ್ಯಗಳನ್ನೂ ರೂಪಿಸುವ, ನಿಯಂತ್ರಿಸುವ, ಮಾರ್ಪಡಿಸುವ, ಅವುಗಳಿಗೆ ಕೆಲವೊಮ್ಮೆ ತಡೆಯೊಡ್ಡುವ, ಅವು ಹರಿಯಲು ಕಾಲುವೆಗಳನ್ನು ತೋಡುವ ಶಕ್ತಿಗಳು ಕೆಲವಿರುತ್ತದೆ. ಇವು ಸಮಾಜದ ಸೂತ್ರಗಳನ್ನು ಹಿಡಿದಿರುತ್ತವೆ. ಉದಾಹರಣೆಗೆ, ಸರ್ಕಾರ ಮತ್ತು ಮತ; ಒಂದು, ಕಾನೂನುಗಳ ಮೂಲಕ ಜನರ ಭೌತಿಕ ಜೀವನವನ್ನು ನಿಯಂತ್ರಿಸಿದರೆ, ಇನ್ನೊಂದು, ಇನ್ನೊಂದು ರೀತಿಯಲ್ಲಿ ಅವರ ಆಧ್ಯಾತ್ಮಿಕ ಜೀವನವನ್ನು ರೂಪಿಸುತ್ತದೆ. (ನಾನು ಅವನ್ನು ಉದಾಹರಣೆಗಾಗಿ ಕೊಟ್ಟಿದ್ದೇನೆಯೇ ಹೊರತು ಅವು ಮಾತ್ರ ನಿಯಂತ್ರಕ ಶಕ್ತಿಗಳೆಂದು ಭಾವಿಸಬಾರದು.) ಇಂತಹ ನಿಯಂತ್ರಕ ಕೇಂದ್ರವೊಂದು ಒಂದು ಪ್ರದೇಶದಲ್ಲಿ ಕಾಣಿಸಿಕೊಳ್ಳಬಹುದು. ಆ ಕೇಂದ್ರ ಆ ಪ್ರದೇಶದ ಸಾಂಸ್ಕೃತಿಕ ಜೀವನದ ಮುಖ್ಯ ಭಾಗವಾಗುತ್ತದೆ. ಅದು ಸಾಂಸ್ಕೃತಿಕ ಶಕ್ತಿಗಳು ಒಟ್ಟುಗೂಡುವ ಒಂದು ಬಿಂದುವಾಗುವುದು ಮಾತ್ರವಲ್ಲದೆ ಅವು ಪ್ರಸಾರ ಹೊಂದುವ ಕೇಂದ್ರವೂ ಆಗುತ್ತದೆ. ಅಲ್ಲಿ ಆ ಪ್ರದೇಶದ ಜೀವನ ವಿಧಾನ–ಅರ್ಥಾತ್ 'ಸಂಸ್ಕೃತಿ'–ತನ್ನೆಲ್ಲ ವೈವಿಧ್ಯ, ವಿಕೃತಿ ಪ್ರಕೃತಿಗಳೊಡನೆ ಗಾಢವಾಗಿ ಪ್ರಕರ್ಷವಾಗಿ ವ್ಯಕ್ತಗೊಳ್ಳುತ್ತದೆ. ಆ ಜನರ ಆಲೋಚನೆ ಮತ್ತು ಕಲಾಪ್ರೇಮಗಳು ದಾರ್ಶನಿಕರ ಮತ್ತು ಕಲಾವಿದರ ಮೂಲಕ ಆ ಕೇಂದ್ರಗಳಲ್ಲಿ ಪ್ರಕಟವಾಗುತ್ತವೆ. ಹೀಗಾಗಿ ಆ ಇಡೀ ಪ್ರದೇಶ ಆ ಕೇಂದ್ರದತ್ತ ಮುಖಮಾಡಿ ನಿಂತಿರುತ್ತದೆ. ಆ ಕೇಂದ್ರದಲ್ಲಿ ಆಡುವ ಉಪಭಾಷೆ ಆ ಪ್ರದೇಶದ ಶಿಷ್ಟ ಭಾಷೆಯೆನ್ನಿಸಿಕೊಳ್ಳುತ್ತದೆ. ಅಲ್ಲಿಯ ಫ್ಯಾಷನ್ನನ್ನು ಆ ಪ್ರದೇಶದ ನಡವಳಿಕೆಯನ್ನು ನಿಯಂತ್ರಿಸುತ್ತಿರುತ್ತದೆ. ಸುತ್ತಮುತ್ತಣ ಜನರ ಜೀವನ ವಿಧಾನದಿಂದ ಆ ಕೇಂದ್ರದ ಜೀವನವೂ ಮಾರ್ಪಾಟಾಗುತ್ತಿರುತ್ತದೆ. ಈ ಪ್ರಭಾವ ಒಂದು ರೀತಿಯಲ್ಲಿ ಪರಸ್ಪರವಾದರೂ, ತೌಲನಿಕ ದೃಷ್ಟಿಯಿಂದ ಹೇಳುವುದಾದರೆ ಪರಿಸರ ಪ್ರದೇಶದ ಪ್ರಭಾವವು ಸಾಂಸ್ಕೃತಿಕ ಕೇಂದ್ರದ ಮೇಲೆ ಕಡಮೆಯಾಗಿರುತ್ತದೆ.

ಈ ವಿವರಣೆಯನ್ನು ತೀರ ಕರಾರುವಾಕಾಗಿ ಪರೀಕ್ಷಿಸಿದಾಗ ಇದರಲ್ಲಿ ಅನೇಕ ಲೋಪಗಳು ಇರುವುದನ್ನು ಸುಲಭವಾಗಿ ಗುರುತಿಸಬಹುದು. ಮತ್ತು ನಾನು ಅನುಕೂಲಕ್ಕಾಗಿ ಸಂಗತಿಗಳನ್ನು ಸರಳಗೊಳಿಸಿದ್ದೇನೆ ಎನ್ನುವುದೂ ಸ್ಪಷ್ಟವಾಗಿದೆ. ಆದರೆ ಒಟ್ಟಾರೆ ಈ ವಿವರಣೆ ನಿಜವಾಗಿರುತ್ತದೆ. ಈ ಸಂಗತಿಯನ್ನು ಅದರ ಸಮಸ್ತ ಓರೆಕೋರೆಗಳೊಡನೆ ಚರ್ಚಿಸಲು ಇದು ಜಾಗ ಅಲ್ಲವೇ ಅಲ್ಲ. ಮತ್ತು ನಾನು ಪ್ರಾಚೀನ ಕರ್ನಾಟಕದ

ಸಾಂಸ್ಕೃತಿಕ ಕೇಂದ್ರಗಳ ವಿಷಯವನ್ನು ಪ್ರಸ್ತಾಪಿಸಿದ್ದರೂ ಇಲ್ಲಿ ನಾನು ಹೇಳುವ ಸಂಗತಿ ಹೆಚ್ಚು ಕಡಿಮೆ ಎಲ್ಲ ಕಾಲಕ್ಕೂ, ನಮ್ಮ ಈಗಿನ ಕಾಲಕ್ಕೂ, ಹೊಂದುತ್ತದೆ. ಅದನ್ನು ವಿಸ್ತರಿಸಲು ಇದು ಜಾಗವಲ್ಲದಿದ್ದರೂ ಈ ಪ್ರಬಂಧವನ್ನು ಕೇಳುವವರು ಅದನ್ನೂ ಗಮನಿಸಬೇಕೆಂದು ಇಲ್ಲಿ ಸೂಚಿಸುತ್ತೇನೆ.

ಸಂಸ್ಕೃತಿ ಕೇಂದ್ರವೊಂದು ರೂಪಿತವಾಗಲು ಪರಸ್ಪರವಾಗಿ ಸಂಬಂಧಿಸಿದ ಅನೇಕ ಅಂಶಗಳು ಕೆಲಸ ಮಾಡಿರುತ್ತವೆ. ಅವುಗಳಲ್ಲಿ ಬಹು ಮುಖ್ಯವಾದ ಕೆಲವನ್ನು ನೋಡೋಣ.

ದೊಡ್ಡ ಸಂಸ್ಕೃತಿಗಳೆಲ್ಲ ಹುಟ್ಟಿ ಬೆಳೆದಿರುವುದು ನದಿಯ ತೀರಗಳಲ್ಲಿ; ಮಾನವನಿಗೆ ಬೇಕಾದ ನೀರು ಮತ್ತು ಆಹಾರ ಉಪಕರಣಗಳಿಗೆ ಬೇಕಾದ ಕಲ್ಲುಗಳು, ಬೇಟೆಯ ಪ್ರಾಣಿಗಳು ಇವೆಲ್ಲ ಅವನಿಗೆ ಹೆಚ್ಚು ಶ್ರಮವಿಲ್ಲದೆ ನದಿಯ ತೀರದಲ್ಲಿ ದೊರಕುತ್ತವೆ. ದುರ್ಗಮವಾದ ಪ್ರದೇಶವು ಜನರಿಗೆ ರಕ್ಷಣೆಯನ್ನು ನೀಡುವುದರಿಂದ ಅಲ್ಲಿ ಹೆಚ್ಚು ಜನವಸತಿಯಾಗಿ ಕ್ರಮೇಣ ಅದೊಂದು ಸಾಂಸ್ಕೃತಿಕ ಕೇಂದ್ರವಾಗಿ ಅರಳಬಹುದು ಅಥವಾ ವ್ಯಾಪಾರ ಮಾರ್ಗಗಳ ಸಂಗಮವು ಸಂಸ್ಕೃತಿ ಕೇಂದ್ರವಾಗಬಹುದು. ಆದ್ದರಿಂದ ಯಾವುದೇ ಸಂಸ್ಕೃತಿಯ ಅಧ್ಯಯನದಲ್ಲಿ ಭೌಗೋಳಿಕ ಪರಿಸರವನ್ನು ಗಮನಿಸುವುದು ಅತ್ಯಂತ ಅಗತ್ಯವಾಗುತ್ತದೆ. ಏಕೆಂದರೆ ಮನುಷ್ಯನಿಗೆ ಮೂಲತಃ ಬೇಕಾದ್ದು ಆಹಾರ ಮತ್ತು ರಕ್ಷಣೆ. ಬನವಾಸಿ ಕಾಡಿನ ಮಧ್ಯೆ ಇದ್ದು, ಮೂರು ಕಡೆಗಳಲ್ಲಿ ವರದಾ ನದಿಯಿಂದ ಆವೃತವಾಗಿದ್ದಿತು. ಹೀಗೆ ಬಹು ಹಿಂದಿನಿಂದ ಜನವಸತಿಯ ಬೀಡಾಗಿದ್ದು ಅಶೋಕನ ಕಾಲದಲ್ಲಿ ಕರ್ನಾಟಕದ ಪ್ರಮುಖ ಸ್ಥಳವೆನ್ನಿಸಿಕೊಂಡ ದುರ್ಗಮ ಬನವಾಸಿಯನ್ನು ತಾಳಗುಂದದ ಕದಂಬರು ತಮ್ಮ ರಾಜಧಾನಿಯಾಗಿ ಮಾಡಿಕೊಂಡದ್ದರಲ್ಲಿ ಆಶ್ಚರ್ಯವೇನೂ ಕಾಣದು. ಚಾಲುಕ್ಯರು ಬಾದಾಮಿಯನ್ನು ರಾಜಧಾನಿಯಾಗಿ ಮಾಡಿಕೊಳ್ಳಲು ಅಂತಹುದೇ ಕಾರಣಗಳಿವೆ. ಸಮೀಪದಲ್ಲೇ ನದಿ ಉಂಟು. ಅದಕ್ಕಿಂತ ಹೆಚ್ಚಾಗಿ ಎತ್ತರಕ್ಕೆ ಎದ್ದಿರುವ ಬಂಡೆಗಳಿರುವ ಬೆಟ್ಟಗಳಿವೆ. ಅಂತಹ ಒಂದು ಬೆಟ್ಟದ ಪ್ರದೇಶದಲ್ಲಿ ಬಂಡೆಗಳ ಮಧ್ಯೆ ಇರುವ ಕಿಂಡಿಗಳನ್ನು ಮುಚ್ಚಿ ಒಂದು ದುರ್ಗಮವಾದ ಕೋಟೆಯನ್ನು ಕಟ್ಟಲು ಸಾಧ್ಯವಿದ್ದಿತು. ಕ್ರಿ.ಶ. ೫೪೩ರ ಶಾಸನವು ಮೊದಲನೆಯ ಪುಲಿಕೇಶಿಯು ಅಂತಹ ಕೋಟೆ ಕಟ್ಟಿಸಿದ ವಿಷಯವನ್ನು ಹೇಳುತ್ತದೆ. ಹಂಪೆ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಲು ಹೀಗೆಯೇ ಅದರ ದುರ್ಗಮ, ಗುಣ, ಆಯಕಟ್ಟು ಪ್ರಮುಖ ಕಾರಣ.

ಶ್ರವಣಬೆಳ್ಗೊಳ ಪ್ರಮುಖವಾಗಿ ಒಂದು ಜೈನ ಧಾರ್ಮಿಕ ಕೇಂದ್ರವಾಗಲು ಅದರ ಭೌತಿಕ ಲಕ್ಷಣ ಕಾರಣವಾಗಿರುವುದರ ಜೊತೆಗೆ ಒಂದು ಆಕಸ್ಮಿಕ ಕಾರಣವೂ ಉಂಟು. ಕ್ರಿಸ್ತಪೂರ್ವದಲ್ಲಿ ಉತ್ತರದಿಂದ ಬಂದ ಜೈನ ಮುನಿಗಳಿಗೆ ತಮ್ಮ ತಪಸ್ಸಿಗೆ ಅನುಕೂಲಕರವಾದ ಚಿಕ್ಕ ಬೆಟ್ಟ ಅಲ್ಲಿ ದೊರಕಿತು. ಸುತ್ತ ಅಷ್ಟು ದಟ್ಟ ಜನ ವಸತಿ ಇರಲಿಲ್ಲ. ನೀರಿನ ಆಸರೆಯಿತ್ತು. ಬೌದ್ಧ ಮುನಿಗಳಂತೆ ಜೈನ ಮುನಿಗಳೂ ಮೊದ ಮೊದಲು ಗುಡ್ಡಗಳನ್ನು ತಮ್ಮ ತಂಗುದಾಣಗಳನ್ನಾಗಿ ಮಾಡಿಕೊಂಡರು. ಹೀಗಾಗಿ ಚಿಕ್ಕ ಬೆಟ್ಟ ಅವರಿಗೆ ಆಶ್ರಯ ನೀಡಿತು. ಅಲ್ಲಿರುವಾಗ ಭದ್ರಬಾಹು ಮುನಿಗೆ ಅವಸಾನ ಕಾಲ ಒದಗಿದ್ದೂ ಒಂದು ಆಕಸ್ಮಿಕವೇ. ಇಲ್ಲದಿದ್ದರೆ ಅದು ಉತ್ತರದಿಂದ ಬಂದ ಜೈನ ಮುನಿಗಳ ತಾತ್ಕಾಲಿಕ ತಂಗುದಾಣವಾಗಿ ಪರಿಣಮಿಸಿ ಮುಂದೆ ಅಜ್ಞಾತ ಪ್ರದೇಶವಾಗಿ ಉಳಿಯುತ್ತಿತ್ತೋ ಏನೋ!

ಬಾದಾಮಿ ಹಂಪೆಗಳ ಬಗ್ಗೆ ಮಾತನಾಡುವಾಗ ಅವು ರಾಜಧಾನಿಯಾಗಿದ್ದುದನ್ನು ಕುರಿತು ಪ್ರಸ್ತಾಪಿಸಿದೆ. ಒಂದು ಸ್ಥಳಕ್ಕೆ ಸಾಂಸ್ಕೃತಿಕ ಮಹತ್ವ ಬರಬೇಕಾದರೆ ಅದಕ್ಕೆ ಒಂದಲ್ಲ ಒಂದು ರೀತಿಯ ರಾಜಕೀಯ ಆರ್ಥಿಕ ಬೆಂಬಲ ಅತ್ಯಗತ್ಯವಾಗುತ್ತದೆ. ಇಂದಿನಂತೆಯೇ ಎಲ್ಲ ಕಾಲದಲ್ಲೂ ರಾಜಕೀಯ ಎಂಬುದು ಬಹುಮುಖ್ಯ ಶಕ್ತಿ. ರಾಜಕೀಯ ಎಂಬುದು ಅಧಿಕಾರ, ಹಣಗಳ ಸಂಚಯನ. ಒಂದು ಊರು ರಾಜಧಾನಿಯಾಯಿತೆಂದರೆ ಉದ್ಯೋಗದ ಅವಕಾಶಗಳು ಅಲ್ಲಿ ಹೆಚ್ಚುತ್ತವೆ. ಅಲ್ಲಿಗೆ ಉದ್ಯೋಗಾರ್ಥಿಗಳು ಹೋಗುತ್ತಾರೆ ಅಥವಾ ಅಲ್ಲಿಯವರು ಅವರನ್ನು ಬರಮಾಡಿಕೊಳ್ಳುತ್ತಾರೆ. ವ್ಯಾಪಾರ ಅಭಿವೃದ್ಧಿಗೊಳ್ಳುತ್ತದೆ. ಜನಸಂಖ್ಯೆ ಹೆಚ್ಚುತ್ತದೆ. ಹಣ ಓಡಾಡುವುದರಿಂದ ಆಶ್ರಯವನ್ನು ಬೇಡಿ ಅಥವಾ ನಿರೀಕ್ಷಿಸಿ ಅಥವಾ ಉದ್ಯೋಗವನ್ನು ಹುಡುಕಿಕೊಂಡು ಕರ್ಮಕುಶಲಿಗಳು, ಕವಿಗಳು, ಕಲಾವಿದರು ಬರುತ್ತಾರೆ. ಅಲ್ಲಿ ದೇವಾಲಯಗಳು ಮೇಲೇಳುತ್ತವೆ. ಜನ ಆ ಊರಿಗೆ ಬೇರೆ ಬೇರೆ ಕಾರಣಗಳಿಗಾಗಿ ಬರುತ್ತಾರೆ. ಅವರ ಅಗತ್ಯಗಳನ್ನು ಪೂರೈಸಲು ವ್ಯಾಪಾರ ಬೆಳೆಯುತ್ತದೆ. ಬೇರೆ ದೇಶಗಳ ಪ್ರತಿನಿಧಿಗಳು ಬಂದು ಹೋಗುತ್ತಾರೆ. ಆ ಊರಿನ ಜನಕ್ಕೆ ಹೊರನಾಡುಗಳ ಪರಿಚಯವಾಗುತ್ತದೆ.

ವಿದ್ಯಾಕೇಂದ್ರಗಳು ವಿದ್ವಾಂಸರು ಹೆಚ್ಚಾಗುತ್ತಾರೆ. ಏಕೆಂದರೆ ರಾಜಕುಮಾರರ ಮಂತ್ರಿಕುಮಾರರ ಮತ್ತು ಇತರ ಅಧಿಕಾರಿಗಳ ಮಕ್ಕಳನ್ನು ಶಿಕ್ಷಿತರನ್ನಾಗಿ ಮಾಡಬೇಕು. ಆ ಊರು ದೇಶದ ಬುದ್ಧಿವಂತರನ್ನೂ ಕುಶಲರನ್ನೂ ಯೋಧರನ್ನೂ ತನ್ನೆಡೆಗೆ ಎಳೆಯುವ ಸೂಜಿಗಲ್ಲಾಗುತ್ತದೆ. ಊರು ಪಟ್ಟಣವಾಗಿ ದೊಡ್ಡ ನಗರವಾಗಿ ನಾಗರಿಕತೆಗೆ ಅದು ತವರೂರಾಗುತ್ತದೆ. (ಹಂಪೆ ಎಂತಹ ವ್ಯಾಪಾರದ, ಕುಶಲಕಲೆಗಳ ಕೇಂದ್ರವಾಗಿತ್ತೆಂಬುದನ್ನು ಪ್ರವಾಸಿಗಳ ಬರಹಗಳು ವರ್ಣಿಸುತ್ತವೆ.) ದೇಶದ ಅತ್ಯುತ್ತಮ ಮಂದಿರಗಳು ರಾಜಧಾನಿ ಅಥವಾ ಅದರ ಸಮೀಪದಲ್ಲಿ ಏಳುತ್ತವೆ. (ಬಾದಾಮಿಗೆ ಸಮೀಪದ ಐಹೊಳೆ ಪಟ್ಟದಕಲ್ಲುಗಳಲ್ಲಿ ಅಷ್ಟು ಸೊಗಸಾದ ಅಷ್ಟು ಸಂಖ್ಯೆಯ ದೇವಾಲಯಗಳು ಮೇಲೆದ್ದುದಕ್ಕೆ ಒಂದು ಪ್ರಮುಖ ಕಾರಣ ಅವು ರಾಜಧಾನಿಗೆ ಸಮೀಪವಾಗಿದ್ದುದು.)

ಭಾಷೆ ಮತ್ತು ಅದರ ಅಭಿವ್ಯಕ್ತಿಯಾದ ಸಾಹಿತ್ಯದ ಮೇಲೆ ಸಾಂಸ್ಕೃತಿಕ ಕೇಂದ್ರಗಳ ಪ್ರಭಾವ ಅಪರಿಮಿತ. ಬಾದಾಮಿ ಚಾಲುಕ್ಯರ ರಾಜಧಾನಿಯ ಸುತ್ತ ಮುತ್ತಣ ಪ್ರದೇಶದ ಕನ್ನಡ ಒಂದೂವರೆ ಸಾವಿರ ವರ್ಷಗಳ ಹಿಂದಿನ ಶಿಷ್ಟ ಭಾಷೆಯ ಪ್ರದೇಶವೆನ್ನಿಸಿಕೊಂಡಿತ್ತು. ಅರಮನೆಯವರು, ಮಂತ್ರಿಗಳು, ಇತರ ಉನ್ನತ ಅಧಿಕಾರಿಗಳು ಆಡುವ ಭಾಷೆಗೆ ಪ್ರಾಶಸ್ತ್ಯ ಬರುವುದರಲ್ಲಿ ಆಶ್ಚರ್ಯವೇನೂ ಕಾಣದು. ಕಿಸುವೊಳಲ್ (ಈಗಿನ ಪಟ್ಟದಕಲ್ಲು), ಪುಲಿಗೆರೆ (ಈಗಿನ ಲಕ್ಷ್ಮೇಶ್ವರ), ಕೊಪ್ಪಳ, ಒಂಕುಂದಗಳ ನಡುವಣ ಕನ್ನಡವೇ ಉತ್ಕೃಷ್ಟವೆಂದು ಒಂಬತ್ತು ಹತ್ತನೇ ಶತಮಾನಗಳ ಶ್ರೀವಿಜಯ, ಪಂಪ ಮತ್ತು ಅದೇ ಕಾಲದ ರನ್ನನು ಹೇಳಿದ್ದರೂ, ಆ ಭಾಗದ ಕನ್ನಡಕ್ಕೆ ಪ್ರಾಶಸ್ತ್ಯ ಬರಲು ಕಾರಣ ಬಾದಾಮಿ ಚಕ್ರವರ್ತಿಗಳೇ. ಬಾದಾಮಿ ಚಾಲುಕ್ಯರ ಕಾಲದಲ್ಲಿ ಕನ್ನಡ ಸಾಹಿತ್ಯ ಆರಂಭವಾದುದರಿಂದ ಮತ್ತು ಸಾಹಿತ್ಯ ಭಾಷೆಯಾಗಿ ಬಾದಾಮಿ ಪ್ರದೇಶದ ಕನ್ನಡ ಬಳಕೆಯಾದುದರಿಂದ ಮುಂದೆ ರಾಷ್ಟ್ರಕೂಟರ ಕಾಲದಲ್ಲೂ ಕವಿಗಳು ಆ ಮೊದಲ ಕವಿಗಳ ಅಥವಾ ಆ 'ಚಿರಂತನಾಚಾರ್ಯರ್ಕಳ' ಭಾಷೆಯನ್ನೇ ಬಳಸುತ್ತ ಹೋದರು.

ಬಳ್ಳಿಗಾವೆ ಒಂದು ಸಾಂಸ್ಕೃತಿಕ ಕೇಂದ್ರವಾಗಿ ಪರಿಣಮಿಸಲು ಕಾರಣ ಮೂಲತಃ ರಾಜಕೀಯವೇ. ಅದು ಕಲ್ಯಾಣ ಚಾಲುಕ್ಯರ ರಾಜಧಾನಿಗೆ ದೂರವಿದ್ದರೂ, ಅವರ ಸಾಮ್ರಾಜ್ಯದ ಭಾಗವೇ ಆಗಿದ್ದ ಬನವಸೆ ಪನ್ನಿಚ್ಛಾಸಿರದ ರಾಜಧಾನಿಯಾಗಿ ಅದು ಎರಡು ಶತಮಾನ ಮೆರೆಯಿತು. ಬನವಾಸಿಯ ಸತ್ವ ಇಂಗಿದ ಮೇಲೆ ಅದರ ಪಕ್ಕದಲ್ಲೇ ಇದ್ದ ಬಳ್ಳಿಗಾವೆ ಚಿಗುರಿರುವುದನ್ನು ನೋಡಿದರೆ, ಒಂದು ಸಾಂಸ್ಕೃತಿಕ ಕೇಂದ್ರ ಇಳಿಮುಖವಾದರೂ ಅದು ಇನ್ನೆಲ್ಲೋ ಇನ್ಯಾವುದೋ ರೂಪದಲ್ಲಿ ತಲೆಯೆತ್ತುತ್ತದೆ ಎಂಬ ಮಾತನ್ನು ಹೇಳಬೇಕೆಂದು ಮನಸ್ಸಾಗುತ್ತದೆ. ಸಂಸ್ಕೃತಿಯಲ್ಲಿ 'ನಾಶ'ವೆಂಬುದಿಲ್ಲ, ಅಲ್ಲಿರುವುದು ರೂಪಾಂತರ.

ರಾಜಧಾನಿಯು ವ್ಯಾಪಾರದ ಕೇಂದ್ರವೂ ಆಗುವುದನ್ನು ಹಿಂದೆ ನೋಡಿದ್ದೇವೆ. ಐಹೊಳೆಯಲ್ಲಿ ಒಂದು ಸುಪ್ರಸಿದ್ಧ ವ್ಯಾಪಾರ ಶ್ರೇಣಿಯ (guid) ಕೇಂದ್ರ ಕಚೇರಿಯಿದ್ದಿತು. 'ಅಯ್ಯಾವೊಳೆ ಐನೂರ್ವರು' ಎಂಬ ಹೆಸರಿನ ಆ ಸಂಸ್ಥೆಯ ಶಾಖೋಪಶಾಖೆಗಳು ದಕ್ಷಿಣ ಭಾರತದಲ್ಲೆಲ್ಲ ಹರಡಿದ್ದುವೆಂಬುದಕ್ಕೆ ನೂರಾರು ಶಾಸನಗಳು ಸಾಕ್ಷಿಗೊಡುತ್ತವೆ. ಲಕ್ಕುಂಡಿಯು ರಾಜಧಾನಿಯಲ್ಲದಿದ್ದರೂ ಇನ್ನೊಂದು ಅಂತಹ ವ್ಯಾಪಾರ ಕೇಂದ್ರವಾಗಿತ್ತು. ಇಂದ್ರನ ಅಮರಾವತಿಯನ್ನೂ ಲಕ್ಕುಂಡಿಯನ್ನೂ ತೂಗಿದಾಗ ಹೆಚ್ಚು ಸಂಪದ್ಭರಿತವಾದ ಲಕ್ಕುಂಡಿಯಿದ್ದ ತಟ್ಟೆ ಭೂಮಿಗಿಳಿದು ಅಮರಾವತಿ ಮೇಲೇರಿತೆಂದು ಚಮತ್ಕಾರದಿಂದ ಒಂದು ಶಾಸನ ವರ್ಣಿಸುತ್ತದೆ. ಅಲ್ಲಿಯ ಫಲವತ್ತಾದ ಕರಿಯ ಮಣ್ಣಿನ ಭೂಮಿ ಚಿನ್ನದ ಪೈರನ್ನು ಬೆಳೆಯಬಲ್ಲುದು; ಲಕ್ಕುಂಡಿ ವ್ಯಾಪಾರ ಕೇಂದ್ರವಾಗಲು ಅದೂ ಒಂದು ಕಾರಣ. 'ಪಟ್ಟಣಂಗಳ ತವರ್ಮನೆ' ಎಂದು ಹೊಗಳಿಸಿಕೊಂಡಿರುವ ಬಳ್ಳಿಗಾವೆಯ ವರ್ತಕ ಸಂಘದ ಅಧ್ಯಕ್ಷರ ('ಪಟ್ಟಣಸ್ವಾಮಿ') ಹೆಸರುಗಳು ಅನೇಕ ಶಾಸನಗಳಲ್ಲಿವೆ.

ಲಕ್ಕುಂಡಿ ಮೂಲತಃ ಒಂದು ಅಗ್ರಹಾರ. ಇದನ್ನು 'ಅನಾದಿ ಅಗ್ರಹಾರ'ವೆಂದು ಕರೆಯುವ ಶಾಸನಗಳು ಅಲ್ಲಿದ್ದ ಸಾವಿರ ಮಹಾಜನರ ವಿದ್ಯೆಯನ್ನು ಕೀರ್ತಿಸುತ್ತವೆ. ಅಗ್ರಹಾರವಾದ್ದರಿಂದ ಅದೊಂದು ದೊಡ್ಡ ವಿದ್ಯಾಕೇಂದ್ರವೂ ಆಗಿತ್ತು. ನೊಳಂಬರ ರಾಜಧಾನಿ ಹೆಂಜೇರು–ಈಗಿನ ಆಂಧ್ರಪ್ರದೇಶದ ಮಡಕಸಿರಾ ತಾಲ್ಲೂಕಿನ ಹೇಮಾವತಿ–ಒಂದು ವಿದ್ಯಾಕೇಂದ್ರವಾಗಿದ್ದು ಅಲ್ಲೊಂದು ಘಟಿಕಾ ಸ್ಥಾನವಿದ್ದಂತೆ ತಿಳಿದುಬರುತ್ತದೆ. ಬಳ್ಳಿಗಾವೆಯ ಕೋಡಿಯ ಮಠವನ್ನು ಹನ್ನೊಂದನೆಯ ಶತಮಾನದ ಸುಪ್ರಸಿದ್ಧ ವಿದ್ಯಾಕೇಂದ್ರಕ್ಕೆ ಉದಾಹರಣೆಯಾಗಿ ಕೊಡಬಹುದು. ಬೀದರ್‌ನಲ್ಲಿ ಉಳಿದುಕೊಂಡಿರುವ 'ಮದರಸ' ಇಸ್ಲಾಂ ಪರಂಪರೆಯ ವಿದ್ಯಾಭ್ಯಾಸ ಕೇಂದ್ರಕ್ಕೆ ಉದಾಹರಣೆ. ಆದಿಳಿತ,

ವ್ಯಾಪಾರ, ಕಲೆ, ವಿದ್ಯಾಭ್ಯಾಸಗಳು ಹೇಗೆ ಪರಸ್ಪರ ಹೊಂದಿಕೊಂಡಿವೆಯೆಂಬುದಕ್ಕೆ ಮಾತ್ರ ಈ ಉದಾಹರಣೆಗಳನ್ನು ಬಳಸಿಕೊಂಡಿದ್ದೇನೆ

ಧರ್ಮ ಬಹು ಹಿಂದಿನಿಂದಲೂ ಭಾರತೀಯ ಜನಜೀವನದ ಬಹುಮುಖ್ಯ ಪ್ರೇರಕ ಶಕ್ತಿ. ಎಲ್ಲ ಚಟುವಟಿಕೆಗಳೂ ಧರ್ಮದ ಚೌಕಟ್ಟಿನಲ್ಲೇ ನಡೆಯುತ್ತಿದ್ದವು. ಸಾಹಿತ್ಯ, ಸಂಗೀತ, ಚಿತ್ರ, ಶಿಲ್ಪ, ವಾಸ್ತು ಇವೆಲ್ಲವೂ ಧರ್ಮದಿಂದಲೇ ಪ್ರಚೋದಿತವಾಗಿದ್ದುವು. ಅಧಿಕಾರಸ್ಥ ರಾಜರು ಧಾರ್ಮಿಕ ನಾಯಕರನ್ನವಲಂಬಿಸುತ್ತಿದ್ದರು. ಏಕೆಂದರೆ ಆ ಮೂಲಕ ಜನಗಳ ಮನಸ್ಸನ್ನು ಗೆಲ್ಲುವುದು ಸುಲಭ ಮತ್ತು ತಮ್ಮ ಸ್ಥಾನವನ್ನೂ ದೃಢಪಡಿಸಿಕೊಳ್ಳಬಹುದು. ಧಾರ್ಮಿಕ ಕೇಂದ್ರಗಳಿಗೂ ರಾಜರು ಬೇಕಾಗಿತ್ತು. ವೈಯಕ್ತಿಕವಾಗಿ ತೀವ್ರ ಧರ್ಮಪರರಾಗಿದ್ದ ರಾಜರಿಗೆ ಧರ್ಮಶ್ರದ್ಧೆ ಸ್ವಾಭಾವಿಕವಾಗಿರುತ್ತಿತ್ತು. ಹೀಗಾಗಿ ಅನೇಕ ಮಠಗಳು ಬೆಳೆದು. ಅಲ್ಲಿನ ಮುಖ್ಯಸ್ಥರು ರಾಜಪೂಜಿತರಾಗಿರುತ್ತಿದ್ದರು. ರಾಜರು ಏಕ ಪ್ರಕಾರ ಶೈವ, ವೈಷ್ಣವ, ಜೈನ, ಬೌದ್ಧಮತಗಳಿಗೆ ಪ್ರೋತ್ಸಾಹವನ್ನು ಕೊಟ್ಟು ರಾಜ್ಯದಲ್ಲಿ ಶಾಂತಿ ನೆಲೆಸಲು ಶ್ರಮಿಸುತ್ತಿದ್ದರು. ದೇವಾಲಯಗಳು ಮೇಲೇಳುತ್ತಿದ್ದುವು. ಅಧಿಕಾರಿಗಳು, ಶ್ರೀಮಂತರು ದೇವಾಲಯಗಳಿಗೆ ದತ್ತಿಗಳನ್ನು ಕೊಡುವುದರ ಮೂಲಕ ವಿದ್ಯಾಭ್ಯಾಸಕ್ಕೆ ಸಹಾಯಕರಾಗುತ್ತಿದ್ದರು. ಶ್ರವಣಬೆಳ್ಗೊಳ ಜೈನ ಧರ್ಮದಿಂದಾಗಿ, ಬಳ್ಳಿಗಾವೆ ಶೈವ ಧರ್ಮದಿಂದಾಗಿ ಹೇಗೆ ಪ್ರಮುಖ ಸಾಂಸ್ಕೃತಿಕ ಕೇಂದ್ರಗಳಾದವು ಎಂಬುದು ಗಮನಾರ್ಹ. ಹತ್ತನೆಯ ಶತಮಾನದ ಚಾವುಂಡರಾಯನ ಗೊಮ್ಮಟ ವಿಗ್ರಹ ಶ್ರವಣಬೆಳ್ಗೊಳದ ಇತಿಹಾಸಕ್ಕೆ ಮಾನ್ಯತೆಯನ್ನು ತಂದುಕೊಟ್ಟಿತು. ಕಲ್ಯಾಣ ಚಾಲುಕ್ಯರ ಮತ್ತು ಬಳಿಕದ ಕಲಚೂರ್ಯರ ಔದಾರ್ಯದ ನೆರವಿನಿಂದ ಬಳ್ಳಿಗಾವೆಯ ಕೋಡಿಯ ಮಠ ಒಂದು ಪ್ರಬಲ ಕಾಳಾಮುಖ ಕೇಂದ್ರವಾಗಿ ಮೆರೆಯಿತು. ರಾಜರೂ ಶ್ರೀಮಂತರೂ ತಮ್ಮ ಹೆಸರು ಆಚಂದ್ರಾರ್ಕವಾಗುವಂತೆ ಮಾಡಲು ಇದ್ದ ಮಾರ್ಗಗಳು ಎರಡು : ಸುಂದರವೂ ಭವ್ಯವೂ ಆದ ದೇವಾಲಯಗಳನ್ನು ಕಟ್ಟಿಸುವುದು ಮತ್ತು ಕವಿಗಳಿಂದ ಕಾವ್ಯ ಬರೆಯಿಸುವುದು.

ಮೇಲಿನ ಹೇಳಿದ ಕಾರಣಗಳೆಲ್ಲ ಪ್ರತ್ಯೇಕವಾದುವಲ್ಲ; ಒಂದು ಇನ್ನೊಂದರೊಂದಿಗೆ ಬೆರೆತಿರುತ್ತದೆಯೆಂಬುದನ್ನು ಉದ್ದಕ್ಕೂ ತೋರಿಸಲು ಪ್ರಯತ್ನಿಸಿದ್ದೇನೆ.

ಸಂಸ್ಕೃತಿ ಕೇಂದ್ರಗಳ ಕೆಲವು ಸಾಮಾನ್ಯ ಲಕ್ಷಣಗಳು ಇಂತಿರುತ್ತವೆ.

೧. ಅವು ಚಿಕ್ಕ ಹಳ್ಳಿಗಳಲ್ಲ; ಅವು ನಿಶ್ಚಿತವಾಗಿ ದೊಡ್ಡ ಊರುಗಳು ಅಥವಾ ಬಹುತೇಕ ನಗರಗಳು.

೨. ಅಲ್ಲಿಯ ಮಂದಿರಗಳ (monuments) ಸಂಖ್ಯೆ ಗಣನೀಯ ಮತ್ತು ಅವುಗಳ ಗುಣಮಟ್ಟ ಉತ್ತಮದ್ದಾಗಿರುತ್ತದೆ. ಮಂದಿರಗಳ ಸಂಖ್ಯೆ ಅಲ್ಲಿ ನಡೆಯುತ್ತಿದ್ದ ಸಾಮಾಜಿಕ, ಆರ್ಥಿಕ ಚಟುವಟಿಕೆಗಳ ತೀವ್ರತೆಯನ್ನು ಹೇಳಿದರೆ, ಅವುಗಳ ಶಿಲ್ಪ ಮತ್ತು ವಾಸ್ತುಶಿಲ್ಪಗಳ ಗುಣಮಟ್ಟ ಜನರ ಕಲಾಪ್ರಜ್ಞೆಯನ್ನು ಸೂಚಿಸುತ್ತದೆ.

೩. ಶಾಸನಗಳ ಬಾಹುಳ್ಯ : ಇವು ಮೇಲೆ ಹೇಳಿದ ಚಟುವಟಿಕೆಗಳಿಗೆ ಸ್ಪಷ್ಟ ಲಿಖಿತ ಪುರಾವೆಗಳು. ಶ್ರವಣಬೆಳಗೊಳದಂತಹ ಕಡೆ ದೊರಕಿರುವ ಶಾಸನಗಳೇ ಒಂದು ಸ್ವತಂತ್ರ ಸಂಪುಟವಾಗುವಂತಿವೆ. ಬಳ್ಳಿಗಾವೆ ಒಂದೇ ಕಡೆ ಹೆಚ್ಚು ಶಾಸನಗಳಿರುವ ಮತ್ತೊಂದು ಜಾಗ. ಉಳಿದ ಸಾಂಸ್ಕೃತಿಕ ಕೇಂದ್ರಗಳಲ್ಲೂ ಶಾಸನಗಳು ಸಾಕಷ್ಟು ಸಂಖ್ಯೆಯಲ್ಲಿ ದೊರಕುತ್ತವೆ.

೪. ಆ ಸ್ಥಳಗಳ ಹೆಸರು ಸಾಹಿತ್ಯ ಮತ್ತು ಧಾರ್ಮಿಕ ಕೃತಿಗಳಲ್ಲಿ ಎದ್ದು ಕಾಣುವಂತೆ ಬಣ್ಣಿತವಾಗಿರುತ್ತದೆ. ಪರದೇಶ ಪ್ರವಾಸಿಗಳು ಅವನ್ನು ಮಹತ್ವಪೂರ್ಣವೆಂದು ವರ್ಣಿಸಿರುವುದುಂಟು.

೫. ಆ ಸ್ಥಳದೊಡನೆ ಹಲವಾರು ಪ್ರಮುಖ ಹೆಸರುಗಳು ಸಮಾವೇಶಗೊಂಡಿರುತ್ತವೆ. ಕವಿಗಳು, ಧಾರ್ಮಿಕ ಆಚಾರ್ಯರು, ಕಲಾವಿದರು, ವಿದ್ವಾಂಸರು, ಸಾಮಾಜಿಕ ರಾಜಕೀಯ ನಾಯಕರು ಇತ್ಯಾದಿ, ಇತ್ಯಾದಿ.

೬. ಆ ಸ್ಥಳಗಳ ಜನರ ಜೀವನದ ಮಟ್ಟ ಮೇಲ್ಸ್ತರದ್ದಾಗಿರುತ್ತದೆ. ಶಾಸನಗಳು ಇದನ್ನು ತಿಳಿಯಲು ಸಹಾಯಮಾಡುತ್ತವೆ. ಅರವಟ್ಟಿಗೆ, ಸತ್ರಗಳನ್ನು ಊರುಗಳಲ್ಲಿ ಏರ್ಪಡಿಸುತ್ತಿದ್ದ ಸಂಗತಿಗಳು ಶಾಸನಗಳಲ್ಲಿ ಉಕ್ತವಾಗಿವೆ. ಅಂತಹ ಊರುಗಳು ಬೇರೆ ಜನ ಬಂದು ಹೋಗುತ್ತಿದ್ದ ಸ್ಥಳಗಳಾಗಿರುತ್ತಿದ್ದುವು.

> ಅಥವಾ ಅವು ರಾಜಮಾರ್ಗಗಳಲ್ಲಿರುತ್ತಿದ್ದುವು. ಆ ಊರುಗಳಲ್ಲಿ ವರ್ತನ ಶ್ರೇಣಿಗಳು ಇರುತ್ತಿದ್ದು, ಅಲ್ಲಿ ರಭಸದಿಂದ ವ್ಯಾಪಾರ ನಡೆಯುತ್ತಿರುತ್ತದೆ. ನಾನಾ ಕಾರಣಗಳಿಗಾಗಿ ಜನ ಆ ಊರುಗಳಿಗೆ ಬಂದು ಹೋಗುತ್ತಾರೆ. ಜನ ಆ ಊರುಗಳ ಮಠ, ದೇವಾಲಯ, ವಿದ್ವಾಂಸರಿಗೆ ದತ್ತಿಗಳನ್ನು ಬಿಟ್ಟುಕೊಟ್ಟಿರುತ್ತಾರೆ.

ಮೇಲೆ ಹೇಳಿದ ಸಂಗತಿಗಳು ಒಂದು ಸಾಂಸ್ಕೃತಿಕ ಕೇಂದ್ರವನ್ನು ಗುರುತಿಸಲು ಸಹಾಯಕಗಳೇ ಹೊರತು ನಿರ್ಣಾಯಕ ಅಂಶಗಳಲ್ಲ.

ಪ್ರಾಚೀನ ಕರ್ನಾಟಕದ ಸಾಂಸ್ಕೃತಿಕ ಕೇಂದ್ರಗಳನ್ನು ಕುರಿತಂತೆ ಇನ್ನೂ ಹೆಚ್ಚಿನ ಕೆಲಸ ನಡೆಯಬೇಕಾಗಿದೆ. ಹಾಗೆ ನೋಡಿದರೆ ಒಂದೊಂದು ಊರೂ ಒಂದೊಂದು ಪಿಎಚ್.ಡಿ. ನಿಬಂಧದ ವಸ್ತುವಾಗಬಲ್ಲದು. ಶ್ರವಣಬೆಳಗೊಳವನ್ನು ಕುರಿತಂತೆ ಕನ್ನಡದಲ್ಲಿ ಬಂದಿರುವ ಡಾ. ಬಿರಾರ್ ಅವರ ಪಿಎಚ್.ಡಿ. ನಿಬಂಧ ಈ ದೃಷ್ಟಿಯಿಂದ ಗಮನಾರ್ಹವಾದುದು. (ಬಳ್ಳಿಗಾವೆಯ ಬಗ್ಗೆಯೂ ಒಂದು ನಿಬಂಧ ಸಿದ್ಧವಾಗಿರುವಂತೆ ತಿಳಿದು ಬರುತ್ತದೆ.)

ಮೇಲೆ ನೋಡಿದ ಎಲ್ಲ ಕೇಂದ್ರಗಳೂ, ಶ್ರವಣಬೆಳ್ಗೊಳ ಒಂದನ್ನು ಬಿಟ್ಟರೆ, ಎಲ್ಲವೂ ಕ್ರಮೇಣ ಪ್ರಾಮುಖ್ಯತೆಯಲ್ಲಿ ಇಳಿಮುಖವಾಗುತ್ತ ಬಂದುದನ್ನು ನೋಡುತ್ತೇವೆ. ಈ ದಿನ ಅವೆಲ್ಲ ಕೇವಲ ಪ್ರೇಕ್ಷಣೀಯ ಸ್ಥಳಗಳು. ಗತಕಾಲದ ವೈಭವದ ಚಿಂತನೆಯಲ್ಲಿ ಮುದುಡಿ ಕೂತಿರುವ ಜಾಗಗಳು. ಇದಕ್ಕೆ ಕಾರಣಗಳನ್ನು ಹುಡುಕುವುದು ಅಗತ್ಯ. ಬಹುಶಃ ಶ್ರವಣಬೆಳ್ಗೊಳವೊಂದನ್ನು ಬಿಟ್ಟರೆ ಉಳಿದೆಲ್ಲ ಕೇಂದ್ರಗಳ ಬೆನ್ನೆಲುಬು ರಾಜಕೀಯ ಆರ್ಥಿಕವಾಗಿತ್ತು. ರಾಜಕೀಯವೆಂಬುದು ಚದುರಂಗದಾಟವಿದ್ದಂತೆ. ಅದರ ಇಳಿಮುಖದೊಂದಿಗೆ ಆಯಾ ಸ್ಥಳದ ಐತಿಹಾಸಿಕ ಮಹತ್ವವೂ ಕಡಿಮೆಯಾಯ್ತು. ಧರ್ಮವೊಂದೇ ಶ್ರವಣಬೆಳ್ಗೊಳದ ಜೀವಸತ್ವವಾದ್ದರಿಂದ ರಾಜ್ಯಗಳ ಏಳು ಬೀಳುಗಳು ಅದರ ಇತಿಹಾಸದ ಏಳುಗಳನ್ನು ನಿರ್ಧರಿಸಿದರೂ, ಜೀವಸತ್ವವಾಗಿದ್ದ ಧರ್ಮ ಆ ಕೇಂದ್ರದ ನಾಶಕ್ಕೆ ಅವಕಾಶಕೊಡಲಿಲ್ಲ.

ಅನುಬಂಧ - ೨

ಮೇಲೆ ಅನುಬಂಧವಾಗಿ ಕೊಟ್ಟಿರುವ ಭಾಗವು ಒಂದು ರೀತಿಯಲ್ಲಿ ಹಿಂದಿನ ಲೇಖನಕ್ಕೆ ಮೂಲವೂ ಪೋಷಕವೂ ಆಗಿರುವುದರಿಂದ ಉಪನ್ಯಾಸ ರೂಪದ ಆ ಬರಹವನ್ನು ಹಾಗೆಯೇ ಇಲ್ಲಿ ಕೊಟ್ಟಿದೆ. ಮೇಲಿನ ಸಂಪ್ರಬಂಧ ಮತ್ತು ಅನುಬಂಧದ ಬರಹಗಳಲ್ಲಿ ಕೆಲವೆಡೆ ವಿಷಯಗಳ ಪುನರಾವೃತ್ತಿಯಾಗಿದ್ದರೂ ಅವನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ.

❑

ಭರ್ಜರಿಯ ಬಯಲಾಟ

■ ಸಿಂಪಿ ಲಿಂಗಣ್ಣ

ಬಣ್ಣಗಾರರ ಮೇಳದವರು ದಕ್ಷಬ್ರಹ್ಮ-ಬಯಲಾಟವನ್ನು ಆಡಿದ ಬಳಿಕ ಅದನ್ನು ಮರೆಯಿಸುವಂಥ ಯಾವ ಆಟವೂ ಆಗಲಿಲ್ಲವೆಂದೇ ಹೇಳಬೇಕು. ಸರಿಸಮಾನವೆನಿಸುವಂಥ ಸಹ ಆಗಲಿಲ್ಲ. ಆ ಕೆಲಸವನ್ನು ಜೇಡರ ಮೇಳದವರೇ ತೋರಿಸಬೇಕಲ್ಲವೇ? 'ದಕ್ಷಬ್ರಹ್ಮ' ಆಟ ನೋಡಿ ಊರಿಗೆ ಊರೇ ಬೆರಗಾಯಿತು. ನೋಡಬಂದ ಸುತ್ತಿನ ಹತ್ತೆಂಟು ಹಳ್ಳಿಯ ಜನರು ಕೂಡ ಸೈ ಸೈ ಅಂದರು. "ಬಯಲಾಟ ಮಾಡಬೇಕು ಚಡಚಣದವರು" ಅನ್ನುತ್ತ ಇಡಿಯ ಚಡಚಣದವರನ್ನೆಲ್ಲ ಹೊಗಳಿದರೂ ಜೇಡರ ಮೇಳದವರಿಗೆ ಅದರಿಂದ ಸಮಾಧಾನವೇ ಆಗಲಿಲ್ಲ. ದಕ್ಷಬ್ರಹ್ಮ ಬಯಲಾಟದ ಯಶಸ್ಸನ್ನು ಮರೆಸುವದಕ್ಕೆ ಏನು ಮಾಡಬೇಕು? ಯಾವ ಕಥೆ ಕಲಿಯಬೇಕು? ಕಲಿಸುವುದಕ್ಕೆ ಯಾರನ್ನು ಕರೆತರಬೇಕು? ಮನೆಯ ಚಿಂತೆಗಿಂತ ಮೇಳದ ಚಿಂತೆಯನ್ನೇ ಹಚ್ಚಿಕೊಂಡು ನಿದ್ರೆ ನೀರಡಿಕೆಗಳನ್ನು ಲೆಕ್ಕಿಸದೆ ಓಡಾಡುವುದನ್ನು ನೋಡಿದರೆ, ಇವರು ಭರ್ಜರಿಯ ಬಯಲಾಟ ಮಾಡುವುದು ನಿಶ್ಚಯವೆಂದು ಹೇಳಬಹುದು.

ಹರಿಶ್ಚಂದ್ರರಾಯನ ಕಥೆ ಆರಿಸಲಾಯಿತು. ಹರಿಶ್ಚಂದ್ರ, ತಾರಾಮತಿ ಲೋಹಿತಕುಮಾರ ಸೋಗುಗಳನ್ನು ನಿಸ್ತರಿಸಬೇಕೆನ್ನುವುದನ್ನು ಗೊತ್ತುಪಡಿಸಲಾಯಿತು. ಇನ್ನು ಮುಖ್ಯವಾಗಿ ವಿಶ್ವಾಮಿತ್ರನ ಸೋಗು; ಆ ಮೇಲೆ ಮಾತಂಗ ಕನ್ನೆಯರು. ತುಸು ಇಳಿ ವಯಸ್ಸಿನವನಾದರೂ ಭೀಕರವಾಗಿ ಮಾತನಾಡುವ ಕೋತಂಬರಿ ಮೇಲಗಿರಿಯಪ್ಪನೇ ವಿಶ್ವಾಮಿತ್ರನ ಸೋಗು ವಹಿಸಬೇಕೆಂದು ಅವನನ್ನು

ಕೇಳಿಕೊಂಡು ಒಪ್ಪಿಸಿಯೇಬಿಟ್ಟರು. ಮಾತಂಗಿ ಕನ್ನೆಯರ ಸೋಗಿನ ಸಲುವಾಗಿ ನೆರೆ ಹಳ್ಳಿಯಾದ ಬರಡೂರಿನ ದಾಸರ ಹುಡುಗೆಯರನ್ನೇ ತರೋಣವೆಂದು ಮಲಕಣ್ಣನು ಎದೆ ತಟ್ಟಿ ಹೇಳಿದನು.

ಮೇಲಗಿರಿಯಪ್ಪನು ಹುಟ್ಟಾ ರಸಿಕ. ಹಾಡು ಬಾರಿಸುವುದರಲ್ಲಿಯೂ ಸೋಗು ಹಾಕುವುದರಲ್ಲಿಯೂ ಬಲ್ಲಿದನು. ಹೊಸ ಹರೆಯದಲ್ಲಿ ಹೆಣ್ಣು ಸೋಗು ಹಾಕುತ್ತ 'ಭಲೆ ಭಲೆ" ಎನಿಸಿಕೊಂಡವನು. ಆ ಪುಣ್ಯದಿಂದಲೇ ಅವನಿಗೊಂದು ಚಲುವಾದ ಅಂಗವಸ್ತ್ರ ದೊರೆತಿತ್ತು. ಆತನ ಮದುವೆಯೂ ಆಗಿತ್ತು. ಹೆಂಡತಿ ಮೈನೆರೆದು ಮನೆಗೆ ಬಂದ ಮೇಲೆ ಕದನ ಕಾಣಿಸಿಕೊಂಡಿತು. "ಇಬ್ಬರು ಹೆಂಡರ ಕಾಟಕಾಗಿ । ಮಗ್ಗದ ಕುಣಿಯಾಗ ಡೊಗ್ಗಿದೆನಪ್ಪೋ। ಸಾಯಿತೇನ್ರೋ । ಎಪ್ಪಾ । ಸಾಯಿತೇನ್ರೋ"– ಎಂದು ತನ್ನ ದುಃಸ್ಥಿತಿಯನ್ನು ಮೇಲಗಿರಿಯಪ್ಪನು ಹಾಡಿಕೊಳ್ಳುತ್ತಿದ್ದರೂ ಅದರಿಂದ ಮೆತ್ತಗಾದವನಲ್ಲ. ಹೆಂಡತಿಯ ಅಡಿಗೆಯ ಮನೆ ಬೇರೆಯೇ ಇತ್ತು. ಅಂಗವಸ್ತ್ರಕ್ಕೆ ಅಡಿಗೆಯ ಮನೆಯೇ ಇರಲಿಲ್ಲ. ಭೋಜನ ಶಾಲೆ ಮಾತ್ರ ಇತ್ತು. ಅದೇ ಶಯನ ಶಾಲೆಯೂ ಆಗುತ್ತಿತ್ತು. ಇಬ್ಬರಿಗೂ ಕೂಳು ಬಡಿದು ಬೇಸತ್ತು ಹೆಂಡತಿ ತವರು ಮನೆಗೆ ಹೋಗಿದ್ದಳು. ಅಂಗವಸ್ತ್ರದೊಡನೆ ಅನ್ನ ವ್ಯವಹಾರ ನಡೆಯುತ್ತಿರಲಿಲ್ಲ. ಶರೀರ ಸಂಬಂಧವೊಂದೇ ಗಿಟ್ಟಿತ್ತು. ಅದೇ ಸಂದರ್ಭದಲ್ಲಿ ವಿಶ್ವಾಮಿತ್ರನ ಸೋಗು ಕೊರಳಿಗೆ ಬಿತ್ತು.

ಮೇಳದವರ ಸಹಕಾರವೆಂದರೆ ಏನು? ಮೇಲಗಿರೆಪ್ಪನಿಗೆ ಒಬ್ಬರು ತಮ್ಮ ಮನೆಯಲ್ಲಿ ರೊಟ್ಟಿ ಮಾಡಿಸಿ ತಂದುಕೊಟ್ಟಿದ್ದರು. ಇನ್ನೊಬ್ಬರು ಮೊಸರು ಮಜ್ಜಿಗೆ ತಂದು ಕೊಡುತ್ತಿದ್ದರು. ತಾಲೀಮಿಗೆ ಕರೆಯ ಹೋದವರು, ಮೇಲಗಿರೆಪ್ಪನ ಸಲುವಾಗಿ ಅನ್ನ ಕುದಿಸಿಕೊಡುತ್ತಿದ್ದರು. ಚಟನಿ ಕುಟ್ಟಿಕೊಡುತ್ತಿದ್ದರು. ಕಸ ಮುಸುರೆಗಳನ್ನು ಬಳಿದು ಅಡಿಗೆ ಮನೆಯನ್ನು ಸ್ವಚ್ಛಮಾಡಿ ಇಡುತ್ತಿದ್ದರು. ಇಷ್ಟು ಸೌಕರ್ಯ ಒದಗಿಸಿ ಕೊಟ್ಟ ಬಳಿಕ ಆತನು ತಾಲೀಮಿಗೆ ಹೊರಡತಕ್ಕವನು. ಇದೆಲ್ಲ ತಾಲೀಮಿನ ಸೌಕರ್ಯವೇ ಅನ್ನಬೇಕು. ಆದರೆ ಮೇಲಗಿರೆಪ್ಪನ ಉದರನಿರ್ವಾಹದ ಯೋಜನೆ ಏನಿತ್ತು? ಜೇಡರನಾಗಿದ್ದರೂ ಮನೆಯಲ್ಲಿ ಮಗ್ಗ ಇರಲಿಲ್ಲ. ಕೂಲಿ ನೇಯುತ್ತಿದ್ದನು. ಅದರಿಂದ ವಾರಕ್ಕೆ ಎರಡೂಕಾಲು ರೂಪಾಯಿ ದೊರೆಯುತ್ತಿತ್ತು. ಅಷ್ಟರಿಂದ ಅವನ ಮನೆತನಕ್ಕೆ ಬೇಕಾಗುವ ಎಲ್ಲ ಪಡಿಪದಾರ್ಥಗಳೂ ಒದಗುತ್ತಿದ್ದವು.

ಮೇಲಗಿರೆಪ್ಪನು ಮೈ ಕೈ ತುಂಬಿದ ಅಷ್ಟು ಎತ್ತರವಲ್ಲದ ಆಳು. ಅಗಲವಾದ ಹಣೆ ; ಹಣೆಗೊಪ್ಪುವ ಕಣ್ಣುಗಳು. ಅವನನ್ನು ನೋಡಿದರೆ ಗಡ್ಡ ಜೋಳಿಸಿದ ವಿಶ್ವಾಮಿತ್ರನಂತೆಯೇ ತೋರುವನು. ಕುಲದವಳಲ್ಲವಾದರೂ ಮನೆಯಲ್ಲಿ ಮೇನಕೆಯ ಅಕ್ಕರೆ ಸಾಂತ್ವನಗಳಿಂದ ಸೊಗಸಾಗಿಯೇ ಇದ್ದನು. ಶಾಲೆಯಲ್ಲಿ ಎರಡೇ ಪುಸ್ತಕಗಳನ್ನು ಮುಗಿಸಿದ್ದರೂ, ವಿಶ್ವಾಮಿತ್ರನ ಮಾತುಗಳನ್ನು ಅಸ್ಖಲಿತವಾಗಿ ಮಾತಾಡುತ್ತಿದ್ದನು. ಸೋಗಿನ ವಿಶ್ವಾಮಿತ್ರನೆಂದು ಗೊತ್ತಿದ್ದರೂ, ಹರಿಶ್ಚಂದ್ರನಾದವನಿಗೆ ಅವನ ಮಾತು ಕೇಳಿ ಎದೆ ಡವಡವಿಸುವದು. ಕ್ಷಣ ತಡೆದು ತನ್ನೆದುರಿಗೆ ನಿಂತವನು ಮೇಲಗಿರೆಪ್ಪನೆನ್ನುವುದು ಲಕ್ಷ್ಯಕ್ಕೆ ಬಂದಾಗ ಸ್ಥಿರತೆಗೆ ಬರುವನು.

ಮುಮ್ಮೇಳದಲ್ಲಿ ಹಾಡುವುದಕ್ಕೆ ಕಸ್ಸೂರ ಗುರಕಾಂತಪ್ಪನನ್ನು ಹಿಂದೆಹಾಕುವವರು ಯಾರೂ ಇರಲಿಲ್ಲ. ಸಾರಥಿಯಂತೂ ಅಕ್ಕಲ ಪಿತ್ತಲ ಹಿಂದೆ ರಾಗವೆತ್ತಲು ಮಠಪತಿ ದಾನಯ್ಯ ಹೆಸರಾಗಿದ್ದನು. ಅವನ ಏರುದನಿಯು ಒಮ್ಮೊಮ್ಮೆ ಪಿಟೀಲಿನ ಸ್ವರವನ್ನೂ ಹಿಂದೆ ಹಾಕುತ್ತಿತ್ತು. ಪಿಟೀಲು ಬಾರಿಸುವವನು ಯಾರೆಂದು ತಿಳಿದಿರುವಿರಿ? ಹತ್ತು ಹಳ್ಳಿಗೆ ಹೆಸರಾದ ಘೂಳಪೇಡದ ದೊಡ್ಡಯ್ಯ. ಮದ್ದಲಿ ಬಾರಿಸುವ ಕೆಲಸವು ಹಾಪಿನಾಳದ ಗುನ್ನಯ್ಯನದು.

ಪರಿಶ್ರಮದ ಬಯಲಾಟದ ತಾಲೀಮು ಒಂದಲ್ಲ, ಎರಡಲ್ಲ, ನಾಲ್ಕು ತಿಂಗಳು ಸಾಗಿತು. ಆಡಿ ಆಡಿ ಹೆಜ್ಜೆ ಕುಳಿತವು; ನುಡಿದು ನುಡಿದು ಕೇಳಿ ಕೇಳಿ ಸೋಗಿನವರಿಗೆಲ್ಲ ಇಡಿಯ ಬಯಲಾಟವೇ ಮುಖೋದ್ಗತವಾಯಿತು. ದೀವಳಗಿಗೆ ಆಡಬೇಕೆಂದರೂ ಅದೇಕೋ ಛಟ್ಟಿ-ಎಳ್ಳ ಅಮಾಸಿಗಳನ್ನು ದಾಟಿ ಅವರಾತ್ರಿ ಅಮಾಸಿಯವರೆಗೆ ಮುಂದರಿಯಿತು. ಆಗ ನಮ್ಮೂರಿನಲ್ಲಿ ಸಂಗಮೇಶ್ವರ ಜಾತ್ರೆ. ಅವರಾತ್ರಿ ಅಮಾಸಿಗೆ ಅವರೆಕಾಳಿನಷ್ಟು ಬಿಸಿಲು ಬಲಿತಿದ್ದರೂ, ಅರ್ಧರಾತ್ರಿ ಕಳೆದ ಬಳಿಕ ಮೂಡಲ ಗಾಳಿಯು ತಪ್ಪದೆ ಬೀಸುತ್ತಿತ್ತು. ಬರಿಮೈಯಲ್ಲಿದ್ದು ಚಳಿಯನ್ನು ತಡಕೊಳ್ಳಬಹುದಾಗಿತ್ತಲ್ಲದೆ, ಅರಿವೆ ತೊಟ್ಟು ನಿಂತರೆ ನೀರು ಬರಕಿದಂತಾಗುತ್ತಿತ್ತು.

ಬಂಡಿಯ ಆರು ಗಾಲಿಗಳನ್ನು ಎದುರು ಬದುರು ಅರ್ಧಹೂಳಿ, ಚೌಧಾರಿ ತೊಲೆಗಳನ್ನು ಮೂರು ತಂದು ಅಡ್ಡಸೇರಿಸಿ, ಮೇಲೆ ಬೇವಿನ ಹಲಗೆಗಳನ್ನು ಹರಹಿ, ಅಡ್ಡಗಲವಾದ ರಂಗಭೂಮಿಯನ್ನು ಸಿದ್ಧಪಡಿಸಿದರು. ಅಡ್ಡಲಾಗಿ ನಡುವೆ ಮೂರು ಕಮಾನುಗಳನ್ನು ಏರ್ಪಡಿಸಿ, ಮುಂಭಾಗವನ್ನು ಅಭಿನಯಿಸುವದಕ್ಕೂ, ಹಿಂಭಾಗವನ್ನು ಮುಮ್ಮೇಳ ಹಿಮ್ಮೇಳದವರು ನಿಂತು ಹಾಡುವದಕ್ಕೂ, ಬಣ್ಣ ಬಳಿದುಕೊಂಡು ಸಿದ್ಧರಾದ ಸೋಗಿನವರು ನಿಲ್ಲುವದಕ್ಕೂ ಎರಡು ಗಾಣದ ಕಣೆಗಳನ್ನು ಹೂಲಿ, ಮೇಲಿನ ಹಂಚಿನಲ್ಲಿ ಚಿಮಣಿಯೆಣ್ಣೆ ತೊಯಿಸಿದ ಕುಳ್ಳುಗಳನ್ನು ಉರಿದು ಬೆಳಕು ಪೂರಯಿಸುವ ಎತ್ತುಗಡೆಯನ್ನು ಮಾಡಿಕೊಂಡರು. ಅಟ್ಟದ ಹಿಂದೆ ಭಾಗದಲ್ಲಿ ಸೋಗಿನವರು ನಿಂತೋ ಕುಳಿತೋ ಕಟಕಟ ನಡುಗುವುದನ್ನು ತಪ್ಪಿಸಲು ಅಗ್ಗಿಷ್ಟಿಕೆಯ ಏರ್ಪಾಡು ಮಾಡಿದರು.

"ಶ್ರೀ ಗೌರೀ ವರಪುತ್ರಾ"ದಿಂದ ಆರಂಭವಾಗುವ ಗಣಪತಿ ಸ್ತೋತ್ರ ಮುಗಿಯುವದಕ್ಕೆ ರಾತ್ರಿ ಹನ್ನೊಂದು ಗಂಟೆಯಾಗಿತ್ತು. ಗಣಪತಿ ಬರಬೇಕು, ಆತನು ಸಭೆಗೆ ಸುಮ್ಮನೆ ಕೈ ಬೀಸುತ್ತ ಬರುವನೇ? ಕುಣಿಯುತ್ತ ಬಂದನು! ಸಾರಥಿಗೆ ವರ ಕೊಟ್ಟು ಬಯಲಾಟವು ನಿರ್ವಿಘ್ನವಾಗಿ ಸಾಗಲೆಂದು ಹರಸಿ, ಹಿಂದೆ ಸರಿದು ಅಟ್ಟಯಿಳಿದು ಹೋಗಿಬಿಟ್ಟನು. ಯಾರವನು? ಗಣೇಶನ ಮುಖವನ್ನು ತನ್ನ ಮುಖಕ್ಕೆ ಹಿಡಿದುಕೊಂಡು ಕುಣಿದು ಹರಕೆ ಕೊಟ್ಟವನು ಇನ್ನಾರೂ ಆಗಿರದೆ, ನಮ್ಮೂರ ಹಿರೇಮಠದ ಪಡೆದಪ್ಪ. ಯಾವ ಮೇಳದವರು ಆಟ ಹೂಡಿದರೂ ಗಣಪತಿಯಾಗಿ ಬಂದು ವರ ಕೊಟ್ಟು ಹರಸುವವನು ಅವನೇ. ಅದರಿಂದ ಬಯಲಾಟವು ಯಶಸ್ವಿಯಾಗಿ ಕೊನೆಗಾಣುವದೆಂದು ಎಲ್ಲರೂ ಮನಗಂಡಿದ್ದರು. "ಧಿತ್ತೈ ತಕ್ಕ ಧಿತ್ತೈ ತಕ್ಕ ಧಿತ್ತೈ" ಎಂದು ಕುಣಿತ ಮುಗಿದ ಕೂಡಲೇ – "ತಾವು ಬಂದಂಥವರು ಯಾರು ಸ್ವಾಮೀ" ಎಂದು ಸಾರಥಿಯು ಮಾತಾಡಿಸಿದಾಗ ಗೆಜ್ಜೆ ಕಟ್ಟಿದ ಕಾಲುಗಳನ್ನು

ಜಾಡಿಸಿ ಸರಿದು ನಿಲ್ಲುವನು. ಸಾರಥಿಯಾದವನು ತನ್ನ ಸಹಾಯಕನಾದ ಭಾಗವತನ ಅನುಮತಿ ಪಡೆದು ಮತ್ತೊಮ್ಮೆ ಮಾತನಾಡಿದಾಗ–"ನಮಗ ಗಂಪತಿ ಗಂಪತಿ ಅಂತಾರ್ರೋ" ಎಂದು ಕೂಗಿ ಹೇಳುವನು. "ತಾವು ಗಣಪತಿ ಸಹಜವಾಯಿತು. ಆದರೆ ಆ ಮೇಲು ಮಂದಿರ ಬಿಟ್ಟು ಈ ಸಭಾ ಮಂದಿರಕ್ಕೆ ಬಂದ ತಾತ್ಪರ್ಯವೇನು ಬುದ್ಧೀ?" ಎಂದು ಸಾರಥಿಯು ಪ್ರಶ್ನಿಸುವನು. "ಮಟ ಕೊಟ್ಟು ಹೋಗಲು ಬಂದಿದ್ದೇವೆ" ಎಂದಾಗ ನೆರೆದವರೆಲ್ಲ ಘೊಳ್ಳನೆ ನಗುವರು. ಮಟ ಅಲ್ಲ, ಮತಿ ಅನ್ನಬೇಕಾಗಿತ್ತು. ಅಷ್ಟಾದರೆ ಪಡೆದಪ್ಪನ ಕೆಲಸ ಮುಗಿಯಿತು. ಮೇಳದವರಿಗೆ ಗಣೇಶ ಮುಖವನ್ನು ಒಪ್ಪಿಸಿ ತನ್ನ ದಕ್ಷಿಣೆಯ ನಾಲ್ಕಾಣೆಗಳನ್ನು ಇಸಗೊಂಡು ಅಟ್ಟಯಿಳಿದು ಸಾಗುವನು. ಆ ನಾಲ್ಕಾಣೆಗಳಿಂದ ಸಿದ್ಧ ಪತ್ರಿಯನ್ನು ತಂದು, ಚಿಲುಮೆಯೆಳೆದು ಆನಂದಲೋಲನಾಗಿ ಎಲ್ಲಿಯೋ ಕುಳಿತುಬಿಡುವನು.

ಅಗೋ ! ಅಟ್ಟದ ಮೇಲೆ ದೇವೇಂದ್ರನ ಸಭೆ. ವಸಿಷ್ಠ ವಿಶ್ವಾಮಿತ್ರಾದಿಗಳು ಸೇರಿದ್ದಾರೆ. ವಸಿಷ್ಠನು ಹರಿಶ್ಚಂದ್ರನ ಸತ್ಯವಂತಿಕೆಯನ್ನು ಕೊಂಡಾಡಲು, ವಿಶ್ವಾಮಿತ್ರನ ತೆಗಳಿಕೆ ಆರಂಭವಾಗುವುದು. ಹರಿಶ್ಚಂದ್ರನ ಸತ್ತ್ವಪರೀಕ್ಷೆ ಮಾಡಿ ಅವನು ಸತ್ವಗೇಡಿಯಾಗಿರುವದನ್ನು ಲೋಕಕ್ಕೆಲ್ಲ ಡಂಗುರ ಸಾರುವೆನೆಂದೂ, ಅದರಲ್ಲಿ ತಾನು ಸೋತರೆ ಇಂಥಿಂಥ ಪ್ರಾಯಶ್ಚಿತ್ತವನ್ನು ತೆಗೆದುಕೊಳ್ಳುವೆನೆಂದೂ ವಿಶ್ವಾಮಿತ್ರನು ಘೋರ ಪ್ರತಿಜ್ಞೆಯನ್ನು ಮಾಡುವನು. ಅದಕ್ಕೆ ಪ್ರತಿಕಕ್ಷಿಯಾಗಿ ವಸಿಷ್ಠ ಅದಕ್ಕೂ ಘೋರವಾದ ಪ್ರತಿಜ್ಞೆ ಮಾಡುವನು. ಇಷ್ಟಾಗುವ ಹೊತ್ತಿಗೆ ನೋಟಕರಾಗಿ ಬಂದವರೆಲ್ಲ ನಿಸ್ತಬ್ಧರಾಗಿ ಎವೆಯಿಕ್ಕದೆ ಕಿವಿ ನಿಮಿರಿಸಿಕೊಂಡು ಕುಳಿತುಬಿಡುವರು.

ಬಳಿಕ ಇನ್ನಾರದೋ ಕುಣಿತ. ಅದೇನು ರಭಸ! ಅದೆಷ್ಟು ಆವೇಶ! ಅದೆಲ್ಲಿಯ ಸ್ಫೂರ್ತಿ ತಂದಿದ್ದನೋ? ಕಣ್ಣು ಬಡಿಯುವಷ್ಟು ಸಹ ಅವಕಾಶ ಕೊಡದೆ. ಶಾಹಬ್ಬಾ! ಶಾಹಬ್ಬಾ–ಎನ್ನುತ್ತ ಎದುರು ಮುಖನಾಗಿ, ಬದಿಯ ಮುಖನಾಗಿ ಹಲವು ಭಂಗಿಗಳಲ್ಲಿ ಕುಣಿದು ದಣಿದು ಮೈ ಬೆವರಿದ್ದರೂ ಅವನ ಕುಣಿತ ಮುಗಿಯಲೊಲ್ಲದು. ಮುಮ್ಮೇಳದವನ ತಾಳಗತ್ತು, ಮದ್ದಲಿಯವನ ಅಡ್ಡಪೆಟ್ಟು ಅವನನ್ನೂ ಬಿಟ್ಟರಲ್ಲವೇ ಕುಣಿತ ನಿಲ್ಲುವುದು? ಕುಣಿದವನ ಎದೆ ತಿದಿಯಾಗಿ ಉಸಿರು ಸೂಸತೊಡಗುವದು. ಸಾರಥಿಯಾದವನು ಬಂದು ಮಾತಾಡಿಸಿದರೆ, ಅವನಿಗೆ ಮಾತಾಡಲು ಸಾಧ್ಯವೇ ಆಗಲಿಲ್ಲ. ವಾಡಿಕೆಯಂತೆ ಭಾಗವತನ ಸಲಹೆ ಪಡೆದು ಮೂರು ನಾಲ್ಕು ನಿಮಿಷಗಳವರೆಗೆ ಬಿರುದಾವಳಿಯನ್ನು ಹಾಕಿ ಮಾತಾಡಿಸುವ ಹೊತ್ತಿಗೆ ಸೋಗಿನವನ ಉಸಿರಾಟವು ವಾಡಿಕೆಗೆ ಬಂದಿತ್ತು. ಖೇಕರಿಸುತ್ತ ತನ್ನ ದೊಡ್ಡತನವನ್ನೂ, ಶೌರ್ಯಪರಾಕ್ರಮವನ್ನೂ, ಹೇಳಿಕೊಳ್ಳುತ್ತ–ತಾನು ಹರಿಶ್ಚಂದ್ರರಾಯನ, ವನಪಾಲಕನೆಂದು ಉಸುರುವನು. ಆ ಬಳಿಕ ಬಂದ ಕಾರಣವನ್ನು ಕೇಳಿದಾಗ ಕಾಡುಮೃಗಗಳು ವನವನ್ನು ಹೊಕ್ಕು ತೊತ್ತಳದುಳಿದು ಹಾಳುಮಾಡುತ್ತಿವೆಯೆಂದೂ ಏನು ಮಾಡಿದರೂ ಅವರ ಪ್ರತೀಕಾರವಾಗಲೊಲ್ಲವೆಂದೂ ಅದ್ದರಿಂದ ಈ ಸುದ್ದಿಯನ್ನು ಹರಿಶ್ಚಂದ್ರ ರಾಜನಿಗೆ ತಿಳಿಸಲು ಅವಸರದಿಂದ ಹೊರಟಿದ್ದೇನೆಂದೂ ಹೇಳುವನು.

ನೋಟಕರಲ್ಲಿ ಯಾರೋ ಬಾಯಿಬಿಟ್ಟು ನುಡಿದರು–ಎಂಥ ಅವಸರವಪ್ಪ ಇವನದು?

ಅಂಥ ಅವಸರ ಇಟ್ಟುಕೊಂಡು ಓಡುತ್ತ ಹೋಗುವುದನ್ನು ಬಿಟ್ಟು ಕುಣಿಯುತ್ತ ಹೊರಟದ್ದಾನೆ. ದಾರಿಯಲ್ಲಿ ಎರಡು ಸಾರೆ ಬಿರುದಾವಳಿ ಹಾಕಿ ಮಾತಾಡಿಸಿದಾಗ ಮೈಲಾರ ಸುತ್ತಿ ತನ್ನ ಪರಿಚಯ ಹೇಳುತ್ತಾನೆ. ಅದೆಂಥ ಕೆಲಸವನ್ನುವದನ್ನಂತೂ ಹೇಳಲೇಬಲ್ಲನು. ಒಳ್ಳೆಯ ವನಪಾಲಕ.

"ಹರಿಶ್ಚಂದ್ರ ಮಹಾರಾಜರು ಎಲ್ಲಿದ್ದಾರೆ ತೋರಿಸುವಂಥಾತನಾಗೆಲೈ ಸಾರಥೀ" ಎಂದು ಕೇಳಿದಾಗ– "ಅಲ್ಲೇ ತಮ್ಮ ಬಲಭಾಗದಲ್ಲಿ ನಿಂತಿದ್ದಾರೆ. ನೋಡಿಕೊಳ್ಳಿರಿ. ಎರಡು ಮಾತು ಆಡಿಕೊಳ್ಳಿರಿ" ಎಂದು ಸಾರಥಿಯು ಸಲಹೆ ಕೊಡುವನು.

ಮತ್ತೆ ಜನರಲ್ಲಿ ಗುಜು ಗುಜು – "ಅಲ್ಲೇ ಬಲಭಾಗದಲ್ಲಿ ನಿಂತ ಹರಿಶ್ಚಂದ್ರ ರಾಜನನ್ನು ನೋಡಲಾರದ ಕಣ್ಣು ನೆತ್ತಿಗೇರಿರಬಹುದು? ರಾಜಸೇವೆಯನ್ನು ಕೈಕೊಂಡ ವನಪಾಲಕನು ಹರಿಶ್ಚಂದ್ರನನ್ನು ಮೊದಲೆಂದೂ ನೋಡಿರಲಿಲ್ಲವೇ?" ಇನ್ನೆಲ್ಲಿಂದಲೋ ಒಂದು ಗಡಸು ದನಿಯು ಆ ಗಲಿವಿಲಿಯನ್ನೆಲ್ಲ ಸೀಳಿ – "ಗಪ್ಪಾಗಿರೆಪ್ಪೊ! ಗದ್ದಲ ಮಾಡಬೇಡಿರಿ" ಎಂದು ಗರ್ಜಿಸಿತು. ಆಗ ಕಥೆ ಮುಂದುವರಿಯಿತು.

ಹರಿಶ್ಚಂದ್ರನೂ ಕುಣಿಯುತ್ತ ಬಂದರೆ, ತಾರಾಮತಿಯೂ ಕುಣಿಯುತ್ತ ಬಂದಳು. ಮುಂದೆ ಹಿಡಿದ ಒಲ್ಲಿಯ ತೆರೆಯ ಮರೆಯಿಂದ ಇಣಕಿ ನೋಡುತ್ತ "ಸಾ ಸಾ ರೀ ರೀ ಗಮ, ಸಾಸಾ ರೀರೀ ಗಮ ಮಪ ಧನಿಸಾ" ಎನ್ನುತ್ತ ಜನರಿಗೆ ಕಾಣಿಸಿಕೊಳ್ಳುವಳು. "ಅಪ್ಪಾ ಸಾರಥೀ" "ಹಾ !" "ಪೊಡವಿಯೊಳ್ ಕುಡುಬೆಡಗಿನಿಂದ ಮೆರೆಯುವ" "ಹಾ" "ಜಂಬುದ್ವೀಪದ ಮಧ್ಯದೊಳ್ ಅತಿ ಸಡಗರದಿಂದ" "ಹಾ" "ಕೋಸಲ ದೇಶವನ್ನಾಳುವ ವೀರ ಧೀರ ಪರಾಕ್ರಮಿಯಾದ" "ಹಾ" ಈ ವಿಧದಲ್ಲಿ ಪಾತ್ರ ಪರಿಚಯವಾಗುವದು. ಮಾತಿಗೊಮ್ಮೆ ಅಲ್ಲ, ಮಾತಿನ ತುಣುಕಿಗೊಮ್ಮೆ ಹಾ ಅಂದು ಅಂದು ಸಾರಥಿಗೆ ಅಂಥ ಚಳಿಗಾಳಿಯಲ್ಲಿಯೂ ಬಾಯಾರಿಕೆ ಆಗುತ್ತಿತ್ತು.

ಒಳಗೆ ಯಾರೋ ಸಿದ್ಧಪಡಿಸಿದ ಎಕ್ಕೆಲೆಯ ಚುಟ್ಟವನ್ನು ಕೈಗೆ ತೆಗೆದುಕೊಂಡು ಜೋರಾಗಿ ಬುರುಕೆಯೆಳೆದು ತಲಬು ತಣಿಸಬೇಕೆಂದು ಸಾರಥಿಯು ಒಳಭಾಗದಲ್ಲಿ ಬಂದು, ಚುಟ್ಟ ಎಳೆಯುತ್ತಿರುವಾಗ ಹೊರಗಿನ ಸೋಗಿನವನು ರಂಗಭೂಮಿಯಲ್ಲಿ ನಿಂತು ಮಾತು ಹೇಳುತ್ತಿದ್ದಾಗ 'ಹಾ' ಅನ್ನುವವರು ಯಾರೂ ಇರಲಿಲ್ಲ. ಆತನು ಕಕ್ಕಾವಿಕ್ಕಿಯಾಗಿ ಹಿಂದೆ ಮುಂದೆ ನೋಡುತ್ತ ಮತ್ತೊಂದು ಮಾತು ಹೇಳಿದಾಗ, ಚುಟ್ಟದ ಜುರುಕೆಯೆಳೆದ ಸಾರಥಿಯು 'ಹಾ' ಅನ್ನುತ್ತ ಹೊರಗೆ ಬಂದನು. ಹಾಗೆ 'ಹಾ' ಅನ್ನುವಾಗ ಬಾಯಿಂದ ದಟ್ಟವಾದ ಹೊಗೆಯೂ ಹೊರಬೀಳುವದನ್ನು ಕಂಡವರು ಬಿದ್ದು ಬಿದ್ದು ನಕ್ಕರು.

ಬಯಲಾಟವೆಂದಾಗ ಇವೆಲ್ಲ ನಡೆಯತಕ್ಕವೇ. ಈ ಕುಂದುಕೊರತೆಗಳನ್ನೇನೂ ಲಕ್ಷಕ್ಕೆ ತರದೆ ಕಥೆಯ ಸ್ವಾರಸ್ಯವನ್ನು ಕೇಳುತ್ತ ಜನರು ತಲ್ಲೀನರಾಗಿಯೇ ಕುಳಿತಿದ್ದರು. "ತೋಂತತ ಝಣತತ್ತಾ" ಎಂದು ಮುಗಿಸುವ ಹೊತ್ತಿಗೆ ವಿಶ್ವಾಮಿತ್ರನು ಗೋಚರಿಸಿದನು. "ಛೇಪಾ"

ಅಂದರು ಜನರು. "ಭಲೆ! ಭಲೆ!!" ಎಂದರು. ಹರಿಶ್ಚಂದ್ರ ರಾಜನೊಡನೆ ನಡೆದ ಸಂವಾದದಲ್ಲಿ ರಾಜನ ವಿನಯ, ಮುನಿಯ ಸಿಡುಕು ಮಾತು ಮಾತಿನಲ್ಲಿ ಒಡೆದು ಕಾಣಿಸುತ್ತಿದ್ದವು. ರಾಜನಾದವನು ಮುನಿಯು ಹೇಳಿದ್ದನ್ನೆಲ್ಲ ಒಪ್ಪಿಕೊಂಡ ಮೇಲೆ – "ನೀ ಕೊಟ್ಟ ವಚನವನು ಬಲು ಜೋಕೆಯಿಂದಿಡು ಕಂಡ್ಯಾ" ಎಂಬ ಹಾಡಿನಿಂದ ಎಚ್ಚರಿಕೆ ಕೊಟ್ಟು ವಿಶ್ವಾಮಿತ್ರನು ಜಿಗಿದು ಹೋಗುವನು.

ಮಾತಂಗಿ ಕನ್ಯೆಯರು ಬಂದು ಹರಿಶ್ಚಂದ್ರನನ್ನು ಸಂಧಿಸಿ, "ಎನ್ನವಾರೀಗೀ ತಕ್ಕವನು । ತಕ್ಕವನು । ನೀ ಸುಂದರಾ । ಹರಿಶ್ಚಂದರಾ" ಎಂದು ಹಾಡುವಾಗ ಪ್ರೇಕ್ಷಕರಿಗಾದ ತಲ್ಲೀನತೆಯ ಚಿತ್ರವು ನೋಡುವಂಥದಿತ್ತು. "ತಕ್ಕವನು, ತಕ್ಕವನು" ಎನ್ನುತ್ತಿರುವಾಗ ಪಿಟೀಲಿನಂಥ ತಂತುವಾದ್ಯವು ಅವರೊಡನೆ ಆಲಾಪಿಸುವುದೂ ಅತ್ಯಂತ ಕರ್ಣಮನೋಹರವಾಗಿದ್ದವೆಂದು ಹೇಳಬೇಕೆ?

ಕಥೆಯು ಅರ್ಧ ಮುಗಿಯುವ ಹೊತ್ತಿಗೆ ಒಂದು ಅಡ್ಡಸೋಗು ಬಂದು, ನಿದ್ದೆಗೀಡಾದವರನ್ನು ಗುಲಗುಲಿಗೆ ಮಾಡಿ ಎಚ್ಚರಿಸಿತು. ಎಮ್ಮೆ ಕಟ್ಟಿ ಹಯನ ಮಾಡೋಣ– ಎಂಬ ವಿಚಾರವನ್ನು ಗಂಡನು ತನ್ನ ಹೆಂಡತಿಯ ಮುಂದೆ ಉಸಿರೊಡೆಯುವನು. ತಾನು ಮಾಡುವ ಕೆಲಸವನ್ನೂ, ಹೆಂಡತಿ ಮಾಡಬೇಕಾದ ಕೆಲಸವನ್ನೂ ನಿರ್ಧರಿಸಿಕೊಳ್ಳುವರು. ಹಿಂಡಿದಹಾಲು ಮಾರುವದೆಷ್ಟು, ಮನೆಯಲ್ಲಿರಿಸಿಕೊಂಡು ಮೊಸರು, ಬೆಣ್ಣೆ, ತುಪ್ಪ ಮಾಡುವದೆಷ್ಟು ಎಂಬುದನ್ನು ನಿರ್ಣಯಿಸುವರು. ಆದರೆ ತವರು ಮನೆಯವರಿಗೆ ಮಜ್ಜಿಗೆ ಕೊಡಕೂಡದೆಂದು ಹೆಂಡತಿಗೆ ಗಂಡನು ಸ್ಪಷ್ಟವಾಗಿ ಹೇಳಿದಾಗ–"ನಾನು ಕೊಡತಕ್ಕವಳೇ" ಎಂದು ಆಕೆ ಎದುರು ನುಡಿಯುವವಳು. ಅದರಿಂದ ಇಬ್ಬರಲ್ಲಿಯೂ ಮತಭೇದವಾಗಿ ಬಾಯಿಗೆ ಬಾಯಿ ಹತ್ತಿದ್ದು, ಕೈಗೆ ಕೈ ಹತ್ತುವರೆಗೆ ಬಂದಿತು. ಗಂಡನು ಸಿಟ್ಟಿಗೇರಿ ಹೆಂಡತಿಯನ್ನು ಮೈಮುರಿ ಥಳಿಸುವನು. ಹೆಂಡತಿಯು ಅಳುತ್ತ ಹೋಗಿ ತನ್ನ ಅಣ್ಣನಲ್ಲಿ ದೂರಿಕೊಳ್ಳವಳು. ಅಣ್ಣನಿಗೊಬ್ಬ ಚತುರನಾದ ಸ್ನೇಹಿತನಿದ್ದನು. ಅವನು ಯುಕ್ತಿ ತೆಗೆದು ಗಂಡನಾದವನ ಬಳಿಗೆ ಬಂದು– "ನಿನ್ನ ಎಮ್ಮೆಯು ನಮ್ಮ ಹೊಲವನ್ನು ಹೊಕ್ಕು ಬೆಳೆಯನ್ನೆಲ್ಲ ಹಾಳುಮಾಡುತ್ತಲಿರುವದು. ಆದ ಹಾನಿಯನ್ನು ತುಂಬಿಕೊಡು" ಎಂದು ಮುಂಗೈ ಹಿಡಿದು ಆತನನ್ನು ನಿಲ್ಲಿಸುವದು. ಮಾತು ಚುರುಕಿಗೆ ಬರಲು ಒಂದೆರಡು ಏಟೂ ಕೊಡುವನು. "ನಾನು ಎಮ್ಮೆಯನ್ನೆ ಇನ್ನೂ ಕೊಂಡಿಲ್ಲ. ನಿನ್ನ ಹೊಲ ಹೊಕ್ಕು ಹಾಳುಮಾಡುವದೆಂದರೇನು?" ಎಂದಾಗ – "ಹಾಗಾದರೆ ನಿನ್ನ ಹೆಂಡತಿ ತವರು ಮಜ್ಜಿಗೆ ಕೊಡುವದೆಲ್ಲಿಂದ?" ಎಂದು ಅವನ ತಪ್ಪು ಅವನ ಉಡಿಯಲ್ಲಿ ಹಾಕಿ ನಮೋ ನಮೋ ಎನಿಸುವನು.

"ಕಾಂತಾ ಏನಿದು ಉಷ್ಣಾ । ಕಾಂತಾರದೊಳಗೆ । ಎಂಥಾ । ಅಯ್ಯಯ್ಯೋ ಎಂಥಾ ಬಿಸಿಲು ಕಾಯ್ತುದೋ । ಹಾಹ್ಹಾರೆನಾ" ಎಂದು ತಾರಾಮತಿಯು ವನವಾಸದ ಕಷ್ಟದಿಂದ ಗೋಳಾಡುವಾಗ, ಆರಂಭವಾದ ನೋಟಕರ ಕಸಿವಿಸಿಯು "ತಾಯಿ ತಾರಮತಿ । ತಂದಿ ಹರಿಶ್ಚಂದ್ರ । ಅಣ್ಣ ಮಂತ್ರೀಶ ಬರಲಿಲ್ಲಾ । ಹಾಹಾರೆನಾ" ಎಂದು ಗೋಳಿಡುವ ರೋಹಿತಾಶ್ವನ

ಸಂಕಷ್ಟದೊಡನೆ ಹೊರಸೂಸುತ್ತ ಬಂತು. ಹೊಲೆಯನ ಆಳಾಗಿ ಸುಡುಗಾಡು ಕಾಯುವ ರಾಜನು. ತಾರಾಮತಿಯು ಸತ್ತ ಮಗನನ್ನು ಸುಡಲು ಸುಡುಗಾಡಿಗೆ ತಂದಾಗ- ಹಾಗ ಕೊಡದಿದ್ದರೆ ಎತ್ತಿಕೊಂಡು ಹೋಗು, ಹೆಣವನ್ನು-ಎಂದು ನಿಷ್ಠುರ ನುಡಿದಾಗ ನೋಡುವ ಕಣ್ಣುಗಳೆಲ್ಲ ಕಣ್ಣೀರು ಕರೆಯತೊಡಗಿದವು. ಬಾಯಿಂದ ಬಿಸಿಯುಸಿರು ತೆರಪಿಲ್ಲದೆ ಹೊರಹೊಮ್ಮತೊಡಗಿತು. ವಿಶ್ವಾಮಿತ್ರನ ಕಲ್ಲೆದೆಯನ್ನೂ ಕಠೋರವಾಗಿ ಜರೆಯತೊಡಗಿದರು, ನೋಟಕರೆಲ್ಲ. ಗಳಿಗೆಗೊಮ್ಮೆ ಬಂದು ಜಬರಿಸುವ ಮುನಿಯನ್ನೂ, ಅಡಿಗಡಿಗೆ ಬಂದು ಗೋಳಾಡಿಸುವ ಅವನ ಶಿಷ್ಯ ನಕ್ಷತ್ರಕನನ್ನೂ ನೋಟಕರು ಎದ್ದು ಬಂದು ಥಳಿಸುವರೇನೋ ಎನ್ನುವಷ್ಟರ ಮಟ್ಟಿಗೆ ರಸಾನುಭೂತಿಯು ಕಂಡುಬಂದಿತು.

ಯಾವಾಗ ಪರಮಾತ್ಮನು ಕಾಣಿಸಿಗೊಂಡು ಅವರೆಲ್ಲರನ್ನೂ ಬದುಕಿಸಿದನೋ ಆವಾಗ ಮುನಿಯು ಪ್ರಸನ್ನನಾಗಿ ರಾಜನನ್ನೂ ಅವನ ಬಳಗವನ್ನೂ ಹರಸಿದಾಗ ಪ್ರೇಕ್ಷಕರ ಒಡೆದೆದೆಯು ಒಂದುಗೂಡಿ ನಿಚ್ಚಳವಾಗಿ ಉಸಿರಾಡತೊಡಗಿತು. ಹೀಗೆ ಆರೇಳು ತಾಸು ಒಂದೇ ಸಮನೆ ಜನರಲ್ಲಿ ರಸಾನುಭೂತಿಯನ್ನು ಹುಟ್ಟಿಸಿ, ಅವರನ್ನು ಅಲೌಕಿಕವಾದ ಸನ್ನಿವೇಶಗಳಲ್ಲಿ ಮೀಯಿಸಿ, ತಣಿಸಿದ ಬಯಲಾಟವು ಭರ್ಜರಿಯಾಗದೆ ಏನು ಮಾಡೀತು?

❑

ಕರ್ನಾಟಕ ಏಕೀಕರಣದ ಇತಿಹಾಸ

ಪ್ರೊ. ಬಿ.ಎ. ಮಲ್ಲಾಪುರ

ಒಂದು ಭೂಪ್ರದೇಶದಲ್ಲಿ ಒಂದು ಭಾಷೆಯನ್ನಾಡುವ ಜನಾಂಗ ಶತಮಾನಗಳುದ್ದಕ್ಕೂ ಕಾಯಂ ಆಗಿ ನೆಲೆನಿಂತಾಗ ಅದು ತನ್ನದೆ ಆದ ಭಾಷೆಯನ್ನು ಅಭಿವೃದ್ಧಿಪಡಿಸಿಕೊಳ್ಳುವ ಜೊತೆಗೆ, ಸಾಹಿತ್ಯ ನಿರ್ಮಿತಿಗೂ ತೊಡಗುತ್ತದೆ. ಮತ್ತು ಅದರದೇ ಆದ ಸಾಮಾಜಿಕ-ಧಾರ್ಮಿಕ ಹಾಗೂ ರಾಜಕೀಯ ವ್ಯವಸ್ಥೆಗಳು ರೂಪುಗೊಳ್ಳುತ್ತ ಒಂದು ಸಂಸ್ಕೃತಿ ಅಸ್ತಿತ್ವಕ್ಕೆ ಬರುತ್ತದೆ. ಇದರಿಂದ ನಾಡು-ನುಡಿ ಜೀವನ ವಿಧಾನ ಅರ್ಥಾತ್ ಸಂಸ್ಕೃತಿಗಳ ಮಧ್ಯೆ ಬಿಡಿಸಿ ಬೇರ್ಪಡಿಸಿ ದಂತಹ ಒಂದು ನಂಟು, ಒಂದು ಗಂಟು ಇರುತ್ತದೆಂಬುದು ಸ್ಪಷ್ಟವಾಗುತ್ತದೆ. ನೆಲ, ಜಲ, ಭಾಷೆ, ತನ್ನ ಸಂಸ್ಕೃತಿ ಇತ್ಯಾದಿಗಳ ಬಗ್ಗೆ ಆ ಜನಾಂಗ ಅಪಾರ ಪ್ರೀತಿ, ಗೌರವ, ಅಭಿಮಾನಗಳನ್ನು ಬೆಳೆಸಿಕೊಂಡು ಬಂದಿರುತ್ತದೆ. ಸಂಸ್ಕೃತಿಯ ಒಂದು ಅಂಗವಾದ ಭಾಷೆ, ಜನಾಂಗದ ಒಕ್ಕಟ್ಟನ್ನು ಗಟ್ಟಿಗೊಳಿಸುವಲ್ಲಿಯೂ ಮಹತ್ವದ ಪಾತ್ರ ವಹಿಸುತ್ತದೆ.

ಕನ್ನಡ ಭಾಷೆಯ ಭೂಪ್ರದೇಶವನ್ನು ಒಂದೇ ಆಡಳಿತಕ್ಕೆ ತಂದು, ಕನ್ನಡಿಗರಲ್ಲಿ ಕರ್ನಾಟಕತ್ವದ ಬೀಜಾರೋಪಣ ಮಾಡಿದವರು ಬಾದಾಮಿಯ ಚಾಲುಕ್ಯರು. ಅನಂತರ ಬಂದ ರಾಷ್ಟ್ರಕೂಟರು ಮತ್ತು ಕಲ್ಯಾಣದ ಚಾಲುಕ್ಯರ ಆಳ್ವಿಕೆಯ ಕೊನೆಯವರೆಗೆ ಎಂದರೆ ಸುಮಾರು ಆರೇಳು ಶತಮಾನಗಳುದ್ದಕ್ಕೂ ಕರ್ನಾಟಕ ಅಖಂಡವಾಗಿಯೇ ಇತ್ತು. ಅರಸು ಮನೆತನಗಳು ಬದಲಾದರೂ ಅವರು ಕನ್ನಡಿಗ ರಾಗಿಯೇ ಇದ್ದುದರಿಂದ ಕರ್ನಾಟಕದ ಅಖಂಡತೆಗೆ ಭಂಗ

ಬಂದಿರಲಿಲ್ಲ. ಕನ್ನಡಿಗರಲ್ಲಿ ನಾಡು-ನುಡಿಗಳ ಬಗ್ಗೆ ದೇಶದ ಅಖಂಡತೆಯ ಬಗ್ಗೆ ತುಂಬಾ ಕಾಳಜಿಯಿದ್ದ ಕಾಲವದು. ಕರ್ನಾಟಕ ಒಂದು ಶಕ್ತಿಯಾಗಿ ಉತ್ತರಭಾರತದ ಮೇಲೆ ಪ್ರಭಾವ ಬೀರಿದ ಸುವರ್ಣಯುಗ ಅದು.

ಕಲ್ಯಾಣಚಾಲುಕ್ಯರ ಅನಂತರ ಅಖಂಡಕರ್ನಾಟಕ ತುಂಡಾಗಿ ಕೆಲವು ಭಾಗ ಹೊಯ್ಸಳರಿಗೆ, ಕೆಲವು ಭಾಗ ದೇವಗಿರಿ ಯಾದವರಿಗೆ, ಇನ್ನು ಕೆಲವು ಭಾಗ ಓರಂಗಲ್ಲಿನ ಕಾಕತೀಯರಿಗೆ ಸೇರಿ ಹೋಯಿತು. ಮುಂದೆ, ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೊಂಡರೂ ಕರ್ನಾಟಕದ ಎಲ್ಲ ಭಾಗಗಳೂ ಅವರಲ್ಲಿ ಸೇರಿರಲಿಲ್ಲವೆಂಬುದು ಗಮನಿಸಬೇಕಾದ ಅಂಶ.

ಮುಂದೆ ಬ್ರಿಟಿಷರು, ಭಾರತದ ಭೂಪ್ರದೇಶವನ್ನು ತಾವು ಗೆದ್ದುಕೊಳ್ಳುತ್ತ ಹೋದಂತೆ ಅವುಗಳನ್ನು ಪ್ರಾಂತಗಳಾಗಿ ಮಾಡಿ ಆಡಳಿತ ನಡೆಸಲಾರಂಭಿಸಿದರು. ಒಂದು ಭಾಷೆಯನ್ನಾಡುವ ಜನ ಒಂದೇ ಆಡಳಿತಕ್ಕೆ ಒಳಪಟ್ಟಲ್ಲಿ ಅವರ ಐಕ್ಯತೆ ಗಟ್ಟಿಗೊಳ್ಳುತ್ತ ಹೋಗುವುದೆಂಬುದನ್ನು ಚೆನ್ನಾಗಿ ತಿಳಿದ ಆಂಗ್ಲರು ಭಾಷಾನುಗುಣವಾಗಿ ಅವನ್ನು ರೂಪಿಸುವ ಗೊಡವೆಗೆ ಹೋಗಲಿಲ್ಲ. ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಕನ್ನಡ ಭಾಷೆಯನ್ನಾಡುವ ಜನ ಹತ್ತೊಂಬತ್ತು ಆಡಳಿತವಿಭಾಗ ಗಳಲ್ಲಿ ಹರಿದು ಹಂಚಿ ಹೋಗಿದ್ದರೆಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಅವರಿಗೆ ಪ್ರಜೆಗಳ ಹಿತ ಮುಖ್ಯವಾಗಿರಲಿಲ್ಲವೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಕಲ್ಯಾಣಚಾಳುಕ್ಯರ ಆಳ್ವಿಕೆಯ ಅನಂತರ ಒಡೆದು ತುಂಡಾಗುತ್ತ ನಡೆದ ಕರ್ನಾಟಕ ಕ್ರಿ.ಶ. ೧೯೫೬ರ ನವಂಬರ್ ಒಂದನೆಯ ದಿನಾಂಕದವರೆಗೆ, ಛಿನ್ನ ವಿಚ್ಛಿನ್ನವಾಗಿಯೇ ಉಳಿದುದು ಕನ್ನಡಿಗರ ದುರ್ದೈವ. ಹೀಗೆ ಶತಶತಮಾನಗಳುದ್ದಕ್ಕೂ ಕನ್ನಡೇತರ ಅರಸರ ಆಳ್ವಿಕೆಗೆ ಒಳಪಟ್ಟು ನಮ್ಮ ಕರ್ನಾಟಕ ತುಂಡು ತುಂಡಾಗಿ ಹೋಗಿತ್ತು. ಆಯಾ ಭಾಗಗಳಲ್ಲಿ ನೆಲಸಿದ್ದ ಕನ್ನಡಿಗರು ಅನಾಥಪ್ರಜ್ಞೆಯನ್ನನುಭವಿಸುವುದು ಅನಿವಾರ್ಯವಾಗಿತ್ತು. ಇಂತಹ ಒಂದು ಅಸಹಾಯ ಪರಿಸ್ಥಿತಿ ಭಾರತದ ಬೇರಾವ ಭಾಷಿಕರಿಗೂ ಒದಗಿರಲಿಲ್ಲವೆಂಬುದು ಗಮನೀಯ.

ಈ ಕಾರಣದಿಂದಾಗಿ, ಕನ್ನಡಿಗರಿಗೆ ಅಖಂಡ ಕರ್ನಾಟಕದ ಪರಿಕಲ್ಪನೆ ಒತ್ತಟ್ಟಿಗಿರಲಿ ಕನ್ನಡ ನಾಡು-ನುಡಿಗಳ ಮೇಲಿನ ಅಭಿಮಾನಕ್ಕೂ ಸಂಚಕಾರ ಬಂದಿತ್ತು. ಇದನ್ನು ಆಗ ನಡೆದ ಒಂದೆರಡು ಘಟನೆಗಳು ಸಾಬೀತು ಪಡಿಸುತ್ತವೆ.

ಜನಾಂಗದ ಒಗ್ಗಟ್ಟನ್ನು ಒಡೆಯುವುದು ತಮ್ಮ ಕ್ಷೇಮದ ದೃಷ್ಟಿಯಿಂದ ಅವಶ್ಯವೆಂಬ ನೀತಿಯನ್ನು ಅನುಸರಿಸಿಕೊಂಡು ಬರುತ್ತಿದ್ದ ಆಂಗ್ಲರು, ಒಂದೇ ಭಾಷೆಯ ಭೂಪ್ರದೇಶವನ್ನು ಒಡೆದು, ಒಂದು ಭಾಗವನ್ನು ಒಂದು ಆಡಳಿತಕ್ಕೆ ಇನ್ನೊಂದನ್ನು ಬೇರೊಂದು ಆಡಳಿತಕ್ಕೂ ಸೇರಿಸುತ್ತ ಹೋದರು.

ಕ್ರಿ.ಶ. ೧೮೧೮ರಲ್ಲಿ ಬೆಳಗಾವಿ, ಬಿಜಾಪುರದ ಭಾಗಗಳನ್ನೊಳಗೊಂಡ ಧಾರವಾಡ ಪ್ರದೇಶ ಆಂಗ್ಲರ ವಶಕ್ಕೆ ಬಂದಿತು. ಅದನ್ನು ಯಾವ ಪ್ರಾಂತಕ್ಕೆ ಸೇರಿಸಬೇಕೆಂಬ ಪ್ರಶ್ನೆ ಬಂದಾಗ, ಸರ್ ಥಾಮಸ್ ಮನ್ರೋ ಅವರು “ಆಡಳಿತದ ಅನುಕೂಲತೆ ಮತ್ತು ಕಾರ್ಯಕ್ಷಮತೆ ದೃಷ್ಟಿಯಿಂದ

ಅದನ್ನು ಕನ್ನಡ ಪ್ರದೇಶಗಳಿರುವ ಮದ್ರಾಸ ಪ್ರಾಂತಕ್ಕೆ ಸೇರಿಸಬೇಕು" ಎಂದು ಸಲಹೆ ಇತ್ತರೆ, ಮುಂಬಯಿ ಪ್ರಾಂತದ ಗವರ್ನರ್ ಅವರು ತಮ್ಮವೇ ಆದ ಕಾರಣಗಳನ್ನು ಮುಂದೆಮಾಡಿ ಆ ಭೂಪ್ರದೇಶವನ್ನು ಮುಂಬಯಿಪ್ರಾಂತಕ್ಕೆ ಸೇರಿಸಬೇಕೆಂದು ಸೂಚಿಸಿದರು. ಕಂಪನಿಯ ಸರ್ಕಾರ ಅದನ್ನೇ ಒಪ್ಪಿ ಧಾರವಾಡ ಭೂಪ್ರದೇಶವನ್ನು ಮುಂಬೈ ಪ್ರಾಂತಕ್ಕೆ ಸೇರಿಸಿತು.

ಮುಂದೆ ಕ್ರಿ.ಶ. ೧೮೬೨ರಲ್ಲಿ ವಿಶಾಲವಾಗಿದ್ದ ಕನ್ನಡಜಿಲ್ಲೆಯನ್ನು ಆಂಗ್ಲರು ಉತ್ತರಕನ್ನಡ, ದಕ್ಷಿಣಕನ್ನಡ ಎಂದು ಎರಡುಭಾಗವಾಗಿ ವಿಂಗಡಿಸಿ, ಉತ್ತರಕನ್ನಡವನ್ನು ಮುಂಬಯಿಪ್ರಾಂತಕ್ಕೂ, ದಕ್ಷಿಣಕನ್ನಡವನ್ನು ಮದ್ರಾಸುಪ್ರಾಂತಕ್ಕೂ, ಸೇರಿಸಿದರು. ಈ ಎರಡೂ ಸಂದರ್ಭಗಳಲ್ಲಿ ಕನ್ನಡಿಗರು ಯಾವ ಬಗೆಯ ಪ್ರತಿಭಟನೆಯನ್ನೂ ತೋರದಿರುವುದು ನಮ್ಮ ಮೇಲಿನ ಮಾತನ್ನು ಸಮರ್ಥಿಸುತ್ತದೆ.

ಬಂಗಾಲಿ ಹಾಗೂ ಒರಿಯಾದವರು ಆಂಗ್ಲರ ಈ ಬಗೆಯ ಕಿತಾಪತಿಗೆ ಹೇಗೆ ಪ್ರತಿಕ್ರಿಯೆ ತೋರಿದರೆಂಬುದು ಇಲ್ಲಿ ಮುಖ್ಯವೆನಿಸುತ್ತದೆ. ಕ್ರಿ.ಶ. ೧೮೭೪ರಲ್ಲಿ ಬಂಗಾಲಿ ಭಾಷೆಯ ಸಿಲ್ಹೆಟ್‌ಜಿಲ್ಲೆಯನ್ನು ಅಸ್ಸಾಮಿಗೆ ವರ್ಗಾಯಿಸಿದರು. ಇದನ್ನು ಸಹಿಸದ ಆ ಜಿಲ್ಲೆಯ ಎಲ್ಲ ಹಿಂದು-ಮುಸ್ಲಿಮರು ಜಾತಿಭೇದ ಮರೆತು, ಅದನ್ನು ಬಲವಾಗಿ ಪ್ರತಿಭಟಿಸಿ, ಸಿಲ್ಹೆಟ್‌ಜಿಲ್ಲೆಯನ್ನು ಬಂಗಾಲದಲ್ಲಿಯೆ ಉಳಿಸುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿದ ಬಗ್ಗೆ ದಾಖಲೆಗಳಿವೆ.

ಬೇರೆ ಬೇರೆ ಆಡಳಿತಗಳಲ್ಲಿ ಹರಿದು ಹಂಚಿಹೋದ ಒರಿಯಾಭಾಷೆಯ ಪ್ರದೇಶವನ್ನು ಒಂದುಗೂಡಿಸಿ ಒಂದೇ ಆಡಳಿತಕ್ಕೆ ತರಬೇಕೆಂದು ಕ್ರಿ.ಶ. ೧೮೭೬ರಷ್ಟು ಹಿಂದೆಯೇ ಆಂಗ್ಲ ಸರ್ಕಾರಕ್ಕೆ ಅಲ್ಲಿಯ ಜನ ಬೇಡಿಕೆ ಸಲ್ಲಿಸಿದ್ದಾರೆ. ಒರಿಯಾ ಜನರ ಈ ಏಕೀಕರಣ ಚಳವಳಿಯ ಇತಿಹಾಸವನ್ನು ಇಬ್ಬರು ಪದವೀಧರರು ಗ್ರಂಥರೂಪದಲ್ಲಿ ಬರೆದಿಟ್ಟಿದ್ದು ಇದೇ ಪ್ರಾಯಃ ಭಾಷಾವಾರುಪ್ರಾಂತರಚನೆಗೆ ಸಂಬಂಧಿಸಿದಂತೆ ಭಾರತದಲ್ಲಿ ರಚನೆಗೊಂಡ ಪ್ರಥಮಕೃತಿ ಯೆನಿಸುತ್ತದೆ.

ಈ ನಿಟ್ಟಿನಲ್ಲಿ ನಡೆದ ಇನ್ನೊಂದು ಮಹತ್ವದ ಘಟನೆಯೆಂದರೆ ವಂಗ-ಭಂಗ ಚಳವಳಿ. ಬಂಗಾಲಿಗಳ ಶಕ್ತಿಯನ್ನು ಕುಗ್ಗಿಸಿ ಅವರ ಒಗ್ಗಟ್ಟನ್ನು ಒಡೆಯುವ ಉದ್ದೇಶದಿಂದ ಅಂದಿನ ಗವರ್ನರ್ ಜನರಲ್ ಲಾರ್ಡ್ ಕರ್ಜನ್ ಕ್ರಿ.ಶ. ೧೯೦೫ರಲ್ಲಿ ಬಂಗಾಲವನ್ನು ಪೂರ್ವ ಮತ್ತು ಪಶ್ಚಿಮ ಬಂಗಾಲವೆಂದು ಎರಡು ಭಾಗವಾಗಿ ವಿಭಜಿಸಿದಾಗ ಬಂಗಾಲಿಗಳು ತೋರಿದ ಪ್ರತಿಭಟನೆ ತುಂಬಾ ಉಗ್ರ ಮತ್ತು ವ್ಯಾಪಕವಾಗಿತ್ತು. ಕರ್ಜನ್ ಅನಂತರ ಗವರ್ನರ್ ಆಗಿ ಬಂದ ಲಾರ್ಡ್ ಹಾರ್ಡಿಂಜ್ ಅದರ ಉಗ್ರತೆಯನ್ನು ಮನಗಂಡು ಕ್ರಿ.ಶ. ೧೯೧೧-೧೨ರಲ್ಲಿ ವಂಗಭಂಗ ಕಾನೂನನ್ನು ರದ್ದುಗೊಳಿಸಿದ.

ಈ ರೀತಿ ಬಂಗಾಲ ಮತ್ತು ಒರಿಸ್ಸಾಗಳಲ್ಲಿ ಕಾಣಿಸಿಕೊಂಡ ಭಾಷಾಭಿಮಾನ ಹಾಗೂ ಐಕ್ಯತೆಯನ್ನು ಪ್ರಕಟಿಸಿದ ಸಂದರ್ಭಗಳು ಕನ್ನಡಿಗರಲ್ಲಿಯೂ ಭಾಷಾಭಿಮಾನ ಮತ್ತು ಏಕೀಕರಣ ಪ್ರಜ್ಞೆಯನ್ನು ಜಾಗೃತಗೊಳಿಸಿರುವ ಸಾಧ್ಯತೆಯಿದೆ. ಜೊತೆಗೆ ಇಂತಹ ಘಟನೆಗಳು ಕೆಲವು

ವಿಚಾರವಂತ ಆಂಗ್ಲರಲ್ಲಿಯೂ ಭಾಷಾವಾರು ಪ್ರಾಂತರಚನೆಯ ಅಗತ್ಯವನ್ನು ಬಿಂಬಿಸಿದುದನ್ನು ಮರೆಯಲಾಗದು. ಈ ಘಟನೆಗಳು ನಡೆಯುವ ಮುನ್ನವೆ ಕೆಲವು ಆಂಗ್ಲ ಅಧಿಕಾರಿಗಳು ಭಾಷಾವಾರು ಪ್ರಾಂತರಚನೆಯ ಮಹತ್ವವನ್ನು ಮನಗಂಡವರಾಗಿದ್ದರು.

ಕ್ರಿ.ಶ. ೧೮೨೬ ರಷ್ಟು ಹಿಂದೆ, ಧಾರವಾಡ ಪ್ರದೇಶವನ್ನು ಯಾವಪ್ರಾಂತಕ್ಕೆ ಸೇರಿಸಬೇಕೆಂಬ ಪ್ರಶ್ನೆ ಎದ್ದಾಗ ಥಾಮಸ್ ಮನ್ರೋ ವ್ಯಕ್ತಪಡಿಸಿದ ಅಭಿಪ್ರಾಯವನ್ನು ಹಿಂದೆ ನೋಡಿದ್ದೇವೆ. ಇದರಿಂದ ಅವನು ಭಾಷಾವಾರು ರಾಜ್ಯರಚನೆಗಳ ಪರವಾಗಿದ್ದನೆಂಬುದು ಸ್ಪಷ್ಟವಾಗುತ್ತದೆ. ಬಂಗಾಲವನ್ನು ವಿಭಜಿಸಿ ವಂಗ-ಭಂಗ ಚಳವಳಿಗೆ ಕಾರಣನಾದ ಗವ್ರ್ನರ್ ಜನರಲ್ ಲಾರ್ಡ್ ಕರ್ಜನ್ನನ ಆಜ್ಞೆಯನ್ನು ರದ್ದುಪಡಿಸುತ್ತ ೧೯೧೧-೧೨ರ ಸುಮಾರಿಗೆ ಗವ್ರ್ನರ್ ಜನರಲ್ ಲಾರ್ಡ್ ಹಾರ್ಡಿಂಜ್ ಹೇಳಿರುವ ಮಾತುಗಳು ಮನನೀಯವಾಗಿವೆ:

> "ಒಂದೂದೇಶದ ಪ್ರಾಂತಗಳನ್ನು ಭಾಷೆ ಹಾಗೂ ಜನಾಂಗದ ಸ್ವಭಾವಕ್ಕನುಗುಣವಾಗಿ ರಚಿಸಬೇಕು. ಅಭಿವೃದ್ಧಿ ಸಾಧಿಸುವ ವಿಷಯದಲ್ಲಿ ಪ್ರಾಂತಗಳು ಪರಸ್ಪರ ಸ್ಪರ್ಧಿಸುವಂತಾಗಬೇಕು..... ಈಗ ಬಂಗಾಲ ಪ್ರಾಂತದಲ್ಲಿರುವ ಹಿಂದೀ ಮಾತನಾಡುವ ಜನರಿಗೆ (ಬಿಹಾರಿಗಳಿಗೆ) ಪ್ರತ್ಯೇಕ ಪ್ರಾಂತ ರಚಿಸುವುದು ಅತ್ಯಂತ ಅವಶ್ಯವಾಗಿದೆ. ಇಲ್ಲಿಯವರೆಗೆ ಇವರನ್ನು ಬಂಗಾಳಿಗಳೊಡನೆ ಸೇರಿಸಿರುವುದು ಉಚಿತವಲ್ಲ. ಅದರಿಂದಾಗಿ ಅವರ ಪ್ರಗತಿ ಕುಂಠಿತವಾಗಿದೆ. ಅವರು ಬೆಳೆಯಲು ಯೋಗ್ಯ ಅವಕಾಶಗಳು ಅವರಿಗೆ ದೊರೆಯುತ್ತಿಲ್ಲ. ಆದ್ದರಿಂದಲೆ "ಬಿಹಾರಬೇಕು"ಎಂಬ ಘೋಷಣೆ ಆಗಾಗ ಕೇಳಬರುತ್ತದೆ. ಬಂಗಾಲದಿಂದ ಬೇರ್ಪಡೆಯಾಗುವವರೆಗೆ, ಬಿಹಾರ ಎಂದೂ ಏಳಿಗೆ ಸಾಧಿಸಲು ಸಾಧ್ಯವಿಲ್ಲೆಂಬ ಭಾವನೆ ಬಿಹಾರಿಗಳಲ್ಲಿ ಬಲವಾಗಿ ಬೆಳೆಯುತ್ತಿದೆ. ಯೋಗ್ಯ ಪರಿಹಾರ ಈಗಲೆ ಕಂಡುಹಿಡಿಯದಿದ್ದರೆ ಸ್ವಲ್ಪೇ ಕಾಲದಲ್ಲಿ ಚಳವಳಿ ಉಗ್ರರೂಪತಾಳುವ ಸಾಧ್ಯತೆಗಳಿಲ್ಲದಿಲ್ಲ. ಆದುದರಿಂದ ನಾವಾಗಿಯೆ ಮುಂದುವರೆದು, ಯೋಗ್ಯ ಬದಲಾವಣೆ ಮಾಡಿಕೊಳ್ಳಲು ಪ್ರಸ್ತುತ ಸಂದರ್ಭ ಬಹಳ ಯೋಗ್ಯವಾಗಿದೆ."

ಮುಂದೆ ಬ್ರಿಟಿಶ್ ಸರ್ಕಾರ ನೇಮಿಸಿದ, 'ರಾಯಲ್ ಕಮಿಶನ್', 'ಮಾಂಟಫೋರ್ಡ್ ಮಿಶನ್', 'ಸೈಮನ್ ಆಯೋಗ' ಹಾಗೆಯೇ ಕಾಂಗ್ರೆಸ್ ಸಂಸ್ಥೆ ನೇಮಿಸಿದ 'ನೆಹರುಸಮಿತಿ' ಇತ್ಯಾದಿಗಳು ಭಾಷಾವಾರು ಪ್ರಾಂತರಚನೆಗೆ ತಮ್ಮ ಸಮ್ಮತಿ ಸೂಚಿಸಿ ವರದಿ ಸಲ್ಲಿಸಿವೆ. ಕ್ರಿ.ಶ. ೧೯೧೮ರಲ್ಲಿ ಹೊರಬಂದ ಮಾಂಟಫೋರ್ಡ್ ವರದಿಯಲ್ಲಿ:

> "ಇಂದಿನ ಬ್ರಿಟಿಶ್ ಭಾರತದ ನಕಾಶೆಯನ್ನು ಅಂದಂದಿನ ಸೈನಿಕ, ರಾಜಕೀಯ ಅಥವಾ ಆಡಳಿತದ ಅಗತ್ಯಗಳಿಗನುಗುಣವಾಗಿ ರೂಪಿಸಲಾಯಿತೆ ವಿನಾ ಜನತೆಯ ಹಿತವನ್ನು ಗಮನಿಸಲಾಗಿಲ್ಲ. ..ಸಾಧ್ಯವಾದರೆ ಸಿಂಧದಂತಹ ಐತಿಹಾಸಿಕ ಪ್ರದೇಶಗಳನ್ನು ನಿರ್ಮಿಸಬೇಕು. ಆದರೂ ಭಾಷೆ, ಜನಾಂಗ ಹಾಗೂ ಧರ್ಮ ಇವುಗಳ ಐಕ್ಯತೆಯೂ ಮಹತ್ವವುಳದ್ದು. ಇವುಗಳಲ್ಲಿ ಭಾಷೆಯೆ ಎಲ್ಲಕ್ಕೂ ಮುಖ್ಯ"

ಎಂದು ಹೇಳಿರುವುವನ್ನು ಇಲ್ಲಿ ಗಮನಿಸಬೇಕು 'ಡಯಾರ್ಕಿ' (ದ್ವಿದಳರಾಜ್ಯ ಪದ್ಧತಿ) ಗ್ರಂಥದ ಕರ್ತೃ ಲಿಯೊನೆಲ್‌ಕರ್ಟಿಸ್ ಭಾಷಾವಾರು ಪ್ರಾಂತ ರಚನೆಯಾಗಬೇಕೆಂಬ ಜನತೆಯ ಬೇಡಿಕೆ ಸರಿಯಾದುದೆಂದು ಅಭಿಪ್ರಾಯ ಪಡುತ್ತ ಅದನ್ನು ಮಾಂಟಫೋರ್ಡ್ ಮಿಶನ್ನಿನ ಮುಂದೆ ಬಲವಾಗಿ ಪ್ರತಿಪಾದಿಸಿದ್ದಾನೆ. ಮತ್ತು ಅಂದಿನ ಅಬದ್ಧ ಪ್ರಾಂತರಚನೆಯನ್ನು ತೆಗಳಿದ್ದಾನೆ.

> ಕ್ರಿ.ಶ. ೧೯೩೦ರ ತನ್ನ ವರದಿಯಲ್ಲಿ 'ಸೈಮನ್ ಆಯೋಗ' "ಅನೇಕ ಪ್ರಾಂತಗಳಲ್ಲಿ ಜನಸಂಖ್ಯೆ ವಿಪರೀತವಾಗಿದೆ. ಅವುಗಳ ವಿಸ್ತಾರವೂ ಅಧಿಕವಾಗಿದೆ. ಆದುದರಿಂದ ಅಲ್ಲಿಯವರ ಸಾಂಸ್ಕೃತಿಕ ಹಿನ್ನೆಲೆ ಹಾಗೂ ಆರ್ಥಿಕ ಸ್ಥಿತಿಗಳನ್ನು ಪರಿಶೀಲಿಸಿ..... ಆ ತಳಹದಿಯ ಮೇಲೆ ಪ್ರಾತಿನಿಧಿಕ ಸರ್ಕಾರದ ರಚನೆ ಫಲಪ್ರದವಾಗಬಹುದು"

ಎಂದು ಹೇಳಿದೆ. ಹಾರ್ಡಿಂಜನ ಸಲಹೆಯಂತೆ ೧೯೧೨ರಲ್ಲಿ ಬಿಹಾರವು ಒರಿಸ್ಸಾ ಮತ್ತು ಛೋಟಾನಾಗಪುರಗಳೊಂದಿಗೆ ಬಂಗಾಲದಿಂದ ಬೇರ್ಪಡಿಸಲ್ಪಟ್ಟಿತ್ತಾದರೂ, ಒರಿಸ್ಸಾ ಪ್ರತ್ಯೇಕ ಪ್ರಾಂತವಾಗಲಿಲ್ಲ. ಅಲ್ಲಿ ಚಳವಳಿ ಮುಂದುವರಿದು ೧೯೩೦ರಲ್ಲಿ ಸೈಮನ್ ಕಮೀಶನ್ನಿನ ಶಿಫಾರಸ್ ಮೇರೆಗೆ ಒರಿಸ್ಸಾಪ್ರಾಂತ ರಚನೆಗೊಂಡಿತು.

ಘಟನಾತ್ಮಕ ಸುಧಾರಣೆಗಳನ್ನು ಸೂಚಿಸಲು ಸರ್ವಪಕ್ಷ ಪರಿಷತ್ತು ನೇಮಿಸಿದ ನೆಹರು ಸಮಿತಿ ಕ್ರಿಶ. ೧೯೨೮ರ ತನ್ನ ವರದಿಯಲ್ಲಿ

> "ಒಂದು ಪ್ರಾಂತ ಬಹುಬೇಗ ಪ್ರಗತಿ ಸಾಧಿಸಬೇಕಾದರೆ, ಅದು ತನ್ನ ಕಾರ್ಯವನ್ನು ತನ್ನದೇ ಆದ ಭಾಷೆಯಲ್ಲಿ ಸಾಗಿಸಬೇಕು...... ಅದು ಸಾಧ್ಯವಾಗಬೇಕಾದರೆ, ಆ ಪ್ರಾಂತವು ಭಾಷಾನ್ವಯ ಪ್ರದೇಶವಾಗಿರದೆ ಬೇರೆ ಗತ್ಯಂತರವೇ ಇಲ್ಲ. ಒಂದು ವೇಳೆ ಅದು ಬಹುಭಾಷಾ ಪ್ರದೇಶವಾಗಿದ್ದರೆ, ಒಂದರ ಮೇಲೊಂದು ಸಮಸ್ಯೆಗಳು ಹುಟ್ಟಿಕೊಳ್ಳುವವು........ಸಾಮಾನ್ಯವಾಗಿ ಭಾಷೆಗೂ, ವಿಶಿಷ್ಟ ಬಗೆಯ ಸಂಸ್ಕೃತಿಗೂ, ಸಂಪ್ರದಾಯಗಳಿಗೂ ಸಾಹಿತ್ಯಕ್ಕೂ ನಿಕಟಸಂಬಂಧವಿದೆ. ಭಾಷಾನ್ವಯ ಪ್ರದೇಶದಲ್ಲಿ ಇವೆಲ್ಲ ಏಕಸೂತ್ರತೆಯಲ್ಲಿರುವುದರಿಂದ, ಆ ಪ್ರಾಂತದ ಸರ್ವಾಂಗೀಣಪ್ರಗತಿಗೆ ನೆರವು ದೊರೆಯುತ್ತದೆ"

ಎಂದು ದಾಖಲಿಸಿರುವುದು ಯಥಾಯೋಗ್ಯವಾಗಿದೆ. ಅಲ್ಲದೆ ಆ ಕಾಲದ ಮಹತ್ವದ ವ್ಯಕ್ತಿಗಳು ಕೂಡ ಭಾಷಾವಾರು ಪ್ರಾಂತರಚನೆಗೆ ತಮ್ಮ ಒಲವು ತೋರಿದ್ದಾರೆ.

ಕ್ರಿ.ಶ. ೧೯೧೯ರಲ್ಲಿ ತನ್ನ ವರದಿಯನ್ನು ಸಲ್ಲಿಸಿದ 'ರಾಯಲ್ ಕಮಿಶನ್' ಮುಂದೆ ಲೋಕಮಾನ್ಯ ಟಿಳಕರು ವಿಕೇಂದ್ರೀಕರಣದ ಬಗ್ಗೆ ತಮ್ಮ ಸಾಕ್ಷ್ಯ ನೀಡುತ್ತ "ಭಾಷಾನ್ವಯ ಮತ್ತು ಏಕಜನಾಂಗದ ತಳಹದಿಯ ಮೇಲೆ ಪ್ರಾಂತಗಳ ಪುನರ್ವ್ಯವಸ್ಥೆ ಮಾಡುವುದು, ಅವೆಲ್ಲವನ್ನು ಕೇಂದ್ರದ ಅಧೀನದಲ್ಲಿಟ್ಟು ಅವುಗಳ ಸಂಯುಕ್ತತೆಯನ್ನು ಸ್ಥಾಪಿಸುವುದೂ ಅವಶ್ಯಕವಾಗಿದೆ" ಎಂದು ಹೇಳಿರುವುದು ಗಮನಾರ್ಹವಾಗಿದೆ. ಅಲ್ಲಿಂದ ಮುಂದೆ ಅವರು ಭಾಷಾನ್ವಯ ಪ್ರಾಂತರಚನೆಯ ಅಧ್ವರ್ಯುಗಳಾದರು.

ಆಚಾರ್ಯ ಶ್ರೀಮನ್ನಾರಾಯಣ ಅವರು ಭಾಷಾವಾರು ಪ್ರಾಂತರಚನೆಯ ಪ್ರಬಲ ಪ್ರತಿಪಾದಕರಾಗಿದ್ದರು. ಅವರು ತಮ್ಮ 'Gandhian Constitution for free India" ಎಂಬ ಗ್ರಂಥದಲ್ಲಿ "ಭಾಷಾ ಪ್ರದೇಶಗಳನ್ನು ಮುಖ್ಯವಾಗಿ ಅನುಲಕ್ಷಿಸಿ, ಪ್ರಾಂತಗಳ ಗಡಿಗಳನ್ನು ನಿರ್ಧರಿಸಬೇಕು. ಐತಿಹಾಸಿಕ ಕಾರಣಗಳಿಂದಾಗಿ ಇಂದಿನ ಪ್ರಾಂತೀಯ ಗಡಿಗಳು ಉಂಟಾಗಿವೆ. ಆದುದರಿಂದ ಇವುಗಳ ರಚನೆಗೆ ಯಾವ ಶಾಸ್ತ್ರೀಯ ತಳಹದಿಯೂ ಇಲ್ಲ. ಅನೇಕ ಪ್ರಾಂತಗಳು ವಿಸಂಗತವಾಗಿಯೂ, ಕಲಬೆರಕೆಯುಳ್ಳವಾಗಿಯೂ ಇವೆ. ಆದ್ದರಿಂದ ಭಾಷಾನ್ವಯ ತಳಹದಿಯ ಮೇಲೆ ಪ್ರಾಂತಗಳನ್ನು ಪುನರ್ಘಟಿಸಬೇಕಾಗಿದೆ. ಒಂದೇ ಪ್ರಾಂತ್ಯದಲ್ಲಿ ಒಂದಕ್ಕಿಂತ ಹೆಚ್ಚು ಭಾಷೆಗಳಿದ್ದರೆ, ಅನೇಕ ತೊಂದರೆಗಳು ಎದುರಾಗುತ್ತವೆ..... ದ್ವಿಭಾಷಾ ಅಥವಾ

ಬಹುಭಾಷಾ ಪ್ರಾಂತಗಳಲ್ಲಿ ಮಾತೃಭಾಷೆಯ ಮೂಲಕ ಶಿಕ್ಷಣ ಕೊಡುವುದು ಸಾಧ್ಯವಿಲ್ಲದ ಮಾತು" ಎಂದು ಹೇಳಿರುವ ಜೊತೆಗೆ, ಗಾಂಧೀಜಿ ಅವರಿಗೆ "ಭಾಷಾನ್ವಯವಾಗಿ ಪ್ರಾಂತ ಸಂಗಡನೆ ಮಾಡುವ ಕೆಲಸವನ್ನು ಕಾಂಗ್ರೆಸ್ ಏಕೆ ಕೈಗೆತ್ತಿಕೊಂಡಿಲ್ಲವೊ ತಿಳಿಯದು. ಭಾರತದ ಉತ್ತಮ ಆಡಳಿತಕ್ಕೆ ಇದು ಅವಶ್ಯವೆಂದು ೧೯೨೦ರಿಂದಲೂ ಕಾಂಗ್ರೆಸ್ ಹೇಳುತ್ತಲೇ ಬಂದಿದೆ. ಶಾಲೆ-ಕಾಲೇಜುಗಳಲ್ಲಿ ಪ್ರಾಂತೀಯ ಭಾಷೆಯ ಮೂಲಕ ಶಿಕ್ಷಣಕಾರ್ಯ ಕೈಗೊಳ್ಳುವುದು ಪುನರ್ವಿಂಗಡಣೆಯಾಗದೆ ಕಷ್ಟಸಾಧ್ಯ" ಎಂಬರ್ಥ ಬರುವ ಪತ್ರವೊಂದನ್ನು ಬರೆದಿದ್ದರು. ಅದನ್ನು 'ಹರಿಜನಸೇವಕ'ದಲ್ಲಿಯೂ ಪ್ರಸಿದ್ಧಿಸಲಾಗಿತ್ತು.

ಅದಕ್ಕೆ ಉತ್ತರವೆಂಬಂತೆ ಗಾಂಧೀಜಿ ತಮ್ಮ 'ಕಮ್ಯುನಲ್ ಯೂನಿಟಿ' ಎಂಬ ಗ್ರಂಥದಲ್ಲಿ "ಮೇಲ್ಕಂಡ ಪತ್ರದಲ್ಲಿಯ ಸೂಚನೆಗೆ ನನ್ನ ಸಂಪೂರ್ಣ ಬೆಂಬಲವಿದೆ..... ಯಾವ ದೃಷ್ಟಿಕೋನದಿಂದ ವಿಚಾರಿಸಿ ನೋಡಿದರೂ ಭಾಷಾನ್ವಯಪ್ರಾಂತರಚನೆ, ಸರಿಯಾಗಿರುವುದರಿಂದ, ಈ ಯೋಜನೆಯನ್ನು ಕಾರ್ಯರೂಪದಲ್ಲಿಳಿಸಲು ತಡಮಾಡಲೇ ಕೂಡದು" ಎಂದು ಬರೆದಿದ್ದಾರೆ.

ಗಾಂಧೀಜಿಯವರ ತಮ್ಮ ಒಂದು ಪ್ರಾರ್ಥನೋತ್ತರ ಭಾಷಣದಲ್ಲಿ "ಪ್ರಾಂತಿಕಭಾಷೆಗಳು ಬೆಳೆದು ಪರಿಪೂರ್ಣಾವಸ್ಥೆಯನ್ನು ಹೊಂದಬೇಕಾದರೆ, ಭಾಷೆಯ ತಳಹದಿಯ ಮೇಲೆ ಪ್ರಾಂತಗಳನ್ನು ಪುನರ್ವಿಂಗಡಿಸುವುದು ಅವಶ್ಯ. ಹಿಂದಿಯು ಭಾರತದ ರಾಷ್ಟ್ರಭಾಷೆಯಾಗಬೇಕು. ಆದರೆ ಅದು ಪ್ರಾಂತೀಯ ಭಾಷೆಗಳ ಸ್ಥಾನವನ್ನು ಆಕ್ರಮಿಸಬಾರದು. ಇಂಗ್ಲಿಷಂತೂ ದೂರವೇ ಉಳಿಯಿತು. ಹಿಂದೀ ಕೂಡ ಪ್ರಾಂತಗಳಲ್ಲಿ ಶಿಕ್ಷಣದ ಮಾಧ್ಯಮವಾಗಲಾರದು. ಎಲ್ಲ ಪ್ರಾಂತಗಳು ಭಾರತದೊಡನೆ ನಿಕಟ ಸಂಬಂಧವುಳ್ಳವಾಗಿವೆ ಎಂಬುದನ್ನು ಹೆಜ್ಜೆ ಹೆಜ್ಜೆಗೂ ಮನಗಾಣಿಸುವುದೆ ಹಿಂದುಸ್ತಾನಿಭಾಷೆಯ ಮುಖ್ಯ ಕಾರ್ಯವಾಗಿದೆ" ಎಂದು ಹೇಳಿರುವುದೂ ನಮ್ಮೆಲ್ಲರ ಗಮನದಲ್ಲಿರಬೇಕಾದುದು ಮುಖ್ಯ.

ಇದು, ಭಾಷಾವಾರು ಪ್ರಾಂತರಚನೆಯ ಪರಿಕಲ್ಪನೆ ಬೆಳೆಯುತ್ತ ಅದು ಕಾಲಕಳೆದಂತೆ ಬಹಳ ವ್ಯಾಪಕವಾಗುತ್ತ, ರಾಷ್ಟ್ರೀಯಮಟ್ಟ ತಲುಪಿದುದರ ಒಂದು ಪಕ್ಷಿನೋಟ.

ಕನ್ನಡಿಗರಿಗೂ ಭಾಷಾವಾರು ಪ್ರಾಂತ ರಚನೆಯ ಮಹತ್ವ ಮನವರಿಕೆಯಾಗಲಾರಂಭಿಸಿತು. ಹತ್ತು ಹಲವು ಆಡಳಿತಗಳಲ್ಲಿ ಹರಿದು ಹಂಚಿಹೋಗಿ, ತಮ್ಮತನವನ್ನೇ ಮರೆತ, ಕನ್ನಡಿಗರಲ್ಲಿ ಏಕೀಕರಣಕ್ಕೆ ಪೂರ್ವಭಾವಿಯಾಗಿ ಕನ್ನಡನುಡಿ, ಕನ್ನಡ ಸಾಹಿತ್ಯ ಅದರ ವೈಭವೋಪೇತ ಇತಿಹಾಸದ ಬಗ್ಗೆ ಅಭಿಮಾನ ಮೂಡಿಸುವ ಮಹತ್ತರ ಕಾರ್ಯ ನಡೆಯಬೇಕಿತ್ತು.

ಈ ದಿಶೆಯಲ್ಲಿ ಕ್ರಿ.ಶ. ೧೮೯೦ರಲ್ಲಿ ಧಾರವಾಡದಲ್ಲಿ ಅಸ್ತಿತ್ವಕ್ಕೆ ಬಂದ 'ಕರ್ನಾಟಕ ವಿದ್ಯಾವರ್ಧಕಸಂಘ' ಮಾಡಿದ ಕಾರ್ಯ ಬಹಳ ಮುಖ್ಯವಾದದ್ದು ಮತ್ತು ಈ ಉದ್ದೇಶದಿಂದ ಸಾರ್ವಜನಿಕ ವಲಯದಲ್ಲಿ ಕರ್ನಾಟಕದಲ್ಲಿ ಸ್ಥಾಪನೆಗೊಂಡ ಸಂಘಗಳಲ್ಲಿ ಇದೇ ಮೊದಲನೆಯದು.

ಕ್ರಿಶ. ೧೮೯೬ರ ನವಂಬರ್ ೨೨ರಂದು ಧಾರವಾಡದಲ್ಲಿ ನಡೆದ ವ್ಯವಸ್ಥಾಪಕರ ಸಭೆಯಲ್ಲಿ ಕನ್ನಡ ಭಾಷಾಭಿವೃದ್ಧಿ ಹಾಗೂ ಕನ್ನಡಿಗರ ಕರ್ತವ್ಯಗಳ ಬಗ್ಗೆ ಚರ್ಚೆ ನಡೆದು ಒಂದು ನಿರ್ಧಾರಕ್ಕೆ ಬರಲಾಯಿತು. ಪ್ರಾಥಮಿಕ ಶಾಲೆಗಳಲ್ಲಿ ಕನ್ನಡವನ್ನು ಮಾತ್ರ ಕಲಿಸಬೇಕು, ಮರಾಠಿಯನ್ನು ನಾಗರಿಲಿಪಿಯನ್ನು ಕಲಿಸಬಾರದು ಎಂಬ ನಿರ್ಣಯವನ್ನು ಆ ಸಭೆಯಲ್ಲಿ ಕೈಕೊಂಡು, ಆ ಬಗ್ಗೆ ಸರ್ಕಾರದ ಮೇಲೆ ಒತ್ತಡ ತರುವ ಬಗ್ಗೆಯೂ ನಿಶ್ಚಯಿಸಲಾಯಿತು. ಉತ್ತರ ಕರ್ನಾಟಕದಲ್ಲಿದ್ದ ಜಹಗೀರುಗಳ ಒಡೆಯರು ಹೆಚ್ಚಾಗಿ ಮರಾಠಿಭಾಷಿಕರೇ ಆಗಿದ್ದುದರಿಂದ, ಮಕ್ಕಳಿಗೆ ಒತ್ತಾಯಪೂರ್ವಕ ಮರಾಠಿ ಕಲಿಸಲಾಗುತ್ತಿತ್ತು. ಆ ಕನ್ನಡದ ಮಕ್ಕಳಿಗೆ ತಮ್ಮ ಮಾತೃಭಾಷೆ ಕಲಿಯಲು ಆಸ್ಪದವೇ ಇರಲಿಲ್ಲವೆಂಬ ಡಾ॥ ಫ್ಲೀಟ್ ಅವರ ಮಾತನ್ನು ನೆನೆದಾಗ ಆ ಸಂಸ್ಥಾನಗಳಲ್ಲಿ ಮರಾಠಿಭಾಷೆಗೆ ಪ್ರಾಧಾನ್ಯವಿದ್ದುದು ಮನವರಿಕೆ ಯಾಗುತ್ತದೆ. ಈ ಬಗ್ಗೆಯೂ ಕ.ವಿ.ವ. ಸಂಘ ತನ್ನ ಲಕ್ಷ್ಯ ಹರಿಸದೆ ಬಿಡಲಿಲ್ಲ. ಕನ್ನಡ ಕಲಿಸುವ ಬಗ್ಗೆ ಸರ್ಕಾರದೊಡನೆ ಕ.ವಿ.ವ. ಸಂಘ ತಿಕ್ಕಾಟಕ್ಕಿಳಿದು ಅದರಲ್ಲಿ ಯಶಸ್ವಿಯಾಯಿತು. ಕನ್ನಡಿಗರ ವಾದದಲ್ಲಿ ಹುರುಳಿರುವುದನ್ನು ಮನಗಂಡ ಬ್ರಿಟಿಶ್ ಸರ್ಕಾರ ಆಮೇಲೆ ಕನ್ನಡ ಶಾಲೆಗಳಲ್ಲಿ ಮರಾಠಿ ಕಲಿಸುವುದನ್ನು ನಿಲ್ಲಿಸಿತು. ಅದೇ ವರ್ಷ(೧೮೯೬) ಕ.ವಿ.ವ. ಸಂಘವು ತನ್ನದೇ ಆದ 'ವಾಗ್ಭೂಷಣ' ಹೆಸರಿನ ಮಾಸಪತ್ರಿಕೆ ಆರಂಭಿಸಿತು.

ಕನ್ನಡ ಭಾಷೆಯನ್ನಾಡುವ ಬೇರೆ ಬೇರೆ ಪ್ರದೇಶದ ಕನ್ನಡಿಗರ ಜೊತೆ ಕ.ವಿ.ವ. ಸಂಘ ತನ್ನ ಸಂಬಂಧ, ಸಂಪರ್ಕಗಳನ್ನು ಮೊದಲಿನಿಂದಲೂ ಇರಿಸಿಕೊಂಡು ಬಂದಿತ್ತು. ಕ್ರಿ.ಶ. ೧೯೦೦ರ ಮಾರ್ಚ ಹನ್ನೊಂದರ ಸಂಘದ ವಾರ್ಷಿಕ ಸಭೆಗೆ, ಮೈಸೂರು ಸರ್ಕಾರ ತನ್ನ ಒಬ್ಬ ಪ್ರತಿನಿಧಿಯನ್ನು ಕಳಿಸಿತ್ತೆಂಬುದನ್ನು ಇಲ್ಲಿ ನೆನೆಯಬಹುದು.

ಕ್ರಿ.ಶ. ೧೯೦೭ರ ಫೆಬ್ರುವರಿ ವಾಗ್ಭೂಷಣ ಸಂಚಿಕೆಯಲ್ಲಿ ಆಲೂರು ವೆಂಕಟರಾಯರು "ಕರ್ನಾಟಕವು ಒಂದಾಗದೆ ಕನ್ನಡಿಗರ ಏಳಿಗೆ ಸಾಧ್ಯವಿಲ್ಲ" ಎಂಬುದನ್ನು ಪ್ರತಿಪಾದಿಸುವ ಒಂದು ಮಹತ್ವಪೂರ್ಣ ಲೇಖನ ಬರೆದರು. ಆ ವಿಚಾರಪ್ರಚೋದಕ ಲೇಖನ, ಕನ್ನಡಿಗರ ಮೇಲೆ ತುಂಬಾ ಪ್ರಭಾವ ಬೀರಿ, ಅವರು ಕರ್ನಾಟಕ ಏಕೀಕರಣದ ಬಗ್ಗೆ ಆಲೋಚಿಸುವಂತೆ ಮಾಡಿತು.

ಕ.ವಿ.ವ. ಸಂಘದ ಆಶ್ರಯದಲ್ಲಿ ಕ್ರಿ.ಶ. ೧೯೦೭ ಜೂನ ೨ ಹಾಗೂ ೩ ರಂದು ಧಾರವಾಡದಲ್ಲಿ 'ಅಖಿಲ ಕರ್ನಾಟಕ ಗ್ರಂಥಕರ್ತರ ಪ್ರಥಮ ಸಮ್ಮೇಳನ' ನಡೆಯಿತು. ಇದು ಕರ್ನಾಟಕದ ವಿವಿಧ ಭಾಗಗಳ ಗ್ರಂಥಕರ್ತರಲ್ಲಿ ಪರಸ್ಪರ ಪರಿಚಯವನ್ನು ಕುದುರಿಸುವ ಜೊತೆಗೆ, ನಾಡು-ನುಡಿಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ವಿಚಾರವಿನಿಮಯ ಮಾಡಿಕೊಳ್ಳಲು ಅವಕಾಶ ಒದಗಿಸಿತು.

ಅಖಿಲ ಕರ್ನಾಟಕ ಗ್ರಂಥಕರ್ತರ ಎರಡನೆಯ ಸಮ್ಮೇಳನವನ್ನು ಬೆಂಗಳೂರಿನಲ್ಲಿ ಕ್ರಿ.ಶ. ೧೯೦೮ರ ಮೇ ೩೦ರಂದು ಕರೆಯುವುದು ನಿರ್ಧಾರವಾಗಿದ್ದರೂ, ಮೈಸೂರು ಸಂಸ್ಥಾನದ ವಿದ್ಯಾ ಇಲಾಖೆಯು, ಇದೆಲ್ಲ ಒಂದು ರಾಜಕೀಯ ಎಂಬ ಕಾರಣ ಮುಂದುಮಾಡಿ ಸಮ್ಮೇಳನವನ್ನು ನಡೆಸಗೊಡಲಿಲ್ಲ.

ಕ್ರಿ.ಶ. ೧೯೧೫ರಲ್ಲಿ ಅಖಿಲಕರ್ನಾಟಕದ ಪ್ರಮುಖ ಕನ್ನಡ ಸಾಹಿತಿಗಳ ಸಭೆ ಸೇರಿ, ಪರಸ್ಪರರಲ್ಲಿ ಚರ್ಚೆ, ವಿಚಾರಗಳ ಆದಾನ ಪ್ರದಾನ ನಡೆದು ಕೊನೆಗೆ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಅಭಿವೃದ್ಧಿಗಾಗಿ ಎಲ್ಲ ಭಾಗದ ಕನ್ನಡಿಗರನ್ನು ಪ್ರತಿನಿಧಿಸುವ ಒಂದು ಸಂಸ್ಥೆಯನ್ನು ಸ್ಥಾಪಿಸಬೇಕೆಂದೂ ಅದಕ್ಕೆ 'ಕನ್ನಡ ಸಾಹಿತ್ಯ ಪರಿಷತ್' ಹೆಸರಿರಬೇಕೆಂದೂ ನಿರ್ಧರಿಸಲಾಯಿತು. ಹಾಗೂ ಆ ಬಗ್ಗೆ ಒಂದು ಗೊತ್ತುವಳಿಯನ್ನೂ ಸ್ವೀಕರಿಸಲಾಯಿತು. ಆ ಗೊತ್ತುವಳಿಯ ಪ್ರಕಾರ ಕ್ರಿ.ಶ. ೧೯೧೬ರಲ್ಲಿ 'ಕನ್ನಡಸಾಹಿತ್ಯಪರಿಷತ್' ಬೆಂಗಳೂರಲ್ಲಿ ಸ್ಥಾಪನೆಗೊಂಡಿತು. ಹೀಗೆ ಅಖಿಲ ಕರ್ನಾಟಕದ ಕನ್ನಡಿಗರನ್ನು ಪ್ರತಿನಿಧಿಸುವ 'ಕನ್ನಡ ಸಾಹಿತ್ಯ ಪರಿಷತ್' ಸ್ಥಾಪನೆಯಲ್ಲಿ ಧಾರವಾಡದ 'ಕರ್ನಾಟಕ ವಿದ್ಯಾವರ್ಧಕ ಸಂಘ'ದ ಪಾತ್ರ ಹಿರಿದೆಂಬುದನ್ನು ಮರೆಯಲಾಗದು.

'ಕರ್ನಾಟಕ ವಿದ್ಯಾವರ್ಧಕ ಸಂಘ' ಹಾಗೂ 'ಕನ್ನಡಸಾಹಿತ್ಯಪರಿಷತ್' ಇವುಗಳ ಕಾರ್ಯ ಚಟುವಟಿಕೆಗಳು ಮೊದಮೊದಲು ರಾಜಕೀಯದಿಂದ ದೂರವಿದ್ದು ನಾಡು-ನುಡಿಗಳ ಅಭಿವೃದ್ಧಿ, ಮತ್ತು ಕನ್ನಡ ಸಾಹಿತಿಗಳ ಮಧ್ಯೆ ನಿಕಟಸಂಪರ್ಕವೇರ್ಪಡಿಸುವುದಕ್ಕೆ ಮಾತ್ರ ಮೀಸಲಾಗಿದ್ದವು. ಆದರೆ ಕರ್ನಾಟಕ ಏಕೀಕರಣವಾಗದೆ ಕನ್ನಡಿಗರ ಸರ್ವತೋಮುಖ ಅಭಿವೃದ್ಧಿ ಸಾಧ್ಯವಾಗ ದೆಂಬುದನ್ನು ಮನಗಂಡ ಇವು ಕರ್ನಾಟಕ ಏಕೀಕರಣದ ಮಹತ್ವವನ್ನು ಜನಮನದಲ್ಲಿ ಬಿಂಬಿಸುವ ಕಾರ್ಯವನ್ನು ಕೈಗೆತ್ತಿಕೊಂಡವು.

ಕ್ರಿ.ಶ. ೧೯೦೭ರಷ್ಟು ಹಿಂದೆ ಆಲೂರು ವೆಂಕಟರಾಯರು, ಕರ್ನಾಟಕ ವಿದ್ಯಾವರ್ಧಕ ಸಂಘದ ಮುಖಪತ್ರಿಕೆಯಾದ 'ವಾಗ್ಭೂಷಣ'ದಲ್ಲಿ ಕರ್ನಾಟಕ ಏಕೀಕರಣದ ಅಗತ್ಯವನ್ನು ಕುರಿತು ಲೇಖನ ಬರೆದಿದ್ದರು. ಬೇರೆ ಕೆಲವರೂ ಅಂತಹ ಅಭಿಪ್ರಾಯಗಳನ್ನು ಪ್ರಕಟಿಸಿದ್ದರು. ಆದರೆ ಅವು ವೈಯಕ್ತಿಕ ಅಭಿಪ್ರಾಯಗಳಾಗಿದ್ದವೆ ವಿನಾ, ಒಂದು ಪ್ರಾತಿನಿಧಿಕ ಸಂಸ್ಥೆಯ ಅಭಿಪ್ರಾಯವಾಗಿರಲಿಲ್ಲ.

ಉತ್ತರ ಕರ್ನಾಟಕದ ಪ್ರಾತಿನಿಧಿಕ ಸಂಸ್ಥೆಯಾದ ಕ.ವಿ.ವ. ಸಂಘವು, ಈ ನಿಟ್ಟಿನಲ್ಲಿ ಒಂದು ಮಹತ್ವದ ಗೊತ್ತುವಳಿಯನ್ನು ೭.೧೦.೧೯೧೭ರ ತನ್ನ ವ್ಯವಸ್ಥಾಪಕ ಸಮಿತಿಯ ಸಭೆಯಲ್ಲಿ ಸ್ವೀಕರಿಸಿತು. ಅದರಲ್ಲಿ "ಬ್ರಿಟಿಷರ ಆಳ್ವಿಕೆಗೆ ಒಳಪಟ್ಟ, ಎಲ್ಲ ಕನ್ನಡ ಊರು, ತಾಲೂಕು, ಜಿಲ್ಲೆಗಳನ್ನು ಒಟ್ಟುಗೂಡಿಸಿ, ಒಂದು ರಾಜಕೀಯ ವಿಭಾಗ ಮಾಡಿ ಅದನ್ನು 'ಕರ್ನಾಟಕ ಪ್ರಾಂತ' ಎಂದು ಕರೆಯುವ ಬಗ್ಗೆ ಸರ್ಕಾರಕ್ಕೆ ಬಿನ್ನಹ ಮಾಡಬೇಕು. ಉದಾಹರಣಾರ್ಥ ಸೊಲ್ಲಾಪುರ ಜಿಲ್ಲೆಯ ಕೆಲಭಾಗದಲ್ಲಿ ಕನ್ನಡವಿದೆ. ಮದ್ರಾಸ ಇಲಾಖೆಯಲ್ಲಿ ಬಳ್ಳಾರಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಪೂರ್ಣ ಕನ್ನಡವಿದ್ದು, ಕಡಪಾ, ಕರ್ನೂಲು, ಅನಂತಪುರ ಜಿಲ್ಲೆಗಳ ಎಷ್ಟೋ ಹಳ್ಳಿಗಳು, ತಾಲೂಕುಗಳು ಕನ್ನಡವಾಗಿವೆ. ಇವನ್ನೆಲ್ಲ ಒಟ್ಟುಗೂಡಿಸಿ 'ಕರ್ನಾಟಕ ಇಲಾಖೆ' ಅಥವಾ 'ಕರ್ನಾಟಕ ಪ್ರಾಂತ' ಹೆಸರಿನ ಒಂದು ಆಡಳಿತವಿಭಾಗ ಮಾಡಿದರೆ ಕನ್ನಡಿಗರ ಐಕ್ಯ ಮತ್ತು ಬೆಳವಣಿಗೆಗೆ ಅನುಕೂಲವಾಗುವುದು" ಎಂದು ನಮೂದಿಸ ಲಾಗಿತ್ತು. ರಾಜಕೀಯವಲ್ಲದ ಒಂದು ಸುಸಂಘಟಿತ ಸಂಸ್ಥೆಯ ಮೂಲಕ ಈ ಬಗೆಯ ಬೇಡಿಕೆ ಬಂದುದು ಕರ್ನಾಟಕ ಏಕೀಕರಣದ ಇತಿಹಾಸದಲ್ಲಿ ಇದೇ ಮೊದಲು. ಏಕೀಕರಣದ

ಮಾತು ಇಲ್ಲಿರುವುದಾದರೂ, ಬೇರೆ ಬೇರೆ ಸಂಸ್ಥಾನಗಳಲ್ಲಿ ಹರಿದು ಹಂಚಿಹೋದ ಕರ್ನಾಟಕ ಭಾಗದ ಉಲ್ಲೇಖ ಇಲ್ಲಿಲ್ಲದಿರುವುದು ಗಮನಾರ್ಹ.

ಮೈಸೂರೇತರ ಕರ್ನಾಟಕದಲ್ಲಿ ರಾಜಕೀಯ ಜಾಗೃತಿ ಕಾಣಿಸಿಕೊಳ್ಳಲಾರಂಭಿಸಿದ್ದು ಕ್ರಿ.ಶ. ೧೯೦೫-೦೬ರಲ್ಲೆಂದು ಹೇಳಬಹುದಾದರೂ, ಕರ್ನಾಟಕ ಏಕೀಕರಣದ ಚಟುವಟಿಕೆಗಳು ಚುರುಕುಗೊಳ್ಳಲಾರಂಭಿಸಿದ್ದು ಕ್ರಿ.ಶ. ೧೯೧೫ರಲ್ಲಿ, ಭಾರತದಲ್ಲಿ 'ಹೋಂರೂಲ್' ಚಳವಳಿಯ ಸಂದರ್ಭದಲ್ಲಿ. ಕನ್ನಡಿಗರಲ್ಲಿ ಆ ಬಗ್ಗೆ ಜಾಗೃತಿ ಮೂಡಿಸಲು ಒಂದು ಸಂಘಟನೆ ಅವಶ್ಯವೆಂಬುದನ್ನು ಮನಗಂಡ, ಕಡಪಾ ರಾಘವೇಂದ್ರರಾಯರು, ಆಲೂರು ವೆಂಕಟರಾಯರು, ಹೊನ್ನಾಪುರದ ಗದಿಗೆಯ್ಯನವರು ಇವರೇ ಮೊದಲಾದವರು ಸೇರಿ ಕ್ರಿ.ಶ. ೧೯೧೬ರಲ್ಲಿ 'ಕರ್ನಾಟಕ ಸಭೆ'ಯನ್ನು ಸ್ಥಾಪಿಸಿ ಅದರ ಮೂಲಕ ಟಿಳಕರಿಂದ ಸ್ಥಾಪನೆಗೊಂಡ 'ಹೊಸ ಹೋಂರೂಲ್' ಚಳವಳಿಯನ್ನು ಮುಂದುವರಿಸಿದರು. ಈ ಸಭೆ ಕೇವಲ ಸಾಹಿತ್ಯಿಕ ಚಟುವಟಿಕೆಗಳಿಗೆ ಮಾತ್ರ ತನ್ನನ್ನು ತಾನು ಸೀಮಿತಗೊಳಿಸದೆ, ಕರ್ನಾಟಕದ ರಾಜಕೀಯ ಹಾಗೂ ಆಡಳಿತಾತ್ಮಕ ಸಮಸ್ಯೆಗಳ ಜೊತೆಗೆ ಇತರ ಸಮಸ್ಯೆಗಳ ಬಗ್ಗೆಯೂ ಲಕ್ಷ್ಯವಹಿಸಿತು. ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿ ಇದರ ಮುಖ್ಯ ಉದ್ದೇಶವಾಗಿತ್ತು. "ಹೋಂರೂಲ್ ಲೀಗಿನ" ಕಾರ್ಯಕಲಾಪಗಳ ಸಮರ್ಥ ನಿರ್ವಹಣೆಗೆ ಕರ್ನಾಟಕವನ್ನು ಒಂದು ಪ್ರತ್ಯೇಕ ಘಟಕವಾಗಿ ಪರಿಗಣಿಸುವುದಕ್ಕೆ ಅನುಕೂಲಕರ ಅಭಿಪ್ರಾಯಗಳು ಆರಂಭದಲ್ಲಿ ಬರಲಿಲ್ಲವಾದರೂ ಕೊನೆಗೆ ಬೆಳಗಾವಿಯ ಕೇಂದ್ರವಾಗಿರುವ ಪ್ರತ್ಯೇಕ ಕರ್ನಾಟಕ ಘಟಕಕ್ಕೆ ಒಪ್ಪಿಗೆ ದೊರೆಯಿತು. ಕಾಂಗ್ರೆಸ್, ಪ್ರಜಾಸತ್ತಾತ್ಮಕ ಸ್ವರಾಜ್ಯಪಕ್ಷದ ಚುನಾವಣೆಯ ಘೋಷಣೆಯಲ್ಲಿ (ಏಪ್ರಿಲ್ ೧೯೨೦) ಟಿಳಕರು ಭಾಷಾನ್ವಯ ಪ್ರಾಂತಗಳ ರಚನೆಯನ್ನು ಒಪ್ಪಿ ಅದನ್ನು ಪ್ರಕಟಿಸಿದುದು ತುಂಬಾ ಗಮನಾರ್ಹ. ಇದೇ ಕಾಲಕ್ಕೆ ಆನಿಬೆಸೆಂಟ್ ಅವರು 'ಹೋಂರೂಲ್' ಸಭೆಯಿಂದ ನಿವೃತ್ತರಾಗಲು ಗಾಂಧೀಜಿ ಅವರು ಅದರ ಅಧ್ಯಕ್ಷತೆ ವಹಿಸಿದರು. ಆಗ ಅವರು ಇಟ್ಟುಕೊಂಡ ಉದ್ದೇಶಗಳಲ್ಲಿ ಭಾಷಾವಾರು ಪ್ರಾಂತಗಳ ರಚನೆಯೂ ಒಂದಾಗಿದ್ದುದನ್ನು ಮರೆಯಲಾಗದು.

ಮುಂದೆ ಕ್ರಿ.ಶ.೧೯೨೪ರಲ್ಲಿ ಬೆಳಗಾವಿಯಲ್ಲಿ ಮಹಾತ್ಮಾಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಮಹಾಧಿವೇಶನ ಸೇರಿದಾಗ, ದಿ. ಬ. ಕಂಬಳಿಯವರ ಅಧ್ಯಕ್ಷತೆಯಲ್ಲಿ, ಕಡಪಾ ರಾಘವೇಂದ್ರರಾಯರ ಪ್ರಯತ್ನದ ಫಲವಾಗಿ 'ಕರ್ನಾಟಕ ಏಕೀಕರಣಸಂಘ' ಸ್ಥಾಪನೆಗೊಂಡಿತು. ಕರ್ನಾಟಕದ ಸಮಗ್ರ ಅಭಿವೃದ್ಧಿ ಮತ್ತು ಏಕೀಕರಣಕ್ಕೆ ಸಂಬಂಧಿಸಿದಂತೆ ಎಲ್ಲ ಕಾರ್ಯಚಟುವಟಿಕೆಗಳು ಆ ಸಂಘದ ಮೂಲಕವೆ ನಡೆಯಲಾರಂಭಿಸಿದ್ದರಿಂದ 'ಕರ್ನಾಟಕ ಸಭೆ' ಅದರಲ್ಲಿಯೆ ಲೀನವಾಯಿತು.

ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಭಾರತದ ಸ್ವಾತಂತ್ರ್ಯಸಂಗ್ರಾಮ, ಮತ್ತು ಕರ್ನಾಟಕ ಏಕೀಕರಣ ಚಳವಳಿ ಇವೆರಡನ್ನೂ ಕಾಂಗ್ರೆಸ್‌ಸಂಸ್ಥೆ ಜೊತೆ ಜೊತೆಯಾಗಿಯೆ ನಡೆಸಿಕೊಂಡು ಬಂದಿತು. ಕರ್ನಾಟಕ ರಾಜಕೀಯಪರಿಷತ್ ಮೊದಲ ಅಧಿವೇಶನ ಧಾರವಾಡದಲ್ಲಿ ಕ್ರಿ.ಶ. ೧೯೨೦ರಲ್ಲಿ ನಡೆಯಿತು. ಕರ್ನಾಟಕದ ಬಹುತೇಕ ಎಲ್ಲ ಭಾಗದ ಪ್ರತಿನಿಧಿಗಳು ಆ

ಅಧಿವೇಶನಕ್ಕೆ ಬಂದಿದ್ದರು. ಆ ಅಧಿವೇಶನ ಕನ್ನಡಿಗರಲ್ಲಿ ಒಂದು ವಿಲಕ್ಷಣಜಾಗೃತಿ ಮೂಡಿಸಿತು. ಅದೇ ವರ್ಷ ನಡೆಯಲಿರುವ ಕಾಂಗ್ರೆಸ್ ಮಹಾಧಿವೇಶನದಲ್ಲಿ, ಸಂಸ್ಥೆಯ ಘಟನೆಯಲ್ಲಿ ಕರ್ನಾಟಕಕ್ಕೆ ಪ್ರತ್ಯೇಕ ಸ್ಥಾನ ದೊರೆಯುವಂತೆ ಪ್ರಯತ್ನಿಸಬೇಕಾಗಿರುವುದರಿಂದ ನಾಗಪುರದಲ್ಲಿ ನೆರವೇರಲಿರುವ ಆ ಮಹಾಧಿವೇಶನಕ್ಕೆ ಅಧಿಕಸಂಖ್ಯೆಯಲ್ಲಿ ಕನ್ನಡಿಗರು ಬರಬೇಕೆಂದು ಕರೆ ನೀಡಲಾಯಿತು. ಜನರಿಗೆ ಅದನ್ನು ತಿಳಿಸಲು ಕರ್ನಾಟಕದ ತುಂಬೆಲ್ಲ ಕರ್ನಾಟಕದ ಮುಖಂಡರು ಸಂಚರಿಸಿದರು. ಭಾಷಾನುಗುಣ ಪ್ರಾಂತರಚನೆಯ ದೃಷ್ಟಿಯಿಂದ ಕ್ರಿ. ಶ. ೧೯೨೦ರ ಡಿಸೆಂಬರ್ ತಿಂಗಳು ನಾಗಪುರದಲ್ಲಿ ಸೇರಿದ ೩೫ನೆಯ ರಾಷ್ಟ್ರೀಯಕಾಂಗ್ರೆಸ್ ಮಹಾಧಿವೇಶನ ತುಂಬಾ ಮಹತ್ವದ್ದು. ಕಾಂಗ್ರೆಸ್ ಘಟನೆಯನ್ನು ಸಿದ್ಧಪಡಿಸಲು ಆ ಅಧಿವೇಶನದಲ್ಲಿ ನಿರ್ಧಾರ ಕೈಕೊಳ್ಳಲಾಯಿತು. ಗಾಂಧೀಜಿ ಅದೇ ಆಗ ಕಾಂಗ್ರೆಸ್ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸಲಾರಂಭಿಸಿದ್ದರು. ಅವರು ತಮ್ಮ ಅಹಿಂಸಾತ್ಮಕ ಅಸಹಕಾರ ಹೋರಾಟದ ಜೊತೆಗೆ ಸಂಘಟನೆ ಗಟ್ಟಿಗೊಳ್ಳಲು ಆಯಾ ಪ್ರಾಂತೀಯ ಭಾಷೆಯಲ್ಲಿ ಸಂಸ್ಥೆಯ ಸಂದೇಶ ಅಲ್ಲಿಯ ಜನರಿಗೆ ತಲುಪಬೇಕಾದುದು ಅವಶ್ಯವೆಂಬುದನ್ನು ಮನಗಂಡವರಾಗಿದ್ದರು. ಆದುದರಿಂದ ಕಾಂಗ್ರೆಸ್ ಸಂಸ್ಥೆಯ ಘಟನೆಯಲ್ಲಿ ಭಾಷಾನುಗುಣ ಸಮಿತಿಗಳನ್ನು ಅಳವಡಿಸುವ ವಿಚಾರ ಅವರದಾಗಿತ್ತು. ಇಂಥ ಮಹತ್ವದ ಅಧಿವೇಶನಕ್ಕೆ ನಾಡಿನ ನಾನಾ ಮೂಲೆಗಳಿಂದ ಎಲ್ಲವರ್ಗದ ಜನರು ಬಂದಿದ್ದರು. ಅಂದಾಜು ಇಪ್ಪತ್ತುಸಾವಿರ ಜನರು ಸೇರಿದ್ದ ಈ ಅಧಿವೇಶನದಲ್ಲಿ ಕರ್ನಾಟಕದಿಂದ ಹೋದವರ ಸಂಖ್ಯೆ ಎಂಟುನೂರು. ಆದುದರಿಂದ ಇದೊಂದು ಐತಿಹಾಸಿಕ ಅಧಿವೇಶನವೆನ್ನಬಹುದು.

ಕರ್ನಾಟಕಕ್ಕೆ ಸಂಬಂಧಿಸಿದಂತೆ ಬೇಕಾದ ಅಂಕಿ, ಸಂಖ್ಯೆ, ದಾಖಲೆ, ಭೂಪಟ ಸಮೇತ ಹೋದ ಕರ್ನಾಟಕದ ಧುರೀಣರು, ಕರ್ನಾಟಕಕ್ಕೆ ಒಂದು ಪ್ರತ್ಯೇಕಪ್ರಾಂತ ಮತ್ತು ಸಮಿತಿ ಬೇಕೆಂದು, ಘಟನಾಸಮಿತಿಯ ಸದಸ್ಯರೆದುರು ತಮ್ಮ ವಾದವನ್ನು ಸಾಧಾರ ಸಮರ್ಥಿಸಿದರು. ಕೆಲವರಿಂದ ವಿರೋಧವೂ ಬಂದಿತು. ಆದರೆ ನಮ್ಮ ಧುರೀಣರ ವಾದ ತುಂಬಾ ಪ್ರಬಲವಾಗಿದ್ದುದರಿಂದ ಮಹಾಧುರೀಣರೆಲ್ಲ, ಗಾಂಧೀಜಿ ಕೂಡ ಅದನ್ನು ಒಪ್ಪಿದರು. ಹೀಗೆ ಆ ಮಹಾಧಿವೇಶನದಲ್ಲಿ ಕರ್ನಾಟಕಕ್ಕೆ ಒಂದು ಪ್ರತ್ಯೇಕ ಕಾಂಗ್ರೆಸ್ ಸಮಿತಿಯನ್ನು ನೀಡಲು ಒಪ್ಪಲಾಯಿತು. ಅದರಿಂದಾಗಿ ೧೯೨೧ರಿಂದ ಕಾಂಗ್ರೆಸ್ಸಿನ ಘಟನೆಯಲ್ಲಿ ಕರ್ನಾಟಕಕ್ಕೆ ಒಂದು ಪ್ರತ್ಯೇಕ ಸಮಿತಿ ದೊರೆಯಿತು. 'ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ'ಯ ಕಕ್ಷೆಯಲ್ಲಿ ಮೈಸೂರು ಸಂಸ್ಥಾನ, ಮುಂಬಯಿ, ಮದ್ರಾಸ ಹಾಗೂ ಹೈದರಾಬಾದ ರಾಜ್ಯಗಳ ಕನ್ನಡ ಭಾಷಿಕ ಪ್ರದೇಶಗಳು ಸಮಾವೇಶವಾದವು. ಅಖಂಡಕರ್ನಾಟಕ ಏಕೀಕರಣದ ದೃಷ್ಟಿಯಿಂದ ಇದು ಅತ್ಯಂತ ಮಹತ್ವದ್ದು. ಏಕೆಂದರೆ ಇಲ್ಲಿಂದ ಮುಂದೆ ಸರ್ಕಾರೇತರ ಚಟುವಟಿಕೆಗಳೆಲ್ಲ ಅಖಿಲ ಕರ್ನಾಟಕದ ಹೆಸರಿನಿಂದಲೇ ನಡೆಯಲಾರಂಭಿಸಿದವು. ಮತ್ತು ಕನ್ನಡಿಗರ ಸಂಘಟನೆ ಕೇವಲ ಒಂದು ಕಲ್ಪನೆಯಾಗಿ ಇಲ್ಲವೆ ಭಾವನೆಯಾಗಿ ಉಳಿಯದೆ, ಅದು ಕಾರ್ಯರೂಪಕ್ಕೆ ಬಂದು ಏಕೀಕರಣಕ್ಕೆ ನಾಂದಿಯಾಯಿತು. ಕೆಲ ದಿನಗಳಲ್ಲಿ ಕಾಂಗ್ರೆಸ್ ಘಟನೆ ಪ್ರಕಟಗೊಂಡಿತು. ಅದರಲ್ಲಿ ಕನ್ನಡ ಭಾಷೆಯಾಡುವ ಪ್ರದೇಶವನ್ನು ಕರ್ನಾಟಕವೆಂದೂ, ಅಲ್ಲಿಯ ಕಾಂಗ್ರೆಸ್

ಸಮಿತಿಯನ್ನು 'ಕರ್ನಾಟಕ ಕಾಂಗ್ರೆಸ್ ಸಮಿತಿ'ಯೆಂದೂ, ಅದರ ಮುಖ್ಯಸ್ಥಳ ಗದಗ ಎಂದೂ ಉಲ್ಲೇಖಿಸಲಾಗಿದೆ. ದೇಶಪಾಂಡೆ ಗಂಗಾಧರರಾಯರು ಕರ್ನಾಟಕ ಕಾಂಗ್ರೆಸ್ ಸಮಿತಿಯ ಪ್ರಥಮ ಅಧ್ಯಕ್ಷರು.

ಕರ್ನಾಟಕ ಕಾಂಗ್ರೆಸ್ ಸಮಿತಿ, ಕರ್ನಾಟಕ ಏಕೀಕರಣಸಂಘ, ಮತ್ತು ಸಾರ್ವಜನಿಕ ಸಂಘ ಸಂಸ್ಥೆಗಳು ಕರ್ನಾಟಕ ಏಕೀಕರಣಕ್ಕಾಗಿ ಸರ್ವಪ್ರಯತ್ನಗಳನ್ನು ನಡೆಸುತ್ತಿದ್ದಂತೆ ಅತ್ತ ಕೇಂದ್ರಶಾಸನಸಭೆ, ಕೌನ್ಸಿಲ್ ಆಫ್ ಸ್ಟೇಟ್ಸ್, ಮುಂಬಯಿ ಶಾಸನಸಭೆ ಇತ್ಯಾದಿಗಳಿಗೆ ಆರಿಸಿಹೋದ ಸದಸ್ಯರು, ತಮ್ಮದೇ ಆದ ರೀತಿಯಲ್ಲಿ ಏಕೀಕರಣಕ್ಕೆ ಪ್ರಯತ್ನಿಸುತ್ತಿದ್ದರು. ಕ.ವಿ.ವ. ಸಂಘ, ಸಾಹಿತ್ಯಪರಿಷತ್ತು ಇವೇ ಮುಂತಾದ ಸಾಂಸ್ಕೃತಿಕ ಸಂಘಗಳು ಪದೇ ಪದೇ ಏಕೀಕರಣದ ಬಗ್ಗೆ ಗೊತ್ತುವಳಿ ಸ್ವೀಕರಿಸಿ ಸರ್ಕಾರಕ್ಕೆ ಕಳಿಸಿಕೊಡುತ್ತಲೇ ಇದ್ದವು. ಕರ್ನಾಟಕ ಏಕೀಕರಣಕ್ಕೆ ಗಾಂಧೀಜಿ ಹಾಗೂ ನೆಹರೂ ಸಮಿತಿಗಳ ಒಪ್ಪಿಗೆ ದೊರೆತಿತ್ತು. ಮುಂದೆ ವಲ್ಲಭಭಾಯಿ ಪಟೇಲರ ಆಶ್ವಾಸನೆಯೂ ದೊರೆಯಿತು.

ಕ್ರಿ.ಶ. ೧೯೩೭ರ ಸಪ್ಟೆಂಬರ್ ೨೧ರಂದು ಹಾರ್ಥಾದಲ್ಲಿ "ಕರ್ನಾಟಕವನ್ನು ಪ್ರತ್ಯೇಕ ಪ್ರಾಂತವಾಗಿ ಮಾಡುವುದನ್ನು ಪಾತ್ರತೆಯ ದೃಷ್ಟಿಯಿಂದ ಅಲ್ಲಗಳೆಯಲು ಸಾಧ್ಯವಿಲ್ಲ. ಕರ್ನಾಟಕ ಪ್ರಾಂತ ರಚನೆಯ ವಿಚಾರವನ್ನು ನಾನು ಮನಸಾ ಸ್ವಾಗತಿಸುತ್ತೇನೆ" ಎಂದು ಗಾಂಧೀಜಿಯವರು ಕರ್ನಾಟಕ ಏಕೀಕರಣದ ಬಗ್ಗೆ ಹೇಳಿರುವುದು ಗಮನಾರ್ಹ.

ಸರ್ದಾರ್ ವಲ್ಲಭಭಾಯಿ ಪಟೇಲ ಅವರು ೧೯.೧.೪೬ ರಂದು ಮುಂಬೈನಲ್ಲಿ ನಡೆದ ಕರ್ನಾಟಕ ಏಕೀಕರಣ ಪರಿಷತ್ತಿನ ಹತ್ತನೆಯ ಸಮ್ಮೇಳನವನ್ನು ಉದ್ಘಾಟಿಸುತ್ತ

> "ಕನ್ನಡ ಜನತೆಯ ಆಸೆ ಆಕಾಂಕ್ಷೆಗಳ ಅರಿವು ನನಗಿದೆ. ಕನ್ನಡ ಮಾತಾಡುವವರೆಲ್ಲರೂ ಏಕೀಕೃತ ಕನ್ನಡಪ್ರಾಂತದಲ್ಲಿರಬೇಕೆಂಬ ವಿಚಾರಕ್ಕೆ ನನ್ನ ಹೃತ್ಪೂರ್ವಕ ಬೆಂಬಲವಿದೆ..... ಸದ್ಯದ ಭಾರತದ ಪ್ರಾಂತಗಳು ಯಾವ ತತ್ವವನ್ನಾಧರಿಸಿಯೂ ರಚಿತವಾಗಿಲ್ಲ.... ಅದರಿಂದಾಗಿ ಕನ್ನಡಿಗರು ಹಲವಾರು ಆಡಳಿತಗಳ ಆಡಳಿತಕ್ಕೆ ಒಳಗಾಗಿದ್ದು ಅವರ ಸ್ಥಿತಿ ಅಡಕೊತ್ತಿನಲ್ಲಿ ಸಿಕ್ಕ ಅಡಕೆಯಂತಾಗಿದೆ..
>
> ...ಆದುದರಿಂದ ಭಾಷೆಯ ತಳಹದಿಯ ಮೇಲೆ ಪ್ರಾಂತ ರಚನೆ ಆಗಲೇಬೇಕು.....
> ನಿಮ್ಮ ಬೇಡಿಕೆ ನ್ಯಾಯಯುತವಾಗಿದೆ....
> ಇದೋ ನಿಮಗೆ ಈ ದಿನ ಆಶ್ವಾಸನೆ ಕೊಡುತ್ತೇನೆ. ಕರ್ನಾಟಕ ನಿರ್ಮಾಣದ ಸಮಯ ಸನ್ನಿಹಿತವಾಗಿದೆ. ನಿಶ್ಚಯವಾಗಿಯೂ ಹರಿದು ಹಂಚಿಹೋದ ನಾಡು ಒಂದಾಗುವುದು"

ಎಂದು ಸಾರಿದರು.

ಸ್ವಾತಂತ್ರ್ಯಾನಂತರ :

ಮೇಲಿನದು ಸ್ವಾತಂತ್ರ್ಯಪೂರ್ವದ ಕರ್ನಾಟಕ ಏಕೀಕರಣದ ಇತಿಹಾಸ. ಸ್ವಾತಂತ್ರ್ಯಾನಂತರ ನಡೆದ ಕರ್ನಾಟಕದ ಏಕೀಕರಣದ ಕಥೆ ಬೇರೆ ತೆರನಾದುದು. ಅದು ತುಂಬಾ ಸಂಕೀರ್ಣ ಮತ್ತು ಕ್ಲಿಷ್ಟ. ಹಲವಾರು ತೊಡಕುಗಳನ್ನು, ಕಗ್ಗಂಟುಗಳನ್ನು ಜಿಡಿಸಿಕೊಳ್ಳುತ್ತ, ಸಮಸ್ಯೆಗಳನ್ನು

ಪರಿಹರಿಸಿಕೊಳ್ಳುತ್ತ ಕೇಂದ್ರಸರ್ಕಾರ ಮತ್ತು ಕನ್ನಡ ಜನತೆ ಮುನ್ನಡೆಯುವ ಅನಿವಾರ್ಯತೆ ಉಂಟಾಯಿತು. ಬೇರಾವ ಭಾಷಾವಾರು ಪ್ರಾಂತರಚನೆಗಿಲ್ಲದ ಅಡ್ಡಿ ಆತಂಕಗಳು ಕರ್ನಾಟಕದ ರಚನೆಗೆ ಸಂಬಂಧಿಸಿದಂತೆ ಇದ್ದುವು. ಅವುಗಳನ್ನು ದೂರಮಾಡುವ ಸಂದರ್ಭದಲ್ಲಿ ಭಿನ್ನಾಭಿಪ್ರಾಯಗಳು ತಲೆದೋರಿದವು. ಎರಡು ಕರ್ನಾಟಕಗಳ ರಚನೆಯ ಮಾತೂ ಬಂತು. ಸತ್ಯಾಗ್ರಹ, ಉಪವಾಸ ಸತ್ಯಾಗ್ರಹಗಳೂ ನಡೆದವು. ಪರಸ್ಪರ ನಡೆದ ದೂಷಣೆ, ದೂರುಗಳಿಗಂತೂ ಲೆಕ್ಕವಿಲ್ಲ. ಇವೆಲ್ಲವನ್ನು ಎದುರಿಸಿ, ಕರ್ನಾಟಕ ರಚನೆಗೊಂಡುದು ಒಂದು 'ಪವಾಡವೇ ಸರಿ. ಅದರ ಒಂದು ಪಕ್ಷಿನೋಟ ಮಾತ್ರ ಇಲ್ಲಿ ಸಾಧ್ಯ.

೧೯೪೭ರ ಆಗಷ್ಟ್ ತಿಂಗಳು ಭಾರತ ಸ್ವತಂತ್ರವೇನೋ ಆಯಿತು. ಆದರೆ ಅದು ಆಗ ಅನೇಕ ಗಂಭೀರಸಮಸ್ಯೆಗಳನ್ನು ಎದುರಿಸಬೇಕಾಯಿತು. ಅವುಗಳನ್ನು ಪರಿಹರಿಸುವುದರಲ್ಲಿ ದೇಶದ ಮುಖಂಡರು ತಮ್ಮನ್ನು ತಾವು ಸಂಪೂರ್ಣ ತೊಡಗಿಸಿಕೊಳ್ಳುವುದು ಅನಿವಾರ್ಯ ವಾಯಿತು. ಅದರಿಂದಾಗಿ ಭಾಷಾವಾರು ಪ್ರಾಂತ ರಚನೆಯತ್ತ ತಮ್ಮ ಗಮನಹರಿಸುವುದು ಸಾಧ್ಯವಾಗಲಿಲ್ಲ. ಅದರಿಂದಾಗಿ ಕನ್ನಡಿಗರಲ್ಲಿ ಅಸಮಾಧಾನ, ಕಳವಳ ತೋರಲಾರಂಭಿಸಿದವು.

ಸ್ವಾತಂತ್ರ್ಯ ಸಿಕ್ಕ ಕೆಲವೇ ತಿಂಗಳಲ್ಲಿ ಎಂದರೆ ೧೯೪೭ರ ನವಂಬರ್ ೨೭ ರಂದು ಭಾರತದ ಪ್ರಧಾನಮಂತ್ರಿ ಜವಾಹರಲಾಲ ನೆಹರೂ ಅವರು ಕೇಂದ್ರಶಾಸನ ಸಭೆಯಲ್ಲಿ ಭಾರತ ಸರ್ಕಾರದ ಪರವಾಗಿ ಭಾಷಾವಾರು ಪ್ರಾಂತರಚನೆಯ ಅಗತ್ಯವನ್ನು ಒಪ್ಪಿಕೊಂಡರೂ ಭಾರತದ ಇಬ್ಭಾಗದಿಂದಾಗಿ ಉದ್ಭವಿಸಿರುವ ಸಮಸ್ಯೆಗಳನ್ನು ದೇಶ ಎದುರಿಸುತ್ತಿರುವಾಗ ಪ್ರಾಂತರಚನಾಕಾರ್ಯ ಸರಿಯಲ್ಲವೆಂದು ಸೂಚಿಸಿದರು. ಹಾಗೆಯೇ ಪ್ರಾಂತಗಳ ಹಂಚಿಕೆಯ ವಿಚಾರದಲ್ಲಿ ಅನೇಕ ಮಹತ್ವದ ಸಮಸ್ಯೆಗಳಿದ್ದು, ಜನತೆಯಲ್ಲಿಯ ಆ ಬಗ್ಗೆ ಒಮ್ಮತದ ತೀರ್ಮಾನ ಬಂದರೆ ಪ್ರಾಂತ ರಚನೆ ಸುಲಭವಾದೀತೆಂಬ ಮಾತನ್ನೂ ಸೇರಿಸಿದರು.

ಭಾಷಾವಾರು ಪ್ರಾಂತ ರಚನೆಯ ಸಾಧ್ಯಾಸಾಧ್ಯತೆ ತಿಳಿಯಲು ಭಾರತ ಸರ್ಕಾರ ನೇಮಿಸಿದ ಧಾರಸಮಿತಿಯ ವರದಿ, ಹಾಗೂ ಆ ವರದಿಯ ಪುನರ್ವಿಮರ್ಶೆಗಾಗಿ ಭಾರತೀಯ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ನೇಮಿಸಿದ ತ್ರಿಸದಸ್ಯ ಆಯೋಗದ ವರದಿ ಇವೆರಡೂ ಭಾಷಾವಾರು ಪ್ರಾಂತರಚನಾಕ್ರಿಯೆ ನಿಧಾನಗತಿಯಲ್ಲಿ ಸಾಗಲು ಕಾರಣವಾದವೆನ್ನಬಹುದು.

ಧಾರ ಸಮಿತಿ ತನ್ನ ವರದಿಯಲ್ಲಿ "ಭಾರತದ ಪ್ರಕೃತ ಸ್ಥಿತಿಯಲ್ಲಿ ಭಾಷಾವಾರು ಪ್ರಾಂತ ರಚನೆ ಸಾಧುವಲ್ಲ. ದೇಶದ ಸ್ಥಿತಿ ತಹಬಂದಿಗೆ ಬಂದಮೇಲೆ ಭಾ. ಪ್ರಾಂ.ಗಳನ್ನು ರಚಿಸುವುದು ಸೂಕ್ತವೂ ಅನಿವಾರ್ಯವೂ ಆಗಿದೆ" ಎಂದು ಸ್ಪಷ್ಟವಾಗಿ ತಿಳಿಸಿದೆ.

ಇದರಿಂದ ಅಸಮಾಧಾನಗೊಂಡ ಜನತೆಯ ಒತ್ತಾಯ ಕಾರಣವಾಗಿ ಅಖಿಲಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿ, ಜವಾಹರಲಾಲ ನೆಹರೂ, ವಲ್ಲಭಭಾಯಿ ಪಟೇಲ ಹಾಗೂ ಅಂದಿನ ಕಾಂಗ್ರೆಸ್ ಅಧ್ಯಕ್ಷ ಪಟ್ಟಾಭಿಸೀತಾರಾಮಯ್ಯ ಇವರಿಂದ ಕೂಡಿದ ತ್ರಿಸದಸ್ಯ ಆಯೋಗವನ್ನು ಧಾರಸಮಿತಿಯ ವರದಿಯ ಪುನರ್ವಿಮರ್ಶೆಗಾಗಿ ನೇಮಿಸಿತು. ಅದು ಭಾಷಾವಾರು ಪ್ರಾಂತ ರಚನೆಯ ಅಗತ್ಯವನ್ನು ಒಪ್ಪಿಕೊಂಡರೂ ಕರ್ನಾಟಕ ರಾಜ್ಯದ ರಚನೆ

ಆಗಬೇಕಾದರೆ, ಮೈಸೂರು ಸಂಸ್ಥಾನವು, ಕರ್ನಾಟಕದ ಉಳಿದ ಭಾಗದೊಳಗೆ ವಿಲೀನವಾಗಬೇಕೇ ಹೊರತು ಮೈಸೂರು ಸಂಸ್ಥಾನದಲ್ಲಿ ಕರ್ನಾಟಕದ ಇತರ ಪ್ರದೇಶಗಳು ಸೇರಲು ಕಾನೂನು ರೀತ್ಯಾ ಅವಕಾಶವಿಲ್ಲವೆಂದು ಹೇಳಿತು. ಇದರಿಂದ ಮತ್ತೊಂದು ತೊಡಕು ಹುಟ್ಟಿಕೊಂಡಿತು.

ಇದಾದ ನಂತರ ಕೆಲವೇ ದಿನಗಳಲ್ಲಿ ಕಾಸರಗೋಡಿನಲ್ಲಿ ಸಮಾವೇಶಗೊಂಡಿದ್ದ ಕರ್ನಾಟಕ ಏಕೀಕರಣ ಸಮ್ಮೇಳನ ಕೈಕೊಂಡ ನಿರ್ಣಯ ಬಹಳ ಮಹತ್ವದ್ದಾಗಿದೆ. ಅದರಲ್ಲಿ "ಭಾರತದ ರಾಜ್ಯಾಂಗ ಘಟನೆ ಜಾರಿಗೆ ಬರುವ ಮುನ್ನವೇ ಕರ್ನಾಟಕ ಪ್ರಾಂತರಚನೆ ಆಗುವುದು ಅತ್ಯಂತ ಅವಶ್ಯವಾಗಿದೆ. ಕರ್ನಾಟಕ ಪ್ರಾಂತ ರಚನೆಯನ್ನು ಒಳಗೊಳ್ಳದ ಯಾವ ರಾಜ್ಯಾಂಗ ಘಟನೆಯನ್ನೂ ಕನ್ನಡ ಜನ ಖಂಡಿತ ಒಪ್ಪಲಾರರೆಂದು" ಘೋಷಿಸಲಾಗಿದೆ. ತ್ರಿಸದಸ್ಯ ಆಯೋಗ ಸೂಚಿಸಿರುವಂತೆ ಆಂಧ್ರಪ್ರದೇಶವನ್ನು ಮೊದಲು ನಿರ್ಮಿಸಿ ಕರ್ನಾಟಕ ಪ್ರಾಂತರಚನೆಯನ್ನು ಮುಂದೂಡುವುದು ಯಾವ ದೃಷ್ಟಿಯಿಂದಲೂ ನ್ಯಾಯಸಮ್ಮತವಾಗದೆಂದು ಕೂಡ ಅದರಲ್ಲಿ ಕಾಣಿಸಿದೆ.

ಈ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಮೈಸೂರಿನ ಕಂದಾಯ ಮಂತ್ರಿ ಎಚ್.ಸಿದ್ದಯ್ಯ ಅವರು ಕನ್ನಡಿಗರಿಗಿರುವ ಈಗಿನ ಒಂದೇ ಒಂದು ಗುರಿ ಎಂದರೆ, ಕನ್ನಡನಾಡು ಒಂದುಗೂಡುವುದು. ಮೈಸೂರಿನಲ್ಲಿ ಈಗ ಪ್ರಜಾಪ್ರಭುತ್ವ ಬಂದಿದೆ. ನಮ್ಮ ಮಹಾರಾಜರನ್ನು ಅಖಿಲಕರ್ನಾಟಕದ ಪ್ರಮುಖರನ್ನಾಗಿ ಮಾಡಿ ಅದು ಏರ್ಪಟ್ಟರೆ ನಮ್ಮ ದೇಶಕ್ಕೆ ಭೂಷಣವಾದೀತು ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಸಮ್ಮೇಳನದ ಅಧ್ಯಕ್ಷ, ಕೇಂದ್ರ ವಾರ್ತಾಸಚಿವ ಶ್ರೀ ರಂಗನಾಥ ದಿವಾಕರ ಅವರು "ಕರ್ನಾಟಕ ಪ್ರಾಂತಕ್ಕೆ ಹೋರಾಡಲು ನಾವೆಲ್ಲ ಸಿದ್ಧರಿರಬೇಕು. ಅದು ಸಾಧಿಸದಿದ್ದರೆ ಕೇಂದ್ರ ಮತ್ತು ರಾಜ್ಯ ಶಾಸನಸಭೆಗಳಲ್ಲಿರುವ ಕನ್ನಡ ಪ್ರತಿನಿಧಿಗಳನ್ನು ಹಿಂದಕ್ಕೆ ಕರೆಸಿಕೊಳ್ಳುವುದು ಅನಿವಾರ್ಯವಾದೀತು" ಎಂದು ಬಿರುಸಾಗಿಯೇ ಹೇಳಿದರು.

ನಿಜಲಿಂಗಪ್ಪನವರು ಅ. ಭಾ. ಕಾಂಗ್ರೆಸ್ ಅಧ್ಯಕ್ಷ ಡಾ. ರಾಜೇಂದ್ರಪ್ರಸಾದ್ ಅವರಿಗೆ ಬರೆದ ಪತ್ರಕ್ಕೆ ಉತ್ತರವಾಗಿ ಅವರು ಭಾಷಾವಾರು ಪ್ರಾಂತರಚನೆಗೆ ತಮ್ಮ ಬೆಂಬಲ ಸೂಚಿಸಿರುವ ಜೊತೆಗೆ, ಕರ್ನಾಟಕಕ್ಕೆ ಅನ್ಯಾಯವಾಗದೆಂಬ ಭರವಸೆಯನ್ನು ನೀಡಿದ್ದಾರೆ (೯.೨. ೪೮).

ಅದೇನಿದ್ದರೂ, ಧಾರಸಮಿತಿಯ ವರದಿ ಮತ್ತು ತ್ರಿಸದಸ್ಯ ಸಮಿತಿಯ ವರದಿ ಬಂದಮೇಲೆ ಏಕೀಕರಣವನ್ನು ಕುರಿತಂತೆ ದೊಡ್ಡ ಕೋಲಾಹಲವೇ ಎದ್ದಿತು. ಜನತೆ ರೊಚ್ಚಿಗೆದ್ದರು. ಬಳ್ಳಾರಿಯನ್ನು ಆಂಧ್ರಕ್ಕೆ ಸೇರಿಸುವ ಬಗ್ಗೆ, ಮದ್ರಾಸ ಪ್ರಾಂತದ ಇಬ್ಬರು ಸಚಿವರು ಜನಮತ ಸಂಗ್ರಹಣೆಗಾಗಿ ಬಂದಾಗ ಅಲ್ಲಿಯ ಜನ "ನಾವು ಬದುಕಬೇಕೆಂಬ ಬಯಕೆ ನಿಮ್ಮದಾಗಿದ್ದರೆ ನಮ್ಮನ್ನು ಕರ್ನಾಟಕಕ್ಕೆ ಸೇರಿಸಿ. ಈ ವಿಚಾರದಲ್ಲಿ ಬರುವ ವಿರೋಧವನ್ನು ನಾವು ಕೆಚ್ಚೆದೆಯಿಂದ ಎದುರಿಸುತ್ತೇವೆ" ಎಂದು ಖಡಾಖಂಡಿತವಾಗಿ ಹೇಳಿದರು. ಅಷ್ಟೇ ಅಲ್ಲ ಕೇಳ್ಕರ್ ಅವಾರ್ಡಿನ ಪ್ರಕಾರ ಆಂಧ್ರಪ್ರಾಂತಕ್ಕೆ ಸೇರಿಸಲ್ಪಟ್ಟ ಆದವಾನಿ ಆಲೂರು ರಾಯದುರ್ಗದ ಜನರು ಒಂದು

ಸಮ್ಮೇಳನ ನಡೆಸಿ "ನಾವು ಕರ್ನಾಟಕಕ್ಕೆ ಸೇರುತ್ತೇವೆಯೆ ವಿನಾ ಆಂಧ್ರಕ್ಕೆ ಎಂದೂ ಸೇರುವುದಿಲ್ಲ" ಎಂದು ನಿರ್ಣಯ ಕೈಕೊಂಡು ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿದರು.

ಕರ್ನಾಟಕ ಏಕೀಕರಣಕ್ಕೆ ಅಡ್ಡಗಾಲು ಹಾಕುತ್ತಿರುವವರ ಬಗ್ಗೆ ರೊಚ್ಚಿಗೆದ್ದ ಬಾಗಲಕೋಟೆಯ ಜನ "ಕರ್ನಾಟಕ ಏಕೀಕರಣಕ್ಕೆ ಅಡ್ಡಿ ಬಂದಲ್ಲಿ ಕಾಂಗ್ರೆಸ್ಸಿನ ಸಮಾಧಿಯಾಗುತ್ತದೆ" ಎಂದು ಹೇಳುವ ಮಟ್ಟಕ್ಕೆ ಹೋದರು. ಹಾವೇರಿ ಮುಖಂಡರು ಮತ್ತು ಜನ ತುಂಬಾ ಕೆರಳಿದರು. ಅಷ್ಟೇ ಅಲ್ಲ ಹೊಸಮನಿ ಸಿದ್ದಪ್ಪ, ಷಣ್ಮುಖಪ್ಪ ಅಂಗಡಿ, ಕೆ.ಅರ್. ಕಾರಂತ, ಜೀವರಾಜ ಹೆಗಡೆ ಮುಂತಾದವರು ಕಾಂಗ್ರೆಸ್ಸಿನಿಂದ ಹೊರಬಂದು ತಮ್ಮದೇ ಆದ ಒಂದು ಪ್ರತ್ಯೇಕ ರಾಜಕೀಯಪಕ್ಷವನ್ನು ಕಟ್ಟಿಕೊಂಡರು. ಕರ್ನಾಟಕ ಪ್ರದೇಶಕಾಂಗ್ರೆಸ್ ಆದೇಶದ ಮೇರೆಗೆ ಮುಂಬಯಿ, ಮದ್ರಾಸ್ ಶಾಸನಸಭೆಗಳ ಕನ್ನಡಿಗರು ತಮ್ಮ ಶಾಸನಸಭಾ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದರು.

ಇದೇ ಸಮಯದಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ, ಮೈಸೂರು, ಪ್ರದೇಶ ಕಾಂಗ್ರೆಸ್ ಸಮಿತಿಗೆ ಕರ್ನಾಟಕ ಏಕೀಕರಣ ವಿಚಾರದ ಬಗ್ಗೆ ತನ್ನ ಸ್ಪಷ್ಟ ನಿಲುವನ್ನು ತಿಳಿಸಲು ಕೇಳಿಕೊಂಡಿತು.

ಇಲ್ಲಿ ಮೈಸೂರು ಪ್ರದೇಶ ಕಾಂಗ್ರೆಸ್ ಬಗ್ಗೆ ಒಂದೆರಡು ಮಾತು ಪ್ರಸ್ತುತ.

ಅ.ಭಾ. ಕಾಂಗ್ರೆಸ್ಸು ಮೈಸೂರಿನಲ್ಲಿ ಕೇವಲ ರಚನಾತ್ಮಕ ಕಾರ್ಯಗಳಿಗೆ ಒತ್ತು ಕೊಡುವಂತೆ, ಅಲ್ಲಿಯ ಕಾಂಗ್ರೆಸ್ಸಿಗೆ ಸೂಚಿಸಿತ್ತು. ೧೯೨೧ರಲ್ಲಿ ಇಡೀ ಮೈಸೂರು ಸಂಸ್ಥಾನವನ್ನು ಒಂದು ಜಿಲ್ಲಾಕಾಂಗ್ರೆಸ್ ಸಮಿತಿಯಂತೆ ಸಂಘಟಿಸಲು ಅನುಮತಿ ದೊರೆಯಿತು. ೧೯೩೮ರಲ್ಲಿ ಮೊದಲ ಬಾರಿಗೆ ಮೈಸೂರು ಕಾಂಗ್ರೆಸ್ ಸಂಘಟಿತವಾಗಿ, ಮದ್ದೂರು ತಾಲೂಕಿನ ಶಿವಪುರದಲ್ಲಿ ತನ್ನ ಮೊದಲ ಅಧಿವೇಶನವನ್ನು ಟಿ. ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆಸಿತು. ಮೈಸೂರುಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವುದು, ಮಹಾರಾಜರನ್ನು ಕರ್ನಾಟಕದ ಶಾಸನಬದ್ಧ ಪ್ರಮುಖರನ್ನು ಮಾಡುವುದು ಇವು ಅದರ ಪ್ರಮುಖ ಉದ್ದೇಶಗಳಾಗಿದ್ದವು. ವಿದುರಾಶ್ವತ್ಥದಲ್ಲಿ ಸತ್ಯಾಗ್ರಹದ ಸಂದರ್ಭದಲ್ಲಿ ಹತ್ಯಾಕಾಂಡ ನಡೆಯಿತು. ಹ್ಯಾಮಿಲ್ಟನ್ ಸತ್ಯಾಗ್ರಹ, ಅರಣ್ಯ ಸತ್ಯಾಗ್ರಹಗಳು ನಡೆದವು. ೧೯೪೨ರಲ್ಲಿ ಆರಂಭವಾದ 'ಭಾರತ ಬಿಟ್ಟು ತೊಲಗಿ' ಆಂದೋಲನದ ಬಿಸಿ ಮೈಸೂರು ಸಂಸ್ಥಾನಕ್ಕೂ ತಟ್ಟಿತು. ತಿಂಗಳು ಗಟ್ಟಲೆ ನಡೆದ ಈ ಆಂದೋಲನದಲ್ಲಿ ಅನೇಕರು ಮಡಿದರು. ಹಲವಾರು ಜನ ಸೆರೆಮನೆ ಸೇರಿದರು. ಅಂಚೆಕಛೇರಿ, ಚಾವಡಿಗಳನ್ನು ಸುಡುವ, ರೇಲ್ವೆ ಮತ್ತು ಟೆಲಿಗ್ರಾಫ್ ತಂತಿಗಳನ್ನು ಕತ್ತರಿಸುವ ವಿಧ್ವಂಸಕ ಕೃತ್ಯಗಳು ನಡೆದವು. ಬೆಂಗಳೂರು ಗುಂತಕಲ್ ನಡುವೆ ರೈಲು ಸಂಚಾರ ಎರಡುವಾರಕಾಲ ನಿಂತು ಹೋಗಿತ್ತು. ಶಿವಮೊಗ್ಗ ಜಿಲ್ಲೆಯ ಈಸೂರು ತನ್ನ ಸ್ವಾತಂತ್ರ್ಯವನ್ನು ಘೋಷಿಸಿತು.

ಈ ಗೊಂದಲದ ಮಧ್ಯೆಯೆ ಬೆಂಗಳೂರಿನ ಸುಭಾಸನಗರದಲ್ಲಿ, ಕೆ.ಸಿ.ರೆಡ್ಡಿಯವರ ಅಧ್ಯಕ್ಷತೆಯಲ್ಲಿ ೧೯೪೬ರಲ್ಲಿ ಸೇರಿದ ಮೈಸೂರು ಕಾಂಗ್ರೆಸ್ ಅಧಿವೇಶನದಲ್ಲಿ ಕರ್ನಾಟಕಪ್ರಾಂತ ರಚನೆ ಮತ್ತು ಸಣ್ಣ ಪುಟ್ಟ ಸಂಸ್ಥಾನಗಳ ವಿಲೀನೀಕರಣಗಳ ಬಗ್ಗೆ ನಿರ್ಣಯ ಕೈಕೊಳ್ಳಲಾಯಿತು.

೧೯೪೭ರಲ್ಲಿ ಭಾರತ ಸ್ವತಂತ್ರವಾದಾಗ, ಮೈಸೂರು ಸಂಸ್ಥಾನದಲ್ಲೂ ಪ್ರಜಾಸರ್ಕಾರ ತರಲು ಚಳವಳಿ ತೀವ್ರವಾಯಿತು. "ಮೈಸೂರು ಚಲೊ" ಚಳವಳಿ ಆರಂಭಗೊಂಡು, ಮೈಸೂರು ಅರಮನೆಯ ಮುಂದೆ ಸತ್ಯಾಗ್ರಹ ಹೂಡಲು ರಾಜ್ಯದ ಮೂಲೆಮೂಲೆಗಳಿಂದ ಜನ ಬರುವಂತೆ ಕರೆ ನೀಡಲಾಯಿತು. ಸರ್ಕಾರ ಪ್ರತಿಬಂಧಕಾಜ್ಞೆ ಜಾರಿಮಾಡಿತು. ಸಮಾಚಾರ ಪತ್ರಿಕೆಗಳನ್ನು ಮುಟ್ಟುಗೋಲು ಹಾಕಿತು. ಮುಖಂಡರನ್ನು ಸೆರೆಮನೆಗೆ ತಳ್ಳಿತು. ಆದರೆ ಜನಬಲದ ಮುಂದೆ ಸರ್ಕಾರ ಅಸಹಾಯಕವಾಯಿತು. ಕೊನೆಗೆ ಮೈಸೂರು ಮಹಾರಾಜರು, ಭಾರತದ ಒಕ್ಕೂಟವನ್ನು ಸೇರುವ ಹಾಗೂ ಪ್ರಜಾರಾಜ್ಯ ರಚಿಸುವ ಬೇಡಿಕೆಗಳಿಗೆ ಒಪ್ಪಿಗೆ ನೀಡಿದರು.

ಹೀಗೆ ಮೈಸೂರುಕಾಂಗ್ರೆಸ್ ತನ್ನ ಹೋರಾಟದಲ್ಲಿ ಯಶಸ್ವಿಯಾಗಿ, ೧೯೪೭ರ ಅಕ್ಟೋಬರ್ ೨೪ರ ವಿಜಯದಶಮಿಯ ಶುಭದಿನದಂದು, ಕೆ.ಸಿ. ರೆಡ್ಡಿ ಅವರು ಜವಾಬ್ದಾರಿ ಸರ್ಕಾರದ ಮೊದಲ ಮುಖ್ಯಮಂತ್ರಿಯಾದರು. ಅಂದು ನಡೆದ ಬಹಿರಂಗ ಸಭೆಯಲ್ಲಿ ಅರ್ಥಸಚಿವ ಹೆಚ್. ಸಿ. ದಾಸಪ್ಪ ಅವರು ಮಾತಾಡುತ್ತ "ಯಾವ ಉದ್ದೇಶದಿಂದ ಮೈಸೂರು ಕಾಂಗ್ರೆಸ್ ಸ್ಥಾಪಿತವಾಯಿತೊ, ಅದರ ಒಂದು ಭಾಗ ಇಂದು ಪೂರೈಸಿತು. ನಮ್ಮ ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಬಂದಿತು. ಆದರೆ ನಮ್ಮ ಪ್ರಭುಗಳು ಅಖಂಡ ಕರ್ನಾಟಕದ ಪ್ರಮುಖರಾಗುವ ಶುಭದಿನವನ್ನು ಎದುರು ನೋಡುತ್ತಿದ್ದೇವೆ" ಎಂದು ಹೇಳಿದರು.

ಮೇಲೆ ಹೇಳಿದಂತೆ, ಕ. ಪ್ರ. ಕಾಂಗ್ರೆಸ್ ಸಮಿತಿ ಏಕೀಕರಣದ ಬಗ್ಗೆ ಮೈಸೂರು ಪ್ರದೇಶ ಕಾಂಗ್ರೆಸ್ಸಿನ ಖಚಿತ ಅಭಿಪ್ರಾಯ ತಿಳಿಸಲು ಕೇಳಿದಾಗ, ಮೈ. ಪ್ರ. ಕಾಂ. ಸಮಿತಿಯ ಕಾರ್ಯಕಾರಿ ಸಮಿತಿಯು [illegible]ದು ಸಭೆಸೇರಿ, ಕರ್ನಾಟಕ ರಾಜ್ಯ ರಚನೆ ಅಗತ್ಯವಾಗಿ ಆಗಬೇಕೆಂದೂ, ಮೈಸೂರಿನ ಮಹಾರಾಜರು ಅಖಂಡಕರ್ನಾಟಕದ ಶಾಸನಬದ್ಧ ಪ್ರಭುಗಳಾಗುವ ಆ ಕರ್ನಾಟಕಕ್ಕೆ ಮೈಸೂರಿನ ಸ್ವಾಗತ ಸದಾ ಇರುವುದೆಂದೂ, ಸರ್ವಾನುಮತದ ನಿರ್ಣಯ ಸ್ವೀಕರಿಸಿ ಅದನ್ನು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಗೆ ತಿಳಿಸಿತು. ಮತ್ತು ೬-೧೧-೪೯ರಂದು ಶಿರೂರಿನಲ್ಲಿ ನಡೆದ ಅಖಿಲ ಮೈಸೂರು ಕಾಂಗ್ರೆಸ್ ಅಧಿವೇಶನದಲ್ಲಿ ಅದನ್ನು ದೃಢೀಕರಿಸಲಾಯಿತು. ಈ ಸಮ್ಮೇಳನ ಒಂದು ದೃಷ್ಟಿಯಿಂದ ಬಹಳ ಮಹತ್ವದ್ದು. ಏಕೆಂದರೆ ಇದೇ ಸಮ್ಮೇಳನದಲ್ಲಿ ಹೆಚ್. ಎಸ್. ದೊರೆಸ್ವಾಮಿ ಹಾಗೂ ಹಾರನಹಳ್ಳಿ ರಾಮಸ್ವಾಮಿ ಇವರು "ಕಾಂಗ್ರೆಸ್ ನಾಯಕರು ವಚನಭ್ರಷ್ಟರು. ಕರ್ನಾಟಕಪ್ರಾಂತರಚನೆಗೆ ಮನಃಪೂರ್ವಕ ಪ್ರಯತ್ನ ನಡೆಸಿಲ್ಲ. ನಿಧಾನಮಾರ್ಗ ಅನುಸರಿಸುತ್ತಿದ್ದಾರೆ" ಮುಂತಾಗಿ ಆಪಾದನೆಗಳ ಮಳೆಯನ್ನೇ ಸುರಿಸಿದುದು. ಆಗ ಮುಖ್ಯಮಂತ್ರಿ ಕೆ.ಸಿ. ರೆಡ್ಡಿಯವರು "ಕರ್ನಾಟಕ ಪ್ರಾಂತ ರಚನೆಗೆ ಮೈಸೂರು ಎಂದೂ ಅಡ್ಡ ಬಂದಿಲ್ಲ. ಮಹಾರಾಜರ ಆಡಳಿತದಲ್ಲಿ ವಿಶಾಲ ಕರ್ನಾಟಕ ರಚಿಸಬೇಕೆಂಬುದೇ ಅದರ ಬಯಕೆ. ಅದು ತಾನು ಮೊದಲು ತೆಗೆದುಕೊಂಡ ನಿರ್ಧಾರಗಳಿಗೆ ಬದ್ಧವಾಗಿದೆ" ಎಂದು ಹೇಳಿದರು. ಅದೇ ರೀತಿ ಅಧಿವೇಶನದಲ್ಲಿ ನಿರ್ಣಯ ತೆಗೆದುಕೊಳ್ಳಲಾಯಿತು.

ಚಿತ್ರದುರ್ಗದಲ್ಲಿ ನಡೆದ ಮೈ. ಪ್ರಾಂ. ಕಾಂಗ್ರೆಸ್ ಸಮ್ಮೇಳನದಲ್ಲಿಯೂ, ಕರ್ನಾಟಕ ಪ್ರಾಂತರಚನೆಗೆ ಒತ್ತಾಯ ತರಬೇಕೆಂದು ನಿರ್ಣಯಿಸಲಾಗಿದ್ದರೂ, ಸಮಯ ಸಂದರ್ಭಗಳನ್ನು ಅನುಸರಿಸಿ ಆ ಕಾರ್ಯವನ್ನು ಪೂರ್ಣಗೊಳಿಸಬೇಕೆಂಬ ಮಾತನ್ನು ಅದರಲ್ಲಿ ಸೇರಿಸಲಾಯಿತು.

ಹರಿಹರದಲ್ಲಿ ಕರ್ನಾಟಕ ಪ್ರಾಂತಕಾಂಗ್ರೆಸ್ ಸಂಸ್ಥೆಯ ಕಾರ್ಯಕಾರಿ ಸಮಿತಿ ೨೯.೧೧.೪೯ರಂದು ಸಭೆ ಸೇರಿ ಮೈಸೂರುಕಾಂಗ್ರೆಸ್ಸಿನ ನಿರ್ಣಯವನ್ನು ಮುಕ್ತಕಂಠದಿಂದ ಸ್ವಾಗತಿಸಿತು.

ಕರ್ನಾಟಕ ಯುವಕ ಪರಿಷತ್ತು ಕೂಡ ತನ್ನದೇ ಆದ ರೀತಿಯಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ಹೋರಾಟ ನಡೆಸುತ್ತಿದ್ದುದನ್ನು ಮರೆಯಲಾಗದು. ಅದು ಆ ಮೊದಲೆ ೨೭.೭.೪೯ರಂದು ದಾವಣಗೆರೆಯಲ್ಲಿ ಕೆ.ಎಂ. ರುದ್ರಪ್ಪನವರ ಅಧ್ಯಕ್ಷತೆಯಲ್ಲಿ ತನ್ನ ಮೂರನೆಯ ಅಧಿವೇಶನವನ್ನು ನಡೆಸಿ ಅದರಲ್ಲಿ ಏಕೀಕೃತ ಕರ್ನಾಟಕವನ್ನು ರಚಿಸುವಂತೆ, ಕೇಂದ್ರಸರ್ಕಾರ ಹಾಗೂ ಭಾರತ ರಾಜ್ಯಾಂಗ ರಚನಾಸಮಿತಿಗಳನ್ನು ಒತ್ತಾಯಿಸುವ ನಿರ್ಣಯ ಕೈಕೊಂಡಿತು. ಅದನ್ನು ಭಾರತದ ನಾಯಕರ ಗಮನಕ್ಕೆ ತರಬಯಸಿ, ಒಂದು ನಿಯೋಗವನ್ನು ದಿಲ್ಲಿಗೆ ಕಳಿಸಲಾಯಿತು. ನಿಯೋಗವು ಅಲ್ಲಿ ಪ್ರಧಾನಮಂತ್ರಿ ನೆಹರೂರನ್ನೊಳಗೊಂಡು ಹಲವಾರು ಮುಖಂಡರನ್ನು ಭೇಟಿಯಾದರು. ಮೈಸೂರಿನ ಪ್ರಶ್ನೆ ಇತ್ಯರ್ಥವಾಗದೆ, ಇನ್ನಿತರ ಅಡ್ಡಿ ಆತಂಕಗಳ ನಿವಾರಣೆಯಾಗದೆ ಕರ್ನಾಟಕ ರಾಜ್ಯದ ರಚನೆಯಾಗದೆಂಬುದನ್ನು ಮನವರಿಕೆ ಮಾಡಿಕೊಂಡೇ ಅವರು ಹಿಂದಿರುಗಿದರು.

ಇಂಥ ಒಂದು ನಿರಾಶಾದಾಯಕಪರಿಸ್ಥಿತಿಯಲ್ಲೂ ತಮ್ಮ ಆಸೆಯನ್ನು ಬಿಡದ ಏಕೀಕರಣ ವಾದಿ ನಾಯಕರು ತಮ್ಮ ನಿರ್ಧಾರವನ್ನು ಕೇಂದ್ರದ ನಾಯಕರಿಗೆ ಮನವರಿಕೆ ಮಾಡಿಕೊಡಲು ಮತ್ತು ಏಕೀಕರಣವು ಕರ್ನಾಟಕದ ಎಲ್ಲ ಪಕ್ಷಗಳ ಧ್ಯೇಯವಾಗಿದೆಯೆಂಬುದನ್ನು ತಿಳಿಸಿಕೊಡಲು ೬.೧೧.೪೯ರಂದು ಅರಸೀಕೆರೆಯಲ್ಲಿ ಕರ್ನಾಟಕದ ಎಲ್ಲ ಪಕ್ಷಗಳ ಸಮ್ಮೇಳನವನ್ನು ಬಳ್ಳಾರಿ ಸಿದ್ದಮ್ಮನವರ ಅಧ್ಯಕ್ಷತೆಯಲ್ಲಿ ಕರೆದರು. ಅದರಲ್ಲಿ "ಕೂಡಲೆ ಕರ್ನಾಟಕ ಪ್ರಾಂತವನ್ನು ರಚಿಸಬೇಕು. ಭಾರತ ರಾಜ್ಯಾಂಗಸಮಿತಿ ತನ್ನ ಕಾರ್ಯಕಲಾಪಗಳನ್ನು ಪೂರ್ಣಗೊಳಿಸುವ ಮುನ್ನವೇ, ರಾಜ್ಯಾಂಗದಲ್ಲಿ ಭಾಷಾವಾರು ಪ್ರಾಂತಗಳ ರಚನೆಗೆ ಅವಕಾಶ ಕೊಡುವ ಅವಶ್ಯಕ ನಿಯಮಗಳನ್ನು ರೂಪಿಸಬೇಕು. ಇಲ್ಲದಿದ್ದರೆ ದೇಶಾದ್ಯಂತ ತೀವ್ರ ಆಂದೋಲನವನ್ನು ನಡೆಸಬೇಕಾಗುತ್ತದೆ" ಎಂಬ ನಿರ್ಣಯವನ್ನು ಸರ್ವಾನುಮತದಿಂದ ಸ್ವೀಕರಿಸಲಾಯಿತು.

ಮಹಾಕವಿಸನ್ಮಾರ್ಗಸಭೆಯವರು ಬೆಂಗಳೂರಿನಲ್ಲಿ ದಿನಾಂಕ ೨೪.೩.೫೧ ರಂದು ತಮ್ಮನ್ನು ಸತ್ಕರಿಸಿದುದಕ್ಕೆ ಕೆ. ಹನುಮಂತಯ್ಯ ಅವರು ಉತ್ತರವಾಗಿ ಹೇಳಿದ ಮಾತುಗಳು ಸತ್ಯಾಂಶದಿಂದ ಕೂಡಿದ್ದು ಏಕೀಕರಣವಿಚಾರದ ಬಗೆಗಿನ ಒಂದು ಸ್ಪಷ್ಟ ಚಿತ್ರಣವನ್ನು ನಮಗೆ ಕೊಡುತ್ತವೆ. ಮೈ. ಪ್ರ. ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದ ಅವರು ಕರ್ನಾಟಕ ಏಕೀಕರಣ ಆಗಲೇಬೇಕೆಂಬುದನ್ನು ಸಂಪೂರ್ಣ ಒಪ್ಪಿ "ಸರಿಯಾದ ಹಾಗೂ ಸಮರ್ಥನಾಯಕತ್ವದ ಕೊರತೆ, ನಮ್ಮ ಜನತೆಯ ಅಸಾಮರ್ಥ್ಯ, ದಕ್ಷಿಣ ಭಾರತದವರು ಪ್ರಬಲರಾಗಬಹುದೆಂಬ ಉತ್ತರಭಾರತದವರ ನಿರಾಧಾರ

ಭೀತಿ, ಸ್ವಾರ್ಥಪರತೆ, ಉತ್ತರ ಕರ್ನಾಟಕದ ಕೆಲವು ಪತ್ರಿಕೆಗಳು, ಕರ್ನಾಟಕ ಏಕೀಕರಣಕ್ಕೆ ಮೈಸೂರಿನವರೆ ಅಡ್ಡಗಾಲು ಹಾಕುತ್ತಿರುವರೆಂಬ ಅವಹೇಳನಕಾರಿ ಪ್ರಕಟನೆಗಳು" ಇವುಗಳಿಂದಾಗಿ ಏಕೀಕರಣ ಕಾರ್ಯ ನಿಧಾನಗತಿಯಿಂದ ಸಾಗಿರುವುದನ್ನು ಸರಿಯಾಗಿಯೇ ವಿಶ್ಲೇಷಿಸಿದರು. ಪರಸ್ಪರರ ಮನವೊಲಿಕೆಯಿಂದ, ಆಕ್ಷೇಪಣೆಗಳನ್ನು ನಿಲ್ಲಿಸುವುದರಿಂದ ಒಗ್ಗಟ್ಟಿನಿಂದ ಏಕೀಕರಣ ಸಾಧ್ಯವಾಗುತ್ತದೆಂದು ತಿಳಿಸಿ, ಏಕೀಕರಣಕ್ಕೆ ಮೈ. ಪ್ರ. ಕಾಂಗ್ರೆಸ್ಸಿನ ವಿರೋಧ ಎಳ್ಳಷ್ಟೂ ಇಲ್ಲವೆಂಬುದನ್ನು ಮತ್ತೊಮ್ಮೆ ಸ್ಪಷ್ಟಪಡಿಸಿದರು.

ರಾಷ್ಟ್ರಾಧ್ಯಕ್ಷ ಬಾಬೂ ರಾಜೇಂದ್ರ ಪ್ರಸಾದ್ ಅವರು ಮೈಸೂರು ರಾಜ್ಯಕ್ಕೆ ಭೇಟ್ಟಿಯಿತ್ತಾಗ, ಕರ್ನಾಟಕ ಏಕೀಕರಣ ಸಂಘದವರು ೧೧.೪.೫೧ರಂದು ಅವರಿಗೆ ಮನವಿಯೊಂದನ್ನು ಸಲ್ಲಿಸಿದರು. ಅದರಲ್ಲಿ "ದಕ್ಷಿಣ ಭಾರತದ ಪ್ರಾಂತಗಳು ಬ್ರಿಟಿಷರ ಕೃತಿಯ ರಾಜಕೀಯ ವಿಭಾಗಗಳಾಗಿವೆ. ಅದರಿಂದ ಅಭಿವೃದ್ಧಿ ಕುಂಠಿತಗೊಂಡಿದೆ. ೩೦ ವರ್ಷಗಳಿಂದ ಕರ್ನಾಟಕದ ರಚನೆಗ ನಮ್ಮ ಮುಖಂಡರ ಹಾಗೂ ಜನತೆಯ ಪ್ರಯತ್ನ ನಡದೇ ಇದೆ. ಇದಕ್ಕೆ ಗಾಂಧೀಜಿಯವರ ಆಶೀರ್ವಾದವಿದೆ. ಭಾಷಾವಾರು ಪ್ರಾಂತರಚನೆಯನ್ನು ಮುಂದಿಟ್ಟು ಕಾಂಗ್ರೆಸ್ ಸ್ವರಾಜ್ಯಗಳಿಸಿದೆ. ಅದನ್ನು ಪೂರೈಸುವುದು ಕಾಂಗ್ರೆಸ್ಸಿನ ನೈತಿಕಹೊಣೆ. ಬೆಂಗಳೂರನ್ನೂ ಕೇಂದ್ರವಾಗಿರಿಸಿ, ಮೈಸೂರು ಮಹಾರಾಜರನ್ನು ಪ್ರಮುಖರನ್ನಾಗಿಸಿ ಎಲ್ಲ ಕನ್ನಡ ಪ್ರದೇಶಗಳು ಒಂದುಗೂಡಬೇಕು. ಕೂಡಲೆ ಕೊಡಗನ್ನಾದರೂ ಸೇರಿಸಬೇಕು" ಎಂದು ಕಾಣಿಸಲಾಗಿತ್ತು. ಧಾರವಾಡದಲ್ಲಿಯೂ ಇದೇ ಅಭಿಪ್ರಾಯದ ಮನವಿಯನ್ನು ರಾಷ್ಟ್ರಪತಿಗಳು ಅಲ್ಲಿಗೆ ಭೇಟ್ಟಿಯಿತ್ತಾಗ ಸಲ್ಲಿಸಲಾಯಿತು. ಮುಂದೆ ೨೦.೪.೫೧ರಂದು ಕರ್ನಾಟಕದ ಏಕೀಕರಣಸಮಿತಿಯವರು ಆಗಿನ ಅ. ಭಾ. ಕಾಂಗ್ರೆಸ್ ಅಧ್ಯಕ್ಷ ಶ್ರೀ ಪುರುಷೋತ್ತಮದಾಸ ತಂಡನ್ ಅವರಿಗೆ ಇದೇ ಅಭಿಪ್ರಾಯದ ಮನವಿಯನ್ನು ಸಲ್ಲಿಸಿದರು. ಆಗ ತಂಡನ್ ಅವರು ಹೈದರಾಬಾದ್ ಹೊರತುಪಡಿಸಿ, ಮಿಕ್ಕೆಲ್ಲ ಕನ್ನಡ ಭಾಗಗಳನ್ನು ಒಂದುಗೂಡಿಸಿ ಕರ್ನಾಟಕ ಪ್ರಾಂತ ರಚಿಸಲು ಅಡ್ಡಿಯಿಲ್ಲವೆಂಬ ಅಭಿಪ್ರಾಯವನ್ನು ಪ್ರಕಟಿಸಿದುದು ಗಮನಾರ್ಹ.

ಹೀಗೆ ಎಲ್ಲ ಬಗೆಯ ಪ್ರಯತ್ನಗಳು, ಕರ್ನಾಟಕ ಏಕೀಕರಣದ ಬಗ್ಗೆ ನಡೆದಿದ್ದರೂ, ಮೈಸೂರೇತರ ಪ್ರದೇಶದ ಕೆಲವರಲ್ಲಿ ಇತರ ಭಾಗದ ಕನ್ನಡಿಗರಿಗೆ ಕರ್ನಾಟಕ ಏಕೀಕರಣದ ಬಗ್ಗೆ ಇರುವಷ್ಟು ಆಸಕ್ತಿ ಮೈಸೂರಿನವರಿಗಿಲ್ಲ. ಕೇಂದ್ರ ಸರ್ಕಾರವನ್ನು ಆ ಬಗ್ಗೆ ಒತ್ತಾಯಿಸುವಲ್ಲಿ ನಿಧಾನ ಮಾಡುತ್ತಿದ್ದಾರೆ. ತಮ್ಮದೇ ಆದ ಪ್ರತ್ಯೇಕತಾಭಾವ ಅವರಲ್ಲಿದೆ. ಕರ್ನಾಟಕಪ್ರಾಂತ ರಚನೆಯಾದರೆ ಉತ್ತರ ಕರ್ನಾಟಕದವರು ಪ್ರಬಲರಾಗುತ್ತಾರೆಂಬ ಭೀತಿ ಅವರಿಗಿದೆ ಮುಂತಾದ ಭಾವನಗಳು ಸಂಪೂರ್ಣ ಅಳಿದಿರಲಿಲ್ಲ. ಇದನ್ನು ದೂರ ಮಾಡಲು ಮತ್ತು ಭಾರತದ ನಾಯಕಗಣಕ್ಕೆ ಮೈಸೂರಿಗರ ಸ್ಪಷ್ಟ ಅಭಿಪ್ರಾಯವನ್ನು ತಿಳಿಸಲು ಮೈಸೂರಿನ ಜನ 'ಕರ್ನಾಟಕ ಪ್ರಾಂತರಚನಾ ಸಮ್ಮೇಳನ'ವನ್ನು ಕರೆಯಲು ನಿರ್ಧರಿಸಿದರು. ಇದು ಕರ್ನಾಟಕ ಏಕೀಕರಣದ ದೃಷ್ಟಿಯಿಂದ ತುಂಬಾ ಮಹತ್ವದ ಸಮ್ಮೇಳನವಾಗಬೇಕೆಂಬುದು ಅವರ ಇಚ್ಛೆಯಾಗಿತ್ತು.

ದಿನಾಂಕ ೨೧.೫.೫೧ರಂದು ಸಮ್ಮೇಳನದ ಕಾರ್ಯಕ್ರಮಗಳನ್ನು ರೂಪಿಸಲು ಕನ್ನಡ

ಸಾಹಿತ್ಯ ಪರಿಷತ್ತಿನ ಪರಿಷನ್ಮಂಡಲದ ಸಭಾಭವನದಲ್ಲಿ ಶ್ರೀ ಸಿದ್ದವ್ವನಹಳ್ಳಿ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಮೈಸೂರು ಪ್ರಮುಖರ ಸಭೆ ಸೇರಿ ೧೧.೭.೫೧ರಂದು ಸಮ್ಮೇಳನ ಕರೆಯಲು ನಿರ್ಧರಿಸಲಾಯಿತು. ಇದೇ ಸಮಯಕ್ಕೆ ಬೆಂಗಳೂರಿನಲ್ಲಿ ೧೩.೭.೫೧ರಿಂದ ಮೂರುದಿನಗಳ ಕಾಲ ಅಖಿಲಭಾರತ ಕಾಂಗ್ರೆಸ್ ಅಧಿವೇಶನ ನಡೆಸಲು ಅ.ಭಾ.ಕಾಂ. ಕಾರ್ಯಕಾರೀ ಸಮಿತಿ ನಿರ್ಧರಿಸಿದುದು ಬಹಳ ಒಳ್ಳೆಯದಾಯಿತು. ಮೈಸೂರಿನವರ ಬಗ್ಗೆ ಭಾರತದ ಹಿರಿಯ ಮುಖಂಡರಲ್ಲಿರುವ ಅನುಮಾನಗಳನ್ನು ನಿವಾರಿಸಲು ಮತ್ತು ಕರ್ನಾಟಕ ಪ್ರಾಂತರಚನೆಯ ಬಗ್ಗೆ ಮೈಸೂರಿನವರ ಮತ್ತು ಇತರ ಕನ್ನಡ ಪ್ರದೇಶದವರ ಆಶಯ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ರಾಷ್ಟ್ರದ ನಾಯಕರ ಮತ್ತು ಕಾಂಗ್ರೆಸ್ಸಿನ ಇನ್ನಿತರ ಸದಸ್ಯರ ಗಮನಕ್ಕೆ ತರಲು ಒಳ್ಳೆಯ ಅವಕಾಶವನ್ನು ಇದು ಕಲ್ಪಿಸಿಕೊಟ್ಟಿತು. ಆದುದರಿಂದ 'ಕರ್ನಾಟಕ ಪ್ರಾಂತ ರಚನಾ ಸಮ್ಮೇಳನವನ್ನು ಬೆಂಗಳೂರಿನ ಸರ್.ಕೆ.ಪಿ. ಪುಟ್ಟಣ್ಣ ಚೆಟ್ಟಿರ ಪುರಭವನದಲ್ಲಿ ನಡೆಸಲು (೧೧.೭.೫೧)ನಿರ್ಧರಿಸಲಾಯಿತು. ಸಮ್ಮೇಳನದ ಅಧ್ಯಕ್ಷತೆ ವಹಿಸಲು ಟಿ. ಸುಬ್ರಹ್ಮಣ್ಯ ಒಪ್ಪಿದರು.

ತಮಿಳುನಾಡು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕಾಮರಾಜ ನಾಡಾರ್, ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಬಿ. ಎಸ್. ಹಿರೆ ಮತ್ತು ಕರ್ನಾಟಕ ಪ್ರಾಂತ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪ ಅವರು ಭಾಷಾವಾರು ಪ್ರಾಂತರಚನೆಯ ಪರವಾಗಿ ಮಾತಾಡಲು ಸ್ವಾಗತ ಸಮಿತಿಯ ಕೋರಿಕೆಯ ಮೇರೆಗೆ ಒಪ್ಪಿಕೊಂಡಿದ್ದರು.

ಸಮ್ಮೇಳನಕ್ಕೆ, ಮೈಸೂರು ಮುಖ್ಯಮಂತ್ರಿ ಕೆ.ಸಿ. ರೆಡ್ಡಿ, ನ್ಯಾಯಾಂಗ ಸಚಿವ ಕೆ. ಟಿ. ಭಾಷ್ಯಂ, ರೆವಿನ್ಯೂ ಸಚಿವ ಎಚ್. ಸಿದ್ದಯ್ಯ, ವಿದ್ಯಾಸಚಿವ ಆರ್. ಚೆನ್ನಿಗರಾಮಯ್ಯ ಮೊದಲಾದ ಮಂತ್ರಿಗಳೂ ಮೈ. ಪ್ರ. ಕಾಂ. ಅಧ್ಯಕ್ಷ ಕೆ. ಹನುಮಂತಯ್ಯ, ಹೈದರಾಬಾದಿನ ಮಾಜಿ ಸಚಿವ ಜಿ. ರಾಮಾಚಾರ್, ಉತ್ತರ ಕರ್ನಾಟಕದ ಕಾಂಗ್ರೆಸ್ ಮುಖಂಡರಾದ ಬಿ.ಎನ್. ದಾತಾರ, ಹುಕ್ಕೇರಿಕರ್, ತಿ. ರು. ನೇಸ್ವಿ, ಹಳ್ಳಿಕೇರಿ ಗುದ್ಲೆಪ್ಪ, ಅಂಬಲಿ, ದುಬೆ, ಪೂಣಚ್ಚ, ಸರ್ದಾರ ವೀರನಗೌಡ, ಜಂಗಿನ ಮುರಿಗೆಯ್ಯ, ಜಿ. ರಾಚಣ್ಣ ಮೊದಲಾದವರು, ನ್ಯಾಯ ಮೂರ್ತಿಗಳು, ನಗರ ಪ್ರಮುಖರು, ಉನ್ನತಾಧಿಕಾರಿಗಳು, ನೂರಾರು ಜನ ಪ್ರತಿನಿಧಿಗಳು ಬಂದಿದ್ದರು. ಒಟ್ಟಿನಲ್ಲಿ ಆ ಸಮ್ಮೇಳನ ಇಡೀ ಕರ್ನಾಟಕವನ್ನು ಪ್ರತಿನಿಧಿಸಿತ್ತೆಂದು ಹೇಳಬಹುದು.

ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದ ಎಲ್ಲರೂ, ಭಾಷಾವಾರು ಪ್ರಾಂತರಚನಾ ವಿಚಾರದ ಹಿನ್ನೆಲೆ, ಅದಕ್ಕಾಗಿ ನಡೆದ ಪ್ರಯತ್ನ, ಅ. ಭಾ. ಕಾಂಗ್ರೆಸ್ ಸಮಿತಿ, ಆ ತತ್ವವನ್ನು ಒಪ್ಪಿ ಸ್ವಾತಂತ್ರ್ಯಪಡೆದ ವಿಧಾನ, ಗಾಂಧೀಜಿ, ನೆಹರೂ, ವಲ್ಲಭಭಾಯಿ ಪಟೇಲ, ಬಾಬೂ ರಾಜೇಂದ್ರ ಪ್ರಸಾದ ಮೊದಲಾದ ದೇಶದ ಪ್ರಮುಖ ಮುಖಂಡರು ಭಾ. ವಾ. ಪ್ರಾಂ. ರಚನೆಗೆ ಕೊಟ್ಟ ಅನುಮೋದನೆ, ಕರ್ನಾಟಕದ ಎಲ್ಲ ರಾಜಕೀಯ ಪಕ್ಷಗಳು, ಸಮಗ್ರ ಜನತೆ, ವಿವಿಧ ಸಂಘ ಸಂಸ್ಥೆಗಳು ಕರ್ನಾಟಕ ಏಕೀಕರಣಕ್ಕಾಗಿ ನಡೆಸಿರುವ ಹಾಗೂ ಇನ್ನೂ ನಡೆಸುತ್ತಿರುವ ಹೋರಾಟ, ಏನೋ ಕಾರಣ ಹೇಳಿ ಕ. ಏಕೀಕರಣವನ್ನು ಮುಂದೂಡುತ್ತ ಹೋದರೆ ಎದುರಿಸಬೇಕಾದ ಅನಾಹುತಗಳು ಇವೆಲ್ಲವನ್ನು ಎಳೆಎಳೆಯಾಗಿ ಬಿಡಿಸಿ ಹೇಳಿದರು.

ಶ್ರೀ ನಿಜಲಿಂಗಪ್ಪನವರು, ಈ ಸಮ್ಮೇಳನಾನಂತರವಾದರೂ ಮೈಸೂರಿನ ಜನ ಕರ್ನಾಟಕ ಪ್ರಾಂತ ರಚನೆಗೆ ಆಸಕ್ತಿ ತೋರುತ್ತಿಲ್ಲವೆಂಬ ಆಪಾದನೆ ಅಳಿದು ಹೋಗಲೆಂದು ತಮ್ಮ ಭಾಷಣದ ಆರಂಭದಲ್ಲಿ ಹಾರೈಸಿ ಭಾರತೀಯ ಕಾಂಗ್ರೆಸ್ಸು ಪ್ರಾರಂಭದಿಂದ ಭಾಷಾವಾರು ಪ್ರಾಂತಕ್ಕೆ ಬೆಂಬಲ ನೀಡುತ್ತ ಬಂದಿದ್ದರೂ ಸ್ವಾತಂತ್ರ್ಯಾನಂತರ ತನ್ನ ವಾಗ್ದಾನವನ್ನು ಈಡೇರಿಸುವಲ್ಲಿ ನಿಧಾನಿಸುತ್ತಿರುವ ಬಗ್ಗೆ ವಿಷಾದ ವ್ಯಕ್ತಪಡಿಸಿದರು. ಕರ್ನಾಟಕ ರಚನೆಗೆ ಅಡ್ಡಿಯಾಗಿರುವವೆಂದು ಭಾರತ ಸರ್ಕಾರ ಹೇಳುತ್ತ ಬಂದಿರುವ ಕಾನೂನಿನ ಅಂಶಗಳು ಈಗ ಇಲ್ಲವಾಗಿವೆ. ಸಣ್ಣ ಪುಟ್ಟ ಸಂಸ್ಥಾನಗಳು ಈಗ ಭಾರತ ಒಕ್ಕೂಟದಲ್ಲಿ ವಿಲೀನವಾಗಿರುವುದರಿಂದ ಅವು ಏಕೀಕರಣದ ಹಾದಿಗೆ ಅಡ್ಡಿ ಬರುವ ಪ್ರಮೇಯವೇ ಇಲ್ಲ. ಮೈ. ಪ್ರ. ಕಾಂಗ್ರೆಸ್ ಸಮಿತಿ ಕರ್ನಾಟಕ ಪ್ರಾಂತ ರಚನೆಯನ್ನು ಸ್ವಾಗತಿಸಿ ನಿರ್ಣಯ ಸ್ವೀಕರಿಸಿದೆ. ಮೈಸೂರು ಸಂಸ್ಥಾನವನ್ನು ಕರ್ನಾಟಕಕ್ಕೆ ಸೇರಿಸಲು ಮೈಸೂರು ಸರ್ಕಾರ ಸಿದ್ಧವಿರುವುದಾಗಿ ಮೈಸೂರಿನ ಮಂತ್ರಿಮಂಡಲ ನಿರ್ಣಯಿಸಿರುವುದಾಗಿ ತಿಳಿದು ಬಂದಿದೆ. ಇದರಿಂದ ತ್ರಿಸದಸ್ಯಸಮಿತಿಯ ವರದಿಯ ಆಕ್ಷೇಪಣೆ ಕೂಡ ಇಲ್ಲವಾಗಿದೆ. ಮೈಸೂರಿನ ಮಹಾರಾಜರು ಕರ್ನಾಟಕದ ಘಟನಾತ್ಮಕ ಪ್ರಭುಗಳಾಗಿರಲು ಕನ್ನಡಿಗರೆಲ್ಲ ಒಪ್ಪಿಕೊಂಡಿದ್ದಾರೆ. ಈ ಬಗ್ಗೆ ಉತ್ತರ ಕರ್ನಾಟಕದ ಜನತೆಯಲ್ಲಿ ಭಿನ್ನಾಭಿಪ್ರಾಯವಿದೆಯೆಂಬ ಮಾತಿಗೆ ಆಧಾರವಿಲ್ಲ. ನನಗೆ ಅವರ ಸಂಪರ್ಕ ಹೆಚ್ಚಾಗಿ ಬಂದಿದ್ದು ಅವರ ಅಂತರಂಗವನ್ನು ನಾನು ಚೆನ್ನಾಗಿ ತಿಳಿದಿದ್ದೇನೆ. ಏಕೀಕೃತ ಕರ್ನಾಟಕ ಆರ್ಥಿಕವಾಗಿಯೂ ಬಲಶಾಲಿಯಾಗುತ್ತದೆ. ಮಹಾಕರ್ನಾಟಕದ ಆಡಳಿತ ಕೇಂದ್ರದ ಬಗ್ಗೆ ಯಾವ ವಾದವೂ ಇಲ್ಲ. ಬೆಂಗಳೂರು ಎಲ್ಲ ರೀತಿಯಿಂದಲೂ ಆಡಳಿತಕೇಂದ್ರವಾಗಲು ಎಲ್ಲ ರೀತಿಯಿಂದಲೂ ಯೋಗ್ಯವಾಗಿದೆ. ಭಾಷಾವಾರು ಪ್ರಾಂತರಚನೆಯಿಂದ ದೇಶದ ಐಕ್ಯತೆಗೆ, ಅದರ ಭದ್ರತೆಗೆ ಧಕ್ಕೆಯುಂಟಾಗುತ್ತದೆಂಬ ವಾದದಲ್ಲಿ ಹುರುಳಿಲ್ಲ. ತದ್ವಿರುದ್ಧ ದೇಶದ ಐಕ್ಯತೆ ಗಟ್ಟಿಗೊಳ್ಳುತ್ತದೆ. ನಮ್ಮಲ್ಲಿ ಪ್ರತ್ಯೇಕತಾ ಭಾವನೆಯಿಲ್ಲ. ಹಾಗೆ ಒಂದು ವೇಳೆ ಪ್ರಾಂತರಚನೆಯಿಂದ ದೇಶದ ಐಕ್ಯತೆಗೆ ಬೆದರಿಕೆಯುಂಟಾಗುವಂತಿದ್ದರೆ ನಮಗೆ ಕರ್ನಾಟಕ ಪ್ರಾಂತವೇ ಬೇಡ. ಇನ್ನು ಗಡಿಯ ಪ್ರಶ್ನೆ. ಅದನ್ನು ಸಂಧಾನದ ಮೂಲಕವಾಗಲಿ ಪಂಚಾಯಿತಿಯ ಮೂಲಕವಾಗಲಿ ಪರಿಹರಿಸಿಕೊಳ್ಳಬಹುದು. ಗಡಿನಿರ್ಧಾರ ಸಮಿತಿ ಆ ಕಾರ್ಯಕ್ರಮ ಕೈಗೊಳ್ಳುತ್ತದೆ. ಆದರೆ ಸರ್ಕಾರ ಮಹಾಚುನಾವಣೆಗೆ ಮುನ್ನವೆ ತನ್ನ ಧೋರಣೆಯನ್ನು ವ್ಯಕ್ತಪಡಿಸಬೇಕು. ಇಲ್ಲವಾದಲ್ಲಿ ವಿಪರೀತ ಪರಿಣಾಮವುಂಟಾಗುವ ಸಾಧ್ಯತೆಯಿದೆ ಮುಂತಾಗಿ ಕರ್ನಾಟಕ ಏಕೀಕರಣದ ಎಲ್ಲ ಮಗ್ಗುಲುಗಳನ್ನು ಸಾಧಾರ ಸ್ಪಷ್ಟಪಡಿಸಿದರು.

ಸಮ್ಮೇಳನಾಧ್ಯಕ್ಷ ಶ್ರೀ.ಟಿ ಸುಬ್ರಹ್ಮಣ್ಯನವರು ನಿಜಲಿಂಗಪ್ಪನವರ ಅಭಿಪ್ರಾಯಗಳನ್ನು ಇನ್ನೂ ವಿಶದಪಡಿಸುತ್ತ, ಹೈದರಾಬಾದ ಪ್ರಜೆಗಳು ಇಚ್ಛೆ ಪಟ್ಟರೆ ಅದನ್ನು ವಿಭಜಿಸಿ ಅದರಲ್ಲಿಯೂ ಕನ್ನಡ ಪ್ರದೇಶಗಳನ್ನು ಹೊಸಪ್ರಾಂತಕ್ಕೆ ಸೇರಿಸಬಹುದು ಎಂದೂ ತಿಳಿಸಿದರು. ಭಾರತ ಸರ್ಕಾರ ಆದಷ್ಟು ಬೇಗ ಏಕೀಕೃತ ಕರ್ನಾಟಕವನ್ನು ರಚಿಸಲು ಎಲ್ಲಕ್ರಮಗಳನ್ನು ಕೈಕೊಳ್ಳಬೇಕೆಂದು ಒತ್ತಾಯಿಸಿದರು. ಬಹಿರಂಗ ಅಧಿವೇಶನದಲ್ಲಿ ಹಲವಾರು ಗೊತ್ತುವಳಿಗಳನ್ನು ಮಂಡಿಸುವ ಬದಲು, ಕರ್ನಾಟಕ ಪ್ರಾಂತ ರಚನೆಯನ್ನು ತೀವ್ರ ಆಗುಗೊಳಿಸುವ ಒಂದೇ ಒಂದು ಗೊತ್ತುವಳಿಯನ್ನು ಮಾತ್ರ ಮಂಡಿಸಲು ನಿರ್ಧರಿಸಲಾಯಿತು. ಆ ಪ್ರಕಾರ :

"ಮೈಸೂರು ಮತ್ತು ಇತರ ಕನ್ನಡ ಪ್ರದೇಶಗಳೆಲ್ಲವನ್ನೂ ಒಂದೇ ಆಡಳಿತಕ್ಕೆ ತರುವಂತೆ, ಕಾಂಗ್ರೆಸ್ ಕಾರ್ಯಕಾರಿ ಸಮಿತಿಗಳು ಹಾಗೂ ಅಖಿಲಭಾರತ ಕಾಂಗ್ರೆಸ್ ಪಕ್ಷ ಭಾರತ ಸರ್ಕಾರಕ್ಕೆ ಸೂಚಿಸಬೇಕೆಂದು ಮೈಸೂರು ಜನತೆಯ ಈ ಸಮ್ಮೇಳನ ಒತ್ತಾಯ ಪಡಿಸುತ್ತದೆ" ಎಂಬ ನಿರ್ಣಯವನ್ನು ಸರ್ವಾನುಮತದಿಂದ ಸ್ವೀಕರಿಸಲಾಯಿತು.

೧೨.೭.೫೧ರ ರಾತ್ರಿ ಬೆಂಗಳೂರಿನಲ್ಲಿ ಸೇರಿದ್ದ ಅಖಿಲಭಾರತ ಕಾಂಗ್ರೆಸ್ಸಿನ ಕಾರ್ಯಕಾರೀ ಸಮಿತಿ, ಮುಂಬರುವ ಚುನಾವಣೆಗೆ ಸಿದ್ಧಪಡಿಸಬೇಕಾದ ಕಾಂಗ್ರೆಸ್ಸಿನ ಘೋಷಣಾ ಪತ್ರದ ಬಗ್ಗೆ ಚರ್ಚಿಸಿತು. ಭಾಷಾವಾರು ಪ್ರಾಂತರಚನೆಯನ್ನು ಘೋಷಣಾ ಪತ್ರದಲ್ಲಿ ಸೇರಿಸುವ ಬಗ್ಗೆ ವಿಶೇಷ ಚರ್ಚೆ ನಡೆದು, ಕೆಲವರು ಆ ಬಗ್ಗೆ ಸ್ವಲ್ಪ ನಿಧಾನಿಸಬೇಕೆಂದು ಅಭಿಪ್ರಾಯಪಟ್ಟರೂ, ದಕ್ಷಿಣ ಭಾರತದ ಐದು ಪ್ರಾಂತಗಳ ಪ್ರತಿನಿಧಿಗಳ ಒತ್ತಾಯದ ಮೇರೆಗೆ ಭಾ. ವಾ. ಪ್ರಾಂತ ರಚಿಸುವುದನ್ನು ಚುನಾವಣಾ ಘೋಷಣೆಯಲ್ಲಿ ಸೇರಿಸಲಾಯಿತು.

ಕ.ಪ್ರ. ಕಾಂಗ್ರೆಸ್ ಅಧ್ಯಕ್ಷ ಎಸ್. ನಿಜಲಿಂಗಪ್ಪನವರು ಮತ್ತು ಕೌನ್ಸಿಲ್ ಸದಸ್ಯರು ೧೫.೭.೫೧ರಂದು ಪ್ರಧಾನಿಯವರನ್ನು ಕಂಡು, ವಿಶಾಲ ಕರ್ನಾಟಕ ರಚಿಸುವಂತೆ ಅವಶ್ಯಕ ವಿವರಗಳನ್ನೊಳಗೊಂಡ ಮನವಿ ಪತ್ರವನ್ನು ಸಲ್ಲಿಸಿದರು. ಪ್ರಧಾನಿಯವರು ಆ ಮನವಿಯನ್ನು ಸಾವಧಾನದಿಂದ ನೋಡಿ, ಗಡಿ ಮುಂತಾದ ಸಮಸ್ಯೆಗಳ ಬಗ್ಗೆ ನಿಮ್ಮ ನಿಮ್ಮಲ್ಲೇ ಒಂದು ನಿಶ್ಚಿತ ನಿರ್ಧಾರಕ್ಕೆ ಬಂದು ಭಾರತ ಸರ್ಕಾರಕ್ಕೆ ತಿಳಿಸಿದಲ್ಲಿ ಕೂಡಲೆ ಅವಶ್ಯ ಕ್ರಮ ಕೈಕೊಂಡು, ಪ್ರಾಂತರಚನೆ ಮಾಡುವ ಸಲಹೆಯನ್ನು, ರಾಷ್ಟ್ರಾಧ್ಯಕ್ಷರಿಗೂ, ಸರ್ಕಾರಕ್ಕೂ ತಿಳಿಸುವುದಾಗಿ ಹೇಳಿದರು. ಈ ಮನವಿ ಪತ್ರವನ್ನು ಅ.ಭಾ. ಕಾಂಗ್ರೆಸ್ ಅಧ್ಯಕ್ಷ ಪುರುಷೋತ್ತಮದಾಸ ಟಂಡನ್ ಅವರಿಗೂ ಸಲ್ಲಿಸಲಾಯಿತು. ಅವರು ಸಾಧ್ಯವಾದ ಮಟ್ಟಿಗೆ ಚುನಾವಣೆಗೆ ಮೊದಲೇ ಭಾ.ವಾ. ಪ್ರಾಂತ ರಚಿಸಲು ಯತ್ನಿಸುವುದಾಗಿ ಹೇಳಿದರು.

ಅ. ಭಾ. ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ೧೨.೮.೫೧ರಂದು ನವದೆಹಲಿಯಲ್ಲಿ ಸಭೆ ಸೇರಿ ದಕ್ಷಿಣ ಭಾರತದ ಎಲ್ಲಾ ಭಾಷಾವಾರು ಪ್ರದೇಶಗಳ ಆರ್ಥಿಕ ಮತ್ತು ಆಡಳಿತಕ್ಕೆ ಸಂಬಂಧಿಸಿದ ವಿಷಯಗಳ ಹಿನ್ನೆಲೆಯಲ್ಲಿ ಪ್ರಾಂತಗಳನ್ನು ರಚಿಸುವ ಬಗ್ಗೆ ಪರಿಶೀಲಿಸಲು ಗಡಿಸಮಿತಿ ನೇಮಿಸಬೇಕೆಂದು ಭಾರತ ಸರ್ಕಾರಕ್ಕೆ ಸಲಹೆ ನೀಡಿತು.

ಕರ್ನಾಟಕ ಪ್ರಾಂತರಚನಾ ಸಮ್ಮೇಳನ ನಡೆದಮೇಲೆ ಒಂದರ ಮೇಲೊಂದರಂತೆ ಘಟನೆಗಳು ಬಹಳ ತೀವ್ರವಾಗಿ ನಡೆದವು. ಚುನಾವಣೆಗಳು ನಡೆದು ಕಾಂಗ್ರೆಸ್ ಪಕ್ಷ ಆರಿಸಿ ಬಂದಿತು. ಕರ್ನಾಟಕ ಏಕೀಕರಣ ಇನ್ನೂ ಆಗದಿರುವ ಬಗ್ಗೆ ಸಹನೆಯನ್ನು ಕಳೆದುಕೊಂಡ ಕನ್ನಡಿಗರು 'ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತ'ನ್ನು ೧೯೫೩ರಲ್ಲಿ ಸ್ಥಾಪಿಸಿ ಅದರ ಮೂಲಕ ತಮ್ಮ ಕಾರ್ಯಚಟುವಟಿಕೆಗಳನ್ನು ಮುಂದುವರಿಸಿ ಸಾವಿರಾರು ಜನ ಬಂಧನಕ್ಕೊಳಗಾದರು. ಪೊಟ್ಟಿ ಶ್ರೀರಾಮುಲು ಅವರು ಭಾಷಾವಾರು ಪ್ರಾಂತ ರಚನೆಗಾಗಿ ಉಪವಾಸ ಸತ್ಯಾಗ್ರಹ ಹೂಡಿ ಪ್ರಾಣಾರ್ಪಣ ಮಾಡಿದ ಫಲವಾಗಿ ಆಂಧ್ರಪ್ರಾಂತ ನಿರ್ಮಾಣಗೊಂಡಿತು. ಬಳ್ಳಾರಿ ಜಿಲ್ಲೆಯ ಕೆಲಭಾಗಗಳು ಮೈಸೂರಿಗೆ ಸೇರುತ್ತವೆಂದು ಪಂ. ನೆಹರೂ ಅವರು ಪಾರ್ಲಿಮೆಂಟಿನಲ್ಲಿ

ಹೇಳಿಕೆ ಕೊಟ್ಟರು. (೨೫.೩.೫೩) ಆ ಪ್ರಕಾರ ಬಳ್ಳಾರಿಜಿಲ್ಲೆಯ ಏಳು ತಾಲೂಕುಗಳು (ಬಳ್ಳಾರಿಯನ್ನೊಳಗೊಂಡು) ಮೈಸೂರಿನ ಭಾಗಗಳಾದವು. ವಿಶ್ವವಿಖ್ಯಾತ ಇಂಜಿನಿಯರ್ ಸರ್.ಎಂ. ವಿಶ್ವೇಶ್ವರಯ್ಯನವರು, ನಾಗಪುರದ ಕನ್ನಡ ಸಂಘದವರು ತಮಗೆ ಅರ್ಪಿಸಿದ ಬಿನ್ನವತ್ತಳೆಗೆ ಉತ್ತರವಾಗಿ "ಆಂಧ್ರಪ್ರಾಂತದ ರಚನೆ ಸಂದರ್ಭದಲ್ಲಿ ಕರ್ನಾಟಕವನ್ನು ನಿರ್ಮಾಣ ಮಾಡುವಂತೆ ಒತ್ತಾಯ ತರಬೇಕು. ಕರ್ನಾಟಕ ಏಕೀಕರಣವಾದಲ್ಲಿ ದೇಶದ ದಕ್ಷಿಣ ಭಾಗಗಳಲ್ಲಿ ಹೆಚ್ಚಿನ ಸಂಪದಭಿವೃದ್ಧಿ ಹಾಗೂ ಕೈಗಾರಿಕಾ ಪ್ರಗತಿ ಆಗುವುದೆಂದು ನನ್ನ ಅಭಿಪ್ರಾಯ. ಮುಂಬಯಿ, ಮದ್ರಾಸು ಮುಂತಾದ ಪ್ರಾಂತಗಳಲ್ಲಿರುವ ಕನ್ನಡಿಗರು ಮೈಸೂರಿನೊಡನೆ ಸೇರಲು ಇಚ್ಛಿಸಿರುವುದು ಸಂತಸದ ವಿಷಯ. ಮೈಸೂರಿನ ಒಂದು ಗುಂಪಿನವರಲ್ಲಿ ಕರ್ನಾಟಕ ಪ್ರಾಂತವಾದರೆ ಲಿಂಗಾಯತರು ತಮ್ಮ ಮೇಲೆ ಆಳ್ವಿಕೆ ನಡೆಸಬಹುದೆಂಬ ಭೀತಿಯಿದೆ. ಪ್ರಜಾಪ್ರಭುತ್ವದಲ್ಲಿ ಯಾರಿಗೂ ಇಂಥ ಭಯವಿರಬಾರದು" ಎಂದು ಹೇಳಿರುವುದು (೨೪.೩.೫೩) ಅಂದಿನ ಆ ಸಂದರ್ಭದಲ್ಲಿ ಬಹಳ ಮಹತ್ವದ್ದೆನ್ನಬಹುದು.

ಇಲ್ಲಿ ಗಮನಿಸಬೇಕಾದ ಇನ್ನೊಂದು ತುಂಬಾ ಮಹತ್ವದ ಘಟನೆಯೆಂದರೆ ಮೈಸೂರು ಶಾಸನಸಭಾಸದಸ್ಯರಲ್ಲಿ ೮೬ ಜನ ಏಕೀಕರಣಕ್ಕೆ ಬೆಂಬಲನೀಡಿ ಪ್ರಧಾನಿ ನೆಹರೂ ಅವರಿಗೆ ಮನವಿ ಅರ್ಪಿಸಿದ್ದು. ಮೈಸೂರು ಮತ್ತು ಕರ್ನಾಟಕದ ಎಲ್ಲ ಪತ್ರಕರ್ತರು ಕರ್ನಾಟಕ ಏಕೀಕರಣಕ್ಕೆ ಬೆಂಬಲವಿತ್ತುದನ್ನು ಇಲ್ಲಿ ಮರೆಯಲಾಗದು.

ಇದೆಲ್ಲವನ್ನು ಗಮನಿಸಿದ ಭಾರತಸರ್ಕಾರ ತನ್ನ ನಿಧಾನಗತಿಯನ್ನು ಬಿಟ್ಟು ಚುರುಕಾಗಿ ಕಾರ್ಯಪ್ರವೃತ್ತವಾಯಿತು. ಫಜಲ್ ಅಲಿ ಅವರ ಅಧ್ಯಕ್ಷತೆಯಲ್ಲಿ ನೇಮಕಗೊಂಡ ರಾಜ್ಯ ಪುನರ್ವಿಂಗಡಣಾ ಆಯೋಗ ಏಕೀಕರಣವನ್ನು ಮಾನ್ಯಮಾಡಿದ ಫಲವಾಗಿ 'ವಿಶಾಲ ಮೈಸೂರು' ಹೆಸರಿನಿಂದ ಕರ್ನಾಟಕ ರಾಜ್ಯ ೧೯೫೬ರ ನವೆಂಬರ್ ಒಂದರಂದು ಅಸ್ತಿತ್ವಕ್ಕೆ ಬಂದಿತು. ಅದು 'ಕರ್ನಾಟಕ' ಹೆಸರನ್ನು ಪಡೆಯಬೇಕಾದರೆ ಏಳು ವರ್ಷಗಳ ಕಾಲ ಕಾಯಬೇಕಾಯಿತು.

ಮುಂದೆ ಗಡಿ ಸಮಸ್ಯೆಗಳು ಹುಟ್ಟಿಕೊಂಡವು. ಮಹಾಜನ ಆಯೋಗವನ್ನು ಸರ್ಕಾರ ರಚಿಸಿತು. ಅದರ ತೀರ್ಪನ್ನು ಮಹಾರಾಷ್ಟ್ರ ಒಪ್ಪಿಕೊಂಡಿಲ್ಲ. ಅದರಿಂದಾಗಿ ಮಹಾರಾಷ್ಟ್ರ ಕರ್ನಾಟಕ ಗಡಿಸಮಸ್ಯೆ, ಕರ್ನಾಟಕದ ಮಟ್ಟಿಗೆ ಮುಗಿದಿದ್ದರೂ, ಕೆಲವು ಮಹಾರಾಷ್ಟ್ರೀಯರ ದೃಷ್ಟಿಯಲ್ಲಿ ಇನ್ನೂ ಮುಗಿದಿಲ್ಲ.

ಅಂತೂ ಏಳೆಂಟು ಶತಮಾನಗಳ ಅನಂತರ ಎಲ್ಲವಲ್ಲದಿದ್ದರೂ ಬಹುತೇಕ ಕನ್ನಡ ಪ್ರದೇಶಗಳು ಪುನಃ ಒಂದಾಗಿ ಕರ್ನಾಟಕ ಮತ್ತೊಮ್ಮೆ ತಲೆಯೆತ್ತಿ ನಿಂತಿದೆ.

❑

ಪ್ರದರ್ಶಕ ಕಲೆಗಳ ಸ್ವರೂಪ

■ ಬರಗೂರು ರಾಮಚಂದ್ರಪ್ಪ

ಇಂಡಿಯಾದಂಥ ದೇಶದಲ್ಲಿ ಪ್ರದರ್ಶಕ ಕಲೆಗಳ ಪಾತ್ರ ಅತ್ಯಂತ ಮಹತ್ವದ್ದು. ಇಂಡಿಯಾ ಎಂದಾಗ ನಮ್ಮಲ್ಲಿ ಅನೇಕರಿಗೆ ಗತ ವೈಭವದ ಮೆಲುಕು; ಅದನ್ನೇ ಚ್ಯೂಯಿಂಗ್‌ಗಮ್ಮಿನಂತೆ ಸವಿಯುತ್ತ ಸಂತೋಷಿಸುವ ಮಂದಿ 'ಭೂತ'ದಲ್ಲೇ ಹೂತು ಹೋಗುವುದುಂಟು. ನಮ್ಮ ಕಣ್ಣೆದುರೇ ಕಾಡಿಸುವ, ಕಿಡಿಯುವ ಕಟುವಾಸ್ತವಕ್ಕೆ ಕಣ್ಣು ಮುಚ್ಚಿ ಅಂತಃಚಕ್ಷುವಿಗೆ ಕೆಲಸಕೊಟ್ಟು ಬೋಳೆದರ್ಶನಕ್ಕೆ ಬಾಯಾಗುವುದುಂಟು; ವಿವಿಧ ಕ್ಷೇತ್ರಗಳಲ್ಲಿ ಇಂಥವರೇ ಪ್ರತಿಷ್ಠಿತ ಶಕ್ತಿಗಳು, ಅವರ ಹಾದಿ ದಿವ್ಯ ಮಾರ್ಗ; ಅವರ ವಾಣಿ ದಿವ್ಯ ವಾಣಿ. ನಮ್ಮ ಸಮಾಜದ ಬಹುಸಂಖ್ಯಾತ ಶ್ರೀ ಸಾಮಾನ್ಯರಿಗೆ ಇಂಥವರು ಆದರ್ಶವಾಗುವುದು ತೀರಾ ಸ್ವಾಭಾವಿಕ. ನಮ್ಮ ಚರಿತ್ರೆಯಲ್ಲೇ ಇದಕ್ಕೆ ಕಾರಣಗಳಿವೆ. ಇಂಡಿಯಾದ ಚರಿತ್ರೆಯಲ್ಲಿ ಊಳಿಗಮಾನ್ಯ ಪದ್ಧತಿಯ ಅಡಿಯಲ್ಲಿ, ಜಾತಿವೈಷಮ್ಯ, ಆರ್ಥಿಕ ಅಸಮಾನತೆಗಳ ಇಕ್ಕಟ್ಟಿನಲ್ಲಿ ಬದುಕುತ್ತ ಬಂದಿರುವ ಜನತೆ ಪ್ರತಿಷ್ಠಿತ ಶಕ್ತಿಗಳ ಹಿಡಿತಕ್ಕೆ ಸಿಕ್ಕದಿರಲು ಹೇಗೆ ಸಾಧ್ಯ? ಯಾವ ಜನತೆಯ ಬದುಕನ್ನು ಕುರಿತಂತೆ ನಾವು ಗಂಭೀರ ಕಾಳಜಿ ವಹಿಸಿ ಚರ್ಚಿಸುತ್ತೇವೊ, ಯಾರ ಪರವಾಗಿ ಬಂಡಾಯದ ಮಾತುಗಳನ್ನಾಡಿ ಸಾಂಸ್ಕೃತಿಕ ಕ್ಷೇತ್ರದಲ್ಲೂ ಬದಲಾವಣೆಗೆ ಕೈಹಾಕಿದ್ದೇವೊ ಅಂಥ ಜನತೆಯೇ ಮೂಕವಾಗಿ, ಕುರುಡಾಗಿ, ಶತ್ರುವನ್ನೇ ಮಿತ್ರನಂತೆ ಭ್ರಮಿಸುವ ಸ್ಥಿತಿಯಿರುವುದು ನಮ್ಮ ಚರಿತ್ರೆಯ ದೊಡ್ಡ ದುರಂತ; ನಮ್ಮ ಸಮಾಜದ ವೈರುಧ್ಯ.

ನಮ್ಮ ಕಣ್ಣೆದುರು 'ಪವಿತ್ರ ತೀರ್ಥ' ಮಾತ್ರ ಇಲ್ಲ : ಕಂಡ ಕಂಡಲ್ಲಿ ಹರಿಯುವ ಅಸಂಖ್ಯ ಕಪ್ಪು ಚರಂಡಿಗಳಿವೆ; ಆಸ್ತಿಕತೆ ಮತ್ತು ಕಲಾನೈಪುಣ್ಯವನ್ನು 'ಮೆರೆಯುವ' ದೇವಸ್ಥಾನಗಳು ಮಾತ್ರ ಇಲ್ಲ ; ಬಡವರ ಮೂಳೆ ನೆಕ್ಕುವ ವಧಾಸ್ಥಾನಗಳಿವೆ ; ಪಾದರಕ್ಷೆಗಳ ಷೋರೂಂ ಮುಂದುಗಡೆಯೇ ಬಿಸಲಲ್ಲಿ ಬದುಕು ಬರೆಯುವ ಪಾದರಕ್ಷೆ ರಿಪೇರಿ 'ಅಂಗಡಿ'ಗಳಿವೆ.... ಹೀಗೆ ಹೇಳುತ್ತ ಹೋಗಬಹುದು. ನಮ್ಮೆದುರಿನ ವಾಸ್ತವ ಹೀಗಿರುವುದರಿಂದಲೇ ಕಲೆಗಳ, ಅದರಲ್ಲೂ ಪ್ರದರ್ಶಕ ಕಲೆಗಳ ಪಾತ್ರ ಮಹತ್ವದ್ದು ಎಂದು ಹೇಳಿದ್ದು.

ಪ್ರದರ್ಶಕ ಕಲೆಗಳು ಎಲ್ಲ ರೀತಿಯ ಜನಗಳೊಂದಿಗೆ ಸಂವಾದ ಬೆಳೆಸುವ ಸಾಧ್ಯತೆಗಳನ್ನು ಪಡೆದಿವೆ; ಸಾಹಿತ್ಯ ಅಕ್ಷರಸ್ಥರಲ್ಲಿರುವ ಸಾಹಿತ್ಯಾಸಕ್ತರೊಂದಿಗೆ ಮಾತ್ರ ತಕ್ಕಮಟ್ಟಿನ ಸಂವಾದವನ್ನು ಸಾಧ್ಯವಾಗಿಸಿಕೊಳ್ಳಬಲ್ಲುದಾದರೆ ನಾಟಕ, ಸಿನಿಮಾದಂಥ ದೃಶ್ಯ ಮಾಧ್ಯಮಗಳು ಅನಕ್ಷರಸ್ಥರೊಂದಿಗೂ ಮಾತಾಡಬಲ್ಲವು; ಆದ್ದರಿಂದ 'ಬಂಡಾಯ ಸಾಹಿತ್ಯ'ವು ಸಾಹಿತ್ಯಾಸಕ್ತರಲ್ಲಿ ಜನಪರವಾದ ಒಲವನ್ನು ರೂಪಿಸಲು ಆ ಮುಖಾಂತರ ಆಲೋಚನಾಕ್ರಮದಲ್ಲಿ ಕ್ರಾಂತಿ ಮಾಡಲು ಪ್ರೇರಣೆಯಾದರೆ, ಬಂಡಾಯದ ಒಳನೋಟಗಳುಳ್ಳ ದೃಶ್ಯ ಮಾಧ್ಯಮಗಳು ಸಮಸ್ಯೆಗಳಿಗೆ ಸಂಬಂಧಿಸಿದವರೊಂದಿಗೇ ಮಾತಾಡುತ್ತವೆ. ಸಾಹಿತ್ಯ–ಕಲೆಗಳಲ್ಲಿ ಬರುವ ಬಂಡಾಯದ ಒಳನೋಟಗಳಿಂದ ಇದ್ದಕ್ಕಿದ್ದಂತೆ ಬದಲಾವಣೆ ಸಂಭವಿಸುತ್ತದೆಯೆಂದು ಭ್ರಮೆ ಪಡಬೇಕಿಲ್ಲ. ಆದರೆ ಸಾಹಿತ್ಯ–ಕಲೆಗಳಿಗೂ ಜನತೆಯ ಹೋರಾಟಕ್ಕೂ ಸಂಬಂಧ ಅನಗತ್ಯವೆಂದು ಭಾವಿಸುವುದು ಮಾತ್ರ ಅಪಾಯಕಾರಿ ನಿಲುವು. ಸಾಹಿತ್ಯದ ಸ್ವತಂತ್ರ ಸಾಕ್ಷಿತ್ವದ ನೆಪದಲ್ಲಿ ಬರುವ ಇಂಥ ಮಾತುಗಳು ಅತಿರೇಕದ ಸ್ಥಿತಿ ತಲುಪಿದಾಗ ಸಾಹಿತಿ–ಕಲಾವಿದರನ್ನು ಒಟ್ಟು ಸಮಾಜದಿಂದಲೇ ಪ್ರತ್ಯೇಕಿಸಿ ಪೂಜಿಸುವ ಅಪಾಯವುಂಟು. ಆದ್ದರಿಂದ ಕೇವಲ ಸಾಹಿತ್ಯ ಕಲೆಗಳಿಂದ ಬದಲಾವಣೆ ಆಗದಿದ್ದರೂ ಬದಲಾವಣೆಗಾಗಿ ನಡೆಯುವ ಹೋರಾಟಗಳಲ್ಲಿ ಗುರುತಿಸಿಕೊಳ್ಳುವುದು ಬದುಕಿನಲ್ಲಿ ತನ್ನನ್ನು ತಾನು ಸ್ಥಾಪಿಸಿಕೊಳ್ಳುವ ಮಹತ್ವದ ಕ್ರಿಯೆಯಾಗಿರುತ್ತದೆಯೆಂಬುದನ್ನು ಮರೆಯಬಾರದು.

ನಾನಿಲ್ಲಿ ಸಿನಿಮಾ, ನಾಟಕಗಳನ್ನು ಪ್ರಮುಖವಾಗಿ ಪ್ರಸ್ತಾಪಿಸುತ್ತೇನೆ. ಸಿನಿಮಾ ಕೇವಲ ಕಲೆಯಾಗಿ ಉಳಿದಿಲ್ಲ ; ನಾವೆಷ್ಟೇ ಹೇಳಿದರೂ ಅದೊಂದು ಉದ್ಯಮ ಎಂಬುದನ್ನು ಮರೆಯುವಂತಿಲ್ಲ. ಹೀಗಾಗಿ ಸಿನಿಮಾ ಕಲಾ ಮಾಧ್ಯಮವಾಗಿ ಎದುರಿಸುತ್ತಿರುವ ಬಿಕ್ಕಟ್ಟು ವಿಶಿಷ್ಟ ಬಗೆಯದು. ವ್ಯಾಪಾರಿ ಎಂದು ಕರೆಸಿಕೊಳ್ಳುವ ಸಿನಿಮಾಗಳು ಸೃಷ್ಟಿಸಿರುವ ವಾತಾವರಣ ನಮ್ಮ ಸಾಮಾಜಿಕ ಪರಿಸರದ ಫಲಶ್ರುತಿಯೇ ಆಗಿದೆ. ಈ ಪರಿಸರದಲ್ಲಿ ಬೇರು ಭದ್ರವಾಗಿಸಿಕೊಳ್ಳುತ್ತಿರುವ ಬಂಡವಾಳಶಾಹಿ ಆರ್ಥಿಕ ಪದ್ಧತಿಯ ಮುಖ ಸಿನಿಮಾ ಸಂಸ್ಕೃತಿಯಲ್ಲಿ ಎದ್ದುಕಾಣುತ್ತದೆ; ಕಲೆಯೊಂದು ಉದ್ಯಮವಾದಾಗ ಹೇಗೆ ಕರಪ್ಟ್ ಆಗಬಹುದೆಂಬುದಕ್ಕೆ ಸಿನಿಮಾ ಉತ್ತಮ ಉದಾಹರಣೆ. ವ್ಯಾಪಾರಿ ಚಿತ್ರ ಮಾಡುವ ಜನ, ಪ್ರೇಕ್ಷಕರು ಬಯಸಿದ್ದನ್ನು ಕೊಡುತ್ತೇವೆಂದು ಹೇಳುತ್ತಾರೆ ; ಹೀಗೆ ಜವಾಬ್ದಾರಿಯನ್ನು ಪ್ರೇಕ್ಷಕರ ಮೇಲೆ ವರ್ಗಾಯಿಸುವ ಇವರು ಇಂಥ 'ಕೊಡುಗೆಗೆ' ಮನಸ್ಸು ಮಾಡುವುದು ಹಣ ಗಳಿಕೆಗಾಗಿ ಎಂಬುದು ನಗ್ನ ಸತ್ಯ. 'ಲಾಭಗಳಿಕೆ' ನಮ್ಮ ಆರ್ಥಿಕ ವ್ಯವಸ್ಥೆಯ ಪ್ರಮುಖ ಲಕ್ಷಣವಾಗಿರುವಾಗ ಸಿನಿಮಾಜನ

ಅವರಿಂದ ಹೊರತಾಗಿಲ್ಲ. ಇವರ ದೃಷ್ಟಿಯಲ್ಲಿ ಸಿನಿಮಾ ಒಂದು 'ಸರಕು'. ಅದಕ್ಕೆ 'ಕಲೆ'ಯ ಬಣ್ಣದ ಬೆಡಗು. ಮಾರುಕಟ್ಟೆಯಲ್ಲಿ ಸರಕು ಮಾರಾಟವಾಗುವ ಸಾಧ್ಯಾಸಾಧ್ಯತೆಗಳ ಅಂದಾಜಿನ ಮೇಲೆ ಅವರ ನಿರ್ಮಾಣ. ಇದರರ್ಥ ಎಲ್ಲಾ ತಪ್ಪೂ ನಿರ್ಮಾಪಕರದೆಂದು ನನ್ನ ವಾದವಲ್ಲ. ಪ್ರೇಕ್ಷಕರು ಬಹುಪಾಲು ಇಂಥದನ್ನೇ ಬಯಸುತ್ತಾರೆಂಬ ಅವರ ವಾದದಲ್ಲಿ ಸತ್ಯವಿದೆ; ಅಂದ ಮೇಲೆ ಪ್ರೇಕ್ಷಕರನ್ನು ಇದಕ್ಕಾಗಿ ದೂಷಿಸಬೇಕೆ? ಖಂಡಿತ ಇಲ್ಲ. ಯಾಕೆಂದರೆ ಪ್ರೇಕ್ಷಕರ ಈ ರೀತಿಯ ತೃಷೆಗೆ ಅವರೇ ಕಾರಣರೊ ಅಥವಾ ನಮ್ಮ ಸಂದರ್ಭದ ಫಲವಾಗಿ ಪ್ರೇಕ್ಷಕರ ಮನಸ್ಸು ಹೀಗೆ ವರ್ತಿಸುತ್ತಿದೆಯೊ ಎಂಬ ಪ್ರಶ್ನೆ ಇಲ್ಲಿ ಮುಖ್ಯ. ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯಲ್ಲಿ ಅಸಮಾನತೆ ಸಾಮಾನ್ಯ ಸಂಗತಿ. ಇಲ್ಲಿಯ ಉತ್ಪಾದನೆ, ವಿತರಣೆಯ ಸ್ವರೂಪ ಸ್ಪಷ್ಟವಾಗಿ ಶೋಷಣೆಗೆ ಹಾದಿ ಮಾಡಿದೆ. ಬೆವರು ಬಸಿದು ದುಡಿಯುವವನಿಗೆ ಅದರ ಸಂಪೂರ್ಣ ಫಲ ದಕ್ಕುವ ಆರ್ಥಿಕ ಪರಿಸ್ಥಿತಿಯಿಲ್ಲದ ಈ ದೇಶದಲ್ಲಿ ದಾರಿದ್ರ್ಯ ಆಶೋತ್ತರಗಳನ್ನು ಅಲ್ಲಲ್ಲೆ ಕತ್ತರಿಸಿ ಹಾಕುತ್ತಿದೆ; ಕನಸುಗಳು ಬತ್ತಿಹೋಗುತ್ತಿವೆ; ಮನಸ್ಸು ಪಲಾಯನ ಬಯಸುತ್ತದೆ. ಹೀಗಾಗಿ ವ್ಯಾಪಾರಿ ಚಿತ್ರಗಳು ನಿರ್ಮಿಸುವ ಭ್ರಮಾಲೋಕ ನಮ್ಮ ಜನತೆಗೆ ಆಕರ್ಷಕವಾಗಿ ಕಾಣುತ್ತದೆ; ಮಾಲೀಕನ ವಿರುದ್ಧ ತಿರುಗಿ ಬೀಳಲಾಗದ ಆಳು ಸಿನಿಮಾದ ಹೀರೋನಲ್ಲಿ ತನ್ನ ಆಶಯ ಪೂರೈಸುವುದನ್ನು ಕಂಡು ಖುಷಿಪಡುತ್ತಾನೆ, ಚಪ್ಪಾಳೆ ತಟ್ಟುತ್ತಾನೆ, ಸಿಳ್ಳೆ ಹೊಡೆಯುತ್ತಾನೆ. ತನ್ನ ಬದುಕಿನ ಕಟುವಾಸ್ತವದ ಅನುಭವಗಳಿಂದ ದೂರವಾದ 'ಭ್ರಮೆಯ' ಮೋಡಿಹಾಕಿ ಖುಷಿಕೊಡುವ ಸಿನಿಮಾ ಆತನಿಗೆ ಇಷ್ಟವಾಗುವುದು ಸಹಜ.

ಕನ್ನಡಕ್ಕೆ ಪರ್ಯಾಯ ಸಿನಿಮಾ ಕಾಲಿಟ್ಟಾಗ, ಇದರ ಹಿನ್ನೆಲೆಯಲ್ಲಿ ಅದಕ್ಕೊಂದು ಚಾರಿತ್ರಿಕ ಮಹತ್ವವಿತ್ತು. ಪರ್ಯಾಯ ಸಿನಿಮಾ ತನ್ನ ವಸ್ತುಗಳನ್ನು 'ಭ್ರಮೆ'ಯಿಂದ 'ವಾಸ್ತವ'ಕ್ಕೆ ತಂದಿತ್ತು. ಅದಕ್ಕೆ ಒತ್ತುಕೊಡುವ ನಿರೂಪಣೆಯಲ್ಲಿ ಸಿನಿಮಾ ಸ್ವರೂಪ (form) ಬದಲಾಯಿತು. ಆ ಸಿನಿಮಾಗಳ ಶೀಘ್ರಗತಿ, ಈ ಸಿನಿಮಾಗಳ ನಿಧಾನಗತಿ–ತಕ್ಷಣ ಎದ್ದುಕಾಣುವ ಒಂದು ವ್ಯತ್ಯಾಸವಾಯಿತು. ಅಂದರೆ ಸಿನಿಮಾ ವಲಯದಲ್ಲಿ ಆದ ಬದಲಾವಣೆಯನ್ನು ಇದು ಸೂಚಿಸುತ್ತದೆ. ಪರ್ಯಾಯ ಸಿನಿಮಾ ಕಾಲಿಟ್ಟಾಗ ಅದರ ಒಂದು ಮುಖ್ಯ ಸಮಸ್ಯೆ ಪ್ರೇಕ್ಷಕರು. ಯಾಕೆಂದರೆ, ಈಗಾಗಲೇ ಒಂದು ನಿರ್ದಿಷ್ಟರೂಪಕ್ಕೆ ಹೊಂದಿಕೊಂಡ ಜನ ತಕ್ಷಣ ಬದಲಾಗುವುದು ಕಷ್ಟ. ನಮ್ಮ ಸಾಮಾಜಿಕ ಪರಿಸರದಲ್ಲಿ ಭ್ರಮೆ ಮತ್ತು ವಾಸ್ತವಗಳ ನಡುವಿನ ಘರ್ಷಣೆ ಬಲವಾಗುತ್ತ ಬಂದಂತೆ ಪರ್ಯಾಯ ಸಿನಿಮಾಕ್ಕೂ ಪ್ರೇಕ್ಷಕರು ಹೆಚ್ಚುತ್ತ ಹೋಗುತ್ತಾರೆ. ಈ ಪ್ರಕ್ರಿಯೆಯ ಸಂದರ್ಭದಲ್ಲಿ ಪರ್ಯಾಯ ಸಿನಿಮಾ ಎದುರಿಸುವ ಸಮಸ್ಯೆಗಳು ಸಂಕೀರ್ಣವಾದವು. ಸಿನಿಮಾ ಒಂದು ಉದ್ಯಮವಾಗಿ ಬೆಳೆದಿರುವುದರಿಂದ ಮೊದಲ ಸಿನಿಮಾಗಳಿಗೆ ಈಗಾಗಲೆ ಮಾರುಕಟ್ಟೆಯಲ್ಲಿ ಸ್ಪರ್ಧೆ. ವ್ಯಾಪಾರಿ ಎಂದು ನಾವು ಕರೆಯುತ್ತಿರುವ ಸಿನಿಮಾಗಳಿಗೆ ಈಗಾಗಲೆ ಮಾರುಕಟ್ಟೆ ರೂಪಿತಗೊಂಡಿದೆ. ಅದೇ ಮಾರುಕಟ್ಟೆಯಲ್ಲಿ ಪರ್ಯಾಯ ಸಿನಿಮಾ 'ಸರಕು' ಸ್ಪರ್ಧೆ ನಡೆಸಬೇಕಾಗಿದೆ. ಲಾಭದೃಷ್ಟಿಯಿಲ್ಲದ ಪರ್ಯಾಯ ಸಿನಿಮಾ ಚಳವಳಿ ಅನಿವಾರ್ಯವಾಗಿ ಉತ್ಪಾದನಾ ವೆಚ್ಚವನ್ನು ಕಡಿಮೆಮಾಡಿಕೊಳ್ಳಬೇಕಾಯಿತು. (ಕರ್ನಾಟಕದಲ್ಲಿ

ಸಜ್ಜಿಡಿಯ ಬೆಂಬಲಪಿದೆ). ಹೀಗೆ ಹಣದ ಸಮಸ್ಯೆಯನ್ನು ಸ್ವಲ್ಪಮಟ್ಟಿಗೆ ಪರಿಹರಿಸಿಕೊಂಡಾಗ ಪ್ರೇಕ್ಷಕರ ಸಮಸ್ಯೆ. ಇಲ್ಲಿ ಪರ್ಯಾಯ ಸಿನಿಮಾ ಚಳವಳಿಯು ಅಭಿರುಚಿ ನಿರ್ಮಾಣ ಮತ್ತು ಹೊಸಪ್ರಯೋಗ ಕ್ರಿಯೆಯನ್ನು ಒಟ್ಟೊಟ್ಟಿಗೆ ನಡೆಸಬೇಕಾಯಿತು; ಕಣ್ಣಿಗೆ ಹೊಸ ನೋಟ, ಕಿವಿಗೆ ಹೊಸ ಚುರುಕು ಕೊಡಬೇಕಾಯಿತು. ಈ ಮಧ್ಯೆ ವ್ಯಾಪಾರಿ ಎನ್ನಿಸಿಕೊಂಡ ಚಿತ್ರಗಳಲ್ಲೂ ಸೃಜತೆಯ ಸೆಳೆತಕ್ಕೆ ಸಿಕ್ಕಿದ ಕೆಲ ಚಿತ್ರಗಳು ಪರ್ಯಾಯ ಸಿನಿಮಾಕ್ಕೆ ಪ್ರೇಕ್ಷಕರನ್ನು ತಯಾರು ಮಾಡುವ ಮೊದಲ ಹಂತದ ಕೆಲಸ ಮಾಡಿವೆಯೆಂಬುದನ್ನು ನೆನೆಯಬೇಕು.

ಹೀಗೆ ಪರ್ಯಾಯ ಸಿನಿಮಾ ವಾಸ್ತವಕ್ಕೆ ಹತ್ತಿರವಾಗುವ ಪ್ರಯತ್ನ ಮಾಡುತ್ತಿದ್ದರೂ ಪ್ರೇಕ್ಷಕರನ್ನು ಸಂಪೂರ್ಣ ನಿರ್ಲಕ್ಷಿಸಲಾಗದೆಂಬುದನ್ನು ಬೇಗ ಅರಿತು ಕೊಳ್ಳಬೇಕಾಗಿದೆ. ಇಲ್ಲದಿದ್ದರೆ ತಮಗೆ ತಾವೇ ಬುದ್ಧಿವಂತಿಕೆಯ ಭ್ರಮೆಯಲ್ಲಿ ತೇಲಾಡುವ ಅಪಾಯ ಇದ್ದೇ ಇದೆ. ಇಲ್ಲಿಯೇ ಸಿನಿಮಾವನ್ನು (ಅಥವಾ ಪ್ರದರ್ಶಕ ಕಲೆಗಳನ್ನು) ಕೇವಲ ವ್ಯಕ್ತಿಗತ ಕಲೆಗಳಾಗಿ ಪರಿಭಾವಿಸಲು ಸಾಧ್ಯವೇ ಎಂಬ ಪ್ರಶ್ನೆ ಬರುವುದು. ಮೊದಲನೆಯದಾಗಿ ಹಾಕಿದ ಹಣವಾದರೂ ಬರಬೇಕು; ಎರಡನೆಯದಾಗಿ ಪ್ರೇಕ್ಷಕನೊಂದಿಗೆ ಸಂವಾದ ಸಾಧಿಸುವ ಪ್ರಯತ್ನ ಮಾಡದಿದ್ದರೆ ಮೊದಲನೆಯದು ಈಡೇರದು ಮತ್ತು ವ್ಯಕ್ತಿನಿಷ್ಠ ಕಲಾಲೋಲುಪತೆಯಾಗುವ ಸಾಧ್ಯತೆಯುಂಟು. ಅಂದರೆ ಇದು ನಿರ್ದೇಶಕನೊಬ್ಬನ ಸಮಸ್ಯೆ. ಆತ ಕಲಾತ್ಮಕತೆಗೂ ಊನ ಬರದಂತೆ, ಆದರೆ ತನ್ನ ಮಾಧ್ಯಮ ಹೆಚ್ಚು ಜನರನ್ನೂ ತಲುಪುವಂತೆ ವಿಶಿಷ್ಟ ಮಾರ್ಗವೊಂದನ್ನು ರೂಪಿಸಿಕೊಳ್ಳುವ ಅಗತ್ಯವಿದೆಯೆಂಬುದು ನನ್ನ ಪ್ರಬಲ ಅನಿಸಿಕೆ. (ಈ ಮಾತನ್ನು ನಮ್ಮ ದೇಶದ ಸಂದರ್ಭದಲ್ಲಿ ಪ್ರಮುಖ ಕಲಾಪ್ರಕಾರಗಳಿಗೆ ಅನ್ವಯಿಸಬಹುದು.) ಯಾಕೆಂದರೆ ನಮ್ಮ ಸಿನಿಮಾ ನಮ್ಮ ಜನತೆಯ ನಡುವೆ ಸ್ಥಾಪಿತವಾಗಬೇಕಾಗಿದೆ; ಈ ದಿಕ್ಕಿನಲ್ಲಿ ಈಗಾಗಲೆ ಪ್ರಯತ್ನಗಳು ನಡೆಯುತ್ತಿರುವುದು ಸ್ವಾಗತಾರ್ಹ ಬೆಳವಣಿಗೆ.

ಪರ್ಯಾಯ ಸಿನಿಮಾ ಚಳವಳಿಯನ್ನು ಕುರಿತಂತೆ ನಾನು 'ವಾಸ್ತವ'ದ ಮಾತನಾಡಿದೆ. ಈ ಬಗ್ಗೆ ಒಂದು ಮಾತನ್ನು ಸ್ಪಷ್ಟಪಡಿಸಬೇಕು: ಇಲ್ಲಿ ವಾಸ್ತವ ಎಂದರೆ, ನಾನು ಲೇಖನದ ಮೊದಲಲ್ಲಿ ಪ್ರಸ್ತಾಪಿಸಿದ 'ಕಟುವಾಸ್ತವ'ವೇ ಆಗಬೇಕಿಲ್ಲ; ಅಥವಾ ಆಗಿಲ್ಲ. ಬದುಕಿನ ವಿವರಗಳನ್ನು ಚಿತ್ರಿಸುವ ವಿಧಾನದಲ್ಲಿ ಉಪಯೋಗಿಸಿಕೊಂಡ ನಿರೂಪಣಾ ತಂತ್ರಕ್ಕೆ ಸಂಬಂಧಿಸಿದಂತೆ 'ವಾಸ್ತವ' ಎಂಬ ಮಾತನ್ನಿಲ್ಲಿ ಬಳಸಿದೆ. ನಮ್ಮ ಸಾಮಾಜಿಕ ಸಂದರ್ಭಗಳನ್ನು ನಿಜವಾದ ತುರ್ತಿನಲ್ಲಿ ತರ್ಕಶುದ್ಧ ಶೈಲಿಯಲ್ಲಿ ವಿವರಿಸುವ, ವ್ಯಾಖ್ಯಾನಿಸುವ ಶಕ್ತಿ ಆಳವಾದ ರಾಜಕೀಯ ಪ್ರಜ್ಞೆಯಿಂದ ಬರುತ್ತದೆ. ಈ ದೃಷ್ಟಿಯಿಂದ ನೋಡಿದಾಗ ನಮ್ಮ ಸಮಾಜದ 'ವಾಸ್ತವ'ವನ್ನು ಸಾಂಸ್ಕೃತಿಕ ರಾಜಕೀಯ ಹಿನ್ನೆಲೆಯಲ್ಲಿ ಗ್ರಹಿಸಿದ, ಚಿತ್ರಿಸಿದ ಪರ್ಯಾಯ ಸಿನಿಮಾಗಳು ಕಡಿಮೆ ಎನ್ನಬಹುದು. ಹಾಗೆ ನೋಡಿದರೆ ಸಮಾಜದ ಅನೇಕ ಸಮಸ್ಯೆಗಳನ್ನು ವ್ಯಾಪಾರಿ ಸಿನಿಮಾಗಳು ಚಿತ್ರಿಸಿವೆ. ಆದರೆ ಗ್ರಹಿಕೆ ಮತ್ತು ನಿರೂಪಣೆಯ ಹಂತದಲ್ಲಿ ಸೂಕ್ಷ್ಮವಾಗಿ ಕಡೆಗೆ ಭ್ರಮೆಯ ವಾತಾವರಣ ನಿರ್ಮಿಸಿವೆ. ಆದ್ದರಿಂದ ಮೊದಲ ಹಂತದಲ್ಲಿ ಯಾವುದೇ ರೂಪದ ಪರ್ಯಾಯ ಸಿನಿಮಾವನ್ನು ಸ್ವಾಗತಿಸಬೇಕು. ಆದರೆ ಪರ್ಯಾಯ ಸಿನಿಮಾ ವ್ಯಾಪಾರಿ ಸಿನಿಮಾಗಳಿಗೆ ಪ್ರತಿಕ್ರಿಯೆ ಮಾತ್ರವಾಗದೆ ಆಳವಾದ ರಾಜಕೀಯ ಪ್ರಜ್ಞೆಯಿಂದ

ಬೆಳೆಯಬೇಕು. (ಶಂಕರಪ್ಪನವರ 'ಮಾಡಿ ಮಡಿದವರು' ಮತ್ತು ನನ್ನ 'ಒಂದು ಊರಿನ ಕತೆ'-ಇಂಥ ಪ್ರಾಮಾಣಿಕ ಪ್ರಯತ್ನಗಳು). ಒಟ್ಟಿನಲ್ಲಿ ಹೇಳುವುದಾದರೆ ಈ ಹಂತದಲ್ಲಿ ಸಾಂಸ್ಕೃತಿಕ ಜಡತೆಯ ವಿರುದ್ಧದ ದನಿಯಾಗಿ ನಮ್ಮ ಪರ್ಯಾಯ ಸಿನಿಮಾ ಚಳವಳಿ ಸ್ವಾಗತಾರ್ಹ; ತನ್ನಲ್ಲಿ ಶಕ್ತಿಯೊಂದಿಗೆ ಪ್ರೇಕ್ಷಕರೊಂದಿಗೆ ಸಂವಾದದ ಸಾಧ್ಯತೆಯನ್ನು ವ್ಯಾಪಕಗೊಳಿಸುವ ಜವಾಬ್ದಾರಿ ಮತ್ತು ಆದೇ ಸಂದರ್ಭದಲ್ಲಿ ಬಂಡವಾಳಶಾಹಿ ಸಿನಿಮಾ ಸಂಸ್ಕೃತಿಯ ಬಾಯಿಗೆ ಆಹಾರವಾಗ ದಿರುವ ಎಚ್ಚರ-ಈ ಎರಡನ್ನೂ ಕಾಯ್ದುಕೊಳ್ಳಬೇಕಾಗಿದೆ.

ರಂಗಭೂಮಿಯ ವಿಚಾರಕ್ಕೆ ಬಂದರೆ ವೃತ್ತಿ ರಂಗಭೂಮಿಯ ಸ್ವರೂಪ ವ್ಯಾಪಾರಿ ಚಿತ್ರಗಳನ್ನು ಬಹುಪಾಲು ಹೋಲುತ್ತದೆ. ಅಂದರೆ ಇಲ್ಲಿಯೂ ಮಿಥ್ ((Myth)ಗಳನ್ನು ಮತ್ತು ಈಗಾಗಲೇ ಬದುಕಿನಲ್ಲಿ ಬೆರೆತಿರುವ ಮೋಟಿಫ್ (Motiff)ಗಳನ್ನು ಆಶ್ರಯಿಸಿದೆ. ವೃತ್ತಿರಂಗಭೂಮಿ ಮುಖ್ಯವಾಗಿ ಕಲಾವಿದರ, ಕಂಪನಿ ಮಾಲಿಕರ 'ಉದ್ಯೋಗ'ವಾಗಿರುವುದರಿಂದ 'ಜನ ಬಯಸುವುದನ್ನು' ಕೊಡುವ ಪ್ರವೃತ್ತಿ ಇಲ್ಲೂ ಇದೆ. ರಂಗಭೂಮಿಯನ್ನು ಕುರಿತ ಅವರ ಪರಿಕಲ್ಪನೆಯನ್ನು ಪ್ರಮುಖವಾಗಿ ಪ್ರೇಕ್ಷಕರ ಮನೋಧರ್ಮ ನಿಯಂತ್ರಿಸುತ್ತದೆಯೆನ್ನ ಬಹುದು. ಯಂತ್ರಯುಗದ ಜನತೆಯನ್ನು ತಣಿಸಲು ಸಿನಿಮಾ ಮಾಡುತ್ತಿರುವ ಪ್ರಯತ್ನಗಳು ವೃತ್ತಿ ರಂಗಭೂಮಿಯ ಮೇಲೂ ಪ್ರಭಾವ ಬೀರಿವೆ. ದೃಶ್ಯದಿಂದ ದೃಶ್ಯಕ್ಕೆ ಶೀಘ್ರಗತಿಯನ್ನು ಸಾಧಿಸುವ ರಂಗರಚನೆಯನ್ನು ಅನೇಕ ಕಂಪನಿಗಳು (ಮುಖ್ಯವಾಗಿ ಗುಬ್ಬಿ ಕಂಪನಿ) ರೂಢಿಸಿಕೊಂಡದ್ದನ್ನು ಕಂಡಿದ್ದೇವೆ.

ಹವ್ಯಾಸಿ ರಂಗಭೂಮಿ ಹೊಸ ಸಾಧ್ಯತೆಗಳ ಶೋಧನೆಗೆ ತೊಡಗಲು ಸಾಧ್ಯವಾಯಿತು. ಯಾಕೆಂದರೆ ಇದು ಇಲ್ಲಿನ ಕಲಾವಿದರಿಗೆ ಪ್ರಮುಖ ಉದ್ಯೋಗವಲ್ಲ. ವೃತ್ತಿ ರಂಗಭೂಮಿ ಈಗಾಗಲೇ ಇರುವ ಪ್ರೇಕ್ಷಕರ ಅಭಿರುಚಿಗೆ ಹೊಂದಿಕೊಳ್ಳುವ ಪ್ರಯತ್ನದಲ್ಲಿ ನಿರತವಾದರೆ, ಹವ್ಯಾಸಿ ರಂಗಭೂಮಿ ಕಲೆಯ ಸಾಧ್ಯತೆಗಳ ಹುಡುಕಾಟದಲ್ಲಿ ಹೊಸ ಪ್ರಯೋಗಗಳನ್ನು ಮಾಡುತ್ತ ಅಭಿರುಚಿ ನಿರ್ಮಾಣಕ್ಕೂ ತೊಡಗಬೇಕಾಯಿತು. ತನ್ನದೇ ಪ್ರೇಕ್ಷಕರನ್ನು ಸಿದ್ಧಮಾಡಬೇಕಾಯಿತು. ರಂಗಭೂಮಿಯಲ್ಲಿ ಪರ್ಯಾಯ ವ್ಯವಸ್ಥೆಯಾಗಿ ರೂಪುಗೊಂಡ ಹವ್ಯಾಸಿ ರಂಗಭೂಮಿಗೂ ಪರ್ಯಾಯ ಸಿನಿಮಾ ಸ್ವರೂಪಕ್ಕೂ ಮೂಲಭೂತ ಹೋಲಿಕೆಗಳಿವೆ. ಅದರಂತೆ ಇದೂ ತನ್ನ ಆಕಾರದ (form) ಮಟ್ಟದಲ್ಲಿ ಮಾಡಿಕೊಂಡ ಬದಲಾವಣೆ ಎದ್ದು ಕಾಣುವಂಥದು. ಕಲೆಯ ವಿವಿಧ ಸಾಧ್ಯತೆಗಳನ್ನು ದುಡಿಸಿಕೊಳ್ಳುವ ಮಟ್ಟಿಗೆ·ಈ ಪರ್ಯಾಯ ರಂಗಭೂಮಿಯ ಪ್ರಯೋಗಗಳು ಐತಿಹಾಸಿಕವಾಗಿ ಉಲ್ಲೇಖನೀಯ; ಜೊತೆಗೆ ಜಡಗೊಂಡ ಸ್ಥಿತಿಗೆ ಚೈತನ್ಯ ತುಂಬುವ ಕೆಲಸವಾಗಿದೆಯೆಂಬುದು ಹೆಚ್ಚು ಮೌಲಿಕ ಸಂಗತಿ.

ಈ ದಿಕ್ಕಿನಲ್ಲಿ ವಿವಿಧ ಹವ್ಯಾಸಿ ತಂಡಗಳಿಂದ ರಂಗದ ಮೇಲೆ ಬಂದ ನಾಟಕ ಪ್ರಯೋಗಗಳು ಸ್ವಾಗತಾರ್ಹ ಬೆಳವಣಿಗೆಯೊಂದಕ್ಕೆ ಕೊಟ್ಟ ಕೊಡುಗೆಗಳಾಗಿವೆ. ನಾಟಕ ಒಂದು ಮುಖ್ಯ ಪ್ರದರ್ಶಕ ಕಲೆಯಾದ್ದರಿಂದ ನಿಜವಾದ ಅರ್ಥದಲ್ಲಿ ಜನತೆಯ ಹೋರಾಟದೊಂದಿಗೆ ಬೆರೆಯ ಬೇಕೆಂಬ ವಾದವನ್ನು ಒತ್ತಿ ಹೇಳಬೇಕಾಗಿಲ್ಲ. ಹೀಗಾಗದೆ ಹೋದಾಗ ಇಂಥ ಕಲೆ ಕೇವಲ

ಕೆಲವರ 'ಹವ್ಯಾಸ'ವಾಗಿ ಹವ್ಯಾಸಿ ರಂಗಭೂಮಿಗೆ ವ್ಯಂಗ್ಯಾರ್ಥ ಲಭ್ಯವಾಗಬಹುದು. ಅಸಂಗತ ನಾಟಕಗಳು ಬಂದು ಕಡೆಗೆ ಈಗಾಗಲೆ ಸಿನಿಮಾ ಕ್ಷೇತ್ರದಲ್ಲಿ ನಡೆದಂತೆ ಇಲ್ಲೂ ವೃತ್ತಿರಂಗ ಭೂಮಿಯ ಕೆಲ ಪ್ರಕಾರಗಳನ್ನು ಹವ್ಯಾಸಿ ರಂಗಭೂಮಿ ಅರಗಿಸಿಕೊಳ್ಳುವ, ಆ ಮುಖಾಂತರ ಹೊಸರೂಪ ಕೊಡುವ ಯತ್ನಗಳು ನಡೆದಿವೆ. ಇಷ್ಟಾದರೂ ಇವೆಲ್ಲ 'ಹವ್ಯಾಸ' ಮಾತ್ರವೇ ಎಂಬ ಸಂಶಯ ತಲೆದೋರುವಂತೆ ಕಲೆಯ ಸ್ವತಂತ್ರಸಾಕ್ಷಿತ್ವವಾದಿಗಳು ಮಾಡಿದ್ದಾರೆ. ರಾಜಕೀಯ ಪ್ರಜ್ಞೆ, ಜನತೆಯ ಹೋರಾಟ ಮತ್ತು ಕಲೆಯ ಸಂಬಂಧ ಇತ್ಯಾದಿ ಮಾತುಗಳನ್ನು ಕಂಡರೆ ಹುಳಿಮುಖ ಮಾಡುವ ಮಂದಿ ಸಾಕಷ್ಟಿದ್ದಾರೆ. ಅಂದರೆ, ಇಲ್ಲಿ ವ್ಯಕ್ತಿಗಳು ನನಗೆ ಮುಖ್ಯವಲ್ಲ. ಕಲೆಯನ್ನು ಕುರಿತ ಗ್ರಹಿಕೆ ಮತ್ತು ಪರಿಕಲ್ಪನೆಗಳೆ ಇಲ್ಲಿ ಬೇರೆಯಾಗಿವೆಯೆಂಬುದು ಮುಖ್ಯ. ಈ ಸ್ಥಿತಿಯಲ್ಲಿ ಜನತೆಯೊಂದಿಗೆ ಅರ್ಥಪೂರ್ಣ ಸಂವಾದ ಸಾಧ್ಯವಾಗಿಸುವ ಯಾವುದೇ ಪ್ರಯತ್ನವನ್ನು ಅದರ ಎಲ್ಲ ಮಿತಿಗಳೊಂದಿಗೆ ಸ್ವಾಗತಿಸಬೇಕು, ಮೆಚ್ಚಬೇಕು. ಈ ದಿಕ್ಕಿನಲ್ಲಿ ಚಿತ್ರಾ ಕಲಾವಿದರ (ಗೆಳೆಯರ ಗುಂಪು) ಬೀದಿ ನಾಟಕಗಳನ್ನು ಉಲ್ಲೇಖಿಸಬಹುದು. ಈಗಾಗಲೇ ಕರ್ನಾಟಕದಾದ್ಯಂತ ಹಬ್ಬುತ್ತಿರುವ 'ಸಮುದಾಯ'ದ ರಂಗ ಚಟುವಟಿಕೆಗಳು ರಂಗಭೂಮಿಗೆ ರಾಜಕೀಯ ಪ್ರಜ್ಞೆಯ ಸ್ಪರ್ಶಕೊಡುವಲ್ಲಿ ಯಶಸ್ವಿಯಾಗುತ್ತಿವೆ. ರಂಗಭೂಮಿ ಮತ್ತು ಜನತೆಯ ಸಂಬಂಧವನ್ನು ಕುರಿತಂತೆ ಪುನರಾಲೋಚಿಸಲು ಇಂಥ ಚಟುವಟಿಕೆಗಳು ಕಾರಣವಾಗಿವೆ.

ಒಟ್ಟಿನಲ್ಲಿ ಹೇಳುವುದಾದರೆ ಪ್ರದರ್ಶಕ ಕಲೆಗಳು ಆಳವಾದ ಸಾಮಾಜಿಕ ರಾಜಕೀಯ ಅರಿವಿನಿಂದ ತಮ್ಮ ಕ್ಷೇತ್ರವನ್ನು ವಿಸ್ತರಿಸಿಕೊಳ್ಳುವುದು, ಕಲಾಲೋಲುಪತೆಯಿಂದ ಪಾರಾಗುವುದು ತುರ್ತಿನ ಕೆಲಸವಾಗಿದೆ. ಈ ದಿಕ್ಕಿನಲ್ಲಿ ಹೊಸ ರೂಪವನ್ನೇ ತಾಳಬೇಕಾಗಿದೆ.

ಒಂದು ಅಂಶವನ್ನು ಇಲ್ಲಿ ಗಮನಿಸಬೇಕು: ಸಿನಿಮಾ ಮತ್ತು ನಾಟಕ ಕ್ಷೇತ್ರಗಳನ್ನು ನೋಡಿದಾಗ ಒಂದು ವ್ಯತ್ಯಾಸ ಗೋಚರಿಸುತ್ತದೆ. ಸಿನಿಮಾದಲ್ಲಿ ವ್ಯಾಪಾರಿ ಸಿನಿಮಾ (ಅಥವಾ ವೃತ್ತಿ ಸಿನಿಮಾ ಎಂದರೂ ಸರಿ) ಆರ್ಥಿಕವಾಗಿ ಅಷ್ಟು ಬಳಲುತ್ತಿಲ್ಲ. ಪರ್ಯಾಯ ಸಿನಿಮಾ ಆರ್ಥಿಕವಾಗಿ ವ್ಯಾಪಾರಿ ಸಿನಿಮಾದಷ್ಟು ಉತ್ತಮ ಸ್ಥಿತಿಯಲ್ಲಿಲ್ಲ. ನಾಟಕಕ್ಷೇತ್ರಕ್ಕೆ ಬಂದರೆ, ಹವ್ಯಾಸಿ ರಂಗಭೂಮಿ ಆರ್ಥಿಕವಾಗಿ ಹೆಚ್ಚು ಸಂಕಷ್ಟಗಳಿಗೆ ಈಡಾಗಿಲ್ಲ. ಆದರೆ ವೃತ್ತಿ ರಂಗಭೂಮಿ ವ್ಯಾಪಾರಿ ಸಿನಿಮಾದಂತೆ ಸುಸ್ಥಿತಿಯಲ್ಲಿಲ್ಲ. ತನ್ನ ಅಸ್ತಿತ್ವಕ್ಕಾಗಿ (ಈ ಮುಖಾಂತರ ಕಲಾವಿದರು, ಇತರೆ ಕೆಲಸಗಾರರ ಅಸ್ತಿತ್ವಕ್ಕಾಗಿ) ಹೋರಾಡುತ್ತಿದೆ. ಸಿನಿಮಾ ಮತ್ತು ನಾಟಕ ಕ್ಷೇತ್ರಗಳ ನಡುವಿನ ಈ ವ್ಯತ್ಯಾಸ ನಮ್ಮ ಸಾಂಸ್ಕೃತಿಕ ಕ್ಷೇತ್ರದ ಒಂದು ವೈಚಿತ್ರ್ಯವಾಗಿದೆ.

ಪ್ರದರ್ಶನ ಕಲೆಗಳನ್ನು ಸೇರಿಸಿಕೊಂಡು ಒಟ್ಟಾರೆ ಸಮೂಹ ಮಾಧ್ಯಮಗಳ ಬಗ್ಗೆ ಹೇಳಬಹುದಾದ ಇನ್ನೊಂದು ಮುಖ್ಯಾಂಶವಿದೆ. ಸಿನಿಮಾ, ನಾಟಕ, ಪತ್ರಿಕೆ–ಇವುಗಳನ್ನು ನೋಡಿದಾಗ, ಸಿನಿಮಾ ನಾಟಕಗಳಲ್ಲಿ ಅಲ್ಪ ಬಂಡವಾಳದ (ಅಂದರೆ ಪರ್ಯಾಯ ಸಿನಿಮಾ ಅಥವಾ ಹೊಸಅಲೆ ಸಿನಿಮಾ ಮತ್ತು ಹವ್ಯಾಸಿ ರಂಗಭೂಮಿ) ಪ್ರಯತ್ನಗಳೇ ಆಯಾ ಕ್ಷೇತ್ರದ ಗಂಭೀರ ಕಾಳಜಿಗಳನ್ನು ಒಳಗೊಂಡಿವೆ: ಆಯಾ ಕ್ಷೇತ್ರದ ಹೊಸ ಸಾಧ್ಯತೆಗಳ ಬಗ್ಗೆ

ಪ್ರಾಮಾಣಿಕ ಕ್ರಿಯಾಶೀಲತೆಯಿಂದ ಮಹತ್ವ ಪಡೆದಿವೆ. ಪತ್ರಿಕಾ ಪ್ರಪಂಚಕ್ಕೆ ಬಂದರೂ ದೊಡ್ಡ ಪತ್ರಿಕೆಗಳು ತಮ್ಮ ಕ್ಷೇತ್ರವನ್ನು ಉದ್ಯಮವೆಂದೇ ಪರಿಗಣಿಸಿರುವುದರಿಂದ ಜನತೆಯ ಸದಭಿರುಚಿ, ಆಲೋಚನೆಗಳೊಂದಿಗೆ ರಾಜಿ ಮಾಡಿಕೊಳ್ಳುತ್ತವೆ. ಆದರೆ ಚಿಕ್ಕ ಪತ್ರಿಕೆಗಳು ಬದಲಾವಣೆಯ ಕ್ರಿಯೆಯಲ್ಲಿ ತೊಡಗಿವೆ. (ಇಲ್ಲಿ ಚಿಕ್ಕ ಪತ್ರಿಕೆಗಳೆಂದರೆ ನಮ್ಮ ಸಾಂಸ್ಕೃತಿಕ ಕ್ಷೇತ್ರದ ನಿಯತ, ಅನಿಯತಕಾಲಿಕಗಳು; ಸರ್ಕಾರದ ಜಾಹಿರಾತಿಗಾಗಿ ಪ್ರಕಟವಾಗುವ ನಾಯಿ ಕೊಡೆ ಪತ್ರಿಕೆಗಳಲ್ಲ). ಇದು ಸಹ ನಮ್ಮ ಸಾಂಸ್ಕೃತಿಕ ಕ್ಷೇತ್ರದ ವಿಶಿಷ್ಟಾಂಶವಾಗಿದೆ.

ಕಡೆಯದಾಗಿ ಹೇಳುವುದಾದರೆ–ಪ್ರದರ್ಶಕ ಕಲೆಗಳು ಮತ್ತು ಎಲ್ಲ ಸಮೂಹ ಮಾಧ್ಯಮಗಳು ಜನಪರ ಹೋರಾಟಗಳೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುವ, ಸ್ಥಾಪಿಸಿಕೊಳ್ಳುವ ಗುರುತರ ಜವಾಬ್ದಾರಿಯನ್ನು ಕುರಿತು ಗಂಭೀರ ಚಿಂತನೆ ನಡೆಯಬೇಕು.

❑

ಜಾನಪದದ ಗೊತ್ತು ಗುರಿಗಳು

■ ಜೀ. ಶಂ. ಪರಮಶಿವಯ್ಯ

ಜಾನಪದ (Folklore) ಪರಂಪರಾನುಗತ ಸಂಸ್ಕೃತಿಯನ್ನು ಅರಿಯಲು ಇರುವ ಮುಖ್ಯ ಸಾಧನವಾಗಿದೆ. ಮೌಖಿಕ ಮತ್ತು ಪ್ರೌಢ ಮೂಲಗಳಲ್ಲಿ ಹರಿದುಬರುವ ಜ್ಞಾನ ಮತ್ತು ಅನುಭವಗಳ ಎರಡು ಪ್ರವಾಹಗಳಲ್ಲಿ ಜಾನಪದ ಮೌಖಿಕವರ್ಗಕ್ಕೆ ಸೇರುತ್ತದೆ. ಪ್ರೌಢವಿದ್ಯೆಗೆ ಜಾನಪದವೇ ಅಡಿಗಲ್ಲು. ಪ್ರೌಢಜ್ಞಾನದ ಎಲ್ಲ ಶಾಖೆಗಳೂ ಇಲ್ಲಿಂದಲೇ ಕವಲೊಡೆದು ಕುಡಿಚಾಚಿ ಬೆಳೆದುಕೊಂಡಿವೆ. ಇದು ಜನರ ಆಚಾರ ವಿಚಾರಗಳಲ್ಲಿ ಸಂಪ್ರದಾಯ, ನಂಬಿಕೆಗಳಲ್ಲಿ, ಗಾದೆ ಒಗಟುಗಳಲ್ಲಿ, ಕತೆ, ಗೀತೆ, ಕಾವ್ಯ, ನೃತ್ಯ, ನಾಟಕಗಳ ರೂಪದಲ್ಲಿ ಹೆಚ್ಚು ವಿದ್ಯಾವಂತರಲ್ಲದ, ಆದರೆ ರಾಷ್ಟ್ರದ ಬಹುಸಂಖ್ಯಾತ ವರ್ಗವೆನಿಸುವ ಜನಪದರಲ್ಲಿ ಉಳಿದು ಅವರ ಬದುಕಿನ ಆಸರೆಯಾಗಿ ಬೆಳೆದು ಬರುತ್ತದೆ. ಜಾನಪದ ಜನಸಾಮಾನ್ಯರ ಜೀವನವಿಧಾನಗಳನ್ನು ಅರ್ಥಮಾಡಿಕೊಳ್ಳುವ ಕೀಲಿಕೈಯಾಗಿರುವುದು ಈ ಅರ್ಥದಲ್ಲಿ. ಜನಜೀವನವನ್ನು ಕುರಿತು ಅಧ್ಯಯನ ಮಾಡುವ ಎಲ್ಲರೂ ಜಾನಪದವನ್ನು ಆಶ್ರಯಿಸಬೇಕಾಗುತ್ತದೆ. ಏಕೆಂದರೆ ಅವರ ಬದುಕಿನ ಆಶೋತ್ತರಗಳೆಲ್ಲ ಅದರಲ್ಲಿ ಪ್ರತಿಬಿಂಬಿತವಾಗಿರುತ್ತವೆ.

ರಿಚರ್ಡ್ ಎಂ. ಡಾರ್ಸನ್ ಅವರು ಜಾನಪದವನ್ನು ನಾಲ್ಕು ಪ್ರಮುಖ ವರ್ಗದಲ್ಲಿ ಗುರುತಿಸುತ್ತಾರೆ.

೧. ಮೌಖಿಕ ಸಾಹಿತ್ಯ (Oral literature)

೨. ಭೌತಿಕ ಸಂಸ್ಕೃತಿ (Material culture)

೩. ಸಾಮಾಜಿಕ ಜನಪದ ಸಂಪ್ರದಾಯ (Social folk custom)

೪. ಪ್ರದರ್ಶನಾತ್ಮಕ ಜನಪದ ಕಲೆಗಳು (Performing folk arts)

ಈ ಪ್ರಮುಖ ಬಗೆಗಳಲ್ಲಿ ಕಂಡುಬರುವ ಜಾನಪದ, ಜನಪದ ಜೀವನದ ಸಮಸ್ತ ಮುಖಗಳನ್ನೂ ಅವಲಂಬಿಸಿರುವುದನ್ನು ಕಾಣಬಹುದು. ಕರ್ನಾಟಕದಲ್ಲಿ ನಡೆದಿರುವ ಜಾನಪದ ಅಧ್ಯಯನವನ್ನು ಈ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ ನಮ್ಮಲ್ಲಿ ಅಧ್ಯಯನಗಳಿಗಿಂತ ಸಂಗ್ರಹಗಳೇ ಹೆಚ್ಚಾಗಿ ಕಂಡುಬರುತ್ತವೆ. ಜನಪದ ಸಾಹಿತ್ಯವನ್ನು, ಸಾಹಿತ್ಯಿಕವಾಗಿ ನೋಡುವ ದೃಷ್ಟಿ ಮೊದಲಿನಿಂದಲೂ ಬೆಳೆದುಬಂದು ಕೆಲವು ತ್ರಿಪದಿಗಳನ್ನೋ ಕಥನಗೀತೆಗಳನ್ನೋ ಇಟ್ಟುಕೊಂಡು ಕಾವ್ಯಸೌಂದರ್ಯವನ್ನು ವಿವರಿಸುವ ಪ್ರಯತ್ನಗಳು ನಡೆದಿವೆ. ಆದರೆ ಇನ್ನೂ ವ್ಯಾಪಕವಾದ, ಗಟ್ಟಿಯಾದ, ಜನಪದ ಸಾಹಿತ್ಯದ ಆಳಕ್ಕೆ ಇಳಿದು ನೋಡುವ ದೃಷ್ಟಿ ಮೊಳೆಯಬೇಕಾಗಿದೆ. ಸಮಗ್ರ ಜಾನಪದವನ್ನು ಕುರಿತು ಅಧ್ಯಯನಗಳು ಈಗೀಗ ರೂಪು ಗೊಳ್ಳುತ್ತಿವೆ. ಸಾಮಾಜಿಕವಾಗಿ, ಚಾರಿತ್ರಿಕವಾಗಿ, ಭಾಷಿಕವಾಗಿ ಧಾರ್ಮಿಕವಾಗಿ ಜಾನಪದವನ್ನು ವಿಶ್ಲೇಷಿಸುವುದರ ಜೊತೆಗೆ, ಜಾನಪದ ಸಂಗ್ರಹವನ್ನು ಶಾಸ್ತ್ರೀಯವಾಗಿ ವರ್ಗೀಕರಿಸಿಕೊಂಡು ಭಿನ್ನಭಿನ್ನ ದೃಷ್ಟಿಗಳಿಂದ ನೋಡಬೇಕಾಗಿದೆ. ಈ ನಿಟ್ಟಿನಲ್ಲಿ ನಮ್ಮ ಪ್ರಯತ್ನಗಳು ಸಾಗಿರುವುದು ಗಮನಾರ್ಹವಾಗಿದೆ.

ನಮ್ಮ ಜಾನಪದ ಕ್ಷೇತ್ರದಲ್ಲಿ ಹೊಸ ಉತ್ಸಾಹ ಸ್ಫೂರ್ತಿಗಳು ಈಗ ಎಲ್ಲೆಡೆಯೂ ಹರಿದಾಡಿ, ಈ ದಶಕದ ಜಾನಪದ ಕೃತಿಗಳು ಹೊಸಹೊಸ ಪ್ರಕಾರಗಳಲ್ಲಿ ಕಾಣಿಸಿಕೊಂಡಿವೆ. ಈ ಗಮನಾರ್ಹ ಸಾಧನೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕರ್ನಾಟಕ ಜಾನಪದ ಅಧ್ಯಯನದ ಸ್ವರೂಪವನ್ನು ವಿವಿಧ ಪ್ರಕಾರಗಳನ್ನು ಗಮನಿಸಿ ಇಲ್ಲಿ ಚರ್ಚಿಸಿರುವುದರ ಜೊತೆಗೆ, ಮುಂದಿನ ಸಂಶೋಧನೆಯ ಅವಕಾಶಗಳನ್ನೂ ವಿವೇಚಿಸಬಹುದಾಗಿದೆ.

ಶಾಬ್ದಿಕ ಕಲೆ (Verbal Art) ಎನಿಸಿಕೊಳ್ಳುವ ಜನಪದ ಸಾಹಿತ್ಯ ಜಾನಪದದ ಒಂದು ಪ್ರಮುಖ ಅಂಗ. ಇದು ಎಲ್ಲ ಸಂಸ್ಕೃತಿಗಳಲ್ಲಿಯೂ ಪುರಾಣ, ಐತಿಹ್ಯ, ಕಟ್ಟುಕಥೆ, ಗೀತೆ, ಲಾವಣಿ, ಕಾವ್ಯ, ನಾಟಕ, ಗಾದೆ, ಒಗಟು ಮೊದಲಾದ ಪ್ರಮುಖ ಪ್ರಕಾರಗಳಲ್ಲಿ ಕಂಡುಬಂದಿದೆ.

ಮೇಲಿನ ಪ್ರಮುಖ ಬಗೆಗಳನ್ನು ಗುರುತಿಸಿಕೊಂಡು ಕನ್ನಡ ಜನಪದ ಸಾಹಿತ್ಯವನ್ನು ಅಧ್ಯಯನ ಮಾಡುವಾಗ, ಅದರ ಕೆಲವು ಕಿರಿಯ ಪ್ರಕಾರಗಳನ್ನೂ ನಿರ್ಲಕ್ಷಿಸುವಂತಿಲ್ಲ. ಜನಪದ ಭಾಷೆ (Folk Speech)ಯ ವಿವಿಧ ಅಭಿವ್ಯಕ್ತಿಗಳಾದ ಅನೇಕ ಪ್ರಕಾರಗಳನ್ನು ಒಂದು ಸಾಹಿತ್ಯಿಕ ವರ್ಗದಲ್ಲಿಯೂ ನೋಡಬೇಕು.

ಕನ್ನಡ ಜನಪದ ಸಾಹಿತ್ಯದಲ್ಲಿ ಮೇಲಿನ ಎಲ್ಲ ಪ್ರಕಾರಗಳನ್ನೂ ಪ್ರತಿನಿಧಿಸುವ ಸಾಹಿತ್ಯವನ್ನು ವ್ಯಾಪಕವಾದ ಕ್ಷೇತ್ರಕಾರ್ಯದಿಂದ ಹೆಕ್ಕಿ ತೆಗೆಯಬಹುದಾಗಿದೆ. ಕಳೆದ ಶತಮಾನದಿಂದ ಇಲ್ಲಿನವರೆಗೆ ನಮ್ಮಲ್ಲಿ ನಡೆದಿರುವ ಸಂಗ್ರಹಕಾರ್ಯವನ್ನು ಗಮನಿಸಿದರೆ, ಗೀತೆ, ಲಾವಣಿ, ಕಾವ್ಯ, ಗಾದೆ, ಒಗಟುಗಳ ಕ್ಷೇತ್ರದಲ್ಲಿ ತಕ್ಕಮಟ್ಟಿನ ಸಂಗ್ರಹಕಾರ್ಯ ನಡೆದಿರುವುದು ಕಂಡುಬಂದರೂ ಇನ್ನೂ ಸಮಗ್ರವಾದ ಸಂಗ್ರಹಕಾರ್ಯ ನಡೆಯಬೇಕಾಗಿದೆ.

ಇದರ ಜೊತೆಗೆ ಶಾಸ್ತ್ರೀಯ ಅಧ್ಯಯನವೂ ಆಗಬೇಕಾಗಿದೆ. ಜನಪದ ಸಾಹಿತ್ಯವೆಂಬುದು ಕಲಾತ್ಮಕ ಮೌಲ್ಯದಿಂದ ಕೂಡಿದ 'ಸಾಹಿತ್ಯ'ವೇ ಆದರೂ ಅದರ ಇತರ ಮೌಲ್ಯಗಳನ್ನು ನಿರ್ಲಕ್ಷಿಸುವಂತಿಲ್ಲ. ಅದರ ಮಾನವಶಾಸ್ತ್ರೀಯ ದೃಷ್ಟಿ, ಭಾಷಾಶಾಸ್ತ್ರೀಯ ದೃಷ್ಟಿ, ಮನಶ್ಶಾಸ್ತ್ರೀಯ ದೃಷ್ಟಿಯೂ ಮುಖ್ಯವಾದುದೇ. ಜನಪದ ಸಾಹಿತ್ಯದ ರೂಪ ರಚನೆಗಳನ್ನು ಕುರಿತ ಅಧ್ಯಯನಗಳು ಈಗ ವ್ಯಾಪಕವಾಗಿ ನಡೆಯುತ್ತಿವೆ. ಆಶಯ (Motif), ವರ್ಗ (Type)ಗಳ ಕಲ್ಪನೆಯೂ ಈಗ ಹಳೆಯದೆನಿಸಿ ವಿದ್ವಾಂಸರ ದೃಷ್ಟಿ ರಚನಾತತ್ವದ ಕಡೆ ಹರಿದು, ಅತ್ಯಂತ ವೈಜ್ಞಾನಿಕ ಅಧ್ಯಯನ ನಡೆಯುತ್ತಿದೆ.

ಈ ಹಿನ್ನೆಲೆಯಲ್ಲಿ ನಮ್ಮ ಹಿಂದಿನ ಜನಪದ ಸಾಹಿತ್ಯದ ಸಂಗ್ರಹಗಳನ್ನು ನೋಡಿದಾಗ ಅವುಗಳಲ್ಲಿ ಹೆಚ್ಚಾಗಿ ಸಾಹಿತ್ಯಿಕ ದೃಷ್ಟಿಯೇ ಕಂಡು ಬರುತ್ತದೆ. ೧೯೩೧ರಲ್ಲಿ ಪ್ರಕಟವಾದ 'ಗರತಿಯ ಹಾಡಿ'ನಿಂದಲೇ ಈ ದೃಷ್ಟಿ ಪ್ರಬಲವಾಗಿ ಬೆಳೆಯಿತು ಎಂದು ಇಟ್ಟುಕೊಳ್ಳಬಹುದು. ಇದಕ್ಕೆ ಮುಖ್ಯಕಾರಣ, ಆರಂಭದಲ್ಲಿ ಈ ಕಾರ್ಯದತ್ತ ಗಮನಹರಿಸಿದವರೆಲ್ಲಾ ಪ್ರಧಾನವಾಗಿ ಸಾಹಿತಿಗಳು. ಜನಪದ ಸಾಹಿತ್ಯ ತನ್ನ ಕಾವ್ಯಸತ್ವದಿಂದ ಈ ವಿದ್ವಾಂಸರ ಗಮನವನ್ನು ಸೆಳೆದುಕೊಂಡಿತ್ತು. ಗರತಿಯ ಹಾಡನ್ನು ಸಂಪಾದಿಸಿದ ಹಲಸಂಗಿ ಸೋದರರು ಉತ್ತಮ ಗೀತೆಗಳನ್ನು ಮಾತ್ರ ಆರಿಸಿ ಸಂಕಲಿಸಿಕೊಟ್ಟಿದ್ದೇವೆ ಎಂದು ಹೇಳಿಕೊಂಡಿರುವುದನ್ನು ಗಮನಿಸಿದರೆ, ಇತರ ಮೌಲ್ಯಗಳ ದೃಷ್ಟಿಯಿಂದ ಕೈತಪ್ಪಿಹೋದ ಸಾಹಿತ್ಯದ ಬಗ್ಗೆ ಈಗ ವ್ಯಥೆ ಪಡುವಂತಾಗಿದೆ. ಆದರೆ ನವೋದಯ ಯುಗದ ಸಾಹಿತಿಗಳೆಲ್ಲ ಜನಪದ ಸಾಹಿತ್ಯವನ್ನು ಹಿಂದಿನ ಪಂಡಿತ ಕವಿಗಳಂತೆ ನಿರ್ಲಕ್ಷಿಸದೆ, ಅದರದೇ ಆದ ಮೌಲ್ಯಕ್ಕಾಗಿ ಎತ್ತಿಹಿಡಿದು, ಆ ಬಗ್ಗೆ ಬರೆದು, ಹಾಡಿ, ಮಾತನಾಡಿ ಪ್ರಸಾರವನ್ನು ನಡೆಸಿರುವ ಪ್ರಯತ್ನ ಮರೆಯಲಾಗದುದು.

ಕನ್ನಡ ಜನಪದ ಸಾಹಿತ್ಯದ ವಿಸ್ತಾರ, ವ್ಯಾಪ್ತಿಗಳ ಸರಿಯಾದ ಪರಿಚಯವಾದುದು ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಮಾತ್ರ. ಸ್ವಾತಂತ್ರ್ಯಪೂರ್ವದಲ್ಲಿ ಸಾಹಿತ್ಯಿಕ ಕುತೂಹಲಕ್ಕಾಗಿ ಸಾಹಿತ್ಯ ಸಂಗ್ರಹ ಪ್ರಕಟಣೆಗಳು ಕಾಣಿಸಿಕೊಂಡರೆ, ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಪೂರ್ಣಕಾಲದ ಜಾನಪದ ಕಾರ್ಯಕರ್ತರು ಕಾಣಬರತೊಡಗಿದರು. ಇದರಿಂದ ಹೊಸಹೊಸ ಸಾಹಿತ್ಯ ಸಂಪ್ರದಾಯಗಳ ಪರಿಚಯಕ್ಕೆ ಹೆದ್ದಾರಿಯನ್ನು ಸಮೆದಂತೆ ಆಯಿತು. ಗದ್ದಿಗೆಮಠ, ಜೀಶಂಪ, ಕರಾಕೃ, ತಿಪ್ಪೇಸ್ವಾಮಿ, ಮತಿಘಟ್ಟ ಕೃಷ್ಣಮೂರ್ತಿ ಮುಂತಾದವರ ಈ ನಿಟ್ಟಿನ ದುಡಿಮೆ ನಮ್ಮ ಜನಪದ ಸಾಹಿತ್ಯ ಕ್ಷೇತ್ರದಲ್ಲಿ ಹೊಸಹೊಸ ಪ್ರಕಾರಗಳನ್ನು ತೆರೆದು ತೋರಲು ನೆರವಾಯಿತು. ಅಲ್ಲದೆ ಈ ಸಂಗ್ರಾಹಕರು ತಮ್ಮ ಈ ಅಧ್ಯಯನಕ್ಕೆ ಅಥವಾ ಸಂಗ್ರಹಕ್ಕೆ ಯಾವುದೋ ಒಂದು ಹಳ್ಳಿಯನ್ನೋ, ಯಾವುದೋ ಒಂದು ಸಂದರ್ಭವನ್ನೋ ಮೀಸಲಾಗಿ ಇಟ್ಟುಕೊಳ್ಳದೆ ಜಾನಪದ ಸಂಗ್ರಹವನ್ನು ಪೂರ್ಣಕಾಲದ ಕಾರ್ಯವಾಗಿ ಸ್ವೀಕರಿಸಿ ನಾಡಿನ ಅನೇಕ ಕಡೆಗಳಲ್ಲಿ ಸಂಚರಿಸಿ ಶ್ರಮಿಸತೊಡಗಿದುದು, ಮುಂದೆ ಉತ್ತಮ ಸಾಧನೆಗೆ ದಾರಿಮಾಡಿಕೊಟ್ಟಿತು. ೧೯೫೦ರಿಂದ ೧೯೬೫ರವರೆಗೆ ಜನಪದ ಗೀತ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಕೆಳಗಿನ ವರ್ಗವನ್ನು ಗುರುತಿಸಿ, ಸಾಹಿತ್ಯವನ್ನು ಹೊರತರಲಾಯಿತು.

೧. **ಜನಪದ ಗೀತೆ** : ದೇವರ ಪದಗಳು, ಬೀಸುವ ಪದಗಳು, ತಿಂಗಳ ಮಾವನ ಪದಗಳು, ಸಂಪ್ರದಾಯದ ಪದಗಳು, ಕೋಲಾಟದ ಪದಗಳು, ಮದುವೆಯ ಪದಗಳು, ಕಂಬಿಯ ಪದಗಳು, ಹಂತಿಯ ಹಾಡುಗಳು, ಹೋಳಿಯ ಪದಗಳು, ಮಕ್ಕಳಾಟದ ಹಾಡು, ದುಂದುಭಿ ಹಾಡು, ಗೊಂದಲಿ ಹಾಡು, ಶೀಗೆಗೌರಿ ಹಾಡು, ಹಾಸ್ಯದ ಹಾಡು, ಜೋಕುಮಾರನ ಹಾಡು, ಭಲೇರೀಹಾಡು, ಅರಳೆಲೆ ಬಸವನ ಹಾಡು, ಗುಳ್ಳವ್ವನ ಹಾಡು, ಹುತ್ತಪ್ಪನ ಹಾಡು, ನಾಗರಪಂಚಮಿ ಹಾಡು, ಗುರ್ಜಿಯ ಹಾಡು, ಬನ್ನಿಯ ಹಾಡು, ಮಾರ್ನವಮಿ ಪದ, ಜೋಗಿಯ ಹಾಡು, ಹಚ್ಚೆಯ ಪದಗಳು, ತತ್ತ್ವ ಪದಗಳು, ಕೊಂತಿ ಪದಗಳು, ಅಂಟಿಕೆ ಪಂಟಿಕೆ ಪದಗಳು, ಇತ್ಯಾದಿ.

೨. **ಜನಪದ ಲಾವಣಿಗಳು, ಕಾವ್ಯಗಳು** : ಹಂತಿಯ ಸಂಪ್ರದಾಯದ ಕಾವ್ಯಗಳು, ಸಾಮಾನ್ಯ ಗಾಯಕರ ಲಾವಣಿಗಳು, ಕಂಸಾಳೆಯವರು, ನೀಲಗಾರರು, ಜುಂಜಪ್ಪನವರು, ತಂಬೂರಿಯವರು, ಚೌಡಿಕೆಯವರು, ಡೊಳ್ಳಿಯವರು, ದೊಂಬಿದಾಸರು, ಹೆಳವರು ಕರಪಾಲದವರು, ತೆಲುಗು ಜಂಗಮರು, ಗೊರವರು–ಮುಂತಾದವರ ಕಾವ್ಯಗಳು.

ಕರ್ನಾಟಕ ಜನಪದ ಕಾವ್ಯಗಳ ಹಾಗೂ ಗೀತೆಗಳ ಅಧ್ಯಯನದಲ್ಲಿ ಮೇಲೆ ಸೂಚಿಸಿದ ಒಂದೂವರೆ ದಶಕದ ಸಾಧನೆ ಶಿಖರಪ್ರಾಯವಾದುದು ಎಂಬುದರಲ್ಲಿ ಅನುಮಾನವಿಲ್ಲ. ಆರಂಭದ ಕೆಲವು ಬಿಡಿಹಾಡುಗಳು ಹಾಗೂ ಕೆಲವು ಕಥನಗೀತೆಗಳನ್ನೊಳಗೊಂಡ ಬೆರಳೆಣಿಕೆಯಷ್ಟು ಸಂಗ್ರಹಗಳ ಅನಂತರ ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಕನ್ನಡದಲ್ಲಿ ನಡೆದ ಮೊದಲ ಅವಧಿಯ ಸಂಗ್ರಹಕಾರ್ಯ ನಮ್ಮ ಜನಪದ ಕಾವ್ಯಸಂಪ್ರದಾಯಗಳ ಅನಂತ ವೈವಿಧ್ಯವನ್ನು ಪರಿಚಯಿಸಲು ಸಮರ್ಥವಾಯಿತು. ಈ ಅವಧಿಯಲ್ಲಿ ಅಪಾರ ಸಂಖ್ಯೆಯ ಸಂಕಲನಗಳು ಪ್ರಕಟವಾದುದರ ಜೊತೆಗೆ ಅಲ್ಲಲ್ಲಿ ಈ ಕಾವ್ಯಸಂಪ್ರದಾಯಗಳನ್ನೂ, ಕಾವ್ಯಗಳನ್ನೂ, ಪರಿಚಯಿಸುವ ಅಪೂರ್ವ ಲೇಖನಗಳೂ ಮೇಲಿಂದ ಮೇಲೆ ಪ್ರಕಟವಾಗತೊಡಗಿದವು. ಕನ್ನಡ ಜನಪದ ಕಾವ್ಯಲೋಕ ಇದ್ದಕ್ಕಿದಂತೆ ತನ್ನ ದಿಗಂತವನ್ನು ವಿಸ್ತರಿಸಿಕೊಂಡು ಅಪಾರ ಸಾಹಿತ್ಯರಾಶಿ ಸಂಶೋಧಕರಿಗೆ ಲಭ್ಯವಾಗುವಂತಾಯಿತು. ಜೊತೆಗೆ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕದ ಅನೇಕ ಕಡೆಗಳಲ್ಲಿ ಪ್ರಾದೇಶಿಕ ಸಾಹಿತ್ಯದ ಪರಿಚಯವೂ ಲಭ್ಯವಾಗುವ ಅವಕಾಶವಾಯಿತು. ಕಾಳಿಂಗರಾಯ, ಮೈಲಾರಲಿಂಗ, ಈರಬಡಪ್ಪ, ಗುಣಸಾಗರಿ, ಬಾಲ ನಾಗಮ್ಮ, ಮದಕರಿನಾಯಕ, ಪಿರಿಯಾಪಟ್ಟಣದ ಕಾಳಗ, ಮಲೆಯಮಾದೇಶ್ವರ ಕಾವ್ಯ, ಮಂಟೇಸ್ವಾಮಿ ಕಾವ್ಯ, ಜುಂಜಪ್ಪನ ಕಾವ್ಯ, ನೀಲವೇಣಿ, ಬಂಜೆ ಹೊನ್ನಮ್ಮ, ಮೈದುನ ರಾಮಣ್ಣ, ಚೆನ್ನಿಗರಾಮ, ಕಲ್ಯಾಣಬಸವಯ್ಯ, ಹರಳಯ್ಯ, ಮಡಿವಾಳ ಮಾಚಯ್ಯ, ಕಿನ್ನರಿ ಬೊಮ್ಮಯ್ಯ, ಮೇದರ ಕೇತಯ್ಯ, ಇಳಿಹಾಳ ಬೊಮ್ಮಯ್ಯ, ಹೂಗಾರ ಮಾದಯ್ಯ, ಜಾತಿಗರ ಚೌಡಯ್ಯ, ನೇಗಿಯ ಅಮುಗಯ್ಯ, ಕುಂಬಾರ ಗುಂಡಯ್ಯ, ಮಾದಯ್ಯ, ಜಾತಿಗರ ಚೌಡಯ್ಯ, ಮಾದಾರ ಚನ್ನಯ್ಯ, ಅರ್ಜುನ ಜೋಗಿಯ ಹಾಡುಗಬ್ಬ, ಸಂಜಯ್ಯ ಚಾಮುಂಡಿ, ಶಿವ–ಗಿರಿಜೆ, ಗಿರಿಜಾಕಲ್ಯಾಣ, ಸರ್ಜಪ್ಪನಾಯ್ಕನ ಕಾವ್ಯ, ಲಿಂಗರಾಜಮ್ಮನ ಕಾವ್ಯ, ಚಾಮುಂಡಿ ಪುರಾಣ, ಗುಂಡುಬ್ರಹ್ಮಯ್ಯ, ಚೆಲುವರಾಯ, ಬಿಳಿಗಿರಿ ರಂಗ, ಚೆನ್ನಬಸವಣ್ಣ, ಭುವನಮ್ಮ,

ಗಜಾವತಿ, ಹುಲಿಯಾರು ಕೆಂಚಮ್ಮ, ಹಿರಿದಿಮ್ಮಿ, ಈರೋಜಿ, ಉತ್ತರದೇವಿ, ಅಣಜಿ ಹೊನ್ನಮ್ಮ ಮುಂತಾಗಿ ಅಪಾರ ಸಂಖ್ಯೆಯ ಕಾವ್ಯಗಳು ಗುರುತಿಸಲ್ಪಟ್ಟು ಸಂಗ್ರಹಕಾರ್ಯವೂ ನಡೆಯಿತು. ಅಲ್ಲಲ್ಲಿ ಕೆಲವು ಸಂಕಲನರೂಪದಲ್ಲಿ, ಲೇಖನರೂಪದಲ್ಲಿ ಪ್ರಕಟಗೊಂಡವು. ಹೀಗೆ ನಮ್ಮ ಜನಪದ ಗೀತೆ, ಕಾವ್ಯಗಳ ವಿಪುಲಸಂಪತ್ತು ಆಶ್ಚರ್ಯಕರ ರೀತಿಯಲ್ಲಿ ಗೋಚರಿಸತೊಡಗಿ, ಕನ್ನಡ ಜನಪದ ಸಾಹಿತ್ಯದತ್ತ ಎಲ್ಲರ ದೃಷ್ಟಿಯೂ ಹರಿಯಲು ಪ್ರೇರಕವಾಯಿತು.

ಇತ್ತೀಚಿನ ದಿನಗಳಲ್ಲಿ ಜಾನಪದದ ಬೇರೆ ಬೇರೆ ಪ್ರಕಾರಗಳಲ್ಲಿ ಗುರುತಿಸಲ್ಪಟ್ಟಿರುವ ಜಾನಪದದ ಬಗೆಗಳನ್ನು ಇಲ್ಲಿ ಗಮನಿಸಬಹುದಾಗಿದೆ:

೧. **ಜನಪದ ಕಥೆ :** ಅತಿಮಾನುಷ ಕಥೆಗಳು, ಮಾಂತ್ರಿಕ ಕಥೆಗಳು, ರಮ್ಯ ಕಥೆಗಳು, ವಾಸ್ತವಿಕ ಕಥೆಗಳು, ಬುದ್ಧಿವಂತಿಕೆ ಕಥೆಗಳು, ದಡ್ಡರ ಕಥೆಗಳು, ಪ್ರಾಣಿ ಕಥೆಗಳು, ವಿವರಣಾತ್ಮಕ ಕಥೆಗಳು, ಸೂತ್ರ ಕಥೆಗಳು, ಕೊನೆಯಿಲ್ಲದ ಕಥೆಗಳು, ಗಾದೆಯ ಕಥೆಗಳು ಮುಂತಾದ ವಿವಿಧ ಪ್ರಕಾರದ ಕಥೆಗಳು.

ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಉತ್ತರ ಕನ್ನಡ ಜಿಲ್ಲೆ ಈ ಭಾಗದ ಜನಪದ ಕಥೆಗಳು ಹೇರಳವಾಗಿ ಹೊರಬಂದಿವೆ. ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದ ಕಥೆಗಳ ಸಂಗ್ರಹದತ್ತ ಹೆಚ್ಚಾಗಿ ಗಮನಹರಿದಿಲ್ಲ.

೨. **ಜನಪದ ಗೀತೆ, ಲಾವಣಿ, ಕಾವ್ಯ :** ವೃತ್ತಿಗಾಯಕರ ಕಾವ್ಯಗಳು, ಸಾಮಾನ್ಯ ಲಾವಣಿಗಳು, ಎಲ್ಲ ಗೀತ ಸಂಪ್ರದಾಯಗಳನ್ನೂ ಪ್ರತಿನಿಧಿಸುವ ಜನಪದ ಗೀತೆಗಳ ಸಂಕಲನಗಳು, ಶಿಶುಪ್ರಾಸಗಳು.

೩. **ಜನಪದ ನಾಟಕ, ನೃತ್ಯ :** ಜನಪದ ರಂಗಭೂಮಿಗೆ ಸಂಬಂಧಿಸಿದಂತೆ ಅಧ್ಯಯನಗಳೂ, ಬಿಡಿಲೇಖನಗಳೂ, ಮೂಲಸಾಹಿತ್ಯವೂ ಸಾಕಷ್ಟು ಬೆಳಕು ಕಂಡಿವೆ.

೪. **ಗಾದೆ, ಒಗಟು ಒಡಪುಗಳು :** ಇವುಗಳ ಸಂಗ್ರಹಗಳೂ ಸಾಕಷ್ಟು ಸಂಖ್ಯೆಯಲ್ಲಿ ಹೊರಬಂದಿವೆ.

೫. **ನಂಬಿಕೆ, ಸಂಪ್ರದಾಯಗಳು :** ಸಂಪೂರ್ಣವಾಗಿ ನಿರ್ಲಕ್ಷಿತವಾಗಿದ್ದ ಈ ಎರಡು ಕ್ಷೇತ್ರಗಳಿಗೆ ಸಂಬಂಧಿಸಿದಂತೆ ನಾಲ್ಕಾರು ಸಂಕಲನಗಳು ಬೆಳಕು ಕಂಡಿವೆ.

ವಿಚಾರ ವಿಮರ್ಶೆ : ಈ ಕ್ಷೇತ್ರದಲ್ಲಿನ ಕೆಲಸವೂ ತೀವ್ರಗೊಂಡು ಗ್ರಂಥಗಳು ಪ್ರಕಟಗೊಂಡಿವೆ. ಜನಪದ ಸಾಹಿತ್ಯಕ್ಷೇತ್ರದ ಎಲ್ಲ ಪ್ರಮುಖ ಪ್ರಕಾರಗಳ ಭಾಗಕ್ಕೂ ನಮ್ಮ ಕ್ಷೇತ್ರಕಾರ್ಯಕರ್ತರು ವಿಪುಲ ಸಾಮಗ್ರಿಯನ್ನು ಈಗ ಒದಗಿಸಿದ್ದಾರೆ. ಪ್ರಾದೇಶಿಕ ಸಂಕಲನಗಳೂ ಸಾಕಷ್ಟು ಹೊರಬಂದಿವೆ. ಜನಪದ ಕಥೆಗಳನ್ನು ವೈಜ್ಞಾನಿಕವಾಗಿ ಸಂಗ್ರಹಿಸಿ, ವರ್ಗೀಕರಿಸಿ ನೀಡುವುದರ ಜೊತೆಗೆ, ಅವುಗಳ ಆಶಯ ಮತ್ತು ವರ್ಗಗಳನ್ನು ಗುರುತಿಸುವ ಪ್ರಯತ್ನವೂ ಕಂಡುಬಂದಿದೆ. ನಮ್ಮ ಸಂಗ್ರಾಹಕರು ಒಂದು ನಿರ್ದಿಷ್ಟ ಪ್ರದೇಶವನ್ನು ಆರಿಸಿಕೊಂಡು ಅಲ್ಲಿನ ಕಥೆಗಳನ್ನು ಕಲೆಹಾಕುವುದು, ಒಬ್ಬನೇ ವ್ಯಕ್ತಿಯನ್ನು ಆರಿಸಿಕೊಂಡು ಅವನ ಸಮಗ್ರ ಕಥೆಗಳನ್ನು ಸಂಗ್ರಹಿಸುವುದು, ಕರ್ನಾಟಕದ ವಿವಿಧ ಜಿಲ್ಲೆಗಳನ್ನು ಆರಿಸಿಕೊಂಡು, ಎಲ್ಲಾ ಜಿಲ್ಲೆಗಳಿಗೂ ಸಂಬಂಧಿಸಿದ ಕಥೆಗಳನ್ನು ಕಲೆಹಾಕುವುದು, ಬೇರೆ ಜಿಲ್ಲೆಗಳ ಕಥೆಗಳನ್ನೇ ಪ್ರತ್ಯೇಕವಾಗಿ

ತರುವುದು, ಯಾವುದೋ ಕಥಾವರ್ಗವನ್ನು ದೃಷ್ಟಿಯಲ್ಲಿಟ್ಟುಕೊಂಡು ಸಂಕಲನಗಳನ್ನು ತರುವುದು-ಹೀಗೆ ಅನೇಕ ಪ್ರಯೋಗಗಳನ್ನು ಈ ನಿಟ್ಟಿನಲ್ಲಿ ನಡೆಸಿದ್ದಾರೆ. ಕರ್ನಾಟಕದ ಎಲ್ಲ ಕಡೆಗಳಲ್ಲೂ ಸಾವಿರಾರು ಜನಪದ ಕಥೆಗಳು ಈಗ ಬೆಳಕಿಗೆ ಬರುತ್ತಿದ್ದು ಮುಂದಿನ ಸಂಶೋಧನೆಗೆ ದೊಡ್ಡ ರಾಶಿಯೇ ಸಿದ್ಧವಾಗಿ ಕುಳಿತಿದೆ. ಜನಪದ ಕಥೆಗಳ ವರ್ಗೀಕರಣ, ನಾನಾ ಮೌಲ್ಯಗಳ ಅಧ್ಯಯನ ಮುಂತಾದುವುಗಳ ಕಡೆ ಇನ್ನೂ ನಮ್ಮ ಗಮನ ಹರಿಯಬೇಕಾಗಿದೆ.

ಜನಪದ ಗೀತೆಗಳಿಗೆ ಸಂಬಂಧಿಸಿದಂತೆ ಅನೇಕ ಹೊಸ ಪ್ರಕಾರಗಳ ಮೇಲೆ ಸಂಕಲನಗಳು ಹೊರಬಂದು, ಅತ್ಯಂತ ವೈಜ್ಞಾನಿಕವಾದ ಸಂಪಾದನಾ ಕಾರ್ಯವೂ ಕಂಡುಬರುತ್ತಿದೆ. ಜಿಲ್ಲಾವಾರು ಸಂಕಲನಗಳು, ಬುಡಕಟ್ಟುಗಳಿಗೆ ಸಂಬಂಧಿಸಿದ ಸಂಕಲನಗಳು, ಬೇರೆಬೇರೆ ಪ್ರಕಾರಗಳಿಗೆ ಸಂಬಂಧಿಸಿದ ಸಂಕಲನಗಳು ಬೆಳಕು ಕಂಡಿವೆ. ಬ್ರಾಹ್ಮಣ ಸಮಾಜದ ಜನಪದ ಗೀತೆಗಳ ಅಧ್ಯಯನವೂ ಇತ್ತೀಚೆಗೆ ನಡೆದು 'ಸಂಪ್ರದಾಯದ ಹಾಡುಗಳ' ಮೇಲೆ ಬೃಹತ್ ಸಂಕಲನವೊಂದನ್ನು, ಕಾಡುಗೊಲ್ಲರ ಜೀವನ ಸಂಸ್ಕೃತಿಗಳ ಅಧ್ಯಯನವನ್ನು ನಡೆಸಿ ಅವರ ಹಾಡುಗಳ ಬಹು ದೊಡ್ಡ ಸಂಕಲನವನ್ನು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ಇತ್ತೀಚೆಗೆ ಪ್ರಕಟಿಸಿದೆ. ನೂರಾರು ಜನ ಪ್ರತಿಭಾವಂತ ಜನಪದ ಗಾಯಕರು ಗುರುತಿಸಲ್ಪಟ್ಟು ಸಕಾಲಿಕ ಪ್ರಯತ್ನಗಳಿಂದ ಅವರ ಸಾಹಿತ್ಯವೆಲ್ಲ ಈಗ ಗ್ರಂಥರೂಪದಲ್ಲಿ ಉಳಿಯುವಂತಾಗಿದೆ. ಕರಪಾಲದ ಸಿದ್ಧಯ್ಯ, ಕಂಸಾಳೆ ಮಹದೇವಯ್ಯ, ಹಾಲಕ್ಕಿಗೌಡರ ತಿಮ್ಮಕ್ಕ, ಗುಮ್ಮ, ಸೋಬಾನೆ ಚಿಕ್ಕಮ್ಮ, ಸೋಬಾನೆ ಗಿಡ್ಡೇಗೌಡ, ಎಲಿಸವ್ವ, ಚೌಡಿಕೆ ಎಲ್ಲಯ್ಯ, ಗೋವಿಂದಪ್ಪ, ಕಾಡುಗೊಲ್ಲರ ಸೂರಪ್ಪ, ಮಳವಳ್ಳಿ ರಾಚಯ್ಯ, ಗೊಲ್ಲರ ಮೂಡ್ಲಪ್ಪ ಹೀಗೆ ನೂರಾರು ಅಜ್ಞಾತ ಜನಪದ ಕಲಾವಿದರು, ಸಾಕಷ್ಟು ಕೀರ್ತಿಶಾಲಿಗಳಾಗಿ ಮೆರೆಯುವ ಪುಣ್ಯದಿನಗಳು ಬಂದಿವೆ.

ಕನ್ನಡದಲ್ಲಿ ಸುದೀರ್ಘ ಕಾವ್ಯಗಳು ಈಗ ಬೆಳಕಿಗೆ ಬಂದಿವೆ. 'ಮಲೆಯಮಾದೇಶ್ವರ ಕಾವ್ಯ', 'ಮಂಟೆಸ್ವಾಮಿ ಕಾವ್ಯ', 'ಎಲ್ಲಮ್ಮನ ಕಾವ್ಯ', 'ಪಿರಿಯಾಪಟ್ಟಣದ ಕಳಗ', 'ಸಾರಂಗಧರ', 'ಚನ್ನಿಗರಾಮ' ಮುಂತಾದ ಅಪಾರಸಂಖ್ಯೆಯ ಮೌಖಿಕ ಕಾವ್ಯಗಳ ದೊಡ್ಡ ಪರಂಪರೆಯನ್ನು ಈಗ ಬೆಳಕಿಗೆ ತರಲಾಗಿದೆ. ವೀರಕಾವ್ಯಗಳು, ವಾಸ್ತವಿಕ ಲಾವಣಿಗಳು, ರಮ್ಯಕಾವ್ಯಗಳು. ಚಾರಿತ್ರಿಕ ಕಾವ್ಯಗಳು ಮುಂತಾದ ಅನೇಕ ಬಗೆಯ ಕಾವ್ಯಗಳು ಈಗ ಹೇರಳವಾಗಿ ಸಂಕಲಿತವಾಗಿವೆ.

ನಮ್ಮ ಜಾನಪದ ವಾಙ್ಮಯ ಎಷ್ಟು ವೈವಿಧ್ಯಪೂರ್ಣವಾದುದು, ವ್ಯಾಪಕವಾದುದು ಎಂಬುದನ್ನು ಈಗ ಪ್ರಕಟವಾಗಿರುವ ನೂರಾರು ಸಂಕಲನಗಳ ಆಧಾರದ ಮೇಲೆ ನಿರ್ಧರಿಸಬಹುದು.

ಭೌತಿಕ ಜಾನಪದ : ಜಾನಪದದಲ್ಲಿ ಜನಪದ ಸಾಹಿತ್ಯದ ಅನಂತರ ಭೌತಿಕ ಜಾನಪದ (Physical folklore) ನಮ್ಮ ದೃಷ್ಟಿಯನ್ನು ಸೆಳೆದುಕೊಳ್ಳುತ್ತದೆ. ಜನಪದ ಸಾಹಿತ್ಯ ಮೌಖಿಕ ಸಂಪ್ರದಾಯದಲ್ಲಿ ಸಾಗಿಬಂದರೆ, ಭೌತಿಕ ಜಾನಪದ ಪರಂಪರಾನುಗತವಾಗಿ ಬಳಕೆಯ

ಮೇಲೆ ಸಾಗಿಬಂದುದು. ಪ್ರಾಚೀನಕಾಲದಿಂದಲೂ ತನ್ನ ಬದುಕಿಗೆ ಅವಶ್ಯಕವಾದ ವಸ್ತುವಿಶೇಷಗಳನ್ನು ಮಾನವ ಸೃಷ್ಟಿಸಿಕೊಂಡು ಬಂದ. ತನ್ನ ಅಡುಗೆಗೆ ಬೇಕಾದ ಪಾತ್ರೆಗಳು, ಬೇಟೆಗೆ ಬೇಕಾದ ಆಯುಧಗಳು, ಮನರಂಜನೆಗೆ ಬೇಕಾದ ಕಲಾತ್ಮಕ ವಸ್ತುಗಳು, ವ್ಯವಸಾಯಕ್ಕೆ ಬೇಕಾದ ಸಲಕರಣೆಗಳು, ಅಲಂಕಾರಕ್ಕೆ ಬೇಕಾದ ಆಭರಣಗಳು, ವಾಸಕ್ಕೆ ಬೇಕಾದ ಮನೆ, ಸಾಮೂಹಿಕವಾಗಿ ಜೀವಿಸಲು ಊರು ಕೇರಿ ಹೀಗೆ ಜೀವನಾವಶ್ಯಕವಾದ ಎಲ್ಲ ಸಾಧನಗಳನ್ನು ಮರ, ಮಣ್ಣು, ಲೋಹ, ನಾರು, ಕಲ್ಲು ಮೊದಲಾದವುಗಳಿಂದ ಸೃಷ್ಟಿಸಿಕೊಂಡ. ಪರಂಪರಾನುಗತವಾಗಿ ಈ ವಸ್ತುಗಳಲ್ಲಿ ಸುಧಾರಣೆಯಾಯಿತು. ಯಾರೋ ಒಬ್ಬ ಸೃಷ್ಟಿಸಿದ ವಸ್ತು ಹತ್ತು ಹಲವು ಕಡೆ ಪ್ರಯೋಗಗೊಂಡು ಸಮಷ್ಟಿಯ ಸೃಷ್ಟಿ ಎನಿಸಿ ಜನಪದದ ಸ್ವತ್ತಾಯಿತು.

ಈ ವಸ್ತುಗಳ ಅಧ್ಯಯನ ಜನಜೀವನವನ್ನು ಅರ್ಥ ಮಾಡಿಕೊಳ್ಳುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಆಧುನಿಕ ನಾಗರಿಕತೆಯ ಪ್ರಭಾವದಿಂದ ನಮ್ಮ ಹಿರಿಯರ ಸಾಧನೆಯ ಕುರುಹಾದ ಹಳೆಯಕಾಲದ ಅತ್ಯಪೂರ್ವ ವಸ್ತುಗಳು ಕಣ್ಮರೆಯಾಗತೊಡಗಿದಾಗ ಶೈಕ್ಷಣಿಕ ದೃಷ್ಟಿಯಿಂದ ಅವುಗಳನ್ನು ಒಂದೆಡೆ ಶೇಖರಿಸಿ ಅಧ್ಯಯನಕ್ಕೆ ಅವಕಾಶ ಮಾಡಿಕೊಡುವುದು ಅಗತ್ಯವೆನಿಸಿತು. 'ಜಾನಪದ ವಸ್ತುಸಂಗ್ರಹಾಲಯಗಳು' ಹುಟ್ಟಿಕೊಂಡಿದ್ದೂ ಹೀಗೆ.

ಪಾಶ್ಚಾತ್ಯದೇಶಗಳಲ್ಲಿ ಈ ಮಾದರಿಯ ವಸ್ತುಸಂಗ್ರಹಗಳ ಕಲ್ಪನೆ ಕಳೆದ ಶತಮಾನವಲ್ಲಿಯೇ ಮೂಡಿತು. ಕೈಗಾರಿಕಾ ಕ್ರಾಂತಿಯ ಫಲವಾಗಿ ಸಾಂಪ್ರದಾಯಿಕ ರೀತಿಯ ವಸ್ತುಗಳು ಕಣ್ಮರೆಯಾಗತೊಡಗಿ ತಮ್ಮ ಹೆಮ್ಮೆಯ ಸಾಂಸ್ಕೃತಿಕ ಸಾಧನಗಳನ್ನು ವಸ್ತುಸಂಗ್ರಹಾಲಯಗಳಲ್ಲಾದರೂ ಉಳಿಸಿಕೊಳ್ಳುವ ಪ್ರಯತ್ನ ಮಾಡಲಾಯಿತು. ಜಿಲ್ಲಾಮಟ್ಟದಲ್ಲಿ, ವಿಶ್ವವಿದ್ಯಾನಿಲಯಗಳಲ್ಲಿ, ರಾಜ್ಯಮಟ್ಟದಲ್ಲಿ, ರಾಷ್ಟ್ರಮಟ್ಟದಲ್ಲಿ ಒಳಾಂಗಣ ವಸ್ತುಸಂಗ್ರಹಾಲಯಗಳೂ, ಹೊರಾಂಗಣ ವಸ್ತುಸಂಗ್ರಹಾಲಯಗಳೂ ಹುಟ್ಟಿಕೊಂಡವು. ಇಂದು ಅಲ್ಲಿನ ವಸ್ತುಸಂಗ್ರಹಾಲಯಗಳು ದೊಡ್ಡ ಅಧ್ಯಯನ ಕೇಂದ್ರಗಳಾಗಿ ಬೆಳೆದಿವೆ.

ಭಾರತದಲ್ಲಿ ಮೊಟ್ಟಮೊದಲ ಜಾನಪದ ವಸ್ತುಸಂಗ್ರಹಾಲಯದ ಕಲ್ಪನೆ ಬಂದದ್ದು ಮೈಸೂರು ವಿಶ್ವವಿದ್ಯಾನಿಲಯದಲ್ಲಿ. ಕನ್ನಡ ಅಧ್ಯಯನ ಸಂಸ್ಥೆ ಕಟ್ಟಿ ಬೆಳೆಸಿರುವ ಈ ವಸ್ತುಸಂಗ್ರಹಾಲಯ ಭಾರತಕ್ಕೆ ಹೊಸದು.

ಇತ್ತೀಚೆಗೆ ತರೀಕೆರೆಯ ಪಾಳೆಯಗಾರರು ಬಳಸುತ್ತಿದ್ದ ಅಪೂರ್ವ ರೀತಿಯ ಆಯುಧಗಳು ಈಗ ವಸ್ತುಸಂಗ್ರಹಾಲಯಕ್ಕೆ ದಕ್ಕಿವೆ. ಬಾಳಗಾರುಮಠದ ದೊಡ್ಡ ರಥ ಮೈಸೂರಿನವರೆಗೆ ಹರಿದುಬಂದಿದೆ. ಗುಲ್ಬರ್ಗಾ ಜಿಲ್ಲೆಯ ಮಾತಂಗಿ ಸಂಪ್ರದಾಯದ ಗೊಂಬೆಗಳು ಈಗ ನೋಡದೊರೆಯುತ್ತವೆ. ಹುಣಸೂರು ತಾಲ್ಲೂಕಿನ ನೂರೊಂದಯ್ಯನ ಸಂಪ್ರದಾಯದ ಮಣ್ಣಿನ ಮೂರ್ತಿಗಳು ಲಭ್ಯವಾಗುತ್ತವೆ. ಈ ವಸ್ತು ಸಂಗ್ರಹಾಲಯದಲ್ಲಿನ ಘಲಿಮಾರುಮಠದ ರಣಕಹಳೆ, ಬೆಳಗಾಂ ಜಿಲ್ಲೆಯ ಆರು ಜೊತೆ ಎತ್ತುಗಳು ಎಳೆಯುವ ರಂಟೆ, ಶಿವಮೊಗ್ಗಾ ಜಿಲ್ಲೆಯ ಬೃಹದಾಕಾರದ ಮಾರಿ, ಶಿಕಾರಿಪುರದ ಶಿವಯೋಗಮಂದಿರದ ಗೊಂಬೆ ಮಂಟಪ, ಉತ್ತರ ಕನ್ನಡದ ಎರಡು ವಿಶಿಷ್ಟರೀತಿಯ ತೇರುಗಳು, ಈಚನೂರು ಸೂತ್ರದ ಗೊಂಬೆಗಳು,

ಕಾಸರಗೋಡಿನ ಕಥಕಳಿ ಸಾಧನಗಳು, ಆಂಧ್ರದ ವೀಧಿನಾಟಕದ ಕಿರೀಟಗಳು, ವರ್ಣರಂಜಿತ ತೊಗಲುಗೊಂಬೆಗಳು. ಈಗ ಮರೆತುಹೋಗಿರುವ ಹೊನ್ನವಳ್ಳಿ ಕೀಲುಗೊಂಬೆ ಸಂಪ್ರದಾಯದ ಗೊಂಬೆಗಳು, ದಕ್ಷಿಣ ಕನ್ನಡದ ಮಕ್ಕಕಟ್ಟೆ ದೇವಾಲಯದ ಸಲಪತ್ತಕ್ಕೂ ಹೆಚ್ಚು ೬೦೦ ವರ್ಷ ಹಳೆಯ ಅಪೂರ್ವ ಮರದ ವಿಗ್ರಹಗಳು–ಹೀಗೆ ಎಲ್ಲಿಯೂ ನೋಡಲು ದೊರೆಯದ ಅಪೂರ್ವ ವಸ್ತುಗಳು ಜಾನಪದ ವಸ್ತುಸಂಗ್ರಹಾಲಯದಲ್ಲಿ ಸಂರಕ್ಷಿಸಲ್ಪಟ್ಟಿವೆ. ಈ ಜ್ಞಾನ ದೇಗುಲಕ್ಕೆ ಅನೇಕ ಗಣ್ಯರು ಭೇಟಿ ನೀಡಿ ಅದರ ಮಹತ್ತ್ವವನ್ನು ಎತ್ತಿ ಹಿಡಿದಿದ್ದಾರೆ.

ಈ ಮಾದರಿಯಲ್ಲಿ ಕರ್ನಾಟಕದ ಮೂಲೆಮೂಲೆಗಳಲ್ಲಿ ಕೊನೆಯ ಪಕ್ಷ ಜಿಲ್ಲಾಮಟ್ಟದಲ್ಲಿ ಜನಜೀವನ ನಡೆದುಬಂದ ದಾರಿಯನ್ನು ಚಿತ್ರಿಸುವ ಇಂಥ ವಸ್ತುಸಂಗ್ರಹಾಲಯಗಳು ಆದಷ್ಟು ಬೇಗ ಹುಟ್ಟಿಕೊಳ್ಳಬೇಕು. ವಿಶ್ವವಿದ್ಯಾನಿಲಯಗಳ ವ್ಯಾಪ್ತಿಯಲ್ಲಿ ಇವು ಬೆಳೆದರೆ ಅಧ್ಯಯನ, ಸಂಶೋಧನೆಗಳಿಗೂ ಸಾಕಷ್ಟು ಅವಕಾಶ ದೊರೆತಂತಾಗುತ್ತದೆ.

ಸಾಮಾಜಿಕ ಜನಪದ ಸಂಪ್ರದಾಯ : ಸಾಮಾಜಿಕ ಜನಪದ ಸಂಪ್ರದಾಯಗಳಿಗೆ ಸಂಬಂಧಿಸಿದಂತೆ ನಮ್ಮ ಜಾನಪದೀಯ ಅಧ್ಯಯನ ಇನ್ನೂ ರೂಪುಗೊಳ್ಳಬೇಕಾಗಿದೆ. ನಂಬಿಕೆಗಳು, ಸಂಪ್ರದಾಯಗಳು, ಹಬ್ಬಗಳು, ಜನಪದ ವೈದ್ಯ, ಅಡುಗೆಯ ಪದ್ಧತಿಗಳು, ಆಟಗಳು ಮುಂತಾದುವುಗಳ ಅಧ್ಯಯನವೂ ಜನಜೀವನವನ್ನು ವ್ಯಾಖ್ಯಾನಿಸಲು, ಅದರಿಂದ ಜೀವನಾವಶ್ಯಕ ಅಂಶಗಳ ಪೂರ್ಣ ಪ್ರಯೋಜನವನ್ನು ಪಡೆಯಲು ಅಗತ್ಯವಾದುದು. ಈ ಜಾನಪದ ಪ್ರಕಾರಗಳ ಮೇಲೆ ವ್ಯವಸ್ಥಿತವಾದ, ವ್ಯಾಪಕವಾದ ಅಧ್ಯಯನ ನಡೆಯಬೇಕಾಗಿದೆ. ನಂಬಿಕೆಗಳ ಮೇಲೆ ಈಗಾಗಲೇ ಕೆಲವು ಸಂಕಲನಗಳು ಹೊರಬಂದಿವೆ. ಡಿ.ಕೆ. ರಾಜೇಂದ್ರ ಮೊದಲಾದವರ ಈ ನಿಟ್ಟಿನ ಪ್ರಯತ್ನ ಸ್ತುತ್ಯವಾದುದು. ಸಂಪ್ರದಾಯಗಳನ್ನು ಕುರಿತು ಇದೀಗ ಅಧ್ಯಯನ ಆರಂಭವಾಗಿದೆ. ತ.ಚಿ. ಚಲುವೇಗೌಡರು ಮಂಡ್ಯ ಸುತ್ತಿನ ಸಂಪ್ರದಾಯಗಳನ್ನೆಲ್ಲ ಅಭ್ಯಾಸ ಮಾಡಿ ವಿವರವಾದ ಮಾಹಿತಿಗಳನ್ನೊಳಗೊಂಡ ಸಂಪುಟವೊಂದನ್ನು ಹೊರತಂದಿದ್ದಾರೆ. ಹಿರಿಯಣ್ಣ ಅವರು ಮಲೆನಾಡಿನ ಸಂಪ್ರದಾಯಗಳನ್ನು ಅಧ್ಯಯನ ಮಾಡಿದ್ದಾರೆ. ಹಬ್ಬಗಳಿಗೆ ಸಂಬಂಧಿಸಿದಂತೆ ಅಲ್ಲಲ್ಲಿ ಪುಸ್ತಕಗಳು ದೊರೆತರೂ ವ್ಯಾಪಕವಾದ ಕ್ಷೇತ್ರಕಾರ್ಯದ ಹಿನ್ನೆಲೆಯಲ್ಲಿ, ಪ್ರಾದೇಶಿಕ ಹಿನ್ನೆಲೆಯಲ್ಲಿ ಹಬ್ಬಗಳ ವ್ಯವಸ್ಥಿತ ಅಧ್ಯಯನ ಇನ್ನೂ ನಡೆಯಬೇಕಾಗಿದೆ. ಜನಪದ ವೈದ್ಯ ಮತ್ತು ಅಡುಗೆಯ ಪದ್ಧತಿಗೆ ಸಂಬಂಧಿಸಿದಂತೆ, ಮಾಟ, ಮಂತ್ರ, ಶೂನ್ಯಗಳಿಗೆ ಸಂಬಂಧಿಸಿದಂತೆ ನಡೆಯುತ್ತಿರುವ ಕೆಲಸದ ತೀವ್ರತೆ ಇನ್ನೂ ಹೆಚ್ಚಬೇಕಾಗಿದೆ. ಕನ್ನಡ ಜಾನಪದ ಭಂಡಾರ ಶ್ರೀಮಂತವಾಗಿ ಬೆಳೆಯಲು ಈ ನಿಟ್ಟಿನ ಅಧ್ಯಯನ ತೀರ ಅವಶ್ಯವಾದುದು.

ಪ್ರದರ್ಶನಾತ್ಮಕ ಕಲೆಗಳು : ಕರ್ನಾಟಕದಲ್ಲಿ ಜನಪದ ಸಾಹಿತ್ಯವನ್ನು ಬಿಟ್ಟರೆ ವ್ಯಾಪಕವಾದ ಅಧ್ಯಯನ ನಡೆಯುತ್ತಿರುವುದು ಪ್ರದರ್ಶನಾತ್ಮಕ ಕಲೆಗಳಲ್ಲಿ ಮಾತ್ರ. ವಿಶ್ವವಿದ್ಯಾನಿಲಯಗಳೂ, ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಜಾನಪದ ಪರಿಷತ್ತು, ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಆಕಾಶವಾಣಿ ಕೇಂದ್ರಗಳು, ರಾಜ್ಯ ವಾರ್ತಾ ಮತ್ತು ಪ್ರಚಾರ ಇಲಾಖೆ ಮುಂತಾದುವು

ಈ ನಿಟ್ಟಿನಲ್ಲಿ ಕೆಲಸ ಮಾಡಿವೆಯಾದರೂ ಮೈಸೂರು ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯಗಳ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಈ ನಿಟ್ಟಿನ ಸಾಧನೆ ದೊಡ್ಡದು ಎನ್ನಬಹುದು.

ಕರ್ನಾಟಕದ ಪ್ರದರ್ಶನಾತ್ಮಕ ಜನಪದ ಕಲೆಗಳನ್ನು ೧೩ ಪ್ರಮುಖವಾದ ಗುಂಪುಗಳಲ್ಲಿ ಹೀಗೆ ವಿಂಗಡಿಸಿಕೊಳ್ಳಬಹುದು:

೧. ಯಕ್ಷಗಾನ ಬಯಲಾಟಗಳು
೨. ಸಾಮಗಾನ ನಾಟಕಗಳು
೩. ಸಣ್ಣಾಟಗಳು
೪. ವೇಷಗಾರರ ಕಲೆಗಳು
೫. ಸೂತ್ರದ ಗೊಂಬೆಯಾಟ
೬. ತೊಗಲುಗೊಂಬೆಯಾಟ
೭. ಕೀಲುಗೊಂಬೆಯಾಟ
೮. ಜನಪದ ನೃತ್ಯಗಳು
೯. ಜನಪದ ಮೇಳಗಳು
೧೦. ಜನಪದ ಮನರಂಜಕರು
೧೧. ಮಲ್ಲಕಾಳಗ
೧೨. ಜನಪದ ಮೋಡಿ
೧೩. ಜನಪದ ಕ್ರೀಡೆಗಳು

ಈ ಕಲೆಗಳಲ್ಲಿ ಕೆಲವು ಸಾಕಷ್ಟು ಪ್ರಚಾರವನ್ನು ಪಡೆದುಕೊಂಡಿವೆ. ಯಕ್ಷಗಾನ ಬಯಲಾಟದ ಎರಡು ಪ್ರಮುಖ ಬಗೆಗಳಾದ ಮೂಡಲಪಾಯ ಮತ್ತು ಪಡುವಲಪಾಯಗಳ ಅಧ್ಯಯನ ಕ್ರಮಬದ್ಧವಾಗಿ ನಡೆಯುತ್ತಿದೆ. ಕರ್ನಾಟಕ ಯಕ್ಷಗಾನ ಸಂಪ್ರದಾಯಗಳ ಸಮಗ್ರ ಕಲ್ಪನೆ ಮೂಡಲು ಈಚಿನ ಅಧ್ಯಯನಗಳು ನೆರವಾಗುತ್ತವೆ. ಪಡುವಲಪಾಯದಲ್ಲಿ ಕಂಡುಬರುವ ತೆಂಕುತಿಟ್ಟು, ಬಡಗುತಿಟ್ಟುಗಳಂತೆ, ಮೂಡಲಪಾಯದಲ್ಲಿಯೂ ಘಟ್ಟದ ಕೋರೆ ಮೊದಲಾದ ಪ್ರಭೇದಗಳನ್ನು ಗುರುತಿಸಲಾಗಿದೆ. ವಾದ್ಯಗಳ ಬಳಕೆ, ರಂಗಸಂಪ್ರದಾಯಗಳು, ಮೇಳ, ವೇಷಭೂಷಣ, ಸಾಹಿತ್ಯ, ನೃತ್ಯ, ಹಾಗೂ ಸಂಗೀತಕ್ಕೆ ಸಂಬಂಧಿಸಿದಂತೆ ಮೂಡಲಪಾಯ, ಪಡವಲಪಾಯಗಳಲ್ಲಿ ಕೆಲವು ವ್ಯತ್ಯಾಸಗಳು ಕಂಡುಬಂದರೂ ಮೂಲಭೂತವಾಗಿ ಯಕ್ಷಗಾನ, ಬಯಲಾಟಗಳೆಲ್ಲ ಒಂದೇ ಮೂಲದಿಂದ ಬಂದವು ಎಂಬುದನ್ನು ಅಲ್ಲಗಳೆಯುವಂತಿಲ್ಲ. ದ್ರಾವಿಡಮೂಲದ ಪ್ರಾಚೀನ ಕಲೆಯೊಂದು ಕವಲೊಡೆದು ಆಂಧ್ರ, ಕರ್ನಾಟಕ, ತಮಿಳುನಾಡು ಮತ್ತು ಕೇರಳಗಳಲ್ಲಿ ಪ್ರಾದೇಶಿಕ ಹಿನ್ನೆಲೆಯಲ್ಲಿ ಬೆಳೆದುಕೊಂಡಿರುವುದು ಸುಸ್ಪಷ್ಟ.

'ಸಾಮಗಾನ ಸಂಪ್ರದಾಯ' ತೀರ ಇತ್ತೀಚಿನದೆಂದು ಭಾವಿಸಲಾಗಿದೆ. ಇದು ಸಂಗೀತ ಮತ್ತು ಅಭಿನಯ ಪ್ರಧಾನವಾದ ಕಲೆ. ಕಂಪನಿ ನಾಟಕಗಳ ಪ್ರಭಾವದಿಂದ ಇವು ಪ್ರಾಚುರ್ಯಕ್ಕೆ ಬಂದಂತೆ ತೋರಿದರೂ ಅದಕ್ಕೂ ಪ್ರಾಚೀನವಾದ ಇತಿಹಾಸವಿರಬಹುದಾದ ಅನುಮಾನ ಬರುತ್ತದೆ. ಸರಳೀಕೃತ ವೇಷಭೂಷಣ, ಸೊಗಸಾದ ಸಂಭಾಷಣೆ, ಪಾತ್ರಗಳೇ ಹಾಡುವ

ಸಂಪ್ರದಾಯ, ಸಾಂಪ್ರದಾಯಿಕ ರೀತಿಯ ರಂಗತಂತ್ರಗಳು, ಹಾಡುಗಾರಿಕೆ ಇವುಗಳನ್ನು ಗಮನಿಸಿದರೆ ಯಕ್ಷಗಾನ ಮತ್ತು ಸಾಮಗಾನಗಳು ಎರಡು ಪ್ರತ್ಯೇಕ ಶಾಖೆಗಳಾಗಿಯೇ ಬೆಳೆದು ಬಂದಿರುವ ಸಾಧ್ಯತೆಯೇ ಹೆಚ್ಚು. ಇಂದಿಗೂ ಅನೇಕ ಗ್ರಾಮಗಳು ನೂರಾರು ವರ್ಷಗಳಿಂದ ಉಳಿದುಬಂದಿರುವ 'ಸಾಮಗಾನ' ನಾಟಕಗಳ ಕುರುಹುಗಳಿವೆ. ತಲೆಮಾರಿನಿಂದ ತಲೆಮಾರಿಗೆ ವಂಶಪಾರಂಪರ್ಯವಾಗಿ ಕೆಲವು ಪಾತ್ರಗಳನ್ನು ಅಭಿನಯಿಸಿಕೊಂಡು ಬಂದವರು ಕಂಡು ಬರುತ್ತಾರೆ. ಈ ಸಾಮಗಾನ ಪದ್ಧತಿಗೇ ಮೀಸಲಾದ "ಚಿತ್ರಕೇತು ಮಹಾರಾಜನ ಕಥೆ" ಮುಂತಾದವು ಬಹಳ ಹಿಂದಿನಿಂದಲೂ ಉಳಿದುಬಂದ ನಿದರ್ಶನಗಳಿವೆ. ಉತ್ತರ ಕರ್ನಾಟಕ, ಮಲೆನಾಡು ಮತ್ತು ಉತ್ತರ ಕನ್ನಡ ಜಿಲ್ಲೆಯ ಭಾಗಗಳಲ್ಲಿ ಕಂಡುಬರುವ 'ಸಣ್ಣಾಟಗಳು' ಜನಪದ ರಂಗಭೂಮಿಯ ಮತ್ತೊಂದು ಪ್ರಮುಖವಾದ ಪ್ರಕಾರವನ್ನು ಪರಿಚಯಿಸುತ್ತವೆ. ಅಲ್ಲಿನ ಮೂಡಲಪಾಯ ಯಕ್ಷಗಾನ ದೊಡ್ಡಾಟವಾಗಿರುವುದು ಈ ಸಣ್ಣಾಟಗಳಿಂದ. ಸಣ್ಣಾಟಗಳು ಯಕ್ಷಗಾನಗಳಲ್ಲಿ. ಪೌರಾಣಿಕ, ಐತಿಹಾಸಿಕ ಹಾಗೂ ಸಾಮಾಜಿಕ ವಸ್ತುವನ್ನಾಧರಿಸಿ ಹುಟ್ಟಿಕೊಂಡಿರುವ ಈ ನಾಟಕಗಳಿಗೆ ತನ್ನದೇ ಆದ ಸಂಗೀತವುಂಟು; ಲಘುನೃತ್ಯವೂ ಉಂಟು. ವೇಷಭೂಷಣಗಳು ಸಾಮಗಾನ ನಾಟಕದಂತೆ ಅತ್ಯಂತ ಸರಳವಾದವು. ರಂಗಸಜ್ಜಿಕೆಯೂ ಸಣ್ಣದೇ. ಶ್ರೀ ಕೃಷ್ಣಪಾರಿಜಾತ, ಅಲ್ಲಮಪ್ರಭು, ಸಾಂಗ್ಯಬಾಳ್ಯ ಮೊದಲಾದ ಸಣ್ಣಾಟಗಳು ತಮ್ಮದೇ ಆದ ವಿಶಿಷ್ಟ ಸಂಪ್ರದಾಯವನ್ನು ಕಲ್ಪಿಸಿವೆ.

ಸಣ್ಣಾಟಗಳ ಅಧ್ಯಯನ ಇನ್ನೂ ಸಮರ್ಪಕವಾಗಿ ನಡೆಯಬೇಕಾಗಿದೆ. ಕಲಾತಂಡಗಳ ಪರಿವೀಕ್ಷಣೆ, ಸಣ್ಣಾಟದ ಬಗೆಗಳ ನಿರ್ಧಾರ, ಕಲಾವಿದರ ಸಂದರ್ಶನ, ಸಣ್ಣಾಟ ಸಾಹಿತ್ಯದ ಸಂಪಾದನೆ ಮುಂತಾದವು ತೀವ್ರಗತಿಯಲ್ಲಿ ನಡೆಯಬೇಕಾದುದು ಅಗತ್ಯ.

ವೇಷಗಾರರು ಮನೆಮನೆಯ ಬಾಗಿಲಿಗೆ ಕಲೆಯನ್ನು ಒಯ್ಯುವ ಅಪೂರ್ವ ಕಲಾವಿದರು. ಈ ಕ್ಷೇತ್ರದಲ್ಲಿ ಇದಕ್ಕೇ ಮೀಸಲಾದ ಒಂದು ವರ್ಗದ ಜನ ಕಂಡುಬರುತ್ತಾರೆ. ಪೌರಾಣಿಕ ಪಾತ್ರಗಳ ವೇಷಗಳನ್ನು ಧರಿಸಿ, ಎರಡು ಮೂರು ಮಂದಿ ಜತೆಗೂಡಿ ಅಲ್ಲಲ್ಲಿ ಸಣ್ಣಸಣ್ಣ ಪ್ರದರ್ಶನಗಳನ್ನು ನೀಡಿ, ಮನೆಮನೆಯ ಮುಂದೆಲ್ಲ ಆಡಿ ಅವರು ಜನರನ್ನು ರಂಜಿಸುತ್ತಾರೆ. ಇದೊಂದು ಬಗೆಯ ಮಿನಿ ನಾಟಕವೆಂದರೂ ಆಗಬಹುದು. ಇವರನ್ನು ಕುರಿತಂತೆ ಲಿಂಗಣ್ಣ ಸಣ್ಣಕ್ಕಿಯವರು ಇತ್ತೀಚೆಗೆ ಅಧ್ಯಯನ ನಡೆಸಿದ್ದಾರೆ. ಇನ್ನೂ ವಿವರವಾದ ಪರಿಶೀಲನೆ ಈ ಕಲಾತಂಡಗಳ ಬಗ್ಗೆ ನಡೆಯಬೇಕಾಗಿದೆ.

ಜನಪದ ನಾಟಕಗಳನ್ನಾಡುವ ಅನೇಕ ವೃತ್ತಿಕಲಾವಿದರು ಈಗೀಗ ಈ ಕಲೆಯನ್ನು ಕೈಬಿಟ್ಟು ವೃತ್ತಿಯನ್ನು ಅವಲಂಬಿಸುತ್ತಿದ್ದಾರೆ. ದೊಂಬಿದಾಸರ ಮೇಳಗಳು, ಮರಾಟಿಯವರ ಮೇಳಗಳು ಈಗ ತೀರ ವಿರಳವಾಗಿವೆ. ಇತ್ತೀಚೆಗೆ ಕನ್ನಡ ಅಧ್ಯಯನ ಸಂಸ್ಥೆಯ ಪರಿವೀಕ್ಷಣೆಯಲ್ಲಿ ದೊಂಬಿದಾಸರ ಮೇಳವೊಂದು ಹುಣಸೂರು ತಾಲ್ಲೂಕಿನಲ್ಲಿ ಕಂಡುಬಂದಿದೆ. ತಿಪಟೂರು ತಾಲ್ಲೂಕು ಕೊನೆಹಳ್ಳಿಯ ಸಮೀಪದಲ್ಲಿ ಮರಾಟಿಯವರ ಮೇಳವೊಂದನ್ನು ಗುರುತಿಸಲಾಗಿದೆ.

ಸೂತ್ರದ ಬೊಂಬೆಯಾಟ ಅತ್ಯಂತ ಪ್ರಾಚೀನವಾದ ಕಲೆ. ಯಕ್ಷಗಾನ ಬಯಲಾಟಗಳಿಗೂ

ಇದು ಪ್ರಾಚೀನವೆಂದು ಭಾವಿಸಲಾಗಿದೆ. ಯಕ್ಷಗಾನದ ಎಲ್ಲ ಅಂಶಗಳೂ ಈ ಕಲೆಯಲ್ಲಿ ಕಂಡುಬರುತ್ತವೆ. ವೇಷಭೂಷಣ, ಮಾತುಗಾರಿಕೆ, ಕುಣಿತದ ವೈಖರಿ, ಹಾಡುಗಾರಿಕೆ ಎಲ್ಲವೂ ಯಕ್ಷಗಾನ ಮೂಲವಾದದ್ದೆ. ಮಾನವಪಾತ್ರಗಳ ಬದಲಾಗಿ ಇಲ್ಲಿ ಬೊಂಬೆಗಳು ಕುಣಿಯುತ್ತವೆ. ಭಾಗವತರು, ಹಿಮ್ಮೇಳದವರು, ಕುಣಿಸುವವರು ಮಾತ್ರ ಮಾನವರು. ಇವರೆಲ್ಲ ತೆರೆಯ ಹಿಂದೆ ಇರುತ್ತಾರೆ. ಕೆಲವು ಪ್ರಸಿದ್ಧ ಬೊಂಬೆಯಾಟದ ಮೇಳಗಳು ಈಗ ಕಣ್ಮರೆಯಾಗಿದ್ದರೂ ನಾಡಿನ ಬೇರೆಬೇರೆ ಭಾಗಗಳಲ್ಲಿ ಈ ಕೆಲವು ತಂಡಗಳು ಈಗಲೂ ಉಳಿದಿವೆ. ಬೆಳ್ಳೂರು ಮೇಳ, ನೆಲ್ಲಿಗೆರೆಯ ಮೇಳ, ನಂಜನಗೂಡು ಮೇಳಗಳು ಸಾಕಷ್ಟು ಜನಪ್ರಿಯವಾಗಿವೆ.

ತೊಗಲುಬೊಂಬೆಯಾಟ 'ಕಿಳ್ಳೇಕ್ಯಾತರು' ಅಥವಾ 'ಗೊಂಬೆರಾಮರು' ಎಂಬ ಬುಡಕಟ್ಟಿನವರ ಕಲೆ. ಇದೂ ಯಕ್ಷಗಾನ ಆಧಾರಿತವಾದುದೇ. ಇಲ್ಲಿನ ಗೊಂಬೆಗಳು ತೆರೆಯ ಹಿಂದೆ ಕಾಣಿಸಿಕೊಳ್ಳುತ್ತವೆ. ಬಿಳಿಯ ವಸ್ತ್ರದ ಮೇಲೆ ದೀಪದ ಬೆಳಕು ಬಿದ್ದು ಗೊಂಬೆಗಳು ಅತ್ಯಂತ ವರ್ಣರಂಜಿತವಾಗಿ ತೋರುವಂತೆ ರಂಗಸಜ್ಜಿಕೆಯನ್ನು ಮಾಡಲಾಗಿರುತ್ತದೆ. ಇದು ಒಂದು ಕುಟುಂಬದ ಕಲೆ. ಹೆಂಗಸರು, ಗಂಡಸರು, ಮಕ್ಕಳು ಎಲ್ಲರೂ ಸೇರಿ ನಡೆಸ ಬೇಕಾದ ಗೊಂಬೆಯಾಟವಿದು. ಆರೇಳು ಮಂದಿ ಕಲಾವಿದರು ಕಲೆತು ನಿರ್ವಹಿಸುವ ಈ ಕಲೆ ಅತ್ಯಂತ ಆಕರ್ಷಕವಾದುದು. ಇವುಗಳನ್ನು ಪ್ರಾಚೀನ ಸಿನಿಮಾಗಳೆಂದೇ ಕರೆಯಬಹುದು.

ಕಿಳ್ಳೇಕ್ಯಾತರು ಮಲೆನಾಡಿನ ಭಾಗಗಳನ್ನು ಬಿಟ್ಟು ಉಳಿದೆಡೆಯಲ್ಲೆಲ್ಲಾ ಕಂಡುಬಂದಿದ್ದಾರೆ. ಇವರು ಬೇರೆಬೇರೆ ವೃತ್ತಿಯನ್ನು ಅವಲಂಬಿಸಿದ್ದರೂ ಇಂದಿಗೂ ಈ ಕಲೆ ಉಸಿರಾಡುತ್ತಿದೆ. ಇದರಲ್ಲಿ ಕೋಲಾರ, ಚಿತ್ರದುರ್ಗ ಭಾಗದಲ್ಲಿ ದೊಡ್ಡಾಟ ಸಂಪ್ರದಾಯವೊಂದು ಕಂಡುಬಂದಿದೆ. ಇಲ್ಲಿನ ಗೊಂಬೆಗಳು ಬಹಳ ದೊಡ್ಡವು, ರಂಗಮಂಟಪವೂ ದೊಡ್ಡದು. ಈ ಸಂಪ್ರದಾಯದಲ್ಲಿ ಕಲಾವಿದರು ನಿಂತು ಕುಣಿಸುವ ವೈಖರಿ ಕಂಡುಬರುತ್ತದೆ. ಆದರೆ ಉಳಿದ ಭಾಗಗಳಲ್ಲಿ ಸಣ್ಣಗೊಂಬೆಗಳನ್ನು ಕುಳಿತೇ ಕುಣಿಸಲಾಗುವುದು.

ಕೀಲುಗೊಂಬೆಯಾಟ ಈಗ ಸಂಪೂರ್ಣವಾಗಿ ಮರೆತುಹೋಗಿರುವ ಜನಪದ ಕಲೆ. ಇದು ಯಕ್ಷಗಾನ ಮೇಳದಲ್ಲಿ ವಿವಿಧ ವೇಷಗಳ ಗೊಂಬೆಗಳನ್ನು ಕೀಲುಗಳ ಸಹಾಯದಿಂದ ವಿವಿಧ ವಿನೋದಗಳೊಡನೆ ಕುಣಿಸುವುದೇ ಇಲ್ಲಿನ ಜೀವಾಳ. ಕಬ್ಬಿಣದ ಕೋಲುಗಳನ್ನು ಅಥವಾ ತಿರುಗಣಿಗಳ ಸಹಾಯದಿಂದ ವಿವಿಧ ಭಂಗಿಗಳಲ್ಲಿ ಈ ಗೊಂಬೆಗಳನ್ನು ಕುಣಿಸಲಾಗುತ್ತಿತ್ತು. ಗೊಂಬೆಗಳು ಒಂದು ಅಡಿಯಷ್ಟು ಮಾತ್ರ ಎತ್ತರವಾಗಿದ್ದು, ವಿವಿಧ ವೇಷಭೂಷಣಗಳಿಂದ ಪ್ರೇಕ್ಷಕರ ಮನಸ್ಸನ್ನು ಸೆಳೆದುಕೊಳ್ಳುವಂತಿರುತ್ತಿದ್ದವು. ದಾಸಯ್ಯ, ನಟಿ, ಜಟ್ಟಿ, ವ್ಯಾಪಾರಿ ಮುಂತಾದ ಅನೇಕ ಬಗೆಯ ಜೀವನದ ವಿವಿಧ ಕ್ಷೇತ್ರಗಳನ್ನು ಪ್ರತಿನಿಧಿಸುವ ಗೊಂಬೆಗಳು ಈ ಗುಂಪಿನಲ್ಲಿ ಇರುತ್ತವೆ. ಈ ಗೊಂಬೆಗಳಿಗೆ ಅನುಕೂಲವಾಗುವಂಥ ಸಣ್ಣ ರಂಗಮಂಚದ ಕೆಳಗೆ ಕಲಾವಿದರು ಸೇರಿಕೊಂಡು ಅವುಗಳನ್ನು ಕುಣಿಸುವುದರಿಂದ, ಗೊಂಬೆಗಳು ತಾವೇ ಕುಣಿಯುತ್ತಿವೆ ಎಂಬ ಅನುಭವ ಬಂದು ಪ್ರೇಕ್ಷಕರಲ್ಲಿ ಆಶ್ಚರ್ಯ ಆನಂದಗಳು ಉಂಟಾಗುತ್ತವೆ.

ಕೀಲುಗೊಂಬೆಯಾಟದ ತಂಡಗಳು ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಅಜ್ಞಾತವಾಗಿ

ಉಳಿಸಬೇಕು. ಅವುಗಳ ಶೋಧ ಇನ್ನೂ ನಡೆಯಬೇಕಾಗಿದೆ. ಹೊನ್ನವಳ್ಳಿಯ ತಂಡದ ಅಪೂರ್ವ ಕೀಲುಗೊಂಬೆಗಳು ಈಗ ಮೈಸೂರು ವಿಶ್ವವಿದ್ಯಾನಿಲಯದ ಜಾನಪದ ವಸ್ತು ಸಂಗ್ರಹಾಲಯದಲ್ಲಿವೆ. ಇಂಥ ಅಪರೂಪದ ಕಲೆಯೊಂದು ಕಣ್ಮರೆಯಾಗಿ ಹೋಗಿರುವುದು ನಮ್ಮ ಕಲಾಪ್ರಪಂಚ ದೊಡ್ಡ ನಷ್ಟವನ್ನು ಅನುಭವಿಸಿದಂತೆ.

ನಮ್ಮ ಜನಪದ ನೃತ್ಯಗಳ ಬಗೆಗೆ ಈಗ ಸಾಕಷ್ಟು ಅಧ್ಯಯನ ನಡೆದಿದೆ. ಇನ್ನೂ ವಿವರವಾದ ಅಧ್ಯಯನದ ಅವಶ್ಯಕತೆಯಿದ್ದರೂ ಕರ್ನಾಟಕದ ವೈವಿಧ್ಯಪೂರ್ಣವಾದ ಜನಪದ ಕಲೆಗಳ ವ್ಯಾಪಕತೆಯನ್ನು ಈಗ ಗುರುತಿಸಬಹುದಾಗಿದೆ. ಇನ್ನೂರಕ್ಕೂ ಹೆಚ್ಚು ಜನಪದ ಕಲೆಗಳು ಈಗ ಬೆಳಕಿಗೆ ಬಂದಿವೆ. ಸಾಹಿತ್ಯ ಪರಿಷತ್ತು ಪ್ರಕಟಿಸಿರುವ 'ಕರ್ನಾಟಕ ಜನಪದ ಕಲೆಗಳು' ಕನ್ನಡ ನಾಡಿನ ಜನಪದ ಕಲೆಗಳನ್ನು ಕುರಿತ ಒಂದು ಉತ್ತಮ ಗ್ರಂಥವಾದರೂ ಇನ್ನೂ ಹೆಚ್ಚು ವಿವರಗಳೊಡನೆ ಪರಿಷ್ಕಾರವಾಗಿ ಇದನ್ನು ಪ್ರಕಟಿಸುವ ಸಾಧ್ಯತೆ ಇದೆ. ಕಲಾತಂಡಗಳ ಪೂರ್ಣ ವಿಳಾಸಗಳನ್ನು ಪ್ರಕಟಿಸುವುದು ಅತ್ಯವಶ್ಯಕವಾಗಿದೆ. ಏಕೆಂದರೆ ಮುಂದಿನ ಅಧ್ಯಯನವನ್ನು ನಡೆಸುವವರಿಗೆ ಇದರಿಂದ ಹೆಚ್ಚು ಸಹಕಾರಿಯಾಗುತ್ತದೆ. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವಿಶ್ವಕೋಶದಲ್ಲಿಯೂ ಅನೇಕ ಜನಪದ ಕಲೆಗಳ ಬಗ್ಗೆ 'ಪ್ರವೇಶ'ಗಳನ್ನು ಅಳವಡಿಸಲಾಗಿದೆ.

ಕರ್ನಾಟಕದ ಜನಪದ ಮೇಳಗಳನ್ನು ಕುರಿತಂತೆಯೂ ಈಗ ವಿವರವಾದ ಅಧ್ಯಯನ ನಡೆದಿದೆ. ಅನೇಕ ಜನಪದ ಕಲಾವಿದರು ವೇಷಭೂಷಣಗಳೊಡನೆ ತಮ್ಮ ಸಂಪ್ರದಾಯದ ವಾದ್ಯವನ್ನು ಹಿಡಿದು, ಆಹ್ವಾನಿತ ಸ್ಥಳದಲ್ಲಿ ಜನಪದ ಕಾವ್ಯಗಳನ್ನು ಹಾಡುತ್ತಾರೆ. ಕೆಲವೆಡೆ ಅಭಿನಯಿಸುತ್ತಾರೆ. ಕೆಲವೆಡೆ ಹಾಡು, ಮಾತುಗಾರಿಕೆಯ ಜೊತೆಗೆ ನೃತ್ಯವೂ ಇರುತ್ತದೆ. ಒಂದೊಂದು ವೃತ್ತಿಗಾಯಕ ತಂಡವೂ ಒಂದೊಂದು ಜನಪದ ಮೇಳ, ಕಂಸಾಳೆ ಮೇಳ, ನೀಲಗಾರರ ಮೇಳ, ಜುಂಜಪ್ಪನ ಮೇಳ, ಗೊರವರ ಮೇಳ, ಭಾಗವಂತಿಕೆ ಮೇಳ, ಅಂಟಿಕೆ ಪಂಟಿಕೆ ಮೇಳ, ಸೋಬಾನೆ ಮೇಳ, ದೊಂಬಿದಾಸರ ಮೇಳ, ತಂಬೂರಿಯವರ ಮೇಳ, ತೆಲುಗು ಜಂಗಮರ ಮೇಳ, ಗೊಂದಲಿಗರ ಮೇಳ, ಗೀಗೀ ಮೇಳ, ಕಲ್ಲಿ–ತುರಾಮೇಳ, ಕರಪಾಲ ಮೇಳ, ಭೂತಕೋಲದ ಮೇಳ, ಹೆಳವರ ಮೇಳ– ಹೀಗೆ ಅನೇಕ ವೈವಿಧ್ಯಮಯವಾದ ಜನಪದ ಗೀತಮೇಳಗಳು, ನಾಡಿನಾದ್ಯಂತ ಕಂಡುಬಂದಿವೆ. ಕನ್ನಡ ಅಧ್ಯಯನ ಸಂಸ್ಥೆಯ ಇತ್ತೀಚಿನ ಪರಿವೀಕ್ಷಣೆಯಲ್ಲಿ ಚೌಡಿಕೆ ಮೇಳದ ಲೌಕಿಕ ಸಂಪ್ರದಾಯವೊಂದನ್ನು ಗುರುತಿಸಲಾಗಿದೆ. ಇದೇ ಸಂಪ್ರದಾಯದಲ್ಲಿ ಟಕೂರಿ ವಾದ್ಯವನ್ನು ನುಡಿಸುತ್ತ ಮೇಳವನ್ನು ನಡೆಸುವ ಮತ್ತೊಂದು ಸಂಪ್ರದಾಯ ಬೆಳಕಿಗೆ ಬಂದಿದೆ. ಸುಡುಗಾಡು ಸಿದ್ಧರ ಮೇಳವೊಂದನ್ನು ಹೊಸದಾಗಿ ಶೋಧಿಸಲಾಗಿದೆ.

ಈ ಜನಪದ ಮೇಳಗಳ ಕಾವ್ಯಗಳನ್ನು ಸಂಗ್ರಹಿಸಿ ಸಂಪಾದಿಸುವಂತೆಯೇ, ಮೇಳಗಳ ಸಂಪಾದನಕ್ರಿಯೆಯನ್ನೂ, ಕಲಾತ್ಮಕತೆಯನ್ನೂ ಕುರಿತು ಹೆಚ್ಚು ಅಧ್ಯಯನ ನಡೆಯಬೇಕಾಗಿದೆ. ಅವುಗಳ ಧಾರ್ಮಿಕ ಹಿನ್ನೆಲೆ, ಸಾಮಾಜಿಕ ಹಿನ್ನೆಲೆ, ಸಾಹಿತ್ಯಿಕ ಹಿನ್ನೆಲೆಗಳನ್ನೂ ಅಭ್ಯಸಿಸುವುದು ಅಗತ್ಯವಾಗಿದೆ.

ಮೇಲಿನ ಪ್ರಮುಖ ಕಲೆಗಳ ಜೊತೆಗೆ ಇನ್ನೂ ಅನೇಕ ಕಲೆಗಳು ಸಂಶೋಧಕರ ಹಾದಿಯನ್ನು ನಿರೀಕ್ಷಿಸಿ ನಿಂತಿವೆ. ಜನಪದ ಮನರಂಜಕರಾದ ಹಾವಾಡಿಗರು, ಕೋತಿ ಕುಣಿಸುವವರು, ಕೋಲೆಬಸವನವರು, ಕರಡಿ ಕುಣಿಸುವವರು ಮುಂತಾದವರ ಬಗ್ಗೆ ನಮ್ಮಲ್ಲಿ ಅಧ್ಯಯನ ನಡೆದಿಲ್ಲ. ಗರಡಿ ಮನೆಗಳ ಬಗೆಗೆ, ಕುಸ್ತಿ ಕಲೆಯ ಬಗೆಗೆ ನಮ್ಮ ದೃಷ್ಟಿ ಇನ್ನೂ ಹರಿದಿಲ್ಲ. ದೊಂಬರು, ಮೋಡಿಯವರು ಇವರೆಲ್ಲ ಈಗ ವಿರಳವಾಗುತ್ತಿದ್ದಾರೆ. ಕಂಚಿಯ ಗೊಲ್ಲರ ಮೋಡಿಯ ಕಲೆ ರೋಮಾಂಚನಕಾರಿಯಾದುದು. ಎರಡು ತಂಡಗಳು ಸೇರಿ ಹಾವು, ಚೇಳು, ಜಿಂಕೆ, ನೀರುಗಳನ್ನು ಸೃಷ್ಟಿಸಿ ಜನರನ್ನು ದಂಗುಬಡಿಸುತ್ತಿದ್ದ ದಿನಗಳು ಈಗ ದೂರ ವಾಗಿವೆ. ದೊಂಬರ ಗಣೆಯ ಆಟ, ಇತರ ರೀತಿಯ ಕಸರತ್ತುಗಳು ಕಣ್ಮರೆಯಾಗುತ್ತಿವೆ. ಇಂಥ ಪ್ರಾಚೀನ ಕಲೆಗಳನ್ನು ಉಳಿಸಿಕೊಳ್ಳಲು ಸಾಧ್ಯವಾಗದಿದ್ದರೆ ಹಿರಿಯ ತಲೆಮಾರಿನ ವ್ಯಕ್ತಿಗಳನ್ನು ಸಂದರ್ಶಿಸಿ ಆಯಾ ಸಂಪ್ರದಾಯಗಳ ಬಗ್ಗೆ ಪೂರ್ಣ ಮಾಹಿತಿಗಳನ್ನು ಕಲೆಹಾಕಿ, ಅಧ್ಯಯನ ಮಾಡುವುದು ಅಗತ್ಯವಾಗಿದೆ.

ಕರ್ನಾಟಕ ಜಾನಪದ ವೈವಿಧ್ಯಪೂರ್ಣವಾದುದು, ಶ್ರೀಮಂತವಾದುದು ಎಂಬುದನ್ನು ಮೇಲಿನ ಪರಿಶೀಲನೆಯಿಂದ ಅರಿಯಬಹುದಾಗಿದೆ. ಜಾನಪದ ಸಂಪತ್ತನ್ನು ಸರಿಯಾಗಿ ಗುರುತಿಸಿ, ಅಧ್ಯಯನ ಮಾಡದಿದ್ದರೆ, ಯಾವುದೇ ಸಾಂಸ್ಕೃತಿಕ ಅಧ್ಯಯನ ಅಪೂರ್ಣವಾಗುತ್ತದೆ. ಅಪಾರ ಜನಪದ ಕಥೆಗಳು, ಕಾವ್ಯಗಳು, ಗೀತೆಗಳು, ಕಲೆಗಳು, ನಂಬಿಕೆಗಳು, ಸಂಪ್ರದಾಯಗಳು, ಕ್ರೀಡೆಗಳು ಮುಂತಾದವುಗಳ ಕ್ರಮವಾದ ಸಂಗ್ರಹ, ವರ್ಗೀಕರಣ ಮತ್ತು ಅಧ್ಯಯನಗಳು ದೊಡ್ಡ ಪ್ರಮಾಣದಲ್ಲಿ ನಡೆಯಬೇಕಾಗುತ್ತದೆ. ಶಾಸ್ತ್ರೀಯವಾದ ಜಾನಪದದ ಅಧ್ಯಯನ ಕರ್ನಾಟಕದಲ್ಲಿ ಈಗ ಆರಂಭವಾಗಿರುವುದರಿಂದ ಒಳ್ಳೆಯ ಶಿಕ್ಷಣವನ್ನು ಪಡೆದ ತರುಣಪೀಳಿಗೆಯ ಉತ್ಸಾಹಿಗಳನ್ನು ಈ ಕಾರ್ಯದಲ್ಲಿ ನಿಯೋಜಿಸಬಹುದಾಗಿದೆ. ವಿಶ್ವವಿದ್ಯಾನಿಲಯಗಳ ಅಧ್ಯಯನದ ಜೊತೆಗೆ ಸಂಗ್ರಹ, ಧ್ವನಿಮುದ್ರಣ, ಚಲನಚಿತ್ರೀಕರಣ, ಸಂಪಾದನೆ, ಪ್ರಕಟಣೆ, ವಸ್ತುಸಂಗ್ರಹಾಲಯಗಳ ಬೆಳವಣಿಗೆ, ಕಲಾಮೇಳಗಳ ವ್ಯವಸ್ಥೆ ಮುಂತಾದ ಚಟುವಟಿಕೆಗಳನ್ನೊಳ ಗೊಂಡ ಹೆಚ್ಚು ಪ್ರಾದೇಶಿಕ ಜಾನಪದ ಅಧ್ಯಯನ ಕೇಂದ್ರಗಳು ಸ್ಥಾಪನೆಗೊಂಡು ಈ ಕಾರ್ಯ ಇಮ್ಮಡಿಯಾಗಿ, ಮುಮ್ಮಡಿಯಾಗಿ ನಾಲ್ಮಡಿಯಾಗಿ ನಡೆಯಬೇಕಾಗಿದೆ. ನಾಡಿನ ಎಲ್ಲ ಸಂಸ್ಕೃತಿಪ್ರಿಯರೂ ಈ ನಿಟ್ಟಿನಲ್ಲಿ ಆಲೋಚಿಸಬೇಕಾದುದು ಅಗತ್ಯವಾಗಿದೆ.

❑

ಜಾನಪದ ಅಧ್ಯಯನ – ಸಮಕಾಲೀನ

■ ಪ್ರೊ. ಎ.ವಿ. ನಾವಡ

ಜಾನಪದ ನಮಗಿಂದು ಹಳ್ಳಿಯ ಹಾಡಾಗಿ ಉಳಿದಿಲ್ಲ; ಜನಪ್ರಿಯ ಪಳೆಯುಳಿಕೆಯೂ ಅಲ್ಲ. ಗ್ರಾಮೀಣ ಪ್ರದೇಶದ, ಅನಕ್ಷರಸ್ಥ ಸಮುದಾಯದ ನಡುವೆ ಬದುಕಿ ಉಳಿದಿರುವ ಹಾಡು, ಕುಣಿತ, ಪ್ರದರ್ಶನ, ಹಳೆಯ ಪಳೆಯ ಸರಕು ಸರಂಜಾಮುಗಳ ದಾಖಲಾತಿ ಸಂಗ್ರಹವಾಗಿಯಷ್ಟೇ ಉಳಿದಿಲ್ಲ. ಸಂಸ್ಕೃತಿಯೊಂದು ಸ್ಥಿರ ಬಿಂದುವಲ್ಲ. ಅದು ನಿರಂತರ ಸಾಗುತ್ತಿರುವ ಪ್ರವಾಹ ಎಂಬುದನ್ನು ಒಪ್ಪಿಕೊಂಡು ನಮ್ಮ ಅಧ್ಯಯನ ಸಾಗಿ ಬರುತ್ತಿರುವುದರಿಂದ ಜಾನಪದದ ಬಗೆಗಿನ ಪರಿಭಾವನೆ ಇದೀಗ ಬದಲಾಗಿದೆ. ಇಂದಿನ ಆಧುನಿಕ ವೈಜ್ಞಾನಿಕ ತಾಂತ್ರಿಕತೆ ತಂದ ಸಮಾಜದಲ್ಲಿ ಜಾನಪದ ಹುಟ್ಟುವ ಮೂಲ ಹಿಂದಿನಷ್ಟು ಸಮೃದ್ಧ ಅಲ್ಲದೆ ಹೋಗಬಹುದು. ಆದರೆ ಬದಲಾದ ಸಂದರ್ಭದಲ್ಲಿ ಜಾನಪದ ಇದ್ದೇ ಇರುತ್ತದೆ. ನಿನ್ನೆಯ ರೂಪದಲ್ಲಿ ಅಲ್ಲ, ಇಂದಿನ ಕಾಲಕ್ಕೆ ತಕ್ಕಂತೆ ಹೊಸ ರೂಪದಲ್ಲಿ. ಜಾನಪದ ವಿಕಾಸಶೀಲ ಅಧ್ಯಯನದ ರೂಪದಲ್ಲಿ ಬೆಳೆಯುತ್ತಿರುವ ಜ್ಞಾನಶಾಖೆಯಾಗಿರುವುದರಿಂದ ಪಾರಂಪರಿಕ ತಿಳಿವಳಿಕೆಗಳು ಹೊಸ ಆಕಾರ ಪಡೆದು ಕೊಳ್ಳುತ್ತಿವೆ. ಪ್ರಸ್ತುತ ಬದುಕಿಗೆ ಸಲ್ಲದ ನೇತ್ಯಾತ್ಮಕ ಅಂಶಗಳು ಅಧ್ಯಯನದಲ್ಲಿ ಸೋಸಿಕೆಗೆ ಒಳಗಾಗಿ, ಸಲ್ಲುವ ಅಂಶಗಳು ಮಾತ್ರ ಬದುಕಿ ಉಳಿಯುತ್ತಿವೆ. ಅಂದರೆ ಇಂದು ಜಾನಪದ ವಿಜ್ಞಾನ ಶಾಖೆಯಲ್ಲಿ ಮಾಹಿತಿಗಳ ಸಂಗ್ರಹ, ಪಠ್ಯಗಳ ವಿಶ್ಲೇಷಣೆಯ ಕೆಲಸವಷ್ಟೇ ನಡೆಯುತ್ತಿಲ್ಲ. ಸಮಕಾಲೀನ ಬದುಕಿನಲ್ಲಿ ಅದರ ಕಾರ್ಯ ಹಾಗೂ ಪ್ರಸ್ತುತತೆಯನ್ನು ಶೋಧಿಸುತ್ತ ಅದರ ಚಲನಶೀಲತೆಯನ್ನು ಮನ್ನಿಸುತ್ತ ಅದು

ತೋರುವ ಬದುಕಿನ ಎಲ್ಲ ಬಹುತ್ವಗಳನ್ನು ಒಪ್ಪಿಕೊಳ್ಳುತ್ತ ಅಧ್ಯಯನ ಸಾಗಿಬರುತ್ತಿದೆ. ಜಾನಪದ ಇಂದು ಸಾಹಿತ್ಯ ವಿಭಾಗದೊಳಗೆ ಕೋಣೀಕರಣದ ಶಾಸ್ತ್ರ ಶಾಖೆಯಾಗಿ ಉಳಿಯದೆ ಅಂತರ್‌ಶಾಸ್ತ್ರೀಯ ಅಧ್ಯಯನಕ್ಕೆ ಒಳಗಾಗಿ ಬಹು ಆಯಾಮವನ್ನು, ಶಾಸ್ತ್ರ ನಿಖರತೆಯನ್ನು ಪಡೆದುಕೊಳ್ಳುತ್ತಿದೆ. ಶಿಷ್ಟ – ಜಾನಪದ, ಅಕ್ಷರ–ಮೌಖಿಕ ಇಂತಹ ದ್ವೈಧಗಳ ಬಿರುಕು ಅದೃಶ್ಯಗೊಳ್ಳುತ್ತ ಜಾನಪದ ಹೊಸ ನಿರ್ವಚನವನ್ನು ಕಂಡುಕೊಳ್ಳುತ್ತಿದೆ. ಬುಡಕಟ್ಟು ಅಭಿವೃದ್ಧಿ, ಪರಿಸರ ಅಧ್ಯಯನ, ಮೌಖಿಕ ಚರಿತ್ರೆ, ಆಹಾರ ಪೋಷಣೆ, ವೈದ್ಯ ಪದ್ಧತಿ ಮುಂತಾದ ಅನ್ವಯಿತ ಕ್ಷೇತ್ರಗಳಲ್ಲಿ ಜಾನಪದದ ಬಳಕೆ ತುಂಬ ಕುತೂಹಲಕರ ಫಲಿತವನ್ನು ತರುತ್ತಿದೆ.

ನಾನು ಈ ಇಂದಿನ ಉಪನ್ಯಾಸದಲ್ಲಿ ವರ್ತಮಾನದ ಜಾನಪದ ಅಧ್ಯಯನ ಪಡೆದುಕೊಂಡಿರುವ ಹೊಸ ಆಯಾಮ ಹಾಗೂ ತಲುಪಬೇಕಾದ ಕೆಲವೊಂದು ನೆಲೆಗಳನ್ನು ಚರ್ಚಿಸ ಬಯಸುತ್ತೇನೆ. ಇಲ್ಲಿ ನಾನು ಕಾಲಾನುಪೂರ್ವಿಯಾಗಿ ಜಾನಪದದ ವಿವಿಧ ಪ್ರಕಾರಗಳಲ್ಲಿ ಪ್ರಕಟವಾಗಿರುವ ಗ್ರಂಥಗಳ ಸುತ್ತ ನನ್ನ ಚರ್ಚೆಯನ್ನು ಬೆಳೆಸುತ್ತಿಲ್ಲ. ಸಾಗುವ ಹಾದಿ ಹಾಗೂ ಪ್ರಕಟಿಸಿದ ಪ್ರವೃತ್ತಿಗಳನ್ನು ಗಮನಿಸುವಾಗ ಪೂರಕವಾಗಿ ಕೆಲವೊಂದು ಗ್ರಂಥಗಳನ್ನು ಬರೆಯಬಹುದು ಅಷ್ಟೆ.

ನಮ್ಮ ಜಾನಪದ ಶೋಧನೆ ಅಧ್ಯಯನ ಈಗ ನಿರ್ಣಾಯಕ ಹಂತವನ್ನು ತಲುಪಿದೆ. ನಮ್ಮ ಹಿಂದಣ ಹಿರಿಯ ಸಂಶೋಧಕರಾದ ಹಲಸಂಗಿ ಗೆಳೆಯರು ಡಾ. ಗದ್ದಗಿ ಮಠ, ಡಾ. ದೇಜಗೌ, ಡಾ. ಜೀಶಂಪ, ಡಾ. ರಾಮಾನುಜಂ, ಕ.ರಾ.ಕೃ., ಮತಿಘಟ್ಟ, ನಾಗೇಗೌಡ, ಡಾ. ಎಲ್.ಆರ್. ಹೆಗಡೆ ಮುಂತಾದವರು ಅಪಾರ ಪ್ರಮಾಣದ ಸಾಮಗ್ರಿಗಳನ್ನು ಒದಗಿಸಿದ್ದಾರೆ. ತಮ್ಮ ಕಾಲಕ್ಕೆ ಲಭ್ಯವಿದ್ದ ಪರಿಕರಗಳನ್ನು ಬಳಸಿಕೊಂಡು, ವಿಶ್ಲೇಷಣೆ ವ್ಯಾಖ್ಯಾನಗಳನ್ನು ಮಾಡಿದ್ದಾರೆ. ನಮ್ಮ ಕಾಲದ ವಿದ್ವಾಂಸರು ಅವರು ತಲುಪಿದ ನೆಲೆಯಿಂದ ಮುಂದೆ ಹೋಗಬೇಕು. ಅಜ್ಜನ ಹೆಗಲ ಮೇಲೆ ಕುಳಿತ ಮೊಮ್ಮಗನಂತೆ ಹೆಚ್ಚು ದೂರವನ್ನು ತನ್ನ ಕಣ್ಣಳಿಕೆಗೆ ತಂದುಕೊಳ್ಳಬೇಕು. ಇದೀಗ ಈಗಾಗಲೇ ಪರಿವೀಕ್ಷಣೆ ನಡೆದ ಒಂದೊಂದು ಪ್ರಕಾರವನ್ನು ಕುರಿತು ಬದಲಾದ ಕಾಲ ದೇಶ ಸಂದರ್ಭಗಳಲ್ಲಿ ಮರು ಅಧ್ಯಯನಕ್ಕೆ ಅವಕಾಶವಿದೆ. ಇಂತಹ ಮರುಶೋಧನೆಯಲ್ಲಿ ನಮ್ಮ ಪ್ರಯತ್ನ ಸಾಗಬೇಕಾಗಿದೆ.

೬೦ರ ದಶಕದಿಂದಾಚೆಗೆ ಕನ್ನಡ ಜಾನಪದ ಸಂದರ್ಭದಲ್ಲಿ ಸಂಗ್ರಹಗಳಿಗೆ ಜೀಕುಗಾಲ. ೧೯೬೦ ರಿಂದ ೧೯೯೦ ಕಾಲದ 'ಸುಗ್ಗಿ'ಯಲ್ಲಿ ಏನು ಸಂಗ್ರಹಿಸಲಾಯಿತೋ ಅವುಗಳೇ ನಮಗಿಂದು ಬಹುತೇಕ ಆಧಾರ ಪಾಠ. ತುಳು ಪಾಡ್ದನಗಳ ಅಧ್ಯಯನ ನಡೆಸಲು ನಮಗಿರುವ ಪಠ್ಯ ಕಳೆದು ಶತಮಾನದಲ್ಲಿ ಮ್ಯಾನರ್ ಸಂಗ್ರಹಿಸಿದ್ದು, ಜುಂಜಪ್ಪನ ಬಗೆಗೆ ಅಧ್ಯಯನ ನಡೆದಿದ್ದರೂ (ಡಾ.ಜೀ.ಶಂ.ಪ. ತೀ.ನಂ. ಶಂಕರನಾರಾಯಣ) ಜುಂಜಪ್ಪ ಕಾವ್ಯದ ಪೂರ್ಣಪಠ್ಯ ನಮಗಿಂದು ದೊರಕುತ್ತಿಲ್ಲ. ಸಂಗ್ರಹದ ವೈಧಾನಿಕತೆಯ ಬಗ್ಗೆ ತಕರಾರು ಇದ್ದರೂ ಡಾ.ಪಿ.ಕೆ. ರಾಜಶೇಖರರ ಮಲೆಯಮಾದೇಶ್ವರ ಕಾವ್ಯವೇ ಕನ್ನಡ ಜಾನಪದ ವಿದ್ವಾಂಸರಿಗೆ ಇರುವ ಏಕೈಕ ಪಠ್ಯ. ಆದರೆ ನಮಗಿಂದು ತಿಳಿದಂತೆ ಮಲೆಮಾದೇಶ್ವರ, ಮಂಟೇಸ್ವಾಮಿಗಳಂತಹ ಜನಪದ ಕಾವ್ಯಗಳನ್ನು ವಿವಿಧ ಸಂಪ್ರದಾಯಗಳಲ್ಲಿ ಸಂಗ್ರಹಿಸಿದಾಗ ವಿಭಿನ್ನ ಪಠ್ಯಗಳು

ಮೊರೆಯುವ ಸಾಧ್ಯತೆ ಇದೆ. ಆದರೆ ನಮ್ಮ ಮನಸ್ಥಿತಿ ಹೀಗಿದೆಯೆಂದರೆ ಒಂದು ಕಾವ್ಯವನ್ನು ಒಟ್ಟಿಗೆ ಸಂಗ್ರಹ ಮಾಡಿದರೆ ಮುಗಿಯಿತು. ಮತ್ತೆ ಸಂಗ್ರಹ ಮಾಡುವುದರಲ್ಲಿ ಏನಿದೆ ಎಂಬುದು. ಆದರೆ ಬಹುರೂಪಿಯಾದ ಜಾನಪದವನ್ನು ಬಹುಪಠ್ಯಗಳ ಆಧಾರದ ಮೇಲೆಯೇ ಅರ್ಥೈಸಬೇಕಾಗಿದೆ. ಈ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗದ ಪ್ರೊ. ಹಿ.ಚಿ. ಬೋರಲಿಂಗಯ್ಯನವರ ನೇತೃತ್ವದಲ್ಲಿ ತುಳುವನ್ನು ಒಳಗೊಂಡಂತೆ ೧೦೦ ಜನಪದ ಕಾವ್ಯಗಳನ್ನು ಸಂಗ್ರಹಿಸಿ ಪ್ರಕಟಿಸಲಿರುವುದು ಸ್ವಾಗತಾರ್ಹ ಉಪಕ್ರಮ. ಅಧ್ಯಯನ ವಿಶ್ಲೇಷಣೆಗಳು ಪ್ರಮುಖವಾಗುತ್ತಿರುವ ಈ ದಿನಗಳಲ್ಲಿ ಸಂಗ್ರಹ ಎರಡನೆಯ ದರ್ಜೆಯದೆಂದು ಪರಿಭಾವಿಸಲಾಗುತ್ತಿದೆ. ಮೌಖಿಕ ಪರಂಪರೆಯ ಜಾನಪದದ ಸಂದರ್ಭದಲ್ಲಿ ಸಂಗ್ರಹ ಕೂಡಾ ಅಷ್ಟೇ ಮುಖ್ಯವಾದುದು. ಕಳೆದ ಐದು ವರ್ಷಗಳಿಂದ ವರ್ಷಕ್ಕೆ ಒಂದೋ ಎರಡೋ ಸಂಗ್ರಹ ಗ್ರಂಥಗಳು ಮಾತ್ರ ಬರುತ್ತಿರುವುದು ಆಶ್ಚರ್ಯದ ಸಂಗತಿ. ಬರುತ್ತಿರುವ ಸಂಗ್ರಹಗಳು ಹಿಂದೆ ಮೈಸೂರು ಕರ್ನಾಟಕ-ಬೆಂಗಳೂರು ವಿಶ್ವವಿದ್ಯಾಲಯಗಳ ಪಂಡಿತರು ತಂದ ಗುಣ ಮತ್ತು ಪ್ರಮಾಣದಲ್ಲಿ ಬಾರದಿರುವುದು ವಿಷಾದದ ಸಂಗತಿ. ಜಾನಪದದ ಒರತೆ ಬತ್ತುತ್ತಿದೆ ಎನ್ನುವುದು ಇದಕ್ಕೆ ನೆಪ ಮಾತ್ರ. ಸುಲಭ ದಂಧೆಯಾಗಿ ಬರಿಯ ಪಠ್ಯವನ್ನಷ್ಟೇ ಸಂಗ್ರಹಿಸಿ ಪ್ರಕಟಿಸಿದರೆ ಅದೂ ಶಾಬ್ದಿಕ ಯಾರಿಗೆ ಉಪಯುಕ್ತ? ಪಠ್ಯವನ್ನು ಅರ್ಥೈಸುವಲ್ಲಿ ಕ್ಷೇತ್ರ ಕಾರ್ಯದಿಂದ ಸಂಪನ್ನವಾದ ವಿವರವಾದ ಸಂಕಲನವನ್ನು ಬೆಳಸಬೇಕಾದುದು ಸಂಗ್ರಾಹಕನ ಕರ್ತವ್ಯ. ಈ ಸಂದರ್ಭದಲ್ಲಿ ಡಾ.ಎನ್.ಆರ್. ನಾಯಕರ 'ಗ್ರಾಮಕ್ಕೊಲ ರಾಮಾಯಣ' ಗಮನಾರ್ಹ ಕೃತಿ.

ಜಾನಪದ ವಿಜ್ಞಾನವು ಪ್ರಾದೇಶಿಕ ಸಾಮಗ್ರಿಗಳನ್ನು ಬಳಸಿಕೊಂಡು ಅಧ್ಯಯನಕ್ಕೊಳಪಡಿಸುವುದಾದರೂ ಅದೊಂದು ಸಾರ್ವತ್ರಿಕ ಅಧ್ಯಯನ ಶಿಸ್ತಾಗಿ ರೂಪುಗೊಳ್ಳುತ್ತಿದೆ. ಹೀಗಾಗಿ ಬೇರೆ ಬೇರೆ ಸಿದ್ಧಾಂತಗಳ ಹಿನ್ನೆಲೆಯಲ್ಲಿ ನಮ್ಮ ಜಾನಪದವನ್ನು ಕಂಡುಕೊಳ್ಳುವ ಪ್ರಯತ್ನ ನಡೆಸಬೇಕಾಗಿದೆ. ದೇಶೀಯತೆಯ ಪ್ರತಿಪಾದಕರು ಪಾಶ್ಚಾತ್ಯ ಸಿದ್ಧಾಂತಗಳ ನೆಲೆಯಲ್ಲಿ ನಮ್ಮ ಜಾನಪದವನ್ನು ಅರ್ಥೈಸುವುದು ಸಾಧ್ಯವಾಗದೆಂದು ಪ್ರತಿಪಾದಿಸುತ್ತಾರೆ. ಆದರೆ ವಾಸ್ತವವಾಗಿ ಕನ್ನಡ ಜಾನಪದ ಸಾಹಿತ್ಯದ ವಿವರಣಾತ್ಮಕ ಧಾಟಿ ಬಿಟ್ಟು ವಿಶ್ಲೇಷಣಾ ಮಾದರಿ ಅಧ್ಯಯನ ವಿಧಾನದ ಸ್ವರೂಪ ಪಡೆದುಕೊಂಡುದು ಪಾಶ್ಚಾತ್ಯ ಸಿದ್ಧಾಂತಗಳ ಪರಿಚಯದೊಡನೆ ಎನ್ನುವುದನ್ನು ಗಮನಿಸಬೇಕು. ಸಿದ್ಧಾಂತ ಅಂದರೆ ಒಂದು ಅಧ್ಯಯನ ವಿಧಾನ ಅಥವಾ ಒಂದು ದೃಷ್ಟಿಕೋನ. ವಿಭಿನ್ನ ಸಿದ್ಧಾಂತಗಳಿಂದ – ದೃಷ್ಟಿಕೋನಗಳಿಂದ ಸಂಕಥನವನ್ನು ಆರಂಭಿಸುವುದು ಎಂದರೆ ಈವರೆಗೆ ಅದೃಶ್ಯವಾಗಿದ್ದ ಜಗತ್ತನ್ನು ಅನಾವರಣಗೊಳಿಸುವುದು. ಹೀಗಾಗಿ ಸೈದ್ಧಾಂತಿಕ ಅಧ್ಯಯನ ಜಾನಪದಕ್ಕೆ ಅಸ್ಪೃಶ್ಯವಲ್ಲ. ಇಲ್ಲಿ ನಮಗಿರಬೇಕಾದ ಎಚ್ಚರ ಅಂದರೆ ಪಾಶ್ಚಾತ್ಯ ಸಿದ್ಧಾಂತಗಳನ್ನು ಅಪ್ಪಿ ಮುಂದಿಟ್ಟುಕೊಂಡು ನಮ್ಮ ಮಾಹಿತಿಗಳನ್ನು ಆ ಚೌಕಟ್ಟಿಗೆ ಕೂರಿಸುವುದಲ್ಲ. ಸಿದ್ಧಾಂತದ ಹಿನ್ನೆಲೆಯಲ್ಲಿ ನಮ್ಮ ಮಾಹಿತಿಗಳ ಮೂಲಕ ಹೊರಟು ತೀರ್ಮಾನವನ್ನು ತಲುಪುವಂತಾಗಬೇಕು. ಇದರಿಂದ ಅನೇಕ ಸೂಕ್ಷ್ಮಾತಿ ಸೂಕ್ಷ್ಮ ಸಂಗತಿಗಳನ್ನು ಕಾಣುವುದು ಸಾಧ್ಯವಾಗುತ್ತದೆ.

ಈ ನೆಲೆಯಲ್ಲಿ ಡಾ. ಎಚ್.ಎಂ. ಮಹೇಶ್ವರಯ್ಯ ಮತ್ತು ಡಾ. ಮುರಿಗೆಪ್ಪ ಅವರು ಸಂಕಲಿಸಿದ 'ಜಾನಪದ ಹೊಸದೃಷ್ಟಿ' ಕನ್ನಡ ಜಾನಪದವನ್ನು ವಿವಿಧ ಸಿದ್ಧಾಂತಗಳ ದೃಷ್ಟಿಕೋನದಿಂದ ಅರ್ಥೈಸಿದ ಒಂದು ಗಂಭೀರ ಹೊಸಹೆಜ್ಜೆ. ಡಾ. ಪೀಟರ್ ಕ್ಲಾಸ್ ಅವರ ಮಾನವಶಾಸ್ತ್ರೀಯ ಅಧ್ಯಯನ ವಿಧಾನಗಳು, ಡಾ. ಅಂಬಳಿಕೆ ಹಿರಿಯಣ್ಣ ಅವರ 'ಸೈದ್ಧಾಂತಿಕ ಜಾನಪದ'ದಲ್ಲಿ ಹಾಗೂ ಡಾ. ತೀ.ನಂ. ರೂಢಿಸಿಕೊಟ್ಟ ಪಾಶ್ಚಾತ್ಯ ತತ್ವಸಿದ್ಧಾಂತಗಳ ವಿವರಗಳು, ಚಿಳಿಮಲೆಯವರು 'ಕರಾವಳಿ ಜಾನಪದ'ದಲ್ಲಿ ಬಳಸಿದ ವೈಧಾನಿಕತೆ, ಎ.ವಿ. ನಾವಡ ಅವರು 'ಜಾನಪದ ಸಮಾಲೋಚನೆ'ಯಲ್ಲಿ ಮಾಡಿದ ಸೈದ್ಧಾಂತಿಕ ಆನ್ವಯಿಕ ಅಧ್ಯಯನಗಳು, ಡಾ.ಎ.ಕೆ. ರಾಮಾನುಜನ್, ಡಾ.ಜಿ.ಎ.ವಿವೇಕ ರೈ, ಹಿ.ಶಿ. ರಾಮಚಂದ್ರೇಗೌಡ ಮತ್ತು ಡಾ. ವೀರಣ್ಣದಂಡೆಯವರ ಹೊಸ ಪ್ರಯತ್ನಗಳು, ಗಾಯತ್ರೀ ನಾವಡ ಸ್ತ್ರೀವಾದಿ ನೆಲೆಯಿಂದ ಜಾನಪದವನ್ನು ಅರ್ಥೈಸಿದ ಬಗೆಗಳು ಈ ಮಾದರಿಯವುಗಳು.

ಬದುಕಿನ ಉತ್ಪನ್ನವಾದ ಜಾನಪದವನ್ನು ಶಾಬ್ದಿಕ ಪಠ್ಯಕೇಂದ್ರಿತವಾಗಿ ಒಪ್ಪಿಕೊಂಡು ಅಧ್ಯಯನ ನಡೆಸುವುದರಿಂದ ತಲುಪುವ ತೀರ್ಮಾನಗಳು ಅಪರಿಪೂರ್ಣವಾಗುತ್ತವೆ. ಪ್ರಾದೇಶಿಕ ಸಾಂಸ್ಕೃತಿಕ ಅಂಶಗಳಿಂದ ನಿಬದ್ಧವಾಗಿರುವ ಜಾನಪದ ಸಾಮಗ್ರಿಯನ್ನು ವಿಶ್ವಾತ್ಮಕ ನೆಲೆಯಲ್ಲಿ ನಿಂತು ಒಂದು ಕಂಬಳಿಯಡಿಗೆ ತಂದು ಅರ್ಥೈಸುವುದು ಸಮಂಜಸವಲ್ಲ. ಜಾನಪದ ಅಧ್ಯಯನಕಾರ ಬರಿಯ ಆರಾಮಕುರ್ಚಿಯ ಓದುಗನಾಗದೆ ಒಬ್ಬ ಒಳ್ಳೆಯ ಕ್ಷೇತ್ರ ತಜ್ಞನೂ ಆಗಬೇಕಾಗುತ್ತದೆ. ಹೀಗಾಗಿ ಯಾವುದೇ ಜನಪದ ಸಂಗತಿಯನ್ನು ಪ್ರದರ್ಶನದ ಸಂದರ್ಭದಿಂದ ಬೇರೆಯಾಗಿಟ್ಟು ಪಠ್ಯಕೇಂದ್ರಿತವಾಗಿ ಅರ್ಥೈಸುವುದು ಎಂದರೆ ಜಾನಪದವನ್ನು ಅದರ ಹುಟ್ಟಿನಿಂದ ಬೇರೆಯಾಗಿಟ್ಟು ನೋಡುವುದೇ ಆಗಿದೆ. ಹೀಗಾದಾಗ ವಾಸ್ತವ ಸಂಗತಿ ಮತ್ತು ನಮ್ಮ ತೀರ್ಮಾನದ ಮಧ್ಯೆ ಒಂದು ಬಿರುಕು ಉಂಟಾಗುತ್ತದೆ. ಈ ಬಿರುಕನ್ನು ತುಂಬಲು ಬಹು ಕೋನದ ದಾಖಲಾತಿಯಲ್ಲಿ ಅದರ ಸಮಗ್ರತೆಯನ್ನು ಗ್ರಹಿಸಬೇಕಾಗಿದೆ. ನಾವಡ ದಂಪತಿಗಳ 'ಕಾಡ್ಯನಾಟ' ಇಂತಹ ಬಹುಕೋನದ ದಾಖಲಾತಿ ಯೋಚನೆಯಲ್ಲಿ ರೂಪುಗೊಂಡ ಕೃತಿ. ಅಂದರೆ ಜಾನಪದ ಸಾಮಗ್ರಿಯ ಶೋಧ ಪಠ್ಯ, ಪರಿವೀಕ್ಷಣೆ, ಸಂದರ್ಶನಗಳ ಬೃಹತ್ ಪಠ್ಯದ ನೆಲೆಯಲ್ಲಿ 'ಅರ್ಥ ಹುಡುಕುವ' ಪ್ರಕ್ರಿಯೆ ಆಗಬೇಕೇ ಹೊರತು ನಮ್ಮ ವಿದ್ವಾಂಸರ 'ಅರ್ಥ ಕಟ್ಟುವ' ಪ್ರವೃತ್ತಿ ಅಲ್ಲ. ಶಾಬ್ದಿಕ ಪಠ್ಯಕೇಂದ್ರಿತವಾಗಿ ಹೀಗೆ ಅರ್ಥ ಕಟ್ಟುವ ಪ್ರವೃತ್ತಿ ಜಾನಪದ ಸಾಮಗ್ರಿಯನ್ನು ಅಪವ್ಯಾಖ್ಯೆಗೆ ಗುರಿಪಡಿಸಬಹುದು ಹಾಗೂ ಆ ಸಮುದಾಯದ ಸಾಂಸ್ಕೃತಿಕ ಆಶಯವನ್ನು ಕೆಡವಬಹುದು. ಈ ಎಚ್ಚರ ಇಟ್ಟುಕೊಂಡೇ ಜಾನಪದ ವಿದ್ವಾಂಸನ ಶೋಧನೆ ನಡೆಯಬೇಕಾದ ಅಗತ್ಯವಿದೆ.

ಲಿಖಿತ ಸಾಹಿತ್ಯದಂತೆ ಮೌಖಿಕ ಪರಂಪರೆಯ ಜಾನಪದ ನಿರ್ದಿಷ್ಟ ಏಕರೂಪಿ ಪಠ್ಯ ಸ್ವರೂಪದ್ದಲ್ಲ; ಬಹುರೂಪಿ ಪಠ್ಯ ಉಳ್ಳದ್ದು. ಜನಪದ ಕತೆ, ಕಾವ್ಯಗಳು ಬಾಯಿಪಾಠದ ಮೂಲಕ ಚಿತ್ತರಗೊಳ್ಳುವ ಯಾಂತ್ರಿಕ ಪ್ರಕ್ರಿಯೆಯಲ್ಲ. ಅದು ಪ್ರದರ್ಶನದ ಸಂದರ್ಭದಲ್ಲಿ ಮೌಖಿಕವಾಗಿ ರಚಿತವಾಗುವ ಸೃಷ್ಟಿಕ್ರಿಯೆ. ಹೀಗಾಗಿ ಒಂದು ಜನಪದ ಪಠ್ಯವನ್ನು ಮುಂದಿಟ್ಟುಕೊಂಡು ಅಧ್ಯಯನ ನಡೆಸಿದಲ್ಲಿ ಅದರ ಬಹುರೂಪಿ ಆಯಾಮದ ಒಳಸತ್ವಗಳು

ನಮಗೆ ದಕ್ಕದೆ ಹೋಗಬಹುದು. ಜಾತಿ, ವರ್ಗ, ಲಿಂಗ, ಸಂದರ್ಭ ಭಿನ್ನತೆಗಳಿಂದಾಗಿ ಬಹುರೂಪದ ಬೃಹತ್ ಪಠ್ಯಗಳನ್ನು ಪಡೆಯಬಹುದಾದ ನಮ್ಮ ಸಾಮಾಜಿಕ ಸಂದರ್ಭದಲ್ಲಿ ಮತ್ತೆ ಮತ್ತೆ ಅಧ್ಯಯನಕ್ಕೆ ಅವಕಾಶವಿದೆ. ಡಾ.ಜೀ.ಶಂ.ಪ. ಅವರು ಗುರುತಿಸಿದ ಒಂದೊಂದು ವ್ಯಕ್ತಿನಾಯಕ ಸಂಪ್ರದಾಯದ ಮೇಲೆ ಮತ್ತೆ ಬದಲಾದ ಸಂದರ್ಭದಲ್ಲಿ ಹೊಸ ಶೋಧನೆಗೆ ಸಾಧ್ಯವಿದೆ. ಜಾನಪದ ಸಂಗತಿಯೊಂದನ್ನು ಬಹುಪಠ್ಯಗಳ ಪರಿಕಲ್ಪನೆಯಲ್ಲಿಟ್ಟು ನೋಡುವುದರಿಂದ ಆ ಬಹುಪಠ್ಯಗಳು ರೂಪುಗೊಳ್ಳುವ ತಾತ್ವಿಕ ಕಾರಣಗಳೇನು? ಇವುಗಳಿಗೆ ಪ್ರೇರಣೆ ನೀಡುವ ಸಂಗತಿಗಳು ಯಾವುವು? ಎಂಬುದನ್ನು ಕಂಡುಕೊಳ್ಳುವುದರ ಜೊತೆಗೆ ಸ್ಥಾಪಿತ ಗ್ರಹೀತಗಳನ್ನು ಮುರಿದು ಹೊಸ ಅರ್ಥ ವ್ಯಾಖ್ಯಾನ ಸಾಧ್ಯವಾಗುತ್ತದೆ. ಇಲ್ಲಿ ಕ್ಲಾಸ್ ಅವರು ಪೆರುಮಲೆ ಬಲ್ಲಾಳ ಪಾಡ್ದನಗಳ ಬಹು ಪಠ್ಯಗಳ ಅಧ್ಯಯನ, ಕೃಷ್ಣಮೂರ್ತಿ ಹನೂರರ 'ಕತ್ತಾಲ ದಾರಿ ದೂರ'ದ ಸ್ತ್ರೀ ಬಲಿದಾನಕ್ಕೆ ಸಂಬಂಧಿಸಿದ ಬಹುಪಠ್ಯಗಳು, ಎ.ವಿ. ನಾವಡ ಅವರ ಮೂಕಜ್ಜಿಯವರ 'ಇರುಳು ಗಣ್ಣಿನ ನಾಗಪ್ಪಯ್ಯ' ಕತೆಯ ಬಹುಸಂದರ್ಭೀಯ ಪಠ್ಯಗಳು, ಬಿಳಿಮಲೆ ಪುರುಷೋತ್ತಮರ 'ಬಾಳೆಮೀನು-ಮುಗುಡು ಮೀನು' ಕತೆಯ ಬಹುಪಠ್ಯಗಳ ಅಧ್ಯಯನಗಳು ಜಾನಪದದ ಸಂಗತಿಯ ರೂಪ, ಸೂತ್ರ ಹಾಗೂ ವಸ್ತುಗಳ ಭಿನ್ನತೆಯನ್ನು ಗುರುತಿಸುವ ಹಾಗೂ ಪಠ್ಯವೊಂದು ಭಿನ್ನ ಸ್ವರೂಪವನ್ನು ಪಡೆದುಕೊಳ್ಳುವ ತಾತ್ವಿಕತೆಯ ಹುಡುಕಾಟ ನಡೆಸಿವೆ. ಗಾಯತ್ರಿ ನಾವಡ ಅವರು ಬಂಧುತ್ವ ವ್ಯವಸ್ಥೆಯು ಜನಪದ ಪಠ್ಯವೊಂದನ್ನು ನಿಯಂತ್ರಿಸುವ ಪ್ರಧಾನ ಅಂಶವಾಗುತ್ತದೆ ಎನ್ನುವ ತಾರ್ಕಿಕತೆಯಲ್ಲಿ ಕೆರೆಗೆಹಾರದ ಮಾತೃರೂಪಿ ಹಾಗೂ ಪಿತೃರೂಪಿ ಸಂಸ್ಕೃತಿಯ ೫ ಪಠ್ಯಗಳನ್ನು ಇಟ್ಟುಕೊಂಡು ನಡೆಸಿದ ಬದಲಿ ಓದಿಕೆ ಈವರೆಗೆ ಸ್ಥಾಪಿತವಾಗಿದ್ದ 'ಕೆರೆಗೆ ಹಾರ' ಹೆಣ್ಣಿನ ಬಲಿದಾನ ಎನ್ನುವ ಸತ್ಯವನ್ನು ಒಡೆದು ಹೆಣ್ಣಿನ ಬಲಿ ಎನ್ನುವುದನ್ನು ಶೋಧಿಸಿದೆ.

ಜಾನಪದ ಅಧ್ಯಯನಕ್ಕೆ ಒತ್ತು ಹೆಚ್ಚಾಗುತ್ತಿದ್ದಂತೆ ಅಧ್ಯಯನಕಾರ ಮುಖ್ಯವಾಗಿ ಜಾನಪದದ ಉತ್ಪಾದಕರನ್ನು, ಕಲಾಕಾರರನ್ನು ನೇಪಥ್ಯಕ್ಕೆ ತಳ್ಳಲಾಗುತ್ತಿದೆ. ವಕ್ತೃಗಳನ್ನು ಕ್ಯಾಮೆರಾ, ಟೇಪ್‌ರೆಕಾರ್ಡರುಗಳಂತೆ ಬರಿಯ ಯಾಂತ್ರಿಕ ಉಪಕರಣವಾಗಿ ಬಳಸಿಕೊಳ್ಳಲಾಗುತ್ತಿದ್ದು ಅಧ್ಯಯನದಲ್ಲಿ ಜನಪದರ ವ್ಯಾಖ್ಯಾನ ಮತ್ತು ಅವರ ಬದುಕಿನ ವಿವರಗಳನ್ನು ಕೈ ಬಿಡಲಾಗುತ್ತಿದೆ. ಇದರಿಂದ ಜನಪದರ ಬದುಕಿಗೂ ಅವರ ಉತ್ಪನ್ನಕ್ಕೂ ಇದ್ದ ನಂಟು ದಾಖಲೆಯಿಂದ ಮರೆಯಾಗಿ ಅಧ್ಯಯನವು ಪಾರ್ಶ್ವಿಕವಾಗುತ್ತದೆ. ಬಹುರಾಷ್ಟ್ರೀಯ ಕಂಪೆನಿಗಳು ತೃತೀಯ ಜಗತ್ತಿನ ನೆಲದ ಮೇಲೆ ಪಡೆಯುವ ಅಧಿಕಾರ ಸ್ವಾಮ್ಯಕ್ಕೂ ಇದಕ್ಕೂ ರಾಚನಿಕವಾಗಿ ಯಾವ ವ್ಯತ್ಯಾಸವಿಲ್ಲ. ಜಾನಪದ ಕಲಾ ಇತಿಹಾಸವನ್ನು ಕಟ್ಟಿಕೊಳ್ಳುವಲ್ಲಿ ಜನಪದ ಕಲಾವಿದರ ಜೀವನ ಚರಿತ್ರೆ ಬಹಳ ಮಹತ್ವದ ಮತ್ತು ಅಗತ್ಯದ ಆಕರವಾಗಬಲ್ಲುದು. ಈ ನಿಟ್ಟಿನಲ್ಲಿ ಈಚೆಗೆ ಕೆಲವು ಪ್ರಯತ್ನಗಳಾಗಿರುವುದು ಗಮನಾರ್ಹ. ಯಕ್ಷಗಾನ ಕಲಾವಿದ ಕೆರೆಮನೆ ಶಿವರಾಮ ಹೆಗಡೆಯವರ ಆತ್ಮಚರಿತ್ರೆ (ಸಂ.ಜಿ.ಎಸ್. ಭಟ್ಟ), ಗೊಂಬೆಯಾಟ ಪರಂಪರೆಯ ಕೊಗ್ಗ ಕಾಮತರ ಕಲಾಕುಟುಂಬದ ಇತಿಹಾಸ (ಭಾಸ್ಕರ ಕಾಮತ್), ಯಕ್ಷಗಾನ ಕಲಾವಿದ ವೀರಭದ್ರ ನಾಯ್ಕರ ಜೀವನ ಚರಿತ್ರೆ (ಸುಬ್ಬಣ್ಣಭಟ್ಟ), ಕೌಜಲಗಿ ನಿಂಗವ್ವರ ಜೀವನಚರಿತ್ರೆ

(ಡಾ. ಶ್ರೀಕೃಷ್ಣ ಇಟ್ಟಣ್ಣನವರ)ಗಳು. ಶ್ರೇಣೀಕರಣಗೊಂಡ ನಮ್ಮ ಸಾಮಾಜಿಕ ಸಂರಚನೆಯಲ್ಲಿ ಎಲ್ಲ ಜ್ಞಾನಶಾಖೆಗಳು, ಅಧ್ಯಯನಗಳು, ಪ್ರಧಾನ ಸಂಸ್ಕೃತಿಯ ಪೋಷಕ ಸಾಮಗ್ರಿಗಳಾಗಿ ಬಂದಿದ್ದು ಅದನ್ನೇ ಸತ್ಯ ಎಂದು ಸ್ಥಾಪಿಸಿಕೊಂಡು ಬರಲಾಗಿದೆ. ಇದೀಗ ಪರ್ಯಾಯ ಚಿಂತನೆಯ ಅಧ್ಯಯನ ದೃಷ್ಟಿ ಮೊಳೆತಿದ್ದು ಪ್ರಧಾನರಚನೆಗಳು ಹೂಳಲಾಗಿದ್ದ ಸಮುದಾಯದ ಬದುಕನ್ನು ಕಾಣುವ ಪ್ರಯತ್ನ ನಡೆದಿದೆ. ಈ ಬಗೆಯ ಪರ್ಯಾಯ ಚಿಂತನದ ಕಟ್ಟುವಿಕೆಯಲ್ಲಿ ಜಾನಪದ ಒಂದು ಮಹತ್ವದ ಪಾತ್ರ ವಹಿಸಬಲ್ಲದು ಎನ್ನುವ ಅರಿವಿನಲ್ಲಿ ಜಾನಪದವನ್ನು ಆಕರವಾಗಿ ಬಳಸಿಕೊಂಡುದು ದಾಖಲಿಸಬೇಕಾದ ಸಮಾಚಾರ. ನಾವು ಕಲಿತ ಇತಿಹಾಸ ರಾಜಮಹಾರಾಜರ ವೀರ ಸಾಹಸ ದಾನಗಳ ವೈಭವ ವಿವರಗಳಾಗಿದ್ದು ಏಮ್ಮುಖವಾಗಿವೆ. ಈ ಆಳರಸರ ಜತೆಯಲ್ಲೆ ಬದುಕಿನ ಜನಸಮುದಾಯದ ಬದುಕಿಗೆ ಕ್ರಿಯಾಚಟುವಟಿಕೆಗಳೇನು? ಅವರ ಲೋಕದೃಷ್ಟಿ ಏನಿತ್ತು ಎನ್ನುವ ಬಗೆಗೆ ಈ ಇತಿಹಾಸ ಮೌನತಾಳುತ್ತದೆ. ಇತಿಹಾಸದ ರಾಜಕಾರಣ ಮರೆಗೆ ತಳ್ಳಿದ ಜನರ ಬದುಕಿನ ಹುಡುಕಾಟದ ಮೂಲಕ ಪರ್ಯಾಯ ಲೋಕವನ್ನು ಅನಾವರಣಗೊಳಿಸಬಹುದು; ಹೊಸ ಚರಿತ್ರೆ ಕಟ್ಟಬಹುದು.

ಈ ನೆಲೆಯಲ್ಲಿ ಮಾನವಶಾಸ್ತ್ರಜ್ಞರಾದ ಎಸ್.ಪಿ. ಶಂಕರನಾರಾಯಣ ರಾವ್ ಅವರ 'ಪಣಿಯರವರ ಸಮಾಜ ಮತ್ತು ಜಾನಪದ ಇತಿಹಾಸ' ಒಂದು ಮಾದರಿ ಅಧ್ಯಯನ ಕೃತಿ. ನೆಲೆತಪ್ಪಿದ ಬುಡಕಟ್ಟು ಬದುಕಿಗೆ ಆಸರೆ ಒದಗಿಸುವ ಯೋಜನೆಗಳು ಅವರ ಜೀವನದ ವಿಧಾನವನ್ನು ರೂಪಿಸುವಲ್ಲಿ ಅವರಲ್ಲಿನ ಮೌಖಿಕ ಪರಂಪರೆಯ ಇತಿಹಾಸವನ್ನು ಹೇಗೆ ಬಳಸಿಕೊಳ್ಳಬಹುದು ಎನ್ನುವ ಆಲೋಚನೆಯನ್ನು ಇಲ್ಲಿಯ ವಿಶ್ಲೇಷಣೆ ಮುಂದಿಟ್ಟಿದೆ. ಚರಿತ್ರೆ ಇಲ್ಲವೆಂದಿದ್ದ ಜನಾಂಗವೊಂದು ಚರಿತ್ರೆ ಕಟ್ಟಿಕೊಳ್ಳುವ ಈ ಬಗೆ ವಿಶಿಷ್ಟವಾದದ್ದು. ಇಲ್ಲಿಯೇ ಹೇಳಬೇಕಾದ ಇನ್ನೊಂದು ಅಧ್ಯಯನ ಗ್ರಂಥ 'ಹಂಪಿ ಜಾನಪದ'. ಲಿಖಿತ ಇತಿಹಾಸ 'ಭೂಮಂಡಲಾಧಿಪತಿ' ಎಂದು ಹೊಗಳಿ ಹಾಡಿದರೆ ಮೌಖಿಕ ಇತಿಹಾಸ ಅವನ ಬಗೆಗೆ ತೀರಾ ಮೌನ ತಾಳಿದೆ. ತಮ್ಮ ಬದುಕಿಗೆ ಹತ್ತಿರವಾದ ಆಪ್ತನಾದ ಕುಮಾರ ರಾಮನ ಬಗೆಗೆ ಅದಕ್ಕೆ ಒಲವು. ಈ ಸ್ಥಿತಿಯಲ್ಲಿ ಇತಿಹಾಸದ ಮರುರಚನೆಗೆ ಮೌಖಿಕ ಇತಿಹಾಸವನ್ನು ಮಣಿಸಿಕೊಳ್ಳಬೇಕಾಗಿದೆ.

ದೇಶೀಯ ಚಿಂತನೆ ಬೆಳೆಯುತ್ತಿರುವ ಈ ಸಂದರ್ಭದಲ್ಲಿ ಭಾರತೀಯ ಸ್ತ್ರೀವಾದದ ತಾತ್ವಿಕತೆಯನ್ನು ರೂಪಿಸಿಕೊಳ್ಳುವುದು ತುರ್ತಿನ ಕೆಲಸ. ನಮ್ಮ ಸಾಂಸ್ಕೃತಿಕ ಬಹುರೂಪತೆಯೊಳಗೆ ಪಶ್ಚಿಮದಂತೆ ಹೆಣ್ಣು ಲಿಂಗ ಪ್ರಭೇದದ ನೆಲೆಯಲ್ಲಿ ಬದಲಾವಣೆಗೆ ಒಳಗಾದರೂ ಆ ಪುರುಷಾಧಿಕಾರದ ಒಳಗಡೆಯೇ ತನ್ನದೇ ಗೂಡು ಕಟ್ಟಿ ತನ್ನತನವನ್ನು ಪ್ರಕಟಿಸಿದ್ದಾಳೆ. ಹಾಗಾಗಿ ಪಶ್ಚಿಮದ ಪ್ರತಿರೋಧದ ದೃಷ್ಟಿಗಿಂತ ಭಿನ್ನವಾಗಿ ಹೆಣ್ಣು ಶಕ್ತಿಯ ಸ್ವಾಯತ್ತ ಇತಿಹಾಸವನ್ನು ಕಟ್ಟಿಕೊಳ್ಳಬೇಕಾಗಿದೆ. ಅಕ್ಷರ ಲೋಕ ಪ್ರಕಟಿಸಿದ ಹೆಣ್ಣಿನ ಅದೃಶ್ಯತೆಗೆ ಬದಲಾಗಿ ಮೌಖಿಕ ಪರಂಪರೆಯ ಜಗತ್ತು ಹೆಣ್ಣಿನ ಅಸ್ತಿತ್ವವನ್ನು ಸ್ಥಾಪಿಸಿದೆ. ಜಾನಪದ ಮಹಿಳಾ ಭಾಷೆ, ಮಹಿಳಾ ಪಠ್ಯಗಳ ಅಧ್ಯಯನ ಮಾಹಿತಿಗಳು ಹೆಣ್ಣು ಪುರುಷ ಲೋಕವನ್ನು ಪ್ರತಿಗ್ರಹ

ಕಂಗಾಲುಗೊಳಿಸಿದ ಬಗೆಯಾಗಿದೆ. ಮೌಖಿಕ ಪರಂಪರೆಯ ಮೂಲಕ ಭಾರತೀಯ ಸ್ತ್ರೀವಾದವನ್ನು ಕಟ್ಟುವ ಪ್ರಕ್ರಿಯೆಯಾಗಿ ಡಾ.ಎ.ಕೆ. ರಾಮಾನುಜನ್, ಡಾ.ಡಿ.ಆರ್. ನಾಗರಾಜ, ಮನುಚಕ್ರವರ್ತಿಯವರ ಬರಹಗಳು ಬಂದಿವೆ. ಕರಾವಳಿಯ ಮಾತೃರೂಪೀ ಸಂಸ್ಕೃತಿಯ ಹಿನ್ನೆಲೆಯಲ್ಲಿ ಜನಪದ ಸಾಹಿತ್ಯ ಪ್ರಕಟಿಸಿದ ಇತ್ಯಾತ್ಮಕ ಸ್ತ್ರೀ ಮಾದರಿಗಳ ಮೂಲಕ ಭಾರತೀಯ ಸ್ತ್ರೀವಾದದ ತಾತ್ವಿಕತೆಯನ್ನು ರೂಪಿಸಿದ ಗಾಯತ್ರೀ ನಾವಡ ಅವರ ಹಲವು ಬರಹಗಳು ಈ ನಿಟ್ಟಿನಲ್ಲಿ ಜಾನಪದವನ್ನು ಆಕರವಾಗಿ ಬಳಸಿದ ಬಗೆ ಗಮನಾರ್ಹವಾದುದು.

ಈ ಆಶಯದಲ್ಲೇ ನಡೆದ ಪ್ರತಿ ಸಂಸ್ಕೃತಿ ನೆಲೆಯ ಅಧ್ಯಯನಗಳನ್ನು ನೆನೆಯಬೇಕಾಗಿದೆ. ಈ ಸಂದರ್ಭದಲ್ಲಿ ಶ್ರೀಎಸ್.ಜಿ. ಸಿದ್ಧರಾಮಯ್ಯ ಅವರ 'ಯಡಗುಂಟೆ ಗೆಣೆಸಾಲು' ಕೃತಿಯು ವರ್ಗ ಸಂಘರ್ಷದ ಹಿನ್ನೆಲೆಯಲ್ಲಿ ಜಾನಪದವನ್ನು ವಿಶ್ಲೇಷಿಸಲು ಪ್ರಯತ್ನಿಸಿದೆ. ಹಿ.ಚಿ. ಬೋರಲಿಂಗಯ್ಯನವರ 'ಕಾಡು ಕಾಂಕ್ರೀಟು ಜಾನಪದ' ಬುಡಕಟ್ಟು ಸಂಸ್ಕೃತಿ ಮತ್ತು ನೆಲದ ಸಂಬಂಧವನ್ನು ಹೊಸ ನೆಲೆಯಲ್ಲಿ ನಿರ್ವಹಿಸಿದ ಹೊಸ ಪ್ರಯತ್ನ. ಡಾ. ರಂಗಾರೆಡ್ಡಿ ಕೋಡಿರಾಂಪುರ ಅವರ 'ಬಂಡಾಯ ಜಾನಪದ' ಜಾನಪದವನ್ನು ಆಧುನಿಕ ಅರ್ಥದಲ್ಲಿ ಕಂಡುಕೊಂಡ, ಅಲ್ಲಿನ ಶೋಷಿತರ ಪ್ರತಿಭಟನೆಯ ಮಾದರಿಗಳನ್ನು ದಾಖಲಿಸಿದ ಪ್ರಯತ್ನವಾಗಿ ಮುಖ್ಯವಾಗುತ್ತವೆ.

ಕನ್ನಡದ ಸಂದರ್ಭದಲ್ಲಿ ಜಾನಪದವನ್ನು ಕುರಿತಂತೆ ಪಿಎಚ್.ಡಿ., ಮಹಾಪ್ರಬಂಧಗಳ ಸುಗ್ಗಿಯ ಕಾಲ ಇದು. ಯಾವುದಾದರೊಂದು ಜಾತಿ ಅಥವಾ ಬುಡಕಟ್ಟನ್ನು ಆಯ್ದುಕೊಂಡು ಜನಾಂಗಿಕ/ಜಾನಪದೀಯ ಅಧ್ಯಯನ ಮಾಡುವುದು ಸುಲಭ, ಜನಪ್ರಿಯ ವಿಧಾನವಾಗಿದೆ. ಜನಾಂಗ, ಸಮುದಾಯ, ಜನವರ್ಗ ಮುಂತಾದ ಮಾನವಶಾಸ್ತ್ರೀಯ ಪರಿಭಾಷೆಗಳ ಸೂಕ್ಷ್ಮ ಕಲ್ಪನೆಯಿಲ್ಲದೆ ಇಂತಹ ಮಹಾಪ್ರಬಂಧಗಳ ದಂಡೇ ಜಾನಪದ ಲೋಕದಲ್ಲಿ ಧಾಪಿಸಿ ಬರುತ್ತಿದೆ. ಸಂಶೋಧನೆಯ ಸೂಕ್ಷ್ಮ ಒಳನೋಟವಿಲ್ಲದೆ ಬರಿಯ ಮಾಹಿತಿಯ ಸಿದ್ಧ ಮಾದರಿಯಲ್ಲಿ ರೂಪುಗೊಳ್ಳುತ್ತಿರುವ ಇಂತಹ ಅಧ್ಯಯನಗಳು ಅನ್ಯಶಿಸ್ತೀಯರ ಕಣ್ಣಲ್ಲಿ ಅಪಹಾಸ್ಯಕ್ಕೆ ಈಡಾಗುತ್ತಿವೆ. ಈ ದಿಸೆಯಲ್ಲಿ ಡಾ. ಕಾಳೇಗೌಡರ 'ಕಾಡುಗೊಲ್ಲರು: ಒಂದು ಹಟ್ಟಿಯ ಅಧ್ಯಯನ', ಡಾ.ತೀ.ನಂ. ಶಂಕರನಾರಾಯಣರ 'ಕಾಡುಗೊಲ್ಲರ ನಂಬಿಕೆ ಮತ್ತು ಸಂಪ್ರದಾಯಗಳು,' ಡಾ. ಅಂಬಳಿಕೆ ಹಿರಿಯಣ್ಣರ 'ಮಲೆನಾಡ ಒಕ್ಕಲಿಗರು ಮತ್ತು ಅವರ ಜಾನಪದ', ಡಾ. ಚಿನ್ನಪ್ಪ ಗೌಡರ 'ಭೂತಾರಾಧನೆ- ಒಂದು ಜಾನಪದೀಯ ಅಧ್ಯಯನ', ಡಾ. ವಿವೇಕರೈ ಅವರ 'ತುಳು ಜನಪದ ಸಾಹಿತ್ಯ', ಡಾ. ಅಭಯಕುಮಾರರ 'ಮುಗ್ಗೇರರ ಜನಪದ ಕುಣಿತಗಳು', ಡಾ.ಡಿ.ಕೆ. ರಾಜೇಂದ್ರರ 'ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ', ಡಾ. ಶ್ರೀರಾಮ ಇಟ್ಟಣ್ಣನವರ 'ಶ್ರೀ ಕೃಷ್ಣ ಪಾರಿಜಾತ – ಒಂದು ಅಧ್ಯಯನ', ಡಾ. ಗಾಯತ್ರೀ ನಾವಡರ 'ಕರಾವಳಿ ಜಾನಪದದಲ್ಲಿ ಸ್ತ್ರೀವಾದಿ ನೆಲೆಗಳು', ಡಾ. ಕಮಲಾ ಹೆಮ್ಮಿಗೆ ಅವರ 'ದೇವದಾಸಿ ಪರಂಪರೆ – ಒಂದು ಜಾನಪದೀಯ ಅಧ್ಯಯನ', ಡಾ. ಶ್ರೀಕಂಠಕೂಡಿಗೆ ಅವರ 'ಕನ್ನಡ ಲಾವಣಿಗಳು' – ಕೆಲವು ಮುಖ್ಯ ಪಿಎಚ್.ಡಿ. ಸಂಶೋಧನ ಪ್ರಬಂಧಗಳು.

ಒಂದು ಕಾಲಕ್ಕೆ ಜಾನಪದರ ವಿಶಾಲ ಭಿತ್ತಿಯಲ್ಲಿ ಅಧ್ಯಯನ ಚಿತ್ತಾರ ಬಿಡಿಸುತ್ತಿದ್ದ ನಮ್ಮ ವಿದ್ವಾಂಸರು ಸೂಕ್ಷ್ಮ ಅಧ್ಯಯನದತ್ತ ಆಕರ್ಷಿತರಾಗಿರುವುದು ಸಂತಸದ ಸಂಗತಿ. ಪ್ರಾದೇಶಿಕ ವಸ್ತು- ಸಂಗತಿಗಳಲ್ಲಿ ಸೂಕ್ಷ್ಮ ಅಧ್ಯಯನಗಳಿಂದ ಅಧ್ಯಯನಕ್ಕೊಂದು ತಾತ್ವಿಕತೆ, ನಿಖರತೆ ತರುವುದು ಸಾಧ್ಯವಾಗುತ್ತದೆ. ಗ್ರಾಮ, ಹಳ್ಳಿ, ಗ್ರಾಮದೇವತೆ ಅಥವಾ ವಿಷಯನಿಷ್ಠ ಜಾನಪದ ಅಧ್ಯಯನ ಮಾದರಿಯವು. ಆದರೆ ನಮ್ಮಲ್ಲಿನ ಬಹುತೇಕ ಅಧ್ಯಯನಗಳು ಸಾಂದ್ರತೆಯನ್ನು ಕಳೆದುಕೊಂಡು ವಿವರಗಳ ಮೇಲು ನೆಲೆಯಲ್ಲೇ ನಿಂತುಬಿಟ್ಟಿವೆ. ಸೂಕ್ಷ್ಮ ಅಧ್ಯಯನದ ಒಳ್ಳೆಯ ಮಾದರಿಯೆಂದರೆ ಡಾ. ವಾಮನ ನಂದಾವರರ 'ತುಳುನಾಡಿನ ಅವಳಿ ವೀರರು ಕೋಟಿಚೆನ್ನಯ್ಯ', ಡಾ. ಚೆನ್ನಣ್ಣ ವಾಲೀಕಾರರ 'ಹೈದ್ರಾಬಾದ್ ಕರ್ನಾಟಕದ ಗ್ರಾಮದೇವತೆಗಳು', ಡಾ. ಗೋವಿಂದರಾಜು ಅವರ 'ಚೆನ್ನಾದೇವಿ ಅಗ್ರಹಾರ', ಡಾ. ಪದ್ಮಪ್ರಸಾದರ 'ಮಳೆ – ಒಂದು ಜಾನಪದೀಯ ಅಧ್ಯಯನ' – ವಿಶೇಷವಾಗಿ ಗಮನಿಸಬೇಕಾದ ಕೃತಿಗಳು.

ಸಮಕಾಲೀನ ಜಾನಪದ ಅಧ್ಯಯನವನ್ನು ಒಟ್ಟು ಗ್ರಹಿಸಿ ಹೇಳುವುದಾದರೆ ಮೂರು ನೆಲೆಗಳಲ್ಲಿ ಗುರುತಿಸಬಹುದು.

೧. ಸಾಹಿತ್ಯಕ ದೃಷ್ಟಿಕೋನವನ್ನು ಮೀರಿ ಮಾನವಿಕ ವಿಜ್ಞಾನದ ಸೈದ್ಧಾಂತಿಕತೆಯನ್ನು ಪಡೆದುಕೊಂಡುದು.

೨. ಜಾನಪದ ಒಂದು ಅಧ್ಯಯನ ಶಿಸ್ತಾಗಿ ಸ್ಥಾಪಿಸಿಕೊಂಡು ಅಂತರ್ ಶಾಸ್ತ್ರೀಯ ಅಧ್ಯಯನಕ್ಕೆ ಒಳಪಟ್ಟುದು.

೩. ಅನ್ಯ ಶಾಸ್ತ್ರೀಯ ಅಧ್ಯಯನಕ್ಕೆ ಜಾನಪದ ಆಕರವಾಗಿ ಬಳಕೆಗೊಂಡು ಹೊಸ ಸಂಕಥನವನ್ನು ಆರಂಭಿಸಿದುದು.
ಉದಾ : ಮೌಖಿಕ ಚರಿತ್ರೆ ಇತ್ಯಾದಿ.

❑

ವರ್ಣ-ಜಾತಿ ಮತ್ತು ಲೋಕದೃಷ್ಟಿ :

(ಒಂದು ಜಾನಪದೀಯ ಚಿಂತನೆ)

■ರಾಜೇಗೌಡ ಹೊಸಹಳ್ಳಿ

ಭೂಃಭುವಃಸುವಃ ಎಂಬುದು ಜಗತ್ತಿನ ಎರಡು ಸಂಪ್ರದಾಯಗಳನ್ನು ಹೇಳುತ್ತದೆ. ಒಂದು ಪ್ರಕೃತಿಮೂಲ ಮತ್ತೊಂದು ಪುರುಷಮೂಲ. ಪ್ರಕೃತಿಯ ಸಂಸ್ಕೃತಿಯನ್ನು ಅಂತರ್ಗತಗೊಳಿಸುತ್ತ ಹೋಗುವಲ್ಲಿ ಪುರುಷನನ್ನು ಅವುಂಚಿ ಕೊಳ್ಳಲು ವಿಫಲವಾಗುತ್ತದೆ. ಆಗ ಪುರುಷ ಸಫಲ ನಾಗುತ್ತಾನೆ. ಸಫಲರಾದವರು ವಿಫಲರಾದವರನ್ನು ಬ್ರಮಾತ್ಮೀಕರಣಕ್ಕೆ ತಳ್ಳಿಬಿಡುತ್ತಾರೆ. ಈಗ ಭುವನ ದೃಷ್ಟಿಯಲ್ಲಿ ಸ್ತ್ರೀ ಪುರುಷರಿಗೆಲ್ಲಾ ಸಮಾನ ಸ್ಥಾನ. ಕರಿಯ ಬಿಳಿಯರಿ ಗೆಲ್ಲಾ ಸಮಾನವಾದ ಸ್ಥಾನ. ಮೇಲುಕೀಳುಗಳಿಗೆಲ್ಲಾ ಸಮಾನ ಸ್ಥಾನ: ಇದು ಸಂಪೂರ್ಣ ದಕ್ಕಿದೆಯೆಂದಲ್ಲ. ದಕ್ಕುವ ಹಾದಿಯಲ್ಲಿದೆ. ಈ ಹಾದಿಯಲ್ಲಿ ಆಗಿಹೋದ ಅವಮಾನಗಳೆಷ್ಟು! ತಡೆದುಕೊಂಡಿದ್ದಂತಹ ತಾಳ್ಮೆ ಎಂತಹದು! ಭೂ : ಅರ್ಥಾತ್ ಪ್ರಕೃತಿಯನ್ನು ಅಪ್ಪಿಕೊಂಡಿದ್ದ ಬಂಧು ಸಮಾಜವು ಲೋಕದಲ್ಲೆಲ್ಲಾ ವರ್ಗ ಮತ್ತು ವರ್ಣತತ್ವದಲ್ಲಿ ನಲುಗಿರುವುದು ಸ್ಪಷ್ಟ. ನಮ್ಮ ಭಾರತೀಯ ಮೂಲದಲ್ಲಂತೂ ಸುವ ಅರ್ಥಾತ್ ಅಗ್ನಿ ಸಂಪನ್ನರು ಧಗಧಗನೆಯ ಕೆಂಡದೋಪಾದಿಯಲ್ಲಿ ಬೆದರಿಸಿ ಇಡೀ ಬಂಧುಸಮಾಜವನ್ನು ದೂರ ಓಡಿಸಿದರೆ ಹತ್ತಿರ ಬರಲಾರಂಭಿಸಿದಾಗ ಜಾತಿ ವಿಂಗಡಣೆಯಲ್ಲಿ ಹಟ್ಟಿಯಲ್ಲಿ ಕೂರಿಸಿ ಗುಕ್ಕು ಎಸೆದಿರುವುದು ಸ್ಪಷ್ಟ. ಆ ಗುಕ್ಕನ್ನು ಹೊಟ್ಟೆಪಾಡಿಗಾಗಿ ತಿನ್ನುತ್ತ ಬಂದ ಸಮಾಜವು ಎಂದೂ ತಮ್ಮ ಕಥೆಕಾವ್ಯಗಳಲ್ಲಿ ದ್ವಿಸಮಾಜವನ್ನು ಪ್ರತಿನಿಧಿಸಲೇ ಇಲ್ಲ ಎಂಬಲ್ಲಿ ಆಂತರಿಕ ತೀರ್ಪು ಸ್ಪಷ್ಟವಾಗುತ್ತದೆ. ಒಂದೂ ಎಂಬ ಏಕತತ್ವಕ್ಕೆ ಅಂಟಿಕೊಂಡಿರುವ ಸೂಚನೆಯಿಲ್ಲ. ಈ

ನಿಟ್ಟಿನಲ್ಲಿ ಇಲ್ಲಿನ ಜನಪದ ಸಮಾಜವು ಕೇವಲ ಹಿಂದೂಗಳಲ್ಲ, ಜನಪದರು ಭಾರತೀಯರು ಹೌದು.

ರಾಮಾಯಣದ ಕಥೆಯನ್ನು ಕೇಳಿದ ಜನಪದ ಸಮಾಜವು ತಮ್ಮ ಕಥೆಯನ್ನು ಸೀತಾಪರಿತ್ಯಾಗ ಎಂದು ಕರೆಯುತ್ತದೆ. ಕುಮಾರರಾಮನ ಕಥೆಯನ್ನು ಉಲ್ಲಾಸದಿಂದ ಹಾಡುತ್ತದೆ. ಕೆರೆಗೆ ಹಾರವಾದ ಕಥೆಗಳನ್ನು, ಸ್ಥಳೀಯ ನಾಯಕರನ್ನು, ಮೈಲಾರನನ್ನು ಮಾದಯ್ಯನನ್ನು ಸಿರಿಯ ಪಾಡ್ದನವನ್ನು ಜನಪದ ಕಥೆಯಲ್ಲಿ ಅಜ್ಜಿಯನ್ನು ಕಿರಿಯ ಮಗನನ್ನು ನಾಯಕ ನಾಯಕಿಯರನ್ನಾಗಿ ಚಿತ್ರಿಸುತ್ತದೆ. ಇದರರ್ಥವೇನು? ಶಿಷ್ಟಕಾವ್ಯಗಳ ಮತ್ತು ಅವರ ಸಂಸ್ಕೃತಿಯ ತಿರಸ್ಕಾರ. ಭಾರತೀಯ ಸಮಾಜವು ಹಿಂದೂವೆಂಬ ಪದವು ದಾಸ್ಯಸಂಕೇತವೆಂದು ಒಪ್ಪಿಕೊಂಡರೆ ಜನಪದ ಸಮಾಜವು ಎಂದೋ ಹಿಂದೂಗಳಿಂದ ವಿಭಜನೆ ಪಡೆದಿದೆ. ಸಿಂಧೂ ಬಯಲನ್ನು ಗದ್ದವರು ಈ ದೇಶ ಮತ್ತು ಸಂಸ್ಕೃತಿಯನ್ನು ದಾಸ್ಯ ಸಂಕೇತಗೊಳಿಸಿರುವುದು ಸ್ಪಷ್ಟ. ಈ ಗೆಲ್ಲುವಿಕೆಯ ಮಿದುಳು ಇಡೀ ಸಂಸ್ಕೃತಿಯನ್ನು ಸಹಾ ವರ್ಣತತ್ವದಲ್ಲಿ ಅಡಗಿಸಿಟ್ಟುಕೊಳ್ಳುವಾಗ ಅನೇಕ ಅತ್ಯಾಚಾರಗಳಾಗಿ ಹೋಗಿವೆ. ಅದು ಜಾತಿವಿಭೇದದಲ್ಲಿ ಆಗಿರಬಹುದು ಲಿಂಗ ವಿಭೇದದಲ್ಲಾಗಿರಬಹುದು. ಹರಪ್ಪಾ ಮೊಹೆಂಜೆದಾರೋ ಸಂಸ್ಕೃತಿಗಳಲ್ಲಿ ಈ ವಿಭಜನೆಗಳಾಗಿ ಕಾಣದಿರಲು ಕಾರಣ ಆ ಸಂಸ್ಕೃತಿಯು ಮಾತೃ ಸಂಸ್ಕೃತಿಯದಾಗಿತ್ತು ಎಂಬ ಅಂಶ. ಅನಂತರದಲ್ಲಿ ಮಾತೃ ಸಮಾಜವು ತನ್ನ ಒಡಲನ್ನು ಪಿತೃ ಸಮಾಜಕ್ಕೆ ಒಪ್ಪಿಸುವಾಗ ಒಂದು ಸಂಸ್ಕೃತಿಯ ಪ್ರಭಾವಳಿಯನ್ನು ಸೋತು ಒಪ್ಪಿಸಿತು. ಹೀಗೆ ಸೋತ ಸಮಾಜವು ತಾನು ಸೋಲುವುದರೊಡನೆ ತನ್ನ ಮಕ್ಕಳನ್ನೂ ಸೋತು ಒಪ್ಪಿಸಿತು. ಜನಪದರು ಮಾತೃ ಸಮಾಜದ ಮಕ್ಕಳು. ಜನಪದೇತರರು ಪಿತೃಸಮಾಜದ ಅಗ್ನಿಪುತ್ರರು. ಮಾತೃ ಸಮಾಜಕ್ಕೆ ಭಾರತೀಯ ಮೂಲದಲ್ಲಿ ಪ್ರಾಚೀನ ಪರಂಪರೆಯೊಂದಿತ್ತು. ಅದು ಆಸ್ಟ್ರೋಲಾಯಿಡ್ ಸಂಸ್ಕೃತಿಯ ವ್ಯಾಧ-ಬೇಡ-ಕಿರಾತ ಅಥವಾ ಆಳುವವರು ಕರೆದ ನಾಗ ಎಂಬ ಸಂಸ್ಕೃತಿ. ಅದರೊಡನೆ ದ್ರಾವಿಡ ಸಮಾಜವು ಹೊಂದಾಣಿಕೆಯಲ್ಲಿತ್ತು. ಅಂದು ಜಗತ್ತು ಲೋಕದೃಷ್ಟಿಯ ಪರಿಧಿಯೊಳಗೆ ಸಂಚರಿಸುತ್ತಿತ್ತು. ಸಮಯ ಅಥವಾ ಕಾಲವನ್ನು ಪರಿಗಣನೆಗೆ ತೆಗೆದುಕೊಳ್ಳದೆ ಆಲೋಚಿಸಿದರೆ ಲೋಕದಲ್ಲಿ ಚಂದ್ರ ಮತ್ತು ಸೂರ್ಯವೆಂದು ಕರೆಯುವ ಎರಡು ಸಂಸ್ಕೃತಿಗಳಿರುವುದನ್ನು ತಿಳಿಯಬಹುದು. ಒಂದು ಜಲಮೂಲದ್ದು ಮತ್ತೊಂದು ಅಗ್ನಿಮೂಲದ್ದು. ಒಂದು ನಾಗಲೀಲೆಯದು ಮತ್ತೊಂದು ಲಿಂಗಲೀಲೆಯದು. Continental drift ಎಂಬ ಥಿಯರಿಯ ಪ್ರಕಾರ ಭೂಮೂಲ ಸಂಸ್ಕೃತಿಗಲು ಒಂದಾಗಿದ್ದು ವಿಭಜಿತವಾದ್ದು ಒಂದು ಕ್ರಿಯೆ. Ice age ಮುಂತಾದ ಪ್ರಕೃತಿವಿಕೋಪದಿಂದ ಚಲನೆಗೊಂಡದ್ದು ಮತ್ತೊಂದು ಕ್ರಿಯೆ ಈ ಲೋಕದಲ್ಲಿ ನಡೆದುಹೋಗಿದೆ. ಆಫ್ರಿಕಾ ಮತ್ತು ಭಾರತ ಅಖಂಡವಾಗಿದ್ದವು, ಇದು ಒಂದು. ಮಧ್ಯಏಷಿಯಾದ ಇರಾಕ್ ಇರಾನ್‌ಗಳು ಹತ್ತಾರು ಸಾವಿರ ವರ್ಷಗಳಾಚೆಯಲ್ಲಿ ದಟ್ಟಕಾಡು ನದಿನೀರುಗಳಿಂದ ತುಂಬಿದ್ದವು ಎಂಬುದು ಮತ್ತೊಂದು. ಆಗ ದೂರ ಸರಿದ ಚಲಿಸಿದ ಸಂಸ್ಕೃತಿಗಳಲ್ಲಿ ಮೊದಲನೆಯದು ಚಲನೆಯಿಲ್ಲದ ಪ್ರಕೃತಿಮೂಲದ ಬೇಸಾಯ ಸಂಸ್ಕೃತಿಯನ್ನು ಪ್ರತಿನಿಧಿಸಿದರೆ, ಎರಡನೆಯದು ದನಕುರಿ ಕುದುರೆಗಳನ್ನು ನಡೆಸುತ್ತ

ಚಲಿಸಿದ ಪಿತೃಸಂಸ್ಕೃತಿ ಆರ್ಯ ಎಂಬ ಹೆಸರಿನಲ್ಲಿ ಭಾರತಕ್ಕೆ ಚಲಿಸುತ್ತದೆ. ಈ ವಲಸೆಯನ್ನು ಭಾರತ ಸಂಸ್ಕೃತಿಯು ಕರುಣೆಯಿಂದ ಆಹ್ವಾನಿಸಿದೆ. ಮಾತೃಸಮಾಜವು ಪಿತೃಸಮಾಜವನ್ನು ತನ್ನ ಒಡಲಲ್ಲಿ ಸೇರಿಸಿಕೊಂಡಾಗ ಅನೇಕ ಘರ್ಷಣೆಗಳಾಗದೆ ಇಲ್ಲ. ಆಗ ಪಿತೃಸಮಾಜವು ಆ ಘರ್ಷಣೆಯನ್ನು ಹುನ್ನಾರದಿಂದ ಗೆದ್ದಿದೆ. ಎರಡೂ ಸಮಾಜಗಳು ಬಂಧುಸಮಾಜಗಳನ್ನೆ ಪ್ರತಿನಿಧಿಸುತ್ತಿದ್ದ ಕಾರಣ ಅನೇಕ ರಾಜಿಗಳೂ ಆಗಿವೆ. ಆ ರಾಜಿ ಮನೋಭಾವದಲ್ಲಿ ಮಾತೃಸಂಸ್ಕೃತಿಯ ಪ್ರಕೃತಿಪೂಜೆಯನ್ನು ಗೌರಿದೇವಿಯೆಂದು 'ಗಣನಾಯಕ'ನನ್ನು ಗಣಪತಿ ದೇವರೆಂದು ಪೂಜಿಸುವುದರೊಡನೆ ಪ್ರಕೃತಿಯನ್ನು ಪುರುಷ ಸಂಸ್ಕೃತಿಯ ಶಮನಗೊಳಿಸಿರುವ ಸೂಚನೆಗಳಿವೆ.

ಹೀಗೆ ಒಪ್ಪಿಕೊಳ್ಳುತ್ತಲೇ ಶಕ್ತಿಮೂಲದೊಡನೆ ಸಮೀಕರಣಗೊಳ್ಳುತ್ತಲೇ ಶಕ್ತಿಮೂಲದ ರುದ್ರನನ್ನು ಅಗ್ನಿಮೂಲದ ಸೂರ್ಯನೊಡನೆ ಪ್ರತಿಸಮೀಕರಿಸಿ ತನ್ನ ಚಾಲಾಕಿತನವನ್ನು ಪಿತೃಸಮಾಜವು ಪ್ರದರ್ಶಿಸಿದೆ. ಇಂದ್ರನನ್ನು ಏರಿಸಿ ಜೀಳಿಸಿ, ವರುಣನನ್ನು ಏರಿಸಿಳಿಸುವುದರೊಡನೆ ತನ್ನ ಸಮಾಜದ ನಿರ್ಮಾಣ ಮಾಡಿಕೊಂಡ ಪಿತೃಸಮಾಜವು ಋಗ್ವೇದದ ಕಾಲಾನಂತರ ಜನಪದ ಸಮಾಜವನ್ನು ಗೋಜಲಾಗಿ ಮಾಡುವುದರೊಂದಿಗೆ ಒಂದೊಂದೇ ಸುಖದ ಮೆಟ್ಟಿಲನ್ನು ಹತ್ತುತ್ತಾ ಹೋಗಿಬಿಡುತ್ತದೆ. ಆ ಆಕಾಶಕ್ಕೆ ಏಣಿ ಹಾಕುವ ಕ್ರಿಯೆಯಲ್ಲಿ ಸೂರ್ಯನನ್ನು ಮುಟ್ಟಲುಹೋದ ವಾಯುಪುತ್ರ ದವಡೆ ಊದಿಸಿಕೊಳ್ಳುತ್ತಾನೆ. ಮೇನಕಾ ಪುತ್ರಿಯನ್ನು ಗಂಡನೇ ಮರೆಯುತ್ತಾನೆ. ರಂಭೆ ಊರ್ವಶಿಯರು ಸೂಳೆಯರಾಗಿ ಬಾಳುತ್ತಾರೆ. ಸರಸ್ವತಿ ನದಿಯು ತನ್ನ ಪಾತ್ರವನ್ನೇ ಕಳೆದುಕೊಂಡಂತೆ ಮೂಲ ಭಾರತೀಯ ತಳಿಗಳೊಡನೆ ಮಿಶ್ರವಾಗಿ ಸೊಗಸಾಗಿ ಬದುಕುತ್ತಿದ್ದ ದ್ರಾವಿಡ ಸಮಾಜವು ತನ್ನ ಪಾತ್ರವನ್ನು ದಕ್ಷಿಣ ಭಾರತದ ಕಡೆ ತಿರುಗಿಸಲಾರಂಭಿಸಿದ ಸೂಚನೆಗಳು ಸಿಗುತ್ತವೆ. ಕ್ರಿ.ಪೂ. ೧೫೦೦ರ ಹಿಂದೆ ಆಗಿರಬಹುದಾದ ಇಂಥಾ ಆರ್ಯ ವಲಸೆಯ ಧಾಳಿ ಬರಬರುತ್ತ ತಮ್ಮ ಮಿದುಳು ಮತ್ತು ತೋಳು ಬಲದಿಂದ ಮಣ್ಣಿನ ಮಕ್ಕಳನ್ನು ಹಿಂದೆ ದಬ್ಬಿ ಅವರನ್ನು ದಾಸರನ್ನಾಗಿ ಮಾಡಿಕೊಳ್ಳುತ್ತದೆ. ಈ ಆರ್ಯೀಕರಣವು ಸುಖವನ್ನರಸುವಾಗ ಮಾತೃಮೂಲದ ಸ್ತ್ರೀ ಸಮಾಜವನ್ನು ಎರಡೂ ಕೈಯಲ್ಲಿ ಬಾಚಿ ತನ್ನ ಒಡಲಲ್ಲಿ ಸೇರಿಸಿಕೊಂಡಾಗ ಸ್ತ್ರೀಕುಲವೇನು ಹಿಗ್ಗಿ ಹೀರೇಕಾಯಾಗಿಲ್ಲ. ತಮ್ಮ ಮಕ್ಕಳನ್ನು ಗಂಡಂದಿರನ್ನು ಪ್ರಾಕೃತಿಕ[illegible] ನೆನೆಸಿಕೊಂಡು ಅತ್ತು ಕೊರಗಿದೆ. ಈ ಕ್ರೂರತೆಯಲ್ಲಿ ಅಥವಾ ದಬ್ಬಾಳಿಕೆಯನ್ನು ನಾವು [illegible]ದೂಧರ್ಮವೆಂದು ಕರೆಯಬಹುದಷ್ಟೆ. "ಒಂದು ಕಾಲಕ್ಕೆ ಹಿಂದೂಧರ್ಮ ಪ್ರಚಾರಕವಾಗಿತ್ತೆಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಪ್ರಚಾರಕ ಧರ್ಮವಾಗಿಲ್ಲದಿದ್ದರೆ ಅದು ಭಾರತದಲ್ಲೆಲ್ಲಾ ಹಬ್ಬುತ್ತಿರಲಿಲ್ಲ" ಎಂಬ ಡಾ॥ ಅಂಬೇಡ್ಕರ್ ಅವರ ಮಾತು ಸತ್ಯದ್ದಾಗಿದೆ.

ಆರ್ಯರು ಭಾರತೀಯ ಮೂಲದವರು ಎಂಬ ಮಾತು ಹಿಂದೂ ಧರ್ಮದ ಬಗ್ಗೆ ಪ್ರೀತಿವಾತ್ಸಲ್ಯವುಳ್ಳ ಸ್ವಾಮಿ ವಿವೇಕಾನಂದರದು. ಇಲ್ಲಿನ ಜನರನ್ನು ಸೋ[illegible] ಆರ್ಯರು ಭಾರತಕ್ಕೆ ಬಂದರು ಎಂಬುದು ಯೂರೋಪಿನ ಜನರು ಹೇಳಿದ ಸುಳ್ಳೆಂದು ಗುಡು[illegible]ಗಿದ್ದಾರೆ. ಹಾಗಾದರೆ ಜಗತ್ತಿನ ಚರಿತ್ರೆಯನ್ನೆ ಬೇರೆಯದಾಗಿ ಬರೆಯಬೇಕಾಗುತ್ತದೆ. ಸಿಂಧೂ

ಸಂಸ್ಕೃತಿಯಂತೆ Knossos ಸಂಸ್ಕೃತಿಯು ಹಾಳಾಗಿರುವುದು ಸಹಾ ಚಾರಿತ್ರಕ ಸತ್ಯವಾಗಿದೆ. ಅದನ್ನೂ ಕೈಬಿಡಬೇಕಾಗುತ್ತದೆ. ಗ್ರೀಸ್, ರೋಂ, ಈಜಿಪ್ಟ್ ಮುಂತಾದ ಪುರಾತನ ಸಂಸ್ಕೃತಿಗಳು ಸಹಾ ಇಲ್ಲಿಯಂತೆ ನಲುಗಿ ಹೋಗಿರುವುದನ್ನು ಸುಳ್ಳು ಎನ್ನಬೇಕಾಗುತ್ತದೆ. ವಸ್ತುಸ್ಥಿತಿ ಇದಲ್ಲ. ಜನಪದೀಯ ನೆಲೆಯಲ್ಲಿ ಇತಿಹಾಸವನ್ನು ಕಾಲವನ್ನು ಗಣನೆಗೆ ತೆಗೆದುಕೊಳ್ಳದೆ ಅಭ್ಯಾಸ ಮಾಡಿದಾಗ ತಾತ್ಕಾಲಿಕ ಚರಿತ್ರೆಯಿಂದ ದೂರನಿಂತು ಮಾತಾಡಬೇಕಾಗುತ್ತದೆ. ಪುರಾತತ್ವವಸ್ತುಶಾಸ್ತ್ರ ಪ್ರಾಚೀನ ಇತಿಹಾಸ ಮತ್ತು ಜನಾಂಗಿಕ ಅಧ್ಯಯನಗಳನ್ನು ಜಾನಪದ ಶಾಸ್ತ್ರದೊಡನೆ ಸಮಾನಾಂತರವಾಗಿ ಇಟ್ಟು ಅಧ್ಯಯನ ಮಾಡಿದಾಗ ಈ ದ್ರಾವಿಡ ಕಲ್ಪನೆಗಳನ್ನು ಮಾತೃಸಮಾಜ ಮತ್ತು ಪಿತೃಸಮಾಜವೆಂಬ ಹಿನ್ನಲೆಯಲ್ಲಿ ಮಾತ್ರ ನೋಡುವುದು ಸೂಕ್ತ. The word Aryan means nobles.... supremacy to justify in killing of millions of Gypsis jews and other non Aryans (World book Encyclopedea : I.P. 764) ಎಂದ ಹಿಟ್ಲರನ ನಾನು ಎನ್ನುವ ತೋಳ್ಬಲಕ್ಕೆ ಸಂವಾದಿಯಾಗಿ ನೋಡಬೇಕಾಗುತ್ತದೆ. ಮಾತೃ ಸಮಾಜದವರು ಕಲ್ಲಿನ, ಕೋಲಿನ, ಆಯುಧ ಹಿಡಿದಿದ್ದ ಗಣ ಸಮಾಜದವರು. ಪಿತೃಸಮಾಜದವರು ಅಶ್ವಾರೂಢಿಯಾಗಿ ಕುಳಿತು ದನಕುರಿಗಳೆಂಬ ಆರ್ಥಿಕ ಮೂಲವನ್ನು ಆಸೆಯಾಗಿ ತೋರಿದವರು. ಮಾತೃಸಮಾಜದವರು ಮೂಲತಃ ಬೇಸಾಯ ಸಮಾಜದವರು. ಪಿತೃಸಮಾಜದ ಆರ್ಥಿಕ ದೃಢತೆಗಾಗಿ ಸ್ವಾಭಾವಿಕವಾಗಿ ಪಶುಪಾಲನಾಕಾಂಕ್ಷಿಗಳಾದವರು. ಅದರ ಪರಿಣಾಮವನ್ನು ಸುಖಿ ಸಮಾಜದವರು ಪಡೆದುಕೊಂಡರು. ಶ್ರಮ ಸಂಸ್ಕೃತಿಗೆ ಜನಪದರನ್ನು ನೂಕಿ ಅವರಿಂದ ಪರಂಪರಾತಗವಾಗಿ ಸುಖವುಣ್ಣಲು ಹವಣಿಸಿದರು. ವೇದಗಳೆಂಬ ಸರಮಾಲೆಯಲ್ಲಿ ತಮಗೊಳ್ಳೆಯದನ್ನೆಲ್ಲಾ ಪೋಣಿಸಿಕೊಂಡರು. ಈ ಭೇದೋಪಾಯ ಫಾಸ್ಸಿ ಗೋರಿಗಳು, ಬ್ರಿಟಿಷ್ ಅಧಿಪತಿಗಳು ದೂಚಿದ್ದಕ್ಕಿಂತ ಘೋರವಾದುದು.

ವೇದಗಳೆಂದರೇನು? ಅವು ಆಗಿನ ಕಾಲದ ಜನಪದರ ಸ್ವತ್ತುಗಳು. Veda means Knowledge to the orthodox it means knowledge for excellence of these are orally composed songs (Indian Phylosophy P.32) ಇದು ಅನಂತರದಲ್ಲಿ ಏನಾಗಿಹೋಯಿತು ! ಋಗ್ವೇದದಲ್ಲೆ ಮತ್ತೊಂದು ಸಮಾಜವನ್ನು ಅಮುಕುವ ಛಾಯೆಗಳು ಕಾಣುತ್ತವೆ. ಅನಂತರದ ಸಾಮವೇದ ಯಜುರ್ವೇದ ಅಥರ್ವಣವೇದಗಳಲ್ಲಿ ಸಮಾಜ ವಿಭಜನೆಯು ನಡೆಯುತ್ತಾ ಹೋಗುತ್ತವೆ. ಇನ್ನು ಮಂತ್ರಗಳು ಬ್ರಾಹ್ಮಣಗಳ ನ್ನೊಳಗೊಂಡ 'ಗೀತೆ' ಇವೆಲ್ಲಾ ಸಮಾಜವನ್ನು ಕಗ್ಗಂಟಾಗಿಸುತ್ತವೆ. ಮನು ಮಹಾಶಯ ನಂಥವರು ಚಾಣಕ್ಯನಂಥವರು ಅವುಗಳನ್ನೆಲ್ಲಾ ಸಿದ್ಧಾಂತಗೊಳಿಸುತ್ತಾರೆ. ಆರ್ರೀಕರಣದ ನೆಲೆಯಲ್ಲಿ ವರ್ಣತತ್ವವನ್ನು ವಿಜೃಂಭಿಸುತ್ತಾರೆ. ಇದನ್ನೆಲ್ಲಾ ವಿರೋಧಿಸಿದ ಚಾರ್ವಾಕರು ಲೋಕಾಯುತರು ಪಾಷಂಡಿಗಳಾಗಿ ಅವರಿಗೆ ಕಾಣುತ್ತಾರೆ. ನಾಸ್ತಿಕರನಿಸಿ ಕೊಳ್ಳುತ್ತಾರೆ. Materiallistic theoryಗಳನ್ನು ಮುಂದಿಟ್ಟು ಗಾರ್ಗಿ ಮೈತ್ರೇಯಿಯಂಥಾ ಮಹಿಳೆಯರು ಸಹಾ ಲೋಕಾಯುತರೊಡನೆ ದನಿಗೂಡಿಸಿದ್ದು ಜನಕರಾಜನ ಆಸ್ಥಾನದಲ್ಲಿ ಆಗಿನ

ರಾಜಮಹಾರಾಜರುಗಳ ಪಾದದಡಿ ನಿಲ್ಲುತ್ತಿದ್ದ ಬ್ರಹ್ಮಸಮಾಜವು ಯಜ್ಞಯಾಗವೆಂಬ ಮಂಕುಬೂದಿ ಎರಚಿ ಅವರಿಗೂ ಯಜಮಾನರಾಗುತ್ತಾರೆ. ರಾಜಸೂಯಯಾಗದಲ್ಲಿ ಪಟ್ಟದರಾಣಿಯ ಸೊಂಟಕ್ಕೆ ಕೈ ಹಾಕುವಷ್ಟು ಉದ್ದವಾಗಿ ಬೆಳೆದವರು ಜನಸಾಮಾನ್ಯರನ್ನು ಬಿಟ್ಟಾರೆ ! ಆಗ ಋತ್ವಿಜರಲ್ಲಿ ಒಬ್ಬನು ಪಟ್ಟದ ಮಹಿಷಿಯೊಡನೆ ಸರಸಸಲ್ಲಾಪ ಮಾಡುವಷ್ಟು ಧಾರ್ಮಿಕ ಸ್ವರೂಪ ಪಡೆದುಕೊಂಡವರು ಹೊಲಗದ್ದೆ ಕಾಡುಗಳ ಜನಪದ ಹೆಂಗಸರನ್ನು ಹೇಗೆ ಬಿಟ್ಟಾರು! ಅಶ್ವಮೇಧ ಯಾಗದ ಅರ್ಥವೇನು! ಅದು ಕುದುರೆಲಿಂಗವನ್ನು ರಾಣಿಯ ಯೋನಿಯೊಳಗಿಟ್ಟು ನೋಡುವ ಕ್ರಮ. ಇನ್ನು ಮಿಥುನ ಪೂಜಾಕ್ರಮ ತಾಂತ್ರಿಕ, ಸಾಂಖ್ಯ ಸಮಾಜದ್ದು. ಅಲ್ಲಿ ಯಜ್ಞದ ಸುಳಿವಿಲ್ಲ. ಅದನ್ನು ವ್ಯವಸ್ಥಿತವಾಗಿ ಸುಖಕ್ಕೆ ಬಳಸಿಕೊಂಡವರು ಋತ್ವಿಜರು. ಮದ್ಯಮಾಂಸ ಮಿಥುನಗಳು ಅಂದಿನ ಮಾತೃಸಮಾಜವನ್ನು ನಿಯಂತ್ರಿಸುವ ಮೂಲನಂಬಿಕೆಗಳು. ಹೆಣ್ಣಿನ ರಸ ಮರದ ರಸ ಅಭೇದ್ಯವೆಂಬ ಕಲ್ಪನೆ. ಚಕ್ರ ಕಮಲಗಳ ಸಂಕೇತಗಳ ಸಮಾಜದ ಹಿನ್ನೆಲೆ ರುಚಿಯನ್ನು ಬಿಟ್ಟು ಬರಲಾದ ಪಿತೃಸಮಾಜವು ಮಾತೃವಿಗೆ ಮಾತ್ರ 'ನ ಸ್ವಾತಂತ್ರಮರ್ಹತಿ' ಎಂದು ಸಾರಿಬಿಟ್ಟಿತು. ಅಂದರೆ ಸ್ವಚ್ಛಂದ ಸಮಾಜದ ರೂಪರೇಖೆಗಳನ್ನು ತನ್ನದಾಗಿಸಿಕೊಳ್ಳುವ ಭರದಲ್ಲಿ ಕಾಡಿನ ಸಂಸ್ಕೃತಿಯನ್ನು ಕಾಡಲ್ಲಿ ಬಿಟ್ಟು ಊರಿನ ಸಂಸ್ಕೃತಿಯನ್ನು ಕಾಲೊತ್ತುವ ದುಡಿದುಹಾಕುವ ಬಗೆಯಾಗಿ ಮಾರ್ಪಡಿಸಿಕೊಂಡಿತು. ಅಂದಿನಿಂದ ಬಂಧು–ಜಾತಿ–ದ್ವಿಜ–ಸಮಾಜಗಳು ವಿಭಾಗಗೊಂಡವು.

ಗೋ : ಎಂದರೆ ಮಾತೃಸಮಾಜದ ಹೆಣ್ಣು.

ಕರೆದಾಗ ಬಂದು ಹಾಲುಕರೆವ ಕಾಮಧೇನು. ಅವಳನ್ನು ತಿಂದು ಗಂಡೊಬ್ಬನೇ ಜಗತ್ತಿನಲ್ಲಿ ಇರಲಾದೀತೆ! ಅದಕ್ಕಾಗಿಯೇ ಎತ್ತು ದನ ಕುರಿ ಕುದುರೆಗಳನ್ನು ತಿನ್ನಲು ಅಡ್ಡಿಯಿಲ್ಲವೆಂದು ಸಾರಿದ ದಾಖಲೆಗಳಿವೆ. ಋಗ್ವೇದದ ಅನೇಕ ಉಲ್ಲೇಖಗಳು ಬ್ರಾಹ್ಮಣರು ಮಾಂಸಾಹಾರಿಗಳಾಗಿದ್ದ ದಾಖಲೆ ಒದಗಿಸುತ್ತವೆ. ಗೋಮಾಂಸದ ಪಾಯಸ ಗಾಂಧೀಜಿಯವರೆಗೂ ಬಂದಿರುವುದನ್ನು ಗಮನಿಸಿದ ಶೃಂಗೇರಿ ಯಜ್ಞಕುಂಡದವರೆಗೂ ಬಂದಿರುವ ಮೇಷಯಜ್ಞದ ಬಗ್ಗೆ ಆಲೋಚಿಸಿದರೆ ಇತ್ತೀಚಿನವರೆಗೆ ಹಸುವನ್ನು ಹೊರತು ಪಡಿಸಿದ ಪ್ರಾಣಿವಧೆ ಮಾಂಸಭಕ್ಷಣೆ ಯಾವಾಗ ನಿಂತಿತು! ಅದಕ್ಕೆ ಡಾ. ಚಿದಾನಂದಮೂರ್ತಿಯವರ ಅಭಿಪ್ರಾಯದ ಪ್ರಕಾರ ಶರಣರ ಕಾಲದವರೆಗೂ ಇದ್ದ ಸೂಚನೆಗಳಿವೆ.

ಮೂಲತಃ ಭಾರತೀಯ ಸಮಾಜ ಶಕ್ತಿ ಸಮಾಜ. ಶೈವಸಮಾಜ ಮದ್ಯಮಾಂಸಗಳನ್ನು ಶ್ರೀರಾಮನು ಸ್ವೀಕರಿಸಿರುವ, ಧರ್ಮರಾಯ ಸ್ವೀಕರಿಸಿರುವ ದಾಖಲೆಗಳಿವೆ. ಅಷ್ಟೇ ಏಕೆ ಬೌದ್ಧರೂ ಕೂಡ ತಿರಸ್ಕರಿಸಿದ ದಾಖಲೆಗಳಿಲ್ಲ. ಮೂಲತಃ ಬೇಟೆ ಹಿನ್ನೆಲೆಯ ಪ್ರಾಣಿ ಮನುಷ್ಯನು ಹಿಂಸೆಯಲ್ಲಿ ತನ್ನತನವನ್ನು ಕಾಡಿನಲ್ಲಿ ಮಾತ್ರ ಇಟ್ಟುಕೊಳ್ಳದೇ ಇಡೀ ಮನುಷ್ಯಕುಲಕ್ಕೆ ಅಳವಡಿಸಿ ನರನಾಡಿಗಳನ್ನು ಕೀಳಲಾರಂಭಿಸಿದಾಗ ಜೈನ ಬೌದ್ಧಧರ್ಮಗಳು ಸೆಟೆದು ನಿಂತು ಆರ್ಯಧರ್ಮವನ್ನು ಬಗ್ಗು ಬಡಿಯುತ್ತವೆ. ಆಗ ಜ್ಞಾನೋದಯವಾದ ಆರ್ಯ ಧರ್ಮ ಅಹಿಂಸಾಮಾರ್ಗವನ್ನು ಒಪ್ಪಿಕೊಳ್ಳಲಾರಂಭಿಸುತ್ತದೆ. ಹಾಗೆ ಒಪ್ಪಿಕೊಳ್ಳುವಾಗ ಯಜ್ಞ

ಯಾಗಾದಿಗಳ ನೆಪದಲ್ಲಿ ವೇದಮಂತ್ರಗಳ ತಾತ್ಪರ್ಯದಲ್ಲಿ ತನಗೆ ಬೇಕಾದ ಅರ್ಥ ನೀಡುತ್ತದೆ. ಇದರ ಪರಿಣಾಮವೆಂದರೆ ವೇದಗಳನ್ನು ಶೂದ್ರರು ಕೇಳಿದರೆ ಕಿವಿಗೆ ಸೀಸ ಕಾಯಿಸಿ ಹುಯ್ಯುವ ನಿಷಿದ್ಧತೆ. ಅಕ್ಷರವು ಮೇಲಿನವರ ಸ್ವತ್ತು ಎಂಬ ಸ್ವಾರ್ಥತೆ. ಈ ಪ್ರಶ್ನೆ ಮಾಡುವ ವಿಧಾನವನ್ನೆ ನಿಷಿದ್ಧಗೊಳಿಸಿದ ಮೇಲೆ ರಾಜಾಶ್ರಯವನ್ನು ತಮ್ಮ ಕಡೆಗೆ ಸೆಳೆದುಕೊಂಡ ಸಮಾಜದ ಮುಂದೆ ಶೂದ್ರರು ಅತಿ ಶೂದ್ರರು ಏನು ಮಾಡಬೇಕು! ಅಸ್ಪೃಶ್ಯರಾಗಿ ನಾಯಿ ನರಿಗಳಂತೆ ಬದುಕಬೇಕು. ಹೀಗೆ ಬದುಕುವಾಗ ಸಾಮಾಜಿಕವಾಗಿ ತಿರಸ್ಕಾರಗೊಂಡರೂ ಜಾನಪದೀಯ ನೆಲೆಯಲ್ಲಿ ತಮ್ಮದೇ ಲೋಕಸೃಷ್ಟಿಯನ್ನು ದೃಷ್ಟಿಯನ್ನು ಬೆಳೆಸಿಕೊಂಡ ಬಗೆಯನ್ನು ಇಂದು ನಾವು ಗುರ್ತಿಸಬೇಕಾಗುತ್ತದೆ. ಮನುಷ್ಯ ಯಾವಾಗಲೂ ಅಡಿಯಾಳಲ್ಲ! ಮಾನಸಿಕವಾಗಿ ಅವನೊಂದು ಭೌತಿಕ ವಸ್ತುವಲ್ಲ.

ಮಾತೃ ಸಮಾಜವು ಜಾನಪದೀಯ ಹಿನ್ನೆಲೆಗಳನ್ನು ಆಚರಣೆಗಳಲ್ಲಿ ಕಥೆಗೀತೆಗಳಲ್ಲಿ ಅನೇಕ ಕಲೆಗಳಲ್ಲಿ ಬಚ್ಚಿಡುವ ಕ್ರಿಯೆಯನ್ನಾಗಿಸಿಕೊಂಡಿರುವ ಕ್ರಮಗಳನ್ನು ಹಿಂಜಿನೋಡಿದಾಗ ಅನೇಕ ಸೋಜಿಗಗಳಾಗುವುದುಂಟು. ಮಾರಿ ಪೂಜಾರಿಗೆ ಸೀರೆ ಉಡಿಸಿದಾಗ ಜನಪದರ ದ್ರೌಪದಿ ತನ್ನ ತೊಡೆತಟ್ಟಿ ದುರ್ಯೋಧನನನ್ನು ಪಗಡೆಯಾಟಕ್ಕೆ ಕರೆದಾಗ, ಸಿರಿ ತಿರುಗಿ ಬಿದ್ದಾಗ, ನಾಗಮಂಡಲ ಕಥೆಯ ಮಿಥುನ ಪುರುಷನನ್ನು ತುರುಬಿನಲ್ಲಿ ಸೇರಿಸಿಕೊಂಡಾಗ ಇಂಥಾ ಹಿನ್ನೆಲೆಗಳನ್ನು ಭುಂಜಿಸಿ ನೋಡಿದರೆ ಒಂದು ಸಮಾಜದ ಹಿನ್ನೆಲೆ ಸಿಗುತ್ತದೆ. ಈ ದೃಷ್ಟಿಯಿಂದ ಮಾನವಚರಿತ್ರೆಯನ್ನು ಹಿಮ್ಮುಖವಾಗಿ ನೋಡುವುದು ಅನಿವಾರ್ಯವಾಗುತ್ತದೆ. ಕುಂತಿ ದ್ರೌಪದಿಯ ಮಹಾಭಾರತದ ಕಾಲಕ್ಕೆ ಪಿತೃಸಮಾಜದ ಕಾಲಿಗೆ ಸಿಕ್ಕಿದವರು. ಗಂಗೆಯ ಮೇನಕೆಯ ಸ್ವಾತಂತ್ರ್ಯವಿಲ್ಲದವರು. ಬಂಧು ಸಮಾಜದ ಹಿಡಿಂಬೆಯಷ್ಟೂ ಸ್ವತಂತ್ರರಲ್ಲದವರು. ಚಿತ್ರಾಂಗದೆ ಉಲೂಪಿಯರಿಬ್ಬರು ಜನಪದ ಮತ್ತು ಬಂಧು ಸಮಾಜದ ಪ್ರತೀಕಗಳು. ಒಬ್ಬಳು ಸಾಮಾನ್ಯ ರಾಜನ ಮಗಳು. ಮಗದೊಬ್ಬಳು ನಾಗಮೂಲದ ಬಂಧು ಕುಲದವಳು. ಚಿತ್ರಾಂಗದೆಯಷ್ಟು ಚಿಂತೆ ಉಲೂಪಿಗಿಲ್ಲ. ಗಂಡನ್ನು ಕೂಡಿ ಬಿಟ್ಟು ಹೊರಡುವವಳು.

ಮಾರಮ್ಮ ಮಹಿಷನನ್ನು ಕೊಂದು ಸೇಡನ್ನು ತೀರಿಸಿಕೊಂಡವಳು. ಮಾರಮ್ಮನನ್ನು ಬ್ರಾಹ್ಮಣಕನ್ಯೆಯಾಗಿ ನೋಡುವ ರೀತಿಯೇ ಬದಲಾಗಬೇಕಾಗಿದೆ. ಪುರುಷಸಮಾಜವನ್ನೇ ಅಟ್ಟಿಸಿಕೊಂಡು ಹೋದ ಸ್ತ್ರೀಮಾರಿ ದ್ವಿಜಕನ್ಯೆಯೇ ಯಾಕಾಗಬೇಕು! ಮಾರಿಜಾತ್ರೆಯಲ್ಲಿ ಕಟ್ಟುವ ಜನಿವಾರ ದಲಿತರು ಮೇಲ್ಮುಂದಾಗಿ ನೋಡುವ ಆಶಯವಾಗಿ ಯಾಕೆ ಕಾಣಬೇಕು! ಮೊದಲನೆಯದು ಪಿತೃಸಂಸ್ಕೃತಿಯನ್ನು ಓಡಿಸಿಕೊಂಡು ಹೋಗುವ, ಎರಡನೆಯದು ವರ್ಣತತ್ತ್ವ ಪ್ರತಿಪಾದಕರು ಜನಿವಾರ ಕಟ್ಟಿ ನೋಡುವ ಕ್ರಿಯೆಗಳು ಯಾಕಾಗಿರಬಾರದು! ಹೀಗೆ ಪಠ್ಯಗಳ ಅಧ್ಯಯನವನ್ನೇ ಬೇರೊಂದು ಆಯಾಮಗಳಲ್ಲಿ ನೋಡಲವಕಾಶವಿರುವ ಜನಪದ ಕಾವ್ಯಗಳು ಆಚರಣೆಗಳು ವರ್ಣತತ್ವದ ಹಿನ್ನೆಲೆಯಲ್ಲಿ ಬೇರ್ಪಟ್ಟು ನಿಲ್ಲುತ್ತವೆ. ಕೆರೆಗೆ ಹಾರವಾಗುವ ಭಾಗೀರಥಿಯ ಮೌನ ಮತ್ತು ಕೋಪ ಸಹಗಮನಕ್ಕೆ ಹೋಗುವ ಮಾದ್ರಿಯ ರಾಜಿ ಮನೋಭಾವ, ಧರೆಗಿಳಿದು ಹೋಗುವ ಸೀತಮ್ಮನ ಅಸಹಾಯಕತೆ, ಅಸಾದಿಗಳಿಂದಲೂ ಬಯ್ಯುವ ಕುರುಬರಿಂದಲೋ ಉಗಿಸಿಕೊಳ್ಳುವ ಲಕ್ಷ್ಮೀದೇವಿ ಇಂಥವರ ಅಧ್ಯಯನಗಳು ಸಹಾ ಸ್ತ್ರೀತತ್ವ

ಮತ್ತು ವರ್ಣತತ್ತ್ವವನ್ನ ಕೆಣಕುವ ಕ್ರಿಯೆಗಳಾಗವೆ. ಲಕ್ಷ್ಮೀದೇವಿ ಸ್ತ್ರೀಸಮಾಜದಿಂದ ದ್ವಿಪ್ರತಿನಿಧಿಯಾದ ತಕ್ಕಿಗೆ ಶೂದ್ರರಿಂದ ಉಗಿಸಿಕೊಳ್ಳುವ ಕ್ರಿಯೆ ಮೌಲಿಕಗಳತ್ತ ಸಾಗುವಂತ ಹುದು. ಗೌಡನೊಬ್ಬನು ಹೊಲೆಯನೊಬ್ಬನ ಮನೆಬಾಗಿಲಿಗೆ ಬಂದು ನಿಂತಾಗ ಒಳಗೆ ದಾಟಬಾರ ದೆಂಬ ನಂಬಿಕೆಯು ಮೇಲು ಸಮಾಜವನ್ನು ಮಾನಸಿಕವಾಗಿ ಒಪ್ಪಿದ್ದಲ್ಲ. ನಾನು ನಿನಗೇನು ಕಡಿಮೆ ಎಂಬ ತೂಕವ್ವು. ಮಲೆಯ ಮಾದೇಶ, ಸಿದ್ದಪ್ಪಾಜಿ ನಿರ್ವಾಣಯ್ಯ ಇಂಥ ಧಾರ್ಷ್ಟ್ಯ ದವರು. ಮೇಲುದೇವರನ್ನು ತೆಗೆದು ಒಗೆದವರು.

ಬಂಜೆ ಮಾತೃಸಮಾಜದಲ್ಲಿ ಫಲಬಿಡದ ಮರ. ಅವಳ ಬಗ್ಗೆ ಸಮಾಜಕ್ಕೆ ಅಂದು ತಿರಸ್ಕಾರವಿದ್ದು ಜನಪದ ಸಮಾಜದಲ್ಲಿ ಕನಿಕರಗೊಂಡಿದ್ದಾಳೆ. ಮುಟ್ಟು ಅಂದಿನ ಸಮಾಜದಲ್ಲಿ ಫಲಸಂಕೇತ. ಅವಳ ಮುಟ್ಟಿನಂತೆ ಬಸಿರಾಗಿ ಬಾಣಂತಿಯಾದವಳ ಎದೆಹಾಲಿನಂತೆ ಅಡವಿಯ ಗಿಡಮರಗಳ ಹಾಲು ಮಾತೃ ಸಮಾಜಕ್ಕೆ ಪೂಜ್ಯ ಸಂಕೇತ. ಸರ್ಪತಳಿಕೆ ಜಗದ ಚಲನೆಯ ಸಂಕೇತ. ಈ ಮೂಲಾರ್ಥದಲ್ಲಿ ಜಾನಪದ ಅಧ್ಯಯನಕ್ಕೆ ಮುಂದಾಗಬೇಕಾಗುತ್ತದೆ. ಇಷ್ಟರ ಮಧ್ಯೆ ಕೌಟುಂಬಿಕ ಬೆಳವಣಿಗೆಯಲ್ಲಿ ಒಪ್ಪಿಗೆಯಾಗಿರುವ ಏಕಸೂತ್ರ ಮೌಲ್ಯವನ್ನು ತೆಗೆದುಹಾಕಿ ಹಿಮ್ಮುಖವಾಗಿ ಸಮಾಜ ಚಲಿಸಬೇಕೆಂದರ್ಥವಲ್ಲ. ಮುಮ್ಮುಖವಾಗಿ ತೆವಳುತ್ತಿರುವ ಸಮಾಜದಲ್ಲಿ ಗಂಡಿಗೊಂದು ಹೆಣ್ಣಿಗೊಂದು ಭೇದಮಾಡುವ ರೀತಿ ಕುರಿತದ್ದು. ಸೀತಮ್ಮನನ್ನು ಬೆಂಕಿಯಲ್ಲಿ ಹಾಯಿಸಿದರೂ ಒಪ್ಪದ ರಾಮನ ಸಂಸ್ಕೃತಿಯೇ ಇಂದಿನ ಸಮಾಜದಲ್ಲಿ ಮುಂದುವರಿಯುತ್ತಿರುವಾಗ ಕುಟುಂಬದ ಒಪ್ಪಿತ ಮೌಲ್ಯಕ್ಕೆ ಬೆಲೆಯೇನು? ರಾಮನನ್ನು ಜನಪದ ಕಾವ್ಯ ಹೇಡಿಯೆಂದು ಜರಿಯುತ್ತದೆ. ಅಸುರೇಯಾ ದೇಶವತ್ತಣಿಂದ ಬಂದಿರ ಬಹುದಾದ ಅಸುರ ಸಂಸ್ಕೃತಿಯು ಇಂದು ಲಯವಾಗಿ ಇರಾಣದತ್ತಣಿಂದ ಬಂದಿರಬಹುದಾದ ಆರ್ಯ ಸಂಸ್ಕೃತಿಯು ಹರಡಬೇಕೆಂಬ ತತ್ವದಲ್ಲಿ ಪಿತೃಸಂಸ್ಕೃತಿಗಳಿಗೆ ಆಶ್ರಯ ನೀಡಿದ ಮಾತೃಸಂಸ್ಕೃತಿಯು ನಲುಗಿ ಹೋಗುವುದು ಈಗಿನ ಲೋಕದೃಷ್ಟಿಯಾಗಬಾರದು. ಜನಪದ ಕಾವ್ಯಗಳು ಕತೆಗಳು ಇಂಥಾ ಮೌಲ್ಯವನ್ನು ಸೃಷ್ಟಿಮಾಡುವುದಿಲ್ಲ. ತೆರೆದು ಜನರ ಮುಂದಿಡುತ್ತವೆ. ಸಮಾನತೆಗಾಗಿ ಹಾತೊರೆಯುತ್ತವೆ. ಜಾರನಾದವನನ್ನು ಗೇಲಿಮಾಡುವಂತೆ ಜಾರಿಣಿಯಾದವ ಳನ್ನು ತರಾಟೆಗೆ ತೆಗೆದುಕೊಳ್ಳುತ್ತವೆ. ಇಂದು ಲೋಕದೃಷ್ಟಿಯ ಚಿಂತನೆ. World view ಪ್ರಕಟವಾಗುವುದಕ್ಕೆ ಹಾತೊರೆಯುವ ಕ್ರಮವಿದು.

'ದ್ರಾವಿಡ ಕಳಗಂ' ನವರು ಜನಿವಾರ ಕತ್ತರಿಸಿದ್ದನ್ನು ಡಾ. ರಾಮಮನೋಹರ ಲೋಹಿಯಾ ಅವರು ಒಂದು ವ್ಯವಸ್ಥೆ ಬದಲಾಗಬೇಕೆಂದು ಇದು ಬಲವಂತವಾಗಿ ಆಗಬಾರದೆಂದು ಜಾತಿವ್ಯವಸ್ಥೆ ಕುರಿತು ರಾಮಸ್ವಾಮಿನಾಯ್ಕರ್ ಅವರ ಕೋಪದ ಬಗ್ಗೆ ಮಾತಾಡಿದ್ದಾರೆ. ವರ್ಣತತ್ತ್ವದಡಿ ಆಗಿಹೋದ ಪ್ರಮಾದವು ಒಂದು ವ್ಯವಸ್ಥೆಯಿಂದಾದದ್ದು. ಒಬ್ಬ ವ್ಯಕ್ತಿಯಿಂದಾದದ್ದಲ್ಲ. ಅಂಥ ವ್ಯವಸ್ಥೆ ಬದಲಾಗಬೇಕೆಂಬುದು ಲೋಕದೃಷ್ಟಿ. ವ್ಯಕ್ತಿಯನ್ನು ಕುರಿತು ಮಾತನಾಡುವುದು ಪೂರ್ವಾಗ್ರಹ ಪೀಡಿತದೃಷ್ಟಿ. ಲೋಕದೃಷ್ಟಿಯಲ್ಲಿ ಶ್ರೀರಾಮನಾಗಲೀ, ಅಲ್ಲಾನಾಗಲೀ, ಏಸುವಾಗಲೀ ಒಂದೆರಡು ಸಾವಿರ ವರ್ಷದವರು. ಮಾತೃ ಮತ್ತು ಪಿತೃ ಸಂಸ್ಕೃತಿಯು ಭೂಮಂಡಲದಲ್ಲಿ ಮಾನವನು ಮಿಸಿಂಗ್ ಲಿಂಕ್‌ಗೊಳಪಟ್ಟಾಗಿನಿಂದ ಆಗಿರುವ

ಬೆಳದಿರುವ ಸಂಸ್ಕೃತಿಗಳು. ಇದನ್ನು ಅರಿತು ನಡೆವ ಲೋಕದೃಷ್ಟಿ ಮನುಜರಲ್ಲಿದ್ದರೆ ಸಂಸ್ಕೃತಿಯು ಅರ್ಥವಂತಿಕೆಯಾಗುತ್ತದೆ. ಇಂಥಾ ಸೂಕ್ಷ್ಮತೆಯನ್ನಿಡಿದು ವರ್ಣ ಜಾತಿಗಳಾಗಿರುವ ಕಾಲವನ್ನು ಜಾಡಿಸಿ ಕೊಡವಿ ಹಾಕಿದರೆ ಭೂಮಂಡಲದ ವಿಸ್ತಾರದಲ್ಲಿ ಅದರ ಅಲ್ಪಾಯಸ್ಸಿನ ಅರಿವಾಗುತ್ತದೆ. ಆಗಿ ಹೋದ ಪ್ರಮಾದಗಳ ಬಗ್ಗೆ ಕನಿಕರವಾಗುತ್ತದೆ. ಈಗ ಮನು, ಜಾಣಾಕ್ಯಾದಿಗಳಿಲ್ಲ. ಗೋರಿ ಘಸ್ನಿಗಳಿಲ್ಲ. ವಿಶ್ವಮಾನವ ತಿಳಿವಳಿಕಸ್ಥರಿದ್ದಾರೆ. ಅವರಿಂದ ಲೋಕದೃಷ್ಟಿಯ ಪರಿಜ್ಞಾನ ರೂಢಿಸಿಕೊಂಡರೆ ಲೋಕಕ್ಕೆ ಒಳ್ಳೆಯದೆಂಬ ಭಾವನೆ ಬೆಳೆಯುತ್ತದೆ. ಜಾನಪದ ಸಮಾಜವು ಯಾವಾಗಲೂ ಮಾರ್ಗದರ್ಶನಕ್ಕಾಗಿ ಹಾತೊರೆಯುವ ಸಮಾಜ, ಅಂಥಾ ತಿಳಿವಳಿಕೆಯನ್ನು ಯಾರಿಂದಲೂ ಸ್ವೀಕರಿಸಲು ಹಾತೊರೆಯುತ್ತಿರುತ್ತದೆ.

ಇಂದ್ರ, ಸೂರ್ಯ, ಯಮ, ಅಶ್ವಿನಿ ದೇವತೆಗಳಾಗಲೀ, ವೈಶಂಪಾಯನನಾಗಲೀ ಕರೆದಾಗ ಬಂದು ವಂಶ ಬೆಳೆಸಿದ್ದಾರೆ. ಶಿವಪಾರ್ವತಿಯರು ಕಷ್ಟದಲ್ಲಿದ್ದವರಿಗೆ ಸಹಾಯ ನೀಡಿದ್ದಾರೆ. ಇವುಗಳಲ್ಲಿ ಎರಡೂ ಸಂಸ್ಕೃತಿಗಳು ಬೆರತುಹೋದ ಕತೆ ಹೇಳುತ್ತವೆ. ಇಂಥಾ ಕಲಬೆರಕೆಯು ಶತಶತಮಾನಗಳಿಂದ ಆಗಿರುವ ಹಿನ್ನೆಲೆಯಲ್ಲಿ ಒಂದು ಸಾಮಾಜಿಕ ಮೌಲ್ಯ ನಿಗದಿಯಾಗಿದೆ. ಅಂಥಾ ಒಪ್ಪಿತ ಮೌಲ್ಯವನ್ನು ಪ್ರಶ್ನೆ ಮಾಡುವ ಹಕ್ಕು ಹೆಣ್ಣು ಗಂಡಿಗಿರಬೇಕಾದುದು ಸ್ವತ್ರವಾಗಬೇಕು. ಬ್ರಹ್ಮನ ಮುಖದಲ್ಲಿ ಹುಟ್ಟಲು ಕಾತರಪಟ್ಟಿದ್ದು ವರ್ಣ ಸಮಾಜದ ಅನೈತಿಕ ಹುಟ್ಟು. ಕನಿಷ್ಟಾಂಗವಾದ ಕಾಲಬಳಿ ಹುಟ್ಟಿದ್ದು ನೈತಿಕ ಹುಟ್ಟು. ಎಲ್ಲರೂ ಪೂಜಿಸುವ 'ಭಗವಂತ'ನಲ್ಲಿರುವ ಪೂರ್ವಪದವು ನೈತಿಕ ಮೂಲವನ್ನು ಧ್ವನಿಸುತ್ತದೆ. ಹೆಂಡ ಮಾಂಸದ ಮೂಲವಾಸನೆಯನ್ನು ಬಿಟ್ಟು ಕೃಷಿಕತತ್ವದ ಸಸ್ಯ ಆಹಾರ ಸಂಗಡವಿರಬೇಕೆನ್ನುವುದು ರಾಜಿ ಮನೋಭಾವ. ಆದರೆ ಮಿಥುನದಿಂದ ದೂರವಿರಿ ಎನ್ನಲು ಲೋಕದಲ್ಲಿ ಯಾವ ಧರ್ಮಕ್ಕೆ ಸಾಧ್ಯವಾದೀತು! ಈ ಮಿಥುನ ಕ್ರಿಯೆ ಸಮಭಾಗದಲ್ಲಿರಬೇಕೆನ್ನುವುದು ಸೂಕ್ತ ವಿಚಾರ. ಆಗ ಎರಡು ಮೂಲ ಸಂಸ್ಕೃತಿಯ ಸಂಸ್ಕೃತೀಕರಣಕ್ಕೆ ದನಿ ಬರುತ್ತದೆ. ಅದರಲ್ಲಿ ಮೇಲುಕೀಳು ಎಂಬ ಭಾವನೆಯಿರುವುದಿಲ್ಲ. ಶೃಂಗೇರಿ ಮಠದಲ್ಲಿ ಹೆಣ್ಣಿನ ಕ್ರಯ ಚೀಟಿಯಾಗಲೀ, ಸಮಾಜದಲ್ಲಿದ್ದ ಹೊಲೆಯನ ಸೊಂಟದಲ್ಲಿದ್ದ ಪೊರಕೆ ಕುತ್ತಿಗೆಯಲ್ಲಿದ್ದ ಉಗುಳುಮಡಕೆಯಾಗಲೀ ವರ್ಣತತ್ವದ ಹೇಸಿಕೆ ಕೃತ್ಯಗಳು. ಇದರಿಂದಾಗಿರುವ ಅವಮಾನಕ್ಕೆ ಕರೆದು ಸುಖಸಂಸ್ಕೃತಿ ವುಂಡವರು ಶ್ರಮ ಸಂಸ್ಕೃತಿಯವರನ್ನು ಕೋಣೆಯಲ್ಲಿ ಕೂರಿಸಿದರೆ ಎಲ್ಲವೂ ಮಾಯವಾಗಿ ಹೋಗುತ್ತದೆ. ಅಂಥಾ ರಾಜಿ ಕ್ರಿಯೆಗೆ ಜನಪದ ಸಮಾಜ ಎಂದೆಂದೂ ಸ್ಪಂದಿಸಿದೆ, ಕಾಯುತ್ತಿದೆ. ಕುವೆಂಪು ಅವರು ಪುರೋಹಿತಶಾಹಿ ಕಡೆಗೆ ಹಾಯ್ದವರು ಎನ್ನುವ ಮಾತುಂಟು. ಅವರು ಜನಪದ ಸಾಮ್ರಾಜ್ಯವನ್ನು ತಿರಸ್ಕರಿಸಿದವರಲ್ಲ. ಅವರ ಕಾದಂಬರಿಯ ಪಾತ್ರಗಳು ಜಾನಪದೀಯ ಪಾತ್ರಗಳು ಎಂಬ ಹಿನ್ನೆಲೆಯಲ್ಲಿ ಆಲೋಚಿಸಿದಾಗ ಅವರ ಶೂದ್ರತಪಸ್ವಿ ಮತ್ತು ಶ್ರೀರಾಮನ ಬಗ್ಗೆ ಆಲೋಚಿಸಿದಾಗ ಲೋಕದೃಷ್ಟಿಯ ಅರಿವಾಗುತ್ತದೆ. ಅವರು ಗುಡಿಸಿಹಾಕಲು ಹೊರಟದ್ದು ಮೂಢನಂಬಿಕೆಯನ್ನು, ಪುರೋಹಿತಶಾಹಿಯ ಕೊಳಕನ್ನು.

ಯಮನಿಂದ ಯಮಿ ಪ್ರಾಣಭಿಕ್ಷೆ ಬೇಡುವುದು, ದ್ರೌಪದಿ ಪಂಚರನ್ನು ಕೂಡುವುದು

ರಾಮಸೀತೆಯರು ಅಜ್ಞಾತರಾಗಿಯರಾಗಿದ್ದುದು, ವಿಷ್ಣುಕೃಷ್ಣನಾಗಿದ್ದು, ಶ್ರೀರಾಮನಾದದ್ದು ಇವೆಲ್ಲಾ ಜನಪದ ಸಮಾಜವನ್ನು ದಾಟಿ ಬಂದಿರುವ ಕ್ರಿಯಾ ಸಾಂಸ್ಕೃತಿಕ ವಿಧಾನಗಳು. ಸಾಂಖ್ಯ-ತಾಂತ್ರಿಕ ಮೂಲದಿಂದ ಆಧುನಿಕ ಕುಟುಂಬ ವ್ಯವಸ್ಥೆಯುವರೆಗೂ ಆಗಿಹೋದ ಸಾಂಸ್ಕೃತಿಕ ಸ್ತರಗಳು. ಇಂಥ ನೆಲೆ ಜಾನಪದೀಯ ಅಧ್ಯಯನದಿಂದ ಗುರುತಿಸಲ್ಪಡಬೇಕು. ವಿಭೀಷಣನನ್ನು ತನ್ನಣ್ಣನ ಮೇಲೆ ಎತ್ತಿಕಟ್ಟಿದ ರಾಮ ಸುಗ್ರೀವನಿಂದ ಅವನಣ್ಣನನ್ನೆ ಕೊಲ್ಲಿಸಿದ ಅರ್ಥಾತ್ ತಾನೇ ಕೊಂದ. ರಾಮನಿಗೆ ಕಾಡಿನ ಸಮಾಜದ ಆಂಜನೇಯ ಕೈ ನೀಡಿ ಸಹಾಯ ಮಾಡಿದ್ದಾನೆ. ಇದು ಲೋಕಕ್ಕೆ ಒಂದು ಮೌಲ್ಯ ನೀಡುವ ಬಗ್ಗೆ ಮಾಡಿದ ಸಹಾಯ. ವ್ಯಾಸ ವಾಲ್ಮೀಕಿ ಇಂಥವರೆಲ್ಲ ಮೇಲ್ಮುಖವಾಗಿ ತಪಸ್ಸುಗೈದವರು ನಿಜ. ಆ ತಪಸ್ಸು ದ್ವಿಜರಾಗ ಬಯಸುವುದಾಗಬಾರದು. ವಿಶ್ವತತ್ವದ ತಪಸ್ಸಾಗಬೇಕು. ಭಾರತೀಯ ಸಂಸ್ಕೃತಿಯ ಅವಲೋಕನವೆಂದರೆ ವರ್ಣಸಂಕರದ ಅವಲೋಕನ. ಯಾರು ಮೇಲೋ ಯಾರು ಕೀಳೋ ಅರಿಯುವ ಬಗೆಯು ಸಮುದ್ರದ ನೀರನ್ನು ನೋಡಿ ಇದು ಇಂಥಾ ನದಿಯದು ಎಂದು ಹೇಳಿದ ಹಾಗೆ. ಸಮುದ್ರ ಕೂಡ ಲೋಕದ ಎಲ್ಲಾ ಸಾಗರಗಳನ್ನು ಮಿಶ್ರ ಮಾಡಿಕೊಂಡಿದೆ. ಯಾವುದು ಹಿಂದೂ ಸಾಗರ ಯಾವುದು ಭಾರತೀಯ ಸಾಗರ ಎಂದು ಗೆರೆ ಎಳೆಯಲಾಗುವುದಿಲ್ಲ.

ಪ್ರಧಾನ ಸಂಸ್ಕೃತಿ ಮತ್ತು ಉಪಸಂಸ್ಕೃತಿ ಎಂಬ ವಿಭಜನಾಧ್ಯಯನ ಇತ್ತೀಚೆಗೆ ಕಾಣುತ್ತದೆ. ಇದನ್ನು ಕಾಲ ಪರಿಗಣಿಸುವುದಿಲ್ಲ. ಇದು ಬಹು ಸಂಸ್ಕೃತಿಗಳ ದೇಶ. ಸುಖ ಮತ್ತು ಶ್ರಮ ಸಂಸ್ಕೃತಿಗಳೆಂದು ವಿಭಜಿಸಿ ಜಾನಪದೀಯ ನೆಲೆಯಲ್ಲಿ ಅಧ್ಯಯನ ಮಾಡುವಾಗ ಲೋಕದೃಷ್ಟಿಯ ಕಡೆ ಗಮನಹರಿಸಬೇಕಾದ್ದು ಪ್ರಮುಖವಾಗಬೇಕು. ಜಾನಪದ ಅಧ್ಯಯನ ಈಗ ಇತಿಹಾಸದಾಚೆ ಹಿಮ್ಮುಖಾವಲೋಕನವನ್ನು ಮೈಗೂಡಿಸಿಕೊಳ್ಳಬೇಕು. ಭೂತಕಾಲದ ಸಂಸ್ಕೃತಿಯು ವರ್ತಮಾನದಲ್ಲಿ ಗೂಡುಕಟ್ಟಿ ಮೊಟ್ಟೆಮರಿಗಳನ್ನು ಮಾಡುವಾಗ ಅನೇಕ ಹೊಸತಳಿಗಳ ಉದ್ಭವವಾಗುವುದುಂಟು. ಅದೇ ಜಾನಪದವು ಸಾಯುವುದಿಲ್ಲವೆಂಬ ಗುಟ್ಟಿನ ಸಂಕೇತ. ಜಾನಪದವು ಸಾಂಸ್ಕೃತಿಕವಾಗಿ ಎಂದೆಂದಿಗೂ ಲೋಕವನ್ನು ಆವರಿಸಿಕೊಂಡಿರುವುದು ಸ್ಪಷ್ಟ.

❑

ಪರಾಮರ್ಶನ ಗ್ರಂಥಗಳು :

೧. ಡಾ॥ ಅಂಬೇಡ್ಕರ್ ಅವರ ಬರಹಗಳು ಮತ್ತು ಭಾಷಣಗಳು ಸಂ. ೧

೨. ಯುಗಯಾತ್ರಿ ಭಾರತೀಯ ಸಂಸ್ಕೃತಿ ಸಂ. ೧. ಪ್ರಸಾರಾಂಗ ಮೈಸೂರು ವಿ.ವಿ.

ಜೀವ ಕೇಂದ್ರಿತ..........

■ ಡಾ॥ ಚಕ್ಕಿರೆ ಶಿವಶಂಕರ್

ಆಧುನಿಕ ತಂತ್ರಜ್ಞಾನದ ಆವಿಷ್ಕಾರಗಳಿಂದಾಗಿ ವಿದ್ಯುನ್ಮಾನ, ಡಿಜಿಟಲ್ ಮತ್ತು ಅಂತರಿಕ್ಷ ಉಪಗ್ರಹಗಳು ನಮ್ಮ ಊಹೆಗೂ ನಿಲುಕದಷ್ಟು ವೇಗವಾಗಿ ಬೆಳೆದು ಇಂದು ಇಡೀ ಭೂಗೋಳವನ್ನು ಸಂಕೀರ್ಣಗೊಳಿಸಿವೆ. ಅಂತರ್ ಜಾಲ ತಂತ್ರಜ್ಞಾನವು ಜಗತ್ತನ್ನು 'ಜಾಗತಿಕ ಗ್ರಾಮ'ದ ಮಟ್ಟಕ್ಕೆ ತಂದು ನಿಲ್ಲಿಸಿದೆ. ಈ ಜಾಗತಿಕ ಗ್ರಾಮದ ಪರಿಕಲ್ಪನೆಯ ಒಳಗೆ, ಕೈಗಾರಿಕೀಕರಣ, ನಗರೀಕರಣ, ಆರ್ಥಿಕ ಉದಾರೀಕರಣ, ಬಹುರಾಷ್ಟ್ರೀಯತೆ, ಎಂಎನ್‌ಸಿ ಇವೆಲ್ಲವುಗಳೂ ವಿವಿಧ ವಿನ್ಯಾಸಗಳಲ್ಲಿ ಸರ್ಪದ ಹೆಡೆಯ ಮೇಲಣ ವಿನ್ಯಾಸಗಳಂತೆ ಒಂದಕ್ಕೊಂದು ತಳುಕು ಹಾಕಿಕೊಂಡಿವೆ. ಹೆಡೆ ಎತ್ತಿ ಅಪ್ಪಳಿಸಿದಾಗಷ್ಟೇ ಇವುಗಳು ಎಷ್ಟರಮಟ್ಟಿಗೆ ಅಪಾಯಕಾರಿ ಎಂಬುದು ಗೋಚರವಾಗುತ್ತದೆ.

ಜಾಗತೀಕರಣವು ಜನಸಮುದಾಯದ ಭೋಗಕ್ಕಾಗಿ ಒದಗಿಸಿದ ಸರಕುಗಳ ಮೂಲಕ ಬಂದಿದ್ದು, ವ್ಯಕ್ತಿಯ ಜೀವನ ವಿಧಾನದಲ್ಲಿ ಮಾರ್ಪಾಡುಗಳನ್ನು ತಂದೊಡ್ಡಿವೆ. ಆಧುನಿಕತೆಯ ಸರಕು ಸಂಸ್ಕೃತಿಯು ಸಮುದಾಯದ ಮನಸ್ಸನ್ನು ಆಳವಾಗಿ ಆಕ್ರಮಿಸಿದೆ. ಬಹುರಾಷ್ಟ್ರೀಯತೆ, ಆರ್ಥಿಕ ಉದಾರೀಕರಣ ಇವೆಲ್ಲವುಗಳ ಹೆಸರಿನ ವ್ಯವಸ್ಥೆಯಲ್ಲಿ ವ್ಯಾಪಾರ-ಲಾಭ-ಹಣ ಇವುಗಳಷ್ಟೇ ಕೇಂದ್ರೀಕೃತವಾಗಿದ್ದು, ಸಮಾಜವು ಸರಕು ಉತ್ಪಾದನೆಯ ಆಧಾರದ ಮೇಲೆ ನಿಂತಿದೆ. ಪರಿಮಾಣ ಪ್ರೇರಿತ ಪ್ರಗತಿಯನ್ನು ಮೂಲ ಪ್ರೇರಕ ಶಕ್ತಿಯನ್ನಾಗಿಸಿಕೊಂಡ

ಐರೋಪ್ಯ ದೇಶಗಳು ವಸಾಹತುಗಳ ಶೋಷಣೆಯಿಂದ ದಕ್ಕಿದ ಸಂಪತ್ತಿನಿಂದ ಬಂಡವಾಳಶಾಹಿ ವ್ಯವಸ್ಥೆಯ ಮೂಲಕವೇ ಸಮೃದ್ಧಿಯನ್ನು ಸಾಧಿಸಿವೆ. ಪರಿಣಾಮವಾಗಿ ಇಂದು ಎಲ್ಲವನ್ನು ವ್ಯಾಪಾರದ ಸರಕುಗಳಂತೆಯೇ ಕಾಣಲಾಗುತ್ತಿದೆ. ಪಶ್ಚಿಮಮುಖಿ ಚಿಂತನೆಗಳು, ಪಶ್ಚಿಮದ ಆರ್ಥಿಕ ಬಂಡವಾಳಕ್ಕೆ ಮುಕ್ತ ಸ್ವಾಗತ, ಬಹುರಾಷ್ಟ್ರೀಯ ಕಂಪನಿಗಳಿಗೆ ಆರ್ಥಿಕ ಉದಾರೀಕರಣದ ನೆಪದಲ್ಲಿ ಮಣೆ ಹಾಕುತ್ತಿರುವುದರ ಫಲವಾಗಿ ವ್ಯಕ್ತಿಯ ಸಾಮಾಜಿಕ, ಸಾಂಸ್ಕೃತಿಕ ಬದುಕಿನಲ್ಲಿ ತೀವ್ರ ಬದಲಾವಣೆಗಳು ಜರುಗುತ್ತಿವೆ. ತ್ವರಿತ ಕೈಗಾರಿಕೀಕರಣದಿಂದಾಗಿ ಕೇವಲ ಸಂಪತ್ತನ್ನು ಕೂಡಿ ಹಾಕುವ ಮನೋಭಾವ ಬೆಳೆಯುತ್ತಿದೆ. ಇದುವರೆಗೆ ತಮ್ಮ ಕಸುಬುಗಳನ್ನೇ ಜೀವನಮಾರ್ಗವೆಂದು ಭಾವಿಸಿದ್ದ, ನಂಬಿಕೊಂಡು ನೆಮ್ಮದಿಯಿಂದ ಬದುಕುತ್ತಿದ್ದ ಗ್ರಾಮೀಣ ಬದುಕು ಈ ವ್ಯಾಪಾರೀ ಮನೋಭಾವದ ಫಲಿತವಾಗಿ ಅಸ್ತವ್ಯಸ್ತಗೊಂಡಿತು. ಬಂಡವಾಳಶಾಹಿ ವರ್ಗವು ಗ್ರಾಮೀಣ ಭಾರತದ ಅಗಾಧ ಜನಸ್ತೋಮದ ನಡುವೆ ತಮ್ಮ ಶೋಷಣೆಯ ಕೊಂಡಿಗಳನ್ನೂರಿ ತಮಗೆ ಲಾಭ ತರುವ ದುಷ್ಟ ಆಧುನೀಕರಣಕ್ಕೆ ಜನಸಮುದಾಯವನ್ನು ಬಲಿಪಶುಗಳನ್ನಾಗಿಸಿತು. ಉತ್ಪಾದನಾ ವೆಚ್ಚವನ್ನು ಕಡಿಮೆಗೊಳಿಸುವ ಮುಖಾಂತರ ತನ್ಮೂಲಕ ಲಾಭದ ಹೆಚ್ಚಳವನ್ನೇ ಮುಖ್ಯ ಧ್ಯೇಯವಾಗುಳ್ಳ, ಕೈಗಾರಿಕೀಕರಣವು ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆಂಬ ಭ್ರಮೆ ಛಿದ್ರಗೊಂಡು Mass productionಗಾಗಿ ಉತ್ಪಾದನೆಯ ಕೇಂದ್ರೀಕರಣವಾಯಿತು. ಗುಡಿ ಕೈಗಾರಿಕೆಗಳು ಮೂಲೆಗುಂಪಾದವು.

ಗ್ರಾಮೀಣ ಭಾರತವು ಕೈಗಾರಿಕಾ ಕೇಂದ್ರಗಳಾದ ನಗರಗಳಿಂದ ಶೋಷಣೆಗೆ ಒಳಗಾಗಿದೆ. ನಗರದ ಯಾಂತ್ರೀಕರಣವು ವಿಜೃಂಭಿಸಿ ದೈಹಿಕ ಶ್ರಮದ ಕಸುಬು-ಉಪಕಸುಬುಗಳು ಕಡೆಗಣಿಸಲ್ಪಟ್ಟಿವೆ. ನಗರೀಕರಣ, ಕೈಗಾರೀಕರಣ, ಆರ್ಥಿಕ ಉದಾರೀಕರಣ ನೀತಿಗಳು ಈವತ್ತು ದುಡಿಯುವ ವರ್ಗವನ್ನು ಸಾಮ್ರಾಜ್ಯಶಾಹಿ ಸಂಸ್ಕೃತಿಗೆ ಅಡ ಇಡುತ್ತಿವೆ; ಸಾಂಸ್ಕೃತಿಕ ದಾಸ್ಯಕ್ಕೆ ಒಳಗು ಮಾಡುತ್ತಿವೆ. ಇದನ್ನೇ ಕೀನ್ಯಾದ ಚಿಂತಕ ಗೂಗಿ ವಾ ಥಿಯೊಂಗೊ ಹೀಗೆ ಹೇಳಿದ್ದಾನೆ : 'ಸಾಮ್ರಾಜ್ಯ ಶಾಹಿಯ ಸವಾಲು ಏನೆಂದರೆ ನಮ್ಮ ದರೋಡೆಯನ್ನು ಸಹಿಸಿಕೊಳ್ಳಿ; ಇಲ್ಲವೇ ಸಾಯಲು ಸಿದ್ಧರಾಗಿ.' ಇದೇ ಜಾಗತೀಕರಣದ ಪರಮ ಗಂತವ್ಯ. ಎಲ್ಲವನ್ನು ಗ್ರಾಹಕತೆಯ ಮಾನದಂಡದಿಂದ ಅಳೆಯುವ, ಪರಿಮಾಣಗಳ ಮುಖಾಂತರವೇ ಸಕಲ ಸುಖವನ್ನು ಅನುಭವಿಸಲು ಯತ್ನಿಸುವ, ಉತ್ಪನ್ನಗಳನ್ನು ಹೊಂದುವುದೇ ಸಮೃದ್ಧಿ, ಸುಖದ ಸಂಕೇತ ಎನಿಸಿಕೊಳ್ಳುವ ಮನೋಧರ್ಮದಿಂದಾಗಿ ಇಂದು ಈ ದೇಶಕ್ಕೆ ಗ್ಯಾಟ್, ಡಂಕೆಲ್, ರುಪರ್ಟ್ ಮುರ್ಡೋಕ್‌ನಂಥವರು ಗಂಟು ಬಿದ್ದಿದ್ದಾರೆ. ಉಣ್ಣುವ ಅನ್ನ; ನೆತ್ತಿಗೆ ಒತ್ತುವ ಎಣ್ಣೆ ಸಹ ಇವರ ಹಿಡಿತದಲ್ಲಿ ಸಿಲುಕಿದೆ. ನಮ್ಮೆಲ್ಲಾ ಸಾಹಿತ್ಯ, ಸಂಸ್ಕೃತಿ, ಕಡೆಗೆ ಅಭಿರುಚಿಗಳೂ ಸಹ ಇವರ ದಾಸ್ಯಕ್ಕೆ ಒಳಗಾಗುತ್ತಿವೆ. ಮನುಷ್ಯರೂ ಸಹ ಪೇಟೆಂಟ್‌ಗೆ ಒಳಗಾಗುವ ಕಾಲ ಬಂದಿದೆ.

ಜನಪದರ ಭೌತಿಕ ಮತ್ತು ಸಾಂಸ್ಕೃತಿಕ ಉತ್ಪಾದನೆಗಳಾದ ಕರಕುಶಲ ಕಲೆಗಳು, ಗೀತೆ-ಕಥೆ-ಕುಣಿತಗಳೆಲ್ಲವೂ ವಾಣಿಜ್ಯ ಸರಕುಗಳಾಗಿ ಪರಿಣಮಿಸಿವೆ. (ವಿದೇಶಿಯರಿಗೆ ಭಾರತೀಯ ಕೈಮಗ್ಗದ ಉಡುಪು, ಕರಕುಶಲ ವಸ್ತುಗಳ ಬಗೆಗಿರುವ ಅತೀವವಾದ ವ್ಯಾಮೋಹದಿಂದ

ಬೇಡಿಕೆ ಹೆಚ್ಚಿದ್ದು, ಈ ರಹಸ್ಯ ಅಡಗಿರುವುದು ಜನಪದರ ಅಭೂತಪೂರ್ವವಾದ ಕಸುಬುಗಾರಿಕೆ, ವ್ಯಕ್ತಿ ಸ್ವಪ್ರಜ್ಞತೆ, ಮುಗ್ಧ ಕುಶಲತೆಯಲ್ಲಿ). ಈವತ್ತು ಗ್ರೀಟಿಂಗ್ ಕಾರ್ಡ್‌ಗಳ ಮೇಲೆ ಮುದ್ರಿತವಾಗುತ್ತಿರುವ ಜನಪದ ಚಿತ್ರಕಲೆಯ ವೈವಿಧ್ಯಮಯ ವಿನ್ಯಾಸಗಳು ಬಂಡವಾಳಶಾಹಿಗಳಿಗೆ ಕೋಟಿಗಟ್ಟಲೆ ಹಣವನ್ನು ಬಾಚಿ ಬಾಚಿ ಕೊಡುತ್ತಿವೆ. ಸಂಸ್ಕೃತಿಯ ಉತ್ಪನ್ನವಾದ ಜಾನಪದವು, ಉದ್ಯಮಪತಿಗಳು ಬಳಕೆದಾರರನ್ನು ಹೆಚ್ಚಿಸಿಕೊಳ್ಳಲು, ತಮ್ಮ ಸರಕುಗಳನ್ನು ಬಿಕರಿ ಮಾಡಿಕೊಳ್ಳಲು ಬಳಕೆಯಾಗುತ್ತಿದೆ. ಜಾನಪದದ ಆತ್ಮೀಯತೆಯು ಸಮುದಾಯವನ್ನು ಗಾಢವಾಗಿ ಸ್ಪರ್ಶಿಸುತ್ತದೆ ಎಂಬ ಗುಟ್ಟನ್ನು ಅರಿತ ಬಂಡವಾಳಶಾಹಿಗಳು ಇದರ ಉಪಯೋಗ ಪಡೆಯಲು ಮುಗಿ ಬೀಳುತ್ತಿದ್ದಾರೆ.

ಪರಮಾಣು ಪ್ರೇರಿತ ಪ್ರಗತಿ, ಮನುಷ್ಯನ ದುಡಿಮೆಯನ್ನು ಮಿತಗೊಳಿಸುವ ತಂತ್ರಜ್ಞಾನ, ಲಾಭದ ಹವಣಿಕೆಯನ್ನು ಧ್ಯೇಯವಾಗುಳ್ಳ ವೈಜ್ಞಾನಿಕ ಪ್ರಗತಿಯ ಕಾರಣದಿಂದಾಗಿ ಜನಪದರಿಂದು ಮಾನಹೀನ, ನಿರ್ಮಾನವೀಯ, ಅಸ್ತಿತ್ವ ರಹಿತ ಬದುಕಿನ ಅಂಚು ತಲುಪಿದ್ದಾರೆ. ಪ್ರಗತಿಯು ಮನುಷ್ಯನ ಬಾಳುವೆಗಿರುವ ಸಹಜ ಘನತೆಯ ನಾಶಕ್ಕೆ ಕಾರಣವಾಗಿದೆ ಎಂದರೆ ಅದಕ್ಕಿರುವ ಮಹತ್ವ ಎಂತಹುದೆಂಬುದು ಅರಿವಾದೀತು. ಸಾಮ್ರಾಜ್ಯಶಾಹಿಯ ಸಾಂಸ್ಕೃತಿಕ ಧಾಳಿಯ ಉದ್ದೇಶವು ದುಡಿಯುವ ವರ್ಗದ ಆತ್ಮವಿಶ್ವಾಸವನ್ನು ನಾಶಮಾಡುವುದಾಗಿದ್ದು, ಭಾಷೆ, ಪರಿಸರ, ಪರಂಪರೆಗಳನ್ನು ಒಟ್ಟಾರೆಯಾಗಿ ಜನತೆಯ ಸಂಸ್ಕೃತಿಯನ್ನು ಇಲ್ಲವಾಗಿಸುವುದು ಇದರ ಗುರಿಯಾಗಿರುತ್ತದೆ.

ಜಾಗತೀಕರಣದ ನೆಲೆಯಲ್ಲಿ ಜಾನಪದ ಮತ್ತು ಅದರ ಉತ್ಪತ್ತಿ ಸ್ಥಾನವಾದ ಜನಪದರು ಎರಡನ್ನೂ ಆರೋಗ್ಯಕರವಾದ ನೆಲೆಯಲ್ಲಿ ಕಾಯ್ದುಕೊಳ್ಳುವ ಬಗ್ಗೆ ಜಾನಪದ ವಿದ್ವಾಂಸರು ಇಂದು ಅತ್ಯಂತ ಸೂಕ್ಷ್ಮವಾಗಿ ನಿಗಾವಹಿಸಬೇಕಾದ ಅಗತ್ಯವಿದೆ. ಜನಶಕ್ತಿಯೇ ಪ್ರಬಲವಾಗಿದ್ದ ದೇಶದಲ್ಲಿ, ಜನರ ಶ್ರಮ ಕಾಲಕಸವಾಗಿ ಕುಶಲಕಾರರು, ಚಿತ್ರಕಾರರು ಸವಲತ್ತುಗಳಿಂದ ವಂಚಿತರಾಗಿ ಬದುಕುತ್ತಿದ್ದಾರೆ. ಗೋಡೆ, ಮಡಿಕೆ, ಬಟ್ಟೆ ಕೌದಿಗಳ ಮೇಲೆ ಚಿತ್ರಿಸುವ ಕೈಗಳು ಹಿಡಿಕೂಳಿಗಾಗಿ ಒದ್ದಾಡುತ್ತಿವೆ. ಕೈಗಾರಿಕಾ ಅಭಿವೃದ್ಧಿ, ಕೃಷಿ ಉತ್ಪಾದನೆಯ ಹೆಚ್ಚಳ ಮತ್ತು ಊರ್ಧ್ವಮುಖಿ ಆರ್ಥಿಕ ಬೆಳವಣಿಗೆಯು ಜಾನಪದದ ಉತ್ಪತ್ತಿ ಸ್ಥಾನವನ್ನು ಪಲ್ಲಟಗೊಳಿಸುವುದರಿಂದಾಗಿ ಹುಟ್ಟಿಕೊಳ್ಳುವ ಸಮಸ್ಯೆಗಳು ಮತ್ತು ಜನಪದರ ಸಾಂಸ್ಕೃತಿಕ ಬದುಕಿನ ಮೇಲಾಗುವ ಪ್ರಭಾವಗಳು, ಜಾನಪದ ಪ್ರತಿಕ್ರಿಯಿಸುವ ರೀತಿ, ಪಡೆದುಕೊಳ್ಳುವ ಮರು ಹುಟ್ಟು ಇತ್ಯಾದಿಗಳನ್ನು ನಿಚ್ಚಳವಾಗಿ ಗಮನಿಸಿ ಅಧ್ಯಯನಕ್ಕೆ ಒಳಗು ಮಾಡಬೇಕಾಗಿದೆ.

ನಮ್ಮದು ಏಕಾಕಾರಿ ಸಂಸ್ಕೃತಿಯಲ್ಲ; ಬಹುರೂಪೀ ಸಂಸ್ಕೃತಿ. ಕನ್ನಡ ನಾಡೊಂದರಲ್ಲೇ ಸುಮಾರು ೩೫೦ಕ್ಕೂ ಹೆಚ್ಚು ಸಂಸ್ಕೃತಿಗಳು ಬದುಕುತ್ತಿವೆ. ಒಂದೊಂದು ಪ್ರದೇಶದಲ್ಲೂ ಒಂದೊಂದು ಬಗೆಯ ಜನಾಂಗಕ್ಕೂ ಒಂದೊಂದು ಬಗೆಯ ಸಂಸ್ಕೃತಿ ರೂಢಿಯಲ್ಲಿದೆ. ಈ ಸಂಸ್ಕೃತಿಗಳಿಗೆ ಸೇರಿದ ಜನರು ತಮ್ಮದೇ ಆದ ಧಾರ್ಮಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ವ್ಯವಸ್ಥೆಗಳನ್ನು ಪರಂಪರಾಗತವಾಗಿ ಕಾಯ್ದುಕೊಂಡು ಬಂದಿದ್ದಾರೆ. ಆದರೆ ಸನಾತನ

ಸಂಸ್ಕೃತಿಪಾಲಕರ ಪೇಟ್ರಿಕ ಸಂಚಿನ ಫಲವಾಗಿ ಬಹುಸಂಖ್ಯಾತ ಜನಸಮುದಾಯದ ಸಾಂಸ್ಕೃತಿಕ ವಿವರಗಳೆಲ್ಲಾ ಈ ದೇಶದ ಚರಿತ್ರೆಯಲ್ಲಾಗಲಿ, ಸಂಸ್ಕೃತಿಯಲ್ಲಾಗಲಿ ದಾಖಲಾಗದೆ ಉಳಿದು ಹೋಗಿವೆ. ಬಹು ಮುಖಿ ಸಂಸ್ಕೃತಿಯ ನೆಲೆಗಳನ್ನುಳ್ಳ ಕನ್ನಡ ನಾಡಿನ ಸಂಸ್ಕೃತಿಗೆ ಬುನಾದಿಯಾಗಿ ಬಹುಸಂಖ್ಯಾತರ ಸಂಸ್ಕೃತಿ ಮತ್ತು ಜ್ಞಾನವಿದೆ ಎಂಬುದನ್ನು ಚರಿತ್ರಕಾರರು ಉದ್ದೇಶಪೂರ್ವಕವಾಗಿಯೇ ಮರೆಮಾಚಿರುವುದಲ್ಲದೆ, ಆ ಬಗ್ಗೆ ಪ್ರಜ್ಞಾಪೂರ್ವಕ ಮೌನವನ್ನು ಕಾಯ್ದುಕೊಂಡು ಬಂದಿರುತ್ತಾರೆ.

ಸಮ ಸಂಸ್ಕೃತಿಗಳ ಶೋಧ, ಅಧ್ಯಯನ, ವಿಶ್ಲೇಷಣೆಗಳ ಮೂಲಕ ಪ್ರತಿ ಸಂಸ್ಕೃತಿಯನ್ನು ಹುಟ್ಟುಹಾಕಬೇಕಾಗಿರುವುದಷ್ಟೇ ಅಲ್ಲದೆ, ತರತಮಭಾವಗಳ ಸಂಚನ್ನು ಸ್ಫೋಟಿಸಬೇಕಾಗಿದೆ. ಸಂಸ್ಕೃತಿಗಳ ಅಧ್ಯಯನವು ನಮ್ಮ ಅರಿವನ್ನು ವಿಸ್ತರಿಸುವುದಷ್ಟೇ ಅಲ್ಲ, ಮೂಲ ಸಂಸ್ಕೃತಿಯ ಹುಡುಕಾಟವನ್ನು ನಡೆಸಬಹುದಾಗಿದೆ. ಚರಿತ್ರೆಯಲ್ಲಿ ನಿರ್ಲಕ್ಷ್ಯಕ್ಕೊಳಗಾಗಿರುವ, ಮೂಕವಾಗಿ ಉಳಿದುಬಿಟ್ಟಿರುವ ಬಹುಸಂಖ್ಯಾತ ಜನಸಮುದಾಯದ ಪರಂಪರಾಗತ ಜ್ಞಾನವನ್ನು ಸಮರ್ಪಕವಾಗಿ ಸಂಗ್ರಹಿಸಿ ವಿಶ್ಲೇಷಿಸಬೇಕಾಗಿದೆ.

ನಾವಿಂದು ಪರಿಸರವನ್ನು ಆಟದ ವಸ್ತುವನ್ನಾಗಿ ಬಳಸಲಾಗುತ್ತಿರುವ ಕಾರಣ ಪರಿಸರವು ತನ್ನ ಸಮತೋಲನವನ್ನು ಕಳೆದುಕೊಂಡಿದೆ. ಸಸ್ಯ ಜಗತ್ತು, ಪ್ರಾಣಿ ಜಗತ್ತು, ಪಕ್ಷಿ ಜಗತ್ತು ನಾಶವಾಗುತ್ತಿದೆ. ಮಲೆನಾಡಿನ ಹಣ್ಣಡಿಕೆ ಚೇಳು (ಕಾಳಿಮಾತೆಯ ಕೊರಳ ಆಭರಣ ಎಂದು ಜನಪದರ ನಂಬಿಕೆ) ಹಾರು ಚೆಕ್ಕುಗಳು ಕಣ್ಮರೆಯಾಗಿವೆ. ಸೋಲಿಗರು ಬದುಕಿಗಾಗಿಯೇ ಅವಲಂಬಿಸಿದ್ದ ಜೇನಿನ ಉತ್ಪಾದನೆ ಕ್ಷೀಣಿಸಿದೆ (ಜೇನೇ ಇಲ್ಲದಿದ್ದರೆ ಮೇಲೆ ಜೇನಿನ ಹಾಡುಗಳೂ ನಾಪತ್ತೆ).

ಬಂಡವಾಳಶಾಹಿ ವರ್ಗವು, ರಾಷ್ಟ್ರೀಯ ಉತ್ಪನ್ನದಲ್ಲಿ ತನ್ನ ಪಾಲು ಬಂಡವಾಳ ಹೂಡುವಿಕೆಯಲ್ಲಿ ಸಾಧನೆ, ಇತ್ಯಾದಿಗಳು ರೂಪುಗೊಳ್ಳುತ್ತಿರುವುದರಿಂದ ಮನುಷ್ಯನು ನೀರು, ಪ್ರಾಣಿ, ಮರ, ಗಿಡ, ಗಾಳಿ ಮತ್ತು ಅವುಗಳಿಗೆ ಸಂಬಂಧಿಸಿದ ಪ್ರಕ್ರಿಯೆಗಳಿಗೆ ಸ್ಥಾನವಿಲ್ಲದಂತಾಗಿದೆ. ಉದ್ಯಮಗಳು ಸಮುದ್ರಕ್ಕೆ ಸೇರಿಸುವ ಘಾಟು ರಸಾಯನಿಕಗಳಿಂದಾಗಿ ಮೀನುಗಳ ಪ್ರಮಾಣ ಕ್ಷೀಣಿಸಿದೆ. ಬೆಸ್ತರ ಉದ್ಯೋಗಕ್ಕೆ ಹೊಡೆತ ಬಿದ್ದಿದೆ. ಜನಪದರ ಜೀವನೋತ್ಸಾಹ ಕಡಿಮೆಯಾಗುತ್ತಾ ಬಂದಿದ್ದು ಬದುಕಿನ ಉತ್ಪನ್ನವಾದ ಜಾನಪದವೂ ಸಹ ಸೊರಗುತ್ತಿದೆ.

ನಮ್ಮಲ್ಲಿ ಇತ್ತೀಚೆಗೆ ಗ್ರಾಮಗಳ ಅಧ್ಯಯನ ಬಿರುಸು ಪಡೆದುಕೊಂಡಿದೆ. ಆದರೆ ಗ್ರಾಮಗಳಲ್ಲಿನ ಪುಟ್ಟ ಪುಟ್ಟ ಘಟಕಗಳ ಅಧ್ಯಯನ ಪ್ರತ್ಯೇಕವಾಗಿ ನಡೆದಿಲ್ಲ. ಗ್ರಾಮದೊಳಗೇ ಬದುಕುವ ಕುಟುಂಬಗಳ ಹಾಗೂ ವ್ಯಕ್ತಿಗಳ ಅಧ್ಯಯನವನ್ನು ಪ್ರತ್ಯೇಕವಾಗಿ ಕೈಗೊಂಡಲ್ಲಿ, ಸಂಸ್ಕೃತಿಯ ಮೂಲಸ್ವರೂಪವನ್ನು ಗುರುತಿಸುವಲ್ಲಿ ನೆರವಿಗೆ ಬರುತ್ತವೆ. ಕುಟುಂಬ ಮತ್ತು ವ್ಯಕ್ತಿಯ ಅಧ್ಯಯನಗಳು ಆಯಾ ಪ್ರದೇಶದ ಜನಸಮುದಾಯದ ಚರಿತ್ರೆಯನ್ನು ಕಟ್ಟಿಕೊಡುತ್ತವೆ. ರಕ್ತಸಂಬಂಧಗಳ ವ್ಯವಸ್ಥೆ, ಕೌಟುಂಬಿಕ ಬದುಕಿನಲ್ಲಿ ಮಹಿಳೆಯ ಪಾತ್ರದಲ್ಲಾಗಿರುವ ಏರುಪೇರುಗಳು, ಕುಟುಂಬಕ್ಕೇ ಸಂಬಂಧಪಟ್ಟ ವೈವಿಧ್ಯಮಯ ಆರಾಧನಾ ವಿಧಾನಗಳು, ಕುಟುಂಬದ ವ್ಯಕ್ತಿಯ

ವಲಸೆ, ಆದರ ಹಿಂದಣ ಕಾರಕಗಳು, ಕಾಲ-ದೇಶ-ಪುರಾಣ-ಬದುಕಿನ ಬೆಳವಣಿಗೆಯಲ್ಲಿ, ಸಾಂಸ್ಕೃತಿಕ ವಿಕಾಸದಲ್ಲಿ ಸಂಭವಿಸಿದ ವೈಪರೀತ್ಯಗಳು ಹೀಗೆ ಹತ್ತು ಹಲವು ಸಂಗತಿಗಳು ದಾಖಲಾಗುವುದರ-ಮೂಲಕ ಅಧ್ಯಯನವು ಹೊಸದೊಂದು ತಿರುವನ್ನು ಪಡೆದುಕೊಳ್ಳುತ್ತಾ ಹೋಗುತ್ತದೆ.

ಜನಪದ ಸಾಹಿತ್ಯವು ಈ ನೆಲಕ್ಕೆ, ಈ ಬದುಕಿಗೆ ನೇರವಾಗಿ ಸಂಬಂಧಿಸಿದ್ದು. ಅದರ ಸುಖ ದುಃಖಗಳನ್ನು, ದೈನಂದಿನ ಹಾಡು-ಪಾಡುಗಳನ್ನು, ಮಾನವೀಯ ಸಂಬಂಧಗಳನ್ನು, ಪಶು-ಪಕ್ಷಿ-ಪ್ರಾಣಿಗಳನ್ನು, ಗಿಡ-ಮರ-ಬಳ್ಳಿಗಳನ್ನು ಕುರಿತು ಸಮೃದ್ಧವಾಗಿ ಅಭಿವ್ಯಕ್ತಿಸಿದ ಸಾಹಿತ್ಯ. ಜೀವಪರವಾದ, ಇರುವುದನ್ನು ಒಪ್ಪಿಕೊಂಡು, ಇಲ್ಲದುದಕ್ಕೆ ತಡಕಾಡದೆ ಬದುಕುವ ಸಂತೃಪ್ತಿ, ಸಮಷ್ಟಿ, ಜೀವನಪ್ರೀತಿಗಳು ಇಲ್ಲಿ ಅಗಾಧವಾಗಿವೆ. ನಂಬಿಕೆ, ಆಚರಣೆ, ಭಾಷೆ ಎಲ್ಲದರಲ್ಲೂ ವೈದಿಕ ಪರಂಪರೆಗಿಂತ ಭಿನ್ನವಾಗಿ ಬೆಳೆದು ಬಂದ ಈ ಸಾಹಿತ್ಯವು ಅಕ್ಷರಸ್ಥ ಪರಂಪರೆಯ ವಂಚನೆಗೆ ಈಡಾದುದರ ಫಲವಾಗಿ ಜನಪದ ಸಂಸ್ಕೃತಿಯನ್ನು ಸಾರುವ ಯಾವುದೇ ಗ್ರಂಥವಾಗಲಿ, ಟೀಕೆ ಟಿಪ್ಪಣಿಗಳಾಗಲಿ ಎಲ್ಲಿಯೂ ದಾಖಲಾಗದೆ ಹೋದ ಕಾರಣ ಕ್ರಮಬದ್ಧ ಇತಿಹಾಸ ಜಾನಪದಕ್ಕೆ ಪ್ರಾಪ್ತವಾಗಲಿಲ್ಲ. ಆದಾಗ್ಯೂ ತಲೆತಲೆಮಾರುಗಳಿಂದಲೂ ಕಂಠಸ್ಥ ಪರಂಪರೆಯಲ್ಲಿ ಕೇಳಿದ್ದನ್ನು ನೆನಪಿನಲ್ಲಿರಿಸಿಕೊಂಡು, ಸಂಕಲನ-ವ್ಯವಕಲನಗಳಿಗೆ ಒಳಗಾಗುತ್ತಾ ಮತ್ತೆ ಮತ್ತೆ ಹಾಡಿಕೊಳ್ಳುತ್ತಲೇ ಬಂದಿರುವ ಈ ಸಮಷ್ಟಿ ಸಾಹಿತ್ಯದಲ್ಲಿ ಕನ್ನಡ ನೆಲದ ಸಂಸ್ಕೃತಿಯ ನಿಲುವುಗಳು ಅಭಿವ್ಯಕ್ತಿ ಸಾಧಿಸಿವೆ.

ಪ್ರತಿಭಟನೆ ಜನಪದ ಸಂಸ್ಕೃತಿಯ ಉಸಿರು. ಆಳುವ ವರ್ಗ ನಿರಾಕರಿಸಿದ ಸಂಸ್ಕೃತಿಯ ದಾಖಲಾತಿಯೇ ತೀವ್ರ ಪ್ರತಿಭಟನೆಯಾಗಿ ರೂಪುಗೊಂಡಿದೆ. ಚರಿತ್ರೆಯ ಉದ್ದಕ್ಕೂ ಜನಪದ ಸಂಸ್ಕೃತಿಯ ಮೇಲೆ ಧಾಳಿ ನಡೆಸುತ್ತಲೇ ಬಂದ, ಶೂದ್ರರು ಮತ್ತು ಸ್ತ್ರೀಯರನ್ನು ಧಾರ್ಮಿಕ ಸ್ಥಾನಮಾನಗಳಿಂದ ಬಹಿಷ್ಕರಿಸಿದ ವೈದಿಕ ಸಂಸ್ಕೃತಿಯ ತಾತ್ವಿಕ ಕಾಳಜಿಗಳ ವಿರೋಧವೇ ಪ್ರತಿಭಟನೆಯಾಗಿ ಪರಿಣಮಿಸಿದೆ.

ಯಜಮಾನ ಸಂಸ್ಕೃತಿಯು ಮಾನ್ಯ ಮಾಡದ ಅನೇಕ ಸಂಗತಿಗಳನ್ನು ಜಾನಪದವು ತನ್ನಲ್ಲಿ ದಾಖಲಿಸಿದೆ. ವೈದಿಕ ಸಂಸ್ಕೃತಿಯು ಸ್ಥಾಯಿಯಾಗಿ ಪ್ರತಿಪಾದಿಸಿದ ಜಾತಿ ಪದ್ಧತಿಯನ್ನು ತೀವ್ರವಾಗಿ ವಿರೋಧಿಸಿದ ನೆಲದ ಸಂಸ್ಕೃತಿಯು 'ಜಾತಿ ಅಂದೋರ ಮುಕಳಿಗೆ ಗೂಟ' ಎಂದು ಸವಾಲು ಹಾಕಿತು. ಏಕ ಸಂಸ್ಕೃತಿಯ ಆದರ್ಶ ಪುರುಷನಾದ ರಾಮನ ಕಲ್ಪನೆಗೆ ಬದಲಾಗಿ ರಾವಣನನ್ನು ಪೂಜಿಸಿತು. ಮದ್ದೂರು, ನಿಡಘಟ್ಟ, ಕನಕಪುರ ತಾಲ್ಲೂಕಿನ ಸುತ್ತಮುತ್ತ ರಾವಣ ಒಕ್ಕಲುಗಳಿವೆ. ಗ್ರಾಮದೇವತೆಗಳ ಹಬ್ಬಗಳಲ್ಲಿ ಗ್ರಾಮದೇವತೆಗಳನ್ನು ಹೀನಾಮಾನವಾಗಿ ಬಯ್ಯುವ ಸವರ್ಣೀಯರಿಗೆ ಚೆನ್ನಾಗಿ ಉಗಿಯುವ ಸ್ವರೂಪವನ್ನು ರೂಢಿಸಿಕೊಂಡಿತು. ಜಾತಿನಿಷ್ಠ ನಾಡಿನಲ್ಲಿ ಗಾಢವಾಗಿದ್ದ ಶ್ರೇಣೀಕರಣದ ಪ್ರಯುಕ್ತ ಸಾಮುದಾಯಿಕ ಪ್ರತಿಭಟನೆ ಕಂಡುಬರದಿದ್ದರೂ ಆಳದಲ್ಲಿ ಅಸಹನೆ, ಪ್ರತಿಭಟನೆ ಹೊಗೆಯಾಡುತ್ತಲೇ ಇದ್ದಿತು. ವ್ಯವಸ್ಥೆಯ ಬಗೆಗಿನ ಅಸಮಾಧಾನ ಕಾರ್ಯಗಳಲ್ಲಿ ಅಭಿವ್ಯಕ್ತಿ

ಪಡೆದುಕೊಂಡಿತು. ಯಜಮಾನ ಸಂಸ್ಕೃತಿ, ಜಮೀನ್ದಾರಿ ವ್ಯವಸ್ಥೆಗಳು ಬಳುವಳಿಯಾಗಿ ನೀಡಿದ "ಚರಿತ್ರೆಯ ದುಃಸ್ವಪ್ನಗಳಾದ ಸತೀಪದ್ಧತಿ, ವೀರಗಲ್ಲು, ಮಾಸ್ತಿಕಲ್ಲು, ನಿಸಿದಿ ಕಲ್ಲು, ಹೆಣ್ಣನ್ನು ನೀರಿಗೆ, ಬೆಂಕಿಗೆ, ಕೋಟೆಗೆ ಬಲಿಯಾಗಿಸುವ ಪದ್ಧತಿಗಳು" ದೇಸೀ ಸಂಸ್ಕೃತಿಗೆ ಸೇರಿದವುಗಳಲ್ಲ. ಇವುಗಳನ್ನು ವಿರೋಧಿಸಿದ ಹಾಡ್ಗತೆಗಳು ಹುಟ್ಟಿಕೊಂಡಿದ್ದೇ ಕನ್ನಡದ ಹೆಣ್ಣು ಮಕ್ಕಳ ಭೀತಿಗ್ರಸ್ತ ಮನಸ್ಸಿನಲ್ಲಿ. ಜಾತೀಯತೆಯನ್ನು ಪೋಷಿಸಿದ ಪುರೋಹಿತಶಾಹಿಯೇ ವ್ಯಭಿಚಾರವನ್ನು ಪರೋಕ್ಷವಾಗಿ ಪ್ರೋತ್ಸಾಹಿಸಿದ್ದರ ಪರಿಣಾಮ ದೇವದಾಸಿ ಸಂಪ್ರದಾಯ. ಧರ್ಮದ ಹೆಸರಿನಲ್ಲಿ ನಡೆಯುವ, ಮಹಿಳೆಯರ ಮೇಲಿನ ಶೋಷಣೆಯನ್ನು ಸೂಕ್ಷ್ಮವಾಗಿ ಪ್ರತಿಭಟಿಸುವ 'ಕೆರೆಗೆ ಹಾರ', 'ಚಿಕ್ಕಳು ಪಿರಿದಿಮ್ಮವ್ವ', 'ಧರಣಿಯಮ್ಮನ ಬಲಿದಾನ', 'ತಾಡಿ ನಾಗಮ್ಮ' ಮೊದಲಾದ ಕಥನ ಕಾವ್ಯಗಳು ಪ್ರತಿಷ್ಠಿತ ಸಂಸ್ಕೃತಿಯ ವಂಚನೆಯ ಪ್ರತಿಯಾಗಿ ಹುಟ್ಟಿದ ಕಾವ್ಯಗಳು. ಶಿಷ್ಟ ಸಂಸ್ಕೃತಿಯ ಪುರಾಣ, ಮಹಾಕಾವ್ಯಗಳ ನಾಯಕರು ಕ್ಷತ್ರಿಯ, ಬ್ರಾಹ್ಮಣರಾದರೆ, ಜನಪದ ಕಥೆಗಳಲ್ಲಿ ಕಂಡುಬರುವ ನಾಯಕರು, ಕುಂಟರು, ಅಸಹಾಯಕರು, ದುರ್ಬಲರಾಗಿರುವುದು ಪ್ರತಿಭಟನೆಯ ಮತ್ತೊಂದು ಮುಖವಾಗಿದೆ.

ಜಗತ್ತಿನ ಮಹಿಳೆಯು ಶತಶತಮಾನಗಳಿಂದಲೂ ಸಾಂಸ್ಕೃತಿಕವಾಗಿ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಶೋಷಣೆಗೊಳಗಾಗುತ್ತಲೇ ಬಂದಿದ್ದಾಳೆ. 'ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ' ಎಂದು ಸಾರಿದ ಮೇಲು ಸಂಸ್ಕೃತಿಯು ಹೆಣ್ಣನ್ನು ಉಪಭೋಗದ ವಸ್ತುವಾಗಿ ಪರಿಗಣಿಸಿತು. ಇಂಥಲ್ಲಿ ಮೊತ್ತಮೊದಲ ಬಾರಿಗೆ ಹೆಣ್ಣಿಗೆ ದುಡಿಯುವ ಹಕ್ಕನ್ನು, ಮಾತನಾಡುವ ಹಕ್ಕನ್ನು ನೀಡಿದ್ದು ನೆಲದ ಸಂಸ್ಕೃತಿ. ಕೃಷಿಯನ್ನು, ಅಡಿಗೆ ಮಾಡುವುದನ್ನು, ಸಾವಯವ ಗೊಬ್ಬರ ತಯಾರಿಸುವುದನ್ನು, ಔಷಧಿ ಮಾಡುವುದನ್ನು ಸಂಸ್ಕೃತಿಗೆ ಕಲಿಸಿಕೊಟ್ಟವಳು ಹೆಣ್ಣು. ಪುರುಷನಿಗೆ ಸರಿಸಮನಾಗಿ ದುಡಿಯುವ ಮಹಿಳೆ ಧೈರ್ಯ, ಪ್ರತಿಭಟನೆಗಳನ್ನು ಮೈಗೂಡಿಸಿಕೊಂಡದ್ದು ಜನಪದ ಸಂಸ್ಕೃತಿಯಲ್ಲಿ. ಶಿಷ್ಟ ಸಮಾಜವು ನಿರಾಕರಿಸಿದ ಸಂಸ್ಕೃತಿ ಮತ್ತು ಅಲ್ಲಿಂದಲೇ ಹುಟ್ಟುವ ಪ್ರತಿಭಟನೆಯು ಜನಪದ ಕಲೆಗಳಲ್ಲಿ, ಸಾಹಿತ್ಯದಲ್ಲಿ ಸಶಕ್ತವಾಗಿ ಒಡಮೂಡಿದೆ.

* * *

ಈವತ್ತು ಜಾನಪದ ಎನ್ನುವಂಥದ್ದು ಯಾವುದೇ ಶಾಸ್ತ್ರದ ಬಾಲಂಗೋಚಿಯಾಗಿರದೆ, ಪ್ರತ್ಯೇಕ ವಿಜ್ಞಾನವಾಗಿ, ಜ್ಞಾನದ ಶಿಸ್ತಾಗಿ ಬೆಳೆದಿದೆ. ಇಷ್ಟಾಗಿಯೂ ಜಾನಪದವನ್ನು ಒಂದು ಚೌಕಟ್ಟಿನಲ್ಲಿ ಇಲ್ಲವೆ ಅಳತೆಗೋಲಿರಿಸಿ, ಜಾನಪದ ಎಂದರೆ ಇದೇ, ಇಷ್ಟೇ ಎಂದು ಸೂತ್ರೀಕರಿಸಿ ಹೇಳಲು ಬರುವುದಿಲ್ಲ. ಜಾನಪದದ ಗುಣವೇ ಅಂಥದ್ದು; ಎಂತಹುದೇ ಹಿಡಿತಕ್ಕೂ ದಕ್ಕದಿರುವಂಥದ್ದು. ಲಭ್ಯವಿರುವ ಸುಮಾರು ೨೦ಕ್ಕೂ ಮಿಕ್ಕ ಜಾನಪದ ನಿರ್ವಚನಗಳನ್ನು ಮೀರಿ ಜಾನಪದ ತನ್ನ ಆಯಾಮವನ್ನು ವಿಸ್ತರಿಸಿಕೊಂಡಿದೆ. ಕ್ಷೇತ್ರಕಾರ್ಯದಲ್ಲಿ ದೊರಕುವ ಸಾಮಗ್ರಿ, ವಿಚಾರ ಮತ್ತು ಅನ್ವಯಿಕತೆಯ ಆಧಾರದ ಮೇಲೆ ನಾವಿಂದು ಜಾನಪದವನ್ನು ಅರ್ಥೈಸಿಕೊಳ್ಳಬೇಕಾಗಿದೆ.

ನಮ್ಮ ಜಾನಪದ ವಿದ್ವಾಂಸರು ವರ್ತಮಾನದಲ್ಲಿ, ಜಾನಪದವನ್ನು ಸರಿಯಾದ ನೆಲೆಗಳಲ್ಲಿ ಗ್ರಹಿಸಬೇಕಾಗಿದೆ. ಹೊರಗಿನಿಂದ ಎರವಲು ತಂದ ಸಿದ್ಧಾಂತಗಳೇ ಪರಮಗಂತವ್ಯವಲ್ಲ. 'ಕೇವಲ ಅಧ್ಯಯನ' ಕ್ಕಿಂತ ಅನ್ವಯಿಕತೆ ಬಹುಮುಖ್ಯವಾದುದು. ಸಾಮಗ್ರಿಯನ್ನು ಒದಗಿಸಿ ಕೊಡುವ ವ್ಯಕ್ತಿಗಳು ಅವಿದ್ಯಾವಂತರಾಗಲಿ, ಅನಕ್ಷರಸ್ಥರಾಗಲಿ ಅಲ್ಲ. ಅವರು ನಮ್ಮ ಅಧ್ಯಯನದ ಸಹಭಾಗಿಗಳು, ಒಂದರ್ಥದಲ್ಲಿ Research partners. ವಸಾಹತುಶಾಹಿ ಶಿಕ್ಷಣ ಕ್ರಮವು ರೂಢಿಗೆ ತಂದ ಅಕ್ಷರದ ಅಹಂಕಾರವು ಗ್ರಾಮೀಣ ಪ್ರತಿಭೆಯನ್ನು, ಸಮೃದ್ಧ ಜೀವನಾನುಭವವನ್ನು ನುಂಗಿ ನೊಣೆದಿದೆ. ವಸಾಹತುಶಾಹಿ ಹುಟ್ಟುಹಾಕಿದ ಗ್ರಾಮೀಣ ಮೌಢ್ಯ (Village idiosy) ಪರಿಕಲ್ಪನೆಯನ್ನು ನಾವಿವತ್ತು ಮರುಚಿಂತನೆ ಮಾಡಬೇಕಾಗಿದೆ.

ಜಾನಪದ ಎನ್ನುವಂಥದ್ದು ಪರಂಪರಾಗತವಾದ ಹರಳುಗಟ್ಟಿದ ವಿವೇಕ ಮತ್ತು ಅನುಭವ. ಸದಾ ಸೃಷ್ಟಿಸುವ ಶಕ್ತಿಯನ್ನುಳ್ಳದ್ದು, ಭೋಗಿಸುವಂಥದ್ದಲ್ಲ. ದೇಶೀಯ ಜ್ಞಾನಪರಂಪರೆಯನ್ನು ಈ ನಾಡಿನಲ್ಲಿ ಬೆಳೆಸಿ, ಉಳಿಸಿಕೊಂಡು ಬಂದವಳು ನಮ್ಮೆಲ್ಲರ ತಾಯ್ತನದ ಸಂಕೇತವಾಗಿರುವ ಹೆಣ್ಣು. ಕೃಷಿಯಾಗಲಿ, ಅಡಿಗೆಯಾಗಲಿ, ಹಸುರೆಲೆ ಗೊಬ್ಬರವಾಗಲಿ, ಬೀಜತಳಿಗಳಾಗಲಿ, ವೈದ್ಯೋಪಚಾರವಾಗಲಿ ಎಲ್ಲವೂ ಈ ಸಂಸ್ಕೃತಿಗೆ ಹೆಣ್ಣು ನೀಡಿದ ಭಿಕ್ಷೆ. ನಿಸರ್ಗವನ್ನು ಪ್ರೀತಿಸುತ್ತ, ಪೂಜಿಸುತ್ತಾ, ನಿಸರ್ಗದೊಂದಿಗೇ ತಳುಕು ಹಾಕಿಕೊಂಡು ಪ್ರಕೃತಿ ಕೇಂದ್ರಿತ ಚಿಂತನೆ ನಡೆಸಿದ ನಮ್ಮ ಜನಪದರು ಯಾವುದನ್ನೂ ತಿರಸ್ಕರಿಸದೆ, ಕಂಡದ್ದನ್ನು ಕಂಡಂತೆ: ಉಂಡದ್ದನ್ನು ಉಂಡಂಗೆ ಅಭಿವ್ಯಕ್ತಿಸಿಕೊಂಡು ಬಂದವರು.

ಬಹುಮುಖಿ ಸಂಸ್ಕೃತಿಯ ನೆಲೆಯಲ್ಲಿ ನಾವೀಗ ಜಾನಪದವನ್ನು ಅವರ ಎಲ್ಲ ಅರ್ಥ ವಿಸ್ತಾರಗಳೊಂದಿಗೆ ಹೊಸದಾಗಿ ಮುರಿದು ಕಟ್ಟುವ ಕೆಲಸ ಮಾಡಬೇಕಾಗಿದೆ. ಜಾಗತೀಕರಣದ ಸವಾಲುಗಳಿಗೆ ಪ್ರತಿಯಾಗಿ ಜಾನಪದವನ್ನು ರಚನಾತ್ಮಕವಾಗಿ ಗಟ್ಟಿಗೊಳಿಸಬೇಕಾಗಿದೆ. ಜಾನಪದ ಎನ್ನುವಂಥದ್ದು ಯಾವತ್ತಿಗೂ ಮನುಷ್ಯ ಕೇಂದ್ರಿತವಾದುದಲ್ಲ, ಜೀವ ಕೇಂದ್ರಿತವಾದುದು, ಪ್ರಕೃತಿ ಕೇಂದ್ರಿತವಾದುದು. ಅದರ ಒಟ್ಟು ಆಶಯಗಳೇ ಬದುಕನ್ನು ಬೆಳೆಸುವಂಥದ್ದು. ಈ ಹಿನ್ನೆಲೆಯಲ್ಲಿ ನಾನು ಜಾನಪದವನ್ನು ಅದರ ಪ್ರಕ್ರಿಯೆಯಲ್ಲಿ ಗ್ರಹಿಸಲು ಇಚ್ಛಿಸುತ್ತೇನೆ. ಜಾನಪದ ಪ್ರಕ್ರಿಯೆ ಎನ್ನುವಂಥದ್ದು, ಕೇವಲ ಸಾಮಗ್ರಿಯಲ್ಲ; ಅದರೊಳಗಿನ ವಿಚಾರ ಮತ್ತು ಜನ ಬದುಕುವ ರೀತಿ. ಪ್ರಕ್ರಿಯೆಯಲ್ಲಿ ಇಲ್ಲದ್ದು ಜಾನಪದ ಎನಿಸಿಕೊಳ್ಳುವುದಿಲ್ಲ. ನೀವೇ ಯೋಚಿಸಿ? ನಮಗ್ಯಾಕೆ ಈವತ್ತೂ ರಾಗಿರೊಟ್ಟಿ, ಮುದ್ದೆ, ಉಪ್ಪೆಸರು, ಸೊಪ್ಪಿನಸಾರು, ಕೋಳಿಸಾರು, ಹಲಸಿನಕಾಯಿ ತಾಳದ, ಪುಳಿಯೋಗರೆ ಇಷ್ಟವಾಗುತ್ತವೆ?

❑

ಜಿ. ನಾರಾಯಣ ಬದುಕಿನ ಬಳ್ಳಿ

•

•

೧೯೨೩ ಜನನ: ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ದೇಶಹಳ್ಳಿಯಲ್ಲಿ.

೧೯೨೯ ದೇಶಹಳ್ಳಿಯ ಪ್ರಾಥಮಿಕ ಶಾಲಾ ಪ್ರವೇಶ.

೧೯೩೩ ಮದ್ದೂರಿನಲ್ಲಿ ಮಾಧ್ಯಮಿಕ ಶಾಲಾ ಪ್ರವೇಶ.

೧೯೩೭ ಚನ್ನಪಟ್ಟಣದಲ್ಲಿ ಪ್ರೌಢಶಾಲಾ ಪ್ರವೇಶ.

೧೯೩೮ ಶಿವಪುರದಲ್ಲಿ ಕಾಂಗ್ರೆಸ್ ಅಧಿವೇಶನ; ಟಿ. ಸಿದ್ಧಲಿಂಗಯ್ಯನವರು ಮತ್ತು ಎಚ್.ಕೆ. ವೀರಣ್ಣಗೌಡರ ಪರಿಚಯ.

೧೯೪೦ ಪ್ರೌಢಶಾಲಾ ಶಿಕ್ಷಣಕ್ಕೆ ವಿದಾಯ.

೧೯೪೨ ಬೆಳಗಾವಿ ಜಿಲ್ಲಾ ಹುದಲಿಯಲ್ಲಿರುವ ಜಮನಾಲಾಲ್ ಖಾದಿವಿದ್ಯಾಲಯ ಪ್ರವೇಶ; 'ಕ್ವಿಟ್ ಇಂಡಿಯಾ' ಚಳವಳಿಯಲ್ಲಿ ಪಾಲು; ಪೊಲೀಸರಿಂದ ಬಂಧನ; ಬೆಳಗಾಂ ಜೈಲಿನಲ್ಲಿ ೩ ತಿಂಗಳ ಕಠಿಣ ಶಿಕ್ಷೆ ಅನುಭವ.

೧೯೪೩ ಹುಟ್ಟೂರಿಗೆ ಮರುಪಯಣ; ಊರಿನಲ್ಲಿ ವಯಸ್ಕರ ಶಿಕ್ಷಣ ತರಗತಿ ಆರಂಭ; "ಅಕ್ಷರವ ನೀವ್ ಕಲಿಯಿರಿ" ಮತ್ತಿತರ ಪ್ರಚಾರ ಕೃತಿಗಳ ರಚನೆ.

೧೯೪೪ ಮುಂಬಯಿ ಬಿರ್ಲಾ ಭವನದಲ್ಲಿ ಮಹಾತ್ಮ ಗಾಂಧೀಜಿ ದರ್ಶನ; ಅವರ ವಿಚಾರ ಧಾರೆಯಿಂದ ಪೂರ್ಣ ಪ್ರಭಾವ.

೧೯೪೬ ಮೈಸೂರು ಪ್ರದೇಶ ಕಾಂಗ್ರೆಸ್ ಕಾರ್ಯಾಲಯಕ್ಕೆ ಪ್ರವೇಶ; ನಾಡಿನ ಪ್ರಮುಖ ರಾಜಕೀಯ ಮುಖಂಡರ ಪರಿಚಯ.

೧೯೪೭ 'ವಾರ್ತಾ' ಪತ್ರಿಕೆ ಮತ್ತು ಮುದ್ರಣಾಲಯ ವ್ಯವಸ್ಥಾಪಕ ಹುದ್ದೆ.

೧೯೪೯ 'ಚಿತ್ರಗುಪ್ತ' ಪತ್ರಿಕೆಯ ವ್ಯವಸ್ಥಾಪಕ ಹುದ್ದೆ.

೧೯೫೦ 'ಸ್ವತಂತ್ರ ಮುದ್ರಣಾಲಯ'ದ ಸ್ಥಾಪನೆ.

೧೯೫೧ "ವಿನೋದ" ಮಾಸಪತ್ರಿಕೆಯ ಪ್ರಾರಂಭ; ಕರ್ನಾಟಕದ ನಾನಾ ಭಾಗದ ಅನೇಕ ಸಾಹಿತಿಗಳ ಸಂಪರ್ಕ.

೧೯೫೬ ದಾಂಪತ್ಯ ಜೀವನದ ದೀಕ್ಷೆ; ಸಂಗಾತಿ ಶ್ರೀಮತಿ ಯಶೋದಮ್ಮ ಅವರೊಂದಿಗೆ ಹೊಸ ಜೀವನದ ಆರಂಭ.

೧೯೫೭ ಮೊದಲ ಬಾರಿಗೆ ಬೆಂಗಳೂರು ನಗರ ಸಭೆಯ ಸದಸ್ಯರಾಗಿ ಚಾಮರಾಜಪೇಟೆ ಕ್ಷೇತ್ರದಿಂದ ಆಯ್ಕೆ; ಆರೋಗ್ಯ ಸಮಿತಿ ಅಧ್ಯಕ್ಷತೆ.

೧೯೫೮ 'ಶಶಿಕಲಾಪಿದರು' ಸಾಂಸ್ಕೃತಿಕ ಸಂಸ್ಥೆಯ ಅಧ್ಯಕ್ಷತೆ.

೧೯೬೦ ಎರಡನೆಯ ಬಾರಿಗೆ ಬೆಂಗಳೂರು ನಗರ ಸಭೆಗೆ ಅದೇ ಕ್ಷೇತ್ರದಿಂದ ಆಯ್ಕೆ; ಕಾಮಗಾರಿ ಸಮಿತಿ ಅಧ್ಯಕ್ಷತೆ; ಮೈಸೂರು ಹಿಂದಿ ಪ್ರಚಾರ ಪರಿಷತ್ತಿನ ಕಾರ್ಯದರ್ಶಿತ್ವ.

೧೯೬೪ ಬೆಂಗಳೂರು ನಗರ ಸಭೆಯ ಮೇಯರ್ ಸ್ಥಾನದ ಗೌರವ; ರಸ್ತೆಗಳ ಸಮೀಕ್ಷೆ ಸುಧಾರಣೆ; 'ಕಾಮಗಾರಿ ಕಾರ್ಯಕ್ರಮ' ಜಾರಿ; ಕಾವೇರಿ ನೀರು ಸರಬರಾಜು ಯೋಜನೆಗೆ ವ್ಯವಸ್ಥೆ; ಕೆಂಪೇಗೌಡ ಪ್ರತಿಮೆ ಸ್ಥಾಪನೆ; ಗಣ್ಯರಿಗೆ ಸತ್ಕಾರ–ಸನ್ಮಾನ; ನಗರಾಭಿವೃದ್ಧಿಗೆ ಬೃಹತ್ ಯೋಜನೆ ರಚನೆ.

೧೯೬೫ 'ಶ್ರೀಮದ್ರಾಮಾಯಣ ಮಹಾಭಾರತಾದಿ ಪ್ರಕಟನಾ ಸಮಿತಿ' ಕಾರ್ಯದರ್ಶಿತ್ವ; 'ಶಾರದಾ ವಿದ್ಯಾಪೀಠ'ದ ಸ್ಥಾಪನೆ; 'ವಿನೋದ'ದ ೧೫ನೆಯ ವಾರ್ಷಿಕೋತ್ಸವ.

೧೯೬೭ ಕನ್ನಡ ರಾಜ್ಯೋತ್ಸವ ಆಚರಣೆಗೆ ಹೊಸ ರೂಪು–'ಕನ್ನಡ ರಾಜ್ಯೋತ್ಸವ ಸಾಹಿತ್ಯ ಪ್ರಚಾರ ಸಮಿತಿ' ರಚನೆ; ಸಮಿತಿಯ ಕಾರ್ಯಾಧ್ಯಕ್ಷತೆ.

೧೯೬೯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷತೆ; ಪರಿಷತ್ತಿನ ತ್ರೈವಾರ್ಷಿಕ ಯೋಜನೆಯ ಸಿದ್ಧತೆ.

೧೯೭೦ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಸಮಿತಿಗಳ ರಚನೆ; ಪರಿಷತ್ತಿನ ಸುವರ್ಣ ಮಹೋತ್ಸವ ಆಚರಣೆ; ನಲವತ್ತೇಳನೆಯ ಕನ್ನಡ ಸಾಹಿತ್ಯ ಸಮ್ಮೇಳನ.

೧೯೭೧ ಜಿಲ್ಲಾ ಸಾಹಿತ್ಯ ಸಮ್ಮೇಳನಗಳ ವರ್ಷ; ರಾಷ್ಟ್ರದ ರಕ್ಷಣಾನಿಧಿಗಾಗಿ ಪರಿಷತ್ತಿನಿಂದ ನಿಧಿ ಸಂಗ್ರಹ – ಕಾಣಿಕೆ ಸಲ್ಲಿಕೆ.

೧೯೭೨ ಪ್ರಥಮ ಬಾರಿಗೆ ಅಖಿಲ ಕರ್ನಾಟಕ ಗಮಕ ಸಮ್ಮೇಳನ; ಗಡಿನಾಡು ಕನ್ನಡಿಗರ ಸಮ್ಮೇಳನ; ಕೀರ್ತನಕಾರರ ಸಮ್ಮೇಳನ; ರಾಜ್ಯಕ್ಕೆ 'ಕರ್ನಾಟಕ' ನಾಮಕರಣವಾದ ವರ್ಷ; 'ಅಂತರರಾಷ್ಟ್ರೀಯ ಪುಸ್ತಕ ವರ್ಷಾಚರಣೆ.

೧೯೭೩ ಮುಂಬೈ ಕನ್ನಡಿಗರ ಸಮ್ಮೇಳನ; ಅಖಿಲ ಕರ್ನಾಟಕ ನಾಟಕ ಸಮ್ಮೇಳನ–ಸ್ಪರ್ಧೆಗಳು; ಪ್ರಾಚೀನ ಕಾವ್ಯಗಳ ಕನ್ನಡಾನುವಾದ ಕಾರ್ಯಾರಂಭ; ಪುಸ್ತಕದಾನ ಚಳವಳಿ ಆರಂಭ; ಪರಿಷತ್ತಿನ ಸುವರ್ಣ ಮಹೋತ್ಸವ ಕಟ್ಟಡದ ಪ್ರಾರಂಭೋತ್ಸವ; ಪರಿಷತ್ತಿನ ಪಂಚವಾರ್ಷಿಕ ಯೋಜನೆ ರಚನೆ.

೧೯೭೪ ಪ್ರಥಮ ಬಾರಿಗೆ ಮಹಿಳಾ ಸಾಹಿತಿ (ಶ್ರೀಮತಿ ಜಯದೇವಿತಾಯಿ ಲಿಗಾಡೆ)

ಅಧ್ಯಕ್ಷತೆಯಲ್ಲಿ, ಮಂಡ್ಯದಲ್ಲಿ ೪೮ನೆಯ ಕನ್ನಡ ಸಾಹಿತ್ಯ ಸಮ್ಮೇಳನ; ಪರಿಷತ್ತಿನಲ್ಲಿ ಸ್ಥಿರಪುಸ್ತಕ ಪ್ರದರ್ಶನ; ಸಾಂಸ್ಕೃತಿಕ ಮತ್ತು ವಸ್ತುಸಂಗ್ರಹಾಲಯ ಸ್ಥಾಪನೆ.

೧೯೭೫ ಪರಿಷತ್ತಿನ ಕಾರ್ಯಚಟುವಟಿಕೆಗಳ ಸಾಕ್ಷ್ಯಚಿತ್ರೀಕರಣ ಆರಂಭ; ಅಂತರರಾಷ್ಟ್ರೀಯ ಮಹಿಳಾ ವರ್ಷಾಚರಣೆ; ಲೇಖಕಿಯರ ಕೃತಿಗಳ ವಿಶೇಷ ಪ್ರಕಟಣೆ; 'ವಿನೋದ'ದ ರಜತ ಮಹೋತ್ಸವ.

೧೯೭೬ ಶಾಸನಶಾಸ್ತ್ರ ತರಗತಿಗಳ ಆರಂಭ; ಕನ್ನಡ ನಿಘಂಟಿನ ಎರಡನೆಯ ಸಂಪುಟ ಬಿಡುಗಡೆ; ಲೇಖಕಿಯರ ಶಿಬಿರ; ಜಿಲ್ಲಾ ಹಾಗೂ ರಾಜ್ಯ ಮಟ್ಟದ ಜಾನಪದ ಕಲಾ ಮಹೋತ್ಸವಗಳು; ಶಿವಮೊಗ್ಗದಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ.

೧೯೭೭ ಪರಿಷತ್ತಿನ ವಜ್ರಮಹೋತ್ಸವ ಆಚರಣೆ; ವಜ್ರಮಹೋತ್ಸವ ನೆನಪಿನ ಕಟ್ಟಡದ ಶಂಕುಸ್ಥಾಪನೆ; ಜ್ಞಾನಪೀಠ ಪ್ರಶಸ್ತಿ ವಿಜೇತರಿಗೆ ಸನ್ಮಾನ; 'ಕನ್ನಡ ಸಾಹಿತ್ಯ ಪರಿಷತ್ತು' 'ಕರ್ನಾಟಕ ಜನಪದ ಕಲೆಗಳು' ಸಾಕ್ಷ್ಯಚಿತ್ರಗಳ ಬಿಡುಗಡೆ.

೧೯೭೮ ದೆಹಲಿಯಲ್ಲಿ ೫೦ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಪರಿಷತ್ತಿನ ಅಧ್ಯಕ್ಷತೆಯಿಂದ ನಿವೃತ್ತಿ.

೧೯೮೦ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಸದಸ್ಯತ್ವ.

೧೯೮೧ ಕರ್ನಾಟಕ ಜಾಗೃತಿ ಪರಿಷತ್ ಸ್ಥಾಪನೆ; ಅಧ್ಯಕ್ಷತೆ.

೧೯೮೩ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಗೆ ಮರು ನಾಮಕರಣ; ಕಳೆದ ಹತ್ತಾರು ವರ್ಷಗಳಿಂದ ಸರ್ಕಾರದ ಅನೇಕ ಸಮಿತಿಗಳಲ್ಲಿ ಸದಸ್ಯತ್ವ; ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಅನೇಕ ಸಂಘ ಸಂಸ್ಥೆಗಳ ಪದಾಧಿಕಾರ ಸ್ಥಾನ; ಕನ್ನಡ ನುಡಿ–ನಡೆಗಳ ರಕ್ಷಣೆಗಾಗಿ ನಡೆಯುವ ಚಳವಳಿಗಳಲ್ಲಿ ಕ್ರಿಯಾತ್ಮಕ ಪಾಲು.

೧೯೮೪ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ 'ಶ್ರೀ' ಜನ್ಮಶತಮಾನೋತ್ಸವದ ಕಾರ್ಯಾಧ್ಯಕ್ಷರು.

೧೯೮೫ ಕನ್ನಡ ಕಾವಲು ಮತ್ತು ಗಡಿ ಸಲಹಾ ಸಮಿತಿ ಸದಸ್ಯತ್ವ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಕಾರ್ಯಸುಧಾರಣಾ ಉನ್ನತ ಮಟ್ಟದ ಸಮಿತಿ ಅಧ್ಯಕ್ಷತೆ.

೧೯೮೭ ಪತ್ರಿಕಾ ಅಕಾಡೆಮಿ ಅಧ್ಯಕ್ಷ ಸ್ಥಾನ (೩ ವರ್ಷ) ಡಿ.ವಿ.ಜಿ. ಜನ್ಮಶತಮಾನೋತ್ಸವ ಸಮಿತಿ ಕಾರ್ಯಾಧ್ಯಕ್ಷ.

೧೯೯೧ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ನೇಮಕ (೩ ವರ್ಷ).

೧೯೯೩ ಬೆಂಗಳೂರು ನಗರ ಜಿಲ್ಲಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ.

೧೯೯೪ ಕರ್ನಾಟಕ ಪತ್ರಿಕಾ ಅಕಾಡೆಮಿಯಿಂದ ಪ್ರಶಸ್ತಿ.

೧೯೯೫ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ಜಾನಪದ ತಜ್ಞ ಪ್ರಶಸ್ತಿ.

೧೯೯೬ ಶ್ರೀನಿವಾಸರಾವ್ ಮಂಗಳವೇಢೆ ಸ್ಮಾರಕ ಪ್ರತಿಷ್ಠಾನದಿಂದ 'ಕನ್ನಡ ಶ್ರೀ' ಪ್ರಶಸ್ತಿ.

೧೯೯೭ ಬೆಂಗಳೂರು ಮಹಾನಗರ ಪಾಲಿಕೆಯಿಂದ ಸ್ವಾತಂತ್ರ್ಯ ಹೋರಾಟಗಾರ ಎಂಬ ಕಾರಣಕ್ಕಾಗಿ ಸನ್ಮಾನ.

೧೯೯೯ ಕರ್ನಾಟಕ ಗಮಕ ಕಲಾ ಪರಿಷತ್ತಿನ ಅಧ್ಯಕ್ಷರು.

೨೦೦೪ ಹಂಪಿಯ ಕನ್ನಡ ವಿಶ್ವವಿದ್ಯಾಲಯದಿಂದ ಪ್ರತಿಷ್ಠಿತ ನಾಡೋಜ ಪ್ರಶಸ್ತಿ.

೨೦೦೫ ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರಾಗಿ ಆಯ್ಕೆ.

೨೦೦೬ ಅಭಿನಂದನೆ.

ಪ್ರಕಟಣೆಗಳು

- ಅಕ್ಷರ ನೀವ್ ಕಲಿಯಿರಿ
- ಮಲೇರಿಯಾ ಹಾವಳಿ
- ರಾಷ್ಟ್ರೀಯ ಪದಗಳು
- ಹೆಚ್ಚು ಬೆಳೆಯನ್ನು ಬೆಳೆಯಿರಿ
- ನಾವು ಮತ್ತು ನಮ್ಮವರು

❑